ಕನ್ನಡ ವ್ಯಾಕರಣ ಕೈಪಿಡಿ

◆ ಪಂ। ಎಂ. ಈಶ್ವರಪ್ಪ
ಎಂ.ಎ.ಬಿ.ಎಡ್.,

ವ್ಯಾಕರಣಾಂಶಗಳು
ಪತ್ರ-ವಾಕ್ಯ-ಪ್ರಬಂಧ-ರಚನೆ, ಗಾದೆ, ಒಗಟು
ವರ್ಣವಿನ್ಯಾಸ-ಉಚ್ಚಾರ
ಅಲಂಕಾರಗಳು, ರಸ-ಧ್ವನಿ, ಛಂದಸ್ಸು
ಶಬ್ದನಿಷ್ಪತ್ತಿ
ಕವಿಸಮಯ
ಲೇಖನ ಚಿನ್ಹೆಗಳು
ಪತ್ರಲೇಖನ

ಕನ್ನಡ

ವ್ಯಾಕರಣ ಕೈಪಿಡಿ

(ಪರಿಷ್ಕೃತ, ವಿಸ್ತೃತ ಪ್ರತಿ)

(ಅಭ್ಯಾಸಿಗರಿಗೊಂದು ಉಪಯುಕ್ತ ಕೃತಿ)

ಲೇಖಕರು : ಪಂಡಿತ ಎಂ. ಈಶ್ವರಪ್ಪ, ಎಂ.ಎ., ಬಿ.ಇಡಿ

ಕಾವ್ಯಾಮೃತ ಪ್ರಕಾಶನ

'Kannada Vyakarana Kaipidi' by Pandith M. Eshwarappa, Senior Kannada Pandith, Kannada Pandith Section, Sanskrit College, Siddaganga, Tumkur. Published By : Kavyamrutha Prakashana. Pages : 20 + 250

೧, ೨ನೆಯ ಮುದ್ರಣ : ೧೯೯೯

೩ ಪರಿಷ್ಕೃತ, ೪ನೆಯ ಮುದ್ರಣ : ೨೦೦೦

೫, ೬ನೆಯ ಮುದ್ರಣ : ೨೦೦೧

೭, ೮ನೆಯ ಮುದ್ರಣ : ೨೦೦೨

೯ ನೆಯ ಮುದ್ರಣ : ೨೦೦೩

೧೦ ನೆಯ ಮುದ್ರಣ : ೨೦೦೩

೧೧ ನೆಯ ಮುದ್ರಣ : ೨೦೦೪

ಬೆಲೆ : ರೂ. ೮೦

ಪ್ರಕಾಶಕರು :

ಕಾವ್ಯಾಮೃತ ಪ್ರಕಾಶನ

'ಕಾವ್ಯಾಮೃತ', ೩ ನೆಯ ಮುಖ್ಯರಸ್ತೆ,

ಬಸವೇಶ್ವರ ಬಡಾವಣೆ, ಕ್ಯಾತ್ಸಂದ್ರ, ತುಮಕೂರು.

ವಿಶೇಷ ರಿಯಾಯಿತಿಯಲ್ಲಿ ೧೦ ಕ್ಕಿಂತ ಹೆಚ್ಚಿನ ಪ್ರತಿಗಳು ಬೇಕಿದ್ದಲ್ಲಿ ಇಲ್ಲಿಗೆ ಸಂಪರ್ಕಿಸಿ

ವಿತರಕರು :

'ಪುಷ್ಪಾವತಿ', ✆ ೦೮೧೬-೨೨೮೨೫೬೯

ಅಕ್ಷರ ಜೋಡಣೆ :

ಗ್ಲೋಬಲ್ ಕಂಪ್ಯೂಟರ್ಸ್

ಬಿ.ಹೆಚ್. ರಸ್ತೆ, ತುಮಕೂರು. ✆ ೨೨೭೫೭೯೮

ಮುದ್ರಕರು :

ಜಿ.ಕೆ. ಆಫ್‌ಸೆಟ್ ಪ್ರಿಂಟರ್ಸ್

ಬಾರ್‌ಲೈನ್ ರಸ್ತೆ, ತುಮಕೂರು. ✆ ೨೨೭೫೨೮೭

ನನ್ನಂತಹ ಅಸಂಖ್ಯಾತರಿಗೆ ದಾರಿದೀಪಕರಾದ ಪರಮಪೂಜ್ಯ
ಡಾ|| ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಅಡಿದಾವರೆಗಳಲ್ಲಿ

ಸಮರ್ಪಣೆ



ಭಕ್ತಿನುಡಿ

ಶರಣರಾ ಸೆಲೆಯಾಗಿ
ವೀರಪುರದಾ ಕಲೆಯಾಗಿ ಉದ್ಧಾರನರಾ ಕೃಪೆಯಾಗಿ
ಲೋಕ ಪಾವನಗೊಳಿಸಿ ಬಸವಪಥದಲಿ ನಡೆಸಿ
ಲೋಕಾಂತದಲಿ ಏಕಾಂತ ಸಾಧಿಸಿ
ವೀರ ವೈರಾಗ್ಯ ದಾಸೋಹ ಸಿರಿಯೆನಿಸಿ
ನಾಡಿನುದ್ದಗಲ ಸಂಚರಿಸಿ ಬೆಳಕನಲ್ಲಿರಿಸಿ
ಜೀವನದ ಸಂದೇಶವಿರಿಸಿದಾ ಹೆಗ್ಗಳಿಕೆ ನಿಮದಾಯ್ತು
ಓ ಗುರುವೇ, ದಯಾ ಸಂಪದವೇ
ಕೃತಿಯ ನಿಮ್ಮಡಿಗಳಿಗಿರಿಸಿ
ಶರಣೆಂದಿರುವೆ



ಸಂದೇಶ

ಶ್ರೀ ಸಿದ್ಧಲಿಂಗೇಶ್ವರ ವೇದ ಮತ್ತು ಸಂಸ್ಕೃತ ಮಹಾವಿದ್ಯಾಲಯದಲ್ಲಿ ಕನ್ನಡ ಪಂಡಿತ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀ ಎಂ. ಈಶ್ವರಪ್ಪ 'ಕನ್ನಡ ವ್ಯಾಕರಣ ಕೈಪಿಡಿ' ಎಂಬ ಗ್ರಂಥವನ್ನು ಪರಿಶ್ರಮವಹಿಸಿ, ಅವರು ಗಳಿಸಿರುವ ಭಾಷಾ ಬೋಧನಾನುಭವದ ಹಿನ್ನೆಲೆಯಲ್ಲಿ ಸಿದ್ಧಪಡಿಸಿರುವುದು ಶ್ಲಾಘನೀಯವಾಗಿದೆ.

ಇತ್ತೀಚಿನ ದಿನಗಳಲ್ಲಿ ಭಾಷಾಬೋಧನೆ, ಕಲಿಕೆ, ಸಿದ್ಧಿಗಳೆಲ್ಲಾ ಇಳಿಮುಖವಾಗುತ್ತಿರುವುದು ವಿಷಾದನೀಯವಾಗಿದೆ. ವ್ಯಾಕರಣಶುದ್ಧಿಯಿಲ್ಲದ ಬರವಣಿಗೆ, ಭಾಷಾ ಜ್ಞಾನವಿಲ್ಲದ ರಚನೆ, ಅರ್ಥಾಭಾಸವಾದ ರೀತಿಯಿಂದಾಗಿ ಶಿಕ್ಷಕರು ವಿದ್ಯಾರ್ಥಿ ಸಮುದಾಯಕ್ಕೆ ಸೂಕ್ತ ಮಾರ್ಗದರ್ಶನ ಮಾಡುವಲ್ಲಿ ವಿಫಲರಾಗುತ್ತಿರುವುದು ಕಾಣಬರುತ್ತಿದೆ. ಭಾಷಾಬೋಧನೆ ಮತ್ತು ಕಲಿಕೆಗಳಲ್ಲಿ ಶಿಸ್ತು, ಶ್ರದ್ಧೆ, ಆಸಕ್ತಿಗಳು ಕಡಿಮೆಯಾಗುತ್ತಿರುವುದೇ ಇದಕ್ಕೆ ಕಾರಣವೆನ್ನಬೇಕು.

ಲೇಖಕರಾದ ಶ್ರೀ ಎಂ.ಈಶ್ವರಪ್ಪ ಶ್ರಮ, ಶ್ರದ್ಧೆಗಳಿಂದ ಪ್ರಸ್ತುತಪಡಿಸಿರುವ ಕೈಪಿಡಿ ಉಪಯುಕ್ತವಾಗಿದೆ. ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಸುಲಭವಾಗಿ ಗ್ರಹಿಸಲು ಅನುಕೂಲಕರವಾಗಿದೆ. ಕೇವಲ ವ್ಯಾಕರಣಶಾಸ್ತ್ರಕ್ಕೆ ಸೀಮಿತವಾಗದೆ, ಭಾಷಾಶಾಸ್ತ್ರ, ಅಲಂಕಾರಶಾಸ್ತ್ರ, ಛಂದಶ್ಶಾಸ್ತ್ರ ಪರಿಚಯವನ್ನೂ ತಿಳಿಸುವ ಈ ಗ್ರಂಥ ಪ್ರಯೋಜನಕಾರಿಯಾಗಿದೆ. ಈ ಪುಸ್ತಕವನ್ನು ಕೊಂಡು ಅಭ್ಯಸಿಸುವುದರ ಮೂಲಕ ಶಿಕ್ಷಕರು, ಭಾಷಾಸಕ್ತರು ಹಾಗೂ ವಿದ್ಯಾರ್ಥಿಗಳು ಲೇಖಕರನ್ನು ಪ್ರೋತ್ಸಾಹಿಸುವರೆಂದು ಆಶಿಸುತ್ತ ಅವರಿಂದ ಇನ್ನೂ ಉತ್ತಮ ಕೃತಿಗಳು ಹೊರಬರುವಂತಾಗಲಿ ಎಂದು ಹಾರೈಸುತ್ತೇವೆ.

ಶ್ರೀ ಶಿವಕುಮಾರ ಸ್ವಾಮಿಗಳು
ಶ್ರೀ ಸಿದ್ಧಗಂಗಾ ಮಠ, ತುಮಕೂರು

ಹಾರೈಕೆ

ಭಾಷೆಯೆಂಬುದು ವ್ಯಾವಹಾರಿಕ ಸಾಧನವಷ್ಟೇ ಅಲ್ಲ, ಅದು ತಾತ್ವಿಕ ಅಂಶಗಳನ್ನು ವ್ಯಕ್ತಪಡಿಸಿ ಆತ್ಮೋದ್ಧಾರಕ್ಕೂ ಸಾಧನವಾಗಬಲ್ಲದು. ಆದ್ದರಿಂದಲೇ ದಂಡಿ ಮಹಾಕವಿ 'ಇದಮಂಧಃ ತಮಕೃತ್ಸ್ನಂ ಜಾಯೇತ ಭುವನತ್ರಯಂ' ಎಂದಿದ್ದಾನೆ. ಭಾಷೆಯ ಶುದ್ಧತೆಯನ್ನು ಕಾಪಾಡುವ ಉದ್ದೇಶದಿಂದಲೇ ಹಿಂದಿನಿಂದಲೂ ಸರ್ವ ಭಾಷೆಗಳಲ್ಲೂ ವ್ಯಾಕರಣಾಧ್ಯಯನ ನಡೆಯುತ್ತ ಬಂದಿದೆ. ಇತ್ತೀಚೆಗೆ ಕನ್ನಡ ವ್ಯಾಕರಣಾಧ್ಯಯನಕ್ಕೆ ಶಾಲೆಗಳಲ್ಲಿ ಪ್ರತ್ಯೇಕ ಅವಧಿಗಳಿಲ್ಲ. ಭಾಷೆಯನ್ನು ಕಲಿಯುವವರಲ್ಲಿ ಆಸಕ್ತಿ ಕಡಿಮೆ. ಕಲಿಸುವವರಲ್ಲೂ ತಾತ್ಸಾರ ಮನೋಭಾವವಿದೆ. ಹೀಗಾಗಿ ವ್ಯಾಕರಣ ಅಧ್ಯಯನ ಕಠಿಣವೆಂಬ ಭ್ರಮೆಯುಂಟು.

ಇದರಿಂದಾಗಿ ಮಕ್ಕಳಲ್ಲಿ ಅಶುದ್ಧ ಪ್ರಯೋಗಗಳು, ಅರ್ಥ ಹೊಂದಿಕೆಯಿಲ್ಲದ ವಾಕ್ಯಗಳು ಕಂಡುಬರುತ್ತಿವೆ. ಭಾಷಾ ಕಲಿಕೆಯ ಗುಣಮಟ್ಟ ತೀರಾ ಕಡಿಮೆಯಾಗಿದೆ. ಕೇವಲ ವಿಷಯಜ್ಞಾನ ಮಾತ್ರ ಸಾಲದು, ಭಾಷಾ ಜ್ಞಾನವೂ ಅತ್ಯಗತ್ಯ. ಈ ಹಿನ್ನೆಲೆಯಲ್ಲಿ ವ್ಯಾಕರಣಾಧ್ಯಯನ ಅಗತ್ಯವೂ ಅನಿವಾರ್ಯವೂ ಆಗಿದೆ.

ಇಂದಿನ ಪರಿಸ್ಥಿತಿಯಲ್ಲಿ ಕನ್ನಡ ವ್ಯಾಕರಣದ ಅಭ್ಯಾಸಕ್ಕೆ ಸೂಕ್ತ ಕೃತಿಗಳ ಅಗತ್ಯ ಇದೆ. ಇವುಗಳಿಂದ ಕನ್ನಡ ಅಭ್ಯಾಸಿಗಳಿಗೆ ಹೆಚ್ಚಿನ ಪ್ರಯೋಜನವಾಗುತ್ತದೆ. ಪ್ರಕೃತ ಕೃತಿಯಲ್ಲಿ ಪಠ್ಯ ಅಧ್ಯಯನಕ್ಕೆ ಪೂರಕವಾದ ಅಂಶಗಳೆಲ್ಲವನ್ನೂ ಒಂದೆಡೆ ತರುವ ಯತ್ನ ಮಾಡಲಾಗಿದೆ. ವಿಶೇಷವಾಗಿ ಶಬ್ದಸಂಪತ್ತು ವಿಭಾಗದಲ್ಲಿ ಕನ್ನಡದಲ್ಲಿರುವ ಶಬ್ದಗಳ ರೂಪ ನಿಷ್ಪತ್ತಿ, ಅವುಗಳ ಅರ್ಥಗಳನ್ನೂ ಆಧುನಿಕ ಪ್ರಯೋಗಗಳನ್ನೂ ಪ್ರಸ್ತಾಪಿಸಿರುವುದು ವಿಶಿಷ್ಟವಾಗಿದೆ. ವಿದ್ಯಾರ್ಥಿಗಳಿಗೆ ಶಿಕ್ಷಕರಿಗೆ ಇದು ತುಂಬ ಉಪಯುಕ್ತವಾಗಿದೆ.

'ಕನ್ನಡ ವ್ಯಾಕರಣ ಕೈಪಿಡಿ' ಈ ಕೃತಿಯನ್ನು ಕನ್ನಡ ಅಭ್ಯಾಸ ಮಾಡುವವರು ಗುರುತಿಸಿ, ಆಯ್ದು ಓದುವ ಅಗತ್ಯವಿದೆ. ಒಟ್ಟಿನಲ್ಲಿ ಈ ಕೃತಿಯಿಂದ ಕನ್ನಡದ ಉದಯೋನ್ಮುಖ ಬರಹಗಾರರಿಗೆ ನೆರವಾಗುವುದೆಂದು ನಾನು ಭಾವಿಸಿದ್ದೇನೆ. ಇದರ ಉಪಯೋಗವನ್ನು ಕನ್ನಡ ಜನತೆ ವಿಶೇಷವಾಗಿ ವಿದ್ಯಾರ್ಥಿಗಳು ಪಡೆಯಲೆಂದು ಹಾರೈಸುತ್ತೇನೆ.

೧೫.೯.೯೯ (ಎನ್. ಬಸವಾರಾಧ್ಯ)

ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು

ಮುನ್ನುಡಿ

ವ್ಯಾಕರಣದಿಂದ ಪದ ಶುದ್ಧಿ-ಸಿದ್ಧಿ, ಪದ ಶುದ್ಧಿ-ಸಿದ್ಧಿಯಿಂದ ನಿಷ್ಕೃಷ್ಟವಾದ ಅರ್ಥಜ್ಞಾನ, ಖಚಿತ ಅರ್ಥಜ್ಞಾನದಿಂದ ಸದ್ವಿವೇಕ, ತತ್ವಜ್ಞಾನಗಳು, ತತ್ವಜ್ಞಾನದಿಂದ ಆಕಾಂಕ್ಷಿಸುವ ಮುಕ್ತಿ ದೊರೆಯುತ್ತದೆಂದು ವೈಯಾಕರಣಿ ಕೇಶಿರಾಜ ಹೇಳುತ್ತಾನೆ. ಮುಕ್ತಿಯೆನ್ನುವ ಪದಕ್ಕೆ ಹಲವಾರು ಅರ್ಥಗಳುಂಟು. ಅಜ್ಞಾನದಿಂದ ಬಿಡುಗಡೆ ಎಂಬುದೇ ಇಲ್ಲಿಯ ಅರ್ಥ. ಮಾತು ಮೊದಲು ವ್ಯಾಕರಣ ಅನಂತರ ಎಂಬ ಸಂಗತಿ ನಿಜವಾದರೂ ವ್ಯಾಕರಣ ಕಲಿಯದೆ ಸಾಮಾನ್ಯರು ಸಲೀಸಾಗಿ ಮಾತು ಬಳಸುವುದಾದರೂ ಅವರ ವ್ಯವಹಾರಗಳು ಸೀಮಿತ, ಬದುಕು ಸರಳ, ಬಳಸಬೇಕಾದ ಭಾಷೆ ಸ್ವಲ್ಪ. ಆದರೆ ಪ್ರಬುದ್ಧ ಜನರ ವ್ಯವಹಾರಗಳು ಸಂಕೀರ್ಣವಾಗಿ, ಬಳಸಬೇಕಾದ ಭಾಷೆ ವ್ಯಾಪಕವಾದ್ದರಿಂದ ಭಾಷೆಯೊಂದೇ ಸರ್ವೇಂದ್ರಿಯಗಳ ಸುಖವನ್ನು, ಪ್ರಜ್ಞೆಯನ್ನು, ವಿಷಯಗಳನ್ನು ಅನುಭವಿಸುವ ಮತ್ತು ಅಭಿವ್ಯಕ್ತಗೊಳಿಸುವ ಏಕಮಾತ್ರ ಸಾಧನ, ಮಾಧ್ಯಮ ಹಾಗೂ ಮಾರ್ಗವಾದ್ದರಿಂದ ಅದೇ ಜ್ಞಾನ ವಿಜ್ಞಾನ ಸುಜ್ಞಾನಗಳ ನಿಧಿಯಾದ್ದರಿಂದ ಈ ಕಾರಣದಿಂದಾಗಿ ಅದರ ಬಳಕೆ ನಿರ್ದುಷ್ಟ, ನಿಷ್ಕೃಷ್ಟವಾಗಿರಬೇಕಾದ್ದರಿಂದ, ವ್ಯಾಕರಣದ ಅಭ್ಯಾಸ ಅನಿವಾರ್ಯ. ಅಂಗರಚನಾಶಾಸ್ತ್ರ-ವೈದ್ಯವಿಜ್ಞಾನಕ್ಕೆಂತು ಆದಿಯೋ ಅಗತ್ಯವೋ ಅಂತೆಯೇ ಭಾಷೆಗೆ ವ್ಯಾಕರಣ ಅನಿವಾರ್ಯ.

ಈಗ ಶಾಲಾ-ಕಾಲೇಜುಗಳಲ್ಲಿ ಬೋಧನೆ ಮಾಡುತ್ತಿರುವ ಹಲವು ಭಾಷಾ ಬೋಧಕರಿಗೆ ಸಾಕಷ್ಟು ವ್ಯಾಕರಣ ಜ್ಞಾನ ಇಲ್ಲದಿರುವುದು ಶೋಚನೀಯ ಸಂಗತಿ. ಈ ಮಾತು ಕನ್ನಡ, ಇಂಗ್ಲೀಷ್ ಬೋಧಕರಿಬ್ಬರಿಗೂ ಅನ್ವಯವಾಗುತ್ತದೆ. ಸಂದರ್ಶನಕ್ಕೆ ಬಂದ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ವ್ಯಾಕರಣದ ಪ್ರಶ್ನೆಗಳನ್ನು ಕೇಳಿದಾಗ, ಅವರು ಸಾಮಾನ್ಯವಾಗಿ ಕೊಡುವ ಉತ್ತರವೆಂದರೆ, 'ನಮಗೆ ವ್ಯಾಕರಣ ಕಲಿಸಿಲ್ಲ' ಎಂದು. ಎಂಥದೋ ಅರ್ಥವಿಲ್ಲದ, ಕ್ರಮವಿಲ್ಲದ, ವ್ಯರ್ಥ 'ಪ್ರಾಯೋಗಿಕ ವ್ಯಾಕರಣ' (ಈಣಚಿಭಿಣಾಚಿಟ ಉಡಿಚಿಟಿಟುಡಿ) ವನ್ನು ಕಲಿಸುತ್ತಾರಂತೆ ಶಾಲಾ ಕಾಲೇಜುಗಳಲ್ಲಿ.

ನನಗೆ ಗೊತ್ತಿರುವ ಮಟ್ಟಿಗೆ ಕನ್ನಡದ ಬಗ್ಗೆ ಮಾತ್ರ ಹೇಳುವುದಾದರೆ, ಬೋಧನಾ ವಿಧಾನ ಸಮರ್ಪಕವಾಗಿಲ್ಲವೆಂದೇ ಹೇಳಬೇಕು. ಭಾರತೀಯ ಭಾಷೆಗಳ ಬೋಧನೆಗೆ ಪಾಣಿನಿಯ ವಿಧಾನವನ್ನು ತೊರೆದು, ಅನ್ಯ ವಿಧಾನಗಳನ್ನು ಸ್ವೀಕರಿಸುವುದು ಸರಿಯಲ್ಲ. ಭಾರತೀಯ ಭಾಷೆಗಳ ವರ್ಣಮಾಲೆ ಹಾಗೂ ಧ್ವನಿವ್ಯವಸ್ಥೆ ಪ್ರಪೂರ್ಣ ಹಾಗೂ ವೈಜ್ಞಾನಿಕ. ಕಾಗುಣಿತದೊಡನೆ ವರ್ಣಮಾಲೆಯನ್ನು ಕಲಿಸಿದ್ದಾದರೆ, ಐದಾರು ತಿಂಗಳಲ್ಲಿ

ಹೆಚ್ಚೆಂದರೆ ಒಂದು ವರ್ಷದಲ್ಲಿ ಮಕ್ಕಳಿಗೆ ಓದು ಬರಹಗಳನ್ನು ಸಸಾರವಾಗಿ ಕಲಿಸಬಹುದು. ಆಧುನಿಕ ವಿದ್ಯುನ್ಮಾನ ವ್ಯವಸ್ಥೆಯಲ್ಲಂತು ಈ ಕಲಿಕೆ ಇನ್ನೂ ಸುಲಭ ಮತ್ತು ಶೀಘ್ರ. ಈ ವಿಧಾನ ಕುರುಡುಪಾಠವೆನ್ನುವ ಆಧುನಿಕ ತಜ್ಞ ಶಿಖಾಮಣಿಗಳು ತಿಳಿಯಬೇಕು. ಈಗಿನ ಪಠ್ಯವಿಧಾನವೇನಿದೆ ಅದೂ ಕುರುಡು ಪಾಠವಲ್ಲವೆ? ಸ್ಮೃತಿಶಕ್ತಿಯಲ್ಲಿ ನಂಬಿಕೆಯಿರುವವರು ಕಂಠಪಾಠ ತಪ್ಪೆಂದು ಹೇಳಲಾರರು. ಜ್ಞಾನವೆನ್ನುವುದು ಸ್ಮೃತಿಕೋಶದ ಒಂದು ಭಾಗವಷ್ಟೇ.

ವ್ಯಾಕರಣ ವ್ಯಾಸಂಗದ ಅವಶ್ಯಕತೆಯನ್ನರಿತ ಹಲವು ಪಂಡಿತರು ವ್ಯಾಕರಣ ರಚನೆಯಲ್ಲಿ ತೊಡಗಿಸಿಕೊಂಡಿರುವುದು ಸಮಾಧಾನದ ಸಂಗತಿ. ಈ ದಿಶೆಯಲ್ಲಿ ನುರಿತ ಪಂಡಿತರಾದ ಎಂ. ಈಶ್ವರಪ್ಪನವರ ಪ್ರಯತ್ನ ಶ್ಲಾಘ್ಯವಾದದ್ದು. ಶ್ರೀ ಸಿದ್ಧಗಂಗಾ ಮಠ ನಡೆಸುತ್ತಿರುವ ಪಂಡಿತ ಕಾಲೇಜಿನಲ್ಲಿ ಅವರು ಉತ್ತಮ ಬೋಧಕರೆಂದು ಹೆಸರು ಪಡೆದಿದ್ದಾರೆ. ಅಧಿಕಾರಷಾಹಿಯ ಕುತಂತ್ರ, ಕುತ್ಸಿತ ಬುದ್ಧಿಯಿಂದಾಗಿ ಸರ್ಕಾರ ನಡೆಸುತ್ತಿದ್ದ ಪಂಡಿತ ತರಗತಿ ನಿಂತುಹೋದರೂ ಪೂಜ್ಯ ಸ್ವಾಮೀಜಿಯವರ ವಿದ್ವತ್ಪ್ರೇಮದಿಂದಾಗಿ ಸಿದ್ಧಗಂಗೆಯಲ್ಲಿ ಆ ತರಗತಿಗಳು ಇನ್ನೂ ನಡೆಯುತ್ತಿವೆ. ಒಂದು ಒಳ್ಳೆಯ ಜ್ಞಾನ ಸಂಸ್ಥೆಯೋ, ಕೈಗಾರಿಕೆಯೋ ಸಮರ್ಥವಾಗಿ ಉಪಯುಕ್ತವಾಗಿ ನಡೆಯುತ್ತಿದ್ದು ಅದನ್ನು ಮುಚ್ಚಬೇಕಾಗಿದ್ದರೆ ಅಥವಾ ಅದನ್ನು ನಿರುಪಯುಕ್ತಗೊಳಿಸುವ ಉದ್ದೇಶವಿದ್ದರೆ, ಆ ಜಾಗಗಳಿಗೆ ಉನ್ನತಾಧಿಕಾರಿಗಳನ್ನು ನೇಮಿಸಿದರೆ ಸಾಕು; ಉದ್ದೇಶ ಈಡೇರುತ್ತದೆ. ಅದೇನೇ ಇರಲಿ, ಹಿಂದಿನ ಸತ್ಸಂಪ್ರದಾಯದ ಪಂಡಿತರು ವಿರಳವಾಗಿಯಾದರೂ ಉಳಿದಿದ್ದಾರೆಂಬುದು, ಅಂಥವರಿಗೆ ಶ್ರೀಮಠ ಉತ್ತೇಜನ ನೀಡುತ್ತಿದೆಯೆಂಬುದು ಗಮನಾರ್ಹ ಸಂಗತಿಯಾಗಿದೆ.

ಶ್ರೀ ಈಶ್ವರಪ್ಪನವರು ಪ್ರಕೃತ 'ಕನ್ನಡ ವ್ಯಾಕರಣ ಕೈಪಿಡಿ' ಯನ್ನು ಪ್ರೌಢಶಾಲಾ ವಿದ್ಯಾರ್ಥಿಗಳು ಮೊದಲುಗೊಂಡು ಎಲ್ಲ ವರ್ಗಗಳ ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿಸಿದಂತೆ ತೋರುತ್ತದೆ. ಈ ದೃಷ್ಟಿಯಿಂದಲೇ ಅಡಿ ಟಿಪ್ಪಣಿಗಳಲ್ಲಿ ಸಾಕಷ್ಟು ವಿವರಣೆಗಳನ್ನು ನೀಡಿರಬೇಕು. ಅಲ್ಲಲ್ಲಿ ಕೇಶಿರಾಜನ ವಿಚಾರಗಳನ್ನೂ ಪ್ರಸ್ತಾಪಿಸಿದ್ದಾರೆ. ಪಠ್ಯದ ವಿಷಯಗಳಿಗೆ ಟಿಪ್ಪಣಿಗಳು ಪೂರಕವಾಗಿವೆ. ವಚನ ಪಲ್ಲಟವನ್ನು ಕುರಿತು ವಿವರಣೆ ನೀಡಿದಂತೆ ವಿಭಕ್ತಿ ಪಲ್ಲಟದ ಬಗ್ಗೆಯೂ ವಿವರಗಳನ್ನು ನೀಡಿದ್ದಾರೆ. ಒಂದಾನೊಂದು ಕಾಲದಲ್ಲಿ ಪ್ರತ್ಯಯಗಳೇ ಇರಲಿಲ್ಲವಷ್ಟೇ. ಕನ್ನಡ ಮತ್ತು ಸಂಸ್ಕೃತ ಸಮಾಸಗಳ ವಿಭಜನೆ ಅವಶ್ಯವಾಗಿತ್ತೆ ಎನ್ನುವುದು ನನ್ನ ಸಂದೇಹ. ಕ್ರಿಯಾಪದ ಪ್ರಕರಣದಲ್ಲಿಯೇ ಧಾತುಗಳ ವಿಷಯ ಪ್ರಸ್ತಾಪಿಸಬಹುದಿತ್ತು.

ಇಂಗ್ಲೀಷಿನಿಂದ ರೂಪಾಂತರ ಹೊಂದಿ ಕನ್ನಡಕ್ಕೆ ಬಂದಿರುವ ಪದಗಳನ್ನು ತದ್ಭವಗಳೆಂದು ಕರೆದಿರುವುದು ಸರಿಯೇ ಸರಿ. ಅಂತೆಯೇ ಬದಲಾವಣೆಯಿಲ್ಲದೆ ಕನ್ನಡದಲ್ಲಿ ಬಳಕೆಯಾಗುವ ಯಾವುದೇ ಭಾಷೆಯ ಪದಗಳನ್ನು ತತ್ಸಮಗಳೆಂದೇ ಕರೆದಿರುವುದು ಯುಕ್ತವಾಗಿದೆ. **ನುಡಿಗಟ್ಟುಗಳು, ವಿರುದ್ಧಾರ್ಥಕಗಳು, ವಾಕ್ಯ ವಿಭಜನೆ, ಪದಚ್ಛೇಧ - ಸಂಸ್ಕೃತ ನಿಷ್ಪನ್ನ ರೂಪಗಳು ಇಲ್ಲಿಯ ಕೆಲವು ವಿಶಿಷ್ಟಾಂಶಗಳೆಂದು** ಹೇಳಬಹುದಾಗಿದೆ. ಲಕ್ಷಣ ಲಕ್ಷ್ಯ ಸಮನ್ವಯವೂ ಇಲ್ಲಿ ಹದವಾಗಿ ನಡೆದಿದೆ.

ಈ ಗ್ರಂಥ ವ್ಯಾಕರಣ ಮಾತ್ರವಲ್ಲ, ಸರ್ವಾಧಾರಕ ಸಾಧನದಂತಿದೆ. **ಕನ್ನಡ ಭಾಷಾ ಕ್ಷೇತ್ರದ ಯಾತ್ರಾರ್ಥಿಗೆ ಏನೇನು ವಿಷಯ ಬೇಕೋ ಅಷ್ಟೆಲ್ಲವನ್ನು** ಈ ಗ್ರಂಥದಲ್ಲಿಯೇ ಹೇಳಿಬಿಡಬೇಕೆನ್ನುವ ಮಹತ್ವಾಕಾಂಕ್ಷೆ ಈ ಲೇಖಕರಿಗಿದೆ. ಛಂದಸ್ಸು, ಅಲಂಕಾರ, ಪ್ರಬಂಧ ರಚನೆ, ಪತ್ರ ವ್ಯವಹಾರ - ಈ ವಿಷಯಗಳ **ವಿವರಣೆಯೂ ಉತ್ತಮವಾಗಿದೆ.**

ಕನ್ನಡವನ್ನು ಶೀಘ್ರವಾಗಿ, ಪರಿಣಾಮಕಾರಿಯಾಗಿ ಮಕ್ಕಳಿಗೆ ಹೇಗೆ ಕಲಿಸಬೇಕೆನ್ನುವ ಸಾಮರ್ಥ್ಯ ಬುದ್ಧಿವಂತರೂ ಭಾಷಾ ಪ್ರೇಮಿಗಳೂ ವಿಶ್ಲೇಷಣಾ ಸಾಮರ್ಥ್ಯವುಳ್ಳವರೂ ಬಹುಹೊತ್ತು ಮಕ್ಕಳೊಂದಿಗೆ ವ್ಯವಹರಿಸುವ ಪ್ರಾಥಮಿಕ ಪ್ರೌಢಶಾಲೆಯ ಉಪಾಧ್ಯಾಯರಿಗೆ ಗೊತ್ತಿರಬೇಕು. ಅವಶ್ಯವಾದರೆ ತಜ್ಞರ ಸಲಹೆಗಳನ್ನು ಬದಿಗಿರಿಸಿ, ಮಕ್ಕಳ ಭಾಷಾಬೋಧನ ವಿಧಾನವನ್ನು ಉತ್ತಮಗೊಳಿಸಬಹುದಾಗಿದೆ. ಪ್ರಾಥಮಿಕ ಶಾಲೆಯ ಅಭ್ಯಾಸ ಮುಗಿಸುವ ಹೊತ್ತಿಗೆ ಮಕ್ಕಳು ತಪ್ಪಿಲ್ಲದೆ ಓದಿ, ಬರೆಯುವಂತಾಗಬೇಕು. ಪ್ರೌಢಶಾಲಾ ವ್ಯಾಸಂಗ ಮುಗಿಸುವ ಹೊತ್ತಿಗೆ ಅವರು ಲೇಖನ ಕಲೆ, ಭಾಷಣ ಕಲೆಗಳಲ್ಲಿ ಪ್ರಾವೀಣ್ಯ ಸಂಪಾದನೆ ಮಾಡುವಂತಾಗಬೇಕು. ಕನ್ನಡದಲ್ಲಿ ಪ್ರಾವೀಣ್ಯ ಪಡೆದದ್ದಾದರೆ ಉಳಿದ ಭಾಷೆಗಳಲ್ಲಿಯೂ ವಿದ್ಯಾರ್ಥಿಗಳು ಶ್ರೇಷ್ಠತೆಯನ್ನು ಸಾಧಿಸಿಯಾರು. ಪ್ರಾಧ್ಯಾಪಕರಿಗೆ, ರಾಜಕೀಯ ನಾಯಕರಿಗೆ, ವಿಜ್ಞಾನಿಗಳಿಗೆ ಎಲ್ಲರಿಗೂ ಅಭಿವ್ಯಕ್ತಿ ಸಾಮರ್ಥ್ಯ ಮುಖ್ಯ. ಇಂತಹ ಗ್ರಂಥಗಳು ನಮ್ಮ ವಿದ್ಯಾರ್ಥಿಗಳನ್ನು ಆ ಕಡೆಗೆ ಕರೆದೊಯ್ಯಲೆಂದು, ಈಶ್ವರಪ್ಪನವರಂಥ ಜಾಣ ಪ್ರಬುದ್ಧ ಪಂಡಿತರು ಕನ್ನಡ ಭಾಷೆಯ ಬೋಧನ ಮತ್ತು ಕಲಿಕೆಯ ವಿಧಾನಗಳನ್ನು ಸಮರ್ಥವಾಗಿ ರೂಪಿಸಿ, ಭಾಷೆಯ ಸಮಗ್ರ ಬೆಳವಣಿಗೆಗೆ ಸದಾ ದುಡಿಯುತ್ತಿರಲೆಂದು ಹಾರೈಸುತ್ತೇನೆ.

ಮೈಸೂರು-೧೨
೨೫-೯-೯೯

ಪ್ರೊ|| ದೇ. ಜವರೇಗೌಡರವರು
ಪಂಪ ಪ್ರಶಸ್ತಿ ವಿಜೇತರು

ಅನಿಸಿಕೆಗಳು

ಮಾನ್ಯಶ್ರೀ ಎಂ. ಈಶ್ವರಪ್ಪನವರು ಬರೆದಿರುವ 'ಕನ್ನಡ ವ್ಯಾಕರಣ ಕೈಪಿಡಿ'ಯು ತನ್ನ ಹೆಸರನ್ನು ಸಾರ್ಥಕಪಡಿಸಿಕೊಂಡಿದೆ. ಈ ಕೃತಿಯಲ್ಲಿ ವರ್ಣಮಾಲೆ ಮೊದಲುಗೊಂಡು ವ್ಯಾಕರಣ ಸಂಬಂಧಿಯಾದ ಬಹುಪಾಲು ವಿಷಯಗಳು ಅಗತ್ಯ ವಿವರಗಳೊಂದಿಗೆ ನಮೂದಿತವಾಗಿವೆ. 'ಕೈಪಿಡಿ' ಎಂದು ಕರೆಯುವುದರ ಮೂಲಕ ಕೃತಿಯ ಸ್ವರೂಪವನ್ನು ಲೇಖಕರೇ ಸೂಚಿಸಿದ್ದಾರೆ. ಕನ್ನಡ ವ್ಯಾಕರಣದ ಮುಖ್ಯ ಸಂಗತಿಗಳನ್ನು ಚರ್ಚಿಸುವುದು ಇವರ ಉದ್ದೇಶವಲ್ಲ. ಒಪ್ಪಿತ ವಿಷಯಗಳ ಕ್ರೋಢೀಕರಣದ ನೆಲೆಯಲ್ಲಿ ಒಟ್ಟಾರೆ ಹೂರಣವನ್ನು ಒದಗಿಸುವ ಆಶಯ ಇವರದಾಗಿದ್ದು ಅದು ಈಡೇರಿದೆ. ಕನ್ನಡ ಭಾಷೆಯ ಮೂಲಭೂತ ಅಂಶಗಳ ಪರಿಚಯವೂ ಇಲ್ಲಿ ಅಡಗಿದೆ. ಕನ್ನಡ ಅಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿದೆ. ವಿಶೇಷವಾಗಿ ಕನ್ನಡ ಶಬ್ದ ಸಂಪತ್ತನ್ನು ಕುರಿತ ಟಿಪ್ಪಣಿಗಳ ಹಾಗೂ ಅಲಂಕಾರ-ಛಂದಸ್ಸಿಗೆ ಸಂಬಂಧಿಸಿದ ಮಾಹಿತಿಗಳು ಈ ಪುಸ್ತಕದಲ್ಲಿ ಸೇರಿದ್ದು 'ವ್ಯಾಕರಣ' ವನ್ನು ವಿಸ್ತರಿಸಿವೆ. **'ಭಾಷೆಯು ನಿಂತ ನೀರಲ್ಲ... ಭಾಷೆಯಲ್ಲಿ ಮಡಿ ಮೈಲಿಗೆಗಳಿಲ್ಲ'** ಎಂಬ ಸರಿಯಾದ ತಿಳುವಳಿಕೆಯನ್ನುಳ್ಳ ಈಶ್ವರಪ್ಪನವರು ಪಾಂಡಿತ್ಯವನ್ನು ಮೆರೆಸುವ ಬದಲು ವಿಷಯಗಳನ್ನು ಸಂವಹಿಸಬೇಕೆಂಬ ಒತ್ತಾಸೆಯನ್ನುಳ್ಳವರಾಗಿದ್ದಾರೆ. ಇಪ್ಪತ್ತನಾಲ್ಕು ವರ್ಷಗಳ ಬೋಧನಾನುಭವದ ವ್ಯಾಕರಣ ಸಾರವನ್ನು ಈ ಕೃತಿಯಲ್ಲಿ ಸಂಗ್ರಹಿಸಿಡಲು ಸಮರ್ಥವಾಗಿ ಪ್ರಯತ್ನಿಸಿದ್ದಾರೆ. ಕನ್ನಡ ಮತ್ತು ಸಂಸ್ಕೃತ ಭಾಷೆಗಳ 'ಪಾಂಡಿತ್ಯ' ವುಳ್ಳ ಈಶ್ವರಪ್ಪನವರು **'ತಿಳಿ ತಿಳುವಳಿಕೆ'** ಯನ್ನು ಕೊಡುವ ಇಂಥ ಪ್ರಯತ್ನಗಳನ್ನು ಮಾಡುತ್ತಿರಲಿ ಎಂದು ಹಾರೈಸುತ್ತೇನೆ.

ಪ್ರೊ॥ ಬರಗೂರು ರಾಮಚಂದ್ರಪ್ಪ. ಅಧ್ಯಕ್ಷರು. ಕನ್ನಡ ಅಭಿವೃದ್ಧಿ ಪ್ರಾಧಿಕಾರ

'ಕನ್ನಡ ವ್ಯಾಕರಣ ಕೈಪಿಡಿ'ಯ ಕರಡು ಪ್ರತಿಯನ್ನು ಸಾದ್ಯಂತವಾಗಿ ಓದಿದೆ. ವ್ಯಾಕರಣದ ಎಲ್ಲ ಅಂಶಗಳು ಸರಿಯಾಗಿ ಮೂಡಿವೆ. ಅದು ತುಂಬಾ ಸಂತೋಷದ ಸಂಗತಿ. ಇದು ಪ್ರೌಢ ಹಾಗೂ ಕಿರಿಯ ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳನ್ನು ಉದ್ದೇಶಿಸಿದೆ. ಈ ಬಗೆಯ ಪ್ರಯತ್ನಗಳಿಂದ ಪ್ರತಿಯೊಂದು ಕಾಲಕ್ಕೂ ಹೊಸ ಹೊಸ ವ್ಯಾಕರಣಗಳು ಬರುತ್ತಲೇ ಇವೆ ; ಅವು ಅತ್ಯಗತ್ಯ. ಇದು ಕನ್ನಡ ಅಭ್ಯಾಸಕರಿಗೆ ಒಂದು ಉತ್ತಮ ಕೃತಿಯಾಗಿದೆ. ಗೆಳೆಯರ ಪ್ರಯತ್ನ ಸಾರ್ಥಕ. ಶಾಸ್ತ್ರನಿಷ್ಠತೆ. ಔಚಿತ್ಯ ಹಾಗೂ ಉದಾಹರಣೆಗಳಿಂದ ಕೂಡಿರುವ ಈ ಪುಸ್ತಕವು ಅಭ್ಯಾಸ ಮಾಡುವ ಎಲ್ಲ ಜನದ ಪ್ರೀತಿಯನ್ನು ಗಳಿಸಲಿ.

ಪ್ರೊ॥ ಮಲ್ಲೇಪುರ ಜಿ.ವೆಂಕಟೇಶ್. [illegible]

: ನಿವೇದನೆ :

ಭಾಷೆಯ ಲಿಪಿ ; ಸಂಕೇತ ಕಣ್ಣಿಗೆ ಕಾಣುತ್ತದೆ. ಆದರೆ ಹಿಂದಿರುವ ಶಬ್ದ ಧ್ವನಿ ಶ್ರವಣರೂಪವಾದುದು. ಈ ಬಹಿರ್ಮುಖವಾದ ಭಾಷೆಯಿಂದ ಅಂತರ್ಮುಖವಾದ ಜ್ಞಾನ ಲಭಿಸುತ್ತದೆ. ನಿರ್ಜೀವ ವಸ್ತುವಿನ ಭೌತಿಕ ಕಂಪನಗಳು ಜೀವಿಯೊಂದರ ಮಿದುಳಿನಲ್ಲಿ ಅರ್ಥಪೂರ್ಣ ಸಂವೇದನೆ ಮಾಡುವುದು ನಿಸರ್ಗದ ಚೋದ್ಯ. ಈ ಸಂವೇದನೆಗೆ ನೆರವಾದ ಭಾಷೆಯನ್ನು ಸರಿಯಾಗಿ ಬಳಸಿದಾಗ ಅದೊಂದು **ಬೆಳಕು, ಶಕ್ತಿ**ಯೆನಿಸುತ್ತದೆ. ಆರಕ್ಷಕ - **ಆರಕ್ಷಕ,** ಹವಾಮಾನ-**ಅವಮಾನ** ಉತ್ಸವ-**ಉಸ್ತವ,** ಆಜೀವ-**ಅಜೀವ**ವೆಂದು ಸಂದರ್ಭಗಳಲ್ಲಿ ಭಾಷೆ ನಿಜವಾಗಿಯೂ ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತದೆ.

ವ್ಯಾಕರಣದ ಗುರಿಮಹತ್ವ ಇವುಗಳು ಬದಲಾಗಿವೆ. ಇತ್ತೀಚೆಗೆ ಆಡು ಮಾತಿಗೆ ಪ್ರಾಮುಖ್ಯತೆ ಇದ್ದು, ಭಾಷಾಶಾಸ್ತ್ರದ ದೃಷ್ಟಿಗಳಿಗೆ ಪ್ರಾಧಾನ್ಯ ನೀಡಿದೆ. ಅಪಶಬ್ದಗಳನ್ನು ರೂಢಿಪ್ರಯೋಗ ಎನ್ನುವ ಸ್ಥಿತಿ ಬಂದಿದೆ. ಹೀಗೆಂದು ಭಾಷಾ ಕ್ಷೇತ್ರದಲ್ಲಿ ಸ್ವೇಚ್ಛಾಚಾರಕ್ಕೆ ಬಲವಿರುವುದಿಲ್ಲ. ಸಾಧು ಶಬ್ದಗಳನ್ನು ನಿರ್ಣಯಿಸುವ **'ವ್ಯಾಕರಣ ನಿಯಮ, ತಿಳಿದವರ ಮಾತು, ಬರವಣಿಗೆ, ಲೋಕರೂಢಿಗಳು ಭಾಷೆಯನ್ನು ನಿಯಂತ್ರಿಸಬೇಕಾಗುತ್ತದೆ.** ಶಬ್ದ ವಾಕ್ಯಗಳಲ್ಲಿನ ಅಪಪ್ರಯೋಗ ಬಾರದ ಹಾಗೆ ನೋಡಿಕೊಳ್ಳಬೇಕಾಗುತ್ತದೆ.

ಹೀಗೇ ಕಲಿತ ಭಾಷೆಯು ವ್ಯವಹಾರ ಸಾಧನವಷ್ಟೇ ಆಗದು. ಸಾಂಸ್ಕೃತಿಕ ಸಂವಹನವು ಹೌದು. ಸಾಹಿತ್ಯ ಸೃಷ್ಟಿಯಿಂದ ಆತ್ಮ ಸಂತೋಷವೂ ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ತಂದೆಯೊಬ್ಬ ತನ್ನ ಮಗನಿಗೆ **'ಏನನ್ನೂ ಕಲಿಯದಿದ್ದರೂ ಹೋಗಲಿ 'ವ್ಯಾಕರಣವನ್ನು ಕಲಿ'** ಎಂದನಂತೆ. ವ್ಯಾಕರಣದ ಶಬ್ದಜ್ಞಾನದಿಂದಲೇ ಜ್ಞಾನ, ಗ್ರಹಿಕೆ, ಅಭಿವ್ಯಕ್ತಿ, ಪ್ರಶಂಸೆಗಳು ಸ್ವಂತಿಕೆ, ಸಂಸ್ಕೃತಿ, ಅಭಿಮಾನಗಳು ಮೂಡುತ್ತವೆ. ಈ ಭಾಷೆಯ ಧ್ವನಿಸಂಕೇತಗಳನ್ನು ಕೇಳಿ, ಅನುಕರಿಸಿ ಕಲಿಯಬೇಕು. ಈ ಹಿನ್ನೆಲೆಯಲ್ಲಿ ಭಾಷೆಯ ಒಂದು ಸಾಂಸತಿಕ ನಡವಳಿಯೆನ್ನುತ್ತೇವೆ. ಆದರಿಂದ ನಮ್ಮ ಸಾಂಸ್ಕೃತಿಕ ಪ್ರಕ್ರಿಯೆಗಳು ಬೆಳೆಯುತ್ತವೆ. ಆದರಿಂದ ವ್ಯಕ್ತಿತ್ವ ಬಲಗೊಳ್ಳುತ್ತದೆ. ನಾವು ಭಾಷೆಯನ್ನು ಬೆಳೆಸಬೇಕು.

ವೈಜ್ಞಾನಿಕವಾಗಿ ವಿಚಾರ ಮಾಡಿದರೆ 'ಒಬ್ಬ ವಿದ್ಯಾರ್ಥಿಯ **೨ ನೆಯ ಭಾಷೆಯ ಕಲಿಕೆ, ಆತನ ೧ನೆಯ ಭಾಷೆಯ ಕಲಿಕೆಯಲ್ಲಿನ ಪರಿಣತಿಯ ಮೇಲೆ ಅವಲಂಭಿತವಾಗಿದೆ'.** ಆದ್ದರಿಂದ ಆತ ಮೊದಲ ಭಾಷೆಯನ್ನು ಚೆನ್ನಾಗಿ ಅರಗಿಸಿಕೊಂಡಾಗ ಅಗತ್ಯವಾದ ಅನ್ಯಭಾಷೆಗಳ ಕಲಿಕೆ ಸುಲಭ.

ಇನ್ನು ಬರಹಗಾರನಿಗೆ **ವ್ಯಾಕರಣ ಮತ್ತು ನಿಘಂಟುಗಳು** ಎರಡು ಕಣ್ಣುಗಳಿದ್ದಂತೆ. ಆತನಿಗೆ ವ್ಯಾಕರಣ ಪ್ರಕ್ರಿಯೆಯ ಶಬ್ದ ಮತ್ತು ವ್ಯವಹಾರಿಕ ಶಬ್ದಗಳ ಪರಿಚಯ ಅವಶ್ಯಕವಾಗಿದೆ.

ಇತರ ಭಾಷೆಗಳ ಶಬ್ದ ಸಂಪತ್ತಿಗಿಂತಲೂ ಹೆಚ್ಚಾಗಿ ಸಂಸತ ಶಬ್ದಗಳು ನಮ್ಮ ಭಾವಾಭಿವ್ಯಕ್ತಿಗೆ ಹೆಚ್ಚು ಪೂರಕವಾಗಿವೆ. ಆದಕ್ಕಾಗಿ ಸಂಸತ ಶಬ್ದಗಳ ನಿಷ್ಪನ್ನ ರೂಪಗಳ ಪರಿಚಯಕ್ಕಾಗಿ ಸೇರಿಸಲಾಗಿದೆ.

ಅವುಗಳು ಬೆಳೆಯುತ್ತ ಹೋಗುತ್ತವೆ. ಈ ಬೆಳವಣಿಗೆ ಧನಾತ್ಮಕವಾದುದೇ ಹೊರತು ಋಣ ತೂಕವಲ್ಲ. ಹೀಗೆ ಎಲ್ಲಾ ಜ್ಞಾನವನ್ನು ಮನಸ್ಸಿನಲ್ಲಿ ಇರಿಸಿಕೊಳ್ಳುವುದು ಭಾಷೆ ಮೂಲಕ. ಈ ಭಾಷೆಯನ್ನು ನಾವು ಎಷ್ಟು ಚೆನ್ನಾಗಿ ಪರಿಪೂರ್ಣವಾಗಿ ಬೆಳೆಸುವೆವೋ ಅಷ್ಟು ಬೆಳೆಯುತ್ತದೆ. ಹೀಗಾಗಿ ಭಾಷೆ ಕೇವಲ ಸಂವಹನ ಸಾಧನವಷ್ಟೇ ಆಗಿರದೆ ಬದುಕಿನೊಂದಿಗೆ ಬದಲಾಗುತ್ತ ಹೋಗುವಂತದ್ದು. ಇತರ ಸಾಮೂಹಿಕ ಸಂಬಂಧವಿದ್ದು, ಶಿಕ್ಷಕರಿಗೆ ಇವುಗಳ ಸ್ಥೂಲ ಪರಿಚಯ ಬೇಕು. ತಾಳ್ಮೆ, ಪ್ರೀತಿ ಉತ್ತೇಜನ ಪ್ರವೃತ್ತಿಯಿಂದ ಮಕ್ಕಳ ಮೇಲೆ ಪ್ರಭಾವ ಬೀರಬೇಕಾಗಿದೆ. ಭಾಷಾ ಕಲಿಕೆಯ, ಆಸಕ್ತಿ, ಅಭಿರುಚಿ ಹೆಚ್ಚಿಸಬೇಕು. ಇವುಗಳ ಮನವರಿಕೆ ಅಗತ್ಯ.

ಭಾಷೆ ಪ್ರಭಾವಯುತವಾಗಿರಬೇಕಾದರೆ **ವರ್ಣಗಳ ಸಂಬಂಧ,** ಪದಗಳ ಸಂಬಂಧ, ಪ್ರಕೃತಿ ಪ್ರತ್ಯಯ ಸಂಬಂಧ, ಕರ್ತೃ-ಕ್ರಿಯಾ ಸಂಬಂಧ, ವಿಶೇಷಣ-ವಿಶೇಷ್ಯ ಸಂಬಂಧಗಳ ಅರಿವಿರಬೇಕು. ಹೀಗೆಯೇ ವಾಕ್ಯವನ್ನು ಕೊನೆಗೊಳಿಸುವ **ಕ್ರಿಯಾಪದಗಳ** ಪುರುಷ, ವಚನ, ಲಿಂಗ ಪರಿಚಯ, ಅಗತ್ಯ ನಿಷ್ಪನ್ನರೂಪಗಳ ಅರಿವಿದ್ದು, ರಚನಾ ಕೌಶಲ್ಯವನ್ನು ಬಳಸಿಕೊಂಡು ಬಳಸುತ್ತಾ ಪಳಗಿಸಿಕೊಂಡಾಗ ಭಾಷೆಯ ಹಿಡಿತ, ಪ್ರಭುತ್ವ ಲಭಿಸುತ್ತವೆ.

ಪತ್ರರಚನೆ, ಬರಹ ಲೇಖನ ಚಿಹ್ನೆಗಳ ಅರಿವಿನ ಅಗತ್ಯತೆಯನ್ನು ಮನಗಂಡು ಪರಿಚಯಿಸಲಾಗಿದೆ. **ವಿರುದ್ಧಾರ್ಥಕ, ಅನ್ಯದೇಶೀಯ** ಶಬ್ದಗಳನ್ನು ಅಭ್ಯಾಸಕ್ಕೆ ಅನುಕೂಲವಾಗುವಂತೆ ಅಕಾರಾದಿಯಾಗಿ ಕೊಡಲಾಗಿದೆ. ಹೆಚ್ಚಿನ ಅಭ್ಯಾಸ ವಾಕ್ಯ ರಚನೆ, ಶಬ್ದಾರ್ಥಸ್ವರೂಪ, ಅಲಂಕಾರ, ರಸ, ಧ್ವನಿ ಇತ್ಯಾದಿ ಅಂಶಗಳನ್ನು ಸರಳವಾಗಿ , ಸಂಗ್ರಹವಾಗಿ ತಿಳಿಸಿದೆ. ಈ ಪೂರಕವಾದ ಅಂಶಗಳೆಲ್ಲವನ್ನೂ ಒಂದೇ ಪುಸ್ತಕದಲ್ಲಿ ಓದುಗರಿಗೆ ಸುಲಭವಾಗಿ ದೊರೆಯಲೆಂದು ಸೇರಿಸಲಾಗಿದೆ.

ಇತ್ತೀಚೆಗೆ **ಉಚ್ಚಾರಣಾ ಸ್ಖಾಲಿತ್ಯ, ಕಾಗುಣಿತ ದೋಷ, ಅಲ್ಪಪ್ರಾಣ-ಮಹಾಪ್ರಾಣ ಪಲ್ಲಟ, ದೀರ್ಘಕಲ್ಪನೆಗಳು** ಮಾಯವಾಗಿ ಅರ್ಥದಲ್ಲಿ ಗೊಂದಲವಾಗುತ್ತಿವೆ. ಕೆಳಹಂತದಲ್ಲೇ ಮಕ್ಕಳಿಗೆ ಸ್ಪಷ್ಟವಾಗಿಉಚ್ಚರಿಸಿ, ಕೌತುಕತೆಯನ್ನು ಮೂಡಿಸಿ, ಆಸಕ್ತಿ ಕೆರಳಿಸಿ ಸ್ಪಷ್ಟೋಚ್ಚಾರಣೆಯನ್ನು ಕಲಿಸಬೇಕಾದ್ದು ಅಗತ್ಯವಾಗಿದೆ.

ಇಂದು ಭಾಷಾ ಗುಣಮಟ್ಟ ಕುಸಿಯುತ್ತಿದೆ ಎಂಬ ಕೂಗಿದೆ. ಭಾಷಾ ಅಭ್ಯಾಸದಲ್ಲಿ ಪೋಷಕರ ಉದಾಸೀನತೆಯಿಂದ ಮಕ್ಕಳಲ್ಲಿ ಅಸಡ್ಡೆ ಉಂಟಾಗಿದೆ. ಈಗ ಶಿಕ್ಷಕರು

ಪಠ್ಯನೀತಿಯಲ್ಲೇ ಇರದೆ ವ್ಯಾಕರಣ ಕಠಿಣವೆಂಬ ಭ್ರಮೆ ಹೋಗಲಾಡಿಸಬೇಕಾಗಿದೆ. ಈ ಕಲ್ಪನೆ ತೊಡೆದು ಹಾಕಲು ಮಗುವಿಗೆ ಕನ್ನಡತನ ತರಬೇತಿಗಾಗಿ ವಿವಿಧ ಪಠ್ಯೇತರ ಚಟುವಟಿಕೆಗಳನ್ನು ಸೇರಿಸಿಕೊಳ್ಳಬೇಕು. ತೃಪ್ತಿ ಪಡಿಸುವುದಾದರೂ ಹೇಗೆ? ಹೀಗಾಗಿ ಕಲಿಸುವವರ ಜವಾಬ್ದಾರಿ ಇಂದು ಹೆಚ್ಚಾಗಿದೆ.

ಈ ಹಿನ್ನೆಲೆಯಲ್ಲಿ ಈ ಕೃತಿ ನೆರವಾದೀತು. ಇಂದು **ಹೊಸ ನೀತಿಯಲ್ಲಿ ಎಲ್ಲವನ್ನೂ ಕಾಣುವ ಕೆಲವರಲ್ಲಿ 'ವ್ಯಾಕರಣದ ಅಗತ್ಯವಿಲ್ಲ'**ವೆಂಬ ಭಾವನೆಯಿದೆ. ಅದು ವಿಧಾಯಕವಾಗಿರಬಾರದು. ಸಹಜವಾಗಿ ಕಲಿಯಬೇಕು' ಎಂಬ ವಿಚಾರಗಳಿವೆ. ಮಕ್ಕಳು ಇಷ್ಟಪಡುವ ಸಂಗತಿಗಳು ಉಪಯೋಗಕ್ಕೆ ಅನುಕೂಲವಾಗಿರಬೇಕು ಇವೆಲ್ಲ ಕಷ್ಟ! ಹಾವಳಿ! ಇತ್ಯಾದಿ ವಿಚಾರಗಳಿವೆ. ಈ ಮಾತು ಉಪಯೋಗವಿರದ ಗಣಿತ, ವಿಜ್ಞಾನದ ಅನೇಕ ಇತರ ಪಠ್ಯವಿಷಯಗಳಿಗೂ ಅನ್ವಯವಾಗಬೇಕಿದೆ. ವ್ಯಾಕರಣಾಂಶವನ್ನು ಸಹಜವಾಗಿ ಮಗು ಕಲಿಯಬೇಕೆಂದು ಹೇಳುವುದು ನಿರ್ಣಯವಾಗಬೇಕಾಗಿದೆ. **ಶಿಕ್ಷಕರಾದ ನಮಗೆ ಪರಿಣತಿಯೇ ಕಡಿಮೆಯಿದ್ದರೆ ಮಕ್ಕಳ ಆಸಕ್ತಿಗನುಗುಣವಾಗಿ** ಭಾಷಾ ಪ್ರಭುತ್ವ ಸಹಜವಾಗಿ ಬರಲು ಸಾಧ್ಯವೆ. ಇಂತಹ ವಾದಗಳು ನಿರ್ಣಯವಾಗಬೇಕು. ಈ ಎಲ್ಲದರ ನಡುವೆ ಭಾಷೆಯನ್ನು ಕಲಿಸುವುದು ಕಲೆಯಾಗಿ ಪರಿಣಮಿಸಬೇಕು. ಅಂತಹ **ಭಾಷೆ ಜೀವನದಲ್ಲಿ ತೃಪ್ತಿ, ಸಾಮರ್ಥ್ಯ, ಅಭಿಮಾನಗಳನ್ನು ತರಬಲ್ಲದು.**

ಈ ಹಿನ್ನೆಲೆಯಲ್ಲಿ ಪ್ರೌಢ, ಪಿ.ಯು ತರಗತಿಗಳ ಪಠ್ಯಗಳನ್ನು ಗಮನದಲ್ಲಿರಿಸಿ ಪರೀಕ್ಷಾ ದೃಷ್ಟಿಯಿಂದ ಉಪಯುಕ್ತವಾದ ಅಂಶಗಳನ್ನು ವಿಸ್ತೃತಗೊಳಿಸದೆ, ಪ್ರಾದೇಶಿಕ ಭೇದಗಳನ್ನೆಣಿಸದೆ, ಸಮಗ್ರತೆಯನ್ನು ತರಲು ಯತ್ನಿಸಿದ್ದೇನೆ. ವ್ಯಾಕರಣಭಾಷೆಯ ಗಾಂಭೀರ್ಯತೆಯತ್ತ ಲಕ್ಷ್ಯವಿಟ್ಟು, ದೋಷಗಳಾಗದಂತೆ ಎಚ್ಚರ ವಹಿಸಲಾಗಿದೆ. ನನಗೆ ಕಾಣದದೋಷಗಳು ನಿಮಗೆ ಕಾಣಿಸಿದರೆ ದಯವಿಟ್ಟು ತಿಳಿಸಿದರೆ ತಿದ್ದಲು ಸಹಾಯಕವಾಗುವುದೆಂದು ನಮ್ರನಾಗಿ ಕೋರುತ್ತೇನೆ.

ಅಧ್ಯಾಪಕರ ನೆರವು ಯಾವಾಗಲೂ ನಮ್ಮೊಂದಿಗೆ ಇರದು, ಆಗ ಅಧ್ಯಾಪಕರಿಗೆ ಅಧ್ಯಾಪಕನಾಗಿ ನಿಂತು ಕೆಲಸ ಮಾಡಬಲ್ಲ ಪುಸ್ತಕವೊಂದನ್ನು ಇರಿಸಿಕೊಳ್ಳಲು ಹೇಳಿಯಾರು. ಅದನ್ನು ನಮ್ಮೊಂದಿಗಿರಿಕೊಳ್ಳುವುದರಿಂದ ಬೇಕಾದಾಗ ಓದಬಹುದು. ಹೀಗಾಗಿ ನಮ್ಮಲ್ಲಿ ಒಳ್ಳೆಯ ಪುಸ್ತಕವೊಂದು **ನಿಲುಕುವ ಬೆಲೆಗೆ ಲಭಿಸಿದರೆ, ಜಾಣ ಆಯ್ಕೆ ಮಾಡಿ ಓದಬಲ್ಲ.** ಜೀವನಪ್ರಯಾಣ ಕಾಲದಲ್ಲಿ ಆ **ಕೃತಿ ಮಿತ್ರ - ಮಾರ್ಗದರ್ಶಿ, ದಾರ್ಶನಿಕ, ಸಂಗಾತಿಯಾಗಿರುತ್ತದೆ.**

ಈ ಪ್ರಸಂಗದಲ್ಲಿ ಎಲ್ಲರ ಮೆಚ್ಚುಗೆಯ ಕೃತಿಯನ್ನು ತರುವುದು ಕಷ್ಟವೇ ಸರಿ. ಪ್ರಮಾಣಕ್ಕಾಗಿ ಆದ್ಯರಾದ ಕೇಶೀರಾಜ, ತೀನಂಶ್ರೀ, ಪಂ॥ ಡಿ.ಗಂಗರಾಜು. ಪಂ॥ ಚನ್ನಪ್ಪ ಎರೇಸೀಮೆ,

ರಂಗನಾಥ ಶರ್ಮ, ವೆಂಕಟಸುಬ್ಬಯ್ಯ ಇವರ ಕೃತಿಗಳನ್ನು ನೋಡಿ ಕೃತಜ್ಞನಾಗಿದ್ದೇನೆ. ಅಂತೂ ಕನ್ನಡ ಅಭ್ಯಾಸ ಮಾಡುವ ವಿದ್ಯಾರ್ಥಿ-ಶಿಕ್ಷಕ ಮಿತ್ರರಿಗೆ ನೆರವಾಗುವ ಅಗತ್ಯ ಸಂಗತಿಗಳನ್ನು ಒಂದೇ ಕೃತಿಯಲ್ಲಿ ತರಲಾಗಿದೆ. ಅಧ್ಯಯನಶೀಲರಿಗೆ ಈ ಕೃತಿಯಿಂದ ಪ್ರಯೋಜನವಾದರೆ ನನ್ನ ಪ್ರಯತ್ನ ಸಾರ್ಥಕವೆಂದು ಭಾವಿಸುತ್ತೇನೆ.

ಕೃತಿಯೊಂದು ಪ್ರಯೋಗ, ಮರು ಪ್ರಯೋಗಗಳ ಫಲಿತಾಂಶ ಈ ಕೃತಿ ರಚನೆಗೆ ಹಿನ್ನೆಲೆಯಾದ ಶಿಕ್ಷಕರ ಕಾರ್ಯಾಗಾರಗಳಲ್ಲಿ ನನಗೆ ಪ್ರೋತ್ಸಾಹಿಸಿದ ಅನೇಕ ಮುಖ್ಯೋಪಾಧ್ಯಾಯರು, ಕನ್ನಡಶಿಕ್ಷಕರಿಗೆ ನನ್ನ ಧನ್ಯವಾದಗಳು. ಆಸಕ್ತಿಯಿಂದ ಕರಡುಪ್ರತಿಯನ್ನು ಪೂರ್ಣವಾಗಿ ಓದಿ ಸೂಕ್ತ ಸಲಹೆಗಳನ್ನಿತ್ತ ಕನ್ನಡ ಹಿರಿಯ ಅಧ್ಯಾಪಕರಾದ ಶ್ರೀ ಎಂ.ಎಸ್.ದಶರಥರಾಮಯ್ಯ, ಶ್ರೀ ಸೋ. ನರಸಿಂಹನ್, ಇವರಿಗೂ ಇತರೆ ಎಲ್ಲ ಸಹೃದಯ ಮಿತ್ರರಿಗೆ ಆಭಾರಿಯಾಗಿದ್ದೇನೆ. ಮೊದಲ ಮುದ್ರಣದ ಪ್ರತಿಗಳನ್ನು ಓದಿ ವಿಮರ್ಶೆಯೊಂದಿಗೆ ಮೆಚ್ಚುಗೆಯನ್ನು ಸೂಚಿಸಿದ ಶ್ರೀ ಎಂ.ಡಿ. ಶ್ರೀನಿವಾಸ್ ಹಾಗೂ ಪ್ರೊ॥ ಹ.ಬ. ಮಹದೇವಪ್ಪ ಮತ್ತು ಅಭಿಪ್ರಾಯಗಳನ್ನಿತ್ತ ಡಾ॥ ಎಸ್.ಪಿ. ಪದ್ಮ ಪ್ರಸಾದ್‌ರವರಿಗೂ ನನ್ನ ಧನ್ಯವಾದಗಳು. ಸಾದ್ಯಂತವಾಗಿ ಓದಿ ಹಾರೈಕೆಯನ್ನಿತ್ತ ಪ್ರೊ॥ ಬರಗೂರು ರಾಮಚಂದ್ರಪ್ಪನವರಿಗೂ ಪ್ರೊ॥ ಮಲ್ಲೇಪುರಂ ವೆಂಕಟೇಶ್‌ರವರಿಗೂ ಕನ್ನಡ ಶ್ರೀ ಎನ್. ಬಸವಾರಾಧ್ಯರವರಿಗೂ ಹೃತ್ಪೂರ್ವಕ ಅಭಿನಂದನೆಗಳು.

ನನ್ನ ಶ್ರೇಯೋಭಿಲಾಷಿಗಳಾದ ಪಂ॥ ಚನ್ನಪ್ಪ ಎರೆಸೀಮೆ ಹಾಗೂ ಶ್ರೀ ಹೆಚ್.ವಿ. ವೀರಭದ್ರಯ್ಯ ಇವರಿಗೂ ಧನ್ಯವಾದಗಳು. ಮುನ್ನುಡಿಯನ್ನು ಬರೆದುಕೊಟ್ಟ ಪ್ರೋತ್ಸಾಹಿಸಿದ ಘನತೆವೆತ್ತ **ಶ್ರೀ ದೇ.ಜವರೇಗೌಡ** ಇವರಿಗೂ, ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಆಡಳಿತ ವರ್ಗದವರಿಗೂ ನನ್ನ ಕೃತಜ್ಞತೆಗಳು. ಇಷ್ಟು ಮುದ್ರಣಗಳ ಕೃತಿಗಳನ್ನು ಆಯ್ದುಕೊಂಡು ಓದಿದ ಸೂಕ್ಷ್ಮ ದೃಷ್ಟಿಯ ಓದುಗರಿಗೂ ನೆರವಾದ ಸಜ್ಜನರ ಮೆಚ್ಚು ನುಡಿ ನನ್ನ ಶ್ರಮವನ್ನು ಕಳೆದಿವೆ. ಅವರಿಗೆ ನಾನು ಧನ್ಯವಾದ.

ಈ ಕೃತಿಯ ಮುದ್ರಣಕ್ಕೆ ಅತ್ಯಂತ ಎಚ್ಚರ ವಹಿಸಿ ಡಿ.ಟಿ.ಪಿ ಮಾಡಿಕೊಟ್ಟ ಗ್ಲೋಬಲ್ ಕಂಪ್ಯೂಟರ್ಸ್‌ನ ಮಾಲೀಕರಿಗೂ, ಮುದ್ರಿಸಿದ ಜಿ.ಕೆ. ಆಫ್‌ಸೆಟ್ ಪ್ರಿಂಟರ್ಸ್‌ರವರಿಗೂ ಧನ್ಯವಾದಗಳು.

ಇತೀ ಸುಜನ ವಿಧೇಯ

ಎಂ. ಈಶ್ವರಪ್ಪ




ಅನುಕ್ರಮಣಿಕೆ


ಮೂಲಾಕ್ಷರಗಳು

ಮಕ್ಕಳು ಮೂಲಾಕ್ಷರಗಳ ಅರಿವಿಲ್ಲದೆ ವರ್ಣಗಳನ್ನು ಅಸ್ಪಷ್ಟವಾಗಿ ಬರೆಯುವುದು ಸಹಜವಾಗಿದೆ. ಅದಕ್ಕಾಗಿ ಆ ಮೂಲಾಕ್ಷರಗಳ ಅರಿವನ್ನು ಮಾಡಿಕೊಂಡು ಸರಾಗವಾಗಿ ಓದು-ಬರಹಗಳು ಅಳವಟ್ಟಾಗ ಅಭ್ಯಾಸ ಸುಗಮವಾಗುತ್ತದೆ. ಒಂದು ವರ್ಣವನ್ನು ಬರೆಯಲು ಹೋಗಿ, ಮತ್ತೊಂದನ್ನು ಬರೆದು ಕಸಿವಿಸಿಗೊಳಗಾಗುತ್ತಾರೆ. ಹೀಗಾಗಿ ಭಾಷಾಭ್ಯಾಸದಲ್ಲಿ ಆತ್ಮವಿಶ್ವಾಸ ಕುಂಟಿತವಾಗಿ, ಮೂಕವೇದನೆಗೊಳಗಾಗುತ್ತಾರೆ. **ಒಕ್ಕಟು-ವಕ್ಕಟು, ಎಲ್ಲ-ಯಲ್ಲ, ವಿಶೇಷ-ಇಸೇಸ** ಇತ್ಯಾದಿ ತಪ್ಪುಗಳನ್ನು ಗಮನಿಸಿದ್ದೇವೆ. ಅಕ್ಷರ ಬರೆಯುವ ಸೂಕ್ತ ವಿಧಾನದ ತಿಳುವಳಿಕೆಯಿಲ್ಲದೆ ವರ್ಣಮಾಲೆಯ ಕಲಿಕೆಯಲ್ಲಿ ತೊಡಕುಂಟಾಗುತ್ತದೆ. ಅಕ್ಷರಗಳಿಗೆ ತಲೆಕಟ್ಟಿಲ್ಲ, ಪಾರ್ಶ್ವಗಳಿಲ್ಲ, ಅಕ್ಷರದ ಭಾಗಗಳಲ್ಲಿ ಅಳತೆ ಮೀರಿರುತ್ತದೆ. ಹೀಗಾಗಿ ಅಗತ್ಯವಾದ ಮೂಲಾಕ್ಷರ ಬರೆಯುವುದನ್ನು ಎಲ್ಲಿಂದ, ಹೇಗೆ ಇತ್ಯಾದಿಗಳ ಅರಿವು ಅಗತ್ಯ. ಆದ್ದರಿಂದ ಈ ಮೂಲಾಕ್ಷರದ ಕಲ್ಪನೆ ಮಕ್ಕಳಿಗೆ ಪೂರ್ಣವಾಗಿ ಆಗಬೇಕಾಗಿದೆ. ಇಲ್ಲಿ ಮೂಲಾಕ್ಷರಗಳನ್ನು ಯಾವ ಬದಿಯಿಂದ ಆರಂಭಿಸಬೇಕೆಂಬ ಕಲ್ಪನೆ ಇರಬೇಕು. ಆರಂಭಿಸಬೇಕಾದ ಹಂತವನ್ನು (◡) ಚಿನ್ಹೆಯಿಂದ ತೋರಿಸಿದೆ.

ಅವುಗಳನ್ನು ಈ ಹಂತಗಳಲ್ಲಿ ಅಭ್ಯಾಸ ನಡೆಸುವುದು ಸೂಕ್ತ

ಆರಂಭದ ಹಂತಗಳು **ಸರಿಯಾದ ರೂಪ** **ತಪ್ಪೆನಿಸುವ ರೂಪಗಳು**




1 2 3

1 2 3

ಝ

ಞ

ಟ

ಠ

ಡ

ಢ

ಣ

ತ


ಥ

ದ

ಧ

ನ

ಪ


1
2
3
ಫ
ಬ
ಭ
ಮ
ಯ
ರ
ಲ
ವ
ಶ
ಷ
ಸ
ಹ
ಳ

ಕನ್ನಡ ವರ್ಣಮಾಲೆ

ನಮ್ಮ ಅನುಭವ, ಆಲೋಚನೆಗಳನ್ನು ವಾಕ್ಯಗಳಲ್ಲಿ ವ್ಯಕ್ತಪಡಿಸುತ್ತೇವೆ. ವಾಕ್ಯಗಳು ಗಳಿಂದ ಕೂಡಿರುತ್ತವೆ. ಪದಗಳು ವರ್ಣಗಳಿಂದ ಕೂಡಿದ ವ್ಯವಸ್ಥಿತವಾದ ರೂಪ. ವರ್ಣ ಅಥವಾ ಅಕ್ಷರಗಳು ಉಚ್ಚಾರದ ಸಾಮಗ್ರಿಯಾಗಿವೆ. ಅವುಗಳನ್ನು ಧ್ವನಿವಿಶೇಷ ಕಗಳೆನ್ನಬಹುದು. ಉದಾ : **'ಕಮಲ'** ಇಲ್ಲಿ **ಕ್+ಅ, ಮ್+ಅ, ಲ್+ಅ** - ಈ ದೊಂದು ಅಕ್ಷರಗಳೂ ವಾಕ್ಯದಸಣ್ಣ ಉಚ್ಚಾರಘಟಕಗಳೆನಿಸಿವೆ.

ಧ್ವನಿಯು ಬಾಯಿಯ ಅಂಗಗಳ ಚಲನೆಯಿಂದ ಪರಿಷ್ಕೃತವಾಗಿ ನಿರ್ದಿಷ್ಟ ಆಕೃತಿಯ ರ್ಣರೂಪವಾಗುತ್ತದೆ. ಅದರಲಿಪಿ ಕಣ್ಣಿಗೆ ಕಾಣುತ್ತದೆ. ಈ ಲಿಪಿಧ್ವನಿರೂಪವನ್ನು ಯುತ್ತವೆ(೧). ಅವುಗಳನ್ನೇ **'ವರ್ಣ'** (ಅಕ್ಷರ) ಗಳೆನ್ನಲಾಗುತ್ತದೆ. ಕ್ರಮವಾಗಿ ವಿಂಗಡಿಸಿದ ವರ್ಣಗಳ ಜೋಡಣೆಯನ್ನು **'ವರ್ಣಮಾಲೆ'** ಯೆಂದು ಕರೆಯಲಾಗುತ್ತದೆ.

ಡದಲ್ಲಿರುವ ವರ್ಣಗಳು **ನಲ್ವತ್ತೊಂಬತ್ತು**(೨). ಅವುಗಳಲ್ಲಿ ಮೂರು ವಿಧ.

ಸ್ವರಗಳು : ಅ, **ಆ**, ಇ, **ಈ**, ಉ, **ಊ**, ಋ(೩), ಎ, **ಏ**, **ಐ**, ಒ, **ಓ**, **ಔ** = ೧೩

ಯೋಗವಾಹಗಳು : ಅನುಸ್ವಾರ (ಂ) ವಿಸರ್ಗ (ಃ) = ೦೨

ವರ್ಗೀಯವ್ಯಂಜನ : (ಸ್ವರಸಹಿತ) = ೨೫

ಕ	ವರ್ಗ	-	ಕ	**ಖ**	ಗ	**ಘ**	ಙ
ಚ	ವರ್ಗ	-	ಚ	**ಛ**	ಜ	**ಝ**	ಞ
ಟ	ವರ್ಗ	-	ಟ	**ಠ**	ಡ	**ಢ**	ಣ
ತ	ವರ್ಗ	-	ತ	**ಥ**	ದ	**ಧ**	ನ
ಪ	ವರ್ಗ	-	ಪ	**ಫ**	ಬ	**ಭ**	ಮ

ರ್ಗೀಯ ವ್ಯಂಜನ : ಯ ರ ಲ ವ **ಶ** **ಷ** ಸ ಹ ಳ(೪) = ೦೯

= ೪೯

ಟಿಪ್ಪಣಿಗಳು :

ಇವುಗಳನ್ನು 'ಚಾಕ್ಷುಷ' (ಕಣ್ಣನಿಂದ ನೋಡುವ) 'ಶ್ರಾವಣ' (ಕಿವಿಯಿಂದ ಕೇಳುವಂತಹವು) ದು ಕರೆದಿರುತ್ತಾರೆ. ಬರೆಯಲು, ಉಚ್ಚರಿಸಲು ಬರುವಂತಹ ವರ್ಣ.

(ಮುಂದುವರೆದಿದೆ)

೨) ಕೇಶಿರಾಜನು ಋ, ೠ, ಶ, ಷ. ವಿಸರ್ಗ, ಲೃ, ೞ (ಸಂಸ್ಕೃತ ಶಬ್ದದ ಲಕಾರದ ಬದಲಾಗಿ ಬರುವ 'ಳ' ಕಾರ) ಇವುಗಳನ್ನು ಕಳೆದು ನಲ್ವತ್ತೇಳು ವರ್ಣಗಳುಂಟು ಎಂದಿದ್ದಾನೆ. ಭಾಷಾಶಾಸ್ತ್ರಕಾರರು ಕೇವಲ ನಲವತ್ತೆರಡು ವರ್ಣಗಳೇ ಸಾಕೆನ್ನುತ್ತಾರೆ.

೩) 'ೠ' ಕಾರಾಂತ ಶಬ್ದಗಳು ಕನ್ನಡದಲ್ಲಿ ಇಲ್ಲದ್ದರಿಂದ ಆ ವರ್ಣವನ್ನು ಬಿಡುವುದು ಸೂಕ್ತ. 'ಋ' ಕಾರವನ್ನು ಬಿಡಬೇಕು ಎಂಬ ಅಭಿಪ್ರಾಯವಿದೆ : ಅವರು ಹೇಳುವಂತೆ ಪಿತೃ-ಪಿತ್ರು, ಕೃಷ್ಣ-ಕ್ರುಷ್ಣ ಗಳೆಂದು ಬರೆಯಬಹುದೆಂದು ಅಭಿಪ್ರಾಯವಿದೆ. ಸಂಸ್ಕೃತ ಜಾಯಮಾನದ 'ಋ' ಕಾರ (ದ್ರಾವಿಡ)ಭಾಷೆಗೆ ಹೊಂದಿಕೆಯಾಗದು ಎಂಬ ಹೇಳಿಕೆಯಿದೆ. ಇಲ್ಲಿನ 'ಋ' ಸ್ವರ 'ರ್' ಇಲ್ಲಿ ಕಠಿಣತಾಲು, ಮಧ್ಯತಾಲುವಿನ ಭಾಗವನ್ನು ಕೆಲವರು ತಾಲುವಿನಭಾಗವೆಂದೂ, ಕೆಲವರು ಮೂರ್ಧನ್ಯವೆಂದು ಭೇದ ಮಾಡುತ್ತಾರೆ. ಈ ಎರಡೂ ಮೂರ್ಧನ್ಯಗಳೇ ಆದರೂ 'ರ್' ಜಿಹ್ವಾಗ್ರ ಭಾಗ. ಹೆಚ್ಚು ಸ್ಥಿತಿಸ್ಥಾಪಕತ್ವ ಹೊಂದಿದ್ದು, ಶ್ವಾಸಗಾಳಿಯನ್ನು ತಡೆವ, ಬಿಡುವುದರಿಂದ (ಇನ್ನೊಂದು ಅಂಗಕ್ಕೆ ಬಡಿವಾಗ ಲುಂಠಿತ ಧ್ವನಿ) 'ಋ'- ಸ್ವರಧ್ವನಿ ಜಿಹ್ವಾಗ್ರ ಕೊಂಕಾಗಿಸಿ (ವೇಷ್ಟಿತ) ಧ್ವನಿ. ಕನ್ನಡಕ್ಕೆ ಸಂಸ್ಕೃತದಿಂದಬಂದು ಸೇರಿರುವ 'ಋ' ಕಾರಾಂತವಾದ ಋಜು, ಋಷಿ, ಋತ, ಕೃಷಿ, ತೃಪ್ತಿ, ದೃಷ್ಟಿ ಇತ್ಯಾದಿ ಶಬ್ದಗಳು ಕನ್ನಡದಲ್ಲಿ ಪ್ರಚುರಗೊಂಡಿವೆ. ಈಗಾಗಲೇ ನಿಘಂಟುವಿನಲ್ಲಿ ಈ ಶಬ್ದಗಳು ಪ್ರಚಾರದಲ್ಲಿ ಇವೆ. 'ಉಚ್ಚಾರಣೆಗೆ ಕಷ್ಟವಾಗುತ್ತದೆ' ಎಂಬ ದೃಷ್ಟಿಯಿಂದ 'ಋ' ಕಾರವನ್ನು ತೆಗೆದು ಹಾಕುವುದರಿಂದ ಮಕ್ಕಳಿಗೆ ಗೊಂದಲವಾಗುತ್ತದೆ. ಹೀಗೆಯೇ 'ಐ' 'ಔ' ಅಕ್ಷರಗಳನ್ನು ಅಯ್, ಅವ್ ಗಳೆಂದು ಬರೆಯಬಹುದೆಂದೂ ಅವನ್ನೂ ಬಿಡಿಯೆಂದು ಹೇಳಬಹುದು. ಹಾಗೆಯೇ ಇ-ಯಿ, ಈ-ಯೀ ಎಂತಲು ಪ್ರಯೋಗಿಸಬಹುದೆಂದು ಹೇಳುವ ಪ್ರಸಂಗ ಬರಬಹುದು. ಏಕೆಂದರೆ ಇವುಗಳಲ್ಲಿ ಉಚ್ಚಾರಣೆ ಒಂದೇ ಎಂಬ ಭ್ರಮೆಯಿದೆ. ಅದು ಸರಿಯಲ್ಲ. ಉದಾ : ಇ, ಈ, ತಾಲುವಿನಿಂದ ಹುಟ್ಟುತ್ತವೆ. ಯಿ, ಯೀ, ಅಂತಸ್ಥ+ತಾಲು; ಹಾಗೆಯೇ ಉ, ಊ, ಓಷ್ಠ್ಯಗಳು; ವು, ವೂಗಳು ದಂತ್ಯಗಳು; ಇವುಗಳನ್ನು ಬೇರೆ ಬೇರೆಯಾಗಿ ನಾವು ಪರಿಗಣಿಸಿದ್ದೇವೆ. ಉಚ್ಚಾರದಲ್ಲೂ ಸೂಕ್ಷ್ಮ ಭೇಧವಿದೆ. ಈ ಸ್ವರಗಳನ್ನು ಕಳೆದರೆ ಮುಂದೆ ಸಿದ್ಧವಾದ ಕಾಗುಣಿತ ಅಕ್ಷರಗಳಲ್ಲಿ ತಪ್ಪಾಗುವ ಸಾಧ್ಯತೆಯಿದೆ. ನಿಜವಾಗಿಯೂ ಮಕ್ಕಳಿಗೆ 'ಋ' ಕಾರಾಂತ ಶ, ಷ ಅಕ್ಷರಗಳಿಂದ ಕೂಡಿರುವ ಶಬ್ದಗಳನ್ನು ಉಚ್ಚರಿಸುವುದರಿಂದ ಉಚ್ಚಾರಾಭ್ಯಾಸಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಹಾಗೆಯೇ ಉಳಿಸಿಕೊಳ್ಳುವುದರಿಂದ 'ಋ' ಕಾರಾಂತ ಶಬ್ದಗಳಬಗ್ಗೆ ಇರುವ ಗೊಂದಲವೂ ಹೋಗುತ್ತದೆ. ಇಂತಹ ವಿಚಾರಗಳಲ್ಲಿ ಮಕ್ಕಳಿಗೆ ಕಾಗುಣಿತದ ವಿಚಾರದಲ್ಲಿ ಗೊಂದಲವಾಗದಂತೆ ನೋಡಿಕೊಳ್ಳಬೇಕಾಗುತ್ತದೆ. ವ್ಯಂಜನಗಳಿಗೆ ಕಾಗುಣಿತವಿಲ್ಲ. ಆದ್ದರಿಂದ 'ಋ' ಕಾರವನ್ನಾಗಲಿ ಇ, ಈ, ಐ, ಔ, ಶ, ಷ ಇತ್ಯಾದಿ ಅಕ್ಷರಗಳನ್ನಾಗಲಿ ಉಚ್ಚಾರಣೆಗೆ ಕಷ್ಟವೆಂಬ ನೆಪವೊಡ್ಡಿ ದಿಢೀರನೇ ತೆಗೆದು ಹಾಕುವುದರಲ್ಲಿ ಅರ್ಥವಿಲ್ಲ. ಈ ವಿಚಾರದಲ್ಲಿ ಸಾರ್ವತ್ರಿಕ ತೀರ್ಮಾನವೇ ಮಾನ್ಯವಾದದ್ದು. ಹಾಗೆಯೇ ಭಾಷೆಯಲ್ಲಿ ಕಾಲಾಂತರದ ಪ್ರಯೋಗಗಳ ರೂಢಿಯಿಂದ ಯಾವುದೇ ವ್ಯಾಕರಣಾಂಶ ಬದಲಾವಣೆ ಮಾಡಬಹುದಷ್ಟೇ. ಅದನ್ನು ಬಿಟ್ಟು ಕೆಲವರ ತಲೆಯಲ್ಲಿರುವುದನ್ನು ಇಡೀ ಶಿಕ್ಷಣರಂಗಕ್ಕೆ ತಳ್ಳುವುದು ಅಷ್ಟು ಸಮಂಜಸವಲ್ಲ. ಈ ಬಗ್ಗೆ ಈಗಾಗಲೇ ಇದೇ ಅಭಿಪ್ರಾಯವನ್ನು ಭಾಷಾತಜ್ಞರು ವ್ಯಕ್ತಪಡಿಸಿರುವುದು ಗಮನಾರ್ಹ.

೪) ಸ್ವತಂತ್ರಾಕ್ಷರಗಳೆಂದು ಕ್ಷ, ಜ್ಞ ಅಕ್ಷರಗಳನ್ನು ತಿಳಿಯಬಾರದು. ಅವು ಸಂಯುಕ್ತಾಕ್ಷರಗಳು.

೧) **ಸ್ವರಗಳ ವಿಚಾರ :** ಸ್ವತಂತ್ರವಾಗಿ ಉಚ್ಚರಿಸಲಾಗುವ ವರ್ಣಗಳು **'ಸ್ವರ'** ಗಳೆನಿಸುತ್ತವೆ. ಇವುಗಳನ್ನು ಹ್ರಸ್ವಸ್ವರಗಳು, ದೀರ್ಘಸ್ವರಗಳು(೧), ಪ್ಲುತಸ್ವರಗಳೆಂದು ಗುರುತಿಸುತ್ತಾರೆ.

ಅ) **ಹ್ರಸ್ವಸ್ವರಗಳು :** ಕಡಿಮೆಕಾಲದಲ್ಲಿ ಉಚ್ಚರಿಸುವ ವರ್ಣಗಳು. ಅವುಗಳು ಉಚ್ಚಾರದಲ್ಲಿ ಒಂದು 'ಮಾತ್ರೆ' ಕಾಲ ತೆಗೆದುಕೊಳ್ಳುತ್ತವೆ. (ಸಹಜವಾಗಿ ಕಣ್ಣುಮುಚ್ಚಿ ತೆರೆಯುವ **ಕಾಲವನ್ನು 'ಮಾತ್ರೆ'**ಯೆನ್ನಲಾಗಿದೆ). ಅವುಗಳನ್ನು **'ಹ್ರಸ್ವ ಸ್ವರ'**ಗಳೆನ್ನಲಾಗುತ್ತದೆ. ಅವು : ಅ, ಇ, ಉ(೧), ಋ, ಎ, ಒ.

ಆ) ***ದೀರ್ಘಸ್ವರಗಳು* :** ಎರಡು ಮಾತ್ರೆಯ ಕಾಲದಲ್ಲಿ **ಎಳೆದು-ಉಚ್ಚರಿಸುತ್ತೇವೆ. ಹೀಗೆ ಉಚ್ಚರಿಸುವಾಗ ವ್ಯತ್ಯಾಸವಿರುವುದು ಸೂಕ್ತ.** ಆದುದರಿಂದಲೇ ಅವುಗಳನ್ನು **'ದೀರ್ಘಸ್ವರ'**ಗಳೆನ್ನಲಾಗುತ್ತದೆ. ಅವು:ಆ, ಈ, ಊ, ಏ, ಐ, ಓ, ಔ.(೨)

ಇ) **ಪ್ಲುತಸ್ವರಗಳು :** ಮೇಲಿನ ದೀರ್ಘಸ್ವರಗಳನ್ನೇ ಮೂರುಮಾತ್ರೆಯ ಕಾಲದಲ್ಲಿ ಉಚ್ಚರಿಸಿದಾಗ ಅವು **'ಪ್ಲುತಸ್ವರ'**ವೆನಿಸುತ್ತವೆ. **ಪ್ಲುತಕ್ಕೆ ಲಿಪಿಯಿರುವುದಿಲ್ಲ. ಉಚ್ಚಾರದಲ್ಲಿ ತೋರಿಸಬೇಕು.** ಕೇವಲ (3/ऽ) ಸಂಕೇತದಿಂದ ಸೂಚಿಸಲಾಗುತ್ತದೆ. ಉದಾ : ಅಣ್ಣಾಽ, ಅಪ್ಪಾಽ, ಬಂದಾಽನ.

೨) **ಯೋಗವಾಹಗಳು :** ಯೋಗ = ಸಂಬಂಧದಿಂದ, ವಾಹ = ಉಚ್ಚರಿಸಲಾಗುವವು. ಅನುಸ್ವಾರ (ಂ), ವಿಸರ್ಗ (ಃ)-ಇವುಗಳನ್ನು ಸ್ವತಃಉಚ್ಚರಿಸಲು ಬರುವುದಿಲ್ಲ. ಅವುಗಳ ಹಿಂದೆ ಸ್ವರಗಳ ಸಹಾಯವಿರಿಸಿಕೊಂಡೇ ಉಚ್ಚರಿಸಲಾಗುತ್ತದೆ. ಆದುದರಿಂದಲೇ **'ಯೋಗವಾಹ'**ಗಳೆನಿಸಿವೆ. ಉದಾ: **ಅಂಕ**(೩), ಸುಂಕ, ದುಃಖ, ಪುನಃ.

೩) **ವ್ಯಂಜನಗಳು :** ಸ್ವರಗಳ ಸಹಾಯದಿಂದ ಉಚ್ಚರಿಸಲಾಗುವ ಅಕ್ಷರಗಳು **'ವ್ಯಂಜನ'**ವೆನಿಸುತ್ತವೆ. ಇವು ಅರ್ಧಮಾತ್ರಾ ಕಾಲದಲ್ಲಿ ಉಚ್ಚರಿಸುವ ಅಕ್ಷರಗಳು (ಕ್, ಗ್, ಚ್,ಡ್).

---

೧) "ಸಮಾನವರ್ಣಾಃ ಸವರ್ಣಾಃ" (ಅ-ಅ ಆ-ಆ) (ಈ-ಈ ಇ-ಇ) (ಉ-ಉ ಊ-ಊ ಸಾಮಾನ್ಯವಾಗಿ ಇವುಗಳನ್ನು ಯಾವ ಕ್ರಮದಲ್ಲಿ ಬಳಸಿದರೂ ಅವು 'ಸವರ್ಣಸ್ವರ'ಗಳೆನಿಸುತ್ತವೆ.

೨) ಏ, ಓ ಗುಣಾಕ್ಷರಗಳು, ಐ, ಔ ವೃಧ್ಯಕ್ಷರಗಳು ಹೀಗಾಗಿ ಈ ನಾಲ್ಕುವರ್ಣಗಳು 'ಸಂಧ್ಯಕ್ಷರ' ಎನಿಸಿವೆ.

೩) ಇವುಗಳನ್ನು ಅಙ್ಕ, ಸುಙ್ಕಗಳೆಂದು ಸಂಸ್ಕೃತದ ಛಾಯಮಾನದಂತೆ ಬರೆಯಬಹುದು. ಕನ್ನಡದಲ್ಲಿ ಅನುನಾಸಿಕಾಕ್ಷರದ ಬದಲು, ಅನುಸ್ವಾರ ಬಳಸಿ ಬರೆವುದು ಸರಳವೂ ಸುಲಭವೂ ಸರಿಯಾದ ರೂಪವೂ ಆಗಿದೆ.

ವ್ಯಂಜನವೆಂದರೆ **'ನಂಚಿಕೆ'** ಎಂಬರ್ಥ ಉಂಟು. ಬರೀಊಟ ರುಚಿಸದು. ನಂಚಿಕೆಯಿದ್ದರೆ ಊಟ ಸೊಗಸಿರುತ್ತದೆ. ಹೀಗೆಯೇ **ಕವನ - ಕ್+ಅ**=ಕ, **ವ್+ಅ**=ವ, **ನ್+ಅ**=ನ. ಇಲ್ಲಿ ಕ್, ವ್, ನ್, ವ್ಯಂಜನಗಳಿಗೆ ಸ್ವರಸೇರಿವೆ(೪). ಕೇವಲ ವ್ಯಂಜನಗಳ ಉಚ್ಚಾರ ಅಸ್ಪಷ್ಟವಾಗಿರುತ್ತದೆ. ಮುಂದೆ ಸ್ವರದಸಹಾಯ ದೊರೆತಿರುವುದರಿಂದ ಉಚ್ಚಾರ ಸುಗಮವಾಗಿದೆ.

ವ್ಯಂಜನಗಳಲ್ಲಿ ಎರಡುವಿಧ. ಅ) ವರ್ಗೀಯ ವ್ಯಂಜನ, ಆ) ಅವರ್ಗೀಯ ವ್ಯಂಜನ.

ಅ) ವರ್ಗೀಯ ವ್ಯಂಜನ : 'ಕ' ಕಾರದಿಂದ ಹಿಡಿದು **'ಮ'** ಕಾರದವರೆಗಿನ ವರ್ಣಗಳನ್ನು, ಹುಟ್ಟುವ ಸ್ಥಾನಗಳಿಗನುಸಾರವಾಗಿ ಗುಂಪಾಗಿ ವರ್ಗೀಕರಿಸಲಾಗಿದೆ. ಆ ವರ್ಗವನ್ನು ವರ್ಗದ ಮೊದಲ ಅಕ್ಷರದ ಹೆಸರಿನಿಂದ ಗುರುತಿಸಲಾಗುತ್ತದೆ. **ಅವು : ಕ** ವರ್ಗ, **ಚ** ವರ್ಗ, **ಟ** ವರ್ಗ, **ತ** ವರ್ಗ, **ಪ** ವರ್ಗಗಳೆಂದು ಐದುವರ್ಗಗಳಿವೆ.

೧. **ಅಲ್ಪಪ್ರಾಣ :** ಕಡಿಮೆಉಸಿರಿನಿಂದ ಉಚ್ಚರಿಸುವ ವ್ಯಂಜನಗಳು **'ಅಲ್ಪಪ್ರಾಣ'** ಗಳೆನಿಸುತ್ತವೆ. ಅವುಗಳು : ಕ, ಗ, ಚ, ಜ, ಟ, ಡ, ತ, ದ, ಪ, ಬ.

೨. **ಮಹಾಪ್ರಾಣ :** ಹೆಚ್ಚು ಉಸಿರಿನಿಂದ ಉಚ್ಚರಿಸುವ ವ್ಯಂಜನಗಳು **'ಮಹಾಪ್ರಾಣ'** ಗಳೆನಿಸುತ್ತವೆ. ಅವುಗಳು : **ಖ, ಘ, ಛ, ಝ, ಠ, ಢ, ಥ, ಧ, ಫ, ಭ.**

೩. **ಅನುನಾಸಿಕಗಳು :** ಮೂಗಿನ (ನಾಸಿಕ) ಸಹಾಯದಿಂದ ಉಚ್ಚರಿಸಲಾಗುವ ವರ್ಣಗಳು **'ಅನುನಾಸಿಕ ವರ್ಣ'**ಗಳೆನಿಸುತ್ತವೆ. ಅವುಗಳು : **ಙ, ಞ, ಣ, ನ, ಮ.**

ಆ) ಅವರ್ಗೀಯ ವ್ಯಂಜನಗಳು : ಯಾವ ವರ್ಗದ ವ್ಯವಸ್ಥೆಯಿಲ್ಲದೆ ಪ್ರತ್ಯೇಕವಾಗಿರುವ ವ್ಯಂಜನಗಳನ್ನು **'ಅವರ್ಗೀಯ ವ್ಯಂಜನ'**ಗಳೆನ್ನಲಾಗುತ್ತದೆ. ಅವುಗಳು : ಯ, ರ, ಲ, ವ, **ಶ, ಷ,** ಸ, ಹ, ಳ.(೧)

೪) "ಪರೇಣ ಸ್ವರೇಣ ವ್ಯಂಜತ ಇತಿ ವ್ಯಂಜನಂ"= ಸ್ವರಗಳಿಂದಲೇ ವ್ಯಂಜನಗಳ ಸ್ಪಷ್ಟವಾದ ಉಚ್ಚಾರ ಸಾಧ್ಯ. 'ಕ್,ವ್,ನ್' ಎನ್ನುವುದನ್ನು 'ಕವನ' ಎಂದು ಉಚ್ಚರಿಸುವುದು ಹಿತ.

೧) ಹಳಗನ್ನಡ ಸಾಹಿತ್ಯವನ್ನು ಓದುವವರಿಗೆ ಕ್ಷಳ, ಕುಳ, ಱ-ರರ, ೞ-ರಳಗಳ ಪರಿಚಯವಿರಬೇಕು: ಸಂಸ್ಕೃತ ಶಬ್ದಗಳಲ್ಲಿರುವ 'ಲ' ಕ್ಕೆ ಬದಲಾಗಿ ಬಳಸುವ 'ಳ'ಕ್ಕೆ ಕ್ಷಳವೆಂದು ತಿಳಿಯಬೇಕು. ಉದಾ:**ಜಲ-ಜಳ, ಕಮಲ-ಕಮಳ**. ಅಚ್ಚಗನ್ನಡ ಶಬ್ದಗಳಲ್ಲಿರುವ 'ಳ' ಕಾರವನ್ನು **'ಕುಳ'**ವೆನ್ನಲಾಗಿದೆ. ಉದಾ:ಕೊರಳು, ಬೆಳಗು, ಒಳಗು. 'ಱ' - (ರರ) ಶಕಟರೇಫವೆನ್ನಲಾಗುತ್ತದೆ. ಇದನ್ನು 'ರ'ಕಾರದಂತೆ ಉಚ್ಚರಿಸಲಾಗುತ್ತದೆ. 'ೞ' - **'ರಳ'**ಕಾರವೆನ್ನುತ್ತಾರೆ. ಇದನ್ನು 'ಳ' ಕಾರದಂತೆಯೇ ಉಚ್ಚರಿಸಲಾಗುತ್ತದೆ. ಈ ವರ್ಣದಿಂದ ಕೂಡಿರುವ ಶಬ್ದಗಳಿಗೂ **ರ, ಳ**ಕಾರದಿಂದ ಕೂಡಿದ ಶಬ್ದಗಳಿಗೂ ಅರ್ಥವ್ಯತ್ಯಾಸವಿರುತ್ತದೆ : **ಉದಾ :** *ಅಱೆ-ಬಂಡೆ, **ಅರೆ**-ಅರ್ಧ; ಉೞಿ-ಬಿಡು, **ಉಳಿ**-ಸಾಧನ;*

*ನೆಱೆ-ಪೂರ್ಣ, ನೆರೆ-ಸೇರು; ಅೞಿ-ನಾಶ, **ಅಳಿ**-ದುಂಬಿ;*

ಈ 'ಱ', 'ೞ', 'ಕುಳ', 'ಕ್ಷಳ'ಗಳೆಂಬಿವು ಲಿಪಿರೂಪ ಸಾಮ್ಯದಿಂದಾದವಾಗಿರಬಹುದೆಂದು **ಸೇಡಿಯಾಪುರವರ** ಅಭಿಪ್ರಾಯ. ಪರಿಹರಕಪಿ ಇವುಗಳಭೇದ ಪಿಂಗಡಣೆಯನ್ನು **'ವಿಚಾರಿಸಬೇಡ'** ಎಂದನು. ಹೊಸಗನ್ನಡದಲ್ಲಿ ಇರುವುದೊಂದೇ 'ರ'ಕಾರ, ಒಂದೇ 'ಳ' ಕಾರ ಎಂಬುದು ಮುಖ್ಯ.

ಉಚ್ಚಾರಭೇದದ ವಿಶೇಷ ವಿಚಾರ : ಭಾರತೀಯ ಭಾಷೆಗಳೆಲ್ಲವೂ ಬ್ರಾಹ್ಮೀಲಿಪಿಯ ಮೂಲದಿಂದ ಬಂದವು. ಅವುಗಳೆಲ್ಲವೂ ಧ್ವನಿಉಚ್ಚಾರದ ಮೇಲೆ ರೂಪುಗೊಂಡಿವೆ. ಸಾಮಾನ್ಯವಾಗಿ ಕನ್ನಡದಲ್ಲಿ ನಾವು ಉಚ್ಚರಿಸುವ ಅಕ್ಷರ ಮತ್ತು ಬರೆಯುವ ಅಕ್ಷರ ಒಂದೇ ಆಗಿರುತ್ತವೆ. ಹೀಗಾಗಿ ಅಕ್ಷರಗಳ ತಪ್ಪುಗಳನ್ನು ಸರಿಪಡಿಸಿಕೊಳ್ಳುವುದು ಸುಲಭ. ಆದರೂ ಇತ್ತೀಚೆಗೆ ಚಿಕ್ಕಂದಿನಿಂದ ಗಮನಕಡಿಮೆಯಾಗಿ ಕೆಲವು ಸಂಸ್ಕೃತ ಹಿನ್ನೆಲೆಯ ಅಕ್ಷರಗಳ ಉಚ್ಚಾರ ಬರವಣಿಗೆಯಲ್ಲಿ ದೋಷಗಳಾಗುತ್ತಿವೆ. ಅದರಲ್ಲೂ ಸಂಸ್ಕೃತದ ಶಬ್ದಸಂಪತ್ತು ಕನ್ನಡದಲ್ಲಿ ವಿಫುಲವಾಗಿ ಸೇರಿದೆ. ಮಗುವಿನ ಹುಟ್ಟುಗುಣ, ಬುದ್ಧಿಶಕ್ತಿ, ಕಲಿಕೆಯ ನ್ಯೂನ್ಯತೆ, ಕಲಿಕಾಕ್ರಮಗಳಲ್ಲಿ ದೋಷವಾಗುತ್ತವೆ. ಬಾಲ್ಯದ ಕಲಿಕೆಯ ನ್ಯೂನ್ಯತೆಗಳಾಗಿ ಸರಿಯಾದ ಮಾರ್ಗದರ್ಶನ ಸೌಲಭ್ಯಗಳು ದೊರಕದೆ, ಚಿಕ್ಕಂದಿನಲ್ಲಿಯೇ ಸಣ್ಣ ಸಮಸ್ಯೆಗಳಾಗಬಹುದು. ಇದರ ಪರಿಣಾಮವಾಗಿ ಮಕ್ಕಳು **ಓದಿನಲ್ಲಿ ಹಿಂಜರಿಯುತ್ತಾರೆ. ಕೀಳರಿಮೆಗಳು** ಉಂಟಾಗಿ ಮಗು ಹಿಂದೆ ಸರಿಯಲುಬಹುದು. ಹೀಗಾಗಿ ಈ ಶಬ್ದಗಳ ಉಚ್ಚಾರಣಾಂಶಗಳನ್ನು ಗಮನಿಸಬೇಕಾದುದು ಸೂಕ್ತ. ತಂದೆ ತಾಯಿಗಳ, ಅಧ್ಯಾಪಕರ ಉಚ್ಚಾರ ಸ್ಪಷ್ಟವಾಗಿದ್ದರೆ ಮಕ್ಕಳ ಉಚ್ಚಾರವು ಸರಿಯಾದೀತು. ಈ ಹಿನ್ನೆಲೆಯಲ್ಲಿ ಮಕ್ಕಳಿಗೆ ಅಭ್ಯಾಸಕ್ಕಾಗಿ ಅಂತಹ ಶಬ್ದಗಳುಳ್ಳ ವಾಕ್ಯಗಳನ್ನು ಕಿವಿಗೆ ಸ್ಪಷ್ಟವಾಗಿ ಬೀಳುವಂತೆ ಉಚ್ಚರಿಸಿ ತಿದ್ದಬೇಕಾಗುತ್ತದೆ. **ಒಂದೆರಡು ಪ್ರಯೋಗಾತ್ಮಕ ಪ್ರಯತ್ನಗಳನ್ನು ಮಾಡಬಹುದಾಗಿದೆ ಅವುಗಳ ಮಾದರಿ ಕೊಡಲಾಗಿದೆ :** ಇತ್ತೀಚೆಗೆ ಕೇವಲ ಸೌಲಭ್ಯದಕಡೆ ಗಮನ ಹೆಚ್ಚಾಗಿ **'ಅ'**ಕಾರ 'ಹ'ಕಾರಗಳಲ್ಲಿ **ಉಚ್ಚಾರಭೇದವಿಲ್ಲ.** ಮಹಾಪ್ರಾಣಗಳ **ಲೋಪ**, ಅಗತ್ಯವಿಲ್ಲದ ಕಡೆ **ಮಹಾಪ್ರಾಣಗಳ ಬಳಕೆ, ಒತ್ತಕ್ಷರದ ಸಡಿಲಿಕೆ,** ದೀರ್ಘಾಕ್ಷರಗಳನ್ನು **ಮೊಟಕಾಗಿ ಉಚ್ಚರಿಸುವುದು** ಇವುಗಳು ತೀರಾ ಸಾಮಾನ್ಯವಾಗಿವೆ. ಉದಾ : **ಹ**ವಾಮಾನ ಅವಮಾನ; ದೇ**ವಾ**ಲಯ-ದೇ**ವ**ಲಯ, ಅಧಿಕಾ**ರಾ**ರೂಢ-ಅಧಿಕಾ**ರ**ರೂಢ ಎನ್ನಲಾಗಿದೆ. ಅರಸ-**ಹ**ರಸ, **ಆ**ಸನ-**ಹಾ**ಸನ, ಇವುಗಳನ್ನು ಚಿಕ್ಕಂದಿನಲ್ಲಿಯೇ ಗಮನಿಸಿ ತಿದ್ದಿಕೊಳ್ಳುವುದು ಸೂಕ್ತ. **ಮೂಲಾಕ್ಷರಗಳ ಬಳಕೆ**ಯಲ್ಲಿ ಮಕ್ಕಳಿಗೆ ತಿಳುವಳಿಕೆ **ಬೇಕು: ಏ** - ಹೆ ವ್ಯತ್ಯಾಸ ತಿಳಿಯಬೇಕು. **ಏ**ನು - ಹೇನು, **ಏ**ಳು-ಹೇಳು, **ಎ**ಮ್ಮೆ - ಹೆಮ್ಮೆ, ಹಾಗೆಯೇ **ಇ**-ಹಿ ವ್ಯತ್ಯಾಸ ತಿಳಿಯಬೇಕು: **ಇಂದು-ಹಿಂದು, ಉಬ್ಬು-ಹುಬ್ಬು, ಉರಿ-ಹುರಿ, ಉಲಿ-ಹುಲಿ,** ಉಳುಕು-**ಹು**ಳುಕು. **ಒ-ಹೊ** ವ್ಯತ್ಯಾಸ ತಿಳಿಯಬೇಕು: **ಒರೆ-ಹೊರೆ, ಒಲ-ಹೊಲ,** ಓಜೆ-**ಹೋ**ಜೆ ಇಂತಹ ಅಕ್ಷರ ಭೇದಗಳ ಪರಿಚಯವಿಲ್ಲದೆ ಹೋದರೆ ಅರ್ಥವ್ಯತ್ಯಾಸಗಳಾಗುತ್ತದೆ. ಉದಾ : **ಅ**ಕ್ಕಿ-ಭತ್ತದ ಕಾಳು, **ಹ**ಕ್ಕಿ-ಪಕ್ಷಿ, **ಅಂ**ಶ-ಭಾಗ, ಹಂಸ-ಪಕ್ಷಿ. **ಹಸಿ**-ಖಡ್ಗ / ಸಣ್ಣ, **ಹಸಿ**- ಅಪಕ್ವ.

) **ಉಚ್ಚಾರಣೆ ಬೇರೆ ಬೇರೆ ಏಕೆ?** ಅನುಸ್ವಾರವನ್ನು **'ಮ'**ಕಾರದಂತೆ ಉಚ್ಚರಿಸಬಾರದು. ಅನುಸ್ವಾರ ಯಾವಾಗಲೂ ಅನುನಾಸಿಕವಾಗಿಯೇ ಇರುತ್ತದೆ. ಉದಾ : **ಅಂ**ಕ, ಅ**ಮ**ಲ, ಸಿಂಹ, ಸಿ**ವ**ುಹ. ಅನುಸ್ವಾರಕ್ಕೆ ಕನ್ನಡದಲ್ಲಿ ಎಲ್ಲ ವರ್ಗೀಯ ಪಂಚಮಾಕ್ಷರ ಉಪಯೋಗಿಸುವ ಪದ್ಧತಿಯಿದೆ. ಕಾರಣ ಆಯಾಶಬ್ದಗಳ ಅನುಸ್ವಾರದ ಮುಂದೆ ಇರುವ

ವ್ಯಂಜನವು ಆ ವರ್ಗದ ಪಂಚಾಮಾಕ್ಷರಗಳ ಉಚ್ಚಾರಣೆಯಂತೆ ಸ್ವಾಭಾವಿಕವಾಗಿ ಆಗುತ್ತದೆ. ಉದಾ : ಕುಂಬ್ಆರ, ಗುಂಡಯ್ಯ, ಇಲ್ಲಿ **'ಕುಂ'** ಮೊದಲನೆ ಅನುಸ್ವಾರ **'ಮ್'** ಪ್ರವರ್ಗದ ಪಂಚಮಾಕ್ಷರ. ಹಾಗೆಯೇ **'ಗುಂ'** ಅನುಸ್ವಾರ ಪವರ್ಗದ ಪಂಚಮಾಕ್ಷರ **'ಣ್'** ಆಗಿದೆ.

೩) 'ಶ'ಕಾರ **'ಷ'** 'ಸ'ಕಾರಗಳು ಬೇರೆ ಬೇರೆ ವರ್ಣಗಳು : ಈ **'ಶ'**, **'ಷ'**ಕಾರಾತ್ಮಕ ಶಬ್ದಗಳೆಲ್ಲವೂ ಬಹುಪಾಲು ಸಂಸ್ಕೃತದ ಕೊಡುಗೆ. ಆ ಶಬ್ದಗಳಲ್ಲಿನ 'ಷ' ಕಾರವು ಮೂರ್ಧಸ್ಥಾನದಿಂದ ಹುಟ್ಟುತ್ತದೆ. 'ಶ' ತಾಲುವಿನಿಂದ ಹುಟ್ಟುತ್ತದೆ. ಹಾಗೆಯೇ ಆ ಶಬ್ದಗಳಲ್ಲಿ ಅರ್ಥವ್ಯತ್ಯಾಸವಿದೆ. ಹೀಗಿರುವುದರಿಂದ **ಶಂಕರ-ಷಂಕರ-ಸಂಕರನೆಂದೂ ಷಣ್ಮುಖ-ಶಣ್ಮುಖ** -ಸಣ್ಮುಖವೆಂದೂ ಉಚ್ಚಾರದಲ್ಲೂ ಬರಹದಲ್ಲೂ ಬಳಸಬಾರದು. ಇವುಗಳ ಅಭ್ಯಾಸಕ್ಕಾಗಿ ಪ್ರಾಸಬದ್ಧವಾದ ಕೆಲವು ವಾಕ್ಯಗಳನ್ನು ಬಳಸಿ ನಿರಾಯಾಸವಾಗಿ ಅಭ್ಯಾಸವನ್ನು ಮಾಡಿಸಬಹುದು. ಅದಕ್ಕಾಗಿ ಕೆಲವು ಪ್ರಾಯೋಗಿಕ ವಾಕ್ಯಾಂಶಗಳನ್ನು **ಕೊಟ್ಟಿದೆ :**

ಶತಕ, **ಶೋ**ಷಣೆ, **ಷ**ರಟು	**ಷ**ರಾಯಿ, **ಶ**ಯನ, **ಶಶಿ**,
ಷರಾ, **ಸ**ರ, **ಶಂ**ಕರ,	**ಶಶಿ**ಯ ಅಂಬರದ ಆಟ
ಶಾರದೆ, **ಶಾ**ವಿಗೆ, **ಶ**ಲ್ಯ,	**ಸಂ**ಗಣ್ಣನ **ಶ**ತಕಕ್ಕೆ **ಷ**ಣ್ಮುಖನ **ಸ**ರೋಜವಾದನ
ಸರದಿ (ಈ ರೀತಿಯ ಬಿಡಿ	**ಶಂ**ಕ ವಾದ್ಯದ **ಸಂ**ಕರ, **ಶ**ರ**ಷ**ಟ್ಪದಿಯ **ಸಾ**ರ.
ಶಬ್ದಗಳನ್ನೂ ಬಳಸಬಹುದು.)	**ಶಂ**ಭುವಿನ **ಶುಷ್ಕ** ವಿಚಾರ
ಋ**ಷಿ**ಯ **ಸ**ರ, ಸಂಪಿಗೆ ಮರ	**ಸೋ**ಮಾರಿಯ **ಶು**ನಕತನ
ಶಿಶುವಿನ **ಷ**ರಟು	**ಶಶಿ**ಧರನ **ಷೋ**ಕಿ **ಶೋ**ಷಣೆ.
ಶಾವಿಗೆ ಅಂಗಡಿ **ಸೋ**ಮಣ್ಣ	**ಷ**ರಾಪಿನ ಪಾ**ಷಾ**ಣ ಹೃದಯದ
ಸತ್ಯದ ಭಾ**ಷೆ** ಋ**ಷಿ**ಯಣ್ಣ	ಪೇದೆಯ **ಸೇ**ವೆ, ಆ**ಷಾ**ಢಭೂತಿಯ
ಉ**ಷೆ**ಯ ಭಾ**ಷ**ಣ	**ಶ**ಯನ **ಶಿಷ್ಟಾ**ಚಾರ ಸರದಿ,
ಶಕಾರನ **ಸಾ**ರೋಟ	ಕೊನೆಗೆ **ಶುಷ್ಕ ಶುಂ**ಠಿ ಬೆರೆಸಿದ ಕ್ಷೀರದ ಶಿಷ್ಟಾಚಾರ.

೪) ಅಲ್ಪಪ್ರಾಣ, ಮಹಾಪ್ರಾಣಾಕ್ಷರಗಳು ಕನ್ನಡದ ಶಬ್ದಗಳಲ್ಲಿಲ್ಲ. ಅವು ಬಹುಪಾಲು ಸಂಸ್ಕೃತ, ಪ್ರಾಕೃತ ಶಬ್ದಗಳಲ್ಲಿವೆ. ಅವುಗಳನ್ನು ಉಪಯೋಗಿಸುವಾಗ ಅಲ್ಪಪ್ರಾಣಕ್ಕೆ ಮಹಾಪ್ರಾಣ, ಮಹಾಪ್ರಾಣಕ್ಕೆ **ಅಲ್ಪಪ್ರಾಣ ಬಳಸಬಾರದು. ಬಳಸಿದರೆ ಅರ್ಥವ್ಯತ್ಯಾಸವಾಗುವುದು. ಉದಾ: ಧ**ನ-ಹಣ, **ದ**ನ-ಪಶು; **ಫ**ಲ-ಹಣ್ಣು, **ಪ**ಲ-ಮಾಂಸ; **ಭಾ**ವಿ-ಮುಂದೆಬರುವ, **ಬಾ**ವಿ-ನೀರಿನ ನೆಲೆ; ಶಾ**ಖ** - ಉಷ್ಣ, **ಶಾ**ಕ-ತರಕಾರಿ; **ಬಾ**ನು-ಆಕಾಶ, **ಭಾ**ನು-ಸೂರ್ಯ; **ಧ**ಣಿ-ಒಡೆಯ. **ದ**ಣಿ-**ಆ**ಯಾಸ ಅವುಗಳ ಅರ್ಥ ವ್ಯತ್ಯಾಸವನ್ನು ಗಮನಿಸಬೇಕು. ಮಕ್ಕಳ ಅಭ್ಯಾಸಕ್ಕಾಗಿ ಕೆಲವು ಪರಿಚಿತ ಪ್ರಾಸಬದ್ಧ ವಾಕ್ಯಗಳನ್ನು ಬಳಸಿಕೊಳ್ಳಬಹುದು : **ಬಾ**ನಂಗಳದಲ್ಲಿ ಚಂದ್ರ. ಧಾರಾವಾಹಿ

ಸೊಗಸಾಗಿದೆ. ಬಹುಮಾನ ಪ್ರದಾನ ಮಾಡಿದರು. **ಪ್ರಧಾನಿ**ಗಳ ಆಗಮನ ಇತ್ಯಾದಿ.

೫) ಸಂಸ್ಕೃತಶಬ್ದಗಳ ಉಚ್ಚಾರಣೆಯಲ್ಲಿ **ಹ**ಕಾರಕ್ಕೆ **ಣ, ನ, ಮ, ಯ, ಲ, ವ**ಗಳು ಪರವಾದಾಗ **'ಹ'**ಕಾರದ ಉಚ್ಚಾರಣೆ ಸಡಿಲವಾಗುತ್ತದೆ. ಅದನ್ನು ತೇಲಿಸಿ ಉಚ್ಚರಿಸುತ್ತೇವೆ. ಸ್ಫುಟವಾಗಿ ಉಚ್ಚರಿಸತಕ್ಕದ್ದಲ್ಲ. ಉದಾ: ಪೂರ್ವಾ**ಹ್ನ**, ಮಧ್ಯಾ**ಹ್ನ**, ಬ್ರ**ಹ್ಮ** ಪ್ರ**ಹ್ಲಾ**ದ ಸಂಸ್ಕೃತ ಶಬ್ದಗಳನ್ನು ಅರಿತು ಸಂಸ್ಕೃತ **ಜಾಯಮಾನ**ಕ್ಕನುಸಾರವಾಗಿ ಪ್ರಯೋಗಿಸುವುದು ಸೂಕ್ತ.

೬) **'ಐ'** ಕಾರದ ಶಬ್ದಗಳ ಮುಂದಿನ **'ಯ'** ಕಾರವು ಉಚ್ಚಾರದಲ್ಲಿ ದ್ವಿತ್ವದಂತೆ ಕೇಳಿಸುತ್ತದೆ. ದ್ವಿತ್ವ ಬಳಕೆಯಿರುವುದಿಲ್ಲ. ಉದಾ: **ಕೈಯ, ಮೈಯ, ಥೈಯ, ಸೈಯ.**

೭) ಸಂಸ್ಕೃತದ ಕೆಲವು **'ನ'** ಕಾರಾಂತಶಬ್ದಗಳು ತದ್ಭವಗಳಾಗಿ **'ನ'** ಕಾರಾತ್ಮಕವಾಗುತ್ತವೆ. ಇಂತಹ ಪ್ರಸಂಗಗಳಲ್ಲಿ ಸಂದೇಹ ಬರುವುದುಂಟು. ಉದಾ : ಸಂ-ಪಠ**ಣ**-ಪಠ**ನ**-(ಕ) **ಸ್ಮಶಾಣ-ಸ್ಮಶಾನ, ಕಠಿಣ-ಕಠಿನ, ಪತ್ತಣ-ಪತ್ತನ** ಇತ್ಯಾದಿ. **(ಲ** ಪಾರ್ಶ್ವಿಕಧ್ವನಿ, **ಣ, ನ** ಅನುನಾಸಿಕಧ್ವನಿ.

೮) ಕೆಲವು ಕನ್ನಡದಶಬ್ದಗಳ **ನ**-ಣ; **ಲ**-ಳ; ಇವುಗಳ ಉಚ್ಚಾರದ ವ್ಯತ್ಯಾಸ ಮಾಡಿ ಅನೇಕ ಮಕ್ಕಳು ತಪ್ಪುವುದುಂಟು. ಉದಾ : **ಕೆನೆ-ಕೆಣೆ, ಮನೆ-ಮಣೆ,** ಮಣ-ಮನ, **ಎಲೆ-ಎಳೆ, ಬಲೆ-ಬಳೆ, ನಾಲೆ-ನಾಳೆ, ಇಲಿ-ಇಳಿ** ಇತ್ಯಾದಿ.

ಸಾಮಾನ್ಯವಾಗಿ ತಪ್ಪಾಗುವ, ಸಂದೇಹ ಬರುವ ಅಕ್ಷರಗಳ ಶಬ್ದಗಳನ್ನು ಪಟ್ಟಿಮಾಡಿ ಸ್ಪಷ್ಟವಾಗಿ ಬಿಡಿಸಿ ದಪ್ಪಕ್ಷರಗಳಲ್ಲಿ **'ಅ'** ಕಾರಾದಿಯಾಗಿ ಬರೆದು **ಮಕ್ಕಳ ಮುಂದೆ** ಕಾಣುವಂತೆ ಇರಿಸಿ, ಅವರ ಉಚ್ಚಾರಣೆಯನ್ನು ಗಮನಿಸುತ್ತ, ಸರಿಪಡಿಸಿಕೊಳ್ಳಬೇಕಾಗುತ್ತದೆ. ಈ ಮೇಲಿನ ಕೆಲವುವಿವರಣೆಗಳಿಂದ ಸ್ವರ, ವ್ಯಂಜನಗಳ ಉಚ್ಚಾರ ಹೇಗೆ ಮಾಡಬೇಕೆಂಬುದನ್ನು ಹೇಳಲಾಗಿದೆ. ಇದು ಬಾಲಬೋಧೆ. ಈ ಹಂತದಲ್ಲೇ ಕಲಿಕೆ ಸ್ಥಿರ. ಶಿಕ್ಷಣ ಬಾಲ್ಯದಲ್ಲಿಯೇ ಸರಿಯಾಗಿ ಆಗದವರು ಉಚ್ಚಾರದಲ್ಲಿ ಎಡವುತ್ತಾರೆ. ಉದಾ : **'ವಿಜ್ಞಾನ'** ಇಲ್ಲಿ **'ಜ್'**+**'ಞ್'** ಸೇರಿದ ಸಂಯುಕ್ತಾಕ್ಷರ. ನಾಲಗೆಯು ತಾಲುವಿನಲ್ಲಿ (ಗಂಟಲು, ಮೂಗನ್ನು ಬೇರ್ಪಡಿಸುವ ಸ್ಥಳ) ಇಲ್ಲಿ ಉಚ್ಚಾರಕ್ಕೆ ಬರುತ್ತದೆ. ವಿವರಣೆ ಎಷ್ಟು ಹೇಳಿದರೂ ತಪ್ಪುವುದುಂಟು. ಸರಿಯಾಗಿ ಉಚ್ಚರಿಸುವವರ ಬಳಿಕುಳಿತು ಕಲಿಯಬೇಕು. ಕಲಿಸುವವರು ಆಧುನಿಕವಾಗಿ ಜಾಣ್ಮೆಯನ್ನು ಅನುಸರಿಸಬೇಕಾಗುತ್ತದೆ.

ಒತ್ತಕ್ಷರಗಳು (ಒತ್ತು ಲಿಪಿಗಳು)

ಮಕ್ಕಳಿಗೆ ಕಲಿಕೆ ಸುಗಮವಾಗಲು ಚಿನ್ಹೆಗಳ ಅರಿವು ಬೇಕು. ಇವುಗಳ ಅರಿವಿಲ್ಲದೆ ಓದುವುದು, ಚೆನ್ನಾಗಿ ಓದಿದರು, ಬರವಣಿಗೆಯಲ್ಲಿ ಅಸಮರ್ಥತೆ, ಸ್ಫುಟಾಕ್ಷರಗಳಿದ್ದರೂ ಓದುವ ಹವ್ಯಾಸವಿಲ್ಲದೆ, ಅಕ್ಷರಗಳ ಉಚ್ಚಾರವನ್ನು ನುಂಗುವುದು ಇತ್ಯಾದಿ ದೋಷಗಳಾಗುತ್ತವೆ. ಅದಕ್ಕಾಗಿ **ಅವುಗಳ ಕಡೆ ಹೆಚ್ಚುಗಮನ ಹರಿಸಬೇಕಾಗುತ್ತದೆ.**

ವ್ಯಂಜನಗಳಿಗೆ ಒತ್ತುಗಳ ಲಿಪಿಗಳಿವೆ. ಸಾಮಾನ್ಯವಾಗಿ ಒತ್ತುಗಳು ಬರವಣಿಗೆಯಲ್ಲಿ

ಪೂರ್ಣಾಕ್ಷರದಂತಿರುತ್ತವೆ. ವಿಶೇಷವಾದ ಕೆಲವು ತ್ತ, ನ್ನ, ಮ್ಮ ಯ್ಯ, ರ್ರ, ಲ್ಲ ಬೇರೆ ಆಕೃತಿಯೆನಿಸಿದರೂ ವಿಚಾರ ಮಾಡಿದರೆ ಆ ಅಕ್ಷರಗಳಭಾಗವೇ ಆಗಿ ನಿಯತವಾದ ಆಕಾರವನ್ನು ಪಡೆದಿವೆಯೆಂಬುದು ತಿಳಿಯುತ್ತದೆ:

ಕ್ಕ ಖ್ಖ ಗ್ಗ ಘ್ಘ ಙ್ಙ

ಚ್ಚ ಛ್ಛ ಜ್ಜ ಝ್ಝ ಞ್ಞ

ಟ್ಟ ಠ್ಠ ಡ್ಡ ಢ್ಢ ಣ್ಣ

ತ್ತ ಥ್ಥ ದ್ದ ಧ್ಧ ನ್ನ

ಪ್ಪ ಫ್ಫ ಬ್ಬ ಭ್ಭ ಮ್ಮ

ಯ್ಯ ರ್ರ ಲ್ಲ ವ್ವ ಶ್ಶ ಷ್ಷ ಸ್ಸ

ಹ್ಹ ಳ್ಳ

ಸ್ಥಾನವಿಶೇಷ ವಿಚಾರ :

ರಕಾರದ ಒತ್ತುಗಳು : ರಕಾರದ ಒತ್ತುಗಳೆಂದು (೯) (ೃ) ಈ ಸಂಕೇತಗಳೆರಡೂ ಬಳಕೆಯಲ್ಲಿವೆ. ಇದೇರೀತಿಯಲ್ಲಿ ಸಂಸ್ಕೃತ, ಹಿಂದೀಭಾಷೆಗಳಲ್ಲೂ ಎರಡೂ ಸಂಕೇತಗಳಿರುತ್ತವೆ. **'ರ'**ಕಾರವನ್ನು ಒತ್ತಿ ಉಚ್ಚರಿಸಿದಾಗ ಸರೇಫ (ಅರ್ಕಾ ಒತ್ತು - ೯) ಆದೇಶವಾಗುತ್ತದೆಂದು ಹೇಳುತ್ತಾರೆ.

ಇದನ್ನೇ **'ಅರ್'**-ಕಾರದ ಒತ್ತುಯೆನ್ನಲಾಗುತ್ತಿದೆ. ಅರ್ಧಚಂದ್ರಾಕಾರದ (ೃ) ರಒತ್ತು ಉಂಟು. ಅದು ಚಕ್ರ, ವಕ್ರ, ಅಗ್ರ, ಸುಗ್ರೀವ ಇಂಥ ಪ್ರಯೋಗಗಳಲ್ಲಿ ಬಳಕೆಯಾಗಿದೆ. ಇವುಗಳನ್ನು ಬಿಡಿಸಿದಾಗ ಕ್+ರ್+ಅ=**ಕ್ರ** ಇಲ್ಲಿ ರಒತ್ತು ಎರಡನೆಯ ವರ್ಣವಾಗಿ ಬಂದಿದೆ. ವರ್ಗ, ಕಾರ್ಯ, ಮಾರ್ಗ, ಇಲ್ಲಿ ರ್+ಗ್+ಅ; ಈ **'೯'** ಒತ್ತು ಅಕ್ಷರದಲ್ಲಿ **ಮೊದಲನೆಯ ವ್ಯಂಜನವಾಗಿ** ಬಂದಿದೆ. ಬಿಡಿಸಿದ ಬರವಣಿಗೆಯಲ್ಲಿ ಹಾಗೂ ಉಚ್ಚಾರದಲ್ಲಿ ಮೊದಲ ಧ್ವನಿಯ ವರ್ಣವೆನಿಸಿದೆ. ಆದರೆ ಬರವಣಿಗೆಯ ರೂಪದಲ್ಲಿ ಮಾತ್ರ ಅಂತ್ಯದಲ್ಲಿ ಒತ್ತು ಕಾಣಿಸುತ್ತಿದೆ. ಹೀಗಾಗಲು ಸಂಸ್ಕೃತದ ಕಾಗುಣಿತದ ಅನುಕರಣೆ ಕಾರಣವಿರಬಹುದು. ಉದಾ : ಬ್ರಹ್ಮ+ಋಷಿ=**ಬ್ರಹ್ಮರ್ಷಿ** 'ಅರ್' ಕಾರದ ಸಂಧ್ಯಕ್ಷರ ಸಂಕೇತವಾಗಿ ಅರ್ಕಾ ಒತ್ತು (೯) ಬಂದಿದೆ. ಇದನ್ನು **ಬ್ರಹ್ಮರ್ಷಿ** ಎಂದು ಬರೆಯುವ ಹಳೆಯ ರೂಢಿಯಿದೆ.

ಹೀಗಾಗಿ ಕನ್ನಡದಲ್ಲಿ ಅರ್ಕಾಒತ್ತನ್ನು ಕಾಗುಣಿತದ ನಡುವೆ ಸೇರಿಸುವ ರೂಢಿಯಿದೆ. ಉದಾ: ನಿರ್ದೇಶಕ, ಸೂರ್ಯೋದಯ. ಇಮ ಏತ್ವ, ಓತ್ವ ದೀರ್ಘಗಳು ಬರುವ

ಕಡೆಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಇದೂ ಸಹ ಸಂಸ್ಕೃತದ ಜಾಯಮಾನ. '**ಎರಡು ವ್ಯಂಜನಗಳನ್ನು ಇನ್ನೊಂದು ಸ್ವರಕ್ಕೆ ಅವಕಾಶವಿರದಂತೆ ಸೇರಿಸಬೇಕೆಂದು**' ಸಂಸ್ಕೃತ ವ್ಯಾಕರಣದ ನಿಯಮವಿದೆ. ಅದಕ್ಕಾಗಿ **ರ್ದೇ** (ರ್+ದ್+ಏ) ಎಂದೇ ಬರೆಯಲಾಗುತ್ತಿದೆ. ಆದರೆ ಈ ರೂಪಗಳನ್ನು ಕನ್ನಡಜಾಯಮಾನದಂತೆ ನಿ**ರ್ದೇ**ಶಕ, ಸೂ**ರ್ಯೋ**ದಯ ಹೀಗೂ ಬಳಸುತ್ತಾರೆ. (ನಿರ್ದೇಶಕ, ದುರ್ಯೋಧನ ಎಂದೂ ಬರೆಯುತ್ತಿದ್ದರು.) ಇಂತಹ ಪ್ರಸಂಗಗಳಲ್ಲಿ ಹೆಚ್ಚುರೂಢಿ ಪ್ರಯೋಗಕ್ಕೆ ಮಾನ್ಯಮಾಡಿ ಒಪ್ಪಿಕೊಳ್ಳಬೇಕಾಗುತ್ತದೆ.

'ಋ'ಕಾರ, 'ರ'ಕಾರಗಳು ಒಂದೇ ಸ್ಥಾನದಲ್ಲಿ ಹುಟ್ಟುತ್ತವೆ. ಆದರೂ ಮೂರ್ಧನ್ಯ ಅಗ್ರ, ಮಧ್ಯ, ಪಶ್ಚಸ್ಥಾನಿಕಗಳೆಂದು, ಕೆಲವರ ಉಚ್ಚಾರಣೆಯಲ್ಲಿ ಭೇದ ಸ್ಪಷ್ಟವಾಗಿ ತೋರುವುದಿಲ್ಲ. ಹೀಗಾಗಿ **'ಕೃಷ್ಣ'** ಎಂಬುದನ್ನು **'ಕ್ರುಷ್ಣ'** ಎಂದು ಬರೆಯಬಾರದು, ಉಚ್ಚರಿಸಲೂಬಾರದು. ಹೀಗೆಯೇ ಕೃಷ್ಣ, ಗೃಹ, ಮಾತೃ ಇಲ್ಲಿ **'ಕೃ', 'ಗೃ', 'ತೃ'** ಇವುಗಳನ್ನು ತೇಲಿಸಿ ಉಚ್ಚರಿಸುವುದು ರೂಢಿ. ಇನ್ನು **ಕೈಷ್ಣ** ಎಂದು ಬರೆವರೂಪ ಸರಿಯೆನಿಸದು.

ಗುಣಿತಾಕ್ಷರಗಳು

ಸಹಜವ್ಯಂಜನಗಳಿಗೆ ಸ್ವರದ (ಸಂಕೇತ) ಚಿಹ್ನೆಗಳನ್ನು ಸೇರಿಸಿದಾಗ **'ಗುಣಿತಾಕ್ಷರ'**ಗಳೆನಿಸುತ್ತವೆ. ಹೀಗೆ **'ಕ್'** ವ್ಯಂಜನವೊಂದಕ್ಕೆ ಎಷ್ಟು ಸ್ವರಗಳಿವೆಯೋ ಅವುಗಳ ಚಿಹ್ನೆಗಳನ್ನು ಸೇರಿಸಿ ಹೇಳುವುದರಿಂದ ರೂಢಿಯಲ್ಲಿ **'ಕಾಗುಣಿತ'**ವೆಂಬ ಹೆಸರು ಬಂದಿದೆ. ಅವುಗಳು ಹೀಗಿವೆ :

ಕ್ + ಅ	--	್	= ಕ		ಕ್ + ಏ	--	ೇ	=	ಕೇ
ಕ್ + ಆ	--	ಾ	= ಕಾ		ಕ್ + ಐ	--	ೈ	=	ಕೈ
ಕ್ + ಇ	--	ಿ	= ಕಿ		ಕ್ + ಒ	--	ೊ	=	ಕೊ
ಕ್ + ಈ	--	ೀ	= ಕೀ[೧]		ಕ್ + ಓ	--	ೋ	=	ಕೋ
ಕ್ + ಉ	--	ು	= ಕು		ಕ್ + ಔ	--	ೌ	=	ಕೌ
ಕ್ + ಊ	--	ೂ	= ಕೂ		ಕ್ + ಂ	--	ಂ	=	ಕಂ[೨]
ಕ್ + ಋ	--	ೃ	= ಕೃ		ಕ್ + ಃ	--	ಃ	=	ಕಃ
ಕ್ + ಎ	--		= ಕೆ						

ಕಕ್ಕೆ ಐತ್ವ **'ಕೈ'** ಎಂದು ಹೇಳಿ, **'ಕೆ' ಗೆ ಐತ್ವ ಬರೆಯುವುದೇಕೆ ?** 'ಕೈ' ಇಲ್ಲಿ ಬಿಡಿಸಿ ಕಾಗುಣಿತ ಹೇಳುವಾಗ 'ಕ'ಕ್ಕೆ ಐತ್ವ **'ಕೈ'** ಎಂದೇ ಹೇಳುತ್ತಾರೆ. **'ಐತ್ವ'** ವು ಸಂಧ್ಯಕ್ಷರ **'ಎ'**ಕಾರದಿಂದ ಕೂಡಿದೆ (ಪ್ರಶ್ಲಿಷ್ಟ) ಎಂಬುದನ್ನು ಬರವಣಿಗೆಯಲ್ಲಿ ಮರೆಯಬಾರದು.

---

೧) ಕಾಗುಣಿತಗಳಲ್ಲಿ ಒಂದೊಂದು ದೀರ್ಘದ ಚಿಹ್ನೆಯ ಬೇರೆ ಬೇರೆಯಾಗಿವೆ. 'ಮೀನು-ಮೀನು, ಮೀಸಲು-ಮೀಸಲು, 'ಮಿೊ' ಇವೆರಡರಲ್ಲಿ ಗುಡಿಸಿನ ದೀರ್ಘ ಚಿಹ್ನೆಯ 'ಮೀ' ಸರಿಯಾದ ರೂಪ; ಮುಂದಿನದು ತಪ್ಪು ಎನ್ನಬಹುದು.

೨) ಅನುಸ್ವಾರ, ವಿಸರ್ಗಗಳು ಸ್ವರದ ಗುಂಪಿಗೆ ಸೇರಲು ಅರ್ಹವಾದವು. ಕ್ + ಅ + ಂ. ಕೇಶಿರಾಜನು ಇವುಗಳನ್ನು ಸ್ವರಾಂಗ, ವ್ಯಂಜನಾಂಗವೆಂದಿದ್ದಾರೆ.

ಕೈವೊಲ ಉಚ್ಚಾರ ಹ.ಗ. ದಲ್ಲಿ ಐಕಾರಾತ್ಮಕವಾಗಿಯೇ ಉಂಟು.

ಮೈ - **ಮ್ಯ**, ಥೈ - **ಥ್ಯ**, ಜೈ - **ಜ್ಯ** ಎಂದು ಬರೆಯಲಾಗದು.

ಋ ಕಾಗುಣಿತಗಳಲ್ಲಿ ಐ, ಔ, ಇವುಗಳ ಕಾಗುಣಿತ ಮಕ್ಕಳ ಉಚ್ಚಾರದಲ್ಲಿ ಉಚ್ಚರಿಸುವ , ಬರೆಯುವ ಬಂಧದ ಚೆಲುವು ಎದ್ದು ಕಾಣುತ್ತದೆ. **ಐತ್ವ, ಔತ್ವ** ಉಚ್ಚಾರ, ಬರಹ ಅಭ್ಯಾಸ ಆಗಬೇಕು. ಅಂತಹ ಸಮಯದಲ್ಲಿ **ಋಷಿ, ಋಣ, ಚೈತ್ರ, ಶ್ವೇತ, ವೈರಿ, ಮೈದಾನ, ಖೈದಿ, ಐಕ್ಯ, ಗೌಳಿ, ನೌಕೆ, ಶೌರ್ಯ, ತೌರು, ಮೌನ** ಇತ್ಯಾದಿ ಶಬ್ದಗಳನ್ನು ಮಕ್ಕಳಿಗೆ ಉಚ್ಚರಿಸುವಂತೆ ಮಾರ್ಗದರ್ಶನ ಮಾಡಬೇಕಾಗುತ್ತದೆ. ಹಾಗೆಯೇ ಬರಹದಲ್ಲಿ ತಪ್ಪಾಗದಂತೆ ಎಚ್ಚರ ವಹಿಸಬೇಕಾಗುತ್ತದೆ.

ಒತ್ತಕ್ಷರ/ ದ್ವಿತ್ವಾಕ್ಷರ / ಸಂಯುಕ್ತಾಕ್ಷರ : ವ್ಯಂಜನಕ್ಕೆ ಇನ್ನೊಂದು ವ್ಯಂಜನ ಸೇರಿದಾಗ ಸಂಯುಕ್ತ ವ್ಯಂಜನಾಕ್ಷರವಾಗುತ್ತದೆ. ಸಾಮಾನ್ಯವಾಗಿ ಗರಿಷ್ಠ ನಾಲ್ಕುವ್ಯಂಜನಗಳು ಸೇರುವುದನ್ನು ಗಮನಿಸಿದ್ದೇವೆ. ಈ ಅಕ್ಷರಗಳನ್ನು ಒತ್ತಿ ಉಚ್ಚರಿಸುವುದರಿಂದ **'ಒತ್ತಕ್ಷರ'** ವೆಂತಲೂ ಕರೆಯುವುದುಂಟು. ಕನಿಷ್ಠ 'ಎರಡು' ವ್ಯಂಜನಗಳು ಸೇರುವುದರಿಂದ **'ದ್ವಿತ್ವಾಕ್ಷರ'** ವೆನ್ನಲಾ ಗುತ್ತದೆ. ಉದಾ: **ಅಮ್ಮ** - (ಮ್+ಮ್+ಅ) **ಚಕ್ರ** - (ಕ್+ರ್+ಅ). ಹೀಗೆ ವ್ಯಂಜನ ಸೇರುವುದರಿಂದ ಸಂಯುಕ್ತಾಕ್ಷರವು **ಸಜಾತಿಸಂಯುಕ್ತಾಕ್ಷರ, ವಿಜಾತಿ ಸಂಯುಕ್ತಾಕ್ಷರ** ವೆಂದು **ಎರಡು** ಬಗೆಯಾಗಿದೆ.

೧) **ಸಜಾತಿ ಸಂಯುಕ್ತಾಕ್ಷರ:** ಚಿ(**ಕ್ಕ**) - ಕ್ + ಕ್ + ಅ = **ಕ್ಕ.**

ಬಿ(**ಟ್ಟ**) - ಟ್ + ಟ್ + ಅ = **ಟ್ಟ.**

ಅ(**ಪ್ಪ**) - ಪ್ + ಪ್ + ಅ = **ಪ್ಪ.**

(ಒಂದೇಜಾತಿಯ ಎರಡು ವ್ಯಂಜನಗಳು ಸೇರಿವೆ. ಆದ್ದರಿಂದ ಇವು **'ಸಜಾತಿಯ ಸಂಯುಕ್ತಾಕ್ಷರ'** ವೆನಿಸಿವೆ).

೨) ವಿಜಾತಿ ಸಂಯುಕ್ತಾಕ್ಷರ :

ವ(**ಸ್ತ್ರ**) - ಸ್ + ತ್ + ರ್ + ಅ = **ಸ್ತ್ರ**

ಶ(**ಕ್ತಿ**) - ಶ್ + ಕ್ + ತ್ + ಇ = **ಕ್ತಿ**

ಮೂ(**ರ್ಖ**) - ರ್ + ಖ್ + ಅ = **ರ್ಖ**

ಇಲ್ಲಿ ವಿಜಾತಿಯ ಹಲವು ವ್ಯಂಜನಗಳು ಸೇರಿವೆ. ಇದನ್ನು **'ವಿಜಾತಿ ಸಂಯುಕ್ತಾಕ್ಷರ'** ಎನ್ನಲಾಗುತ್ತದೆ.

ವರ್ಣೋತ್ಪತ್ತಿ ಸ್ಥಾನಗಳು

ಶಿಕ್ಷಣದಲ್ಲಿ 'ಶಿಕ್ಷಾ'ಶಾಸ್ತ್ರವೆಂಬುದಿದೆ. ಧ್ವನಿಶಾಸ್ತ್ರವೆನಿಸಿದ್ದು ವಿಪುಲ ಆವಿಷ್ಕಾರಗಳಾಗಿವೆ. ಇದು ವರ್ಣಗಳ ಉತ್ಪತ್ತಿ, ಸ್ಥಾನ ಹಾಗೂ ಉಚ್ಚಾರಕ್ರಮಗಳನ್ನು ತಿಳಿಸುತ್ತದೆ. ಇದು ಬಾಲಶಿಕ್ಷಣ. ಬಾಲ್ಯದಲ್ಲಿ ಈ ವಿಧವಾದ ಶಿಕ್ಷಣ ಅತ್ಯವಶ್ಯಕವಾಗಿದೆ. ಈ ಶಿಕ್ಷಣ

ದೊರಕದವರು **'ಸಂಸ್ಕೃತಿ'** ಎಂಬುದನ್ನು **'ಸಂಸೃತಿ'**, **'ಸಕೃತಿ'** ಎಂದೋ ಉಚ್ಚರಿಸುತ್ತಾರೆ. ಆದ್ದರಿಂದ ಕಿರಿಯರು, ಅರಿತ ಹಿರಿಯರಿಂದಲೋ ಅಧ್ಯಾಪಕರಿಂದಲೋ ತಿಳಿದು ತಿದ್ದಿಕೊಂಡು ಉಚ್ಚಾರಕಲಿತಾಗ ಕಲಿಕೆಗೆ ಒಳ್ಳೆಯ **ಬುನಾದಿಹಾಕಿದಂತಾಗುತ್ತದೆ.** ಈ ದೃಷ್ಟಿಯಿಂದ ವರ್ಣೋತ್ಪತ್ತಿ ವಿಚಾರ ತಿಳಿಯಬೇಕಾಗಿದೆ.

ಈ ವರ್ಣೋತ್ಪತ್ತಿ ಸ್ಥಾನಗಳನ್ನು ತಿಳಿದವರು ವರ್ಣಗಳ ಉಚ್ಚಾರವನ್ನು ಸ್ಪಷ್ಟವಾಗಿ ಸ್ಖಾಲಿತ್ಯವಿಲ್ಲದೆ ಪ್ರಯೋಗಿಸುತ್ತಾರೆ. ಸಾಮಾನ್ಯ ಶಬ್ದವು ನಾಭಿಮೂಲದಿಂದ ಜನಿಸುವುದೆಂದು ತಿಳಿಯಲಾಗಿದೆ. ಆದರೂ ಸೂಕ್ಷ್ಮವಾಗಿ ಗಮನಿಸಿದರೆ ವರ್ಣಗಳು ವಿಶೇಷ ಸ್ಥಾನ, ಕರ್ಣ, ಒತ್ತಡಗಳ ಸಹಾಯದಿಂದ ಹುಟ್ಟುವುದನ್ನು ಗುರುತಿಸಿ ನಿರ್ಧರಿಸಲಾಗಿದೆ. ಅವುಗಳ ಸ್ಥೂಲ ಪರಿಚಯ ಕೆಳಕಂಡಂತಿವೆ :

ಕಂಠ (ಕೊರಳ ಸಹಾಯದಿಂದ)	- ಅ, ಆ, ಕ, ಖ, ಗ, ಘ, ಹ, ವಿಸರ್ಗ (ಃ)- **ಕಂಠ್ಯ**
ತಾಲು (ನಾಲಗೆ ಸಹಾಯದಿಂದ)	- ಇ, ಈ, ಚ, ಛ, ಜ, ಝ, ಯ, ಶ - **ತಾಲವ್ಯ**
ಮೂರ್ಧ (ನಾಲಗೆ ಮೇಲ್ಭಾಗ)	- ಋ, ಟ, ಠ, ಡ, ಢ, ರ, ಷ - **ಮೂರ್ಧನ್ಯ**
ದಂತ (ಹಲ್ಲಿನ ಸಹಾಯದಿಂದ)	- ತ, ಥ, ದ, ಧ, ಲ, ಸ - **ದಂತ್ಯ**
ಓಷ್ಠ (ತುಟಿ ಸಹಾಯದಿಂದ)	- ಉ, ಊ, ಪ, ಫ, ಬ, ಭ - **ಓಷ್ಠ್ಯ**
ನಾಸಿಕ (ಮೂಗಿನ --"--)	- ಙ, ಞ, ನ, ಮ, ಣ. ಅನುಸ್ವಾರ (ಂ)-**ಅನುನಾಸಿಕ**
ಕಂಠ ಮತ್ತು ತಾಲುಗಳಿಂದ	- ಎ, ಏ, ಐ.
ಕಂಠ ಮತ್ತು ಓಷ್ಠಗಳಿಂದ	- ಒ, ಓ, ಔ.
ದಂತ ಮತ್ತು ಓಷ್ಠಗಳಿಂದ	- ವ.

ಸಾರಸಂಗ್ರಹ

ಕನ್ನಡ ವರ್ಣಮಾಲೆ - ೪೯

೧) ಸ್ವರಗಳು **(೧೩).**
ಅ-ಔಕಾರದವರೆಗಿನ ಅಕ್ಷರಗಳು.
ಅ,ಆ,ಇ,ಈ,ಉ,ಊ (ಸವರ್ಣಸ್ವರಗಳು)
ಹ್ರಸ್ವಸ್ವರ -ಅ,ಇ,ಉ,ಋ,ಎ,ಒ (೬)
ದೀರ್ಘಸ್ವರ -ಆ,ಈ,ಊ,ಏ,ಐ,ಓ,ಔ (೭)

ಯೋಗವಾಹಗಳು**(೨)**(ಂ) ಅನುಸ್ವಾರ
(ಃ) ವಿಸರ್ಗ

೨) ವ್ಯಂಜನ**(೩೪)**

ವರ್ಗೀಯ ವ್ಯಂಜನ.
(**ಕ**ಕಾರದಿಂದ **ಮ**ಕಾರದವರೆಗೆ).

೩)ಅವರ್ಗೀಯ ವ್ಯಂಜನ.
(**ಯ**ಕಾರದಿಂದ **ಳ**ಕಾರದವರೆಗೆ).

ಅಲ್ಪಪ್ರಾಣ(೧೦)	ಮಹಾಪ್ರಾಣ (೧೦)	ಅನುನಾಸಿಕ (೫)
ಕ,ಗ,ಚ,ಜ,ಟ,ಡ- -ತ,ದ,ಪ,ಬ.	ಖ,ಘ,ಛ,ಝ,ಠ,ಢ- -ಥ,ಧ,ಫ,ಭ.	(ಙ, ಞ, ಣ, ನ, ಮ)

ಸಂಧಿ ಪ್ರಕರಣ

(ವರ್ಣಗಳ ಸೇರುವಿಕೆ)

ನಾವು ಮಾತನಾಡುವಾಗ ಅಭಿಪ್ರಾಯಗಳನ್ನು ವಾಕ್ಯಗಳಲ್ಲಿ ತಿಳಿಸುತ್ತೇವೆ. ಹ
ಮಾತನಾಡುವಾಗ ಪದಗಳನ್ನು ಬಿಡಿಸಿ ಹೇಳುವುದಿಲ್ಲ. ಕೂಡಿಸಿ ಹೇಳುವುದೇ ರೂಢಿಯಾಗಿ
ಹೀಗೆ ಪ್ರಯೋಗಿಸುವುದರಲ್ಲಿ, ಶ್ರಮ, ಕಾಲ ಮತ್ತು ಸ್ಥಳ ಉಳಿತಾಯವಾಗುತ್ತದೆ.
ಉದಾ: '**ಮನೆಯಲ್ಲಿ ಮನೆಯೊಡೆಯ**ನಿದ್ದಾನೆ'.

೧) ಈ ವಾಕ್ಯದಲ್ಲಿ ಮನೆಯಲ್ಲಿ = ಮನೆ+ಅಲ್ಲಿ ಎಂದು ಪದವನ್ನು ಬಿಡಿಸಿದಾಗ (ಎ+
ಎರಡುಸ್ವರಗಳು ಕಾಣುತ್ತವೆ. ಕೂಡಿಸಿದಾಗ ಆ ಎರಡು ವರ್ಣಗಳು ಸೇರಿವೆ.
ಹೊಸದೊಂದು ಅಕ್ಷರ (**ಯ್**) ಬಂದಿರುವುದನ್ನೂ ಕಾಣುತ್ತೇವೆ.

೨) ಹೀಗೇ '**ಮನೆಯೊಡೆಯ**' ಎಂಬುದನ್ನು ಬಿಡಿಸಿದಾಗ ಮನೆ**ಯ**+**ಒ**ಡೆಯ ಪದ
ನಡುವೆ ಇರುವ ಎರಡು (**ಅ+ಒ**) ಸ್ವರಗಳಲ್ಲಿ ಸೇರ್ಪಡೆಯಾಗಿವೆ. ಒಂದು ಸ್ವರಕಾ
ಹೋಗಿದೆ. ಹೀಗೆ ***ಎರಡು ಅಕ್ಷರಗಳು ಸ್ಥಳ, ಕಾಲ ವಿಳಂಬವಾಗದಂತೆ ಪರ***
ಅರ್ಥಕ್ಕನುಸಾರವಾಗಿ ಸೇರುವುದಕ್ಕೆ 'ಸಂಧಿ'ಯೆನ್ನಲಾಗುತ್ತದೆ(೧).

ಸಂಧಿಗಳಲ್ಲಿ ಸ್ವರಸಂಧಿ, ವ್ಯಂಜನಸಂಧಿಯೆಂದು ಎರಡು ವಿಧ.

ಸ್ವರಸಂಧಿ : ಸ್ವರದ ಮುಂದೆ ಸ್ವರಬಂದು ಆಗುವ ಸಂಧಿಯನ್ನು '**ಸ್ವರಸಂಧಿ**' ಯೆನ್ನಲಾಗು
ಉದಾ : ಲೋಪ, ಆಗಮ ಸಂಧಿಗಳು. ಉದಾ: ಮಗು + ಅನ್ನು=ಮಗುವನ್ನು **ಉ**
ವ್ಯಂಜನಸಂಧಿ : ಸ್ವರದ ಮುಂದೆ ವ್ಯಂಜನ, ವ್ಯಂಜನದ ಮುಂದೆ ವ್ಯಂಜನವೇ
ಆಗುವ ಸಂಧಿಯನ್ನು '**ವ್ಯಂಜನಸಂಧಿ**' ಯೆನ್ನಲಾಗುತ್ತದೆ.

ಉದಾ: (ಆದೇಶಸಂಧಿ) ಸ್ವ+ವ್ಯ ವ್ಯ+ವ್ಯ
ಮರ**ದ**+**ಮ**ಣೆ = ಮರವಣೆ. ಕ**ರ್**+**ಪೊ**ಗೆ = ಕಮೊ

೧) ಕನ್ನಡಸಂಧಿ : ಕನ್ನಡದ ಎರಡುಶಬ್ದಗಳ ವರ್ಣಗಳು ಸೇರಿ ಆಗುವ ಸಂಧಿಯ
'**ಕನ್ನಡಸಂಧಿ**' ಯೆನ್ನಲಾಗುತ್ತದೆ. ಪ್ರಕೃತಿ, ಪ್ರತ್ಯಯಗಳ-ವರ್ಣಗಳು ಸೇರುವ
ಯಾವುದಾದರೊಂದು ವರ್ಣ ಕನ್ನಡವಾದರೂ ಅದು ಕನ್ನಡಸಂಧಿ: ೧) **ಲೋಪಸ**
೨) ಆಗಮಸಂಧಿ ೩) ಆದೇಶಸಂಧಿ.

೨) ಸಂಸ್ಕೃತ ಸಂಧಿ : ಎರಡೂ ಶಬ್ದಗಳು ಸಂಸ್ಕೃತ ಶಬ್ದಗಳಾಗಿದ್ದು, ಆ ವರ್ಣ
ಸೇರಿದರೆ '**ಸಂಸ್ಕೃತಸಂಧಿ**'ಯೆನ್ನಲಾಗುತ್ತದೆ. ಉದಾ: ಗುಣ, ವೃದ್ಧಿಸಂಧಿ ಇತ್ಯಾದಿ.

---

೧. ಆಧುನಿಕ ಪರಿಭಾಷೆಯಲ್ಲಿ ವರ್ಣವಿಕಾರವನ್ನು ಸಂಧಿಯೆನ್ನುತ್ತಾರೆ. ಇದು ಸ್ವರ
ಕೂಡುವಿಕೆಯಲ್ಲಾಗುವ ಕಾರ್ಯವೆನ್ನಬಹುದು. ವರ್ಣಗಳ ಕೂಡುವಿಕೆ ಆಂತರಿಕವೆನಿಸಿದರೆ ವಿ
ಬಾಹ್ಯರೂಪಯೆನ್ನಬಹುದು.

ಸಂಧಿನಿತ್ಯ : ಪ್ರಕೃತಿಗೆಪ್ರತ್ಯಯ ಸೇರುವಾಗ, ಪದಕ್ಕೆಪದ ಸೇರುವಾಗ 'ಸಂಧಿ' ನಿತ್ಯ
ಆಗುವುದುಂಟು.

೧) ಕನ್ನಡ ಸಂಧಿಗಳು : ಕನ್ನಡ ಶಬ್ದಗಳ ಎರಡು ಅಕ್ಷರಗಳು ಸೇರಿದಾಗ ಆಗುವ ಅಕ್ಷರಗಳ ಬದಲಾವಣೆಯನ್ನು '**ಸಂಧಿಕಾರ್ಯ**'ವೆನ್ನಲಾಗುತ್ತದೆ. ಈ ಬದಲಾವಣೆ **ಮೂರು ಬಗೆಯಾಗಿರುತ್ತದೆ**. ಲೋಪ(ಸಂಧಿ), ಆಗಮ(ಸಂಧಿ), ಆದೇಶ (ಸಂಧಿ) ಗಳಾಗುತ್ತವೆ.

ಸ್ವರಸಂಧಿಗಳು :

ಅ) ಲೋಪಸಂಧಿ : ಎರಡು ಸ್ವರಗಳು ಸೇರುವಾಗ ***ರೂಢಿಯ ಅರ್ಥ ಕೆಡದಿದ್ದ ಪಕ್ಷದಲ್ಲಿ ಪೂರ್ವಪದಾಂತ್ಯ ಸ್ವರಾಕ್ಷರವು ಕಾಣದೆ ಹೋಗುವುದಕ್ಕೆ 'ಲೋಪಸಂಧಿ'*** ಯೆಂದು ಕರೆಯುವರು. **(ಸಾಮಾನ್ಯವಾಗಿ ಅ, ಇ, ಉ, ಎ ಸ್ವರಗಳಿಗೆ ಲೋಪ ಬರುತ್ತದೆ).**

ವಿ.ಸೂಚನೆ :

ಮಡು+ಇದು = **ಮಡಿದು**	- (ಮಡುವಿದು)	ವಕಾರಾಗಮ.
ನೆಲ+ಇದು = **ನೆಲಿದು**	- (ನೆಲವಿದು)	ವಕಾರಾಗಮ.
ಕುರಿ+ಅನ್ನು = **ಕುರಿನ್ನು**	- (ಕುರಿಯನ್ನು)	ಯಕಾರಾಗಮ.

ಹೀಗೆ ಶಬ್ದಗಳಿಗಿರುವ ರೂಢಿಯ **ಅರ್ಥಕೆಡುವಾಗ** ಲೋಪಸಂಧಿ ಮಾಡಬಾರದು. ಆವರಣದಲ್ಲಿ ಸೂಚಿಸಿರುವ **ಯ್, ವ್,** ಕಾರಾಗಮ ಸಂಧಿಯನ್ನೇ ಮಾಡುವುದು ಸೂಕ್ತ.

ಲೋಪಸಂಧಿಯ ಕೆಲವು ಉದಾ : ಕೂಡಿಸಿ ಬರೆದಿದೆ

ಎನ್ನ+ಅರಸ = ಎನ್ನರಸ(೧) - ಪೂರ್ವಪದಾಂತ್ಯ - **ಅ**ಕಾರ ಲೋಪ
ಅ+ಅ

ಈಶ್ವರನ +ಒಲವು = ಈಶ್ವರನೊಲವು - ಪೂರ್ವಪದಾಂತ್ಯ- **ಅ**ಕಾರ ಲೋಪ
ಅ + ಒ

ಅಲ್ಲಿ+ಒಂದು = ಅಲ್ಲೊಂದು - ಪೂರ್ವಪದಾಂತ್ಯ **ಇ**ಕಾರ ಕಾಣದೆ ಹೋಗಿದೆ.
ಇ+ಒ

ಎಂತು+ಆದರೂ = ಎಂತಾದರೂ - **ಉ**ಕಾರ ಲೋಪವಾಗಿದೆ.
ಉ+ಆ

ಒಂದು+ಆಣೆ = ಒಂದಾಣೆ - **ಉ**ಕಾರ ಲೋಪವಾಗಿದೆ.
ಉ+ಆ

ಮತ್ತೆ+ಎಲ್ಲಿ = ಮತ್ತೆಲ್ಲಿ - **ಎ**ಕಾರ ಲೋಪವಾಗಿದೆ.
ಎ+ಎ

---

೧. ಎನ್ನ+ಅರಸ, ಊರೂರು ಇಲ್ಲಿ ಸವರ್ಣಸ್ವರಗಳು ಸೇರಿವೆ. ಹೀಗೆಂದು ಸಂಸ್ಕೃತ ಸವರ್ಣದೀರ್ಘಸಂಧಿ ಎನ್ನಲಾಗುತ್ತದೆ. ಕಾರಣ ಇಲ್ಲಿ ಕನ್ನಡಶಬ್ದಗಳ ಸ್ವರಗಳಿಗೆ ಸೇರುವಿಕೆ ಆಗಿರುವುದನ್ನು ಕನ್ನಡದ ಲೋಪಸಂಧಿಯೆನ್ನುತ್ತಾರೆ.

ಬೇರೆ+ಒಬ್ಬ = ಬೇರೊಬ್ಬ - ಎಕಾರ ಲೋಪವಾಗಿದೆ.
ಎ+ಒ

ಇಲ್ಲೆಲ್ಲ ಪೂರ್ವಪದಾಂತ್ಯದಲ್ಲಿ ಕ್ರಮವಾಗಿ **ಅ, ಇ, ಉ,** ಎಕಾರಗಳು ಕಾಣದೆ ಹೋಗಿವೆ. ಆಗಿರುವ ಸಂಧಿಯನ್ನು **ಕೂಡಿಸುವಾಗ, ಬಿಡಿಸುವಾಗ ಅರ್ಥಕ್ಕನುಸಾರವಾಗಿಯೇ ಇರಬೇಕು. ತೋಚಿದಂತೆ ಮಾಡಬಾರದು.**

ಬಿಡಿಸಿ ಬರೆದಿದೆ :

ದೇವನೊಲವು	-	ದೇವನ	+	ಒಲವು
ಎಂತಾದರು	-	ಎಂತು	+	ಆದರು
ಒಲವಿನೊರತೆ	-	ಒಲವಿನ	+	ಒರತೆ
ಜಗದಗಲ	-	ಜಗದ	+	ಅಗಲ
ದೊಡ್ಡದಾಗಿ	-	ದೊಡ್ಡದು	+	ಆಗಿ
ನಾಲ್ಕಾರು	-	ನಾಲ್ಕು	+	ಆರು
ಆಟೋಟ	-	ಆಟ	+	ಓಟ

ಆ) ಆಗಮಸಂಧಿ : ಅಕ್ಷರಗಳು ಹೊಸದಾಗಿ ಬರುತ್ತವೆ. ಎರಡುವಿಧ - **'ಯ್'** ಕಾರಾಗಮ, **'ವ'** ಕಾರಾಗಮ.

ಯಕಾರಾಗಮ : ಪೂರ್ವಪದಾಂತ್ಯದಲ್ಲಿ **ಅ, ಇ, ಈ, ಎ, ಏ, ಐ,** ಗಳಲ್ಲಿ ಒಂದು ಸ್ವರದಮುಂದೆ ಸ್ವರವು ಬಂದಾಗ ಇರುವ ಎರಡೂ ಸ್ವರಗಳನ್ನು ಕೆಡಿಸದೆ(೧), ಹೊಸದಾಗಿ **'ಯ್'** ಅಕ್ಷರ ಬಂದು ಸೇರುವುದಕ್ಕೆ **ಯಕಾರಾಗಮ**ಸಂಧಿಯೆನ್ನುತ್ತಾರೆ.

ಉದಾ : **ಕೂಡಿಸಿದೆ:**		**ಬಿಡಿಸಿದೆ:**	
ಕಾ + **ಅ**ದೆ	= ಕಾ**ಯ**ದೆ.	ರುಚಿ**ಯಿ**ಲ್ಲ	= ರುಚಿ+ಇಲ್ಲ.
ನದಿ + **ಇ**ಂದ	= ನದಿ**ಯಿಂ**ದ.	ಬಾ**ಯೆಂ**ದನು	= ಬಾ+ಎಂದನು.
ಕವಿ +**ಇ**ಂದ	= ಕವಿ**ಯಿಂ**ದ.	ನದಿ**ಯ**ಲ್ಲಿ	= ನದಿ+ಅಲ್ಲಿ.

---

೧) 'ಮಿತ್ರನಂತೆ ಆಗಮ' - ಇರುವವನೊಂದಿಗೆ ತಾನು ಮಧುರಭಾವದಿಂದ ಸೇರುವುದು ಮಿತ್ರತ್ವವಲ್ಲವೆ? ಹೀಗೆಯೇ ಸ್ವರಗಳು ಸೇರುವಾಗ ನಡುವೆ 'ಯ್', 'ವ್'ಗಳು ಬೆರೆಯುತ್ತವೆ.

ವಿ.ಸೂ.: ಪ್ರಾತಿಪದಿಕ (ನಾಮಪ್ರಕೃತಿ) ಅಕಾರಕ್ಕೆ ಸ್ವರಪರವಾದರೆ 'ವ್' ಕಾರಾಗಮವಾಗುತ್ತದೆ. ಈ ರೀತಿಯ ಅನೇಕ ಪ್ರಯೋಗಗಳುಂಟು. ಹೀಗೆ 'ಆಲೋಕ' ಕೃತಿಯಲ್ಲಿ ಹೇಳಲಾಗಿದೆ. ಉದಾ : ಸಾಲ+ಅನ್ನು =ಸಾಲವನ್ನು, ಜಲವನ್ನು, ಮರವನ್ನು ಇತ್ಯಾದಿರೂಪಗಳನ್ನು ನೋಡಿದರೆ ಇಲ್ಲಿ ಸಂಶಯ ಬರುತ್ತದೆ. ಆದರೆ ಇಲ್ಲಿ ವಕರಾಗಮ ಆಗಲು ಸರಿಯಾದ ಪೂರ್ವನಿಯಮಗಳು ಬಂದಿಲ್ಲ. ಇಲ್ಲಿ ಬಂದಿರುವ ವಕಾರವು ಸ್ವರಗಳ ಸೇರುವಿಕೆಯಿಂದ ಆದುದಲ್ಲ. ಮಕಾರ ವಕಾರವಾಗುವ ಕನ್ನಡಜಾಯಮಾನವನ್ನು ಕೇಶಿರಾಜನು 'ವ ಮ ಹ ಪ' ಭೇಧದಿಂ... ಇತ್ಯಾದಿಯಾಗಿ ಹೇಳಿರುವಮಾತೆ ಸಾಕ್ಷಿಯಾಗಿದೆ. ಮರಮಂ ಎನ್ನುವಾಗ ಮಕಾರ ಮರವಂ ಎಂದಾಗಿದೆ. ಇಲ್ಲಿ ದ್ವಿತೀಯವಿಭಕ್ತಿಯಲ್ಲಿ ಮಾತ್ರ (ಮಕಾರಾತ್ಮಕ) ವಕಾರಾತ್ಮಕವಾಗಿದೆ. ಇದು ಧ್ವನಿಉಚ್ಚಾರ ಹಾಗೂ ಲಿಪಿಸಾಮ್ಯತೆಯಿಂದ ಆದ ಪಲ್ಲಟವೇ ಹೊರತು ವಕಾರಾಗಮವಲ್ಲ.

ಮೀ + **ಅಲು** = ಮೀಯಲು. ಮಳೆಯಿಂದ = ಮಳೆ+ಇಂದ.
ಕೃಪೆ + ಇಂದ = ಕೃಪೆಯಿಂದ. ಮೇಯಿಸು = ಮೇ+ಇಸು.
ಮೇ + **ಅದೆ** = ಮೇಯದೆ. ಕೈಯಲ್ಲಿ = ಕೈ+ಅಲ್ಲಿ.
ಮೈ + **ಅನ್ನು** = ಮೈಯನ್ನು.

ವಕಾರಾಗಮ : ಉ, ಊ, ಋ, ಒ, ಓ ಸ್ವರಗಳಿಗೆ ಸ್ವರ ಪರವಾದಾಗ **'ವ್'** ಕಾರಾಗಮವಾಗುತ್ತದೆ - ಉದಾ :

ಕೂಡಿಸಿದೆ:		**ಬಿಡಿಸಿದೆ:**	
ಹುಳು+ಅನ್ನು	= ಹುಳುವನ್ನು.	ಕುಲವೇನು(೨)	- ಕುಲ+ಏನು.
ಪೂ +ಇಂದ	= ಪೂವಿಂದ.	ಗುರುವನ್ನು	- ಗುರು+ಅನ್ನು.
ಮಾತೃ+ಅನ್ನು	= ಮಾತೃವನ್ನು.	ಪಿತೃವನ್ನು	- ಪಿತೃ+ಅನ್ನು.
ಗೋ+ಇಗೆ	= ಗೋವಿಗೆ.	ಗೋವಿಂದ	- ಗೋ+ಇಂದ
ಗೌ +ಇದು	= ಗೌವಿದು.	ಹೂವಲ್ಲಿ	- ಹೂ+ಅಲ್ಲಿ
ತರುವೊಂದು	- ತರು+ಒಂದು		

ವಿಶೇಷ :

೧) ಆ, ಈ ಸ್ವರಗಳ ಮುಂದೆ (ಓಷ್ಠ್ಯ ವರ್ಣಗಳಾದ **ಊ, ಓ**ಕಾರಗಳು ಪರವಾದಾಗ ಯಕಾರಾಗಮವಲ್ಲದೆ, ವಕಾರಾಗಮವೂ ಆಗುತ್ತದೆ).

ಉದಾ : **ಆ+ಓಲೆ** - **ಆಯೋಲೆ / ಆವೋಲೆ**
ಈ+ಊರ್ - **ಈಯೂರ್ / ಈವೂರ್**

೨) **'ನೋ'** ಧಾತುವಿಗೆ ಸ್ವರಾದಿ **'ಕೃತ್'** ಪ್ರತ್ಯಯ (ಉತ್ತ, ಅಲು, ಅದೆ) ಪರವಾದಾಗ **'ವ'** ಕಾರಾಗಮವಾಗುತ್ತದೆ. ಉಳಿದೆಡೆ **'ಯ'** ಕಾರಾಗಮವಾಗುತ್ತದೆ. ಉದಾ :

ನೋ+ಅದೆ-ನೋ**ವ**ದೆ/ನೋ**ಯ**ದೆ. ಸೊಗ+**ಇಸು**-ಸೊಗ**ಯಿ**ಸು(೧)
ನೋ+ಅಲು-ನೋ**ವ**ಲು/ ನೋ**ಯ**ಲು. ಶುದ್ಧ+ಇಸು-ಶುದ್ಧ**ಯಿ**ಸು
ನೋ+ಉತ್ತದೆ-ನೋ**ವು**ತ್ತದೆ/ನೋ**ಯು**ತ್ತದೆ. ಪಳಪಳ(೨)+ಎಂದು-ಪಳಪಳ**ಯೆಂ**ದು

೩) ಷಷ್ಠಿಯ ಅಕಾರಂತ ಪ್ರಕೃತಿಗಳ ಮುಂದೆ ಅವಧಾರಣೆ (ನಿಶ್ಚಯ) ಎಕಾರ ಬಂದರೆ **ಯ** ಕಾರಗಮವಾಗುವುದು. ಉದಾ : ಆತನ ಏ = **ಆತನ / ಅವಳಯೇ**

ಪ್ರಕೃತಿಭಾವ : (ಪ್ರಕೃತಿ = ಸ್ವಾಭಾವಿಕವಾಗಿಯೇ, ಭಾವ = ಇರುವುದೆಂದರ್ಥ) ಸ್ವರದ ಮುಂದೆ ಸ್ವರವು ಪರವಾದಾಗ ಮೇಲೆ **ಹೇಳಿದ ಲೋಪ, ಆಗಮ, ಕಾರ್ಯಗಳು ಆಗುವುದಿಲ್ಲ**. ಸ್ವರಗಳು ಇದ್ದ ಹಾಗೆಯೇ ಇರುತ್ತವೆ. ಇದನ್ನು **'ಪ್ರಕೃತಿಭಾವ'** ವೆಂದು

೧) ಸಂಸ್ಕೃತ, ಕನ್ನಡ ಅಕಾರಾಂತ ಶಬ್ದಗಳಿಗೆ 'ಇಸು' ಪ್ರತ್ಯಯ ಸೇರಿ ಯಕಾರಾಗಮವಾಗಿದೆ.
೨) ಅಕಾರಂತ 'ಅನುಕರಣ' ಶಬ್ಧಗಳಿಗೆ ಅನುಕೃತಿಸ್ವರ ಪರವಾದಾಗಲೂ 'ಯ'ಕಾರಾಗಮವುಂಟು.

ಕರೆಯಲಾಗುತ್ತದೆ. ಅದು ಆಗುವ ಸಂದರ್ಭಗಳು : (ಇದ್ದಂತೆ ಹೇಳುವುದರಲ್ಲಿಯೇ ಆಶಯಸ್ಪಷ್ಟ).

ಉದಾಹರಣೆ : ಅ) ಪ್ಲುತಸ್ವರಕ್ಕೆ ಸ್ವರವು ಪರವಾದಾಗ ಸಂಧಿಕಾರ್ಯವಿಲ್ಲ :

ಉದಾ: **ಅಣ್ಣಾಽ ಇತ್ತ** ಬಾ, ರಾ**ಮಾಽ ಎಂ**ದಳು.

ಆ) ಭಾವಸೂಚಕಾವ್ಯಯಗಳಿಗೆ ಸ್ವರವು ಪರವಾದಾಗ - ಸಂಧಿಕಾರ್ಯವಿಲ್ಲ :

ಉದಾ : **ಅಬ್ಬಾ ಅ**ದು ಹಾವೆ, **ಅಯ್ಯೋ ಅವ**ನಿಗೇನಾಯ್ತು.

ಇ) **ಅ**, **ಆ**, ಕಾರಗಳಿಗೆ **ಅ, ಆ, ಐ, ಔ**ಗಳು ಪರವಾದಾಗ ಸಂಧಿಕಾರ್ಯವಿಲ್ಲ :

ಉದಾ : **ಆ+ಅ**ರಸು = **ಆ** ಅರಸು. **ಆ+ಐ**ರಾವತ = ಆ ಐರಾವತ.

ಆ+ಅಂಗಡಿ = **ಆ** ಅಂಗಡಿ. **ಆ+ಔ**ದಾರ್ಯ = ಆ ಔದಾರ್ಯ.

ವ್ಯಂಜನಸಂಧಿ

೧) **ಆದೇಶಸಂಧಿ :** ಸಮಾಸಪದಗಳಲ್ಲಿ ಸ್ವರ ಇಲ್ಲವೆ ವ್ಯಂಜನ ಪೂರ್ವಪದದಲ್ಲಿದ್ದು, **ಉತ್ತರಪದದ ಮೊದಲ** ವ್ಯಂಜನಾಕ್ಷರಕ್ಕೆ ಬೇರೊಂದು ಅಕ್ಷರವು ಬರುತ್ತದೆ. ಇದು **'ಆದೇಶಸಂಧಿ'**[೨] ಯೆನಿಸುತ್ತದೆ.

ಅ) ಉತ್ತರಪದದ **ಕ, ತ, ಪ** ಗಳಿಗೆ ಗ, ದ, ಬ ಗಳು ಬರುತ್ತವೆ.

ಆ) ಉತ್ತರಪದದ **ಪ, ಬ, ಮ** ಗಳಿಗೆ **'ವ'**ಕಾರಾದೇಶವಾಗುತ್ತವೆ.

ಇ) ಉತ್ತರಪದದ **'ಸ' ಕಾರಕ್ಕೆ ಚ, ಜ,** ಆದಿಯ ಸಂಖ್ಯಾಸಂಬಂಧವಾದ **ಛ** ಕಾರಾದೇಶವಾಗುತ್ತವೆ. ಇವುಗಳಿಗೆ **'ಆದೇಶಸಂಧಿ'** ಯೆನ್ನಲಾಗುವುದು.

ಇವುಗಳಿಗೆ ಕ್ರಮವಾಗಿ ಉದಾಹರಣೆ:

	ಕೂಡಿಸಿದೆ	ಬಿಡಿಸಿದೆ
ಅ)	ಬಂಡೆ+ಕಲ್ಲು=ಬಂಡೆಗಲ್ಲು (ಕಕಾರಕ್ಕೆ ಗಕಾರ)	ಹನಿಗೂಡು = ಹನಿ+ಕೂಡು
	ಹುಲಿ+ತೊಗಲು=ಹುಲಿದೊಗಲು (ತಕಾರಕ್ಕೆ ದಕಾರ)	ಕಣ್ದೆರೆ = ಕಣ್+ತೆರೆ
	ಕಣ್+ಪನಿ = ಕಂಬನಿ (ಪಕಾರಕ್ಕೆ ಬಕಾರ)	ಕಡಲುಗಾಲುವೆ=ಕಡಲು+ಕಾಲುವೆ
ಆ)	ಎಳ+ಪೆರೆ= ಎಳವೆರೆ (ಪಕಾರಕ್ಕೆ ವಕಾರ)	ಹೊಂಬೊಗರ್ = ಹೊನ್+ಪೊಗರ್
	ನೆಲೆ+ಬೀಡು = ನೆಲವೀಡು (ಬಕಾರಕ್ಕೆ ವಕಾರ)	ತಲೆವೇನೆ = ತಲೆ+ಬೇನೆ
	ಕರ+ಬಾಳ್ =ಕರವಾಳ್ (ಬಕಾರಕ್ಕೆ ವಕಾರ)	ಮೆಲ್ವಾತು = ಮೆಲ್+ಮಾತು
ಇ)	ಇನ್+ಸರ = ಇಂಚರ (ಸಕಾರಕ್ಕೆ ಚಕಾರ)	ಮುಚ್ಚಂಜೆ = ಮುನ್+ಸಂಜೆ
	ಮುನ್+ಸೆರಗು = ಮುಂಜೆರಗು (ಸಕಾರಕ್ಕೆ ಜಕಾರ)	ಹಿಂಜರಿ = ಹಿಂ+ಸರಿ

---

೨) 'ಶತೃವಿನಂತೆಆದೇಶ' ಕಾರ್ಯವಾಗುತ್ತದೆ. ಅಂದರೆ ಇರುವ ಪರಪದದ ಆದಿಯ ಅಕ್ಷರವನ್ನು ಕೆಡಿಸಿ ಅದು ಬರುತ್ತದೆ.
ಸಂಸ್ಕೃತದ 'ಜಶ್ತ್ವ' ಸಂಧಿಯಲ್ಲಿ ಪೂರ್ವಪದಾಂತ್ಯ ಅಕ್ಷರಗಳಾದ ಕ್, ಟ್, ತ್, ಪ್ ಗಳಿಗೆ ಕ್ರಮವಾಗಿ ಗ, ಡ, ದ, ಬ ಗಳು ಬರುತ್ತವೆ. ಈ ವ್ಯತ್ಯಾಸವನ್ನು ನೆನಪಿನಲ್ಲಿಡಬೇಕು.

ನೂರ್+ಸಾಸಿರ = ನೂರ್ಛಾಸಿರ (ಸಾ-ಛಾಕಾರ) ಇರ್ಛಾಸಿರ=ಇರ್(ಎರಡು)+ಸಾಸಿರ

ವಿಶೇಷ : ಈ ನಿಯಮಗಳಿಗೆ ಅಪವಾದವಾಗಿರುವ ಕೆಲವು ರೂಪಗಳುಂಟು : ತಲೆಕಟ್ಟು, ಕಣ್ಬೇಟ, ಕೀಳ್ಪೊಡೆ, ನೆಲಮನೆ, ಯಳಬಳ್ಳಿ, ಮೆಲುಮಾತು, ಮೆಲ್ಸರ, ಬಾಯ್ಸವಿ, ಬಲ್ಸೋನೆ, ಪಾಳ್ಮನೆ, ಬೆಳ್ಸರ ಇತ್ಯಾದಿ ರೂಪಗಳು ನಿಯಮಾನುಸಾರವಿದ್ದರೂ ಆದೇಶವಾಗುವುದಿಲ್ಲ.

ಸಾರಸಂಗ್ರಹ

ಕನ್ನಡ ಸಂಧಿಗಳು (ಅಕ್ಷರಗಳು ಸೇರುವುದು)

೧) ಲೋಪಸಂಧಿ	೨) ಆಗಮ ಸಂಧಿ	೩) ಆದೇಶ ಸಂಧಿ
ಸ್ವರ+ಸ್ವರ	**ಸ್ವರ+ಸ್ವರ**	**ಸ್ವರ+ವ್ಯಂಜನ / ವ್ಯಂಜನ+ವ್ಯಂಜನ**
(ಅ,ಇ,ಉ,ಎ ಸ್ವರಗಳಿಗೆ ಲೋಪ).	(ವ್,ಯ್ ಕಾರಗಳು ಹೊಸ ದಾಗಿ ಬರುವುದು)=ಗಂಗೆಯಲ್ಲಿ. ಗುರುವನ್ನು.	
=ತನ್ನೊಲವು.		
=ಮತ್ತೆಲ್ಲಿ.	ಉತ್ತರಪದದಾದಿಯ- ಕ,ತ,ಪ -ಗ,ದ,ಬ=ಮಳೆಗಾಲ	
=ಒಂದಾಣೆ.	ಪ,ಬ,ಮ-ವ=ಮರವಣಿ	
	ಸ - **ಚ, ಜ,ಛ** - ಮುಚ್ಚಂಜೆ	

ಸಂಸ್ಕೃತ ಸಂಧಿಗಳು

ಕನ್ನಡ ಭಾಷೆಯಲ್ಲಿ ಸಂಸ್ಕೃತ ಪದಗಳು ಹೇರಳವಾಗಿವೆ. ಈ ಸಂಸ್ಕೃತ ಪದಗಳನ್ನು ಬಿಡಿಸಿ ಅರ್ಥತಿಳಿಯಬೇಕಾಗುತ್ತದೆ. ಆದ್ದರಿಂದ ಆ ಸಂಧಿಗಳ ಪರಿಚಯ ಅವಶ್ಯಕವಾಗಿದೆ. ಸಂಸ್ಕೃತದಲ್ಲಿ ೧) **ಸ್ವರಸಂಧಿ**. ೨) **ವ್ಯಂಜನಸಂಧಿ.** ೩) **ವಿಸರ್ಗಸಂಧಿ** ಪ್ರಧಾನವಾಗಿ ಮೂರು ಭೇದಗಳಿವೆ.

೧) ಸ್ವರಸಂಧಿ : ಎರಡೂ ಸಂಸ್ಕೃತ ಪದಗಳ ಸ್ವರಗಳು ಸೇರಿದರೆ '**ಸ್ವರಸಂಧಿ**'ಯೆನಿಸುತ್ತದೆ.

ಅ ಉ ಅ ಅ

ಉದಾ: **ಸರ್ವ+ ಉಪಕಾರಿ** = ಸರ್ವೋಪಕಾರಿ. **ಸರ್ವ +ಅಂಗ** = ಸರ್ವಾಂಗ

ಅವು: ೧) ಸವರ್ಣದೀರ್ಘಸಂಧಿ ೨) ಗುಣಸಂಧಿ ೩) ವೃದ್ಧಿಸಂಧಿ ೪) ಯಣ್‌ಸಂಧಿ.

ಸ್ವರಸಂಧಿ :

೧) **ಸವರ್ಣದೀರ್ಘಸಂಧಿ :** ಸವರ್ಣಸ್ವರಗಳು(೧) ಒಂದರ ಮುಂದೆ ಒಂದು ಬಂದಾಗ ಅವೆರಡರ ಮಧ್ಯೆ ಅವುಗಳ ದೀರ್ಘಾಕ್ಷರವು ಬರುತ್ತದೆ. ಅದನ್ನು **ಸವರ್ಣದೀರ್ಘಸಂಧಿ** ಯೆಂದು ಕರೆಯಲಾಗುತ್ತದೆ. ಉದಾ :

ಮೃಗ	+	**ಆ**ಲಯ	= ಮೃಗಾಲಯ(೨)	(ಅ+ಆ=ಆ)
ರೂಪ	+	**ಅ**ಂತರ	= ರೂಪಾಂತರ	(ಅ+ಅ=ಆ)
ವಿದ್ಯಾ	+	**ಆ**ಲಯ	= ವಿದ್ಯಾಲಯ	(ಆ+ಆ=ಆ)
ಗಿರಿ	+	**ಈ**ಶ	= ಗಿರೀಶ	(ಇ+ಈ=ಈ)
ಲಕ್ಷ್ಮೀ	+	**ಈ**ಶ	= ಲಕ್ಷ್ಮೀಶ	(ಈ+ಈ=ಈ)
ಗುರು	+	**ಉ**ಪದೇಶ	= ಗುರೂಪದೇಶ	(ಉ+ಉ=ಊ)
ವಧೂ	+	**ಉ**ಪೇತ	= ವಧೂಪೇತ	(ಊ+ಉ=ಊ)

೨) **ಗುಣಸಂಧಿ :** <u>ಅ ಆ ಕಾರಗಳಿಗೆ</u> ಇ, ಈ ಕಾರಗಳು ಪರವಾದಾಗ **'ಏ'** ಕಾರವು ಬರುತ್ತದೆ. ಉ, ಊ ಕಾರಗಳ ಪರವಾದಾಗ **'ಓ'** ಕಾರವು ಬರುತ್ತದೆ. **'ಋ'** ಕಾರವು ಪರವಾದಾಗ **'ಅರ್'** ಕಾರವು ಬರುತ್ತದೆ. (**ಏ, ಓ, ಅರ್**ಕಾರಗಳನ್ನು <u>**ಗುಣಾಕ್ಷರ**</u>ವೆನ್ನುವರು)

ಉದಾ :	ಗಣೇಶ	= ಗಣ+**ಈ**ಶ	(ಅ+ಈ=ಏ)
	ಮಹೇಂದ್ರ	= ಮಹಾ+**ಇ**ಂದ್ರ	(ಆ+ಇ=ಏ)
	ಸಮಯೋಚಿತ	= ಸಮಯ+**ಉ**ಚಿತ	(ಅ+ಉ=ಓ).
	ಸರ್ವೋದಯ	= ಸರ್ವ+**ಉ**ದಯ	(ಅ+ಉ=ಓ).
	ಮಹೋರ್ಮಿ	= ಮಹಾ+**ಊ**ರ್ಮಿ	(ಆ+ಊ=ಓ)**'ಪ್ರವಾಹ'**
	ಬಾಲರ್ಷಿ	= ಬಾಲ+ಋಷಿ	(ಅ+ಋ=ಅರ್).

೩) **ವೃದ್ಧಿಸಂಧಿ : ಅ, ಆ ಕಾರಗಳ ಮುಂದೆ** ಏ, ಐ ಕಾರಗಳು ಪರವಾದರೆ **'ಐ'ಕಾರವೂ** ಓ, ಔ ಕಾರಗಳು ಪರವಾದರೆ **'ಔ' ಕಾರವೂ ಏಕಾದೇಶ**(೩)ವಾಗುತ್ತದೆ. ಇದು **'ವೃದ್ಧಿಸಂಧಿ'** ಯೆನಿಸುತ್ತದೆ. (**ಐ, ಔ** ಕಾರಗಳು <u>**ವೃದ್ಧ್ಯಕ್ಷರ**</u>ಗಳೆನಿಸುತ್ತವೆ).

---

೧) ಅ-ಆ; ಇ-ಈ; ಉ-ಊ; (ಋ-ೠ) ಗಳು ಯಾವ ಕ್ರಮದಲ್ಲಿ ಹೇಳಿದರೂ ಅವು 'ಸವರ್ಣಸ್ವರ' ಗಳೆನಿಸುತ್ತವೆ.

೨) ಉಪ+ಆಹಾರ = ಉಪಾಹಾರಪದವನ್ನು 'ಉಪಹಾರ' ಎನ್ನಲಾಗುತ್ತಿದೆ. ಹೀಗೆಯೇ 'ಫಲಾರ, ಫಲಹಾರ' ಆಡಳಿತಾರೂಢ-ಆಡಳಿತರೂಢ, ಅಧಿಕಾರರೂಢ ಈ ಸಂಸ್ಕೃತ ಶಬ್ದಗಳಲ್ಲಿ ಇಂಗ್ಲೀಷ್ ಶಬ್ದಗಳ ಮಾದರಿಯಲ್ಲಿ ಉಚ್ಚಾರಣಾ ವೈಫಲ್ಯದಿಂದ ಆಗಿರುವ ರೂಢಿಪ್ರಯೋಗಗಳೆಂದು ತಿಳಿಯಲಾಗದು.

(೩) ಎರಡು ಸ್ವರಗಳಿಗೂ ಒಂದೇ ಆದೇಶವಾಗುವುದು ಎಂದರ್ಥ.

ಉದಾ :

ಲೋಕೈಕ	=	ಲೋಕ+ಏಕ	(ಅ+ಏ=ಐ)
ಘನೈಶ್ವರ್ಯ	=	ಘನ+ಐಶ್ವರ್ಯ	(ಅ+ಐ=ಐ)
ಗಂಗೌಘ	=	ಗಂಗಾ+ಓಘ	(ಆ+ಓ=ಔ)
ಘನೌದಾರ್ಯ	=	ಘನ+ಔದಾರ್ಯ	(ಅ+ಔ=ಔ)
ಮಹೌನ್ನತ್ಯ	=	ಮಹಾ+ಔನ್ನತ್ಯ	(ಆ+ಔ=ಔ)
ಅಷ್ಟೈಶ್ವರ್ಯ	=	ಅಷ್ಟ+ಐಶ್ವರ್ಯ	(ಅ+ಐ=ಐ)

೪) ಯಣ್‌ಸಂಧಿ : ಇ, ಈ, ಉ, ಊ, ಋ ಕಾರಗಳಿಗೆ ಸವರ್ಣವಲ್ಲದ ಸ್ವರವು ಪರವಾದಾಗ ಪೂರ್ವಾಂತ್ಯದ ಇ, ಈ ಕಾರಗಳಿಗೆ **'ಯ್'** ಕಾರವೂ, ಉ ಊ ಕಾರಗಳಿಗೆ **'ವ್'** ಕಾರವೂ ಋಕಾರಕ್ಕೆ **'ರ್'**ಕಾರವೂ ಆದೇಶವಾಗುತ್ತವೆ. ಇದು **'ಯಣ್‌ಸಂಧಿ'** ಯೆನಿಸುವುದು. (**ಯ್, ವ್, ರ್** ಗಳು **ಯಣ್‌ಅಕ್ಷರ**ಗಳೆನಿಸುತ್ತವೆ).

ಉದಾ : ಬಿಡಿಸಲಾಗಿದೆ

ಅತ್ಯುಗ್ರ	=	**ಅತಿ**	+	**ಉಗ್ರ**	(ಇ+ಉ=ಯ್)
ಅತ್ಯಂತ	=	**ಅತಿ**	+	**ಅಂತ**	(ಇ+ಅ=ಯ್)
ಭೂಮ್ಯಂತರ್ಗತ	=	**ಭೂಮಿ**	+	**ಅಂತರ್ಗತ**	(ಇ+ಅ=ಯ್)
ಮನ್ವಂತರ	=	**ಮನು**	+	**ಅಂತರ**	(ಉ+ಅ=ವ್)
ವಧ್ವನ್ವೇಷಣೆ	=	**ವಧೂ**	+	**ಅನ್ವೇಷಣೆ**	(ಊ+ಅ=ವ್)
ಪಿತ್ರರ್ಥ	=	**ಪಿತೃ**	+	**ಅರ್ಥ**	(ಋ+ಅ=ರ್)
{ ಜಾತ್ಯತೀತ	=	**ಜಾತಿ**	+	**ಅತೀತ**	(ಇ+ಅ=ಯ್)
{ ಕೋಟ್ಯಧೀಶ (೨)	=	**ಕೋಟಿ**	+	**ಅಧೀಶ**	(ಇ+ಅ=ಯ್)
ಅಧ್ಯಾತ್ಮ	=	**ಅಧಿ**	+	**ಆತ್ಮ**	(ಇ+ಆ=ಯ್)
ವಧ್ವಾಗಮನ	=	**ವಧೂ**	+	**ಆಗಮನ**	(ಊ+ಆ=ವ್)

II ವ್ಯಂಜನ ಸಂಧಿಗಳು

ಸಂಸ್ಕೃತ ಶಬ್ದಗಳ ವ್ಯಂಜನಕ್ಕೆ ಸ್ವರವು ಸೇರುವುದು. ಇಲ್ಲವೆ ವ್ಯಂಜನಕ್ಕೆ ವ್ಯಂಜನ ಸೇರಿದಾಗ **'ವ್ಯಂಜನ ಸಂಧಿ'**ಯಾಗುತ್ತದೆ.

ಉದಾ: ಚಿತ್+ ಆನಂದ=ಚಿದಾನಂದ.

ಅವು : ೧) ಜಶ್ತ್ವಸಂಧಿ. ೨) ಅನುನಾಸಿಕ ಸಂಧಿ. ೩) ಶ್ಚುತ್ವಸಂಧಿ. ೪) ಷ್ಟುತ್ವಸಂಧಿ. ೫) ಛತ್ವಸಂಧಿ. ೬) ಪರಸವರ್ಣ ಸಂಧಿ ಇತ್ಯಾದಿಗಳು.

೨) **ಜಾತ್ಯಾತೀತ, ಕೋಟ್ಯಾಧೀಶ್ವರ- ಈ ಸಂಧಿಪದಗಳು ನಿಯಮರೀತ್ಯಾ ತಪ್ಪೆನಿಸುತ್ತವೆ. ರೂಢಿಪ್ರಯೋಗಗಳೆಂದು ಪರಿಗಣಿಸಲಾಗದು.**

೧. **ಜಶ್ತ್ವಸಂಧಿ : ಪೂರ್ವಪದದ ಕೊನೆ**ಯಲ್ಲಿರುವ **ಕ್, ಚ್, ಟ್, ತ್, ಪ್** ವ್ಯಂಜನಗಳಿಗೆ ಯಾವವರ್ಣ ಪರವಾದರೂ(೧) **ಪ್ರಾಯಶಃ** (ಸ್ವರ ಅಥವಾ **ಮೃದು** ವ್ಯಂಜನಗಳಾದ ವರ್ಗದ ಕೊನೆಯ ಎರಡು ಅಕ್ಷರಗಳು ಮತ್ತು ಯ, ರ, ಲ, ವ ವ್ಯಂಜನಗಳು) ಕ್ರಮವಾಗಿ ಆ ವರ್ಗದ ಮೂರನೆಯಅಕ್ಷರ **(ಗ್, ಜ್, ಡ್, ದ್, ಬ್‌ಗಳು)** ಬರುತ್ತವೆ. ಇದು **'ಜಶ್ತ್ವಸಂಧಿ'**ಯೆನಿಸುತ್ತದೆ. ಉದಾ :

ವಾಗೀಶ = **ವಾಕ್ + ಈಶ** (ಇಲ್ಲಿ ಮೊದಲ ಪದದ ಕೊನೆಯ ಕಕಾರಕ್ಕೆ ಗಕಾರಾದೇಶ).
ದಿಗ್ಗಜ = ದಿ**ಕ್+**ಗಜ (ಇಲ್ಲಿ ಮೊದಲ ಪದದ ಕೊನೆಯ ಕಕಾರಕ್ಕೆ ಗಕಾರಾದೇಶ).
ದಿಗಂತ = ದಿ**ಕ್+ಅ**ಂತ (ಇಲ್ಲಿ ಮೊದಲ ಪದದ ಕೊನೆಯ ಕಕಾರಕ್ಕೆ ಗಕಾರಾದೇಶ).
ಅಜಂತ = **ಅಚ್+ಅ**ಂತ (ಚಕಾರಕ್ಕೆ 'ಜ್' ಕಾರಾದೇಶ).
ಷಡಂಗ = ಷ**ಟ್+ಅ**ಂಗ (ಟ್‌ಕಾರಕ್ಕೆ 'ಡ್'ಕಾರಾದೇಶ).
ಸದಾನಂದ= ಸ**ತ್+ಆ**ನಂದ (ತ್‌ಕಾರಕ್ಕೆ 'ದ್'ಕಾರಾದೇಶ).
ಮಹದ್ಯಶಃ= ಮಹ**ತ್+ಯ**ಶಃ (ತ್‌ಕಾರಕ್ಕೆ 'ದ್'ಕಾರಾದೇಶ).
ಅಬ್ಧಿ = **ಅಪ್+ಧಿ** (ಪಕಾರಕ್ಕೆ ಬ್‌ಕಾರಾದೇಶ).

ಅಪವಾದ : ಮೇಲಿನ ನಿಯಮಾನುಸಾರವಾಗಿದ್ದರೂ ಕೆಲವು ಬಾರದರೂಪಗಳಿವೆ. **ಅವು:** ದಿಕ್ತಟ, ದಿಕ್ಚಕ್ರ, ದಿಕ್ಸೂಚಿ, ಸತ್ಕವಿ, ವಾಕ್ಪತಿ(೧) ಇತ್ಯಾದಿಗಳು.

೨) ಅನುನಾಸಿಕ ಸಂಧಿ : ಪೂರ್ವಪದಾಂತ್ಯದಲ್ಲಿರುವ ವರ್ಗೀಯ(೨) ವ್ಯಂಜನಕ್ಕೆ ಅನುನಾಸಿಕ ಅಕ್ಷರವು ಪರವಾದರೆ **ಆ ವರ್ಗದ ಅನುನಾಸಿಕ ವರ್ಣವೇ** ಬರುತ್ತದೆ. ಇದು **'ಅನುನಾಸಿಕ ಸಂಧಿ'** ಯೆನಿಸುತ್ತದೆ. ಉದಾ :

ವಾಙ್ಮಾಧುರ್ಯ	= ವಾಕ್ + ಮಾಧುರ್ಯ	(ಕಕಾರಕ್ಕೆ **ಙ್**ಕಾರ ಬಂದಿದೆ)
ವಾಙ್ಮಯ	= ವಾಕ್ + ಮಯ	(ಕಕಾರಕ್ಕೆ **ಙ್**ಕಾರ ಬಂದಿದೆ)
ಷಣ್ಮುಖ	= ಷಟ್ + ಮುಖ	(ಟ್‌ಕಾರಕ್ಕೆ **ಣ್**ಕಾರ ಬಂದಿದೆ)
ಚಿನ್ಮಯ	= ಚಿತ್ + ಮಯ	(ತ್‌ಕಾರಕ್ಕೆ **ನ್**ಕಾರ ಬಂದಿದೆ)
ಹೃನ್ಮನ	= ಹೃತ್ + ಮನ	(ತ್‌ಕಾರಕ್ಕೆ **ನ್**ಕಾರ ಬಂದಿದೆ)

ಹೀಗೆಯೇ **ದಿಙ್ಮೂರ್ಧ, ಹಸನ್ಮುಖ, ಷಣ್ಮಾಸ** ಇತ್ಯಾದಿ.

೩) ಶ್ಚುತ್ವ ಸಂಧಿ : ಪೂರ್ವಪದಾಂತ್ಯದಲ್ಲಿ **ಸಕಾರ, ತ**ವರ್ಗಗಳಿದ್ದು, **ಶಕಾರ** ಇಲ್ಲವೆ **ಚ** ವರ್ಗಾಕ್ಷರಗಳು (ಚ, ಛ, ಜ, ಝ) ಬಂದರೆ ಸಕಾರಕ್ಕೆ-**ಶಕಾರವೂ** ತವರ್ಗಕ್ಕೆ-ಚವರ್ಗ ವರ್ಣಗಳು ಬರುತ್ತವೆ. ಇದು **'ಶ್ಚುತ್ವಸಂಧಿ'** ಯೆನಿಸುತ್ತದೆ. **ಉದಾ:**

---

೧) **ಕ, ಚ, ಟ, ತ, ಪಗಳಿಗೆ ವರ್ಗದ ಮೊದಲೆರಡು ಅಕ್ಷರ, ಅನುನಾಸಿಕಗಳು ಹಾಗೂ ಶ, ಷ, ಸ, ಹ ಪರವಾದರೆ ಜಶ್ತ್ವವಿಲ್ಲ.**

೨) **ಕ, ಟ, ತ ಗಳಿಗೆ ಇವುಗಳಲ್ಲಿ ಅನುನಾಸಿಕವರ್ಣ ಙ, ಣ, ನ ಗಳು ಬಂದಿರುವ ಪ್ರಯೋಗಗಳೇ ಹೆಚ್ಚಾಗಿ ಕಾಣುತ್ತವೆ.**

ಯಶಶ್ಚಂದ್ರಿಕೆ	= ಯಶಸ್ + **ಚಂದ್ರಿಕೆ**	-	(ಸಕಾರಕ್ಕೆ **ಶ**ಕಾರವಾಗಿದೆ).
ಯಶಶ್ಶರೀರ	= ಯಶಸ್(೧) + **ಶರೀರ**	-	(ಸಕಾರಕ್ಕೆ **ಶ**ಕಾರವಾಗಿದೆ).
ಸಚ್ಚಿತ್ರ	= ಸ**ತ್** + **ಚಿತ್ರ**	-	(ತ್‌ಕಾರಕ್ಕೆ **ಚ್**ವರ್ಗ ಬಂದಿದೆ).
ಭಗವಚ್ಚಿಂತನ	= ಭವವ**ತ್** + **ಚಿಂ**ತನ	-	(ತ್‌ಕಾರಕ್ಕೆ **ಚ್**ವರ್ಗ ಬಂದಿದೆ).
ಬೃಹಚ್ಛತ್ರ	= ಬೃಹ**ತ್** + **ಛ**ತ್ರ	-	(ತ್‌ಕಾರ **ಚ್**ವರ್ಗವಾಗಿದೆ).
ವಿಯಚ್ಚರ	= ವಿಯ**ತ್** + **ಚ**ರ	-	(ತ್‌ಕಾರ **ಚ್**ವರ್ಗವಾಗಿದೆ).
ಸಜ್ಜನ	= ಸ**ತ್** + **ಜ**ನ	-	(ತ್‌ಕಾರ **ಚ್**ವರ್ಗವಾಗಿದೆ).
ಜಗಜ್ಜ್ಯೋತಿ	= ಜಗ**ತ್** + **ಜ್ಯೋ**ತಿ	-	(ತ್‌ಕಾರ **ಚ್**ವರ್ಗವಾಗಿದೆ) ಇತ್ಯಾದಿ.

೪) **ಷ್ಟುತ್ವ ಸಂಧಿ :** ಪೂರ್ವಪದಾಂತ್ಯದಲ್ಲಿ **ಸಕಾರ, ತವರ್ಗಗಳಿದ್ದು 'ಷ'** ಕಾರ, **'ಟ'** ವರ್ಗಗಳು ಪರವಾದರೆ, ಸಕಾರಕ್ಕೆ **'ಷ'** ಕಾರವೂ **'ತ'** ವರ್ಗಕ್ಕೆ **'ಟ'** ವರ್ಗದ ವರ್ಣಗಳು ಆದೇಶವಾಗುತ್ತವೆ. ಉದಾ :

ತಪಷ್ಷಡ್ಭಾಗ	= ತಪ**ಸ್** + **ಷ**ಡ್ಭಾಗ	(ಸ್+ಷ = **ಷ್**)
ಧನುಷ್ಠಂಕಾರ	= ಧನು**ಸ್** + **ಠಂ**ಕಾರ	(ಸ್+ಠ = **ಷ್**)
ಉಡ್ಡಯನ	= ಉ**ತ್** + **ಡ**ಯನ	(ತ್+ಡ = **ಡ್**) = ಹಾರುವಿಕೆ
ತಟ್ಟೀಕಾ	= ತ**ತ್** + **ಟೀ**ಕಾ	(ತ್+ಟೀ = **ಟ್**)
ಆಕೃಷ್ಟ	= ಆಕೃ**ಷ್** + **ತಃ** (ಟಃ)	(ಷ್+ಟ್ = **ಟ್**)

೫) **ಪರಸವರ್ಣ :** ಪೂರ್ವಪದಾಂತ್ಯ **'ತ'** ವರ್ಗಾಕ್ಷರಕ್ಕೆ, **'ಲ'**ಕಾರ ಪರವಾದರೆ 'ಲ' ಕಾರವೇ ಆದೇಶವಾಗುತ್ತದೆ. ಇದು **ಪರಸವರ್ಣಸಂಧಿ**ಯೆನಿಸುತ್ತದೆ. (ಪರವರ್ಣದ ಸಮಾನ ವರ್ಣಾದೇಶ) ಉದಾ :

ಸತ್ + **ಲೇ**ಖನ = ಸಲ್ಲೇಖನ (ತ್+ಲೇ= ಲ್ಲೆ).

ವಿದ್ಯು**ತ್** + **ಲೇ**ಪನ = ವಿದ್ಯುಲ್ಲೇಪನ.

ತ**ತ್** + **ಲೀ**ನ = ತಲ್ಲೀನ ಇತ್ಯಾದಿ.

೬.) **ಛತ್ವಸಂಧಿ : ಪೂರ್ವಪದಾಂತ್ಯ** ವರ್ಗೀಯ ವ್ಯಂಜನಗಳ ಮುಂದೆ, **'ಶ'** ಕಾರ ಬಂದರೆ ಅದಕ್ಕೆ ವಿಕಲ್ಪವಾಗಿ **'ಛ'** ಕಾರಾದೇಶವಾಗುವುದು. ಇದು **'ಛತ್ವಸಂಧಿ'** ಯೆನಿಸುತ್ತದೆ. ಉದಾ:

---

೧) ಇಂತಹ ಶಬ್ದಗಳಲ್ಲಿ ವಿಸರ್ಗವನ್ನು ಬರೆದರೂ ಸ, ಶ, ಷ ಗಳಂತೆಯೇ ಉಚ್ಚರಿಸುವ ರೂಢಿಯಿದೆ.

ವಿದ್ಯುತ್ + ಶಕ್ತಿ = ವಿದ್ಯುತ್+ಛಕ್ತಿ = ವಿದ್ಯುಚ್ಛಕ್ತಿ- (ಶ್-ಛ)

ಸತ್ + ಶಾಸ್ತ್ರ = ಸತ್ + ಛಾಸ್ತ್ರ= ಸಚ್ಛಾಸ್ತ್ರ - (ಶ್-ಛಾ)

ಉತ್+ ಶೃಂಕಲ = ಉತ್ಛೃಂಕಲ = ಉಚ್ಛೃಂಕಲ -(ಶ್-ಛ)

ಬೃಹತ್ + ಶಿರ = ಬೃಹತ್ಛಿರ = ಬೃಹಚ್ಛಿರ -(ಶಿ-ಛಿ)

ವಿಸರ್ಗಸಂಧಿ : ವಿಸರ್ಗದ ಮುಂದೆ ಸ್ವರ ಅಥವಾ ವ್ಯಂಜನ ಪರವಾದರೆ **ವಿಸರ್ಗದಲ್ಲಿ ಆಗುವ ಬದಲಾವಣೆಗಳನ್ನು 'ವಿಸರ್ಗಸಂಧಿ'** ಯೆನ್ನುತ್ತೇವೆ.

೧) **ವಿಸರ್ಗಕ್ಕೆ** ಸ್ವರ / ಮೃದುವರ್ಣಗಳು ಪರವಾದಾಗ **'ರೇಫಾದೇಶ'**ವಾಗುವುದು:

ಉದಾ : ಜ್ಯೋತಿಃ + **ವರ್ಷ**

ಜ್ಯೋತಿ**ರ್**+ ವರ್ಷ = **ಜ್ಯೋತಿರ್ವರ್ಷ.** (ಃ-ರ್)

ಪುನಃ + **ಪರೀಕ್ಷೆ** (ಅವ್ಯಯ ಸಂಬಂಧ ವಿಸರ್ಗಕ್ಕೆ). (ಃ-ರ್)

ಪುನ**ರ್** + **ಪರೀಕ್ಷೆ** = **ಪುನರ್ಪರೀಕ್ಷೆ.** (ಃ-ರ್)

ಪುನಃ + **ಮಿಲನ** = ಪುನರ್ಮಿಲನ. (ಃ-ರ್)

೨) **ವಿಸರ್ಗಕ್ಕೆ ಖ, ಛ, ಚ, ಟ, ತ, ಶ, ಷ, ಸ** ಗಳು ಪರವಾದರೆ **'ಸ'** ಕಾರಾದೇಶವಾಗುವುದು. ಆ ಸಕಾರಕ್ಕೆ **ವಿಸರ್ಗಾದೇಶ**ವೂ ಆಗಬಹುದು. ಉದಾ:

ನಿಃ + **ಸಂದೇಹ** = ನಿಸ್ಸಂದೇಹ - (:- **ಸ**)

ದುಸ್ + ಸ್ಥಿತಿ = ದುಃಸ್ಥಿತಿ - (ಸ :)

ಗುರುಃ + ತ್ರಾಯತೆ = ಗುರುಸ್ತ್ರಾಯತೆ - (:- ಸ)

೩) **ಸಕಾರ, ವಿಸರ್ಗ**ಗಳಿಗೆ ಉಕಾರಾದೇಶವಾಗಿ **ಗುಣಸಂಧಿ**ಯಾಗುತ್ತದೆ. ಉದಾ:

ತೇಜ**ಸ್**(ಜಃ)+ಬಲ=**ತೇಜೋಬಲ** ಹೀಗೇ **ವಯೋವೃದ್ಧ** (ಸ್-ಉ→ ಓ)

ಮನ**ಸ್**(ನಃ)+ರಂಜನೆ=**ಮನೋರಂಜನೆ** ಇತ್ಯಾದಿ (ಸ್-ಉ→ ಓ)

ಸಾರಸಂಗ್ರಹ

ಸಂಸ್ಕೃತ(೧) ಸಂಧಿಗಳು

೧) ಸ್ವರಸಂಧಿ *೨) ವ್ಯಂಜನಸಂಧಿ* *೩) ವಿಸರ್ಗಸಂಧಿ*

(ಸ್ವರಕ್ಕೆಸ್ವರ ಸೇರುವುದು)

ಸವರ್ಣದೀರ್ಘ ಸಂಧಿ - ಆ, ಈ, ಊಗಳು ಬರುವುದು.
ಗುಣಸಂಧಿ(೧) - ಏ, ಓ, ಅರ್‌ಗಳು ಬರುವುದು.
ವೃದ್ಧಿಸಂಧಿ - ಐ, ಔಗಳು ಬರುವುದು.
ಯಣ್ ಸಂಧಿ - ಯ್, ವ್, ರ್‌ಗಳು ಬರುವುದು.

ವ್ಯ-ವ್ಯಂಜನಕ್ಕೆ /ಸ್ವರ ವ್ಯಂಜನ ಸೇರುವುದು).

೧) ಜಶ್ತ್ವಸಂಧಿ - (ಕ್, ಚ್, ಟ್, ತ್, ಪ್‌ಗಳಿಗೆ ಗ್, ಜ್, ಡ್, ದ್,ಬ್‌ಗಳು)
೨) ಅನುನಾಸಿಕ ಸಂಧಿ - (ಙ್, ಞ್, ಮ್, ನ್, ಣ್ ಗಳು ಬರುವುದು)
೩) ಶ್ಚುತ್ವ ಸಂಧಿ - (ಸಕಾರಕ್ಕೆ ಶ್‌ಕಾರ, ತವರ್ಗಕ್ಕೆ ಚವರ್ಗ)
೪) ಷ್ಟುತ್ವ ಸಂಧಿ - (ಸಕಾರಕ್ಕೆ ಷ, ತವರ್ಗಕ್ಕೆ ಟ ವರ್ಗ)
೫) ಪರಸವರ್ಣಸಂಧಿ - ಪರವರ್ಣವೇ ಆದೇಶ. (ತಕಾರಕ್ಕೆ ಲ್‌ಕಾರಾದೇಶ)
೬) ಛತ್ವಸಂಧಿ (ಶಕಾರಕ್ಕೆ - ಛ್‌ಕಾರಾದೇಶ)

ವಿಸರ್ಗಸಂಧಿ (ವಿಸರ್ಗಕ್ಕೆ) - **ರೇಫ, ಸಕಾರ, ಓಕಾರಾದೇಶ.**

ಪ್ರಕೃತಿ ಸ್ವರೂಪ

ಪ್ರಕೃತಿಸ್ವರೂಪವನ್ನು ತಿಳಿಯುವ ಮುನ್ನ ಕೆಲವು ವಾಕ್ಯಗಳನ್ನು ನೋಡೋಣ. ಉದಾ:

೧) **ಊರಿನ ಕೆರೆ**ಯಲ್ಲಿ ನೀ(ರಿದೆ).
೨) **ಮಗು ಮಳೆ**ಯಿಂದ (ನೆನೆಯಿತು).
೩) **ಅರಮನೆ**ಗೆ ಎಲ್ಲರಿಗೂ (ಪ್ರವೇಶವಿದೆ).
೪) **ರಾಮನು ಕಥೆ**ಯನ್ನು (ಕೇಳಿದನು).

ಈ ವಾಕ್ಯಗಳಲ್ಲಿ - **'ಊರು, ಕೆರೆ, ಮಗು, ಮಳೆ, ಅರಮನೆ, ರಾಮ,** ಇವುನಾಮಪದಗಳ ಮೂಲಸ್ವರೂಪಗಳು. ಹೀಗೆಯೇ **ಇದೆ, ನೆನೆದನು** ಈ ಕ್ರಿಯಾಪದಗಳ ಮೂಲರೂಪ **ಇರ್, ನೆನೆ,** ಈ ನಾಮ, ಕ್ರಿಯಾಪದಗಳ ಮೂಲ ರೂಪಗಳನ್ನು **ಪ್ರಕೃತಿ**

---

೧) ಸಂಸ್ಕೃತ ಶಬ್ದಗಳ ಸ್ವರಗಳಲ್ಲಿ ಸಂಸ್ಕೃತಸಂಧಿ ಸಹಜ. ಆದರೂ (ಸಂಸ್ಕೃತದಂತೆ) ಕನ್ನಡ ಶಬ್ದ ಸ್ವರಗಳನ್ನು ಸೇರಿಸಿ ಸಂಸ್ಕೃತಸಂಧಿ ಮಾಡಿರುವ ಪ್ರಯೋಗಗಳಿವೆ. ಉದಾ : (ಕ) ಊಟ + ಉಪಚಾರ (ಸಂ) = ಊಟೋಪಚಾರ, (ಕ) ಲಂಚ + ಅವತಾರ(ಸಂ) = ಲಂಚಾವತಾರ ಇತ್ಯಾದಿಗಳು ಹೋಲಿಕೆಯ ರೂಢಿಬಲದಿಂದ ಸಲ್ಲುತ್ತಿವೆ.

ಎನ್ನುತ್ತೇವೆ.(Content Words) ಇವುಗಳಲ್ಲಿ ಊರು, ಮೊದಲಾದವು **'ನಾಮಪ್ರಕೃತಿ'** (ಲಿಂಗ) ಗಳೆಂದು ಗುರುತಿಸುತ್ತೇವೆ.

ಹೀಗೆ ಸಾಮಾನ್ಯವಾಗಿ ಪ್ರಕೃತಿಯಲ್ಲಿ ಎರಡು ವಿಧಗಳಿವೆ : ನಾಮಪ್ರಕೃತಿ, ಕ್ರಿಯಾಪ್ರಕೃತಿ

ನಾಮಪ್ರಕೃತಿ : ನಾಮಪದಗಳ ಮೂಲರೂಪಗಳನ್ನು **'ನಾಮಪ್ರಕೃತಿ' (ಪ್ರಾತಿಪದಿಕ)** ಯೆನ್ನುತ್ತೇವೆ. ಉದಾ: ಮರ, ಗಿಡ, ನೆಲ ಇವುಗಳನ್ನು **'ಸಹಜನಾಮ ಪ್ರಕೃತಿ'**ಯೆಂದು ಕರೆಯಲಾಗುತ್ತದೆ. **'ನಾಮಲಿಂಗ'**ವೆಂದೂ ಕರೆಯುವುದುಂಟು. ಇವುಗಳಲ್ಲಿ ಎರಡು ವಿಧ.

೧) ಸಹಜನಾಮಪ್ರಕೃತಿ ೨) ಸಾಧಿತನಾಮಪ್ರಕೃತಿ

I) ಸಹಜ ನಾಮಪ್ರಕೃತಿ : ಇವುಗಳನ್ನು ಭಾಷೆಯ ಮೂಲಸಂಪತ್ತೆನ್ನಬಹುದು.

ಸಹಜ ನಾಮಪ್ರಕೃತಿಗಳನ್ನು **ಏಳು** ಬಗೆಯಾಗಿ ವಿಂಗಡಿಸಬಹುದು: ೧) ವಸ್ತುವಾಚಕಗಳು ೨) ಗುಣವಾಚಕಗಳು ೩) ಸಂಖ್ಯಾವಾಚಕಗಳು ೪) ಪರಿಮಾಣವಾಚಕಗಳು ೫) ದಿಗ್ವಾಚಕಗಳು ೬) ಪ್ರಕಾರವಾಚಕಗಳು ೭) ಸರ್ವನಾಮಗಳು.

೧) **ವಸ್ತುವಾಚಕಗಳು (ನಾಮವಾಚಕ) :** ಚೇತನರೂಪಗಳಾದ ಪ್ರಾಣಿಗಳು, ಅಚೇತನರೂಪಗಳಾದ ಸ್ಥಳ, ವಸ್ತುಗಳ ಹೆಸರುಗಳನ್ನು ತಿಳಿಸುವಶಬ್ದಗಳು (ಮೂರ್ತ ಮತ್ತು ಅಮೂರ್ತರೂಪಗಳು) ಸಾಮಾನ್ಯವಾಗಿ **'ವಸ್ತುವಾಚಕ'** ಗಳೆನಿಸುತ್ತವೆ. ಉದಾ: ಕೃಷ್ಣ, ಬಸವ, ನೆಲ, ಜಲ, ಹೂ, ಪರ್ವತ, ಹಳ್ಳಿ, ಭಕ್ತಿ, ಶಾಂತಿ, ತಾಳ್ಮೆ ಹಸಿವು, ಇತ್ಯಾದಿ. ಇವುಗಳನ್ನು **ರೂಢನಾಮ, ಅಂಕಿತನಾಮ** ಮತ್ತು **ಅನ್ವರ್ಥನಾಮ**ಗಳೆಂದು **ಮೂರು** ಬಗೆ.

ಅ) ರೂಢನಾಮ : ರೂಢಿಯಿಂದ ಬಂದ ನಾಮವಾಚಕಗಳು **'ರೂಢನಾಮ'** ಗಳೆನಿಸುತ್ತವೆ. ಉದಾ: ನೆಲ, ಮನೆ, ಪರ್ವತ, ಮನುಷ್ಯ, ಹಸಿವು, ಶಾಂತಿ, ಕೋಪ ಇತ್ಯಾದಿ.

ಆ) ಅಂಕಿತನಾಮ : ವ್ಯವಹಾರದಲ್ಲಿ ನಿರ್ದಿಷ್ಟವಾಗಿ ಗುರುತಿಸಲು ಇಷ್ಟಾನುಸಾರ ಇಟ್ಟುಕೊಂಡ ಹೆಸರುಗಳು. ಉದಾ: ರವೀಶ, ಗಂಗಾ, ಕಾವೇರಿ, ಭಾರತ, ಶಂಕರ, ಶಾರದಾ, ಚೇತನ್, ಕಿರಣ್, ಭರತ್, ಶರತ್, ಜಾರ್ಜ್-**ಜಾರ್ಜನು, ಮಹಮದ್**(೧) -**ಮೊಹಮದ**, ಅಬ್ಬೂಬಕರ ಇತ್ಯಾದಿಗಳು.

ಇ) ಅನ್ವರ್ಥನಾಮ : ಅರ್ಥಕ್ಕೆ ಅನುಗುಣವಾಗಿಯಿಟ್ಟು ಬಳಸುವ ಹೆಸರುಗಳು. ಉದಾ: ತ್ಯಾಗಿ, ಕುಂಟ, ಗೂನಿ, ರೋಗಿ, ಕಿವುಡ, ವಿದ್ವಾಂಸ ಇತ್ಯಾದಿ.

ಈ) ಗುಣವಾಚಕಗಳು (ವಿಶೇಷ್ಯ) : ವಸ್ತುವಿನ, ಪ್ರಾಣಿಗಳ, -ಗುಣ ಸ್ವಭಾವಾದಿಗಳನ್ನು ತಿಳಿಸುವಶಬ್ದಗಳು **'ಗುಣವಾಚಕ'** ಗಳೆನಿಸುತ್ತವೆ. ಉದಾ: 'ಕಪ್ಪು'-ಕಪ್ಪನೆ, ಕಪ್ಪನೆಯ;

---

೧) **ಇತ್ತೀಚಿಗೆ ಪಾಶ್ಚಾತ್ಯರ ಅರ್ಥಾಕ್ಷರದ ಹೆಸರುಗಳಿಗೆ ಮಾರುಹೋಗಿ ಬಂದ ಫ್ಯಾಷನ್-ಹೆಸರುಗಳು. ಅಂತಹ ಹಿಂದಿ, ಇಂಗ್ಲೀಷ್ ಜಾಯಮಾನದ ಶಬ್ದಗಳನ್ನು ಕನ್ನಡತನಕ್ಕನುಗುಣವಾಗಿ ಸ್ವರಾಂತ ಮಾಡಿಕೊಳ್ಳುವುದೇ ಸೂಕ್ತ.**

ಉದ್ದ-ಉದ್ದನೆ-ಉದ್ದನೆಯ; 'ಪಿರಿದು', ಎಳದು, ಚಿಕ್ಕದು, ಬಿಳಿದು, ಸಣಕಲ, ಬಡಕಲ, ದಡೂತಿ, ಇತ್ಯಾದಿಗಳು. (ಈ ರೀತಿಯ ಗುಣಗಳುಳ್ಳ ವ್ಯಕ್ತಿ, ಪ್ರಾಣಿ, ವಸ್ತುಗಳು 'ವಿಶೇಷ'ಗಳು).

೩) **ಸಂಖ್ಯಾವಾಚಕಗಳು :** ಸಂಖ್ಯೆಯನ್ನು ಹೇಳುವಶಬ್ದಗಳು **'ಸಂಖ್ಯಾವಾಚಕ'** ಗಳೆನಿಸುತ್ತವೆ(೧). ಉದಾ : 'ಒಂದು'-ಒಂದನೆ-ಒಂದನೆಯ; 'ಎಂಟು'-ಎಂಟನೆ-ಎಂಟನೆಯ; ಎರಡು, ನೂರು, ಸಾವಿರ, ಒಂಬತ್ತು(೨) ತೊಂಬತ್ತು ಇತ್ಯಾದಿ. (**ಮತ್ತೊಮ್ಮೆ** - ಮತ್ತು+ಒಮ್ಮೆ - ಒಂದು **'ಒರ್'** ಆದೇಶವಾಗಿ '**ಮ್ಮೆ**' ಪ್ರತ್ಯಯ).

೪) **ಪರಿಮಾಣವಾಚಕ :** ವಸ್ತುಗಳ ಅಳತೆ, ಪರಿಮಾಣ, ಗಾತ್ರ ಇವುಗಳನ್ನು ತಿಳಿಸುವ ಶಬ್ದಗಳು **'ಪರಿಮಾಣ ವಾಚಕ'** ಗಳೆನಿಸುತ್ತವೆ. ಉದಾ: ಹಲವು, ಕೆಲವು, ಅಷ್ಟು(೩), ಇಷ್ಟು, ಎಷ್ಟು ; **ಅನಿತು, ಇನಿತು, ಎನಿತು** (ಹಳಗನ್ನಡ ರೂಪಗಳು).

೫) **ಪ್ರಕಾರವಾಚಕಗಳು :** ವಸ್ತುಗಳ ಸ್ಥಿತಿ, ರೀತಿಗಳನ್ನು ತಿಳಿಸುವ ಶಬ್ದಗಳು **'ಪ್ರಕಾರ ವಾಚಕ'** ಗಳೆನಿಸುತ್ತವೆ. ಉದಾ: ಅಂಥಹ→ಅಂತಹ-ಅಂತ-ಅಂಥ; ಎಂಥಹ→ಎಂತಹ-ಎಂಥ-ಎಂತ; ಇಂಥಹ→ಇಂತಹ-ಇಂತ; ಹಾಗೆ, ಹೀಗೆ ಇತ್ಯಾದಿಗಳು.

೬) **ದಿಗ್ವಾಚಕಗಳು :** ದಿಕ್ಕುಗಳ ಹೆಸರನ್ನು ಸೂಚಿಸುವ ಶಬ್ದಗಳು **'ದಿಗ್ವಾಚಕ'**ಗಳೆನಿಸುತ್ತವೆ. ಉದಾ: ಮೂಡಲ್-ಮೂಡ (ಪೂರ್ವ), ಪಡುವ (ಪಶ್ಚಿಮ), ತೆಂಕ (ದಕ್ಷಿಣ), ಬಡಗ (ಉತ್ತರ), ತೆಂಕಲು, ಪಡುವಲು, ತೆಂಕಣ, ಮೂಡಣ, ಎತ್ತಣ, ಅತ್ತ, ಇತ್ತ, ನಡು (ಸ್ಥಳ), ಮೇಲೆ, ಕೆಳಗೆ ಇತ್ಯಾದಿ.

೭) **ಸರ್ವನಾಮಗಳು :** ನಾಮಪದಗಳ ಸ್ಥಾನದಲ್ಲಿ ಅವುಗಳ ಬದಲಾಗಿ ಬಳಸುವ ಶಬ್ದಗಳು **'ಸರ್ವನಾಮ'** ಗಳೆನಿಸುತ್ತವೆ. ಉದಾ: ಅದು, ಅವನು, ಅವಳು, ಇದು, ಇವನು, ಇವಳು, ನೀನು, ನಾನು, ಎಲ್ಲ (೪) ಇತ್ಯಾದಿ.

ಇವುಗಳಲ್ಲಿ **ಮೂರು ವಿಧ**ಗಳನ್ನು ಗುರುತಿಸಬಹುದು. ಅವು ಕೆಳಗಿನಂತಿವೆ :

---

೧) ಈ ಸಂಖ್ಯಾವಾಚಕಗಳನ್ನು ಹೊಂದಿರುವ ನಾಮಗಳು 'ಸಂಖ್ಯೆಯವಾಚಕ'ವೆನಿಸುತ್ತವೆ. ಉದಾ: ಐದು ಮಂದಿ, ನಾಲ್ಕು ಜನ್ಮ ಎರಡು ಹಣ್ಣು.

೨) 'ಒಂಬತ್ತು' ಈ ರೀತಿ ಮಹಾಪ್ರಾಣ ಬಳಸುವುದು ಸೂಕ್ತವಲ್ಲ.

೩) ಆಟು, ಈಟು, ಏಟು - ರೂಢಿಯ ಆಡುನುಡಿಗಳಲ್ಲಿ ಕಾಣುತ್ತೇವೆ.

೪) ಎಲ್ಲಾ ಜನಗಳು, ಎಲ್ಲಾ ಜನರು ರೂಢಿಯಿಂದ ಬಂದ ಅಸಹಜಪ್ರಯೋಗ ಇಲ್ಲೆಲ್ಲ 'ಎಲ್ಲ' ಪ್ರಯೋಗವೇ ಸೂಕ್ತ.

೧) **ಪುರುಷಾರ್ಥಕ ಸರ್ವನಾಮ :**

ಪುರುಷ	**ಏಕವಚನ**	**ಬಹುವಚನ**
ಅ) ಪ್ರಥಮಪುರುಷ (ಅನ್ಯಾರ್ಥಸೂಚಕ)	ಅದು, ಅವನು, ಅವಳು,ತಾನ್(೧),ತಾನು;	ಅವು, ಅವರು, ಇವು ತಾಮ್-ತಾವು
ಆ) ಮಧ್ಯಮಪುರುಷ (ಎದುರಿಗಿರುವ ಎಂದರ್ಥ)	ನೀನ್→ ನೀನು ನಿನ್ನ	→ನೀವು →ನಿಮ್ಮ
ಇ) ಉತ್ತಮಪುರುಷ ತನಗೆ ಅನ್ವಯ	ನಾನ್(೧)→ನಾನು ನಾನು→ನನ್ನ	ನಾಮ್→ನಾವು

(ಇಲ್ಲಿ ಸ್ವರಾಂತವಾದ ಶಬ್ದಗಳು ಹೊಸಗನ್ನಡ ಶಬ್ದಗಳು.) ಉಳಿದವು ಹಳಗನ್ನಡ ರೂಪಗಳು.

ತಾನು, ತಾವು, ಇವುಗಳನ್ನು **ಆತ್ಮಾರ್ಥಕ ಸರ್ವನಾಮ**ಗಳೆಂದು ಕರೆಯುವ ವಾಡಿಕೆಯಿದೆ.

೨) **ಪ್ರಶ್ನಾರ್ಥಕ ಸರ್ವನಾಮಗಳು :** ಪ್ರಶ್ನಾರ್ಥಕವಾದ ಸರ್ವನಾಮಗಳು. ಉದಾ: ಏನು? ಏಕೆ? ಏತಕ್ಕೆ? ಯಾವುವು?ಯಾರ? ಯಾವುದರ? ಎಲ್ಲಿ? ಯಾರು? ಇತ್ಯಾದಿ.

II **ಸಾಧಿತ ನಾಮಪ್ರಕೃತಿ (ಲಿಂಗ) :** ಮೂರುವಿಧ.

೧) ಸಮಾಸಲಿಂಗ ೨) ತದ್ಧಿತಲಿಂಗ ೩) ಕೃದಂತಲಿಂಗ

೧) **ಅರಮನೆ, ಅಂಗೈ** - ಈ ರೂಪಗಳನ್ನು ಬಿಡಿಸಿದಾಗ, ಕ್ರಮವಾಗಿ ಅರಸ(ನ)+ಮನೆ, ಕೈಯ್(ಅ)+ಅಡಿ ಎಂದಾಗುತ್ತವೆ. ಇಲ್ಲಿ **'ಎರಡು ಪದಗಳನ್ನು ಸೇರಿಸಿ ಒಂದು ವಿಶಿಷ್ಟವಾದ ಅರ್ಥದ ರೂಪಗಳನ್ನು ಮಾಡಿಕೊಳ್ಳಲಾಗುತ್ತದೆ'**. ಈ ರೂಪಗಳನ್ನು **'ಸಾಧಿತ ನಾಮಪ್ರಕೃತಿ'** ಯೆನ್ನಲಾಗುತ್ತದೆ. ಇವು **'ಸಮಾಸಲಿಂಗ'** ಗಳೆನ್ನುತ್ತೇವೆ.

೨) ಹಣವನ್ನು (ಉಳ್ಳವ)+ವಂತ = **ಹಣವಂತ**, ಮಾಲೆಯನ್ನು+ಗಾರ= (ಮಾಡುವವನು) **ಮಾಲೆಗಾರ** - ಇವು ಕೆಲವು ಅರ್ಥಗಳಲ್ಲಿ ಪ್ರತ್ಯಯಗಳನ್ನು ಸೇರಿಸಿಮಾಡಿಕೊಂಡ **'ತದ್ಧಿತಲಿಂಗ'**ಗಳು.

೩) **ಮಾಡಿದುದರ** - ಮಾಡು+ದ+ಅ. **ಕೂಡಿದುದರ** - ಕೂಡು+ದ+ಉದ+ಅ- ಧಾತುಗಳು ಕೃತ್‌ಪ್ರತ್ಯಯ ಪಡೆದು ರೂಪುಗೊಂಡ **'ಕೃದಂತಲಿಂಗ'**ಗಳು.

ಮೇಲಿನಂತೆ ಈ ಮೂರು ಬಗೆಯ **ಸಾಧಿತಪ್ರಕೃತಿ** ಗಳು, ಈ ಸಾಧಿತ ರೂಪಗಳು ಪ್ರತ್ಯಯವನ್ನು ಪಡೆದು ಪದವೆನಿಸುತ್ತವೆ. ಉದಾ: ಮಾಡಿದುದರ + ಅಲ್ಲಿ = ಮಾಡಿದುದರಲ್ಲಿ, ಹಣವಂತ + ಇಂದ = ಹಣವಂತನಿಂದ

ಅರಮನೆ+ಅನ್ನು (ದ್ವಿ)=**ಅರಮನೆಯನ್ನು** (ಪದ). ಹಣವಂತ+ಇಂದ (ತೃ) =**ಹಣವಂತನಿಂದ**

---

೧) ಇಲ್ಲಿ ಆವರಣದಲ್ಲಿ ತೋರಿಸಿರುವವು ಹಳಗನ್ನಡರೂಪಗಳು. ಅವು ಸಾಮಾನ್ಯವಾಗಿ ವ್ಯಂಜನಾಂತಗಳಾಗಿರುತ್ತವೆ.

ಕೂಡಿದುದು+ಅನ್ನು (ಪ್ರ)=**ಕೂಡಿದುದನ್ನು** (ಪದ). ಮಾಡಿದುದು+ಅಲ್ಲಿ (ಸಪ್ತ)= ಮಾಡಿದುದರಲ್ಲಿ.

೨) ಕ್ರಿಯಾಪ್ರಕೃತಿ (ಧಾತು) :

ಇದರಲ್ಲಿ ಎರಡು ವಿಧ : ೧) ಸಹಜಧಾತು ೨) ಸಾಧಿತ (ನಿಷ್ಪನ್ನ) ಧಾತು.

೧) ಈ ಕ್ರಿಯಾಪದದ ಮೂಲ ರೂಪಗಳನ್ನು **ಕ್ರಿಯಾಪ್ರಕೃತಿ** ಅಥವಾ **ಧಾತು**ಗಳೆನ್ನುತ್ತೇವೆ. ಕೆಲವು ಧಾತುಗಳು ಪ್ರತ್ಯಯರಹಿತವಾಗಿವೆ. ಇವು **ಸಹಜಧಾತು** ಅಥವಾ 'ನಿಜಧಾತು'ಗಳೆನಿಸುತ್ತವೆ. ಉದಾ: ನಡೆ, ನುಡಿ, ಆಡು, ಕೇಳು, ಬೀಳು ಇತ್ಯಾದಿ.

೨) **'ರಕ್ಷಿಸು'** ಇವುಗಳನ್ನು ಬಿಡಿಸಿದಾಗ ರಕ್ಷ+ಇಸು ('ರಕ್ಷ' ಧಾತು ಪ್ರೇರಣಾರ್ಥದ 'ಇಸು' ಸೇರಿ ಸಾಧಿತವಾಗಿದೆ). ನೆಗೆದಾಡು=ನೆಗೆ+ಆಡು (ಎರಡು ಬೇರೆ ಎರಡು ಧಾತುಗಳು ಸೇರಿ ಒಂದು ಸಾಧಿತಧಾತುವಾಗಿದೆ). ಇವುಗಳನ್ನು **'ಸಾಧಿತಧಾತು'** ಅಥವಾ 'ನಿಷ್ಪನ್ನಧಾತು' (Functional verbs) ಗಳೆನ್ನಲಾಗುತ್ತದೆ. (ಹೆಚ್ಚಿನ ವಿವರ ಕ್ರಿಯಾಪದ ಪ್ರಕರಣದಲ್ಲಿದೆ.)

ಸಾರಸಂಗ್ರಹ

ಪ್ರಕೃತಿ (ಲಿಂಗ)[೧] - ಪದಗಳ ಮೂಲರೂಪ

೧. ನಾಮಪ್ರಕೃತಿ (ಪ್ರಾತಿಪದಿಕ) | **೨. ಕ್ರಿಯಾಪ್ರಕೃತಿ (ಧಾತು)**

ಅರಸ, ಮರ, ಹಳ್ಳಿ (ಮೂರ್ತ ಮತ್ತು ಅಮೂರ್ತರೂಪ) | ಬೇಡು, ನೀಡು, ಕಾಡು

I) ಸಹಜನಾಮಪ್ರಕೃತಿ II) ಸಾಧಿತನಾಮಪ್ರಕೃತಿ | I) ಸಹಜಧಾತು II) ನಿಷ್ಪನ್ನಧಾತು

೧. ವಸ್ತುವಾಚಕ (ನಿಷ್ಪನ್ನ ರೂಪಗಳು) | (ನಿಜಧಾತು) (ಸಾಧಿತಧಾತು)

(ರೂಢನಾಮ, ಅಂಕಿತನಾಮ, ಅನ್ವರ್ಥನಾಮ) | ನಿಲ್ಲು, ಗೆಲ್ಲು ಕೂಡಿಹಾಕು,

೨. ಗುಣವಾಚಕಗಳು-ಗುಣಸ್ವಭಾವ | **೧. ಸಮಾಸಗಳು:**

೩. ಸಂಖ್ಯಾವಾಚಕ-(೧-೯೯ ರವರೆಗೆ)[೨] | (ಪದ+ಪದ)ತಲೆಯಲ್ಲಿ+ನೋವು=ತಲೆನೋವು

೪. ಪರಿಮಾಣವಾಚಕ-ಅಳತೆ, ಗಾತ್ರ | **೨. ತದ್ಧಿತಗಳು:**

೫. ಪ್ರಕಾರವಾಚಕ - ಅಂಥಹ | (ನಾ.ಪದ+ತ.ಪ್ರತ್ಯ) = ಮಾಲೆಗಾರ

೬. ದಿಗ್ವಾಚಕಗಳು - ದಿಕ್ಕುಗಳು

೩) ಕೃದಂತಗಳು: ಮಡಿ+ದ+ಅ=ಮಡಿದನ (ಧಾ+ಕೃ.ಪ್ರ)

೭. ಸರ್ವನಾಮಗಳು (ನಾಮದಬದಲಾಗಿ ಬರುವವು)

ಪ್ರಶ್ನಾರ್ಥಕ, ಪುರುಷಾರ್ಥಕ, ಆತ್ಮಾರ್ಥಕ

---

೧) ಇವು ಕನ್ನಡ ಸಂಖ್ಯಾವಾಚಕಗಳು ಸಾವಿರದ ಮುಂದಿನ ಸಂಖ್ಯಾವಾಚಕಗಳು ತದ್ಭವ ಇಲ್ಲವೆ ಸಂಸ್ಕೃತ ಸಂಖ್ಯಾವಾಚಕಗಳಾಗಿವೆ.

ಪ್ರತ್ಯಯ

ಈ ಹಿಂದೆ ಪರಿಚಯಿಸಿದ ಪ್ರಕೃತಿ (ಲಿಂಗ) ಗಳನ್ನು ಆಶ್ರಯಿಸಿಕೊಂಡು ಅವುಗಳ ಪರಕ್ಕೆ ಪ್ರತ್ಯಯಗಳು ಬರುತ್ತವೆ. ಉದಾ :

೧) ಸರಸ್ವತಿ + **ಅನ್ನು** = ಸರಸ್ವತಿಯನ್ನು   ೨) ನೋಡಿದನು = ನೋಡು+ದ+**ಅನು**

೩) ಕಬ್ಬಿಗನಿಂದ= ಕಬ್ಬಿಗ+**ಇಂದ**   ೪) ಬೇಡಿದವನಲ್ಲಿ = ಬೇಡಿದವನ+**ಅಲ್ಲಿ**

ಕೇವಲ ಪ್ರಕೃತಿಯನ್ನಾಗಲಿ ಕೇವಲ ಪ್ರತ್ಯಯವನ್ನಾಗಲಿ ಬಳಸಬಾರದು. ಎರಡೂ ಕೂಡಿದಾಗಲೇ ವಿಶಿಷ್ಟಾರ್ಥದ ಪದವನ್ನು ಪಡೆಯಬಹುದು.

ಮೇಲಿನ ನಾಲ್ಕುರೂಪಗಳಲ್ಲಿ ನಾಲ್ಕುಬಗೆಯ ಪ್ರತ್ಯಯಗಳಿರುವುದನ್ನು ಗುರುತಿಸಬಹುದು. ಹೀಗೆಯೇ ಪ್ರತ್ಯಯಗಳು ನಾಲ್ಕು ವಿಧವಾಗಿವೆ. ೧) ವಿಭಕ್ತಿ ಪ್ರತ್ಯಯ ೨) ಆಖ್ಯಾತಪ್ರತ್ಯಯ ೩) ತದ್ಧಿತ ಪ್ರತ್ಯಯ ೪) ಕೃತ್ಪ್ರತ್ಯಯ

೧) ವಿಭಕ್ತಿ (ಪ್ರತ್ಯಯ) :- ***ಆ ಪದದ ಅರ್ಥವನ್ನು ವಿಭಾಗಿಸಿ ಕರ್ತೃ, ಕ್ರಿಯೆಗಳಿಗಿರುವ ಸಂಬಂಧವನ್ನು ತಿಳಿಸುತ್ತವೆ.*** ಅದಕ್ಕೆ **ವಿಭಕ್ತಿ**ಯೆಂಬ ಹೆಸರಿದೆ. ಇವುಗಳನ್ನು ರೂಢಿಯಿಂದ **'ವಿಭಕ್ತಿ ಪ್ರತ್ಯಯ'**ಯೆಂದು ಕರೆಯಲಾಗುತ್ತಿದೆ. ಇವು ಸ್ವತಃ ಅರ್ಥವಿಲ್ಲದೆ, ಬೇರೆ ಬೇರೆ ಅರ್ಥಗಳಲ್ಲಿ (೧) ನಾಮಪ್ರಕೃತಿಗಳೊಡನೆ ಮುಂದೆ ಸೇರುವ ಸಂಕೇತಶಬ್ದಗಳೆನ್ನಬಹುದು. ಈ ಪ್ರತ್ಯಯಗಳು **ಏಳು** (೨)**: ಉ, ಅನ್ನು, ಇಂದ, ಕೆ (ಗೆ, ಕ್ಕೆ), ದೆಸೆಯಿಂದ, ಅ,ಅಲ್ಲಿ.** ಇವುಗಳು **'ನಾಮಪ್ರಕೃತಿ'**ಯೊಂದರ ಮುಂದೆ ಬಂದಾಗ ನಾಮಪದಗಳಾಗುತ್ತವೆ. ಅವುಗಳನ್ನು ಕೆಳಗೆ ನೋಡಬಹುದು:

ವಿಭಕ್ತಿಗಳು	ವಿಭಕ್ತಿ ಪ್ರತ್ಯಯ+	ನಾಮಪ್ರಕೃತಿ =	ನಾಮಪದ *(ಏಕವಚನ/ ಬಹುವಚನ)*
ಪ್ರಥಮಾ	**'ಉ'**	'ಜೀವನ'	ಜೀವನ/ವು/ ಜೀವನ**ಗಳು**
ದ್ವಿತೀಯಾ	**'ಅನ್ನು'**	ಜೀವನ	ಜೀವನವನ್ನು /ಜೀವನ**ಗಳನ್ನು**
ತೃತೀಯಾ	**'ಇಂದ'**	ಜೀವನ	ಜೀವನದಿಂದ / ಜೀವನ**ಗಳಿಂದ**
ಚತುರ್ಥೀ	**'ಕೆ','ಗೆ','ಕ್ಕೆ'**	ಜೀವನ	ಜೀವನಕ್ಕೆ / ಜೀವನ**ಗಳಿಗೆ**

---

೧) ಮುಂದೆ ಕಾರಕವಿಷಯದಲ್ಲಿ ಈ ಅಂಶವನ್ನು ವಿವರವಾಗಿ ತಿಳಿಸಲಾಗಿದೆ.

೨) ಸಂಬೋಧನಾ ವಿಭಕ್ತಿಯನ್ನು ಬೇರೆ ಪ್ರತ್ಯಯವೆಂದು ಕನ್ನಡದಲ್ಲಿ ಗುರುತಿಸಲಾಗುವುದಿಲ್ಲ. ಏ, ಇರಾ, ಎಲೈ ಇತ್ಯಾದಿ ಸಂಬೋಧನ ವಾಚಕಗಳನ್ನು ಪ್ರಥಮಾ ಪ್ರತ್ಯಯದೊಂದಿಗೆ ಸೇರಿಸಿ ಬಳಸಲಾಗುತ್ತದೆ.

ಪಂಚಮೀ	**'ದೆಸೆಯಿಂದ'**	ಜೀವನ	ಜೀವನದ ದೆಸೆಯಿಂದ/ಗಳ ದೆಸೆಯಿಂದ
ಷಷ್ಠೀ	**'ಅ'**	ಜೀವನ	ಜೀವನದ / ಜೀವನಗಳ
ಸಪ್ತಮೀ	**'ಅಲ್ಲಿ'**(೧)	ಜೀವನ	ಜೀವನದಲ್ಲಿ / ಜೀವನಗಳಲ್ಲಿ (೨)

ಹೀಗೆ ಯಾವುದೇ ನಾಮಪ್ರಕೃತಿಗೆ ಈ ಪ್ರತ್ಯಯಗಳನ್ನು ಹತ್ತಿಸಿ ಆಯಾ ವಿಭಕ್ತಿ, ಲಿಂಗ, ವಚನಗಳಿಗನುಸಾರವಾದ ರೂಪಗಳನ್ನು ಮಾಡಿಕೊಳ್ಳಬಹುದು. ಇವುಗಳು **'ನಾಮಪದ'** ಗಳೆನಿಸುತ್ತವೆ.

೨) ಆಖ್ಯಾತ ಪ್ರತ್ಯಯ

ಧಾತುಗಳ ಮುಂದೆ ಬರುವ ಪ್ರತ್ಯಯಗಳನ್ನು ಆಖ್ಯಾತ ಪ್ರತ್ಯಯ (ಕ್ರಿಯಾ ವಿಭಕ್ತಿ) ಯೆನ್ನಲಾಗುತ್ತದೆ. ಅವು ಪ್ರಥಮಾದಿ ಮೂರು ಪುರುಷಗಳ, ಏಕವಚನ, ಬಹುವಚನಗಳಲ್ಲಿ ಎರಡೆರಡರಂತೆ **ಆರು** ಪ್ರತ್ಯಯಗಳಿವೆ(೩) **ಆನೆ, ಆರೆ ; ಈಯೆ, ಈರಿ; ಏನೆ, ಏವೆ;** (ಈ ಪ್ರತ್ಯಯಗಳನ್ನು ಪಡೆದ ರೂಪಗಳೇ **'ಕ್ರಿಯಾಪದ'** ಗಳು). ಉದಾ: ಮಾಡುತ್ತಾನೆ (ಪ್ರ.ಏ) ಮಾಡುತ್ತಾರೆ (ಬ); ಮಾಡುತ್ತೀಯ (ಮ.ಏ), ಮಾಡುತ್ತೀರಿ (ಬ); ಮಾಡುತ್ತೇನೆ (ಉ.ಏ), ಮಾಡುತ್ತೇವೆ (ಬ); ಈ ಆರು ಆಖ್ಯಾತಪ್ರತ್ಯಯಗಳು ಕಾಲ, ಪುರುಷ, ವಚನ, ಲಿಂಗ, ಅರ್ಥಗಳಿಗನುಗುಣವಾಗಿ ಬೇರೆ ಬೇರೆಯಾಗುತ್ತವೆ.(ಹೆಚ್ಚಿನ ವಿಚಾರ ಕ್ರಿಯಾಪದ ಪ್ರಕರಣದಲ್ಲಿ ನೋಡಬಹುದು).

೩) ಕೃತ್ಪ್ರತ್ಯಯಗಳು :

ಧಾತುಗಳ ಮೇಲೆ ಅ, ಉತೆ, ಅಲು, ಅದೆ, ಉದು, ಕೆ ಇತ್ಯಾದಿ ಸುಮಾರು ನಲ್ವತ್ಮೂರು ಕೃತ್ಪ್ರತ್ಯಯಗಳು ಸೇರುತ್ತವೆ. ಹೀಗೆ ಸೇರಿದ ರೂಪಗಳು **'ಕೃದಂತ'**ವೆನಿಸುತ್ತವೆ. ಉದಾ: ಅವನು **'ಮಾಡಿದ'** ಕೆಲಸವನ್ನು ನೋಡು. ಇಲ್ಲಿ ಮಾಡು+ದ+ಅ (ಕೃತ್ ಪ್ರತ್ಯಯ) (ಇವುಗಳ ವಿವರವಾದ ಪರಿಚಯ ಮುಂದೆ ಕೃದಂತಪ್ರಕರಣದಲ್ಲಿ ನೋಡಬಹುದು.)

೪) ತದ್ಧಿತಪ್ರತ್ಯಯ :

ನಾಮಪದಗಳ ಮೇಲೆ ಬೇರೆ ಬೇರೆ ಅರ್ಥಗಳಲ್ಲಿ **ಇಗ, ವಂತ, ಕಾರ, ಗಾರ** ಇತ್ಯಾದಿ ಸುಮಾರು ಇಪ್ಪತ್ತಕ್ಕೂ ಹೆಚ್ಚು ಪ್ರತ್ಯಯಗಳು ಬರುತ್ತವೆ. ಹೀಗೆ ಆದರೂಪಗಳು **'ತದ್ಧಿತಾಂತ'**ಗಳು. ಉದಾ : **'ಮೋಸಗಾರನ'** ಕೂಡ ಬೆರೆಯಬಾರದು, ಇಲ್ಲಿ ಮೋಸವನ್ನು+ಮಾಡುವವನು (ಎಂಬ ಅರ್ಥದಲ್ಲಿ) **'ಗಾರ'** ತದ್ಧಿತಪ್ರತ್ಯಯ ಬಂದಿದೆ. (ಹೆಚ್ಚಿನ ವಿವರವನ್ನು ತದ್ಧಿತ ಪ್ರಕರಣದಲ್ಲಿ ನೋಡಬಹುದು.)

---

೧) ಹೀಗೆಯೇ ಏಳು ಹಳಗನ್ನಡ ವಿಭಕ್ತಿ ಪ್ರತ್ಯಯಗಳಿವೆ. ಅವು ಕ್ರಮವಾಗಿ ವಿಭಕ್ತಿಗಳಿಗನುಸಾರ ಮ್, ಅಮ್, ಇಮ್, ಕೆ(ಗೆ), ಅತ್ತಣಿಂ, ಅ, ಒಳ್ ಈ ಪ್ರತ್ಯಯಗಳನ್ನು 'ಇಳೆ' ಪ್ರಕೃತಿಗೆ ಸೇರಿಸಿದರೆ: ಇಳೆ, (ಪ್ರತ್ಯಯ ಲೋಪ), ಇಳೆಯಂ, ಇಳೆಯಿಂ, ಇಳೆಗೆ, ಇಳೆಯತ್ತಣಿಂ, ಇಳೆಯ, ಇಳೆಯೊಳ್ ಎಂಬ ರೂಪಗಳಾಗುತ್ತವೆ.

೨) ಟೊಂಗೆ, ಮಡು, ನಯನ - ಈ ಪ್ರಕೃತಿಗಳಿಗೂ ಇದೇ ರೀತಿ ಹತ್ತಿಸಿ ರೂಪ ಬದಲಾವಣೆ ಗಮನಿಸಿ?

೩) ಆರು ಹಳಗನ್ನಡ ಆಖ್ಯಾತ ಪ್ರತ್ಯಯಗಳಿವೆ : ಅಂ, ಅರ್; ಅಯ್, ಇರ್; ಎನ್, ಎವು (ಪುಲ್ಲಿಂಗಾತ್ಮಕ).

ವಚನ

'ವಚನ'ವೆಂದರೆ ಸಂಖ್ಯೆಯನ್ನು ತಿಳಿಸುವುದು. ಒಂದು ವಸ್ತುವನ್ನು ಹೇಳುವ ಪ್ರತ್ಯಯ ರೂಪಕ್ಕೆ **'ಏಕವಚನ'** ಪ್ರಕೃತಿ ರೂಪದಲ್ಲೇ ಸಲ್ಲುತ್ತವೆ. ಎರಡು ಅಥವಾ ಎರಡಕ್ಕಿಂತ ಹೆಚ್ಚು ವಸ್ತುಗಳನ್ನು ಸೂಚಿಸುವ ಪ್ರತ್ಯಯರೂಪವನ್ನು **'ಬಹುವಚನ'**ವೆನ್ನುತ್ತೇವೆ. ಅವು : **ಗಳು, ಅರು, ದಿರು, ಇರು, ಕಳು, ಅವು**(ವು) ಇತ್ಯಾದಿ ಪ್ರತ್ಯಯಗಳು. ಉದಾ: ೧) **ಕೋತಿ** ಹಣ್ಣನ್ನು ತಿನ್ನುತ್ತದೆ. ೨)ಕೋತಿ**ಗಳು** ಹಣ್ಣನ್ನು ತಿನ್ನುತ್ತವೆ. ೩) **ಬಾಲಕನು** ಬಂದನು ೪) **ಬಾಲಕರು** ಬಂದರು. ಇಲ್ಲಿ ಮೊದಲವಾಕ್ಯಗಳಲ್ಲಿ ಗುರುತು ಮಾಡಿದ ಪದಗಳು ಏಕವಚನ. ಹಾಗೆಯೇ ಎರಡನೆಯ ವಾಕ್ಯಗಳಲ್ಲಿ ಗುರುತು ಮಾಡಿದ ರೂಪಗಳು ಬಹುವಚನ. ಇಲ್ಲಿ 'ಕರ್ತೃ' ಪದದ ವಚನವೇ ಕ್ರಿಯಾಪದದ ವಚನವಾಗಿರುವುದನ್ನು ಗಮನಿಸಬೇಕು.

ಹಿಂದೆಹೇಳಲಾದ **ಎಲ್ಲ ನಾಮಪ್ರಕೃತಿಗಳ ಮೇಲೆ ಈ ವಚನಪ್ರತ್ಯಯಗಳು ಬರುತ್ತವೆ.**

<u>ಏಕವಚನ, ಬಹುವಚನ ಪ್ರತ್ಯಯ ಮತ್ತು ಕೆಲವು ನಾಮರೂಪಗಳು</u> :

ಏಕವಚನ ರೂಪ,ನಾಮ ಪ್ರಕೃತಿ (ಪ್ರಕೃತಿ ರೂಪದಲ್ಲೇ)	+ಬಹುವಚನ ಪ್ರತ್ಯಯಗಳು	=ಬಹುವಚನ ರೂಪಗಳು
ಮಹಾಜನ	**'ಗಳು/ ತೆ'**	ಮಹಾಜನ**ಗಳು**/ ಜನತೆ.(೧)
ಹೆಣ್ಣು, ಮನೆ, ಭಾವನೆ	-"-	ಹೆಣ್ಣು**ಗಳು**, ಮನೆಗಳು, ಭಾವನೆಗಳು
ನದಿ, ಕರು, ಚಿಂತೆ	-"-	ನದಿ**ಗಳು**, ಕರುಗಳು.
ತಾರೆ, ಮುನಿ,	**'ಗಳ್'**	**ತಾರೆಗಳ್, ಮುನಿಗಳ್ (ಹ.ಗ).**
ವೀರ, ಶೂರ,	**'ಅರ್'**	**ವೀರರ್/ ಶೂರರ್ (ಹ.ಗ).**
ದಾಸ, ಹಿರಿಯ	**'ಅರು'**	ದಾಸ**ರು**, ಹಿರಿಯರು.
ತಂಗಿ, ಅತ್ತೆ,	-"-	ತಂಗಿಯ**ರು**, ಅತ್ತೆಯರು.
ತಾಯಿ, ಅಳಿಯ	**'ಅಂದಿರು'**	ತಾಯಂದಿರು, ಅಳಿಯಂದಿರು.
ಅಜ್ಜ, ಅಮ್ಮ, ಮಗಳ್	-"-	ಅಜ್ಜಂದಿರು, ಅಮ್ಮಂದಿರು. (**ಅಜ್ಜಂದಿರ್, ಅಕ್ಕಂದಿರ್**)ಹ.ಗ.
ಮಗು	**'ಕ್ಕಳು'**	ಮ**ಕ್ಕಳು**.
ಅತ್ತೆ	**'ಅರು/ಕಳು'**	ಅತ್ತೆಯ**ರು**, ಅತ್ತೆಯರ್ಕಳು

(೧) 'ಮಹಾಜನತೆ' ನೋಡುವರು - ಇಂತಹ ಬಹುವಚನ ಪ್ರಯೋಗಗಳಿವೆ.

ತಂದೆ	-"-	**ತಂದೆಯರು, ತಂದೆಯರ್ಕಳು**(೩)
ಪೀರ	-"-	ಪೀರರು, ಪೀರರ್ಕ**ಳು**.
ಅಮರ	-"-	ಅಮರರು, ಅಮರರ್ಕ**ಳು**.(೨)
ನಾನು, ಅದು, ಹೊಸದು	**'ವು'**	ನಾವು, ಅವು, ಹೊಸ**ವು**.
ಅಂಥದು	-"-	ಅಂಥ**ವು**.
ಚಿಕ್ಕದು, ನೀನು, ತಾನು	-"-	ಚಿಕ್ಕವು, ನೀವು ತಾ**ವು**(೧)
ಅಂತಹದು.	-"-	ಅಂತಹ**ವು**.
ಮೂರನೆಯದು	-"-	ಮೂರನೆಯ**ವು**.
ತಾನ್/ತಾನು, ನೀನ್/ನೀನು	**ಮ**	**ತಾಮ್**(೩) (ತಾವು) **ನೀಮ್** (ನೀವು)

(ಸಾಮಾನ್ಯವಾಗಿ ಹಳಗನ್ನಡ ಬಹುವಚನ ರೂಪಗಳು **ವ್ಯಂಜನಾಂತ**ವಾಗಿರುತ್ತವೆ ...)

೧) ಕನ್ನಡದಲ್ಲಿ ಪ್ರಸಿದ್ಧವಾಗಿ ಎರಡೇವಚನಗಳಿರುವುದು(೪) (ದ್ವಿವಚನವನ್ನು ಉಚಿತವೇಳೆಯಲ್ಲಿ ತಿಳಿಯಬೇಕಾಗುತ್ತದೆ. ಉದಾ: ಕಣ್ಣು**ಗಳು**, ತೋಳು**ಗಳು**, ರಾಮಲಕ್ಷ್ಮಣ**ರು**). ಇಲ್ಲಿರುವ ಪ್ರತ್ಯಯಗಳು ದ್ವಿವಚನಸೂಚಕಗಳು.

೨) ಕೆಲವು ವೇಳೆ ನಿರ್ದಿಷ್ಟವಾಗಿ ತಿಳಿಸಬೇಕಾದಾಗ **ಸಂಖ್ಯೆಗಳನ್ನು ಸೇರಿಸಿ** ಹೇಳುವುದುಂಟು. ಉದಾ: **ನವ**ರಸಗಳು, **ತ್ರಿ**ಲೋಕಗಳು, **ನಾಲ್ಕು** ವೇದಗಳು.

ಈ ಮೇಲಿನ ವಚನಗಳನ್ನು ವಾಕ್ಯಗಳಲ್ಲಿ **ಕರ್ತೃ, ಕರ್ಮ, ಕ್ರಿಯೆ**ಗಳಿಗೆ ಹೇಗೆ ಅನ್ವಯಿಸುತ್ತದೆ ಎಂಬುದನ್ನು ಗಮನದಲ್ಲಿಡಬೇಕಾಗುತ್ತದೆ.

ವಚನಪಲ್ಲಟ

ಕೆಲವು ವಿಶೇಷ ಸಂದರ್ಭಗಳಲ್ಲಿ ವಚನಬದಲಾವಣೆಯಾಗುತ್ತದೆ.

೧) **ವ್ಯಕ್ತಿಗಳು ಅನೇಕವಿರುವ ಜಾತಿ** - ಸಮುದಾಯ ವಾಚಕದ ಮೇಲೆ **ಬಹುವಚನಕ್ಕೆ 'ಏಕವಚನ'** ಬರುತ್ತದೆ.

ಉದಾ : ಅ) ಜ**ನ** ಬಂದಿ**ತು**. ಆ) ಸ**ಭೆ** ಮುಗಿಯಿ**ತು**. ಇ) ಮಹಾಜನ**ತೆ**ಯ ಆಶೀರ್ವಾದವಿದೆ.

---

೧) ಹಳಗನ್ನಡದಲ್ಲಿ ಪ್ರಥಮಪುರುಷ ಬಹುವಚನ ಅರ್ಥವಿದ್ದು, ಈಗ ಮಧ್ಯಮಪುರುಷ ಗೌರವಾರ್ಥದಲ್ಲಿ ಪ್ರಯೋಗವಾಗಿ ಬಳಕೆಯಾಗುತ್ತಿದೆ.

೨) ರೂಢಿಯಲ್ಲಿ ಈ ಪ್ರಯೋಗಗಳಿವೆ. ಕೆಲವು 'ಅರು' ಮತ್ತು 'ಕಳು' ಎರಡೂ ಪ್ರತ್ಯಯಗಳನ್ನು ಪಡೆದಿರುವುದುಂಟು.

೩) ಇವು ಹಳಗನ್ನಡ ಬಹುವಚನ ರೂಪಗಳು. ಇಲ್ಲಿ ಅರ್, ಕಳ್, ಎರಡು ಪ್ರತ್ಯಯಗಳು ಕವಿ ಪ್ರಯೋಗಗಳಲ್ಲಿವೆ.ಇಂದೂ ಮಕ್ಕಳುಗಳನ್ನು, ಅವುಗಳನ್ನು -ಈ ರೀತಿ ಎರಡುಪ್ರತ್ಯಯದ ರೂಪಗಳಿವೆ.

೪) ಸಂಸ್ಕೃತದಲ್ಲಿ ಏಕ, ದ್ವಿ, ಬಹುವಚನಗಳೆಂದು ಮೂರು ವಚನಗಳಿವೆ. ಅವುಗಳಿಗೆ ಬೇರೆ ಬೇರೆ ಪ್ರತ್ಯಯಗಳುಂಟು.

೨) **ಗೌರವಾರ್ಥ**ದಲ್ಲಿ ಏಕವಚನಕ್ಕೆ ಬಹುವಚನ ಬರುತ್ತದೆ: ಅ) **ನಮ್ಮ** ತಾಯಿಯರು ಆ) **ನಮ್ಮ** ಗುರುಗ**ಳು**. ನಮ್ಮ **ಪ್ರಧಾನಿಗಳು** ಇತ್ಯಾದಿ

೩) **ಅಪಹಾಸ್ಯಾರ್ಥದಲ್ಲಿ** : ಸ್ವಾಮಿಯ**ವರು** ಹೋಗದೆ ಕೆಲಸವಾಗುವುದಿಲ್ಲವೆ!?

ಲಿಂಗ

'ಲಿಂಗ' ವೆನ್ನುವುದರ ಮೂಲಾರ್ಥ **'ಲಕ್ಷಣ'** ಅಥವಾ **'ಗುರುತು'** ಎನ್ನಬಹುದು. ಕನ್ನಡದಲ್ಲಿ ಭಾಷೆಯ ಜಾಯಮಾನಕ್ಕನುಸಾರವಾಗಿ ಲಿಂಗವ್ಯವಸ್ಥೆಯಿದೆ. ಕನ್ನಡದಲ್ಲಿ ಸಾಮಾನ್ಯವಾಗಿ ಈ ಗುರುತುಗಳ ಅನುಸಾರವಾಗಿ ಲಿಂಗವನ್ನು ನಿರ್ಧರಿಸುತ್ತೇವೆ[೧]. ಕನ್ನಡದಲ್ಲಿ **ಮೂರು** ಲಿಂಗಗಳಿವೆ : ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ. ಉದಾ: ೧) **'ವಿಶ್ವನಾಥ'**ನು ಆಟದಲ್ಲಿ ನಿಪುಣನು. ೨) **'ಉಷಾ'** ಓಟದಲ್ಲಿ ಪ್ರಸಿದ್ಧಳು (೩) **'ಚೆಂಡು'** ಕೆಳಗೆ ಬಿತ್ತು.

೧) **ಪುಲ್ಲಿಂಗ :** (ಪುರುಷ) **'ಗಂಡಸು'** ಎಂಬರ್ಥವನ್ನು ಸೂಚಿಸುವ ಶಬ್ದಗಳು **'ಪುಲ್ಲಿಂಗ'**ವೆನಿಸುತ್ತವೆ. ಉದಾ: ರಾಮ, ಕವಿ, ರಾಜ, ಶಿವ, ದುರ್ಜನ, ಸಜ್ಜನ, ಪಂಡಿತ, ಪರಿಣತ, ಒಡೆಯ, ಕಲಾವಿದ, ವಿದ್ವಾಂಸ ಇತ್ಯಾದಿ.

೨) **ಸ್ತ್ರೀಲಿಂಗ :** (ಸ್ತ್ರೀ) 'ಹೆಂಗಸು' ಎಂಬ ಅರ್ಥವನ್ನು ಬೋಧಿಸುವ ಶಬ್ದಗಳು **'ಸ್ತ್ರೀಲಿಂಗ'** ವೆನಿಸುತ್ತವೆ. ಉದಾ: ಸೀತೆ, ತಾಯಿ, ಅರಸಿ, ನಲ್ಲೆ ಇತ್ಯಾದಿ.

೩) **ನಪುಂಸಕಲಿಂಗ :** ಯಾವ ಶಬ್ದಗಳು ನಿರ್ದಿಷ್ಟವಾಗಿ **ಗಂಡು, ಹೆಣ್ಣೆಂದು ಸೂಚಿಸದಿರುವ** ಶಬ್ದಗಳು **'ನಪುಂಸಕಲಿಂಗ'** ಗಳೆನಿಸುತ್ತವೆ. ಉದಾ: ಹಸುಳೆ, ಮಗು, ಕಲ್ಲು, ಶಿಶು, ಪುಸ್ತಕ, ಬಳ್ಳಿ, ಬಂಡಿ, ನೆಲ, ದಂಡು, ಗದ್ದೆ, ಗುಂಪು, ಆಕಾಶ, ಹೂ, ಜನ, ಮಹಾಜನ ಇತ್ಯಾದಿ.

ಹೀಗೆ **ಸಾಮಾನ್ಯವಾಗಿ** ಕನ್ನಡದಲ್ಲಿ ಮೂರುಬಗೆಯಾಗಿ ಲಿಂಗನಿರ್ಧಾರವಿದೆ. ಇವುಗಳಲ್ಲದೆ ಕೆಲವು **ವಿಶೇಷಲಿಂಗ ಪ್ರಕಾರ**[೨]ಗಳನ್ನೂ ಬಳಸಲಾಗುತ್ತದೆ. ಅವು ಕೆಳಕಂಡಂತಿವೆ:

---

೧) ಪುರುಷನಿಗೆ ಮೀಸೆ, ಗಡ್ಡ, ವಿಶಾಲ ಭುಜ ಬಾಹುಗಳೇ ಪುರುಷಲಕ್ಷಣ. ಸ್ತ್ರೀಯರಿಗೆ ದೀರ್ಘ ಕೇಶರಾಶಿ, ಸ್ತನ, ಗರ್ಭಧಾರಣ ಶಕ್ತಿಗಳು ಸ್ತ್ರೀಲಕ್ಷಣ (ಗುರುತು) ಗಳೆನಿಸುತ್ತವೆ. ಸಂಸ್ಕೃತದಲ್ಲಿ ಲಿಂಗ ನಿರ್ಧಾರ ಸುಲಭವಲ್ಲ. ಅಲ್ಲಿ 'ಹೆಂಡತಿ' ಎಂಬರ್ಥದ 'ದಾರ' ನಿತ್ಯ ಪುಲ್ಲಿಂಗ. ಸಂಸ್ಕೃತದಲ್ಲಿ ಪೌರಾಣಿಕ ಹಿನ್ನೆಲೆಯಲ್ಲಿ 'ನದೀ' (ಸ್ತ್ರೀಲಿಂಗ) 'ನದ' ಪುಲ್ಲಿಂಗವೆಂತಲೂ ಕರೆದಿರುವುದುಂಟು. ಕೋಶದಲ್ಲಿ ('ಲಿಂಗಾನುಶಾಸನ') ವೆಂದು ನಿರ್ದಿಷ್ಟಲಿಂಗ ನಿರ್ದೇಶನ ಮಾಡಲಾಗಿದೆ.

೨) ಕೇಶಿರಾಜನು ಈ ವಿಶೇಷ ಭೇದದ ಲಿಂಗಗಳೆಂದು ಪರಿಗಣಿಸಿ 'ಲಿಂಗಮೊಂಬತ್ತು ತೆರಂ'... ಎಂದಿದ್ದಾನೆ. ಅವುಗಳಲ್ಲಿ ಪರಿಚಿತವಾದ ಭೇದಗಳನ್ನು ಹೇಳಲಾಗಿದೆ.

೧) **ಪುನ್ನಪುಂಸಕ ಲಿಂಗಗಳು** : ಕೆಲವು ಶಬ್ದಗಳು ಪುಲ್ಲಿಂಗ ಮತ್ತು ನಪುಂಸಕಗಳಾಗಿ ಬಳಸಲಾಗುತ್ತದೆ; ಅವು **'ಪುನ್ನಪುಂಸಕಲಿಂಗ'** ಗಳೆನಿಸುತ್ತವೆ. ಉದಾ :

ಚಂದ್ರನು ಉದಯಿಸಿದ**ನು**. - (ಪುಲ್ಲಿಂಗ).
ಚಂದ್ರ ಉದಯಿಸಿ**ತು**. - (ನಪುಂಸಕ).
ಶನಿಯು ಕಾಡಿದ**ನು**. - (ಪುಲ್ಲಿಂಗ).
ಶನಿ ಕಾಡಿ**ತು**. - (ನಪುಂಸಕ).

೨) **ಸ್ತ್ರೀನಪುಂಸಕ ಲಿಂಗ** : ದೇವತಾದಿ ಶಬ್ದಗಳು ಸ್ತ್ರೀ ಹಾಗೂ ನಪುಂಸಕಗಳಾಗಿ ಪ್ರಯೋಗವಾಗುತ್ತವೆ. ಇವು **'ಸ್ತ್ರೀನಪುಂಸಕಲಿಂಗ'** ಗಳೆನಿಸುವವು. ಉದಾ :

ದೇವಿ ಒಲಿದ**ಳು**. - (ಸ್ತ್ರೀಲಿಂಗ).
ದೇವಿ ಒಲಿಯಿ**ತು**. - (ನಪುಂಸಕ).
ಲಕ್ಷ್ಮಿ ನೆಲೆಸಿದ**ಳು**. - (ಸ್ತ್ರೀಲಿಂಗ).
ಲಕ್ಷ್ಮಿ ನೆಲೆಸಿ**ತು**. - (ನಪುಂಸಕ).

೩) **ನಿತ್ಯನಪುಂಸಕ ಲಿಂಗಗಳು** : ಯಾವ ಶಬ್ದಗಳು ನಿತ್ಯವಾಗಿ ನಪುಂಸಕವಾಗಿಯೇ ಪ್ರಯೋಗವಾಗುತ್ತವೋ ಅವು **'ನಿತ್ಯನಪುಂಸಕ ಲಿಂಗ'** ಗಳೆನಿಸುತ್ತವೆ. ಉದಾ :

ಶಿಶು, ಕೂಸು, ಮಗು, ದಂಡು, ಜನ, ಎತ್ತು, ಕೋಣ ಇತ್ಯಾದಿ.
ಕೂಸು ಹುಟ್ಟಿ**ತು**. ಸೇನೆ ಬಂದಿ**ತು**. **ಎತ್ತು** ಏರಿಗೆಳೆಯಿ**ತು**.
ಜನ ಸೇರಿತು. ಮಗು ಬಿದ್ದಿತು. **'ಕೋಣ'** ನೀರಿಗೆಳೆಯಿ**ತು**. (೧)

೪) **ವಿಶೇಷ್ಯಾಧೀನಲಿಂಗ (ವಾಚ್ಯಲಿಂಗ)** : ಸರ್ವನಾಮ, ಗುಣವಚನ, ಸಂಖ್ಯಾವಾಚಕಗಳಿಗೆ ಸ್ವತಂತ್ರವಾದ ಲಿಂಗವಿಲ್ಲ. ಅವುಗಳು ಮುಂದಿನ ವಿಶೇಷ್ಯದ ಲಿಂಗವನ್ನೇ ಪಡೆಯುತ್ತವೆ. ಉದಾ :

ಅ) **ಸರ್ವನಾಮ** :	ನೀನು ತಂದೆ	-	(ಪುಲ್ಲಿಂಗ).
	ನೀನು ತಾಯಿ	-	(ಸ್ತ್ರೀ).
	ನೀನು ಪಶು	-	(ನಪುಂಸಕ).
ಆ) **ಗುಣವಾಚಕ** :	ಒಳ್ಳೆಯ ಪುಸ್ತಕ	-	(ನಪುಂಸಕ).
	ಒಳ್ಳೆಯ ಹುಡುಗ	-	(ಪುಲ್ಲಿಂಗ).
	ಒಳ್ಳೆಯ ಹುಡುಗಿ	-	(ಸ್ತ್ರೀ).
ಇ) **ಸಂಖ್ಯಾವಾಚಕ** :	ಮೂರು ಹುಡುಗರು	-	(ಪುಲ್ಲಿಂಗ).
	ಮೂರು ಹುಡುಗಿಯರು	-	(ಸ್ತ್ರೀ).
	ಮೂರು ಪುಸ್ತಕಗಳು	-	(ನಪುಂಸಕ)

(೧) ಈ ಲಿಂಗ ನಿರ್ಧಾರಗಳಿಗೆ ರೂಢಿಯ ಪ್ರಯೋಗಗಳೇ ಆಧಾರವಾಗಿವೆ.

ಸಾರಸಂಗ್ರಹ

'ಲಿಂಗಗಳು' (ಗುರುತುಳ್ಳ ಶಬ್ದಗಳು)

ಸಾಮಾನ್ಯಭೇದ

೧) ಪುಲ್ಲಿಂಗ : ಕವಿ, ರಾಜ, ರವಿ

೨) ಸ್ತ್ರೀಲಿಂಗ : ಸರಸ್ವತಿ, ಕವಯತ್ರಿ

೩) ನಪುಂಸಕ : ಶಿಶು, ಪುಸ್ತಕ, ಜನ

ವಿಶೇಷ ಭೇದ

೧) ಪುನ್ನಪುಂಸಕ ಲಿಂಗ

೨) ಸ್ತ್ರೀನಪುಂಸಕ ಲಿಂಗ

೩) ನಿತ್ಯನಪುಂಸಕಲಿಂಗ

೪) ವಿಶೇಷಾಧೀನ ಲಿಂಗ

೧) ಹಿಂದೆ ಹೇಳಿದ ಎಲ್ಲನಾಮಪ್ರಕೃತಿಗಳು ಲಿಂಗ, ವಚನ, ವಿಭಕ್ತಿಗಳಿಂದ ಕೂಡಿ **'ನಾಮಪದ'**ಗಳೆನಿಸುತವೆ. ಅವು ಲಿಂಗ, ವಚನ, ವಿಭಕ್ತಿಗಳಲ್ಲಿ ರೂಪಬದಲಾವಣೆ ಯಾಗುತ್ತವೆ. ಅವುಗಳನ್ನು ಪಟ್ಟಿಯಲ್ಲಿ ತೋರಿಸಲಾಗಿದೆ :

ವಿ.ಗಳು	ಸ್ತ್ರೀಲಿಂಗ		ಪುಲ್ಲಿಂಗ		ನಪುಂಸಕಲಿಂಗ	
	ಏ.ವ.	ಬ.ವ	ಏ.ವ.	ಬ.ವ	ಏ.ವ	ಬ.ವ.
ಪ್ರ:	ಅತ್ತೆಯು,	ಅತ್ತೆಯರು;	ಮಾವನು,	ಮಾವಂದಿರು;	ಕರುವು,	ಕರುಗಳು.
ದ್ವಿ:	ತಾಯಿಯನ್ನು,	ತಾಯಿಯರನ್ನು;	ತಂದೆಯನ್ನು,	ತಂದೆಯರನ್ನು;	ಮಗುವನ್ನು,	ಮಕ್ಕಳನ್ನು.
ತೃ:	ಸೀತೆಯಿಂದ,	ಸೀತೆಯರಿಂದ;	ರಾಮನಿಂದ,	ರಾಮರಿಂದ ;	ಗುಂಪಿನಿಂದ,	ಗುಂಪುಗಳಿಂದ.
ಚ:	ಗೆಳತಿಗೆ,	ಗೆಳತಿಯರಿಗೆ;	ಅಣ್ಣನಿಗೆ,	ಅಣ್ಣಂದಿರಿಗೆ;	ಜನಕ್ಕೆ,	ಜನಗಳಿಗೆ.
ಪಂ:	ದೇವಿಯ	ದೇವಿಯರ;	ವೀರನ	ವೀರರ;	ಗ್ರಹದ	ಗ್ರಹಗಳ.
	ದೆಸೆಯಿಂದ,	ದೆಸೆಯಿಂದ;	ದೆಸೆಯಿಂದ,	ದೆಸೆಯಿಂದ;	ದೆಸೆಯಿಂದ,	ದೆಸೆಯಿಂದ.
ಷ:	ನಲ್ಲೆಯ,	ನಲ್ಲೆಯರ ;	ರಾಜನ,	ರಾಜರ;	ಮರದ,	ಮರಗಳ.
ಸ:	ಲಕ್ಷ್ಮಿಯಲ್ಲಿ ,	ಲಕ್ಷ್ಮಿಯರಲ್ಲಿ;	ದೇವನಲ್ಲಿ,	ದೇವರಲ್ಲಿ;	ಹೂಪಿನಲ್ಲಿ,	ಹೂಗಳಲ್ಲಿ.

೨) ಹೀಗೆಯೇ ಧಾತುಜನ್ಯಗಳಾದ ಕೃದಂತ, ತದ್ಧಿತಾಂತ, ಸಮಾಸಗಳ ಸಾಧಿತನಾಮ ರೂಪಗಳನ್ನು ಎಲ್ಲ ವಿಭಕ್ತಿಗಳಲ್ಲಿ ಬಳಸಬಹುದು:

ವಿಭಕ್ತಿಗಳು,	ಕೃದಂತ	ತದ್ಧಿತಾಂತ	ಸಮಾಸ
ಪ್ರ:	ಕೂಡಿದನು,	ಬಳೆಗಾರನು,	ಅರಮನೆಯು.
ದ್ವಿ:	ಕೂಡಿದನನ್ನು,	ಬಳೆಗಾರನನ್ನು,	ಅರಮನೆಯನ್ನು.
ತೃ:	ಕೂಡಿದನಿಂದ,	ಬಳೆಗಾರನಿಂದ,	ಅರಮನೆಯಿಂದ.
ಚ:	ಕೂಡಿದನಿಗೆ,	ಬಳೆಗಾರನಿಗೆ,	ಅರಮನೆಗೆ.
ಪಂ:	ಕೂಡಿದನ ದೆಸೆಯಿಂದ,	ಬಳೆಗಾರನ ದೆಸೆಯಿಂದ,	ಅರಮನೆಯ ದೆಸೆಯಿಂದ.
ಷ:	ಕೂಡಿದನ,	ಬಳೆಗಾರನ,	ಅರಮನೆಯ.
ಸ:	ಕೂಡಿದನಲ್ಲಿ,	ಬಳೆಗಾರನಲ್ಲಿ,	ಅರಮನೆಯಲ್ಲಿ.

ಹೀಗೆ ಪ್ರತ್ಯಯಗಳನ್ನು ಹೊಂದಿ ಸಾಧಿತರೂಪಗಳೂ **ನಾಮರೂಪ**ಗಳಾಗುತ್ತವೆ.

ಕಾರಕ ವಿಚಾರ

ವಾಕ್ಯವು ಕ್ರಿಯಾಪದದಲ್ಲಿ ಕೊನೆಗೊಳ್ಳುತ್ತದೆ. ಕ್ರಿಯಾಪದದಿಂದ ವಾಕ್ಯದ ಅರ್ಥವು ಪೂರ್ಣವಾಗುತ್ತದೆ. **ಯಾವುದಕ್ಕೆ ಕ್ರಿಯೆಯಲ್ಲಿ ಅನ್ವಯವಾಗುತ್ತದೆಯೋ ಅಥವಾ ಯಾವುದು ಕ್ರಿಯೆನಡೆಯಲು ಸಹಾಯಕವೋ ಅದಕ್ಕೆ ಕಾರಕವೆಂದು ಹೆಸರು.** ಆ ಕಾರಕವು ನಾಮಪದ ಮತ್ತು ಕ್ರಿಯಾಪದಗಳಿಗಿರುವ ಸಂಬಂಧವನ್ನು ತಿಳಿಸುತ್ತದೆ(೧). ಅಂದರೆ ವಾಕ್ಯದಲ್ಲಿ ಕಾರಕವನ್ನು ಗುರುತಿಸಬಹುದು. ಕೇವಲ ಪ್ರತ್ಯಯವನ್ನು ಕಾರಕವೆನ್ನಲಾಗದು. ಈ ಲಿಂಗ ಸಂಬಂಧವನ್ನು ಹೊಂದಿದ ಪ್ರತ್ಯಯಗಳು ಸಂಬಂಧವನ್ನು ತಿಳಿಸುತ್ತವೆ. **ಪ್ರತ್ಯಯಗಳು ಏಳು. ಕಾರಕಗಳು ಆರು.** ಉಳಿದ ವಿಭಕ್ತಿಗಳಿಗೆ ಕ್ರಿಯೆಯೊಂದಿಗೆ ಅನ್ವಯವಿದ್ದು, ಕಾರಕತ್ವವಿದೆ. (ಷಷ್ಠೀ ವಿಭಕ್ತಿಗೆ ಸಂಬಂದಾರ್ಥವಿದೆ, ಕಾರಕತ್ವವಿಲ್ಲ). ಉದಾ : **ಮರದ** ಕೊಂಬೆ ಇದೆ. ಇಲ್ಲಿ ಮರಕ್ಕೆ 'ಕೊಂಬೆ' ಯಲ್ಲಿ ಅನ್ವಯ ಮರದಣವೆಯೆನ್ನಲಾಗದು. ಅಲ್ಲಿರುವುದು ಸಂಬಂಧ ಮಾತ್ರ. ಹೀಗೆ ಷಷ್ಠೀಗೆ ಕ್ರಿಯೆಯಲ್ಲಿ ಅನ್ವಯವಿಲ್ಲ.

	ಕಾರಕಗಳು,	ಅರ್ಥಗಳು	ಬರುವ ಪ್ರತ್ಯಯಗಳು
೧)	ಕರ್ತೃಕಾರಕ	ಕರ್ತೃ	ಸಾಮಾನ್ಯವಾಗಿ ಪ್ರಥಮೆಯ **'ಉ'**ಪ್ರತ್ಯಯ
೨)	ಕರ್ಮಕಾರಕ	ಕರ್ಮ	ಸಾಮಾನ್ಯವಾಗಿ ದ್ವಿತೀಯಾ **'ಅನ್ನು'** ಪ್ರತ್ಯಯ
೩)	ಕರಣಕಾರಕ	ಕರಣ	ತೃತೀಯ **'ಇಂದ'** ಪ್ರತ್ಯಯ.
೪)	ಸಂಪ್ರದಾನ	ಸಂಪ್ರದಾನ	ಚತುರ್ಥೀ **ಗೆ/ ಕೆ** ಪ್ರತ್ಯಯ.
೫)	ಅಪಾದಾನ ಕಾರಕ	ಅಪಾದಾನ	ಪಂಚಮೀ 'ದೆಸೆ**ಯಿಂದ**' ಪ್ರತ್ಯಯ.
೬)	ಅಧಿಕರಣಕಾರಕ	ಅಧಿಕರಣ	ಸಪ್ತಮೀ **'ಅಲ್ಲಿ'** ಪ್ರತ್ಯಯ.

ಇಲ್ಲಿರುವ ಕೇವಲಪ್ರತ್ಯಯಕ್ಕೆ ಅರ್ಥವಿಲ್ಲ. ಅದು ಲಿಂಗಾಶ್ರಯವಾಗಿ ಬಂದಾಗ ಕಾರಕಾರ್ಥವೊಂದನ್ನು ಗುರುತಿಸಬಹುದು. ಅವುಗಳಿಗೆ ಕ್ರಮವಾಗಿ ಉದಾಹರಣೆಗಳು :

೧) **ಕರ್ತೃಕಾರಕ :** ಕ್ರಿಯೆನಡೆಯಲು ಕಾರಣನಾದವನು **'ಕರ್ತೃ'**. ಇಲ್ಲಿ ಬರುವ ಪ್ರಥಮಾ ಪ್ರತ್ಯಯ ಕರ್ತೃವನ್ನು ಸೂಚಿಸುತ್ತದೆ. ಕರ್ತೃವಿನ ಮೇಲೆ ಆ ಕಾರಕ ಪ್ರತ್ಯಯವೇ ಬರುತ್ತದೆ. ಇದು **'ಕರ್ತೃಕಾರಕ'** ವೆನಿಸುತ್ತದೆ. ಉದಾ : **ಅ)** ವಿಮಲೆ**ಯು (ಉ)** ಪಾಠವನ್ನು **ಓದಿ**ದಳು. **ಆ)** ರಾಜ**ನು (ಉ)** ಬರಹಗಾರನಿಂದ ಚಿತ್ರವನ್ನು ಬ**ರೆ**ಸಿದನು. ಇಲ್ಲಿ ಗುರುತುಮಾಡಿರುವ ವಿಮಲೆ, ರಾಜ ಇವು ಕ್ರಿಯೆಯ **ಕರ್ತೃ**ಗಳೆಂದು ಸೂಚಿಸಲು, ಪ್ರಥಮಾವಿಭಕ್ತಿಪ್ರತ್ಯಯ ಬಂದಿದೆ.

೨) **ಕರ್ಮಕಾರಕ :** ಕ್ರಿಯೆಗೆ ತುತ್ತಾಗುವ ವಸ್ತು, ಪ್ರಾಣಿಗಳು **'ಕರ್ಮ'**, ಅದರ ಮೇಲೆ ಕರ್ಮಾರ್ಥದಲ್ಲಿ ದ್ವಿತೀಯಾ ವಿಭಕ್ತಿ ಬರುತ್ತದೆ. ಇದು **'ಕರ್ಮಕಾರಕ'** ವೆನಿಸುತ್ತದೆ. ಉದಾ: ರಂಗನು ಹಣ್ಣ**ನ್ನು** ತಿಂದನು. ಇಲ್ಲಿ ಬಂದಿರುವ **'ಅನ್ನು'** ಪ್ರತ್ಯಯವು ಕರ್ಮವನ್ನು ಸೂಚಿಸುತ್ತದೆ.

---

೧) "ಕ್ರಿಯಾಜನಕಂ ಕಾರಕಂ" ಕ್ರಿಯೆಗೆ ಆಶ್ರಯವಾದುದೇ ಕಾರಕ. "ಕ್ರಿಯಾನ್ವಯಿ ಕಾರಕಂ" ಕ್ರಿಯೆಗೆ ಹೊಂದಿಸಿಕೊಳ್ಳುವಂತಹುದು ಎನ್ನಬಹುದು.

೩) **ಕರಣಕಾರಕ :** ಕ್ರಿಯೆಗೆ ಯಾವುದು **'ಸಾಧನ'**ವಾಗಿರುತ್ತದೋ ಅದರ ಮೇಲೆ ತೃತೀಯಾ ವಿಭಕ್ತಿ ಬರುತ್ತದೆ. ಇದನ್ನು **'ಕರಣಕಾರಕ'** ವೆನ್ನುತ್ತೇವೆ. ಇಲ್ಲಿ **'ಇಂದ'** ತೃತೀಯಾ ವಿಭಕ್ತಿ ಕರಣಾರ್ಥದಲ್ಲಿ ಬಂದಿದೆ. ಉದಾ: ಹುಡುಗನು **ಲೇಖನಿಯಿಂದ** ಬರೆಯುತ್ತಾನೆ.

೪) **ಸಂಪ್ರದಾನಕಾರಕ :** ಇಲ್ಲಿ **ಕೊಡುವವನಿಂದ ಪಡೆಯುವ** ವಸ್ತು, ವ್ಯಕ್ತಿ, ಪ್ರಾಣಿಗಳ ಮೇಲೆ ಚತುರ್ಥೀಪ್ರತ್ಯಯ ಬರುತ್ತದೆ. ಇದನ್ನು **'ಸಂಪ್ರದಾನಕಾರಕ'** ವೆಂದು ಕರೆಯಲಾಗುತ್ತದೆ. ಉದಾ: ಅ) ರವಿ ರೋಗಿ**ಗೆ** ಹಣ್ಣನ್ನು ಕೊಟ್ಟನು.

ಆ) ರಾಜನು ದೀನ**ರಿಗೆ** ದಯೆಯನ್ನು ತೋರಿದನು. ಇಲ್ಲಿನ ಚತುರ್ಥೀಯು **ಸಂಪ್ರದಾನಾರ್ಥ** ಸೂಚಿಸುತ್ತದೆ.

೫) **ಅಪಾದಾನಕಾರಕ :** ಕ್ರಿಯೆ ನಡೆದಾಗ ಯಾವುದರಿಂದ **ಬೇರ್ಪಟ್ಟಿತೋ** ಅದು **'ಅಪಾದಾನಕಾರಕ'** ವೆನಿಸುತ್ತದೆ. ಉದಾ: ಮರದ **ದೆಸೆಯಿಂದ**[೧] ಹಣ್ಣು ಬಿದ್ದಿತು. ಇಲ್ಲಿನ ಪಂಚಮೀ ವಿಭಕ್ತಿಯು (ಅಪದಾನ) ಬೇರ್ಪಟ್ಟಿರುವುದನ್ನು ತಿಳಿಸುತ್ತದೆ.

೬) **ಅಧಿಕರಣಕಾರಕ :** ಯಾವುದು ಕ್ರಿಯೆಗೆ **ಆಧಾರವೋ** ಅದು **'ಅಧಿಕರಣ'** ವೆನಿಸುತ್ತದೆ. **ಅಧಿಕರಣಾರ್ಥ**ದಲ್ಲಿ ಸಪ್ತಮೀ ಪ್ರತ್ಯಯವು ಬರುತ್ತದೆ.

ಉದಾ: ಮಗು **ತಟ್ಟೆಯಲ್ಲಿ** ಊಟಮಾಡುತ್ತದೆ. ಇಲ್ಲಿ ಊಟದಕ್ರಿಯೆಗೆ **ತಟ್ಟೆ** ಆಧಾರವಾಗಿದೆ.

ಪ್ರಕೃತಿಗಳಿಗೆ ಪ್ರತ್ಯಯ ಸೇರುವಾಗ ಪದಗಳಲ್ಲಾಗುವ ವಿಶೇಷಕಾರ್ಯಗಳು:

ಪ್ರಕೃತಿಗೆ ವಿಭಕ್ತಿಪ್ರತ್ಯಯಗಳು ಸೇರಿ ಪದವಾಗುತ್ತವೆಂಬುದನ್ನು ತಿಳಿದೆವು. ಹೀಗೇ ಪ್ರತ್ಯಯಗಳು ಸೇರುವಾಗ ಪದದಲ್ಲಿ ಕೆಲವು ವಿಶೇಷವಾದ **ಲೋಪ, ಆಗಮ, ಆದೇಶ** ಕಾರ್ಯಗಳಾಗುತ್ತವೆ. ಗ್ರಾಂಥಿಕ ರೂಪಗಳಲ್ಲಿ ಈ ಅರಿವು ಅಗತ್ಯ. ಉದಾ : ಕಿರಿದು+ಕೆ = ಕಿರಿದರ್ಕೆ ('ಅರ್' ಆಗಮ), ಬಾನು+ಇಂದ = ಬಾನಿನಿಂದ (ಇನ್ ಆಗಮ), (ಮೂಡ+ ಅ= ಮೂಡಣ್ (ಅಣ್ ಆಗಮ).

ಹೀಗೆ ವಿಶೇಷಕಾರ್ಯಗಳು ಪದಗಳಲ್ಲಾಗಿರುವುದನ್ನು ಕಾಣುತ್ತೇವೆ. ಪದಜ್ಞಾನವಾಗಬೇಕಾದರೆ ಪ್ರಕೃತಿ, ಪ್ರತ್ಯಯಜ್ಞಾನ ಚೆನ್ನಾಗಿರಬೇಕು. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿ, ಶಿಕ್ಷಕರುಗಳಿಗೆ ಉಪಯುಕ್ತವಾಗಲೆಂದು ಸಂಕ್ಷಿಪ್ತವಾಗಿ ಪಟ್ಟಿಯನ್ನು

---

(೧) ಭಾಷಾಶಾಸ್ತ್ರದ ಹಿನ್ನಲೆಯಲ್ಲಿ ಕೇವಲ ಐದು ದ್ವಿತೀಯಾ, ತೃತೀಯಾ, ಚತುರ್ಥೀ, ಷಷ್ಠೀ , ಸಪ್ತಮೀ ಪ್ರತ್ಯಯಗಳೆಂದು ಹೇಳುತ್ತಾರೆ. ಹೀಗೆ ಐದು ಪ್ರತ್ಯಯಗಳೆಂದು, ಪ್ರಕೃತಿಸ್ವರೂಪದಲ್ಲೇ ಪ್ರಥಮೇ ಸಲ್ಲುತ್ತದೆ. ತೃತೀಯೆ ಇರುವಾಗ ಪಂಚಮಿ ಅಗತ್ಯವಿಲ್ಲವೆಂದು ಅಭಿಪ್ರಾಯವಿದೆ.

ವ್ಯಾಕರಣಕಾರರ ಅಭಿಪ್ರಾಯದಂತೆ ತೃತೀಯ, ಪಂಚಮೀ ವಿಭಕ್ತಿಗಳಿಗೆ (ಇಂದ) ಪ್ರತ್ಯಯ ಒಂದೇಯೆನಿಸಿದರೂ ಅರ್ಥಗಳು ಬೇರೆ ಬೇರೆಯಾಗಿರುತ್ತವೆ. (ತೃತೀಯೇ ಕರಣಾರ್ಥ ಮತ್ತು ಪಂಚಮೀ ಅಪಾದಾನಾರ್ಥ ಇವುಗಳ ಭೇದವೇನೆಂದರೆ (ಕರಣ) 'ಸಾಧನ'ವಾಗಿರುತ್ತದೆ. ಅಪಾದಾನದಲ್ಲಿ ಬೇರ್ಪಡುವಿಕೆಯಲ್ಲಿ ಚಲನೆಯಿರುತ್ತದೆ. ಹೀಗಾಗಿ ಪಂಚಮೀ ವಿಭಕ್ತಿಯ ಅಗತ್ಯವಿದೆಯೆಂದು ವ್ಯಾಕರಣಕಾರರ ಅಭಿಪ್ರಾಯ.

ಕೊಡಲಾಗಿದೆ:-

ವಿಭಕ್ತಿ	ಪ್ರಕೃತಿ -	ಪ್ರತ್ಯಯ ಸೇರಿ ಆಗುವರೂಪಗಳು-	ಕಾರ್ಯ
೧) ಪ್ರಥಮಾ ಉ	ರಾಮ+ಉ	= ರಾಮನು	- 'ನ್' ಆಗಮ.
ಕಾರಾಂತ ಪುಲ್ಲಿಂಗ :	ಅರಸ+ಉ	= ಅರಸನು.	-”-
ನಪುಂಸಕ :	ಜನ+ಉ	= ಜನವು	- 'ವ್' ಆಗಮ.
	ನಯನ+ಉ	= ನಯನವು.	
ಎ ಕಾರಾಂತ :	ಟೊಂಗೆ+ಉ	= ಟೊಂಗೆಯು / ಟೊಂಗೆ	- 'ಯ' ಆಗಮ
	ತೆನೆ+ಉ	= ತೆನೆಯು/ತೆನೆ.	ಪ್ರತ್ಯಯ ಲೋಪ
೨) ದ್ವಿತೀಯಾ 'ಅನ್ನು', :	ಅವ+ಅನ್ನು	= ಅವನನ್ನು	- 'ನ್' ಆಗಮ
ಅಕಾರಾಂತ: ಪುಲ್ಲಿಂಗ :	ಶಿವ+ಅನ್ನು	= ಶಿವನನ್ನು.	-”-
ಸ್ತ್ರೀಲಿಂಗ :	ಅಕ್ಕ+ಅನ್ನು	= ಅಕ್ಕನನ್ನು.	-”-
ಅ,ಉ, ಒಕಾರಾಂತ :	ವನ+ಅನ್ನು	= ವನವನ್ನು.	'ವ್' ಆಗಮ
-ನಪುಂಸಕ :	ತನು+ಅನ್ನು	= ತನುವನ್ನು.	-”-
	ನೋ+ಅನ್ನು	= ನೋವನ್ನು	- -”-
ಎಕಾರಾಂತ ನಪುಂಸಕ:	ಟೊಂಗೆ+ಅನ್ನು	= ಟೊಂಗೆಯನ್ನು	- 'ಯ್' ಆಗಮ
	ಕಪಿ+ಅನ್ನು	= ಕಪಿಯನ್ನು.	-”-
	ಕಲಾಕೃತಿ+ಅಲ್ಲಿ	= ಕಲಾಕೃತಿಯಲ್ಲಿ.	-”-
೩) ತೃತೀಯಾ 'ಇಂದ'; :	ಪುಲ್ಲಿಂಗ ಭಾವ+ಇಂದ	= ಭಾವನಿಂದ	- 'ಇನ್' ಆಗಮ.
ಅಕಾರಾಂತ ಸ್ತ್ರೀ :	ಅಮ್ಮ+ಇಂದ	= ಅಮ್ಮನಿಂದ.	- -”-
ನಪುಂ :	ನಯನ+ಇಂದ	= ನಯನದಿಂದ	- 'ದ' ಆಗಮ.
ದಿಗ್ವಾಚಿ :	ಮೂಡ+ಇಂದ	= ಮೂಡಣಿಂದ	- 'ಅಣ್' ಆಗಮ
ಉಕಾರಾಂತ ಕೃದಂತಕ್ಕೆ :	ಮಾಡಿದುದು+ಇಂದ	= ಮಾಡಿದುದರಿಂದ.	- 'ಅರ್' ಆಗಮ
ಗುಣವಚನ :	ಹೊಸದು+ಇಂದ	= ಹೊಸದರಿಂದ.	- -”-
ಸರ್ವನಾಮ :	ಇದು+ಇಂದ	= ಇದರಿಂದ.	- -”-
ಪ್ರಕಾರವಾಚಕ :	ಅಂತಹುದು+ಇಂದ	= ಅಂತಹುದರಿಂದ.	- -”-
ಸಂಖ್ಯಾವಾಚಕ :	ಎರಡು+ಇಂದ	= ಎರಡರಿಂದ	- -”-
ಉ, ಒಕಾರಾಂತ :	ಮಡು+ಇಂದ	= ಮಡುವಿನಿಂದ.	- 'ಇನ್' ಆಗಮ
ಪುನ್ನಪುಂಸಕ :	ಪುರು+ಇಂದ	= ಪುರುವಿನಿಂದ.	- -”-
:	ಗೋ+ಇಂದ	= ಗೋವಿನಿಂದ	- 'ಇನ್' ಆಗಮ

ಇದೇ ರೀತಿ ಚತುರ್ಥೀ, ಪಂಚಮೀ, ಷಷ್ಠೀ, ಸಪ್ತಮೀ ಪ್ರತ್ಯಯ ಪರವಾದಾಗ **'ಇನ್'**, **'ಅಣ್'**, **'ಅರ್'** ಆಗಮಗಳುಂಟು.

೪. ಚತುರ್ಥೀ - 'ಕೆ'(೧) / ಕ್ಕೆ, ಗೆ / ಗ್ಗೆ

೧) ಅಕಾರಾಂತ, ನಪುಂ : ನಯನ+ಕೆ = ನಯನಕ್ಕೆ 'ಕೆ' (ದ್ವಿತ್ವ)

ಪುಲ್ಲಿಂ : ಅರಸರು+ಕೆ = ಅರಸನಿಗೆ/ 'ಗ್ಗೆ' (ದ್ವಿತ್ವ)

೧) ಕೇಶೀರಾಜನು ಮೂಲದ 'ಕೆ' ಚತುರ್ಥೀವಿಭಕ್ತಿ 'ಕೆ' ಗೆ ಪ್ರತ್ಯಯಕ್ಕೆ ಗೆ ಆದೇಶವೆನ್ನುತ್ತಾನೆ. ಕೆಲವರು 'ಗೆ' ಗೆ ಮೂಲದ 'ಕೆ' ಆದೇಶವೆನ್ನುತ್ತಾರೆ. ನಪುಂಸಕಲಿಂಗದಲ್ಲಿ 'ಕ್ಕೆ' (ದ್ವಿತ್ವ)ವಾಗುತ್ತದೆ.

ಐ, **ಎಕಾರಾಂತ** ನಪುಂ : ಮೈ+ಕೆ = ಮೈಗೆ, ಹಣೆಗೆ - 'ಗೆ' ಆದೇಶ

೨) ಮೇಲಿನ ತೃತೀಯಾ ವಿಭಕ್ತಿಯಂತೆ:**'ಉ'** ಕಾರಾಂತಕೃದಂತ, ಸಂಖ್ಯಾ, ಗುಣವಚನ, ಸರ್ವನಾಮ ಇತ್ಯಾದಿಗಳಿಗೆ **'ಅರ್', 'ಅಣ್', 'ಇನ್'** ಆಗಮವಾಗುತ್ತವೆ. (ಮೇಲಿನ ಉದಾ.ಗಳಿಗೆ ಚತುರ್ಥೀ ಪ್ರತ್ಯಯಸೇರಿಸಿ ನೋಡಬಹುದು).

೩) **ಅ**ಕಾರಾಂತ, ದಿಗ್ವಾಚಕಗಳಿಗೆ : ತೆಂಕ+ಕೆ = ತೆಂಕಣ್ಗೆ -(ಅಣ್ ಆಗಮ)

೫. ಪಂಚಮೀ-'ದೆಸೆಯಿಂದ'

೧) 'ಓ, ಉ' ಕಾರಾಂತ:- ಮಡು+ದೆ.ಯಿಂದ= ಮಡುವಿನ ದೆ.ಯಿಂದ /(**'ಇನ್'**)

೨) 'ಎ' - ಟೊಂಗೆ+ದೆಸೆಯಿಂದ = ಟೊಂಗೆಯ ದೆಸೆಯಿಂದ -**'ಯ್'** ಕಾರಾಗಮ

೩) ಸಾಮಾನ್ಯ **ಅಕಾರಾಂತ** ಶಬ್ದಗಳಿಗೆ :
ನಯನ+ದೆಸೆಯಿಂದ = ನಯನ**ದ** ದೆಸೆಯಿಂದ - **'ದ'** ಆಗಮ.

೬. ಷಷ್ಠೀವಿಭಕ್ತಿ -'ಅ'

೧) ಉಕಾರಾಂತ ಕೃದಂತ :	ನೋಡಿದುದು+ಅ	=ನೋಡಿದುದರ	**'ಅರ್'** ಆಗಮ
ಗುಣವಚನ :	ಕಿರಿದು+ಅ	= ಕಿರಿದರ.	-"-
ಸರ್ವನಾಮ :	ಅದು+ಅ	= ಅದರ.	-"-
ಪ್ರಕಾರವಾಚಕ :	ಅಂತಹುದು+ಅ	= ಅಂತಹುದರ.	-"-
ಸಂಖ್ಯಾವಾಚಕ :	ನಾಲ್ಕು+ಅ	= ನಾಲ್ಕರ.	-"-
೨) ಉ, ಒಕಾರಾಂತ ಶಬ್ದಗಳಿಗೆ :			
	ಗುರು+ಅ	= ಗುರುವಿನ.	**'ಇನ್'** ಆಗಮ
	ಗೋ+ಅ	= ಗೋವಿನ.	-"-
ವ್ಯಂಜನಾಂತ :	ಆಗಳ್+ಅ	= ಆಗಳಿನ,	-"-
	ಬೆರಳ್+ಅ	= ಬೆರಳಿನ	-"-
೩) ಅಕಾರಾಂತ ನಪುಂಸ:			
ದಿಗ್ವಾಚಕ :	ತೆಂಕ+ಅ	= ತೆಂಕಣ, ಬಡಗಣ	-**'ಅಣ್'** ಆಗಮ
	ನಯನ+ಅ	= ನಯನದ	**'ದ'** ಆಗಮ
೪) **ಎಕಾರಾಂತ :**	ಟೊಂಗೆ+ಅ	= ಟೊಂಗೆಯ	**'ಯ'** ಆಗಮ

೭. **ಸಪ್ತಮೀ - 'ಅಲ್ಲಿ' :** ಇಲ್ಲಿನ ಪ್ರತ್ಯಯವು ಸ್ವರಾದಿಯಾಗಿರುವುದರಿಂದ ಮೇಲಿನ ಷಷ್ಠೀಯಂತೆ **ಅರ್**, **ಇನ್**, ದ, **ಅಣ್**, ಆಗಮಗಳಾಗುತ್ತವೆ.

ವಿಶೇಷವಾಗಿ ಪ್ರಥಮಾ, ದ್ವಿತೀಯಾ, ಸಪ್ತಮೀಗಳಲ್ಲಿ **'ಅಲ್'** ಆದೇಶ :

ದಿಗ್ವಾಚಿ: :	ತೆಂಕ+ಉ (ಪ್ರ)	= ತೆಂಕಲು	'ಅಲ್' ಆದೇಶ
:	ತೆಂಕ+ ಅನ್ನು	= ತೆಂಕಲ್	

ತೆಂಕ+ಅಲ್ಲಿ = ತೆಂಕಲು/ತೆಂಕಲ್ ದಕ್ಷಿಣ ದಿಕ್ಕಿನಲ್ಲಿ ಎಂದರ್ಥ ಹ.ಗನ್ನಡ.

ಕಾಲವಾಚಿ : ದು+ಉ = ಅಂದು / ಇಂದು

ಅಂದು+ಅನ್ನು = ಅಂದು / ಇಂದು

ಅಂದು+ಅಲ್ಲಿ = ಅಂದು / ಇಂದು

ಈ ದಿಗ್ವಾಚಕದಂತೆ ಕಾಲವಾಚಕಗಳು ಪ್ರಥಮಾ ದ್ವಿತಿಯಾ ಹಾಗೂ ಸಪ್ತಮೀಗಳಲ್ಲಿ ಒಂದೇ ರೂಪವನ್ನು ಹೊಂದಿರುತ್ತವೆ.

ವಿಭಕ್ತಿ ಪಲ್ಲಟ (ವ್ಯತ್ಯಾಸ)

ಪ್ರಕೃತಿಗೆ ಪ್ರತ್ಯಯಗಳು ಸೇರಿದಾಗ ಅವುಗಳು ವಿಶಿಷ್ಟಾರ್ಥವನ್ನು ಪಡೆದುಕೊಳ್ಳುತ್ತವೆ. ಕನ್ನಡದಲ್ಲಿ ಒಂದುವಿಭಕ್ತಿಯ ಅರ್ಥದಲ್ಲಿ ಅದಕ್ಕೆ ಬದಲಾಗಿ ಬೇರೆವಿಭಕ್ತಿಗಳನ್ನು ಬಳಸುವುದುಂಟು. ಇದನ್ನು '**ವಿಭಕ್ತಿಪಲ್ಲಟ**'ವೆನ್ನಲಾಗುತ್ತದೆ.

೧) '**ದ್ವಿತೀಯಾ**' ವಿಭಕ್ತಿಗೆ ಬದಲಾಗಿ '**ಚತುರ್ಥೀ**' ವಿಭಕ್ತಿ ಬರುತ್ತದೆ :

ಉದಾ: ಬಂಡಿಯ**ನ್ನು** ಹತ್ತಿದನು. - ಬಂಡಿ**ಗೆ** ಹತ್ತಿದನು.

ನಾನು ಬೆಂಗಳೂರ**ನ್ನು** ಸೇರಿದೆ. - ಬೆಂಗಳೂರಿ**ಗೆ** ಸೇರಿದೆ.

೨) '**ತೃತೀಯಾ**'ಗೆ ಬದಲಾಗಿ '**ಪಂಚಮೀ**' ಬರುತ್ತದೆ :

ಉದಾ: ಅವನ**ಿಂದ** ಕೇಡಾಯ್ತು. - ಅವನ **ದೆಸೆಯಿಂದ** ಕೇಡಾಯ್ತು.

ಮರ**ದಿಂದ** ಹಣ್ಣು ಬಿದ್ದಿತು. - ಮರದ **ದೆಸೆಯಿಂದ** ಹಣ್ಣು ಬಿದ್ದಿತು.

೩) '**ಷಷ್ಠೀ**'ಗೆ ಬದಲಾಗಿ '**ಚತುರ್ಥೀ**' ಬರುತ್ತವೆ :

ಉದಾ : ಆತ ಮನೆ**ಯ** ಒಡೆಯ - ಆತ ಮನೆ**ಗೆ** ಒಡೆಯ

ಅವರು ನಮ್ಮ ಶಿಕ್ಷಕರು. - ಅವರು ನಮ**ಗೆ** ಶಿಕ್ಷಕರು.

೪) '**ಸಪ್ತಮೀ**'ಗೆ ಬದಲಾಗಿ '**ಚತುರ್ಥೀ**' ಬರುತ್ತದೆ :-

ಉದಾ : ಆತ ಹಳ್ಳದ**ಲ್ಲಿ** ಬಿದ್ದನು. - ಆತ ಹಳ್ಳ**ಕ್ಕೆ** ಬಿದ್ದನು.

ಗೊಬ್ಬರ ಮಣ್ಣಿನ**ಲ್ಲಿ** ಸೇರಿಸಿದೆ. - ಗೊಬ್ಬರ ಮಣ್ಣಿ**ಗೆ** ಸೇರಿಸಿದ.

೫) '**ತೃತೀಯಾ**' ವಿಭಕ್ತಿಗೆ ಬದಲಾಗಿ '**ಸಪ್ತಮೀ**' ಬರುತ್ತದೆ.

ಉದಾ : ಕೊಡಲಿ**ಯಿಂದ** ಕಡಿದನು. - ಕೊಡಲಿಯ**ಲ್ಲಿ** ಕಡಿದನು

೬) '**ತೃತೀಯೆ**'ಗ ಬದಲಾಗಿ '**ದ್ವಿತೀಯಾ**' ವಿಭಕ್ತಿ ಬರುತ್ತದ :

ಉದಾ : ಪಾತ್ರೆ**ಯಿಂದ** ತಂದನು. - ಪಾತ್ರೆಯ**ನ್ನು** ತಂದನು.

ಈ ರೀತಿಯ ಪ್ರಯೋಗಗಳು ಹಳಗನ್ನಡದಲ್ಲೂ ಉಂಟು. ಆ ವಾಕ್ಯಗಳನ್ನು ಬಿಡಿಸಿ ನೋಡದೆ ತಿಳಿದುಕೊಳ್ಳುವುದು ರೂಢಿಯಾಗಿದೆ.

ಸಮಾಸ (ಸೇರಿರುವುದೆಂದರ್ಥ)

ಸಮಾಸವು ಪದನಿಮಿತ್ತವಾದುದು. ***ಪರಸ್ಪರ ಅಪೇಕ್ಷೆಯಿರುವ ಎರಡು ಅಥವಾ ಹೆಚ್ಚುಪದಗಳು ಅರ್ಥಕ್ಕನುಸಾರವಾಗಿ ಸೇರಿ ಒಂದೇಅರ್ಥವನ್ನು ಕೊಡುವ ಒಂದು ಪದವಾಗುವುದಕ್ಕೆ 'ಸಮಾಸ'*** ಎನ್ನುತ್ತೇವೆ. ಇದನ್ನು **'ಸಮಸ್ತಪದ'** ವೆಂತಲೂ ಕರೆಯುವುದುಂಟು. ಈ ಎರಡೂ ಪದಗಳ ಗುರಿಯು ವಿಶೇಷವಾದ ಒಂದರ್ಥಪದವನ್ನೇ ಪುಷ್ಟೀಕರಿಸುವುದು. ಉದಾ: **'ಅರಮನೆ'** ಯ ನೋಟ ಚೆನ್ನಾಗಿದೆ. ಈ ಸಮಾಸ ಪದವನ್ನು ಅರಸನ+ ಮನೆ ಎಂದೂ ಬಿಡಿಸಿ ಹೇಳಬಹುದು. ಆದರೂ **ಕಾಲ, ಶ್ರಮಗಳ ಉಳಿತಾಯದ** ದೃಷ್ಟಿಯಿಂದ ಕೂಡಿಸಿ ಸಂಕ್ಷೇಪವಾಗಿ ಹೇಳುವುದೇ ಹೆಚ್ಚು ರೂಢಿಯಾಗಿದೆ. ಇದೇ ಅಂಶವನ್ನು ತದ್ಧಿತಾಂತ, ಕೃದಂತ- ಸಾಧಿತರೂಪಗಳಲ್ಲೂ ಕಾಣುತ್ತೇವೆ. ಇಲ್ಲೆಲ್ಲಾ **ಪದಗಳು ತನ್ನ ಅರ್ಥವನ್ನು ಬಿಟ್ಟುಕೊಡದೆ ಇನ್ನೊಂದು ವಿಶೇಷ ಪದದಅರ್ಥವನ್ನು ಪುಷ್ಟೀಕರಿಸುತ್ತವೆ.** ಅವುಗಳನ್ನು **'ವೃತ್ತಿ'**(೧) ಎನ್ನಲಾಗಿದೆ.

ವಿಗ್ರಹ : ಮೇಲಿನ **'ಅರಮನೆ'** ಎಂಬುದನ್ನು ವಿಭಕ್ತ್ಯಂತವಾಗಿ ಬಿಡಿಸಿದರೆ ಅರಸನ+ಮನೆ ಎಂದಾಗುವುದು. ಹೀಗೆ ಸಮಾಸಪದವನ್ನು ವಿಭಕ್ತ್ಯಂತವಾಗಿ ಬಿಡಿಸುವುದಕ್ಕೆ **'ವಿಗ್ರಹವಾಕ್ಯ'** ವೆನ್ನಲಾಗುತ್ತದೆ. ಪದಗಳ ಸಂಬಂಧವನ್ನು ಸೂಚಿಸುವುದಕ್ಕಾಗಿ ಸೇರಿದ ಪೂರ್ವಪದಾಂತ್ಯದಲ್ಲಿ ಕಾಣುವ ಪ್ರತ್ಯಯವು ಸಮಾಸಪದದಲ್ಲಿ ಕಾಣದೇ ಹೋಗುತ್ತದೆ. ಹೀಗೆ ಪ್ರತ್ಯಯವು ಲೋಪವಾಗುವುದನ್ನು **'ಸಮಾಸಕಾರ್ಯ'** ವೆನ್ನಬಹುದು. ಅದು **ಸಮಾಸವಾಗಿರುವುದರ ಗುರುತು.** ಹೀಗೆ ಲೋಪವಾಗದವುಗಳನ್ನು **'ಅಲುಕ್‌ಸಮಾಸ'** ವೆನ್ನಲಾಗುತ್ತದೆ. ಉದಾ: **ಬೇಲದಮರ, ಮೆಣಸಿನಬಳ್ಳಿ** ಇತ್ಯಾದಿ. **ಸಮಾಸಪದಗಳನ್ನು ಅರ್ಥಕ್ಕನುಸಾರವಾಗಿ ಬಿಡಿಸಬೇಕು.** ಕೈಮುಗಿ, ಹೆಜ್ಜೆಹಾಕು ಇವುಗಳನ್ನು ಬಿಡಿಸಿದಾಗ - **ಕೈಯನ್ನು+ಮುಗಿ, ಹೆಜ್ಜೆಯನ್ನು+ಹಾಕು** ಹೀಗೆ ವಿಗ್ರಹ ಮಾಡಬೇಕು. ಇವುಗಳನ್ನೇ ಕೈಯಲ್ಲಿ ಮುಗಿ, ಹೆಜ್ಜೆಯಿಂದ ಹಾಕು ಹೀಗೆ ಬಿಡಿಸಬಹುದಾದರೂ ಅದು ಸರಿಯಲ್ಲ. ಸಮಾಸ ಪದವನ್ನು ವಿಗ್ರಹವಾಕ್ಯ ಮಾಡುವಾಗ ಅರ್ಥಕ್ಕೆಚ್ಯುತಿ ಬರದಂತೆ ಬಿಡಿಸಬೇಕು. ಹೀಗೆ ಸಮಾಸಪದವನ್ನು ಬಿಡಿಸುವುದರಲ್ಲಿ ಆಗುವ ವ್ಯತ್ಯಾಸದಿಂದ ಸಮಾಸಗಳೇ ಬೇರೆಯಾಗಬಹುದು.ಈ ಮಾತು

---

೧) "ಪರಾರ್ಥಾಭಿಧಾನಂ ವೃತ್ತಿಃ"

ಸಂಧಿಕಾರ್ಯಕ್ಕೂ ಅನ್ವಯಿಸುತ್ತದೆ.

ಕನ್ನಡದಲ್ಲಿ **ಎಂಟು** ಬಗೆಯ **ಸಮಾಸಗಳನ್ನು** ಗುರುತಿಸಬಹುದು[೧]

೧) ಗಮಕಸಮಾಸ	೫) ದ್ವಿಗು ಸಮಾಸ
೨) ಕ್ರಿಯಾ ಸಮಾಸ	೬) ದಂದ್ವ ಸಮಾಸ
೩) ತತ್ಪುರುಷ ಸಮಾಸ	೭) ಬಹುವ್ರೀಹಿ ಸಮಾಸ
೪) ಕರ್ಮಧಾರಯ ಸಮಾಸ	೮) ಅರಿಸಮಾಸ

೧) ಗಮಕ ಸಮಾಸ : ಪೂರ್ವಪದದಲ್ಲಿ **ಸರ್ವನಾಮ, ಕೃದಂತ, ಗುಣವಾಚಕ ಮತ್ತು ಸಂಖ್ಯಾವಾಚಕ**ಗಳಿದ್ದು, ಉತ್ತರಪದ **ನಾಮಪದ**ದೊಂದಿಗೆ ಸಮಾಸವಾದರೆ ಅದು **'ಗಮಕ ಸಮಾಸ'**[೨] ವೆನಿಸುತ್ತದೆ.ಉದಾ:

ಅ) ಸರ್ವನಾಮ	+	**ನಾಮಪದ**	=	**ಸಮಾಸಪದ**
(ಪೂರ್ವಪದ)	+	(ಉತ್ತರಪದ)		
ಇದು	+	ಪರಿವಾರ	=	ಈ ಪರಿವಾರ
ಅದು	+	ಕವಿತೆ	=	ಆ ಕವಿತೆ
ಅವನು	+	ಹುಡುಗ	=	ಆ ಹುಡುಗ
ಯಾವುದು	+	ಕೆಲಸ	=	ಯಾವ ಕೆಲಸ

(ಇಲ್ಲಿ ಅವನು, ಅದು-**ಆ**; ಇವನು, ಇದು-**ಈ**; ಯಾವುದು-**ಯಾವ** ಆದೇಶಗಳಾಗಿವೆ)

ಆ) ಕೃದಂತ	+	**ನಾಮಪದ**	=	**ಸಮಾಸ**
ಹುರಿದುದು	+	ಕಡಲೆ	=	ಹುರಿದಗಡಲೆ (ಹುರಿ-'ರಿ' ದ 'ಇತ್ವ'ವಿದೆ)
ಬೇಡಿದುದು	+	ವರ	=	ಬೇ**ಡಿ**ದವರ(ಬೇ**ಡಿ**-'ಡಿ' ದ 'ಅತ್ವ'ವಿದೆ)
ಕಡಿವುದು	+	ಕೊಡಲಿ	=	ಕಡಿ**ವ**ಗೊಡಲಿ
ತೂಗುವುದು	+	ತೊಟ್ಟಿಲು	=	ತೂಗು**ವ** ತೊಟ್ಟಿಲು

(ಇಲ್ಲಿ ಪೂರ್ವಪದ ಕೃದಂತದ ಉಪಾಂತ್ಯ **'ಉದು'** ಲೋಪವಾಗುತ್ತದೆ). ಗುರುತು ಮಾಡಿರುವಲ್ಲಿ - **'ಅತ್ವ'** ವೂ ಅದರ ಹಿಂದಕ್ಕೆ **'ಇತ್ವ'**ವೂ ಇರುವುದು ಗಮನಾರ್ಹ.

---

೧) ಅರ್ಥಪ್ರಧಾನತೆಯದೃಷ್ಟಿಯಿಂದಲೂ ನಾಲ್ಕುವಿಭಾಗ ಮಾಡುತ್ತಾರೆ. ಈ ಕನ್ನಡ, ಸಂಸ್ಕೃತ ಸಮಾಸವೆಂಬ ವರ್ಗೀಕರಣ ಸಂಸ್ಕೃತದಲ್ಲಿ ಪೂರ್ವೋತ್ತರ ಭಾಷಾಪದಗಳ ಗಣನೆಯಿಂದಾಗಿವೆ.

೨) ಕೇಶೀರಾಜನೊಬ್ಬ ಗಮಕಸಮಾಸವನ್ನು ತತ್ಪರುಷದ ಪ್ರಭೇದವೆನಿಸಿದ್ದರೂ ಸ್ವತಂತ್ರಸ್ಥಾನ ಕಲ್ಪಿಸಲು ಯತ್ನಿಸಿದ್ದಾನೆ.

ಇ) ಗುಣವಚನ + ನಾಮಪದ = ಸಮಾಸ

ಬಿಳಿಯದು	+	ಬಟ್ಟೆ	=	ಬಿಳಿಯಬಟ್ಟೆ-ಕೃದಂತ ವಿಶೇಷಣ
ಕಿರಿಯಳು	+	ಹುಡುಗಿ	=	ಕಿರಿಯಹುಡುಗಿ
ಹಸಿಯದು	+	ಕಡಲೆ	=	ಹಸಿಯಗಡಲೆ (೧)

ವಿಶೇಷಣದಿಂದ ಕರ್ಮಧಾರಯ ಗಮಕಗಳು ಒಂದೇ ಎನಿಸುತ್ತವೆ.

ಈ) ಸಂಖ್ಯಾವಾಚಕ + ಸಂಖ್ಯೇಯ (ನಾಮಪದ)

ಇಪ್ಪತ್ತು (ಹೆಚ್ಚಾದ) ಎಂಟು = ಇಪ್ಪತ್ತೆಂಟು

ಅರವತ್ತು (ಮೇಲೆ) ಐದು = ಅರವತ್ತೈದು (೨)

೨) **ಕ್ರಿಯಾಸಮಾಸ :** ಪೂರ್ವಪದದಲ್ಲಿ ದ್ವಿತೀಯಾ ವಿಭಕ್ತಿಯಿಂದ ಕೂಡಿದ ನಾಮಪದವಿರುತ್ತದೆ. ಉತ್ತರಪದದಲ್ಲಿ ಧಾತು / ಕ್ರಿಯಾಪದ ಅಥವಾ ಕೃದಂತಗಳಿಂದ ಸೇರಿ ಸಮಾಸವಾದರೆ ಅದನ್ನು '**ಕ್ರಿಯಾಸಮಾಸ**' ವೆನ್ನುತ್ತೇವೆ. (ಕ್ರಿಯಾ ಸಮಾಸದಲ್ಲಿ ಅರಿಸಮಾಸ ದೋಷವಿಲ್ಲ). ಉದಾ :

೧. ನಾಮಪದ	**+**	**ಧಾತು**	**=**	**ಕ್ರಿಯಾಸಮಾಸ**
ವಿಷವನ್ನು	+	ಕಾರು	=	ವಿಷಕಾರು
ಕೈಯನ್ನು	+	ತೊಳೆ	=	ಕೈದೊಳೆ
ನೀರನ್ನು	+	ಉಣಿಸು	=	ನೀರುಣಿಸು
೨. ನಾಮಪದ	**+**	**ಕ್ರಿಯಾಪದ/ಕೃದಂತ**	**=**	**ಕ್ರಿಯಾ ಸಮಾಸ**
ಕಥೆಯನ್ನು	+	ಕೇಳುವ	=	ಕಥೆಗೇಳುವ
ಮೈಯನ್ನು	+	ಉಡುಗಿಸಿದವ	=	ಮೈಯುಡುಗಿಸಿದವ
ಕಾಲನ್ನು	+	ಪಿಡಿದುದು	=	ಕಾಲ್ವಿಡಿದುದು

ವಿಶೇಷವಿಚಾರ : ೧) ಇಲ್ಲಿ ನಾಮಪದದೊಂದಿಗೆ ಗುಣವಚನ ಸೇರಿಸಿ ಕರ್ಮಧಾರಯವೇ ಗಮಕವೇ ಎಂದು ನಿರ್ಧಾರ ಮಾಡುವಾಗ ವಿಗ್ರಹ, ಸಮಸ್ತಪದಗಳ ಸ್ವರೂಪವನ್ನು ಸೂಕ್ಷ್ಮವಾಗಿ ಗಮನಿಸಬೇಕು. ಇದನ್ನೇ ಕರ್ಮಧಾರಯದಂತೆ ವಿಗ್ರಹ ಮಾಡಿದರೆ ಹಸಿಯ+ಕಡಲೆ = ಹಸಿಗಡಲೆ ಎಂದಾಗುತ್ತದೆ. ಇಲ್ಲಿ ವಿಗ್ರಹದಲ್ಲಿ 'ಯ' ಕಾರ ಉಳಿದೇ ಸಮಾಸಪದವಾಗುತ್ತದೆ. ಕರ್ಮಧಾರಯದಲ್ಲಿ ಲೋಪ, ಆಗಮ, ಆದೇಶ ಕಾರ್ಯಗಳಾಗುತ್ತವೆ, (ಉದಾ:- ಕರಿಯ+ಹೊಗೆ = ಕರಿಯಹೊಗೆ-ಗಮಕವಾದರೆ) ಕರಿದು+ಪೊಗೆ=ಕರ್ಬೊಗೆ (ಕ.ಧಾ.ಸ). ಹೀಗೇ ಸಮಾನಾಧಿಕರಣ ವಿಶೇಷ್ಯ ವಿಶೇಷಣ ಶಬ್ದಗಳನ್ನು ಮಾತ್ರ ಕರ್ಮಧಾರಯಗಳೆಂಬ ಹೆಸರಿನಿಂದ ಹೇಳುವುದು ರೂಢಿ.

೨) ಇಲ್ಲಿ ಪೂರ್ವ, ಉತ್ತರಪದಗಳೆರಡೂ ಸಂಖ್ಯೆಗಳಾಗಿದ್ದರೆ ಗಮಕವೆನಿಸುತ್ತದೆ. ದ್ವಿಗುವಿನಲ್ಲಿ ಉದಾ: 'ದ್ವಿಮುಖ', 'ಇರ್ಬಗೆ' ಇತ್ಯಾದಿಗಳಲ್ಲಿ ಉತ್ತರಪದ ನಾಮವಿರುತ್ತದೆ. ಹಾಗೆಯೇ ಒಂದೇ ವಿಭಕ್ತ್ಯಂತ್ಯ ಕಾಣುತ್ತದೆ. ಇದು ಗಮನಾರ್ಹಾಂಶ. ಉದಾ: ಎರಡು+ ಬಗೆ=ಇರ್ಬಗೆ, ನೂರುಪತ್ತು ಎಂಬುದನ್ನು ನೂರರ(ಅ)+ ಪತ್ತು ಷಷ್ಠ್ಯಂತವಾಗಿದೆ. ಕೇಶಿರಾಜನು ಗಮಕಸಮಾಸವೆಂಬುದನ್ನು ತತ್ಪುರುಷ ಭೇದವೆಂದು ಹೇಳದೆ, ವಿಶಿಷ್ಟಸಮಾಸವೆಂದು ತೋರಿಸಿದ್ದಾನೆ.

ಈ ಮೇಲಿನ ಗಮಕ, ಕ್ರಿಯಾಸಮಾಸಗಳನ್ನು ಕನ್ನಡಸಮಾಸಗಳೆನ್ನಲಾಗುತ್ತದೆ. ಇಲ್ಲಿ ಕನ್ನಡಶಬ್ದಗಳಿಗೆ ಕನ್ನಡಶಬ್ದದೊಂದಿಗೆ ಸಮಾಸವಾ। ಎರಡೂ ತದ್ಭವಗಳಿಂದ ಸಮಾಸ ಮಾಡಿದರೂ ಅದನ್ನು ಕನ್ನಡಸಮಾಸವೆನ್ನಬೇಕು. ಸ್ವಾಭಾವಿಕವಾಗಿ ಭಾಷೆಯಲ್ಲಿ ಮಡಿವಂತಿಕೆಯ ವಿಂಗಡಣೆ ಸೂಕ್ತವಲ್ಲ.

ಉದಾ: ಭಿನ್ನವತ್ತಳೆ = ಭಿನ್ನಪ + ಪತ್ತಳೆ (ವಿಜ್ಞಾಪನಾ+ಪತ್ತಲ(ಪತ್ರ)

ಹೀಗೆ ಇಂಗ್ಲೀಷ್, ಉರ್ದುಭಾಷೆಯ ಶಬ್ದಗಳು ಕನ್ನಡ ಭಾಷೆಯಲ್ಲಿ ಸೇರಿವೆ. ಹೀಗೆಯೇ ಹೊಸಸಮಾಸಗಳು ಕಂಡುಬರುತ್ತಿವೆ. ಉದಾ : **ರೈಲುಬಿಡು, ಮಸೀದಿ ಕಟ್ಟಡ, ರಸೀದಿ ಪುಸ್ತಕ, ಸ್ಕೂಲುಪರೀಕ್ಷೆ** ಇತ್ಯಾದಿ.

ಭೇದವಿಚಾರ : ನಿಯಮದಂತೆ ಪೂರ್ವಪದ, ಪರಪದಗಳಲ್ಲಿ ಕನ್ನಡ-ಕನ್ನಡ, ಸಂಸ್ಕೃತ-ಸಂಸ್ಕೃತ, ತದ್ಭವ-ತದ್ಭವ, ದೇಶ್ಯ-ತದ್ಭವಗಳಲ್ಲಿ ಸಮಾಸಮಾಡಬಹುದೆಂದು ಮಾನ್ಯ ಮಾಡಲಾಗಿದೆ. ಉದಾ: ನೀರನ್ನು+ ಉಣಿಸು, ದೇವರ+ ಮಂದಿರ, ಸಸಿ+ಮೊಗ ಇವುಗಳನ್ನು ಕ್ರಮವಾಗಿ ಕನ್ನಡಸಮಾಸ, ಸಂಸ್ಕೃತಸಮಾಸ (ಅರಿಸಮಾಸ) ವೆಂಬ ಭೇದ ಮಾಡಲಾಗಿದೆ.

ಅರಿಸಮಾಸ (ವಿರುದ್ಧ ಸಮಾಸ) ದೋಷವಿಚಾರ :

ಪೂರ್ವದಿಂದಲೂ ಕನ್ನಡ ಪದಕ್ಕೆ ಸಂಸ್ಕೃತ ಪದವನ್ನು ಸೇರಿಸಿ ಸಮಾಸ ಮಾಡಬಾರದೆಂಬ ನಿಯಮವಿದೆ. ಪದಗಳಲ್ಲಿ **ಅಸಮನ್ವಯತೆ, ಕರ್ಕಶತೆ**ಗಳುಂಟಾಗುತ್ತದೆ ಎಂದು ಹೀಗೆ ಭಾವಿಸಿದಂತಿದೆ. ಅಂತಹ ಸಮಾಸಗಳು ನಿಯಮ ವಿರುದ್ಧವಾಗಿರುವುದರಿಂದ **'ವಿರುದ್ಧ ಸಮಾಸ'** ಅಥವಾ **'ಅರಿಸಮಾಸ'**ವೆಂದು ಕರೆಯಲಾಗುತ್ತದೆ. ಇದನ್ನು ಪ್ರತ್ಯೇಕ ಸಮಾಸವೆಂದು ಹೇಳುವ ಅಗತ್ಯವಿಲ್ಲ. ಕ್ರಿಯಾ, ಗಮಕ ಸಮಾಸಗಳಲ್ಲಿ ಅರಿಸಮಾಸ ದೋಷವಿಲ್ಲ ಅಂದರೆ ಪ್ರಯೋಗಕ್ಕೆ ಮನ್ನಣೆಹೆಚ್ಚು. ಉದಾ: **'ಪೂರ್ವಕವಿಪ್ರಯೋಗ'** ಮಂಗ

ಅ) ಕರ್ಮಧಾರೆಯದಲ್ಲಿ ಪೂರ್ವೋತ್ತರ ಪದಗಳು ಅತ್ಯಂತ ನಿಕಟವಾಗಿ ಸೇರಿರುತ್ತವೆ. ಆದರೆ ಗಮಕದಲ್ಲಿ ವಿಗ್ರಹರೂಪದಲ್ಲಿದ್ದುದೇ ಸಮಾಸದಲ್ಲಿಯೂ ಇರುತ್ತದೆ. ಪೂರ್ವಪದವು ಇದ್ದ ರೂಪದಲ್ಲೇ ಇದ್ದು ಸ್ಪಷ್ಟಾರ್ಥವನ್ನು ನೀಡುತ್ತದೆ. ಉದಾ:ಬಿಳಿಯ+ಬಟ್ಟೆ = ಬಿಳಿಯ ಬಟ್ಟೆ. 'ಓಡುವ ಕುದುರೆ' ಇಲ್ಲಿ ಪದಜೋಡಿಗಳು ಸಮಾಸಗಳೆನಿಸಿದರೂ ಇವು ವಾಕ್ಯಖಂಡಗಳಂತಿವೆ. ಸಮಾಸಪದವು 'ಏಕಪದ' ವೆಂದು ಭಾಸವಾಗದು. ಸಮಾಸವೆಂದರೆ ವ್ಯವಧಾನವಿರದೆ (ಎಡೆಬಿಡದೆ) ಸೇರಿರುವುದು ವೈಶಿಷ್ಟ್ಯವಾಗಿದೆ. ಹೀಗಾಗಿ ಇದನ್ನು ಕೆಲವರು ಅನವಶ್ಯಕವೆಂದು ಭಾವಿಸಿದ್ದಾರೆ.

ಆ) ಇನ್ನೊಂದು ಅಂಶವೆಂದರೆ ಸಮಾಸಪದದ ಉದಾಹರಣೆಗಳಲ್ಲಿ ಗುರುತಿಸಿರುವಂತೆ ಪದದಅಂತ್ಯದಲ್ಲಿ ನಿಯಮಿತವಾಗಿ ಅತ್ವ, ಹಿಂದೆ ಇತ್ವಗಳು ಬರುವುದು ಗಮನಾರ್ಹ. ಉದಾ: ಬೇಡಿದ+ ವರ(ಇ+ಅ). ಅದನ್ನು ಕೇಶೀರಾಜನು 'ತನಗತ್ವ ಪೆರಗಿತ್ವಂ' ಈ ವಿಶಿಷ್ಟ ಲಕ್ಷಣದಿಂದ ಗಮಕವನ್ನು ಸ್ವತಂತ್ರ ಸಮಾಸವೆಂದು ಹೇಳಿದ್ದಾನೆ. ಅಲ್ಲದೆ ಗಮಕ ಸಮಾಸದಲ್ಲಿ ವಿಗ್ರಹವಾಕ್ಯವನ್ನು ಬಳಸಲಾಗದು. ಆತ ಗಮಕ ಸಮಾಸವು ಕನ್ನಡದ ವಿಶಿಷ್ಟ, ಸ್ವತಂತ್ರಸಮಾಸವೆಂದು ಹೇಳಲು ಯತ್ನಿಸಿದ್ದಾನೆ. ಆ ವಿಗ್ರಹವಾಕ್ಯವು ಸಮಾಸಾರ್ಥವನ್ನು ಹೇಳುವುದಿಲ್ಲ. (ಒಗ್ಗೂಡಿಲ್ಲವಾದರು ಒಗ್ಗೂಡಿದಂತೆ ತಿಳಿದು ವಿಭಕ್ತಿ ಹಚ್ಚುವುದು. ಆದ್ದರಿಂದಲೇ ಕೇಶಿರಾಜನು ಗಮಕ ಸಮಾಸವನ್ನು ಬೇರೆಮಾಡಿ ವಿಶಿಷ್ಟವಾದ ಸಮಾಸವೆಂದಿದ್ದಾನೆ). ಹೀಗೆ ಬಳಕೆಯ ಮಾತಿನಂತೆ ಸ್ಪಷ್ಟವಾಗಿ ಅರ್ಥವಾಗುತ್ತಿರುವ ರೂಪಗಳಿಗೆ 'ಗಮಕ ಸಮಾಸ' ವೆಂಬ ಹೊಸ ಹೆಸರನ್ನು ಕೇಶಿರಾಜನು ಕೊಟ್ಟಿರುವಂತಿದೆ.

(ಇ) ಕೃದಂತ ವಿಶೇಷಣ ಗುಣವಚನ ಪೂರ್ವದಲ್ಲಿದೆ ಎಂಬುದರಿಂದ ಕರ್ಮಧಾರಯವೆಂಬ ಗೊಂದಲವಾಗುತ್ತದೆ. ಉದಾ: ಹೊಳೆವ ಬೆಳಕು, ಉರಿವ ಸೂರ್ಯ, ಹಾರುವ ಹಕ್ಕಿ, ಅಳುವ ಉಪಾಯ ಇಂಥಹ ಉದಾಹರಣೆಗಳಲ್ಲಿ ಮೊದಲ ಪದ ಗುಣವಾಚಕದಂತೆ ಕಂಡರೂ ಅವುಗಳು 'ಕೃದಂತ ವಿಶೇಷಣ' ಎನ್ನುವುದೇ ಲೇಸು. ಹೀಗಾದಾಗ: ಕೇಶಿರಾಜನು ಗಮಕ ಸಮಾಸಕ್ಕೆ ಸ್ವತಂತ್ರ ಅಸ್ತಿತ್ವವನ್ನು ಕೊಟ್ಟಿರುವುದಕ್ಕೂ ಕರ್ಮಧಾರಯವೋ? ಗಮಕವೋ? ಎಂಬ ಗೊಂದಲನಿವಾರಣೆಗೂ ಉತ್ತರಸಿಕ್ಕಬಹುದು.

ಳದ+ಆರತಿ=ಮಂಗಳಾರತಿ, ದಳದ+ಪತಿ=ದಳಪತಿ, ಮಹಾ+ಕಾಳಿ=ಮಾಕಾಳಿ, ರಾಯರಲ್ಲಿ+ಕೋಲಾಹಲ=ರಾಯ ಕೋಲಾಹಲ, ಹೃದಯಬೇನೆ, ಕೂರಸಿ, ಹೀಗೆ ಜನರ ಬಳಕೆಯಲ್ಲಿ ಬಂದಿರುವ **'ಬಿರುದಾವಳಿ'**ಗಳಲ್ಲಿರುವರೂಪಗಳನ್ನು (ಅರಿಸಮಾಸ) ದೋಷವೆಂದು ಪರಿಗಣಿಸಬೇಕಾಗಿಲ್ಲ. ಉದಾ: ಅರಿಭಯಂಕರ, ಅಂಕದಲ್ಲಿ (ಯುದ್ಧ) +ತ್ರಿಣೇತ್ರ= ಅಂಕತ್ರಿಣೇತ್ರ ಇತ್ಯಾದಿ ಪ್ರಯೋಗಗಳನ್ನು ನೋಡಿ ನಿರ್ಧರಿಸಬೇಕಾಗುತ್ತದೆ.

(೧) ಉತ್ತರಾರ್ಥಪ್ರಧಾನ ಸಮಾಸ :

೩) <u>ತತ್ಪುರುಷ ಸಮಾಸ</u> : ಎರಡು ನಾಮಪದಗಳು ಸೇರಿ ಸಮಾಸವಾದಾಗ ಪರಪದದ ಅರ್ಥಪ್ರಧಾನವಾಗಿ ತೋರಿದರೆ ಅದನ್ನು **'ತತ್ಪುರುಷಸಮಾಸ'** ವೆನ್ನುತ್ತೇವೆ. ಉದಾ: 'ತಲೆನೋವು= ತಲೆಯಲ್ಲಿ+ **ನೋವು**' ಎಂಬ ಉತ್ತರಪದಾರ್ಥ ಪ್ರಮುಖವಾಗಿ ತೋರುತ್ತದೆ.

ಸಾಮಾನ್ಯವಾಗಿ ಈ ಸಮಾಸದಲ್ಲಿ ಪೂರ್ವಪದಾಂತ್ಯದಲ್ಲಿ ತೃತೀಯಾ ವಿಭಕ್ತಿಯಿಂದ ಸಪ್ತಮೀ ವಿಭಕ್ತಿವರೆಗಿನ ಪ್ರತ್ಯಯ ಸಹಿತವಾಗಿ ವಿಗ್ರಹ ಮಾಡಿದರೆ, **ಆಯಾ 'ವಿಭಕ್ತಿಯ ಗಳ ತತ್ಪುರುಷ'**ವೆಂದು, **ಐದುಭೇದ**ಗಳನ್ನು ಗುರುತಿಸಲಾಗುತ್ತದೆ.(೧)

ಇವುಗಳಿಗೆ ಕ್ರಮವಾಗಿ ಉದಾಹರಣೆಗಳು :

ಕಣ್ಣಿ**ನಿಂದ**	+ ಕುರುಡ	=	ಕಣ್ಣುಗ್ರುಡ	-- ತೃತೀಯಾ ತತ್ಪುರುಷ
ಬಳಿ**ಗೆ**	+ ಚಿನ್ನ	=	ಬಳಿಚಿನ್ನ(೩)	-- ಚತುರ್ಥೀ ತತ್ಪುರುಷ
ರೋಗದದೆಸೆ**ಯಿಂದ**	+ ಭಯ	=	ರೋಗಭಯ	-- ಪಂಚಮೀ ತತ್ಪುರುಷ
ಸಾಲ**ದ**	+ ಮೇಳ	=	ಸಾಲಮೇಳ	-- ಷಷ್ಠೀ ತತ್ಪುರುಷ
ಮರಳಿ**ನ**	+ ಕಾಡು	=	ಮರಳುಗಾಡು	-- ಷಷ್ಠೀ ತತ್ಪುರುಷ
ತಲೆಯ**ಲ್ಲಿ**	+ ನೋವು	=	ತಲೆನೋವ	-- ಸಪ್ತಮೀ ತತ್ಪುರುಷ

(ಇಲ್ಲಿ ಪೂರ್ವಪದದ ವಿಭಕ್ತಿಯನ್ನು ಉತ್ತರಪದದ ಅರ್ಥವು ಅವಲಂಭಿಸಿದೆ).

೪) <u>ಕರ್ಮಧಾರಯ ಸಮಾಸ</u> : ಪೂರ್ವೋತ್ತರ ಪದಗಳು ಲಿಂಗ, ವಚನ, ವಿಭಕ್ತಿಗಳಲ್ಲಿ ಸಮಾನವಾದದ್ದು, **ವಿಶೇಷಣ**(೨) **ವಿಶೇಷ್ಯ**ಗಳಿಂದ ಅನ್ಯೋನ್ಯವಾಗಿ ಕೂಡಿದ ಸಮಾಸವನ್ನು **'ಕರ್ಮಧಾರಯ ಸಮಾಸ'**ವೆನ್ನುತ್ತೇವೆ.

ಉದಾ : ಪಿರಿದು + ಮರ (ವಿಶೇಷಣ + ವಿಶೇಷ್ಯ) = ಪೆರ್ಮರ

ಕರಿದು + ಮೋಡ (ವಿಶೇಷಣ + ವಿಶೇಷ್ಯ) = ಕಾರ್ಮೋಡ

ಇದರಲ್ಲಿ ಲೋಪ, ಆಗಮ, ಆದೇಶ-ಸಮಾಸಕಾರ್ಯಗಳು ಹೆಚ್ಚಾಗಿ ಉಂಟಾಗುತ್ತವೆ. ಇಲ್ಲಿ ಪಿರಿದು ಎನ್ನುವುದಕ್ಕೆ **'ಪೆರ್'**, ಕರಿದು ಎನ್ನುವುದಕ್ಕೆ **'ಕಾರ್'** ಆದೇಶವಾಗಿವೆ.

೧) ನ+ಐಕ್ಯತೆ= ಅನೈಕ್ಯತೆ, ನ+ಜ್ಞಾನ = ಅಜ್ಞಾನ, <u>'ಅನ್' 'ಅ'</u> ಆದೇಶಗಳು ಸೇರಿದ ಇಂತಹ ರೂಪಗಳನ್ನು 'ನಯ್'ತತ್ಪುರುಷ ಸಮಾಸವೆನ್ನಲಾಗುತ್ತದೆ. ಈ ರೂಪಗಳು ಕನ್ನಡದಲ್ಲೂ ಬಳಕೆಯಿವೆ.

೨) ಗುಣವಾಚಕಗಳು ವಿಶೇಷಣಗಳೆನ್ನುತ್ತೇವೆ. ಅವುಗಳನ್ನು ಹೊಂದಿರುವುದು 'ವಿಶೇಷ್ಯ' ವೆನ್ನಲಾಗುತ್ತದೆ.

೩) ಇಲ್ಲಿ ಅದಕ್ಕಾಗಿ (ತಾದರ್ಥ್ಯಭಾವವಿರುತ್ತದೆ.)

ಅವುಗಳ ಅರಿವಿರಬೇಕು.

ಕರ್ಮಧಾರಯಸಮಾಸದಲ್ಲಿ **ಎಂಟು** ಬಗೆಗಳಿವೆ:

೧) ಪಿರಿದು(೧)	+ ಮರ = ಹೆಮ್ಮರ	- ವಿಶೇಷಣ ಪೂರ್ವಪದ ಕ.ಧಾ.ಸ
೨) ವಿಶೇಷವಾದ(೨)	+ ಕಾರ್ಯ = ಕಾರ್ಯವಿಶೇಷ	- ವಿಶೇಷಣ ಉತ್ತರಪದ ಕ.ಧಾ.ಸ
೩) ಶುಭವಾದ	+ ಮಂಗಳವಾದ=ಶುಭಮಂಗಳ	- ವಿಶೇಷಣ ಉಭಯಪದ ಕ.ಧಾ.ಸ
೪) ಮೇಘದಂತೆ	+ ಶ್ಯಾಮ = ಮೇಘಶ್ಯಾಮ	- ಉಪಮಾನ ಪೂರ್ವಪದ ಕ.ಧಾ.ಸ
೫) ಅಡಿಯು	+ ತಾವರೆಯಂತೆ = ಅಡಿದಾವರೆ	- ಉಪಮಾನ ಉತ್ತರಪದ ಕ.ಧಾ.ಸ
೬) 'ಕಾವೇರಿ'	ಎಂಬ ನದಿ = ಕಾವೇರಿನದಿ	- ಸಂಭಾವನಾ (ಹೆಸರು) ಪೂ.ಪ ಕ.ಧಾ.ಸ
೭) ಅಭಿಮಾನವೇ	+ ಧನ = ಅಭಿಮಾನಧನ	- ಅವಧಾರಣಾ(ನಿಶ್ಚಯ) ಪೂ.ಪ ಕ.ಧಾ.ಸ

೮) ಕ್ಷೀರ **ಬೆರೆಸಿದ** + ಅನ್ನ = ಕ್ಷೀರಾನ್ನ, ಮೊಸರನ್ನ - ಇಲ್ಲಿ ಮಧ್ಯಮಪದ ಲೋಪವಾಗಿ, ಲುಪ್ತಮಧ್ಯಮ ಪದಕರ್ಮಧಾರಯ ಸಮಾಸವಾಗುತ್ತದೆ.

ಕರ್ಮಧಾರಯ ಸಮಾಸದ ಕೆಲವು ಮುಖ್ಯ **ಸಮಾಸಕಾರ್ಯ**ಗಳನ್ನು ಸಂಕ್ಷಿಪ್ತವಾಗಿ ಸೂಚಿಸಲಾಗಿದೆ: ಇವುಗಳ ಅರಿವಿಲ್ಲದೆ ಈ ಸಮಾಸಗಳನ್ನು ಗುರುತಿಸುವುದು, ಅರ್ಥೈಸುವುದುಕಷ್ಟ.

ಕರ್ಮಧಾರಯ ಸಮಾಸಕಾರ್ಯ :

೧) ಹಿರಿದು + ಜೇನು = **ಹೆಜ್ಜೇನು** - ಪೂರ್ವಪದದ ಅಂತ್ಯ ಸ್ವರಸ್ವಹಿತ ಲೋಪ, ಆದಿ ಇತ್ವಕ್ಕೆ

ಹಿರಿದು + ಬಿದರೆ = **ಹೆಬ್ಬಿದಿರು** ಎತ್ವಾದೇಶವಾಗಿದೆ, ದ್ವಿತ್ವ.

ಪಿರಿದು + ಮರ = **ಪೆರ್ಮರ**

ಹಿರಿದು + ಬಾಗಿಲು = **ಹೆಬ್ಬಾಗಿಲು**- ಜೊತೆಗೆ ರ ಕಾರದ ಮುಂದಿನ ಬ ಕಾರ ದ್ವಿತ್ವ

ಹಿರಿದು (ಹೆರ್) +ಮರ = **ಹೆಮ್ಮರ** ಜೊತೆಗೆ ರ ಕಾರದ ಮುಂದಿನ ಬ ಕಾರ ದ್ವಿತ.

ಹಿರಿದು(ಹೆರ್)+ಮಾರಿ = **ಹೆಮ್ಮಾರಿ**

ಬಿಳಿದು + ಕೊಡೆ = **ಬೆಳ್ಗೊಡೆ** - ಜೊತೆಗೆ ಕ ಕಾರಕ್ಕೆ ಗ ಕಾರಾದೇಶ.

೨) **'ಕೆಂದಳಿರು'** = ಕೆಚ್ಚನೆ+ತಳಿರು(ಚಿಗುರು), **'ಕೆಂಗಾಯಿ'**=ಕೆಚ್ಚನೆ+ಕಾಯಿ, **ಪಂದಲೆ**=ಪಚ್ಚನೆ(ಹಸಿ)+ತಲೆ, **ಪಂದಳಿರು**=ಪಚ್ಚನೆ+ತಳಿರು, **ಬೆನ್ನೀರು** = ಬೆಚ್ಚನೆ+ನೀರು, **'ಬೆಂಬೂದಿ'**=ಬೆಚ್ಚನೆ+ಬೂದಿ, **ಕೆಂಗದಿರು** = ಕೆಚ್ಚನೆ+ಕದಿರು (ಕಿರಣ)

---

೧) ನಾಮಪದಗಳ ಹಿಂದೆ ಬರುವ ವಿಶೇಷಣಗಳು 'ಅನುವಾದ್ಯ ವಿಶೇಷಣ' ವೆನ್ನಲಾಗುತ್ತದೆ.

೨) ಸಮಾಸ ಪದದಲ್ಲಿ ನಾಮಪದಗಳ ಮುಂದೆ ಬರುವ ವಿಶೇಷಣಗಳು 'ವಿಧೇಯ ವಿಶೇಷಣ'ವೆನ್ನುವರು.

- ಇಲ್ಲಿ ಕೆಚ್ಚನೆ ಪೂರ್ವಪದದ ಉಪಾಂತ್ಯ ಸ್ವರಸಹಿತ ಲೋಪ, 'ಚ್' ಕಾರಕ್ಕೆ 'ಮ್' ಕಾರ ಬಂದು, ಉತ್ತರಪದದ ಆದಿಗೆ ತೃತೀಯ ವರ್ಣಾದೇಶವಾಗಿದೆ. ಹೀಗೆ **ಕೆಂಗಾವಿ**

ಕೆಂಗಾಯಿ =

ಕೆಚ್ಚನೆ+ ಕಾಯಿ - ವಿಗ್ರಹ

ಕೆಚ್ + ಕಾಯಿ - ಪೂ. ಸ್ವ.ಸ. ಲೋಪ

ಕೆಂ + ಕಾಯಿ - **'ಚ್'** ಕಾರಕ್ಕೆ **'ಮ್'**, + ಬಿಂದು ಆದೇಶ

ಕೆಂ + ಗಾಯಿ - ಉತ್ತರಪದ **'ಕ'** ಕಾರಕ್ಕೆ **'ಗ'** ಕಾರ = **ಕೆಂಗಾಯಿ** ರೂಪ.

೩) **ಕಟ್ಟಪ್ಪಣೆ** = ಕಡಿದು+ಅಪ್ಪಣೆ - ಇಲ್ಲಿ ಉಪಾಂತ್ಯ ಸ್ವರ ಸಹಿತ ಲೋಪ

ಕಟ್+ ಅಪ್ಪಣೆ - ಪರದ ಸ್ವರನಿಮಿತ್ತ 'ಟ'ಕಾರಕ್ಕೆ ದ್ವಿತ್ವ ಬಂದಿದೆ

ಕಟ್ಟಪ್ಪಣೆ = (ಗಂಭೀರವಾದ)

ನಿಟ್ಟುಸಿರು = ನಿಡಿದು +ಉಸಿರ್

ನಿಡ್ + ಉಸಿರು - ಇಲ್ಲಿ ಸ್ವ. ಸ. ಲೋಪ

ನಿಟ್ + ಉಸಿರು - 'ಡ' ಕಾರಕ್ಕೆ 'ಟ'ಕಾರಾದೇಶ

ನಿಟ್+ಟ್+ಉಸಿರು - ಸ್ವರನಿಮಿತ್ತ 'ಟ' ಕಾರಕ್ಕೆ ದ್ವಿತ್ವ

೪) **ಕಾರ್ಮೋಡ** = ಕರಿದು(ಇದು) +ಮೋಡ =

ಕರ್+ ಮೋಡ - ಉಪಾಂತ್ಯ ಸ್ವರಸಹಿತ ಲೋಪ

ಕರಿದು + ಮೋಡ - ಆದಿಸ್ವರಕ್ಕೆ ದೀರ್ಘಾದೇಶ

ಕಾರ್ಮೋಡ ಹೀಗೆಯೇ **'ಪೇರಾನೆ'**. ಇತ್ಯಾದಿ

ಹೀಗೆ **ಕಾರಾಕಳು** = ಕರಿದು+ಆಕಳು (ಕಪ್ಪು ಹಸು), **ಕಾರ್ಗಾಲ** = ಕರಿದು+ಕಾಲ (ಮಳೆಗಾಲ), **ಮಾರ್ಬಲ**= ಮರುಆದಬಲ (ಎದುರು ಬಲ), ಹೀಗೆಯೇ **ಮಾರುತ್ತರ**, **ಮಾರ್ದನಿ** ಇತ್ಯಾದಿ. ಇಲ್ಲಿ ಪೂರ್ವಪದದ ಆದಿಯ ಮೊದಲಸ್ವರಕ್ಕೆ ದೀರ್ಘಾದೇಶವಾಗಿದೆ (ಉಪಾಂತ್ಯ ಸ್ವರಸಹಿತ ಲೋಪವಾಗಿದೆ).

೫) **ಕಿರುಮಣೆ** = ಕಿರಿದು+ಮಣೆ - ಉಪಾಂತ್ಯ ಸ್ವರಸಹಿತ ಲೋಪ,

ಕಿರು + ಮಣೆ = ಕಿರುಮಣೆ/ **ಕಿರುಗಡ್ಡ** = ಕಿರಿದು+ಗಡ್ಡ

- ಉಕಾರಾದೇಶಗಳಾಗಿ ಈ ರೂಪಗಳಾಗಿವೆ. ಹೀಗೆಯೇ ಕಿತ್ತೀಳೆ=ಕಿರಿದು+ಈಳೆ - ಇಲ್ಲಿ ಉಪಾಂತ್ಯ ಸ್ವ.ಸ. ಲೋಪ .

ಕಿರ್+ ಈಳೆ -

ಕಿತ್ + ತ್ + ಈಳೆ - ರಕಾಕ್ಕೆ ತಕಾರಾದೇಶ, ದ್ವಿತ್ವ = **ಕಿತ್ತೀಳೆ**

'ಕಿಬ್ಬೊಟ್ಟೆ' ಕಿರಿದು+ ಪೊಟ್ಟೆ - ಆದಿಪದದ ಉಪಾಂತ್ಯ ಸ್ವರಸಹಿತ ಲೋಪ,
ಕಿರ್ + ಪೊಟ್ಟೆ - ರಕಾರ ಮುಂದಿನ ಪಕಾರಕ್ಕೆ ಬಕಾರಾದೇಶ
ಕಿರ್ + ಬೊಟ್ಟೆ - ರಕಾರಕ್ಕೆ ಮುಂದಿನ ಬಕಾರಕ್ಕೆ ದ್ವಿತ್ವ=ಕಿಬ್ಬೊಟ್ಟೆ.

೬) **ಕುಡುಗೋಲ್** = ಕೊಂಕಿತು+ಕೋಲ್, **ಕುಡುವಿಲ್ಲು** = ಕೊಂಕಿತು+ಬಿಲ್ಲು - ಇಲ್ಲಿ ಉಪಾಂತ್ಯ ಸ್ವರಸಹಿತ ಲೋಪವಾಗಿದೆ, ಕೊಂಕು ಎನ್ನುವುದಕ್ಕೆ **'ಕುಡು'** ಆದೇಶವಾಗಿದೆ. ಸಂಧಿನಿಯಮದಂತೆ ಗಕಾರ, ವಕಾರಾದೇಶಗಳಿಂದ ಈ ರೂಪಗಳಾಗಿವೆ.

೭) **ಇಂಚರ** = ಇನಿದು+ಸರ **(ಮಧುರ ಧ್ವನಿ)** - ಉಪಾಂತ್ಯ ಸ್ವರಸಹಿತ ಲೋಪ, 'ಪರ'ದ ಸಕಾರಕ್ಕ ಚಕಾರಾದೇಶ, 'ನ'-ಕಾರಕ್ಕೆ ಬಿಂದು ಆದೇಶವಾಗಿ ಈ ರೂಪವಾಗಿದೆ.

೮) **ಕಮ್ಮೆಲರು** = ಕಮ್ಮಿತ್ತು+ಎಲರು (ಸುವಾಸನೆಯ ಗಾಳಿ), ತಣ್ಣೆಲರು = ತಣ್ಣಿತ್ತು+ಎಲರು - ಇಲ್ಲಿ ಪೂರ್ವಪದ ಉಪಾಂತ್ಯ ಸ್ವರಸಹಿತ ಲೋಪ, **'ಮ' 'ಣ್'**ಕಾರಗಳಿಗೆ ಸ್ವರ ಪರವಾಗಿ, ದ್ವಿತ್ವಗಳಿಂದ ಈ ರೂಪಗಳುಸಿದ್ಧವಾಗಿವೆ.

ಇದರಂತೆ ಕರ್ಮಧಾರಯ ಸಮಾಸದ ಉಳಿದ ರೂಪಗಳನ್ನು ತಿಳಿದುಕೊಳ್ಳಬೇಕಾಗುತ್ತದೆ.

೫) ದ್ವಿಗುಸ<u>ಮಾಸ</u> : ಪೂರ್ವಪದ ಸಂಖ್ಯಾವಾಚಕವಾಗಿಯೂ, ಪರಪದ ನಾಮವಾಚಕವಾಗಿದ್ದು, ಸಮಾಸವಾದರೆ ಅದು **'<u>ದ್ವಿಗು ಸಮಾಸ</u>'**ವೆನಿಸುತ್ತದೆ.

ಉದಾ : ನವ+ರಾತ್ರಿಗಳು	=	ನವರಾತ್ರಿ**ಗಳು**
ಚತುರ್ದಶ+ಭುವನಗಳು	=	**ಚತುರ್ದಶಭುವನಗಳು**
ಪಂಚ+ಇಂದ್ರಿಯ	=	ಪಂಚೇಂದ್ರಿಯ (ಸಮಾಹಾರ ದ್ವಿಗು)
ಒಂದು + ಕಟ್ಟು	=	ಒಗ್ಗಟ್ಟು (ಸಮಾಹಾರ ದ್ವಿಗು)

ಹೀಗೆ **ಇಕ್ಕೆಲ, ಮೂರಡಿ, ಏಕಾಗ್ರ, ಒಂದೂರು,** ಇತ್ಯಾದಿ. ಇಲ್ಲಿ ಕೆಲವು ಸಮಾಸಪದಗಳು ಬಹುವಚನಾಂತವಾಗಿ, ಕೆಲವು **ಏಕವಚನಾಂತ**ವಾಗಿವೆ. ಉದಾ: ಎರಡು ತಂಡಗಳ ಸಮಾಹಾರ **ಇತ್ತಂಡ** ಸಮೂಹಾರ್ಥ ತೋರಿದರೆ **'ಸಮಾಹಾರ ದ್ವಿಗು'**ವನ್ನುತ್ತಾರೆ. ಇತ್ತಂಡ ಇಲ್ಲಿ ಸಮಾಸಪದದ ರೂಪಗಳು ಏಕವಚನಾಂತವಾಗಿವೆ.

ದ್ವಿಗುಸಮಾಸಕಾರ್ಯ : ಪೂರ್ವಪದ ಸಂಖ್ಯಾವಾಚಕಕ್ಕೆ ಬರುವ ಕೆಲವು **ಆದೇಶ :**

೧) **ವ್ಯಂಜನಾದಿ** ಉತ್ತರಪದಗಳಾದಾಗ **'ಒಂದು'** ಎನ್ನುವುದಕ್ಕೆ **'ಒರ್'** ಎಂದು ಸರ್ವಾದೇಶವಾಗುತ್ತದೆ. ಉದಾ: ಒಂದು+**ಪಿಡಿ** = **ಒರ್ಪಿಡಿ.** ಒರ್ದೆಸೆ, **ಒಗ್ಗಟ್ಟು** ರೇಫದ ಮುಂದಿನ 'ದ'ಕಾರ 'ಗ'ಕಾರ ದ್ವಿತ್ವವಾಗಿವೆ . ಹೀಗೆ ಸ್ವರಾದಿಪರಪದ ಬಂದಾಗ ಹಾಗೆಯೇಯಿದ್ದು, ಸ್ವರಲೋಪವಾಗುತ್ತದೆ. ಉದಾ: ಒಂದು+**ಅಡಿ** = **ಒಂದಡಿ.**

೨) **'ಎರಡು'** - **'ಇರ್'** ಸರ್ವಾದೇಶವಾಗುತ್ತದೆ. ಎರಡು+ಕಟ್ಟು= **ಇರ್ಕಟ್ಟು/ಇರ್ಕಟ್ಟು**

(ಎರಡುಸಮೂಹ). ಸ್ವರಾದಿಪರಪದದಲ್ಲಿ **'ಎರಡು'** - **'ಈರ್'** ಸರ್ವಾದೇಶ ಉದಾ: ಎರಡು+ಎಸಳು = **ಈರೆಸಳು** (ಎರಡು ದಳ), ಎರಡು+ಅಡಿ=**ಈರಡಿ** (ಎರಡು ಹೆಜ್ಜೆ).

೩) **'ಮೂರು'** ಎಂಬುದಕ್ಕೆ **'ಮು'**(೧) ಎಂಬ ಸರ್ವಾದೇಶ. (ಮುಂದಿನ ವ್ಯಂಜನಕ್ಕೆ ದ್ವಿತ್ವ). ಮೂರು+<u>ಕು</u>ಪ್ಪೆ = **ಮುಕ್ಕುಪ್ಪೆ/ ಮುಗ್ಗುಡ್ಡೆ.** **'ಮೂರು'**-ಅಂತ್ಯಲೋಪ: ಮೂ+ಗಾವುದ = **ಮೂಗಾವುದ** (೩೬ ಮೈಲಿದೂರ). ಸ್ವರಾದಿ ಪರಪದವಿದ್ದಾಗ 'ಮೂರು' **'ಮುಯ್'** ಸರ್ವಾದೇಶ. ಉದಾ: ಮೂರು+ಅಡಿ= **ಮುಯ್ಯಡಿ** (ದೂರ).

೪) **'ನಾಲ್ಕು'** - **'ನಾಲ್'** ಸರ್ವಾದೇಶ : ನಾಲ್ಕು+ಪಡಿ=**ನಾಲ್ವಡಿ**(೧), **ನಾಲ್ವತ್ತು**=ನಾಲ್ಕು+ಪತ್ತು (ನಲ್ವತ್ತು ರೂಢಿ)

೫) **'ಅಯ್ದು'**-**'ಅಯ್'** **(ಐ)** ಸರ್ವಾದೇಶ : ಐದು+ಪತ್ತು = **ಐವತ್ತು** (ಪ-ವಕಾರಾದೇಶ)

೬) **'ಆರು'**-**'ಅರು'** ಸರ್ವಾದೇಶ : ಆರು+ಗಾವುದ=**ಅರುಗಾವುದ,** ಆರು+ಬಣ್ಣ = **ಅರುವಣ್ಣ**

೭) **'ಏಳು'**-**'ಏಳ್/ಎಳ್'** ಸರ್ವಾದೇಶ : ಏಳು+ನೂರು=**ಏಳ್ನೂರು;** ಏಳು+ಪತ್ತು = **ಏಪ್ಪತ್ತು.**(೨)

೮) **'ಎಂಟು'**-**'ಎಣ್'** ಸರ್ವಾದೇಶ : ಎಂಟು+ದೆಸೆ = **ಎಣ್ದೆಸೆ, ಎಂಬತ್ತು** (೩)

೯) **'ಒಂಬತ್ತು'** ಪತ್ತು ಪರದಲ್ಲಿದ್ದಾಗ **'ತೊಂ'** ಸರ್ವಾದೇಶ-ಒಂಬತ್ತು+ಪತ್ತು=**ತೊಂಬತ್ತು.** 'ಒಂಬತ್ತು' **'ಒಂಬಯ್'** ಆದೇಶ (ನೂರು, ಸಾವಿಗಳಿದ್ದಾಗ) ಒಂಬತ್ತು+ನೂರು = **ಒಂಬಯ್ನೂರು.**

೧೦) **'ಪತ್ತು'** **'ಪನ್'** ಸರ್ವಾದೇಶ (ಒಂದು / ಎರಡುಗಳು ಪರವಾದರೆ)

ಪತ್ತು+ಒಂದು = **ಪನ್ನೊಂದು, ಪನ್ನೆರಡು**

'ಪತ್ತು' - ಮೂರು, ನಾಲ್ಕು, ಐದು ಪರವಾದರೆ **'ಪದಿ'** ಸರ್ವಾದೇಶ

ಪತ್ತು+ಮೂರು = ಪದಿಮೂರು, ಪದಿನಾಲ್ಕು, **ಪದಿನೈದು**(೪).(ಹ.ಗ.)

'ಪತ್ತು'-ಸಾವಿರ ಪರದಲ್ಲಿದ್ದಾಗ **'ಪಯಿನ್'**ಆದೇಶ: ಪತ್ತು+ಸಾವಿರ= ಪಯಿಂಛಾಸಿರ(೫)

---

೧) <u>ಮುನ್ನೀರು, ಮುಮ್ಮಡಿ, ನಾಲ್ವಡಿ</u> 'ಕೃಷ್ಣರಾಜ ಒಡೆಯರ್' (ಪಡಿ- ನೆಯವರು), ರೂಪವನ್ನು ನೋಡಿದ್ದೇವೆ. ೨) ಳ ಕಾರದ ಪರದ ಪಕಾರ ದ್ವಿತ್ವ.

೩) 'ಣ' ಕಾರಕ್ಕೆ ಬಿಂದು, ಪಕಾರಾಕ್ಕೆ ಬಕಾರಾದೇಶ. ಇಲ್ಲಿ 'ಭ' ಕಾರ ಬಳಕೆ ಸೂಕ್ತವಲ್ಲ.

೪) ಹದಿನಾರು, ಹದಿನೈದು, ಹದಿಮೂರು (ಹ.ಗ 'ಪ' ಕಾರಕ್ಕೆ 'ಹ'ಕಾರವಾದ) ಹೊ.ಗ. ರೂಪಾಂತರಗಳು. ೫) ಇಲ್ಲಿ 'ಸ' ಛಕಾರಾದೇಶವಾಗಿರುವ ಹಳೆಗನ್ನಡ ರೂಪ.

II. ಪೂರ್ವಪದಾರ್ಥಪ್ರಧಾನ ಸಮಾಸ

೭) **ಅಂಶಿ ಸಮಾಸ** (ಅವ್ಯಯೀಭಾವ ಸಮಾಸ) : ಪೂರ್ವಪದದಲ್ಲಿ **ಅಂಶವಾಚಕ**(೧) ಪರದಲ್ಲಿ **ಅಂಶಿವಾಚಕ**ದೊಂದಿಗೆ ಸಮಾಸವಾದರೆ **'ಅಂಶಿ ಸಮಾಸ'**ವೆನ್ನುತ್ತೇವೆ. ಆ **ಅಂಶ-ಅಂಶಿಗಳೆರಡೂ ಒಂದೇವಚನ, ವಿಭಕ್ತಿ, ಲಿಂಗಗಳಲ್ಲಿರುತ್ತವೆ.** ಈ ಸಮಾಸ ಪದದಲ್ಲಿ ಪೂರ್ವಪದ ಮುಖ್ಯವಾಗಿರುತ್ತದೆ.

ವಿಶೇಷ : ಈ ಸಮಾಸಪದವನ್ನು ವಿಗ್ರಹ ಮಾಡಿದಾಗ ಪೂರ್ವಪದ ಉತ್ತರಕ್ಕೂ, ಉತ್ತರಪದ ಪೂರ್ವಕ್ಕೂ ಬರುವುದು. ಇದನ್ನು '**ಪೂರ್ವನಿಪಾತ**'ವೆನ್ನುತ್ತಾರೆ.

ಉದಾ :	**ಅಂಶ**	+ **ಅಂಶಿ**	= **ಅಂಶಿಸಮಾಸ**
	ಜಾವದ	+ ಮುಂದು	= ಮುಂಜಾವ
	ಕೈಯ್ಯ	+ ಮುಂದು	= ಮುಂಗೈ
	ಕಾಲಿನ	+ ಅಡಿ	= ಅಂಗಾಲು
	ಬಾಗಿಲ	+ ಮುಂದು	= ಮುಂಬಾಗಿಲು
	ಕಾರಿನ	+ ಮುಂದು	= ಮುಂಗಾರು (ಮಳೆಗಾಲ)

ಇಲ್ಲಿ **'ಅಂಶ'ವಾಚಕಗಳಿಗೆ** ಬರುವ ಆದೇಶಕಾರ್ಯಗಳು :

೧) ಮೇಲಿನ ಉದಾಹರಣೆಗಳಲ್ಲಿ **ಮುಂದು** - ಎಂಬುದಕ್ಕೆ **'ಮುಂ', ಅಡಿ-'ಅಂ' ಆದೇಶ, ಹಿಂದು-'ಹಿಂ' ಆದೇಶ**. ಉದಾ : ತಲೆಯ + ಹಿಂದು = **ಹಿಂದಲೆ**

೨) **ಕೆಳಗು -'ಕಿಳ್'** ಆದೇಶ - ಲೋಕದ + ಕೆಳಗು = **ಕಿಳ್ಳೋಕ**
ಕೆಳಗು -'ಕಿನ್' ಆದೇಶ - ನಾಲಗೆಯ + ಕೆಳಗು = **ಕಿನ್ನಾಲಿಗೆ** (೨)

೩) **ಹೊರಗು 'ಹೊರ'** ಆದೇಶ - ಮನೆಯ + ಹೊರಗು = **ಹೊರಮನೆ**(೩)
ಒಳಮನೆ

ಈ ಅಂಶವಾಚಕಗಳು ಅವ್ಯಯಗಳಾಗಿರುವುದರಿಂದ **'ಅವ್ಯಯೀಭಾವ ಸಮಾಸ'**ವೆನ್ನಲಾಗುತ್ತಿದೆ.

III. ಉಭಯಪದಾರ್ಥಪ್ರಧಾನಸಮಾಸ

೮) **ದ್ವಂದ್ವ ಸಮಾಸ** : ಎರಡು ಅಥವಾ ಹೆಚ್ಚು ನಾಮಪದಗಳು ಸೇರಿದರೆ **'ದ್ವಂದ್ವ**

---

೧) 'ಅಂಶ' ಎಂದರೆ ಭಾಗ, 'ಅಂಶಿ' ಎಂದರೆ ಭಾಗವುಳ್ಳದ್ದೆಂದು ತಿಳಿಯಬೇಕು.

೨) 'ಕಿರ್ನಾಲಿಗೆ' ಬದ್ದಿದೆ - ಈ ಪ್ರಯೋಗ ಆಡುಮಾತಿನ ರೂಢಿಪ್ರಯೋಗವೆನ್ನಬಹುದು. ಕಿನ್ನಾಲಿಗೆ ಕೆಚ್ಚನೆ + ನಾಲಗೆ ವಿ.ಪೂ.ಕ. ಸಮಾಸ.

೩) ಹೊರಗಿನ+ಮನೆ ಎಂದು ಬಿಡಿಸಿ ಷಷ್ಠೀತತ್ಪುರುಷವೆನ್ನಲಾಗದು. ಇಲ್ಲಿ ಒಂದೇ ವಿಭಕ್ತ್ಯಂತದ ಅಂಶ+ಅಂಶಿ (ಪೂರ್ವನಿಪಾತ) ಗಳ ಸೇರ್ಪಡೆಯಿದೆ. ಈಗಾಗಿ ಸಮಾಸದವಿಗ್ರಹವಾಕ್ಯ ಸಂದರ್ಭಾನುಸಾರ ತತ್ಪುರುಷಸಮಾಸ ಇಲ್ಲವೆ ಅಂಶಿಸಮಾಸಗಳೆಂದು ನಿರ್ಧರಿಸಬೇಕಾಗುತ್ತದೆ.

ಸಮಾಸ' ವೆನ್ನುತ್ತಾರೆ. ಇಲ್ಲಿನ ಪದಗಳು ಅರ್ಥದಲ್ಲಿ ಮುಖ್ಯ ಅಮುಖ್ಯವೆಂಬ ಭೇದ ತೋರದಂತೆ ಸಮಾಸವಾಗುತ್ತವೆ. ಎರಡುಪದಗಳೂ ಇಲ್ಲಿ ಪ್ರಧಾನವಾಗಿರುತ್ತವೆ.

ಉದಾ: ತೇರೂ+ಆನೆಯೂ+ಕುದುರೆಯೂ = ತೇರಾನೆಕುದುರೆಗಳು/ ಕುದರೆ.(೧)

ಧನವೂ + ಧಾನ್ಯವೂ = ಧನಧಾನ್ಯಗಳು / ಧನಧಾನ್ಯ.

ಕೆರೆಯೂ + ಕಟ್ಟೆಯೂ+ ಬಾವಿಯೂ = ಕೆರೆಕಟ್ಟೆಬಾವಿಗಳು/ ಕೆರೆಕಟ್ಟೆಬಾವಿ.

IV. ಅನ್ಯಪದಾರ್ಥ ಪ್ರಧಾನ ಸಮಾಸ

೯) **ಬಹುವ್ರೀಹಿಸಮಾಸ** : ಎರಡು ಅಥವಾ ಹೆಚ್ಚುನಾಮಪದಗಳು ಸೇರಿ ಸಮಾಸವಾದಾಗ, ಬೇರೊಂದು ಪದದಅರ್ಥವು ಪ್ರಧಾನವಾಗಿ ತೋರಿದರೆ ಅದನ್ನು **'ಬಹುವ್ರೀಹಿಸಮಾಸ'** ವೆನ್ನಲಾಗುತ್ತದೆ. ಇಲ್ಲಿ ವಾಕ್ಯಪದ್ಧತಿಯ ವಿಗ್ರಹಗಳು ತೋರುತ್ತವೆ.

ಉದಾ: ಸರ್ಪವು ಭೂಷಣವಾಗಿ ಉಳ್ಳವನು (ಯಾರೋ) ಆತ=ಸರ್ಪಭೂಷಣ (ಅತ್ವ).
ಚಕ್ರವನ್ನು ಪಾಣಿಯಲ್ಲಿ ಉಳ್ಳವನು (ಯಾರೋ) ಆತ= ಚಕ್ರಪಾಣಿ (ಇತ್ವ).
ಹಣೆಯಲ್ಲಿ ಕಣ್ಣು ಉಳ್ಳವನು (ಯಾರೋ) ಆತ = ಹಣೆಗಣ್ಣ (ಅತ್ವ).

(ಈ ಸಮಾಸಪದಗಳು ಅಂತ್ಯದಲ್ಲಿ 'ಅ'ಕಾರ 'ಇ' ಕಾರದಿಂದ ಕೂಡಿರುತ್ತವೆ).

ವಿಶೇಷ : ಒರೆಯಾದ ಕಣ್ಣು ಯಾರಿಗೋ ಆತ = ಒರೆಗಣ್ಣ. ಬ.ವ್ರೀ. ಒರೆಗಣ್ಣು ವಿಶೇಷಣ ವಿಶೇಷ್ಯದಿಂದ ಇದು **ಕರ್ಮಧಾರಯ** ಸಮಾಸವೆನಿಸುತ್ತದೆ-ಹೀಗೆಯೇ **ಒಕ್ಕಣ್ಣು-ದ್ವಿಗು** ಸಮಾಸವಾದರೆ, **ಒಕ್ಕಣ್ಣ ಬಹುವ್ರೀಹಿ** ಸಮಾಸವಾಗುವುದು.

ಬಹುವ್ರೀಹಿಯಲ್ಲಿ ಆರುಭೇದಗಳನ್ನು ಗುರುತಿಸುತ್ತಾರೆ :

೧) ಒಂದೇವಿಭಕ್ತಿಯ ಎರಡುಪದಗಳು ಸೇರಿ, **ಅನ್ಯಾರ್ಥ** ತೋರುತ್ತಿದ್ದರೆ, ಅದನ್ನು **'ಸಮಾನಾಧಿಕರಣ ಬಹುವ್ರೀಹಿ'** ಸಮಾಸವೆನ್ನುತ್ತಾರೆ.
ಉದಾ : ಒರೆಯು (ಪ್ರ) ಕಣ್ಣು (ಪ್ರ) ಯಾರಿಗೋ ಆತ = **ಒರೆಗಣ್ಣ.**
ಗೂನು (ಪ್ರ) ಬೆನ್ನು (ಪ್ರ) ಯಾರಿಗೋ ಆತ = **ಗೂನುಬೆನ್ನ**

೨) ಎರಡೂ ಪದಗಳು ಭಿನ್ನವಿಭಕ್ತಿಗಳಿಂದ ಕೂಡಿದ್ದು, ಅನ್ಯಾರ್ಥ ತೋರಿದರೆ **'ವ್ಯಧಿಕರಣ ಬಹುವ್ರೀಹಿ'**. ಉದಾ: ಹಣೆಯಲ್ಲಿ (ಸ) ಕಣ್ಣು (ಪ್ರ) ಯಾರಿಗೋ ಆತ = **ಹಣೆಗಣ್ಣ.**

೩) ಎರಡು ಸಂಖ್ಯಾವಾಚಕಗಳು ಸೇರುವಾಗ **ಸಂದೇಹ, ಆವೃತ್ತಿ** (ಮತ್ತೆ ಎಂಬರ್ಥ) ಅರ್ಥಗಳಿಂದಕೂಡಿ ಅನ್ಯಾರ್ಥತೋರಿದರೆ ಅದನ್ನು **'ಸಂಖ್ಯೋಭಯಪದ ಬಹುವ್ರೀಹಿ'**ಯೆನ್ನುತ್ತಾರೆ. ಉದಾ:ಎರಡೋ ಮೂರೋ = **ಎರಳ್ಮೂರು** (ಸಂದೇಹ ತೋರುತ್ತಿದೆ)

---

೧) ಇಲ್ಲಿಯೂ ದ್ವಿಗುಸಮಾಸದಂತೆ ಸಮಾಸಪದದಲ್ಲಿ ಸಮಾಹಾರ (ಸಮೂಹ) ತೋರಿ ಏಕವಚನಾಂತವಾಗುಳಿಯುತ್ತದೆ. ಇದಕ್ಕೆ 'ಸಮಾಹಾರ ದ್ವಂದ್ವ' ವೆನ್ನಲಾಗುತ್ತದೆ.

ಎರಡರ (ಆವೃತ್ತಿ) ಹತ್ತು = **ಇಪ್ಪತ್ತು** (ಹತ್ತು, ಹತ್ತು ಅರ್ಥ)

೪) 'ಒಂದೇವಿಧ'ವಾದ **ವಸ್ತುವನ್ನಿಡಿದು, 'ಪರಸ್ಪರ', 'ಹೊಡೆದಾಟ'** (ಯುದ್ಧ **ಸ್ವರೂಪ)** ತೋರುವಂತಿದ್ದು **ಅನ್ಯಾರ್ಥತೋರಿದರೆ** ಅವನ್ನು **'ವ್ಯತಿಹಾರ ಲಕ್ಷಣ ಬಹುವ್ರೀಹಿ'** ಯೆನ್ನುತ್ತಾರೆ. ಉದಾ: ಕೋಲಿನಿಂದ ಕೋಲಿನಿಂದ ಹಿಡಿದು ಪರಸ್ಪರ ಮಾಡುವ ಜಗಳ ಯಾವುದೋ = ಕೋ**ಲಾ**ಕೋ**ಲಿ**. ಹೀಗೆಯೇ ಕೇಶವನ್ನು ಕೇಶವನ್ನು ಹಿಡಿದು ಮಾಡುವಜಗಳ ಯಾವುದೋ ಅದು = ಕೇ**ಶಾ**ಕೇ**ಶಿ** (ಅತ್ವ ಇತ್ವಗಳು ಸಾಮಾನ್ಯವಾಗಿರುತ್ತದೆ).

೫) ಎರಡು ದಿಕ್ಕುಗಳ ಮಧ್ಯದದಿಕ್ಕನ್ನು ತೋರುವಾಗ ಅನ್ಯಾರ್ಥ ತೋರುತ್ತಿದ್ದರೆ, ಅದು **'ದಿಗಂತರಾಳ ಬಹುವ್ರೀಹಿ'** ಸಮಾಸವೆನಿಸುತ್ತದೆ. ಉದಾ : ಪೂರ್ವಕ್ಕೂ ಉತ್ತರಕ್ಕೂ ನಡುವೆ ಇರುವುದು = **ಪೂರ್ವೋತ್ತರ** ಹೀಗೆಯೇ **ದಕ್ಷಿಣೋತ್ತರ**.

೬) ಸಮಾಸಪದದ ಪೂರ್ವದಲ್ಲಿ **'ಸಹ'** (**ಜೊತೆ, ಒಡನೆ** ಎಂಬರ್ಥ) ಶಬ್ದದಿಂದ ಕೂಡಿ ಅನ್ಯಾರ್ಥತೋರುತ್ತಿದ್ದರೆ, ಅದನ್ನು **'ಸಹಪೂರ್ವಪದಬಹುವ್ರೀಹಿ'** ಸಮಾಸವೆನ್ನುತ್ತಾರೆ.

ಉದಾ : ಪರಿವಾರದಿಂದ ಸಹಿತನಾದವನು ಯಾರೋಆತ = **ಸಪರಿವಾರಿ.**

ಕುಟುಂಬದಿಂದ ಸಹಿತನಾದವನು ಯಾರೋಆತ = ಸಕುಟುಂಬಿ.

ಸಾರ ಸಂಗ್ರಹ

ಸಮಾಸ **(ಕೂಡಿ ಸಂಕ್ಷೇಪಗೊಂಡದ್ದು)**

(ಕನ್ನಡ ಪದಗಳಲ್ಲಿ)

೧) ಗಮಕಸಮಾಸ - ಊರುಗೋಲು.

೨) ಕ್ರಿಯಾಸಮಾಸ - ಕೈಮುಗಿ.

[ಸಂ ಪದ + ಕನ್ನಡ ಪದ ಅರಿಸಮಾಸ]

(ಸಂಸ್ಕೃತ ಪದಗಳಲ್ಲಿ)

I) ಉತ್ತರಪದಾರ್ಥ ಪ್ರಧಾನ :

೩) ತತ್ಪುರುಷ-ಮಳೆಗಾಲ

೪) ದ್ವಿಗು - ಇತ್ತಂಡ, ಒಂದಂಶ

೫) ಕರ್ಮಧಾರಯ-ಹೆಮ್ಮರ.

II) ಪೂರ್ವಪದಾರ್ಥ ಪ್ರಧಾನ:

೬)ಅಂಶಿ ಸಮಾಸ-ಅಂಗೈ, ಮುಂದಲೆ

III) ಉಭಯಾರ್ಥ ಪ್ರಧಾನ

೭) ದ್ವಂದ್ವ - ಮರಗಿಡಬಳ್ಳಿ

IV) ಅನ್ಯಪದಾರ್ಥ ಪ್ರಧಾನ:

೮) ಬಹುವ್ರೀಹಿ-ಮುಕ್ಕಣ್ಣ

= ೮ ಪ್ರಕಾರ

ಕ್ರಿಯಾಪದ ಪ್ರಕರಣ

ಧಾತುಗಳು : ಯಾವುದೇ ಭಾಷೆಯಲ್ಲಿ ಕ್ರಿಯಾಪದ ಅತ್ಯಂತಮುಖ್ಯವಾದುದು. ಅದು ಕರ್ತೃವಿನ ಕಾರ್ಯವನ್ನು ಹೇಳುವುದರಿಂದ ಕರ್ತೃವಿನ ಪುರುಷ, ಲಿಂಗ, ವಚನಾನುಸಾರವಾಗಿ ವರ್ತಿಸುತ್ತದೆ.

ಈ ಕ್ರಿಯಾಪದದ ಮೂಲರೂಪವನ್ನು '**ಧಾತು**' ಎನ್ನುತ್ತೇವೆ. ಉದಾ : **ತಿನ್ನು, ತಿಳಿ, ಕುಣಿ** ಇತ್ಯಾದಿಗಳು. ಇಲ್ಲಿ '**ತಿನ್ನು**' ಎಂಬಧಾತು, ಒಂದು '**ಕ್ರಿಯೆ**' ಅಥವಾ '**ವ್ಯಾಪಾರ**'ವನ್ನು ತಿಳಿಸುತ್ತದೆ. ಇವು ಪ್ರತ್ಯಯರಹಿತವಾಗಿರುತ್ತವೆ. ಈ ಧಾತುಗಳು ಭಾಷೆಯಸಂಪತ್ತು. ಒಂದುಧಾತು ಒಂದು ಪ್ರಾತಿಪದಿಕಾರ್ಥ (ನಾಮಪ್ರಕೃತಿ)ದ ಘಟಕವೂ ಆಗಬಹುದು. ಉದಾ : '**ನಿಲ್**'=ನಿಲ್ಲು=**ನೆಲ**; ಕಾಣ್=ಕಾಣು =**ಕಣ್ಣು**. ಇಲ್ಲಿ ನೆಲ, ಕಣ್ಣು ಇವುಗಳು ಧಾತುವಿನಿಂದ ಹುಟ್ಟಿದವೆನಿಸುವುದಿಲ್ಲವೆ?

ಸಂಸ್ಕೃತದಲ್ಲಿಯೂ ಈ ಮಾತುಸಹಜ. '**ಜನಿ**' ಧಾತು 'ಪ್ರಾದುರ್ಭಾವ' (ಹುಟ್ಟು) ಎಂದರ್ಥ ಕೊಡುತ್ತದೆ - **ಜನನ**ವಾಯಿತು. '**ಜನ**','**ಜನಕ**','**ಜನನಿ**' ನಾಮರೂಪಗಳು ಆ ಧಾತುವಿನಿಂದಲೇ ಉತ್ಪನ್ನವಾದವುಗಳು. '**ಗತಿ**' - ಗಮನಾರ್ಥ ಇದರಿಂದ ಸದ್ಗತಿ, ದುರ್ಗತಿ, ನಿರ್ಗತಿ ಉಪಸರ್ಗಗಳಿಂದ ಕೂಡಿದ ನಾಮರೂಪಗಳು. ನಾಮಾರ್ಥ ಹಾಗೂ ಕ್ರಿಯಾರ್ಥಗಳಿಗೆ ಮೂಲರೂಪವಾದುದನ್ನು ಧಾತು ಎನಿಸುತ್ತದೆ. ಹೀಗಾಗಿ ಧಾತುಗಳು ಭಾಷೆಯಲ್ಲಿ ಮುಖ್ಯವಾದ ಸ್ಥಾನವನ್ನು ಪಡೆದಿವೆಯೆಂಬುದು ನಿರ್ವಿವಾದ. ಧಾತುಗಳಲ್ಲಿ ಎರಡು ವಿಧ:

೧) ಸಹಜ ಧಾತುಗಳು (ನಿಜ ಧಾತು).

೨) ಸಾಧಿತ ಧಾತುಗಳು (ನಿಷ್ಪನ್ನ ಧಾತು).

೧) ಸಹಜಧಾತು (ಮೂಲ ಧಾತು): ಭಾಷೆಯಲ್ಲಿ ಮೂಲದಿಂದಲೂ ಸಹಜ ಹಾಗೂ ಸ್ವತಂತ್ರವಾಗಿರುವ ಧಾತುಗಳು '**ಸಹಜಧಾತು**' ಗಳೆನಿಸುತ್ತವೆ. ಸಾಮಾನ್ಯವಾಗಿ ಒಂದರಿಂದ ಮೂರಕ್ಷರದಿಂದ ಕೂಡಿರುತ್ತವೆ. ಸಹಜಧಾತುಗಳಲ್ಲಿ : **ಸ್ವರಾಂತ ಧಾತು** (ಏಕಾಕ್ಷರ ಧಾತುಗಳು), **ವ್ಯಂಜನಾಂತ ಧಾತು** ಗಳೆಂದು ಗುರುತಿಸಬಹುದು. ಇವುಗಳಲ್ಲದೆ ಭಾಷೆಯಲ್ಲಿ ಸಹಜವಾಗಿ ಕೆಲವುರೂಪಗಳು. ಉದಾ: ಗೆಲ್-**ಗೆದ್ದಿ**, ಕೀಳು-**ಕಿತ್ತು**, ಉಳ್-**ಉತ್ತು** ಇತ್ಯಾದಿ ರೂಪಗಳು ಕಾಣಿಸಿಕೊಳ್ಳುತ್ತವೆ. ಇವುಗಳನ್ನೂ **ನಿಜಧಾತು**ಗಳೆಂದೇ ಭಾವಿಸಬೇಕು.

ಸ್ವರಾಂತ ಸಹಜಧಾತು (ಏಕಾಕ್ಷರ ಧಾತು) : ಈ, ಓ, ಕಾ, ಕೀ, ಮೀ, ಕೋ, ನೇ, ತೋ, ನೋ, ಪೂ, ಬಾ, ಬಿ, ಬೇ ಇತ್ಯಾದಿ (ಸು:ಅರವತ್ತು)

ವ್ಯಂಜನಾಂತ ಸಹಜ ಧಾತುಗಳು : ಉಣ್, ಕಾಣ್, ಆನ್, ನೋನ್, ಕಳ್, ಈನ್, ಪೊಯ್, ತರ್, ಬರ್, ಸಲ್, ಬಾಳ್, ಮುಗಿ, ಹೋಗು, ಹಿಂಗು, ಮಿಂಚು, ನಗು, ಈಜು, ಮಾಡು, ಸುಟ್ಟು, ನುಡಿ, ಕೊಡು, ಪಡು,

ಒಡ್ಡು, ನಡೆ, ಕುಣಿ, ಕಾಣು, ಸುತ್ತು, ಒದೆ, ತಿದ್ದು, ನೆನೆ, ಎನ್ನು, ಒಪ್ಪು, ನಂಬು, ಚಿಮ್ಮು, ಹೊಯ್, ಸುರಿ, ಸೇರು, ಸೋಲು, ಬಲಿ, ತಿಳಿ, ಬಾಳು, ಕೊಳಿ, ಪಡು, ಹೊಗಳು, ತೆಗಳು, ಸುಳಿ ಇತ್ಯಾದಿಗಳು. ಕೇಶಿರಾಜನು ಅವುಗಳನ್ನು ಪ್ರಯೋಗದಿಂದರಿವುದು ಎಂದಿದ್ದಾನೆ. (ಒಟ್ಟು ೯೭೮ ಧಾತುಗಳಿವೆ).

ಸಹಜಧಾತುಗಳಲ್ಲಿ ಸಕರ್ಮಕಧಾತು ಮತ್ತು ಅಕರ್ಮಕಧಾತುಗಳೆಂದು ಎರಡು ವಿಧ.

ಅ) **ಸಕರ್ಮಕ ಧಾತುಗಳು :** ಕರ್ಮಪದದ **ಅಪೇಕ್ಷೆಯನ್ನು ಬಯಸುವ ಧಾತು**ಗಳು '**ಸಕರ್ಮಕ ಧಾತು**'ವೆನಿಸುತ್ತವೆ. ಉದಾ: ಮಾಡು, ಕೂಡು, ಹೇಳು, ಹೊಡೆ, ಕಡಿ, ತರು, ಉಣ್ಣು, ಇಕ್ಕು, ದಾಟು, ತಿದ್ದು, ತೆರ ಇತ್ಯಾದಿ - ಈ ಧಾತುಗಳು ತಮ್ಮ ಅರ್ಥಪೂರ್ಣತೆಗೆ ಕರ್ಮಪದವನ್ನು ಅಪೇಕ್ಷಿಸುತ್ತವೆ. ಇವುಗಳಲ್ಲಿ ಕ್ರಿಯಾಪದ -'ಮಾಡುತ್ತಾನೆ' ಎಂದಾಗ ಏನನ್ನು ? ಯಾವುದನ್ನು ? ಎಂಬ ಪ್ರಶ್ನೆಯೇಳುತ್ತದೆ. ಅದಕ್ಕೆ 'ಕೆಲಸ'ವೆಂಬ ಕರ್ಮಸೇರಿದರೆ, **ಕೆಲಸವನ್ನು ಮಾಡುತ್ತಾನೆ** ಎಂದು ಅರ್ಥಪೂರ್ಣವಾಗುತ್ತದೆ. ಹೀಗೆ ಧಾತುವಿಗೆ ಕರ್ಮದೊಂದಿಗೆ ಸಂಬಂಧ ಬರುತ್ತದೆ. (ಈ ಸಕರ್ಮಕಧಾತುಗಳಲ್ಲಿ ಕ್ರಿಯೆಯ ಫಲ **ತನಗೂ ಇತರರಿಗೂ** ಅನ್ವಯಿಸುತ್ತದೆ).

ಆ) **ಅಕರ್ಮಕ ಧಾತುಗಳು :** ಕರ್ಮಪದವನ್ನು **ಅಪೇಕ್ಷಿಸದ** ಧಾತುಗಳಿಗೆ **ಅಕರ್ಮಕ ಧಾತು**ಗಳೆಂದು ಹೆಸರು. ಉದಾ : ಓಡು, ಹಾರು, ಮಲಗು, ಇರು, ಬದುಕು, ಬಾಳು, ಹೋಗು, ನಾಚು, ಇಳಿ, ಉರುಳು - ಈ ಧಾತುಗಳು ಕರ್ಮವನ್ನು ಅಪೇಕ್ಷಿಸುವುದಿಲ್ಲ. ಅವುಗಳ ಅರ್ಥಪೂರ್ಣತೆಗೆ ಕರ್ಮಗಳಸಂಬಂಧದ ಅಗತ್ಯವಿರುವುದಿಲ್ಲ. (ಈ ಧಾತುಗಳಲ್ಲಿ **ಕ್ರಿಯೆಯ ಫಲ ತನಗೆ** ಸಂಬಂಧಿಸಿರುತ್ತದೆ).

೨) **ಸಾಧಿತಧಾತುಗಳು (ನಿಷ್ಪನ್ನರೂಪಗಳು) :** ೧) ಇವುಗಳು ಸಿದ್ಧಮಾಡಿಕೊಂಡವು. ಉದಾ: **'ಕಳವಳ'** ಎಂಬ ಪ್ರಾತಿಪದಿಕಕ್ಕೆ **'ಇಸು'** ಪ್ರತ್ಯಯದೊಂದಿಗೆ **'ಕಳವಳಿಸು'** ಎಂಬ ರೂಪಸಿದ್ಧಿಯಾಯಿತು. ಇವುಗಳು **ಸಾಧಿತರೂಪ**ಗಳೆನಿಸುತ್ತವೆ. ಹೀಗೆ ಕಿಡಿಕಾರು, ತಲೆಹಾಕು, ಕುಪ್ಪಳಿಸು, ಕಳವಳಿಸು, ಅಬ್ಬರಿಸು, ಓಲಗಿಸು, ಗಮಗಮಿಸು, ಹಳಹಳಿಸು (ಸಂವೇದನೆ), ಹಪಹಪಿಸು ಉಡಾವಣೆ, ಚಿತಾವಣೆ, ಉಡಾಯಿಸು, ಕಿಚಾಯಿಸು, ಕಡಾಯಿಸು- ಈ ರೀತಿಯ ಪ್ರಯೋಗಗಳು ಕನ್ನಡಭಾಷೆಗೆ ಘನಾತ್ಮಕವಾದುವು.

ಕನ್ನಡ-ಸಂಸ್ಕೃತದ ಅಕಾರಾಂತ ಪ್ರಾತಿಪದಿಕಗಳಿಗೆ ಹಲವು ಅರ್ಥಗಳಲ್ಲಿ **ಇಸು** ಪ್ರತ್ಯಯ ಹತ್ತಿಸಿ **ಸಾಧಿತ ರೂಪ**ಗಳನ್ನು ಮಾಡಿಕೊಳ್ಳುತ್ತೇವೆ. ಅವುಗಳು ಹೀಗೆ ರೂಪುಗೊಳ್ಳುತ್ತವೆ:

ಕನ್ನಡ ನಾಮಪ್ರಕೃತಿ	***ಸಂಸ್ಕೃತ ನಾಮಪ್ರಕೃತಿ***
ಕನ್ನಡ + ಇಸು = ಕನ್ನಡಿಸು	ಭಾವ + ಇಸು = ಭಾವಿಸು
ಓಲಗ + ಇಸು = ಓಲಗಿಸು	ರಕ್ಷ + ಇಸು = ರಕ್ಷಿಸು
ಅಬ್ಬರ + ಇಸು = ಅಬ್ಬರಿಸು	ಬಂಗ + ಇಸು = ಬಂಗಿಸು ಇತ್ಯಾದಿ.

ಆ) **ಏಕಕರ್ತೃಕ** (ಆತ್ಮಾರ್ಥ) ಗಳಿಗೆ **'ಇಸು'** ಪ್ರತ್ಯಯ ಹತ್ತಿಸಿದ **ಸಾಧಿತರೂಪಗಳು** : ಕಲಿ + ಇಸು ಹೀಗೆ ಶೃಂಗರಿಸು, ಆಚರಿಸು, ಆಮಂತ್ರಿಸು, ಮೂದಲಿಸು, ಶೋಧಿಸು, ವಾಸಿಸು, ಸುಧಾರಿಸು, ಗದರಿಸು, ಪ್ರಕಟಿಸು, ನೊಂದಾಯಿಸು, ನಾಚಿಸು, ರಾಜಿಸು, ಎಣಿಸು. (ಇವು ಪ್ರೇರಣಾರ್ಥಕ ರೂಪಗಳಲ್ಲ)

ಇ) **ಅನುಕರಣ** (ಉಂಟಾದಶಬ್ದವನ್ನು ಪುನಃ ಉಚ್ಚರಿಸಿದ್ದು) ಈ ಶಬ್ದಗಳಿಗೆ **'ಇಸು'** ಪ್ರತ್ಯಯಸೇರಿ ರೂಪಿತವಾದ **ಸಾಧಿತರೂಪಗಳು**. ಥಳಥಳ + ಇಸು=ಥಳಥಳಿಸು , ಹಪಹಪ + ಇಸು =ಹಪಹಪಿಸು, ಧಗಧಗಿಸು, ಛಟಛಟಿಸು.

ಈ) ಸಹಜಧಾತುಗಳ (ಭಿನ್ನಕರ್ತೃಗಳ) ಮೇಲೂ ಪ್ರೇರಣಾರ್ಥದಲ್ಲಿ **'ಇಸು'** ಪ್ರತ್ಯಯ ಸೇರಿ **ಸಾಧಿತರೂಪ**ಗಳಾಗುತ್ತವೆ:ಏರು +ಇಸು= ಏರಿಸು, ಬರೆಯಿಸು, ಕರೆಯಿಸು, ಬರಿಸು, ಓದಿಸು. ಆಡಿಸು, ಮಾಡಿಸು, ಆರಿಸು, ಕಾರಿಸು, ಬಿಡಿಸು, ಗುಡಿಸು ಇತ್ಯಾದಿ.

ಉ) ಕನ್ನಡದಲ್ಲಿ **'ಐಸು'** ಪ್ರತ್ಯಯಹೊಂದಿದ ಕೆಲವು ಸಾಧಿತರೂಪಗಳು : ಮೇಳ+ಐಸು = ಮೇಳೈಸು / ಮೇಳವಿಸು ಹಾರೈಸು, ಪೂರೈಸು ಇತ್ಯಾದಿ.

(ii) ಅ) ಎರಡುಧಾತುಗಳು ಸೇರಿದ **(ಸಂಯುಕ್ತ) ಸಾಧಿತಧಾತುಗಳಾಗುತ್ತವೆ:** ಹೊಡೆದಾಡು (ಹೊಡೆದು+ಆಡು). ಕೊಂಡುಹೋಗು, ತಿಂದುಹೋಗು, ಕಟ್ಟುಬೀಳು, ಹುಡುಕಾಡು, ಕಿತ್ತಾಡು, ಈ ನುಡಿಗಟ್ಟುಗಳ ಉಪಯೋಗ ಕನ್ನಡಕ್ಕೆ ಹೆಚ್ಚು ಉಪಯುಕ್ತ. ಇವಲ್ಲದೆ ಇನ್ನು ಹೆಚ್ಚು ಅರ್ಥವ್ಯಾಪ್ತಿಯಿರುವ ವಿಶೇಷನಿಷ್ಪನ್ನರೂಪಗಳುಂಟು:

ಆ) ಹೀಗೆ ಕೆಲವು **ನಾಮಪದಕ್ಕೆ ಧಾತು**ಗಳು ಸೇರಿ ರೂಪಿತವಾದ ವಿಶೇಷಾರ್ಥ ಒಳಗೊಂಡ ಸಾಧಿತರೂಪಗಳು ಕನ್ನಡದಲ್ಲಿವೆ: ಬಲಿಕೊಡು = ಬಲಿ+ಕೊಡು, ನೆಗೆದಾಡು, ಮಾತಾಡು, ಬೀಡುಕೊಡು (ಬೀಳ್ಕೊಡು), ಇಲ್ಲಿ ಒಂದು ವಿಶಿಷ್ಟವಾದ ನಾಮಪದ, ಕ್ರಿಯಾಪದಗಳ ಭಾವಾರ್ಥ ಬಳಸಿಕೊಂಡು ಹೊಸಅರ್ಥಕೊಡುವ ರೂಪಗಳು ಉಪಯುಕ್ತವಾಗಿ ಪ್ರಯೋಗವಾಗುತ್ತಿವೆ.:

೧.	**ತಲೆ**ದೋರು	**ಕಾಲು**ಹಿಡಿ	**ತಲೆ**ಹೋಗು
	ಮಣೆಹಾಕು	ಕೆಂಡಕಾರು	ಮಣ್ಣುತಿನ್ನು
	ಬಲೆಬೀಸು	ತಲೆಹಾಕು	ಹೊಟ್ಟೆಹೊರೆ
	ಮಣ್ಣಾಗು	ಗುರಿಯಾಗು	ಸೊಪ್ಪುಹಾಕು
	ಸೆರೆಗೊಡ್ಡು	ಮೂಗುತೂರಿಸು	ಕಿಡಿಕಾರು
	ಕಂಡುಹಿಡಿ	ಕಾದಾಡು	ಹಿಂದುಬಿಡು
	ಸೋತು ಹೋಗು	ಸುಳಿದಾಡು	ಸುಟ್ಟುಬಿಡು

ಉರಿದೇಳು	ನೆಗೆದಾಡು	ಬಡಿದಬ್ಬಿಸು
ಎದ್ದೇಳು (ಜಾಗೃತನಾಗು)	ಹಾರಾಡು	ಕಿತ್ತುಹಾಕು
ಕಟ್ಟಿಹಾಕು	ಕುಣಿದಾಡು	ಬಚ್ಚಿಡು

ಈ ರೀತಿಯ ಕನ್ನಡದ ವಿಶಿಷ್ಟವಾದ ಜಾಯಮಾನದ ಕ್ರಿಯಾರೂಪಗಳು ಇಂಗ್ಲೀಷ್‌ನಲ್ಲಿಲ್ಲ.

ಮೇಲೆ ಹೇಳಲಾದ ಧಾತುಗಳೆಲ್ಲವೂ ಹೊ.ಗ. ಸ್ವರಾಂತವಾಗಿವೆ. ಧಾತುಗಳಿಗೆ ಆಖ್ಯಾತ ಪ್ರತ್ಯಯಗಳನ್ನು ನಿಮಿತ್ತಮಾಡಿಕೊಂಡು **ಕಾಲಸೂಚಕ** ಪ್ರತ್ಯಯ ಮಾತಿನ ಸಂದರ್ಭವನ್ನು ಪರಿಗಣಿಸಿ ಬರುತ್ತವೆ. ಹಾಗೆಯೇ ಅರ್ಥಸೂಚಕವಾದ **ವಿಧಿ, ನಿಷೇಧ, ಸಂಭಾವನ** ಪ್ರತ್ಯಯಗಳೂ ಹತ್ತುತ್ತವೆ.

ಕ್ರಿಯಾಪದ ರೂಪನಿಷ್ಪತ್ತಿ (೧)

ಧಾತುಗಳಿಗೆ ಆಖ್ಯಾತಪ್ರತ್ಯಯಗಳು ಸೇರಿಆಗುವ ರೂಪಗಳು ಕ್ರಿಯಾಪದಗಳು, ಅವು ಕ್ರಿಯೆಯ ಪೂರ್ಣಾರ್ಥವನ್ನು ಕೊಡುವ ಪದಗಳನ್ನು **'ಕ್ರಿಯಾಪದ'** ವೆನ್ನುತ್ತೇವೆ. ಈ ಆಖ್ಯಾತಪ್ರತ್ಯಯಗಳ, ಧಾತುಗಳ ನಡುವೆ ಕಾಲವನ್ನುಸೂಚಿಸುವ ಪ್ರತ್ಯಯಗಳು ಬರುತ್ತವೆ. ಹಾಗೆ ಅರ್ಥವನ್ನು ಸೂಚಿಸುವ ಪ್ರತ್ಯಯಗಳೂ ಬರುತ್ತವೆ.

ಉದಾ : ಮಾಡು+ಉತ್ತ+ಆನೆ = ಮಾಡುತ್ತಾನೆ (ಕ್ರಿಯಾಪದ).
(ಧಾತು+ಕಾ.ಸೂ.ಪ್ರ+ಆಖ್ಯಾತ ಪ್ರತ್ಯಯ)

ಮಾಡು + ಅಲಿ = ಮಾಡಲಿ (ವಿಧ್ಯರ್ಥ ರೂಪ).
(ಧಾತು + ವಿಧಿ.ಪ್ರ = (ವಿದ್ಯರ್ಥಕ್ರಿಯಾರೂಪ)

ಈ ಕ್ರಿಯಾಪದಗಳು **'ಕಾಲದದೃಷ್ಟಿಯಿಂದ'** ಹಾಗೂ **'ಅರ್ಥದ ದೃಷ್ಟಿಯಿಂದ'** ಎಂಬುದಾಗಿ ಆರು ರೂಪಗಳಾಗುತ್ತವೆ. **'ನೋಡು'** ಧಾತುವು ಆರು ರೂಪಗಳಲ್ಲಿ :-

ಕಾಲದೃಷ್ಟಿ		**ಏಕವಚನ**	**ಬಹುವಚನ ರೂಪಗಳು**
೧) ವರ್ತಮಾನಕಾಲ ಕ್ರಿಯಾಪದ	-	ನೋಡುತ್ತಾನೆ,	ನೋಡುತ್ತಾರೆ.
೨) ಭೂತಕಾಲ ಕ್ರಿಯಾಪದ	-	ನೋಡಿದನು.	ನೋಡಿದರು.
೩) ಭವಿಷ್ಯತ್ಕಾಲ ಕ್ರಿಯಾಪದ	-	ನೋಡುವನು.	ನೋಡುವರು.

---

೧) ಇಲ್ಲಿ 'ಕ್ರಿಯಾಪದ' ಗಳು ಧಾತುಜನ್ಯಗಳಾಗಿದ್ದು ಈ ಕ್ರಿಯಾರ್ಥವುಳ್ಳ (ಅನುಭವ, ದೈವಿಕ, ಮಾನಸಿಕತೆಯ ಪದಗಳು) ಕ್ರಿಯೆಗಳಮುಂದೆ ಬರುವವು ಆಖ್ಯಾತ. ಅವು ಕರ್ತೃವಿನ ಲಿಂಗ, ವಚನ, ಪುರುಷ, ಕಾಲಗಳನ್ನು ಸೂಚಿಸಿ ವಾಕ್ಯಗಳನ್ನು ಕೊನೆಗೊಳಿಸಬಲ್ಲ ಪದಗಳು. ಈ ಭಾಷೆಯ ಪದಗಳ ವಿಭಾಗಗಳ ವಿವರಣೆಯನ್ನು ಅವುಗಳ ಕಾರ್ಯ ಮತ್ತು ಸಂಬಂಧವನ್ನು ತಿಳಿಸುವುದು ರೂಪನಿಷ್ಪತ್ತಿಯೆನಿಸುವುದು. ಇಂದಿನ ಶಿಕ್ಷಣದಲ್ಲಿ ಈ ಜ್ಞಾನದ ಅಭಾವ ಕಾಣುತ್ತಿದೆ.

ಕೃದಂತಗಳು : ಧಾತುಜನ್ಯವಾಗಿ ಕ್ರಿಯಾರ್ಥಗಳನ್ನುಳ್ಳವಾದರೂ ಅವು ಕ್ರಿಯಪದಗಳಲ್ಲ. ಅವು ಕೃದಂತಗಳೆನಿಸುತ್ತವೆ.

ಅರ್ಥದೃಷ್ಟಿ

೧)	ವಿಧ್ಯರ್ಥಕ ಕ್ರಿಯಾಪದ	-	ನೋಡ**ಲಿ**.	ನೋಡಿ**ರಿ**.
೨)	ನಿಷೇಧಾರ್ಥಕ ಕ್ರಿಯಾಪದ	-	ನೋಡುವು**ದಿಲ್ಲ**.	ನೋಡೆ**ವು**.
೩)	ಸಂಭಾವನಾರ್ಥಕ ಕ್ರಿಯಾಪದ	-	ನೋಡೇ**ನು**.	ನೋಡೇ**ವು**.

ಅವುಗಳು ಕಾಲವನ್ನಾಗಲಿ ಅರ್ಥವನ್ನಾಗಲಿ ಸೂಚಿಸುತ್ತವೆ. ಆ ಕ್ರಿಯಾಪದಗಳಿಗೆ ಕರ್ತೃವಿನ ವಚನ, ಲಿಂಗ, ಪುರುಷ, ಕಾಲ, ಅರ್ಥ-ಭೇದಗಳಿಗನುಸಾರವಾಗಿ ಹೊಸಗನ್ನಡದಲ್ಲಿ ಆಖ್ಯಾತ ಪ್ರತ್ಯಯಗಳು ಬೇರೆಬೇರೆಯಾಗುತ್ತವೆ. (ಈ ಹಿಂದೆ ಹೇಳಲಾದ ಆರುಆಖ್ಯಾತಗಳು ಮೂರುಪುರುಷಗಳಲ್ಲಿ, ಎರಡು ವಚನಗಳಲ್ಲಿ ಬರುತ್ತವೆ. ಹಳಗನ್ನಡದಲ್ಲಿ ಮೂಲ **ಪುಲ್ಲಿಂಗ** **ರೂಪ**ವಾದ ಆಖ್ಯಾತಗಳಿವೆ$_{(೧)}$. ಲಿಂಗ, ವಚನ, ಪುರುಷಗಳಿಗನುಸಾರವಾಗಿ ಕ್ರಿಯಾರೂಪ ಬೇರೆ ಬೇರೆಯಾಗುತ್ತವೆ. ಅವುಗಳ ವಿವರವಾದ ಪರಿಚಯ ಅಗತ್ಯ.

ಪುರುಷಗಳು	***ಅವುಬರುವ ಅರ್ಥಗಳು***		***ಅರ್ಥದಶಬ್ದಗಳು***
೧) ಪ್ರಥಮಪುರುಷ:	**'ಅನ್ಯ'** ಅರ್ಥವುಳ್ಳದ್ದು	-	ಅವನು, ಅವರು, ತಾನು
೨) ಮಧ್ಯಮಪುರುಷ:	**'ನೀವು'** ಎಂಬರ್ಥ	-	ನೀನು, ನೀವು
೩) ಉತ್ತಮ ಪುರುಷ:	**'ನಾವು'**,'ನಾನು' ಎಂಬರ್ಥ	-	ನಾನು, ನಾವು

೧) ವರ್ತಮಾನಕಾಲ ಕ್ರಿಯಾರೂಪ : (ಕಾಲದೃಷ್ಟಿ)

(ಧಾತು+ **ದಪ** (ಕಾಲಸೂಚಕ ಪ್ರತ್ಯಯ)+ಆಖ್ಯಾತ ಪ್ರತ್ಯಯ) = ವರ್ತಮಾನ ಕ್ರಿಯಾ ರೂಪ. ಈಗ ಕ್ರಿಯೆ ನಡೆಯುತ್ತಿರುವ ಕಾಲವನ್ನು **'ವರ್ತಮಾನಕಾಲ'** ವೆನ್ನುತ್ತೇವೆ. ಈ ಕಾಲದಲ್ಲಿ ಧಾತುಗಳ ಮೇಲೆ ವರ್ತಮಾನಕಾಲದ ಆಖ್ಯಾತ ಪ್ರತ್ಯಯ ಬರುತ್ತವೆ. ಧಾತು ಹಾಗೂ ಆಖ್ಯಾತ ಪ್ರತ್ಯಯಗಳ ನಡುವೆ **'ಉತ್ತ'** ಎಂಬ ಹೊ.ಗ. ವರ್ತಮಾನ (ದಪ-**ಹ.ಗ**) ಕಾಲಸೂಚಕ ಪ್ರತ್ಯಯ ಬರುತ್ತದೆ. ಹಾಗೆಂದು **ನಾನು ನಾಳೆ ಬರುತ್ತೇನೆ** ಎಂಬುದನ್ನು ವರ್ತಮಾನವೆಂದು ಪರಿಗಣಿಸದೆ **ಮಾತಿನ ಸಂದರ್ಭವನ್ನು ಪರಿಗಣಿಸಿ ಭವಿಷ್ಯತ್ಕಾಲ** ವೆಂದು ನಿರ್ಧರಿಸಬೇಕಾಗುತ್ತದೆ.

ವರ್ತಮಾನಕಾಲದ ಆಖ್ಯಾತಪ್ರತ್ಯಯಗಳು ಪಟ್ಟಿಯಲ್ಲಿ : (ಹೊಸ, ಹಳಗನ್ನಡದ)

	ಪುರುಷ	**ಏ.ವ**	**ಬ.ವ.**	
೧)	ಪ್ರ.ಪುರುಷ :	ಅಂ	ಅರ್	- ಇವುಗಳು ಪುಲ್ಲಿಂಗ ರೂಪವಾಗಿವೆ.
	ಮ.ಪುರುಷ :	ಅಯ್	ಇರ್	- ಸ್ತ್ರೀ, ನಪುಂಸಕಗಳಿಗೂ ಹೊಸಗನ್ನಡದಲ್ಲಿ
	ಉ.ಪುರುಷ :	ಎನ್	ಎವು	[illegible]

ಪುರುಷಗಳು	ಪುಲ್ಲಿಂಗ		ಸ್ತ್ರೀಲಿಂಗ		ನಪುಂಸಕಲಿಂಗ	
	ಏ.ವ.	ಬ.ವ.	ಏ.ವ.	ಬ.ವ.	ಏ.ವ.	ಬ.ವ
ಪ್ರಥಮ ಪು. ಹ.ಗ -	ಆನೆ ಅಂ	ಆರೆ ಅರ್	ಆಳೆ ಅಳ್	ಆರೆ ಅರ್	ಅದೆ/ಇದೆ ಉದು	ಅವೆ/ಇವೆ ಉವು
ಮಧ್ಯಮ ಪು. ಹ.ಗ -	ಈಯೆ ಅಯ್	ಈರಿ ಇರ್	ಈಯೆ ಅಯ್	ಈರಿ ಇರ್	-	-
ಉತ್ತಮ ಪು. ಹ.ಗ -	ಏನೆ ಎನ್	ಏವೆ ಎವು	ಏನೆ ಎನ್	ಏವೆ ಎವು	-	-

'ಓಡು' ಧಾತು ಕಾಲಸೂಚಕ ಹಾಗೂ ಈ ಆಖ್ಯಾತಪ್ರತ್ಯಯಗಳನ್ನು ಹೊಂದಿಸಿದ ಹೊಸ ಹಾಗೂ ಹಳಗನ್ನಡ ಕ್ರಿಯಾರೂಪಗಳು:-

ಪುರುಷ	ಪುಲ್ಲಿಂಗ		ಸ್ತ್ರೀಲಿಂಗ		ನಪುಂಸಕ	
	ಏ.ವ	ಬ.ವ	ಏ.ವ	ಬ.ವ	ಏ.ವ.	ಬ.ವ
ಪ್ರ.ಪುರುಷ	ಓಡುತ್ತಾನೆ	ಓಡುತ್ತಾರೆ	ಓಡುತ್ತಾಳೆ	ಓಡುತ್ತಾರೆ	ಓಡುತ್ತದೆ	ಓಡುತ್ತವೆ
(ಹ.ಗ.)	ಓಡಿದಪಂ	ಓಡಿದಪರ್	ಓಡಿದಪಳ್	ಓಡಿದಪರ್	ಓಡಿದಪುದು	ಓಡಿದ-ಪುವು
ಮ.ಪುರುಷ (ಹ.ಗ)	ಓಡುತ್ತೀಯೆ ಓಡಿದಪಯ್	ಓಡುತ್ತೀರಿ ಓಡಿದಪಿರ್	ಓಡುತ್ತೀಯೆ ಓಡಿದಪಯ್	ಓಡುತ್ತೀರಿ ಓಡಿದಪಿರ್	---	---
ಉ.ಪುರುಷ (ಹ.ಗ)	ಓಡುತ್ತೇನೆ ಓಡಿದಪೆಂ	ಓಡುತ್ತೇವೆ ಓಡಿದಪೆವು	ಓಡುತ್ತೇನೆ ಓಡಿದಪಂ	ಓಡುತ್ತೇವೆ ಓಡಿದಪೆವು	---	---

ಮೇಲ್ಕಂಡ ರೂಪಗಳಲ್ಲಿ ಪ್ರಥಮಪುರುಷದಲ್ಲಿ ಮಾತ್ರ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗಗಳಲ್ಲಿ ಬೇರೆ ಬೇರೆ ರೂಪಗಳಾಗುತ್ತಿವೆ. ಮಧ್ಯಮಪುರುಷ, ಉತ್ತಮ ಪುರುಷಗಳಲ್ಲಿರುವ ಪುಲ್ಲಿಂಗರೂಪಗಳೇ ಸ್ತ್ರೀಲಿಂಗಕ್ಕೂ ಅನ್ವಯಿಸುತ್ತದೆ. **ನಪುಂಸಕಲಿಂಗದಲ್ಲಿ ವಿಶೇಷ ಲಿಂಗಭೇದವಿರುವುದಿಲ್ಲ.**

ವರ್ತಮಾನಕಾಲದ ಕೆಲವು ಪ್ರಾತಿನಿಧಿಕ ವಿಶೇಷರೂಪಗಳ ರಚನೆ: **(ಅಕಾರಾದಿ).**

೧) **'ಅನ್ನುತ್ತಾರೆ'**, ಅನ್ನುತ್ತದೆ - ಧಾತು **'ಅನ್'**- ಹೇಳು ಎಂಬರ್ಥ. **ಅನ್ನು**+ಉತ್ತ+ಆರೆ- ಇದೇ ಅರ್ಥದ 'ಎನ್'- 'ಎನ್ನು' (ಹೊ.ಗ.) **ಎನ್ನು**+ಉತ್ತ+ಏನೆ-(ಸ್ವರಲೋಪ) ಎನ್ನುತ್ತೇನೆ/ತ್ತೇವೆ.

೨) **'ಈಯುತ್ತದೆ'** -**'ಈ'**=**'ಪ್ರಸವ'** ಎಂಬರ್ಥದ ಧಾತು. ಈ+ಉತ್ತ+ಅದೆ -'ಯ'ಕಾರಾಗಮವಾಗಿ **'ಈಯುತ್ತದೆ'** ರೂಪವಾಗಿದೆ.

೩) **'ಉಗಿಯುತ್ತಾನೆ'** **'ಉಗಿ'** ಧಾತು **'ಹೊರಹಾಕು'** ಎಂದರ್ಥ. ಉಗಿ+ಉತ್ತ+ಆನೆ 'ಯ' ಆಗಮವಾಗಿದೆ.

೪) **'ಪೊಕ್ಕಪರು'** (ಪ್ರವೇಶಿಸುತ್ತಾರೆ.)**'ಪುಗು'** ಹ.ಗ.ಧಾತು-**'ಪುಗು+ ದಪ+ಅರ್'** ಧಾತುವಿನ ಆದಿಗೆ ಒತ್ವ, ಅಂತ್ಯಲೋಪ, ಪ್ರಥಮ ವರ್ಣಾದೇಶ **'ಪೊಗ್+ ದಪ+ಅರ್'** ಕಾಲಸೂಚಕ ಸಂಬಂಧ **'ದ'** ಕಾರಕ್ಕೆ ಪೂರ್ವವರ್ಣಾದೇಶ =**ಪೊಕ್ಕಪರ್**

೫) **'ಕಾಣುತ್ತಾನೆ'** **'ಕಾಣ್'** ಧಾತು (ಹೊಸಗನ್ನಡ ರೂಪ- **ಕಾಣು**+ಉತ್ತ+ಆನೆ (ವ.ಕಾಲ) = ಕಾಣುತ್ತಾನೆ. **ಕಂಡಪಂ** = ಕಾಣ್+ದಪ+ಅಂ ಧಾತುವಿನ ಆದಿಹ್ರಸ್ವ, ಣಕಾರ ಬಿಂದು, ದಕಾರಕ್ಕೆ ಡಕಾರಾದೇಶ ಬಂದು **'ಕಂಡಪಂ'** (ಕಾಣುತ್ತಾನೆ) ಈ ಹ.ಗ ರೂಪವಾಗಿದೆ. (ಎಂದರ್ಥ). ಹೀಗೆ **ಉಣ್** - ಉಂಡಪಂ ಇತ್ಯಾದಿ ರೂಪಗಳು.

೬) **ಕೀಳುತ್ತದೆ** - **'ಕೀಳ್'** (ಬೇರೆ ಮಾಡು) ಹ.ಗ., **'ಕೀಳು'**-ಹೊ.ಗ, ಕೀಳು+ಉತ್ತ+ಅದೆ (ನಪುಂ) = ಕೀಳುತ್ತದೆ. ಇಲ್ಲಿ ಧಾತುವಿನ 'ಉ' ಲೋಪವಾಗಿ ರೂಪುಗೊಂಡಿದೆ.

೮) **'ತವಿಸುತ್ತದೆ'** **'ತವ್'** ಹ.ಗ.ಧಾತು **'ಕ್ಷಯಿಸು'** ಎಂದರ್ಥ. ತವ್+ಇಸು+ಉತ್ತ+ಅದೆ ಧಾತುವಿಗೆ 'ಇಸು' ಪ್ರತ್ಯಯ, ಪ್ರತ್ಯಯದ ಅಂತ್ಯಸ್ವರ ಲೋಪವಾಗಿದೆ= **ತವಿಸುತ್ತದೆ.** ಹೀಗೇ **ಕವಿಯುತ್ತದೆ** (ಮುಸುಕುತ್ತದೆ), **ತವಿಸಿದಪುದು** ='ಕ್ಷೀಣಿಸುವುದು' (ಹ.ಗ.)

೯) **'ನೋಯುತ್ತಾನೆ'** **'ನೋ'** ಧಾತು, **'ವೇದನೆ'** ಎಂದರ್ಥ. ನೋ+ಉತ್ತ+ಆನೆ 'ಯ' ಕಾರಾಗಮವಾಗಿ - ನೋಯುತ್ತಾನೆ ನೊಂದಪಂ (ಹ.ಗ.), ಸಾ-ಸಾಯುತ್ತಾನೆ, ಈ-ಈಯುತ್ತಾನೆ, ಹೀಗೆಯೇ ಇತ್ಯಾದಿ ರೂಪಗಳು ರೂಪುಗೊಂಡಿದೆ. .

೧೦) **'ನೋಂತಪರು'** (ಹ.ಗ. ರೂಪ) **'ನೋನ್'** ಧಾತು **'ವ್ರತಮಾಡು'** ಎಂದರ್ಥ. ನೋನ್+ದಪ+ ಅರ್ 'ನ್' ಕಾರ ಅನುಸ್ವಾರವಾಗಿ, ಕಾಲಸೂಚಕದ 'ದ' -'ತ'ಕಾರಾದೇಶವಾಗಿ=**ನೋಂತಪರ್** (ಹ.ಗ). ನೋಂತಪರು=(ಹೊ.ಗ) ವ್ರತ ಮಾಡುತ್ತಾರೆ. **ಆನ್** (ಧರಿಸು)- **ಅಂತಪರು** ಇತ್ಯಾದಿ.

೧೧) **'ಬೇಯುತ್ತೀಯೆ'** **'ಬೇ'** ಧಾತು **'ಸುಡು'** ಎಂದರ್ಥ. ಬೇ+ಉತ್ತ+ಈಯೆ (ಮ.ಪು.ಏ) ಯಕಾರಾಗಮವಾಗಿ = ಬೇಯುತ್ತೀಯೆ ರೂಪವಾಗಿದೆ. ಹೀಗೆ **ಮೀಯುತ್ತೇನೆ** **'ಮೀ'** ಧಾತು 'ಸ್ನಾನಮಾಡು' ಎಂದರ್ಥ ಮೀ+ಉತ್ತ+ಏನೆ .ಮೇಲ್ಕಂಡಂತೆ ಹೀಗೆಯೇ **'ಮಿದಿ'** (ಹಿಸುಕು)= ಮಿದಿಯುತ್ತಾನೆ ಧಾತುರೂಪಗಳಾಗುತ್ತವೆ.

೧೨) **ಕೊಲ್ಲುತ್ತಾನೆ** **'ಕೊಲ್'** ಧಾತು ('ಜೀವತೆಗೆ'- ಎಂದರ್ಥ). **'ಕೊಲ್ಲು'** (ಹೊ.ಗ) ಕೊಲ್ಲು+ಉತ್ತ+ಆನೆ (ಧಾತುವಿನ ಅಂತ್ಯಸ್ವರ ಲೋಪ). ಕೊಲ್ಲುತ್ತಾನೆ ರೂಪವಾಗಿದೆ. ಹೀಗೆಯೇ **ಸಲ್ಲುತ್ತಾರೆ** (ಪಾತ್ರನಾಗು). **'ಸಲ್'** ಧಾತು **'ಸಲ್ಲು'** (ಹೊ.ಗ) ಸಲ್ಲು+ಉತ್ತ+ಆರೆ ಈ ರೂಪಗಳೆರಡರಲ್ಲೂ ಧಾತುವಿನ ಅಂತ್ಯ 'ಉ'ಕಾರ ಲೋಪವಾಗಿ ರೂಪಗಳು ಸಿದ್ಧಿಸಿವೆ. ಹೀಗೆ ಗೆಲ್- ಗುಲ್ಲು, ಗೆಲ್ಲುತ್ತಾರೆ/ ತ್ತವೆ ಇತ್ಯಾದಿ.

೨. ಭೂತಕಾಲ ಕ್ರಿಯಾರೂಪಗಳು :

(ಧಾತು+ಭೂತಕಾಲ ಸೂಚಕ ಪ್ರತ್ಯಯ + ಆಖ್ಯಾತ ಪ್ರತ್ಯಯ) = ಭೂತ ಕಾ.ಕ್ರಿ.ರೂಪ. **ಕ್ರಿಯೆಯ ನಡೆದುಹೋದ ಕಾಲವನ್ನು 'ಭೂತಕಾಲ'**ವೆನ್ನಲಾಗುತ್ತದೆ. ಧಾತುವಿಗೆ **'ದ'** ಎಂಬ ಕಾಲಸೂಚಕ ಪ್ರತ್ಯಯವು ನಡುವೆ ಸೇರುತ್ತದೆ. ನಂತರ ಬೇರೆ ಬೇರೆ ಆಖ್ಯಾತಪ್ರತ್ಯಯಗಳು ಬರುತ್ತವೆ.

ಭೂತಕಾಲದ ಆಖ್ಯಾತ ಪ್ರತ್ಯಯಗಳು ಪಟ್ಟಿಯಲ್ಲಿ (ಹೊಸಗನ್ನಡ, ಹಳಗನ್ನಡ)

ಪುರುಷಗಳು	ಪುಲ್ಲಿಂಗ		ಸ್ತ್ರೀಲಿಂಗ		ನಪುಂಸಕ	
	ಏ.ವ	ಬ.ವ	ಏ.ವ	ಬ.ವ	ಏ.ವ	ಬ.ವ
೧) **ಪ್ರಥಮ ಪು:**	ಅನು	ಅರು	ಅಳು	ಅರು	ಇತು	ಅವು
ಹ.ಗ	ಅಂ	ಅರ್	ಅಳ್	ಅರ್	ಉದು	ಉವು
೨) **ಮಧ್ಯಮ:**	ಎ	ಇರಿ	ಎ	ಇರಿ	.....	....
ಹ.ಗ.	ಅಯ್	ಇರ್	ಅಯ್	ಇರ್		
೩) **ಉತ್ತಮ:**	ಏನು	ಎವು	ಏನು	ಏವು	.....	....
	ಏನ್	ಎವು	ಏನ್	ಏವು		

ವಿ.ಸೂ.: ನೋಯ್ತಿದೆ, ನೋಯುತ್ತಾ ಇದೆ, ನೋಯುತ್ತೇನೆ. ಇವೆಲ್ಲಾ ಆಡು ಮಾತಿನರೂಪಗಳು. ನೋಯುತ್ತ+ಇರುತ್ತೇನೆ, ನೋಯುತ್ತ +ಇರುತ್ತಾನೆ 'ಕ್ರಿಯೆಯನಿರಂತರತೆ' ಇರುವ ಇಂತಹ ರೂಪಗಳನ್ನು ಇಂಗ್ಲೀಷ್ ವ್ಯಾಕರಣದ ಹಿನ್ನಲೆಯಲ್ಲಿ ಕೆಲವರು 'ಅಪೂರ್ಣವರ್ತಮಾನ ರೂಪ'ಗಳೆಂದು ಗುರುತಿಸುವುದುಂಟು. ಭಾಷಾಶಾಸ್ತ್ರದಲ್ಲಿ ಇವುಗಳನ್ನು ಕ್ರಿಯಾಪಿವರ್ತಕಗಳೆಂದು ಕರೆಯುವುದುಂಟು.

'ತಿನ್ನು' ಧಾತು ಕಾಲಸೂಚಕ, ಆಖ್ಯಾತ ಪ್ರತ್ಯಯಗಳನ್ನು ಹೊಂದಿಸಿದ ರೂಪಗಳು:

ಪುರುಷ	ಪುಲ್ಲಿಂಗ		ಸ್ತ್ರೀಲಿಂಗ		ನಪುಂಸಕ	
	ಏ.ವ	ಬ.ವ	ಏ.ವ	ಬ.ವ	ಏ.ವ	ಬ.ವ
ಪ್ರ.ಪು: (ಹ.ಗ.)	ತಿಂದನು ತಿಂದಂ	ತಿಂದರು ತಿಂದರ್	ತಿಂದಳು ತಿಂದಳ್	ತಿಂದರು ತಿಂದರ್	ತಿಂದಿತು ತಿಂದುದು	ತಿಂದವು ತಿಂದುವು
ಮ.ಪು: (ಹ.ಗ)	ತಿಂದೆ ತಿಂದಯ್	ತಿಂದಿರಿ ತಿಂದಿರ್	ತಿಂದೆ ತಿಂದಯ್	ತಿಂದಿರಿ ತಿಂದಿರ್		
ಉ.ಪು: (ಹ.ಗ)	ತಿಂದೆನು ತಿಂದೆನ್	ತಿಂದೆವು ತಿಂದೆವು	ತಿಂದೆನು ತಿಂದೆನ್	ತಿಂದೆವು ತಿಂದೆವು		

ಭೂತಕಾಲ (ಪ್ರಾತಿನಿಧಿಕವಾಗಿ) ವಿಶೇಷ ನಿಷ್ಪನ್ನ ರೂಪಗಳ ರಚನೆ ಅಕಾರಾದಿಯಾಗಿವೆ:

೧) **'ಅಟ್ಟನು'-'ಅಡು'** = **'ಪಾಕಮಾಡು'**ವುದೆಂದರ್ಥ. ಅಡು+ದ+ಅನು ಇಲ್ಲಿ ಧಾತುವಿನ ಅಂತ್ಯಸ್ವರ.ಸ. ಲೋಪ, 'ಟ' ಕಾರಾದೇಶ, ಅಟ್+ದ+ಅನು ಕಾಲಸೂಚಕ 'ದ' ಗೆ ಅದರ ಪೂರ್ವವರ್ಣಾದೇಶ= ಅಟ್+ಟ್+ಅನು = **ಅಟ್ಟನು** ಎಂದಾಗುವುದು. ಹೀಗೆಯೆ **'ಸುಡು'** (ದಹಿಸು) = ಸುಟ್ಟನು; **'ಉಡು'** (ಧರಿಸು)= ಉಟ್ಟನು; **'ಕೊಡು'** (ನೀಡು) ಕೊಟ್ಟನು, **'ಇಡು'** (ಮಡಗು) **'ಇಟ್ಟನು'** (ಹೊ.ಗ); 'ಕಿಡು'→'ಕೆಡು'= ನಾಶವಾಗು. ಆದಿ ಎತ್ವಬಂದು, ಮೇಳಿನಂತೆ **'ಕೆಟ್ಟನು'** ರೂಪವಾಗಿದೆ. ಹೀಗೆಯೇ **ಬಿಡು-ಬಿಟ್ಟನು** ಇತ್ಯಾದಿ.

೨) **'ಇದ್ದನು'-'ಇರ್'**-ಧಾತು ಇರು (ಹೊ.ಗ) ಇರು+ದ+ಅನು-ಧಾತುವಿನ ಅಂತ್ಯಲೋಪ ಇ(ದ್)+ದ+ಅನು ದ್ವಿತ್ವಬಂದು ಇದ್ದನು. ಹೀಗೆಯೆ **'ಏಳ್'→ಏಳು-ಎದ್ದನು**, **'ಬೀಳ್'→ಬೀಳು-ಬಿದ್ದನು.** (ಇಲ್ಲಿ ಧಾತುಗಳಆದಿ ಹ್ರಸ್ವವಾಗಿದೆ.

೩) **'ಉಂಡೆ'-'ಉಣ್'**-(ಆಹಾರಸೇವನೆ) ಉಣ್+ದ+ಎ ಇಲ್ಲಿ 'ಣ' ಕಾರ ಬಿಂದುರೂಪವಾಗಿದೆ. 'ದ' ಕಾ.ಸೂ. ಕ್ಕೆ ಣ ವರ್ಗದ ತೃತೀಯವರ್ಣ 'ಡ' ಕಾರಾದೇಶವಾಗಿ, ಉಂ+ಡ್+ಎ= **ಉಂಡೆ, ಉಂಡಿರಿ, ಉಂಡಳು** ರೂಪಗಳಾಗುತ್ತವೆ. ಹೀಗೆಯೆ **'ಕಾಣ್'** ಧಾತು ಆದಿಹ್ರಸ್ವ ಪಡೆದು **'ಕಂಡೆ'** ಇತ್ಯಾದಿ ರೂಪ ಸಿದ್ಧವಾಗಿದೆ.

೪) **'ಎಚ್ಚನು'-'ಇಸು'**-ಧಾತು (ಹ.ಗ)= (ಬಾಣ ಪ್ರಯೋಗಿಸು). ಇಸು+ದ+ಅನು-ಧಾತುವಿನ ಆದಿ **'ಎ'** ಕಾರಾದೇಶ, ಎಸು+ದ+ಅನು, 'ಸು' ಕಾರಕ್ಕೆ 'ಚ್' ಆದೇಶವಾಗಿ ಎಚ್+ದ+ಅನು, **'ದ'**ಗೆ ಪೂರ್ವವರ್ಣಾದೇಶವಾಗಿ ಎಚ್+ಚ್+ಅನು = **ಎಚ್ಚನು**-ಬಾಣ ಪ್ರಯೋಗಿಸಿದ ಎಂದರ್ಥ. ಹೀಗೆಯೇ **ಎಚ್ಚರು** ಬಹುವಚನ ರೂಪವಾಗುತ್ತದೆ.

೫) **'ಒಕ್ಕನು'**-**'ಉಗು'** ಧಾತು (ಹ.ಗ.) (ಒಳಸೇರು) ಉಗು+ದ+ಅನು-ಆದಿ ಉತ್ವಕ್ಕೆ 'ಒತ್ವ'-ಒಗು+ದ+ಅನು ಧಾತುವಿನ ಅಂತ್ಯಸ್ವರ **'ಉ'** ಲೋಪ, ಕಕಾರಾದೇಶ ಒಕ್+ದ+ಅನು, **'ದ'** ಕಾ.ಸೂ. ಪ್ರತ್ಯಯಕ್ಕೆ ಪೂರ್ವವರ್ಣಾದೇಶ- ಒಕ್+ಕ್+ಅನು = **ಒಕ್ಕನು** (ಪ್ರವೇಶಿಸಿದನು). ಹೀಗೆಯೆ **ಒಕ್ಕಳು, ಒಕ್ಕೆ, ಒಕ್ಕವು** ರೂಪಗಳು. ಹೀಗೆಯೆ **'ಪುಗು'** (ಪ್ರವೇಶ) ಅರ್ಥವ ಹ.ಗ. ಧಾತು. ಇದರಿಂದ **ಪೊಕ್ಕನು, ಪೊಕ್ಕಳು, ಪೊಕ್ಕುದು** ಇತ್ಯಾದಿರೂಪಗಳು ನಿಷ್ಪನ್ನವಾಗುವವು.

೬) **'ಒಳರು'**-**'ಉಳ್'** ಧಾತು (ಇರು) ಉಳ್+ದ+ಅರು ಧಾತುವಿನಆದಿಗೆ ಒಕಾರಾದೇಶ, ಒಳ್+ದ+ಅರು ಕಾಲ ಸೂ. **'ದ'** ಲೋಪ = **'ಒಳರು'** ರೂಪ. **'ಉಂಟು'** (ನಪು) 'ಉಳ್' ಧಾತುವಿನ **'ಳ್'** ಕಾರಕ್ಕೆ 'ಣ' ಕಾರಾದೇಶ- ಉಣ್+ದ+ಅರ್ ಇಲ್ಲಿನ 'ಅರ್' ಗೆ ನಪುಂಸಕದಲ್ಲಿ **'ಟು'** ಆದೇಶವಾಗಿ **ಉಣ್+ಟು** (ಕಾಲ ಸೂ. ಪ್ರ. ಲೋಪ) 'ಣ್' ಕಾರ ಬಿಂದುರೂಪ ಪಡೆದು = 'ಉಂಟು' ರೂಪ. ಈ ಪ್ರಯೋಗವು ತ್ರಿಲಿಂಗಗಳಲ್ಲೂ ಪ್ರಯೋಗವಿದೆ. **ಅವಳು ಉಂಟು, ಅವು ಉಂಟು, ಅವನು** ಉಂಟು. (ಪ್ರಾಂತೀಯ ಭೇದ)

೭) **'ಓಡಿದುದು'**- **'ಓಡು'** (ವೇಗನಡೆ) ಓಡು+ದ+**ಅಂ**,ಗೆ-ಉದು (ನಪುಂ) ಧಾತುವಿನ ಅಂತ್ಯ ಸ್ವರಕ್ಕೆ **'ಇದಾ'**ಗಮವಾಗಿ = **ಓಡಿದುದು** ರೂಪವಾಗಿದೆ. ಹೀಗೆಯೆ ಮಾಡು→ **ಮಾಡಿದುದು**; ಕೂಡು→**ಕೂಡಿ**ದಳು; ತೀಡು→**ತೀಡಿತು**→ನಪು; ಬಾಡು→**ಬಾಡಿದನು**; ಬಾಗು→**ಬಾಗಿದುದು**; ಕೂಗು→**ಕೂಗಿದುದು**; ಕಾಡು→**ಕಾಡಿದನು** ಇತ್ಯಾದಿರೂಪಗಳಾಗಿವೆ.

ವಿಶೇಷ: 'ನಡುಗಿತು' -'ನಡುಗು' ಧಾತುವಿನ ಸ್ವರಲೋಪವಾಗದೆ, ನಪುಂಸಕ 'ಅಂ,ಗೆ' 'ಇತು' (ಇತ್ತು) ಕಾಲ ಸೂ.ಪ್ರ. (ದ) ಲೋಪವಾಗಿ = ನಡುಗಿತು ರೂಪ.

೮) **'ಕಿತ್ತಳು'/ ಕಿತ್ತನು**-'ಕೀಳ್' ಧಾತು, **'ಕೀಳು'** (ಹೊ.ಗ) ಕೀಳ್+ದ+ಅಳು ಧಾತುವಿನ ದೀರ್ಘ-ಹ್ರಸ್ವವಾಗಿ 'ಳ' ಕ್ಕೆ **'ತ್'** ಕಾರಾದೇಶ, ಕಿತ್+ದ+ಅಳು - 'ದ' ಗೆ ಪೂರ್ವವರ್ಣಾದೇಶ, ಕಿತ್+ತ್+ಅಳು =**ಕಿತ್ತಳು,ಕಿತ್ತನು, ಕಿತ್ತೆ** - ರೂಪಗಳಾಗುತ್ತವೆ.

೯) **'ಕೊಂದಿತು' 'ಕೊಲ್'**ಧಾ (ಹ.ಗ) (ಜೀವತೆಗೆ) ಕೊಲ್+ದ+**ಇತು** (ನಪುಂ) ಧಾತುವಿನ 'ಲ್' ಕಾರಕ್ಕೆ 'ನ' ಕಾರಾದೇಶ, ಅದಕ್ಕೆಬಿಂದು ಆದೇಶ. **ಕೊಂ**+ದ+ಇತು = ಕೊಂದಿತು ರೂಪ. ಹೀಗೆಯೆ **'ಸಲ್'** (ಹ.ಗ) (ಪಾತ್ರವಾಗು) **ಸಂದನು, ಸಂದರು** ಇತ್ಯಾದಿರೂಪಗಳು.

೧೦) **'ನಿಲ್'** ಹ.ಗ **ನಿಂತನು, ನಿಂತರು, ನಿಂದುದು** ರೂಪಗಳಾಗಿವೆ. **'ನಿಲ್'**

ಧಾತುವಿನ ಕಾಲಸೂಚಕ 'ದ' ಪ್ರತ್ಯಯಕ್ಕೆ ಪ್ರಥಮವರ್ಣಾದೇಶ ಲ್‌ಕಾರ, ಸಕಾರ, ಬಿಂದುಆದೇಶ ನಿಂ+ತ+ಅನು=**ನಿಂತನು, ಹೀಗೆ ತಂದನು, ಬಂದನು,** ಇತ್ಯಾದಿ ರೂಪಗಳಾಗಿವೆ. ತರ್, ಬರ್ ಧಾತುಗಳಲ್ಲಿ ಅಂತ್ಯ 'ನ' ಕಾರಾದೇಶ ಬಿಂದುವಾಗಿ ತಂ+ದ+ಅನು=**ತಂದನು**, ಬಂ+ದ+ಅನು=**ಬಂದನು** 'ತಿನ್'-ತಿಂ+ದ+ಉದು =ತಿಂದುದು, ತಿಂದೆವು ಇತ್ಯಾದಿ ರೂಪಗಳಾಗುತ್ತವೆ.

೧೧) **'ನೋಂತನು'** 'ವ್ರತಮಾಡಿದನು' **'ನೋನ್'** (ಹ.ಗ) ಧಾತು ನೋನ್+ದ+ಅನು -'ನ್' ಬಿಂದು ಆದೇಶ. ನೋಂ+ದ+ಅನು, ಕಾಲ ಸೂ. 'ದ'ಗೆ ಪ್ರಥಮ ವರ್ಣಾದೇಶ. ನೋಂ+ತ+ಅನು = **ನೋಂತನು. ನೋಂತಳು** (ವ್ರತಮಾಡಿದಳು). ಹೀಗೆಯೆ **ನೋಂತಿರಿ, ನೋಂತೆ** ರೂಪಗಳಾಗಿವೆ. ಇದೇ ರೀತಿ **'ಆನ್'** (ಹೊಂದು ಎಂದರ್ಥ) - **ಆಂತನು, ಆಂತಳು** ಇತ್ಯಾದಿ ರೂಪಗಳಾಗುತ್ತವೆ.

೧೨) **'ಪೆತ್ತವು'**- **'ಪೆರು'**(ಹ.ಗ) **'ಪ್ರಸವಿಸು'** ಎಂದರ್ಥ ಮೇಲ್ಕಂಡಂತೆ ಪೆರ್+ದ+ 'ಅರ್'ನ ರ ಕಾರಕ್ಕೆ ತ್ ಕಾರ ಬಹುವಚನ ಆಖ್ಯಾತ ಅವು ಆದೇಶವಾಗಿ ಪೆತ್+ತ+ಅವು = **ಪೆತ್ತವು** (ಜನ್ಮಕ್ರೊಟ್ಟವು). ಹೀಗೇ **ಪೆತ್ತಳು, ಪೆತ್ತುದು** ರೂಪಗಳು. **'ಕೆರು'** ಹ.ಗ.ಧಾ **'ಅದುರು'** ಎಂದರ್ಥ. ಕೆರು+ದ+ಉವು. ಕೆತ್+ದ+ಉವು ಆದೇಶವಾಗಿ **'ಇದ'** ಆಗಮ ಬಂದು ಕೆತ್ತಿದ+ಉವು = ಕೆತ್ತಿದುವು ರೂಪ (ಭುಜಅದುರು). ಹೀಗೆ **'ಒತ್ತು'** ಧಾತು (ಒತ್ತಡ ಮಾಡು) **ಒತ್ತಿದವು. 'ಪತ್ತು'** ಧಾತು (ಅಂಟಿಕೊ) - **ಪತ್ತಿದುವು.**

೧೩) **'ಬೆಂದನು'**-**'ಬೇ'** ಹ.ಗ. ಧಾತು (ಸುಡು). ಬೇ+ದ+ಅನು ಧಾತುವಿಗೆ ಹ್ರಸ್ವ, 'ನ' ಕಾರಾಗಮ ಬೆನ್+ದ+ಅನು-'ನ್' ಬಿಂದು ಆದೇಶವಾಗಿ = **ಬೆಂದನು, ಬೆಂದುದು, ಬೆಂದಿತು, ಬೆಂದಿತ್ತು** ರೂಪಗಳಾಗಿವೆ. ಹಾಗೆ **'ನೋ'** ಧಾತು (ಹ.ಗ) (ನೋವು) ಎಂದರ್ಥ. **ನೊಂದರು, ನೊಂದೆ, ನೊಂದಿರಿ** ರೂಪಗಳಾಗುತ್ತವೆ. ಹೀಗೆಯೆ **'ಮೀ'** ಹ.ಗ. ಧಾತು (ಸ್ನಾನ) ಮಿಂದಿರಿ, ಮಿಂದನು, ಮಿಂದೆ ರೂಪಗಳಾಗಿವೆ.

೧೪) **'ಸತ್ತಳು'** =(ಮರಣ ಹೊಂದಿದಳು) **'ಸಾ'** (ಹ.ಗ.) ಸ್ವರಾಂತ ಧಾತು - ಸಾ+ದ+ಅಳು ಧಾತುವಿಗೆ ಹ್ರಸ್ವಾದೇಶ ಸತ್+ತ್+ಅಳು 'ದ' ಗೆ ಪ್ರಥಮವರ್ಣಾದೇಶ ಧಾತು ಅಂತ್ಯಕ್ಕೆ 'ತ್'ಕಾರಾದೇಶ. ಸತ್+ತ್+ಅಳು = **ಸತ್ತಳು, ಸತ್ತುದು, ಸತ್ತೆವು** (ಬ.ವ) ರೂಪುಗೊಂಡಿವೆ. ಈ ಪ್ರಕಾರದಲ್ಲಿ **'ಈ'**-ಹೊ.ಗ ಸ್ವರಾಂತ ಧಾತು 'ಕೊಡು' ಎಂದರ್ಥ. **ಈ**+ದ+ಅನು→ಇ+ದ+ಅನು → ಇತ್+ತ್+ಅನು = **ಇತ್ತನು, ಇತ್ತಳು, ಇತ್ತೆವು** ರೂಪಗಳು ಸಿದ್ಧಿಸುತ್ತವೆ.

೩. ಭವಿಷ್ಯತ್ಕಾಲ ಕ್ರಿಯಾರೂಪಗಳು :

ಧಾತು + ಭವಿಷ್ಯತ್ಕಾಲ ಸೂ.ಪ್ರತ್ಯಯ+ಆಖ್ಯಾತ = ಭ. ಕಾಲ ಕ್ರಿಯಾಪದ. ಮುಂದೆ **ನಡೆಯುವ ಕಾಲವನ್ನು ಸೂಚಿಸುವುದು ಭವಿಷ್ಯತ್ಕಾಲ.** ಈ ಕಾಲವನ್ನು ಸೂಚಿಸಲು **'ವ'** ಪ್ರತ್ಯಯವು ಬರುತ್ತದೆ. ಕೆಲವೊಮ್ಮೆ **'ವ'** ಪ್ರತ್ಯಯಕ್ಕೆ **'ಪ'**ಕಾರಾದೇಶವಾಗುತ್ತದೆ. ಉದಾ : ಪೋಗುವನು, ಪೋಪನು. (ಹ.ಗ)

ಭವಿಷ್ಯತ್ಕಾಲದಲ್ಲಿ ಬರುವ ಆಖ್ಯಾತಪ್ರತ್ಯಯಗಳು

ಪುರುಷಗಳು	ಪುಲ್ಲಿಂಗ		ಸ್ತ್ರೀಲಿಂಗ		ನಪುಂಸಕಲಿಂಗ	
	ಏ.ವ	ಬ.ವ	ಏ.ವ	ಬ.ವ	ಏ.ವ	ಬ.ವ.
ಪ್ರಥಮ:	ಅನು	ಅರು	ಅಳು	ಆರು	ಉದು	ಉವು
(ಹ.ಗ)	ಅಂ	ಅರ್	ಅಂ	ಅರ್		
ಮಧ್ಯಮ:	ಎ	ಇರಿ	ಎ	ಇರಿ	...	....
(ಹ.ಗ)	ಅಯ್	ಇರ್	ಅಯ್	ಇರ್		
ಉತ್ತಮ:	ಎನು	ಎವು	ಎನು	ಎವು	...	.....
(ಹ.ಗ)	ಎನ್	ಎವು	ಎನ್	ಎವು		

ಮೇಲಿನ ಪ್ರತ್ಯಯಗಳನ್ನು ಹೊಂದಿಸಿದ ಭವಿಷ್ಯತ್ಕಾಲದ ಕ್ರಿಯಾರೂಪಗಳು ('ಕುಣಿ' ಧಾತು)

ಪುರುಷಗಳು	ಪುಲ್ಲಿಂಗ		ಸ್ತ್ರೀಲಿಂಗ		ನಪುಂಸಕಲಿಂಗ	
	ಏ.ವ	ಬ.ವ	ಏ.ವ	ಬ.ವ	ಏ.ವ	ಬ.ವ.
ಪ್ರಥಮ: ಪುರುಷ	ಕುಣಿವನು	ಕುಣಿವರು	ಕುಣಿವಳು	ಕುಣಿವರು	ಕುಣಿವುದು	ಕುಣಿವುವು
(ಹ.ಗ)	ಕುಣಿವಂ	ಕುಣಿವರ್	ಕುಣಿವಳ್	ಕುಣಿವರ್		
ಮಧ್ಯಮ ಪು.	ಕುಣಿವೆ	ಕುಣಿವಿರಿ	ಕುಣಿವೆ	ಕುಣಿವಿರಿ		
(ಹ.ಗ)	ಕುಣಿವಯ್	ಕುಣಿವಿರ್	ಕುಣಿವಯ್	ಕುಣಿವಿರ್		
ಉತ್ತಮ ಪು. :	ಕುಣಿವೆನು	ಕುಣಿವೆವು	ಕುಣಿವೆನು	ಕುಣಿವೆವು		
(ಹ.ಗ)	ಕುಣಿವೆಂ	ಕುಣಿವೆವು	ಕುಣಿವೆಂ	ಕುಣಿವೆವು		

<u>ಭವಿಷ್ಯತ್ಕಾಲದ ಕೆಲವು ಪ್ರಾತಿನಿಧಿಕ ವಿಶೇಷರೂಪಗಳ ನಿಷ್ಪತ್ತಿ (ಅಕಾರಾದಿ):</u>

೧) **'ಅಡರುವುದು'** -ಅಡರ್-ಹ.ಗ.(ಹತ್ತುವುದು) ಅಡರು (ಹೊ.ಗ)**ಅಡರು**+ವ+ಉದು **ಅರ್** ನಪುಂಸಕದಲ್ಲಿ 'ವುದು' ಆದೇಶಬಂದು ಅಡರುವುದು/ಏರುವುದು (ಏರುವುದು) ರೂಪವಾಗಿದೆ.

೨) **'ಆಗುವುದು'**-ಆಗು+ವ+ಉದು = ಧಾತುವಿನ ಅಂತ್ಯಾಕ್ಷರ ಲೋಪ, ನಂಪುಂಸಕದಲ್ಲಿ ಆಖ್ಯಾತ **'ಅರ್'**ಗೆ **'ಉದು'** ಆದೇಶ. **ಹೀಗೆಯೇ ಆಗುವನು,** ಆಗುವಳು ಇತ್ಯಾದಿ.

೩) **'ಅಪ್ಪುದು'** **'ಆಗುವುದು'** ನಪುಂ **ಆಗು** ಧಾತುವಿನ ಆದಿಸ್ವರಕ್ಕೆ ಹ್ರಸ್ವ, ಅಂತ್ಯ ಲೋಪವಾಗಿ ಅ+ವ+ಉದು 'ವ' ಕಾಲ ಸೂ. ಪ್ರತ್ಯಯಕ್ಕೆ **'ಪ'** ಕಾರಾದೇಶವಾಗಿದೆ. ಅ+ಪ+ಉದು ನ.ಪುಂ. ಆಖ್ಯಾತ **'ಪ'** ದ್ವಿತ್ವರೂಪವಾಗಿ = **ಅಪ್ಪುದು** ರೂಪ. ಹೀಗೆಯೆ **'ಅಹುದು'** = ವಿಶೇಷವಾಗಿ ಕಾಲಸೂಚಕಕ್ಕೆ ಪಕಾರ ಆದೇಶವಾದ 'ಹ' ಕಾರವಾಗಿ ಮೇಲಿನಂತೆ **'ಅಹುದು'** ಎಂಬರೂಪವಾಗಿದೆ (ಹೌದು ರೂಪರೂಢಿಯಲ್ಲಿದೆ).

೪) **'ತಿನ್ನುವಳು'** **'ತಿನ್'** (ಹ.ಗ)ಧಾ **'ತಿನ್ನು'** (ಹೊ.ಗ) ತಿನ್ನು+ವ+ಅಳು = ತಿನ್ನುವಳು. ಹೀಗೆಯೆ **ತಿನ್ನುವನು, ತಿನ್ನುವೆ,ತಿನ್ನುವುದು** ರೂಪಗಳಾಗುತ್ತವೆ. ಕಾ.ಸೂ **'ವ'**ಕಾರ **'ಬ'**ಕಾರವಾಗಿ = **ತಿಂಬನು**, ಹೀಗೆಯೆ ಉಣ್→ಧಾತು **ಉಂಬನು** ಇತ್ಯಾದಿ ರೂಪಗಳಾಗುತ್ತವೆ.

೫) **'ತರುವನು'**-**'ತರ್'** ಧಾ (ಹ.ಗ), **'ತರು'** (ಹೊ.ಗ)- ತರು+ವ+ಅನು = **ತರುವನು, ತರುವಳು, ತರುವುದು,** ತರುವೆ/ಒಯ್→ **ಒಯ್ಯುವೆ** ರೂಪಗಳಾಗುತ್ತವೆ. ಹೀಗೆಯೆ **'ಬರ್'** (ಹ.ಗ) ಧಾತು, 'ಬರು' (ಹೊ.ಗ) - **ಬರುವೆ, ಬರುವರು** ಇತ್ಯಾದಿ ರೂಪಗಳಾಗುತ್ತವೆ.

೬) **'ತವಿಪನು'**-**'ತವ್'** ಧಾ(ಹ.ಗ)- **'ಕ್ಷಯಿಸು'** : ತವ್+ವ+ಅನು-ಕಾಲ.ಸೂ 'ವ'ಕಾರ 'ಪ' ಕಾರವಾಗಿದೆ. **'ತವಿಪನು'** ರೂಪ. ಧಾತುವಿನ 'ವ್' ಕಾರಕ್ಕೆ ಪರವರ್ಣ ಪಕಾರಾದೇಶವಾಗಿ ತಪ್+ಪ+ಅನು = **ತಪ್ಪನು** (ಕ್ಷೀಣವಾಗುವನು) **ತವಿಪುದು**-ನಪುಂ (ಕ್ಷೀಣವಾಗುವುದು) ಇತ್ಯಾದಿ

೭) **ಮಾಂಬುದು** **'ಮಾಣ್'**-ಧಾತು(ಹ.ಗ) ಬಿಡು ಎಂದರ್ಥ. **ಮಾಂಬುದೆ,** ಮಾಣ್+ವ+ಅಂ ಅಖ್ಯಾತ ಪ್ರತ್ಯಯಕ್ಕೆ **ಉದು** ಆದೇಶವಾಗಿ ಮಾಣ್+ವ+ಉದು ಕಾಲಸೂಚಕ 'ವ' ಗೆ **ಪ**ಕಾರಾದೇಶವಾಗಿ ಮಾಣ್+ಪ+ಉದು ಎಂದಾಗಿರುತ್ತದೆ. ಕೆಲವೊಮ್ಮೆ ಪಕಾರಕ್ಕೆ **ಬ** ಕಾರ ಆದೇಶವಾಗಿ **ಮಾಂಬುದು, ಮಾಂಬುದೇ** ಈ ರೂಪಗಳಾಗುತ್ತವೆ.

ಕಾಲಪಲ್ಲಟ : ಕಾಲವನ್ನು ಸೂಚಿಸುವ ಪ್ರತ್ಯಯಗಳು, ಕ್ರಿಯಾಪದಗಳ [illegible] ಕಾಲವನ್ನು ನಿರ್ದೇಶಿಸುತ್ತವೆ. ಹೀಗೆ ಬರುವ ಕಾಲಸೂಚಕ ಪ್ರತ್ಯಯಗಳು ಬದಲಾವಣೆ (ಪಲ್ಲಟ) ವಾಗುವುದುಂಟು. ಇದನ್ನು **'ಕಾಲಪಲ್ಲಟ'** ಯೆನ್ನಲಾಗುತ್ತದೆ.

೧) ಭವಿಷ್ಯ ಕಾಲಾರ್ಥದಲ್ಲಿ ವರ್ತಮಾನಕಾಲ ಪ್ರತ್ಯಯ ರೂಪಗಳು :

ಅವನು ಊಟ ಮಾಡುವನು - ಅವನು ಸಂಜೆ ಊಟ ಮಾಡುತ್ತಾನೆ (ಭ-ವ).

ರಮಾ ಬರುವಳು - ರಮಾ ಬರುತ್ತಾಳೆ.

ಈಗ ಕೊಡುವನು - ಈಗ ಕೊಡುತ್ತಾನೆ (ನಿಶ್ಚಿತಾರ್ಥ).

ಇಂತಹ ಪ್ರಸಂಗಗಳಲ್ಲಿ ಎರಡೂ ರೂಪಗಳನ್ನು **ಭವಿಷ್ಯತ್‌ರೂಪ**ಗಳೆಂದೇ ನಿರ್ಧರಿಸಬೇಕಾಗುತ್ತದೆ. ಉದಾ:-

ವರ್ತಮಾನಾರ್ಥದಲ್ಲಿ ಭವಿಷ್ಯತ್ ರೂಪ :

(ಈಗ) ಜಾತ್ರೆಗೆ ಹೋಗುತ್ತಾನೆ - ಜಾತ್ರೆಗೆ ಹೋಗುವನು.

೨) ಭೂತಕಾಲಾರ್ಥದಲ್ಲಿ ಭವಿಷತ್‌ರೂಪ :

ನಾನು ಕೇಳಿ ಇರುವೆನು/(ಇದ್ದೇನೆ), ನಾನು ತೆಗೆದಿರುವೆನು/ ನಾನು (ತೆಗೆದಿದ್ದೇನೆ).

ಹಕ್ಕಿ ಹಾರಿತು - ಹಕ್ಕಿ ಹಾರುವುದು.

ನಾನು ಬೆಳಿಗ್ಗೆ ಎದ್ದೆನು. - ನಾನು ಬೆಳಿಗೆ ಏಳುವೆನು.

ತ್ವರೆಯ ಅರ್ಥ ಸೂಚಿಸುವಾಗ ಭವಿಷ್ಯತ್ತಿಗೆ ಬದಲಾಗಿ ಭೂತಕಾಲರೂಪ :

ಉದಾ : ಇಗೋ ಬರುವೆನು - ಇಗೋ **ಬಂದೆ**

ಈಗ ಕೊಡುವೆನು - ಈಗ **ಕೊಟ್ಟೆ**

೪) ನಡೆದುಹೋದ ವೃತ್ತಾಂತವನ್ನು ವಿವರಿಸುವಾಗ: "ಆಗ ಸೀತೆ ಬರುತ್ತಾಳೆ. ಅವಳಿಗೆ ವಾಲ್ಮೀಕಿ ಕಥೆ ಹೇಳುವರು..." ಇತ್ಯಾದಿಯಲ್ಲಿ ಕಾಲ ಪಲ್ಲಟವಾಗುವುದನ್ನು **ಸಂದರ್ಭ, ಪ್ರಸಂಗಗಳಿಂದ ನಿರ್ಧರಿಸಿ** ತಿಳಿಯಬೇಕಾಗುತ್ತದೆ.

ಪರಿಚಯಕ್ಕಾಗಿ ಕೆಲವು [illegible] ಮೂರುಕಾಲ, ಎರಡುವಚನಗಳ ರೂಪಗಳನ್ನು ಪಟ್ಟಿಯಲ್ಲಿ ತೋರಿಸಲಾಗಿದೆ :

ಧಾತು	ಅರ್ಥ	ವರ್ತಮಾನ		ಭೂತಕಾಲ		ಭವಿಷ್ಯತ್‌ಕಾಲ	
		ಏ.ವ.	ಬ.ವ.	ಏ.ವ.	ಬ.ವ.	ಏ.ವ.	ಬ.ವ.
ಕೊಡು	ನೀಡು	ಕೊಡುತ್ತಾನೆ	ಕೊಡುತ್ತಾರ	ಕೊಟ್ಟನು	ಕೊಟ್ಟರು	ಕೊಡುವನು	ಕೊಡುವರು.
ಬಾಳು	ಜೀವಿಸು	ಬಾಳುತ್ತಾನೆ	ಬಾಳುತ್ತಾರೆ	ಬಾಳಿದನು	ಬಾಳಿದರು	ಬಾಳುವನು	ಬಾಳುವರು.
ತಾಗು	ಮೇಲೆಬೀಳು	ತಾಗುತ್ತಾನೆ	ತಾಗುತ್ತಾರೆ	ತಾಗಿದನು	ತಾಗಿದರು	ತಾಗುವನು	ತಾಗುವರು.
<u>ಪುಗು</u>	ಪ್ರವೇಶಿಸು	ಪೊಕ್ಕಪಂ	ಪೊಕ್ಕಪರ್	ಪೊಕ್ಕಂ	ಪೊಕ್ಕರ್	ಪುಗವಂ	<u>ಪುಗುವ</u>ರ್(ಹಗ)
<u>ಉಗು</u>	ಒಳಸೇರು	ಒಕ್ಕಪಂ	ಒಕ್ಕಪರ್	ಒಕ್ಕಂ	ಒಕ್ಕರ್	ಉಗುವಂ	<u>ಉಗುವರ್(ಹಗ)</u>
ನಗು	ನಗುವುದು	ನಗುತ್ತಿದ್ದೇನೆ	ನಗುತ್ತಿದ್ದೇವೆ	ನಕ್ಕನು	ನಕ್ಕರು	ನಗುವನು	ನಗುವರು.
ಪೋಗು	ಗಮನ	ಪೊಗುತ್ತಾನೆ	ಪೊಗುತ್ತಾರೆ	ಪೋದನು	ಪೋದರು	ಪೋಗುವನು	ಪೋಗುವರು.
ಕೀಳು	ಬೇರ್ಪಡಿಸು	ಕೀಳುತ್ತಾನೆ	ಕೀಳುತ್ತಾರೆ	ಕಿತ್ತನು	ಕಿತ್ತರು	ಕೀಳುವನು	ಕೀಳುವರು.
ಉಳು	ನೇಗಿಲಕ್ರಿಯೆ	ಉಳುತ್ತಾನೆ	ಉಳುತ್ತಾರೆ	ಉತ್ತನು	ಉತ್ತರು	ಉಳುವನು	ಉಳುವರು.
ಕಾಣು	ನೋಡು	ಕಾಣುತ್ತಾನೆ	ಕಾಣುತ್ತಾರೆ	ಕಂಡನು	ಕಂಡರು	ಕಾಣುವನು	ಕಾಣುವರು.
ಎನ್ನು	ಹೇಳು	ಎನ್ನುತ್ತಾನೆ	ಎನ್ನುತ್ತಾರೆ	ಎಂದನು	ಎಂದರು	ಎನ್ನುವನು	ಎನ್ನುವರು.
ಬೇಯು	ಸುಡು	ಬೇಯುತ್ತಾನೆ	ಬೇಯುತ್ತಾರೆ	ಬೆಂದನು	ಬೆಂದರು	ಬೇಯುವನು	ಬೇಯುವರು.
ಮೀಯು	ಸ್ನಾನ	ಮೀಯುತ್ತಾನೆ	ಮೀಯುತ್ತಾರೆ	ಮಿಂದನು	ಮಿಂದರು	ಮೀಯುವನು	ಮೀಯುವರು.
ನೋಯು	ವೇದನೆ	ನೋಯುತ್ತಿದ್ದೇನೆ	ನೋಯುತ್ತಿದ್ದೇವೆ	ನೊಂದನು	ನೊಂದರು	ನೋಯುವನು	ನೋಯುವರು.
ಮಿದಿ	ಹಿಸುಕು	ಮಿದಿಯುತ್ತಾನೆ	ಮಿದಿಯುತ್ತಾರೆ	ಮಿದಿದನು	ಮಿಡಿದರು	ಮಿದಿಯುವನು	ಮಿದಿಯುವರು.
ನಿಲ್ಲು	ನಿಲ್ಲು	ನಿಲ್ಲುತ್ತಾನೆ	ನಿಲ್ಲುತ್ತಾರೆ	ನಿಂತನು	ನಿಂತರು	ನಿಲ್ಲುವನು	ನಿಲ್ಲುವರು.
ಕೊಲ್ಲು	ಸಾಯಿಸು	ಕೊಲ್ಲುತ್ತಾನೆ	ಕೊಲ್ಲುತ್ತಾರೆ	ಕೊಂದನು	ಕೊಂದರು	ಕೊಲ್ಲುವನು	ಕೊಲ್ಲುವರು.
ಸಲ್ಲು	ಪಾತ್ರನಾಗು	ಸಲ್ಲುತ್ತಾನೆ	ಸಲ್ಲುತ್ತಾರೆ	ಸಂದನು	ಸಂದರು	ಸಲ್ಲುವನು	ಸಲ್ಲುವರು.
<u>ನೋನ್</u>	ವ್ರತಮಾಡು	ನೋಂತಪಂ	ನೋಂತಪರ್	ನೋಂತಂ	ನೋಂತರ್	ನೋಂಪೆನು	<u>ನೋಂಪೆವು.</u>
<u>ಆನ್</u>	ಪ್ರತಿಭಟಿಸು	ಆಂತಪಂ	ಆಂತಪರ್	ಆಂತಂ	ಆಂತರ್	ಆಂಪಳ್	<u>ಆಂಪರ್(ಹಗ)</u>
<u>ತಿನ್</u>	ಖಾದನ	ತಿಂದಪಂ	ತಿಂದಪರ್	ತಿಂದಂ	ತಿಂದರ್	ತಿನ್ನುವಂ	<u>ತಿನ್ನುವರ್(ಹಗ)</u>
ಈ	ನೀಡು	ಇತ್ತಪಂ	ಇತ್ತಪರ್	ಇತ್ತುದು(ನ)	ಇತ್ತುವು	ಈವಳ್	<u>ಈವರ್(ಹಗ)</u>
ಸಾ	ಮೃತಿ(ಸತ್ತ)	ಸತ್ತಪಂ	ಸತ್ತಪರ್	ಸತ್ತುದು(ನ)	ಸತ್ತುವು	ಸಾವಳ್	<u>ಸಾವರ್(ಹಗ)</u>
ಆರಿಸು	ಆಯ್ಕೆ	ಆರಿಸಿದಪಂ	ಆರಿಸಿದಪರ್	ಆರಿಸಿತು(ನ)	ಆರಿಸಿದವು	ಆರಿಸುವಳ್	<u>ಆರಿಸುವರ್(ಹಗ)</u>
ಇರು	ಇರು	ಇರುತ್ತಾನೆ	ಇರುತ್ತಾರೆ	ಇದ್ದನು	ಇದ್ದರು	ಇರುವನು	ಇರುವರು.
ಹೊಯ್	ಹೊಡೆ	ಹೊಯ್ಯುತ್ತಾನೆ	ಹೊಯ್ಯುತ್ತಾರೆ	ಹೊಯ್ದನು	ಹೊಯ್ದರು	ಹೊಯ್ಯುವನು	ಹೊಯ್ಯುವರು
<u>ಮಾಣ್</u>	ನಿಲ್ಲು	ಮಾಣ್ದಪಂ	ಮಾಣ್ದಪರ್	ಮಾಣ್ದಂ	ಮಾಣ್ದರ್	ಮಾಂಬುದು	<u>ಮಾಂಬುವು(ನ)</u>
ಬಯಸು	ಇಷ್ಟಪಡು	ಬಯಸುತ್ತೇನೆ	ಬಯಸುತ್ತೇವೆ	ಬಯಸಿದೆ	ಬಯಸಿದಿರಿ	ಬಯಸಿದುದು	ಬಯಸಿದುವು.
ಕುಣಿ	ನರ್ತನ	ಕುಣಿಯುತ್ತೀಯೆ	ಕುಣಿಯುತ್ತೀರಿ	ಕುಣಿದೆ	ಕುಣಿದಿರಿ	ಕುಣಿವನು	ಕುಣಿವರು.
<u>ತೆಗೆ</u>	<u>ಬಿಡಿಸು</u>	ತೆಗೆಯುತ್ತೇನೆ	ತೆಗೆಯುತ್ತೇವೆ	ತೆಗೆದೆನು	ತೆಗೆದೆವು	ತೆಗೆವಳು	ತೆಗೆವರು.

ಅರ್ಥದೃಷ್ಟಿಯಿಂದ ಕ್ರಿಯಾರೂಪಗಳು ಮೂರು :

i) ವಿಧ್ಯರ್ಥಕಕ್ರಿಯಾರೂಪ ii) ನಿಷೇಧಾರ್ಥಕ್ರಿಯಾರೂಪ iii) ಸಂಭಾವನಾರ್ಥ ಕ್ರಿಯಾರೂಪ

I) **ವಿಧ್ಯರ್ಥ ಕ್ರಿಯಾರೂಪ : 'ವಿಧಿ'** ಯೆಂದರೆ **ಆಜ್ಞೆ, ಪ್ರಾರ್ಥನೆ, ಆಶೀರ್ವಾದ, ಅನುಮತಿ, ಕರ್ತವ್ಯೋಪದೇಶ, ಶಾಪ, ವಿಜ್ಞಾಪನೆ** ಈ ಅರ್ಥಗಳು ತೋರುವಾಗ ಆಖ್ಯಾತಗಳಿಗೆ ಆದೇಶರೂಪಗಳಾದ -'ಉ', 'ಗೆ', 'ಅಲಿ', 'ಇ', 'ಇರಿ', 'ಆಗು', 'ಆಗಲಿ' ಇತ್ಯಾದಿ ವಿಧ್ಯರ್ಥಪ್ರತ್ಯಯಗಳು ಧಾತುಗಳಿಗೆಸೇರಿ **'ವಿಧ್ಯರ್ಥಕಕ್ರಿಯಾರೂಪ'**ಗಳಾಗುತ್ತವೆ. ಉದಾಹರಣೆಗಳು (ಪಟ್ಟಿರೂಪದಲ್ಲಿ)

	ಅರ್ಥಗಳು	**ಪ್ರತ್ಯಯ**	**ಉದಾ:**
೧)	**ಪ್ರಾರ್ಥನೆ:**	**'ಉ' 'ಗೆ'**	ದೇವರೇ ನನ್ನ ಕಷ್ಟಕ್ಕೆ ಫಲವನ್ನು ನೀ**ಡು** (ಹೊ.ಗ). ವಾಗ್ದೇವಿ ದಯೆಗೆಯ್ಗೆ(ಹ.ಗ). ವರವ ನೀಡು**ಗೆ** (ಹ.ಗ)
೨)	**ಆಶೀರ್ವಾದ:**	**'ಅಲಿ' ಈಗೆ 'ಕೆ'**	ದೇವರು ಜಗತ್ತಿಗೆ ಶಾಂತಿಯನ್ನು ನೀಡ**ಲಿ**/. ಮಂಗಳಮಂ ಮಾ**ಳ್ಕೆ**, ಇಷ್ಟಸಿದ್ಧಿಯ**ಕ್ಕೆ** (ಹ.ಗ)
೩)	**ಅನುಮತಿ/ಆಜ್ಞೆ:**	**'ಅಲಿ'**	ಯೋಗ್ಯರನ್ನು ಗುರ್ತಿಸಲಿ. ದುಷ್ಟರನ್ನು ಶಿಕ್ಷಿಸಲಿ.
೪)	**ಕರ್ತವ್ಯೋ -ಪದೇಶ**	**'ಇ' 'ಇರಿ'**	ಕನಸನ್ನು ಕಾಣಿ, ಸಾಧಿಸಿ**ರಿ**. ನೀವು ಅಭ್ಯಾಸವನ್ನು ಮಾಡಿ. ನಿಮ್ಮ ಕರ್ತವ್ಯ ಮೊದಲು ಮಾಡಿ**ರಿ**
		ಅ	ಹೇಳುತ್ತೀನಿ **ಕೇಳ**. ಆಗು ನೀ ಅನಿಕೇತನ (ಕರ್ತವ್ಯ).
		'ಉದು'	ನೀನು ಬರುವುದು.
೫)	**ಶಾಪ**	**'ಆಗು'**	ನೀನು ಮಾಡಿದ ವಂಚನೆಗೆ ಕಲ್ಲಾ**ಗು**.
೬)	**ವಿಜ್ಞಾಪನೆ**	**'ಅಲಿ'**	ಗುರುಗಳ ಕೃಪೆ**ಯಾಗಲಿ**.
		'ಉವ'	ನಾವು ದೇಶಕ್ಕಾಗಿ ದುಡಿ**ಯುವ**. (ಉತ್ತಮಪುರುಷ).
		'ಓಣ'	ನಾಡಿಗಾಗಿ ದುಡಿ**ಯೋಣ**; ನೀ**ಡೋಣ**.
		'ಆ'	ಅಲ್ಲಿ ಆ ಕಡೆ **ನೋಡಲ್ಲಾ**

ಈ ಅರ್ಥಗಳಲ್ಲಿ ವಿಧ್ಯರ್ಥಕ್ರಿಯಾರೂಪಗಳಾಗುತ್ತವೆ. ಮೇಲಿನ ಉದಾಹರಣೆಗಳಲ್ಲಿ ಉ, ಅಲಿ, ಇ, ಇರಿ, ಅ,ಉದು, ಆಗು, ಉವ, ಎ, ಓಣ, ಅ - ಇತ್ಯಾದಿ ವಿಧ್ಯರ್ಥ ಪ್ರತ್ಯಯಗಳನ್ನು ಹೊಸಗನ್ನಡ, ಹಳಗನ್ನಡದ ರೂಪಗಳಲ್ಲಿ ಕಾಣುತ್ತೇವೆ.

ವಿಧ್ಯರ್ಥದ ಕೆಲವು ಪ್ರಾತಿನಿಧಿಕವಾಗಿ ವಿಶೇಷಕ್ರಿಯಾರೂಪಗಳ ನಿಷ್ಪತ್ತಿವಿಚಾರ :

೧) ಓದು, ಮಾಡು, ಹೊರು, ಮುಗಿಸು, ಕಿರಿಚು, ಕೊಡು ಇತ್ಯಾದಿ ಧಾತುಗಳು **ಮಧ್ಯಮ ಪುರುಷದ ಏಕವಚನದ ಧಾತುರೂಪದಲ್ಲೇ ಹೆಚ್ಚುಬಳಕೆಗೆ ಬರುತ್ತವೆ**. ಉದಾ : ನೀನು ಗೀತೆ **ಓದು**. ಕಳ್ಳ ಬಂದಾಗ **ಕಿರಿಚು**. ನಿನ್ನ ಕೆಲಸ ನೀನು ಮೊದಲು **ಮಾಡು**.

ಈ ಕೆಳಗಿನ ಕೆಲವುಧಾತುಗಳಿಗೆ ಮಧ್ಯಮಪುರುಷ **ಏಕ-ಬಹುವಚನಗಳ** ಕ್ರಿಯಾರೂಪಗಳಲ್ಲಾಗುವ ಕಾರ್ಯಗಳು :

'ಕಾ'	ಧಾತು (ರಕ್ಷಣೆ)	ಕಾಯಿ, ಕಾಯಿರಿ (**ಯ ಆಗಮ**)-ಇ, ಇರಿ ಪ್ರತ್ಯಯಗಳು
'ಮೀ'	ಧಾತು (ಸ್ನಾನ)	ಮೀಯಿ, ಮೀಯಿರಿ (-- " --)
'ಮೇ'	ಧಾತು (ತಿನ್ನು)	ಮೇಯಿಸು, ಮೇಯಿಸಿರಿ-**'ಇಸು'** ಪ್ರೇರಣಾರ್ಥದಲ್ಲಿ +**'ಇರಿ'** ಪ್ರತ್ಯಯ.
'ನೋ'	ಧಾತು (ವೇದನೆ)	ನೋಯಿಸು, ನೋಯಿಸಿರಿ (-- " --)
'ಬೇ'	ಧಾತು (ಪಚನ)	ಬೇಯಿಸು, ಬೇಯಿಸಿರಿ (-- " --)
'ಸಾ'	ಧಾತು (ಮೃತಿ)	ಸಾಯಿಸು, ಸಾಯಿಸಿರಿ (-- " --)
'ಕೊಯ್'	ಕೊಯು	ಕೊಯ್ಯಿ, ಕೊಯ್ಯಿರಿ (**'ಯ್'** ಗೆ ಇಕಾರನಿಮಿತ್ತ ದ್ವಿತ್ವ +ಇ, ಇರಿ ಪ್ರತ್ಯಯ).
'ಬಯ್'	ಬಯು	ಬಯ್ಯಿ, ಬಯ್ಯಿರಿ (-- " --)
'ತಿನ್'	ತಿನ್ನು	ತಿನ್ನಿ, ತಿನ್ನಿರಿ, ತಾ - (ಅದೇ 'ನ' ಕಾರದ್ವಿತ್ವ, **ಇ/ಇರಿ** ಪ್ರತ್ಯಯ).
'ತರ್'	ತರು	ತನ್ನಿ / ತನ್ನಿರಿ, ತಾ, ತಾರಾ(ಧಾತುವಿನ ಅಂತ್ಯಲೋಪ, ಆದಿಗೆ ದೀರ್ಘರೂಪದಲ್ಲಿ).
'ಬರ್'	ಬರು	ನೀನು ತರುವುದು, ನೀವು ಬರುವುದು. **'ಉದು'**, ಬಾ, ಬಾರಾ, ಅಂತ್ಯಲೋಪ, ದೀರ್ಘ ರೂಪ:

ವಿಧ್ಯರ್ಥದ ಉತ್ತಮಪುರುಷದಲ್ಲಿ ತಮಗೆ ಆಜ್ಞೆ ಹೇಗೆ? ಎನ್ನಿಸಬಹುದು. ವಿರಳ ಪ್ರಯೋಗಗಳಿವೆ. ೧) ಎಲೆ ಮನವೆ, **ತಾಳು** , ನೀನು ಧೈರ್ಯವೊಂದು ೨) ನಾವು **ಮಾಡೋಣ, ನಾವು ಮಾಡಬೇಕು** ಇತ್ಯಾದಿ ಸಂಯುಕ್ತ ರೂಪಗಳಲ್ಲಿ **ವಿಜ್ಞಾಪನೆ, ಅನುಮತಿ, ಆಶೀರ್ವಾದ, ಕರ್ತವ್ಯೋ**ಪದೇಶಗಳಿವೆ.

ವಿಶೇಷವಾಗಿ ಹಳಗನ್ನಡ ವಿಧಿರೂಪಗಳಲ್ಲಿ ಗೆ, ಕೆ, ಇಂ ಪ್ರತ್ಯಯಗಳು ಬರುತ್ತವೆ:

೧) ದೇವರ್ ದಯೆಗೆಯ್ಗೆ - ಗೆಯ್+ಗೆ (ದಯಮಾಡಲಿಯೆಂದರ್ಥ)

೨) ಇಷ್ಟಸಿದ್ಧಿಯಂ ಮಾಳ್ಕೆ(ಹಗ) - ಮಾಡು+ಕೆ ದಯಮಾಡಲಿ

ಇಲ್ಲಿ - (ಮಾಡು)-ಧಾತು-(ಡು) 'ರಳಾ'ದೇಶವಾಗಿದೆ.

೩) **'ಇರ್'** ಧಾತು ಸಹಜರೂಪ, **'ಅ'** **'ಉ'**ಕಾರಗಳೂ ಬರುತ್ತವೆ. (ಮಧ್ಯಮ ಪು. ಏಕವಚನರೂಪಗಳಲ್ಲಿ) ನೀನಿರ್ ಮರುಳ್ಗೇ, ನೀನಿರ ಮರುಳೆ, ನೀನಿರು.

(ನೀನಿರ-ನಿಷೇಧವೆಂದು ತಿಳಿಯಬಾರದು).

೪) ನೀಂ ದೈವಮಂ ಪೂಜಿಸಿಂ (**'ಇಂ'** ವಿಧ್ಯರ್ಥದಲ್ಲಿ ಬಂದಿದೆ). ಪೂಜಿಪುದು (**'ಉದು'** ವಿಧ್ಯರ್ಥದಲ್ಲಿ ಬಂದಿದೆ) ಈ ಮಾದರಿಯಲ್ಲೇ ಉಳಿದರೂಪಗಳನ್ನು ತಿಳಿಯ ಬೇಕಾಗುತ್ತದೆ.

II ನಿಷೇಧಾರ್ಥಕ ಕ್ರಿಯಾರೂಪಗಳು :

ಕ್ರಿಯೆನಡೆಯಲಿಲ್ಲ, ನಡೆಯುವುದಿಲ್ಲ, ಎಂಬ ಅರ್ಥತೋರುವಾಗ ಧಾತುಗಳ ಮೇಲೆ ನಿಷೇಧಾರ್ಥಕ ಪ್ರತ್ಯಯಗಳು ಸೇರಿ ಈ ರೂಪಗಳಾಗುತ್ತವೆ. ಆ ನಿಷೇಧಾರ್ಥಕ ಪ್ರತ್ಯಯಗಳು-**ಅನು, ಅಳು, ಅ, ಅದು, ಅರು, ಅವು, ಎ, ಅರಿ, ಎವು, ಅರಿ, ಎನು.** ಇವು ಆಖ್ಯಾತ ಪ್ರತ್ಯಯಗಳಿಗೆ ಆದೇಶವಾಗುತ್ತವೆ. ಕೆಲವು ಸಂದರ್ಭಗಳಲ್ಲಿ **ಬೇಡ, ಅಲ್ಲ, ಇಲ್ಲ** ಇತ್ಯಾದಿ ನಿಷೇಧಾರ್ಥಾವ್ಯಯ ಶಬ್ದಗಳೂ ಬರುತ್ತವೆ.

ನಿಷೇಧಕ್ರಿಯಾರೂಪಗಳನ್ನು ಪುರುಷ, ಲಿಂಗ, ವಚನರೂಪಗಳನ್ನು ಪಟ್ಟಿರೂಪದಲ್ಲಿ.

ಪುರುಷ	ಲಿಂಗ	ಧಾತು	ನಿಷೇಧಪ್ರತ್ಯಯ	ನಿಷೇ. ಏ.ರೂಪ	ಬಹುವಚನ
ಪ್ರಥಮ:	**ಪುಲ್ಲಿ**	'ತಿನ್ನು'	+ ಅನು/ಅ/ಅರು	ಅವನು ತಿನ್ನನು/ತಿನ್ನ	ಅವರು ತಿನ್ನರು.
	ಸ್ತ್ರೀ	'ಕುಣಿ'	+ ಅಳು	ಅವಳು ಕುಣಿಯಳು	ಅವರು ಕುಣಿಯರು
	ನಪು	'ನೆನೆ'	+ ಅದು- ಅವು	ಅದು ನೆನೆಯದು	ಅವು ನೆನೆಯವು.
ಮಧ್ಯಮ:	**ಪು,ಸ್ತ್ರೀ**	'ನಡೆ'	+ ಎ/ಅರಿ	ನೀನು ನಡೆಯೆ	ನೀವು ನಡೆಯರಿ.
ಉತ್ತಮ:	**ಪು,ಸ್ತ್ರೀ**	'ತಿಳಿ'	ಎ,ಎನು/ಎವು	ನಾನು ತಿಳಿಯೆ/ಎನು	ನಾವು ತಿಳಿಯೆವು.

ಹೀಗೆ ಆಖ್ಯಾತ ಪ್ರತ್ಯಯಗಳೇ ನಿಷೇಧಾರ್ಥ ತೋರುವುದು ಕನ್ನಡಭಾಷೆಯ ವೈಶಿಷ್ಟ್ಯ(೧)

<u>ಪ್ರಾತಿನಿಧಿಕವಾಗಿ ಕೆಲವು ವಿಶೇಷವಾದ ನಿಷೇಧಾರ್ಥ ಕ್ರಿಯಾರೂಪಗಳ ನಿಷ್ಪತ್ತಿ</u>

೧) ನಿಷೇಧಾರ್ಥ ಕ್ರಿಯಾರೂಪಗಳಲ್ಲಿ ಧಾತುಗಳ ಮೇಲೆ **ಇಲ್ಲ, ಅಲ್ಲ, ಬೇಡ** ಇತ್ಯಾದಿ ಕ್ರಿಯಾರ್ಥಕಾವ್ಯಯಗಳನ್ನು ಕೃದಂತಕ್ಕೆ ಸೇರಿಸಿ ಬಳಸಲಾಗುತ್ತದೆ.

ಉದಾ : ಕೃದಂತ + ಅವ್ಯಯ

ಅವನು **'ಮಾಡನು'** ಎಂಬುದಕ್ಕೆ ಅವನು 'ಮಾಡು+ವುದು'+**ಇಲ್ಲ=ಮಾಡುವುದಿಲ್ಲ.**
ಅವಳು **'ಮಾಡಳು'** ಎಂಬುದಕ್ಕೆ ಅವಳು 'ಮಾಡು+ವುದು'+**ಇಲ್ಲ= ಮಾಡುವುದಿಲ್ಲ.**
ಅದು **'ನೋಡದು'** ಎಂಬುದಕ್ಕೆ ಅದು 'ನೋಡ'+'ಅದ'+**ಅಲ್ಲ=ನೋಡದಲ್ಲ** (ಇಲ್ಲಿ ನಿಷೇಧಪ್ರತ್ಯಯಕ್ಕೆ ಅವ್ಯಯ ಸೇರುವಾಗ **'ದ'** ಆಗಮವಾಗಿದೆ).

೨) ಹಳಗನ್ನಡದ ಕೆಲವು ಶಬ್ದಗಳರೂಪಗಳಲ್ಲಿ ನಿಷೇಧಾರ್ಥಕ ನಡುವೆ **'<u>ಅಲ್</u>'** (ಅವ್ಯಯ) ಬರುತ್ತದೆ: **<u>ಮಧ್ಯಮ.ಪು</u>** : ನೀನು **ನೋಡಲ್ಬೇಡ**=(ನೋಡು+ಅಲ್+ಬೇಡ)
'ನೋಡಬೇಡ' ರೂಪವಿದೆ.

ಪುಂ-ಸ್ತ್ರೀ: ನೀಂ ಮಾಡಲಿಂ ಬೇಡ=ಮಾಡು+ಅಲ್+<u>ಇಂ</u>+ಬೇಡ = **ಮಾಡಲಿಂಬೇಡ** (+ 'ಇಂ' ಪ್ರತ್ಯಯವೂ ಸೇರುತ್ತದೆ) **ನಪುಂ: ನೀಂ ಬನಮಂ**
'ಪುಗುಲ್'= ಪುಗು+ಅಲ್ (ಪ್ರವೇಶಿಸಬೇಡ ಎಂದರ್ಥ)
(ಕೊಟ್ಟು **ಕುದಿಯ<u>ಲು</u> ಬೇಡ,** ಇಟ್ಟು **ಹಂಗಿಸಬೇಡ** - ಹೊ.ಗ ರೂಪ)

---

೧) ಸಂಸ್ಕೃತದಲ್ಲಿ ನಿಷೇಧಾರ್ಥದಲ್ಲಿ ಶಬ್ದಗಳೇ ಬರುತ್ತವೆ. ಉದಾ : ಮಾವದ (ಹೇಳಬೇಡ), ನಲಿಖ (ಬರೆಯಬೇಡ)

ನಪುಂ: ಪುಗುವುದು ಬೇಡ=ಪುಗು+ಉದು+ಬೇಡ (ಪ್ರವೇಶಿಸಬಾರದು)

೩) ಕೆಲವೊಮ್ಮೆ **'ಆಗದು'** ಎಂಬ ನಿಷೇಧಾರ್ಥಕ ಅವ್ಯಯಕ್ಕೆ 'ಆಗ' ಆದೇಶ ಬರುತ್ತದೆ: **ಅವನು ಕಡೆಗಣಿಸಲಾಗ** (ಆಗದು ಎಂದರ್ಥ ಹ.ಗ)

೪) 'ತರ್', 'ಬರ್'-ಮೂಲಧಾತುಗಳಿಗೆ ಎಲ್ಲ ಪುರುಷಗಳಲ್ಲಿ **ಆದಿದೀರ್ಘ** ಮತ್ತು ಅಂತ್ಯ 'ಅ'ಕಾರಾಂತವಾಗುತ್ತವೆ ನಂತರ ನಿಷೇಧಪ್ರತ್ಯಯ, ಅನು, ಅಳು ಎ, ಇರಿ; ಗಳು ಬರುವುದುಂಟು: **ತರ್ - ತಾರ್ = ತಾರ. ಬರ್ = ಬಾರ.**

ಪ್ರಥಮಪುರುಷ : ಅವನು ಹಣ್ಣನ್ನು ತಾರ**ನು/ಳು**. (ಪುಲ್ಲಿ ಸ್ತ್ರೀ- ಏಕ)
ಮಧ್ಯಮ : ನೀನು ತಾರೆ, ನೀವು **ತಾರಿರಿ**. (ಸ್ತ್ರೀ ಪು- ಏ.ಬ.)
ಉತ್ತಮ : ನಿಮ್ಮ ತಲೆಗೆ ಹುಲ್ಲ ತಾ**ರೆ/ನು**. (ಸ್ತ್ರೀ ಪು-ಏ)
ನಿಮ್ಮ ತಲೆಗೆ ಹುಲ್ಲ ತಾ**ರೆವು**. (ಸ್ತ್ರೀ ಪು-ಬ)

೫) ಪ್ರಥಮಪುರುಷ ಏಕವಚನದಲ್ಲಿ ಕೆಲವು ಧಾತುವಿಗೆ **'ಅ'** ಪ್ರತ್ಯಯ ಬರುತ್ತದೆ: ಅವನು ಔಷಧಿ ತಿನ್ನ. ಹಾಸಿಗೆ ಬಿಟ್ಟು ಏಳ. ಕುದುರೆಯಿಂದ ಕೆಳಗೆ ಇಳಿಯ.

೬) **'ಬಾರದು', 'ಕೂಡದು'** ಎಂಬ ನಿಷೇಧಾರ್ಥಕ ಅವ್ಯಯಗಳು ಲಿಂಗಭೇದವಿಲ್ಲದೆ ಬರುತ್ತವೆ: ಆಕೆ ಬರ**ಕೂಡದು**. ಅವನು ಇರ**ಬಾರದು**. **ಅದು ಇರಕೂಡದು. 'ಒಲ್ಲೆ'**ಎಂಬ ನಿಷೇಧಾರ್ಥವ್ಯಯ ಸೇರಿ : **ನೀನು** ಇರ**ಲೊಲ್ಲೆ. ನಾನು** ಆಗ**ಲೊಲ್ಲೆ** ರೂಪಗಳಿವೆ.

೭) ಕೆಲವು ಸಂಯುಕ್ತ ಧಾತುರೂಪಗಳಿಗೆ **'ನಿಷೇಧಾರ್ಥಕ'** ಪ್ರತ್ಯಯಸೇರಿದ ರೂಪಗಳು: ಆತ **ಮಾಡಲಾರನು**= ಮಾಡಲ್+**ಆರ್**+ಅನು (ಇಲ್ಲಿ 'ಆರ್' ಧಾತು - **ಶಕ್ತನಲ್ಲ** ಎಂಬರ್ಥ). ನಾವು ಮಾಡ**ಲಾರೆವು** = ಮಾಡಲ್+**ಆರ್**+ಎವು.

III ಸಂಭಾವನಾರ್ಥಕ ಕ್ರಿಯಾರೂಪ :

ಕ್ರಿಯೆನಡೆಯುವ ವಿಷಯದಲ್ಲಿ ಕೆಲವೆಡೆ **ಸಂದೇಹ, ಊಹೆ** ತೋರುತ್ತದೆ. ಇದು **'ಸಂಭಾವನಾರ್ಥಕ ಕ್ರಿಯಾರೂಪ'** ವೆನಿಸುತ್ತದೆ.

ಪ್ರತ್ಯಯಗಳು + ಕ್ರಿಯಾರೂಪಗಳ ಪಟ್ಟಿ :

ಪುರುಷ	**ಪ್ರತ್ಯಯಗಳು**		**ರೂಪಗಳು**	
	ಏ.ವ	ಬ.ವ	ಏ.ವ.	ಬ.ವ
ಪ್ರಥಮ: ಪುಲ್ಲಿ –	ಆನು	ಆರು	ಬಂದಾನು	ಬಂದಾರು
ಸ್ತ್ರೀ –	ಆಳು	ಆರು	ಹೋದಾಳು	ಹೋದಾರು
ನಪುಂ –	ಈತು/ಆತು	ಆವು	ತಿಂದೀತು, ತಂದಾತು	ತಿಂದಾವು
ಮಧ್ಯಮ: ಪುಲ್ಲಿ –	ಈಯೆ	ಈರಿ	ದಾಟೀಯೆ	ದಾಟೀರಿ
ಸ್ತ್ರೀ –	ಈಯೆ	ಈರಿ	ದಾಟೀಯೆ	ದಾಟೀರಿ
ಉತ್ತಮ: ಪು+ಸ್ತ್ರೀ-	ಏನು	ಏವು	ಹಚ್ಚೇನು	ಹಚ್ಚೇವು

ಪ್ರಥಮಪುರುಷದಲ್ಲಿ ಧಾತು ಹಾಗೂ ಆಖ್ಯಾತಗಳ ನಡುವೆ 'ದ' ಕಾರಾಗಮವು...

ಪ್ರಾತಿನಿಧಿಕವಾಗಿ ಕೆಲವು ವಿಶೇಷ ಸಂಭಾವನಾರ್ಥಕ ಕ್ರಿಯಾರೂಪಗಳ ನಿಷ್ಪತ್ತಿ:-

೧) **'ಗು' ಕಾರಾಂತ ಧಾತುಗಳಿಗೆ** ಸಂಭಾವನಾರ್ಥ ಪ್ರತ್ಯಯಗಳು ಸೇರುವಾಗ ಅಂತ್ಯ **'ಗು'** ಕಾರ ಲೋಪವಾಗುತ್ತದೆ. **'ದ'** ಕಾರಾಗಮವು ಬರುತ್ತದೆ. ಉದಾ:

ಪೋಗು: ಪೋ +ದ+ಆನು = **ಪೋದಾನು, ಪೋದೀಯ, ಪೋದೇವು.**

ಆಗು : ಆ+ದ+ಆನು = **ಆದಾನು, ಆದೀರಿ, ಆದೇವು.**

೨) **ತರ್**-ತರು, **ಬರ್**-ಬರು-ಈ ಧಾತುಗಳ 'ರು' ಕಾರಕ್ಕೆ ಬಿಂದುಆದೇಶವಾಗುತ್ತದೆ, ಹಾಗೆಯೇ **'ದ'** ಕಾರಾಗಮವಾಗುತ್ತದೆ.

ತರು - ತಂ+ದ+ಆನು = **ತಂದಾನು, ತಂದೀಯೆ, ತಂದೇವು.**

ಬರು - ಬಂ+ದ+ಆನು = **ಬಂದಾನು, ಬಂದೀರಿ, ಬಂದೇವು.**

೩) **'ತಿನ್'** ಇತ್ಯಾದಿ ನಕಾರಾಂತ ಧಾತು ಮತ್ತು **ಕೊಲ್, ಸಲ್** ಇತ್ಯಾದಿ 'ಲ'ಕಾರಾಂತ ಧಾತುಗಳಿಗೆ **'ದ'** ಕಾರಾಗಮಸಹಿತವಾಗಿ ಬಿಂದುಆದೇಶವಾಗುತ್ತದೆ: ಉದಾ:

ತಿನ್-ತಿನ್ನು - ತಿಂ+ದ+ಆಳು = **ತಿಂದಾಳು, ತಿಂದಾರು, ತಿಂದೇವು.**

ಕೊಲ್-ಕೊಲ್ಲು - ಕೊಂ+ದ+ಆನು = **ಕೊಂದಾನು, ಕೊಂದೀರಿ, ಕೊಂದೇವು.**

ಸಲ್-ಸಲ್ಲು-ಸಂ+ದ+ಆಳು(ಪಾತ್ರಳಾಗು)= **ಸಂದಾಳು, ಸಂದೀರಿ, ಸಂದೇವು**

'ಬಂದಾರೆ ಬರ್ರೆವ್ವ, ತಂದಾರೆ ತರ್ರೆವ್ವ'(೧)-ಇಲ್ಲಿರುವ ರೂಪಗಳು **'ಪಕ್ಷಾರ್ಥ'**ದಲ್ಲಿರುವ ರೂಪಗಳು **ಸಂಭಾವನಾರೂಪ**ಗಳೆಂದು ತಿಳಿಯಬಾರದು. **'ಎದ್ದನೋ'** (ಒಂದು ವೇಳೆ) **'ಬಿದ್ದನೋ'** (ಒಂದು ವೇಳೆ ಬಿದ್ದರೆ) 'ತಪ್ಪಿದನೋ' ತಪ್ಪಿದ ಪಕ್ಷದಲ್ಲಿ ಇದೇ ಅರ್ಥದಲ್ಲಿ **'ಒಡೆ'** ಪ್ರತ್ಯಯ ಬರುತ್ತದೆ. ತಪ್ಪಿದ+ಒಡೆ=ತಪ್ಪಿದೊಡೆ ರೂಪಗಳಿವೆ.

೪) **'ಬೇ' ಧಾತು** (ಸುಡು), -**'ಮೀ'** (ಸ್ನಾನ ಮಾಡು) - ಮೂಲಧಾತುಗಳಿಗೆ ದೀರ್ಘಕ್ಕೆ ಬಿಂದು ಆದೇಶವಾಗುತ್ತದೆ:

ಉದಾ : ಬೇ = ಬೆಂ+ದ+ಆನು = **ಬೆಂದಾನು, ಬೆಂದೇವು.**

ಮೀ = ಮಿಂ+ದ+ಆಳು = **ಮಿಂದಾಳು, ಮಿಂದೀರಿ.**

೫) **'ಬೀಳ್'** (ಉದುರು)- ಮೂಲಧಾತು, ಅಂತ್ಯಲೋಪ, ಹ್ರಸ್ವಾದೇಶ. **'ದ'** ಕಾರಕ್ಕೆ ದ್ವಿತ್ವ ಬರುತ್ತದೆ: ಬೀಳ್ (ಬೀಳು) ಬಿದ್+ಆನು = **ಬಿದ್ದಾನು, ಬಿದ್ದೀರಿ, ಬಿದ್ದಾರು**

೬) **ಕೊಡು, ಬಿಡು, ಸುಡು, ತೊಡು, ಇಡು** - ಈ ಧಾತುಗಳ ಅಂತ್ಯಸ್ವರ ಲೋಪ. **'ಡ'** ಕಾರಕ್ಕೆ **'ಟ'** ಕಾರಾದೇಶವಾಗುತ್ತದೆ. ಉದಾ :

---

೧) **ಬೇಂದ್ರೆಯವರ ಕರಡಿಕುಣಿತ ಕವನದ ಸಾಲ.**

			(ಪ್ರ.ಪು.) (ಮ.ಪು.) (ಉ.ಪು.)
'ಕೊಡು' -	ಕೊಟ್+ದ+ಆನು	-	**ಕೊಟ್ಟಾನು, ಕೊಟ್ಟೀರಿ, ಕೊಟ್ಟೇವು ಕೊಟ್ಟಾಳು,**
'ಸುಡು' -	ಸುಟ್+ಟ್+ಆನು	-	**ಸುಟ್ಟಾನು, ಸುಟ್ಟೀರಿ, ಸುಟ್ಟೇವು, ಸುಟ್ಟಾಳು.**
'ತೊಡು' -	ತೊಟ್+ಟ್+ಆನು	-	**ತೊಟ್ಟಾನು, ತೊಟ್ಟೇವು, ತೊಟ್ಟೀತು, ತೊಟ್ಟೀರಿ.**
'ಇಡು' -	ಇಟ್+ಟ್+ಆನು	-	**ಇಟ್ಟಾನು, ಇಟ್ಟೀಯೆ, ಇಟ್ಟೇವು(೧), ಇಟ್ಟಾರು.**

೭) **ಮಾಡು, ಕೂಡು, ಬೇಡು, ತೀಡು** ಇತ್ಯಾದಿಧಾತುಗಳ **'ಉ'** ಕಾರ ಲೋಪವಾಗುತ್ತದೆ: ಉದಾ:

ಮಾಡು - ಮಾಡ್+ಆನು = **ಮಾಡಾನು,ಮಾಡೇವು, ಹಚ್ಚು-ಹಚ್ಚೇವು.**

(ಹಚ್ಚೇವು ಕನ್ನಡದ ದೀಪ, ನಾಡ ಕಟ್ಟೇವು)

ಬೇಡು - ಬೇಡು+ ಆರು= ಬೇಢಾರು, ಬೇಡಾಳು, ಬೇಡೇವು, ಬೇಡೀತು.

ಕೂಡು - ಕೂಡು+ಆನು= ಕೂಡಾನು, ಕೂಡಾರು, ಕೂಡೀರಿ, ಕೂಡೀತು,

೮) ಕೆಲವು **'ಉ'** ಕಾರಾಂತ ಧಾತುಗಳಿಗೆ **'ಇ'** ಕಾರಾದೇಶವಾಗುತ್ತದೆ:-

ಬಾಳು- ಬಾಳ್+ಇ+ಆನು (ಯಕಾರಾಗಮ) = **ಬಾಳಿಯಾನು, ಬಾಳಿಯಾಳು.**

ನೋಡು-ನೋಡಿ+ಆಳು = ನೋಡಿಯಾಳು, **ನೋಡ್ಯಾಳು, ನೋಡ್ಯಾರು.**

ಬೀಸು- ಬೀಸಿ+ಆವು =**ಬೀಸಿಯಾವು, ಬೀಸ್ಯಾವು**-ಇತ್ಯಾದಿ ಜಾನಪದೀಯ ರೂಪ.

ಮೇಲ್ಕಂಡ ಅರ್ಥದೃಷ್ಟಿಯ ಮೂರುಕ್ರಿಯಾರೂಪಗಳನ್ನು ಪ್ರಥಮಪುರುಷದ, ವಚನ, ಲಿಂಗರೂಪಗಳನ್ನೂ ಪಟ್ಟಿಯಲ್ಲಿ ತೋರಿಸಬಹುದು:-

೧) **'ಈ'** ಧಾತು (ಕೊಡು) ರೂಪಗಳು **'ಸಾ'** ಧಾತು (ಮರಣ) ರೂಪಗಳಲ್ಲಿ ಸಾಮ್ಯವಿದೆ:

	ವಿಧಿರೂಪಗಳು	ನಿಷೇಧರೂಪಗಳು	ಸಂಭಾವನಾರ್ಥ ರೂಪಗಳು
	ಏ.ವ. ಬ.ವ.	ಏ.ವ. ಬ.ವ.	ಏ.ವ. ಬ.ವ.
ಪು:	ಅವನು ಈಯಲ್ಲಿ/ ಈಯಲಿ.	ಅವನು ಈಯನು, ಈಯರು.	ಇತ್ತಾನು, ಇತ್ತಾರು.
ಸ್ತ್ರೀ:	ಅವಳು ಈಯಲ್ಲಿ/ ಈಯಲಿ.	ಅವಳು ಈಯಳು,ಈಯರು.	ಇತ್ತಾಳು, --"--.
ನಪು:	ಅದು ಈಯಲಿ/ ಈಯಲಿ.	ಅದು ಈಯದು, ಈಯವು.	ಇತ್ತಾತು, ಇತ್ತಾವು.

೨) **'ಆಳು'** (ಅಧಿಕಾರ ನಡೆಸು) ಹೀಗೆಯೆ **'ಅಳು'** (ಕಣ್ಣೀರಿಡು) **'ಕೀಳು'** (ಸೆಳೆ) ಧಾತುವಿನ ರೂಪಗಳಲ್ಲಿ ಸಾಮ್ಯವುಂಟು:

	ವಿಧಿರೂಪ		ನಿಷೇಧ		ಸಂಭಾವನಾ	
ಪ್ರಥಮ.ಪು.	ಏ.ವ	ಬ.ವ	ಏ.ವ.	ಬ.ವ	ಏ.ವ.	ಬ.ವ
ಪ್ರ:	ಅವನು ಆಳಲಿ,	ಅವರು ಆಳಲಿ.	ಆಳನು,	ಆಳರು.	ಅತ್ತಾನು,	ಅತ್ತಾರು.
ಸ್ತ್ರೀ:	ಅವಳು ಆಳಲಿ,	ಅವರು ಆಳಲಿ.	ಆಳಳು,	ಆಳರು.	ಅತ್ತಾಳು,	ಅತ್ತಾರು.
ನಪು:	ಅದು ಆಳಲಿ,	ಅವು ಆಳಲಿ.	ಆಳದು,	ಆಳವು.	{ ಅತ್ತೀತು, ಅತ್ತಾತು,	ಅತ್ತಾವು.

---

೩) **'ಎನ್'**-(ಹೇಳು),**'ಅನ್'**-ಮಾತಾಡು, **'ತಿನ್'**-ತಿನ್ನು ಇತ್ಯಾದಿ ಧಾತುಗಳ ರೂಪಗಳಲ್ಲಿ ಸಾಮ್ಯವಿದೆ:

	ವಿಧಿರೂಪ		ನಿಷೇಧ		ಸಂಭಾವನಾ	
ಪ್ರಥಮ.ಪು.	ಏ.ವ	ಬ.ವ	ಏ.ವ.	ಬ.ವ	ಏ.ವ.	ಬ.ವ
ಪ್ರ:	ಅವನು ಎನ್ನಲಿ,	ಅವರು ಎನ್ನಲಿ;	ಅನ್ನನು	ಅನ್ನರು;	ಅಂದಾನು,	ಅಂದಾರು.
ಸ್ತ್ರೀ:	ಅವಳು ಎನ್ನಲಿ,	ಅವರು ಎನ್ನಲಿ;	ಅನ್ನಳು	ಅನ್ನರು ;	ಅಂದಾಳು,	ಅಂದಾರು.
ನಪು:	ಅದು ಎನ್ನಲಿ,	ಅವು ಎನ್ನಲಿ;	ಅನ್ನದು;	ಅನ್ನವು	{ ಅಂದೀತು, ಅಂದಾತು.	ಅಂದಾವು.

---

೪) ಕಾಣ್ - **'ಕಾಣು'** ಧಾತುರೂಪಗಳಲ್ಲಿ ಸಾಮ್ಯವಿದೆ :

	ವಿಧಿರೂಪ		ನಿಷೇಧ		ಸಂಭಾವನಾ	
ಪ್ರಥಮ.ಪು.	ಏ.ವ	ಬ.ವ	ಏ.ವ.	ಬ.ವ	ಏ.ವ.	ಬ.ವ
ಪು:	ಅವನು ಕಾಣಲಿ,	ಅವರು ಕಾಣಲಿ,	ಕಾಣ:ಕಾಣನು,	ಕಾಣರು	{ ಕಾಣಾನು ಕಂಡಾನು,	ಕಾಣಾರು. ಕಂಡಾರು.
ಸ್ತ್ರೀ :	ಅವಳು ಕಾಣಲಿ,	ಅವರು ಕಾಣಲಿ.	ಕಾಣಳು,	ಕಾಣರು.	ಕಂಡಾಳು,	ಕಂಡಾರು.
ನಪು:	ಅದು ಕಾಣಲಿ,	ಅವು ಕಾಣಲಿ.	ಅದು ಕಾಣದು,	ಕಾಣವು.	ಕಂಡಾತು,	ಅವು ಕಂಡಾವು.

---

೫) **ಏಳು, ಬೀಳು, ಕೇಳು** ಇತ್ಯಾದಿ ಧಾತುರೂಪಗಳಲ್ಲಿ ಸಾಮ್ಯವಿದೆ :-

	ವಿಧಿರೂಪ		ನಿಷೇಧ		ಸಂಭಾವನಾ	
ಪ್ರಥಮ.ಪು.	ಏ.ವ	ಬ.ವ	ಏ.ವ.	ಬ.ವ	ಏ.ವ.	ಬ.ವ
ಪು:	ಅವನುಬೀಳಲಿ,	ಅವರು ಬೀಳಲಿ.	ಬೀಳನು,	ಬೀಳರು.	ಅವನು ಬಿದ್ದಾನು,	ಬಿದ್ದಾರು.
ಸ್ತ್ರೀ:	ಅವಳು ಬೀಳಲಿ,	ಅವರು ಬೀಳಲಿ.	ಬೀಳಳು,	ಬೀಳರು.	ಅವಳು ಬಿದ್ದಾಳು,	ಬಿದ್ದಾರು.
ನಪು:	ಅದು ಬೀಳಲಿ,	ಅವು ಬೀಳಲಿ.	ಅದು ಬೀಳದು,	ಅವು ಬೀಳವು,	{ ಅದು ಬಿದ್ದೀತು ಬಿದ್ದಾತು	ಅವು ಬಿದ್ದಾವು.

---

೬) ಮೀ (ಸ್ನಾನ) ಧಾತುರೂಪಗಳಲ್ಲಿ ಸಾಮ್ಯವಿದೆ :

	ವಿಧಿರೂಪ		ನಿಷೇಧ		ಸಂಭಾವನಾ	
ಪ್ರಥಮ.ಪು.	ಏ.ವ	ಬ.ವ	ಏ.ವ.	ಬ.ವ	ಏ.ವ.	ಬ.ವ
ಪು:	ಅವನು ಮೀಯಲಿ,	ಅವರು ಮೀಯಲಿ.	ಮೀಯ ಮೀಯನು,	ಮೀಯರು.	ಮಿಂದಾನು,	ಮಿಂದಾರು.

ಸ್ತ್ರೀ :	ಅವಳು ಮೀಯಲಿ,	ಅವರು ಮೀಯಲಿ.	ಮೀಯಳು,	ಮೀಯರು.	ಮಿಂದಾಳು	ಮಿಂದಾರು.
ನಪು:	ಅದು ಮೀಯಲಿ,	ಅವು ಮೀಯಲಿ.	ಮೀಯದು,	ಮೀಯವು.	ಮಿಂದಾತು,	ಮಿಂದಾವು.

---

೭) ನಿಲ್ಲು, ಕೊಲ್ಲು, ಸಲ್ಲು ಧಾತುಗಳ ರೂಪಗಳಲ್ಲಿ ಸಾಮ್ಯವಿದೆ :

	ವಿಧಿರೂಪ		ನಿಷೇಧ		ಸಂಭಾವನಾ	
ಪ್ರಥಮ.ಪು.	ಏ.ವ	ಬ.ವ	ಏ.ವ.	ಬ.ವ	ಏ.ವ.	ಬ.ವ
ಪು :	ಅವನು ಕೊಲ್ಲಲಿ,	ಅವರು ಕೊಲ್ಲಲಿ.	ಕೊಲ್ಲನು,	ಕೊಲ್ಲರು.	ಕೊಂದಾನು,	ಕೊಂದಾರು.
ಸ್ತ್ರೀ :	ಅವಳು ಕೊಲ್ಲಲಿ,	ಅವರು ಕೊಲ್ಲಲಿ.	ಕೊಲ್ಲಳು,	ಕೊಲ್ಲರು.	ಕೊಂದಾಳು,	ಕೊಂದಾರು.
ನಪು :	ಅದು ಕೊಲ್ಲಲಿ,	ಅವು ಕೊಲ್ಲಲಿ.	ಕೊಲ್ಲದು,	ಕೊಲ್ಲವು.	ಕೊಂದೀತು, ಕೊಂದಾತು	ಕೊಂದಾವು.

---

೮) ಇಡು, ಕೊಡು, ತೊಡು ಇತ್ಯಾದಿ ಧಾತುಗಳ ರೂಪಗಳಲ್ಲಿ ಸಾಮ್ಯವಿದೆ :

	ವಿಧಿರೂಪ		ನಿಷೇಧ		ಸಂಭಾವನಾ	
ಪ್ರಥಮ.ಪು.	ಏ.ವ	ಬ.ವ	ಏ.ವ.	ಬ.ವ	ಏ.ವ.	ಬ.ವ
ಪು :	ಅವನು ಇಡಲಿ,	ಅವರು ಇಡಲಿ.	ಇಡ/ಇಡನು,	ಇಡರು.	ಇಟ್ಟಾನು,	ಇಟ್ಟಾರು.
ಸ್ತ್ರೀ :	ಅವಳು ಇಡಲಿ,	ಅವರು ಇಡಲಿ.	ಇಡಳು,	ಇಡರು.	ಇಟ್ಟಾಳು,	ಇಟ್ಟಾರು.
ನಪು :	ಅದು ಇಡಲಿ,	ಅವು ಇಡಲಿ.	ಇಡದು,	ಇಡವು.	ಇಟ್ಟೀತು, ಇಟ್ಟಾತು,	ಇಟ್ಟಾವು.

---

೯) ಇಸು (ಬಾಣ ಪ್ರಯೋಗ) → ಎಚ್ಚ್ ಧಾತು ರೂಪಗಳು :

ಪ್ರಥಮ.ಪು.	ಏ.ವ	ಬ.ವ.	ಏ.ವ	ಬ.ವ.	ಏ.ವ.	ಬ.ವ.
ಪು:	ಅವಂಎಚ್ಚಂ,	ಅವರ್ಎಚ್ಚರ್.	ಎಚ್ಚಂ,	ಎಚ್ಚರ್.	ಎಚ್ಚಾನು,	ಎಚ್ಚಾರು
ಸ್ತ್ರೀ:	ಅವಳ್ಹೆಚ್ಚಳ್,	ಅವಳ್ಎಚ್ಚಳ್.	ಎಚ್ಚರ್,	ಎಚ್ಚರ್.	ಎಚ್ಚಾಳು,	ಎಚ್ಚಾರು
ನಪು:	ಅದುಎಚ್ಚುದು,	ಅವು ಎಚ್ಚುವು.	ಎಚ್ಚದು,	ಎಚ್ಚವು.	ಎಚ್ಚಾತು,	ಎಚ್ಚಾವು

---

೧೦) ಉಗು→ಒಗು(ಪ್ರವೇಶಿಸು) ತುಡು→ತೊಡು (ಧರಿಸು). ಪುಗು→ಪೋಗು (ಪ್ರವೇಶ) ಧಾತುರೂಪಗಳಲ್ಲಿ ಸಾಮ್ಯವಿದೆ :

	ವಿಧಿರೂಪ		ನಿಷೇಧ		ಸಂಭಾವನಾ	
ಪ್ರಥಮ.ಪು.	ಏ.ವ	ಬ.ವ	ಏ.ವ.	ಬ.ವ	ಏ.ವ.	ಬ.ವ
ಪು :	ಅವಂ ಉಗಲಿ,	ಅವರ್ ಉಗಲಿ.	ಒಗ/ಒಗನು.	ಒಗರು.	ಒಕ್ಕಾನು,	ಒಕ್ಕಾರು.
ಸ್ತ್ರೀ :	ಅವಳ್ ಉಗಲಿ,	ಅವರ್ ಉಗಲಿ.	ಒಗಳು.	ಒಗರು.	ಒಕ್ಕಾಳು,	ಒಕ್ಕಾರು.
ನಪು :	ಅದು ಉಗಲಿ,	ಅವು ಉಗಲಿ.	ಒಗದು.	ಒಗವು.	ಒಕ್ಕೀತು,	ಒಕ್ಕಾವು

---

೧೧) ಗಿರು→ಗೆತ್ (ತಿಳಿಯೆಂದರ್ಥ). ಪೆರು→ಪೆತ್ (ಪ್ರಸವ ಎಂದರ್ಥ) ತೆರು→ತೆತ್ (ವ್ಯಯ) ಧಾತುರೂಪಗಳಲ್ಲಿ ಸಾಮ್ಯವಿದೆ :

	ವಿಧಿರೂಪ		ನಿಷೇಧ		ಸಂಭಾವನಾ	
ಪ್ರಥಮ.ಪು.	ಏ.ವ	ಬ.ವ	ಏ.ವ.	ಬ.ವ	ಏ.ವ.	ಬ.ವ

ಪುಲ್ಲಿಂಗ:	ಅವನು ತೆರಲಿ,	ಅವರು ತೆರಲಿ.	ಅವನು ತೆರನು,ತೆರರು.	ತೆತ್ತಾನು,	ತೆತ್ತಾರು.
ಸ್ತ್ರೀ:	ಅವಳು ತೆರಲಿ,	ಅವರು ತೆರಲಿ.	ಅವಳು ತೆರಳು,ತೆರರು.	ತೆತ್ತಾಳು,	ತೆತ್ತಾರು.
ನಪು:	ಅದು ತೆರಲಿ,	ಅವು ತೆರಲಿ.	ಅದು ತೆರದು, ಅವು ತೆರವು.	ತೆತ್ತೀತು, ತೆತ್ತಾತು.	ತೆತ್ತಾವು.

---

೧೨) **ಎಳೆ, ಹೊಳೆ, ತಿಳಿ, ಕಳೆ** ಇತ್ಯಾದಿ ಧಾತುರೂಪಗಳಲ್ಲಿ ಸಾಮ್ಯವಿದೆ :

	ವಿಧಿರೂಪ		ನಿಷೇಧ		ಸಂಭಾವನಾ	
ಪ್ರಥಮ.ಪು.	**ಏ.ವ**	**ಬ.ವ**	**ಏ.ವ.**	**ಬ.ವ**	**ಏ.ವ.**	**ಬ.ವ**
ಪು:	ಅವನು ಎಳೆಯಲಿ,	ಅವರು ಎಳೆಯಲಿ.	ಎಳೆಯ,	ಎಳೆಯರು.	ಎಳೆದಾನ,	ಎಳೆದಾರು.
ಸ್ತ್ರೀ:	ಅವಳು ಎಳೆಯಲಿ,	ಅವರು ಎಳೆಯಲಿ.	ಎಳೆಯಳು,	ಎಳೆಯರು.	ಎಳೆದಾಳು,	ಎಳೆದಾರು.
ನಪು:	ಅದು ಎಳೆಯಲಿ,	ಅವು ಎಳೆಯಲಿ.	ಅದು - ಎಳೆಯದು.	ಎಳೆಯವು.	ಎಳೆದೀತು, ಎಳೆದಾತು.	ಎಳೆದಾವು.

(ಇಲ್ಲಿ ಕೆಲವು ಕ್ರಿಯಾರೂಪಗಳನ್ನು ಮಾದರಿಗಾಗಿ ತೋರಿಸಲಾಗಿದೆ. ಉಳಿದ ರೂಪಗಳನ್ನು ಹೀಗೆಯೇ ತಿಳಿಯುವುದು).

ಸಾರಸಂಗ್ರಹ

ಕ್ರಿಯಾಪದಗಳು(೧)-೬ ವಿಧ

ಕಾಲದದೃಷ್ಟಿ -೩ ವಿಧ

೧. <u>ವರ್ತಮಾನ</u> **ಕ್ರಿಯಾಪದ:** ಧಾತು+ವ.ಕಾ.ಸೂ.ಪ್ರ.+ಆಖ್ಯಾತ= ವ.ಕ್ರಿ.ಪದ.
ಉದಾ: ನೋಡುತ್ತಾನೆ, ನೋಡುತ್ತೇನೆ.

೨. <u>ಭೂತಕಾಲ</u> **ಕ್ರಿಯಾಪದ:** ಉದಾ: ಪೋದನು, ಪೋದರು.

೩. <u>ಭವಿಷ್ಯತ್ಕಾಲ</u> **ಕ್ರಿಯಾಪದ:** ಉದಾ: ತಿನ್ನುವಿರಿ, ತಿನ್ನುವೆ.

ಅರ್ಥದದೃಷ್ಟಿ-೩ ವಿಧ

೧. **ವಿಧ್ಯರ್ಥಕ ಕ್ರಿಯಾರೂಪ:** (ಆಜ್ಞೆ, ಪ್ರಾರ್ಥನೆ ಇತ್ಯಾದಿ) ಉದಾ: ನೀಡಿರಿ, ಬೇಡಿರಿ.

೨. **ನಿಷೇಧಾರ್ಥಕ ಕ್ರಿಯಾ ರೂಪ:** (ಇಲ್ಲ ಎಂಬರ್ಥ) ಉದಾ: ಕೊಡನು, ತೆರನು,

೩. **ಸಂಭಾವನಾರ್ಥಕ ಕ್ರಿಯಾ ರೂಪ:** (ಊಹೆ, ಸಂಶಯ ಕ್ರಿಯೆಯಲ್ಲಿ ತೋರುವುದು) ಉದಾ: ತಂದಾನ, ಕೊಟ್ಟೇವು.

---

೧) **ಈ** ಎಲ್ಲ ಕ್ರಿಯಾರೂಪಗಳು ಕರ್ತರಿ ಮತ್ತು ಕರ್ಮಣಿ ಪ್ರಯೋಗಗಳಲ್ಲಿ ಬರಬಹುದು. ಉದಾ: 'ಕೊಡ'ಲ್ಪಡುತ್ತಾನೆ, ನೀಡಲ್ಪಡುತ್ತಾರೆ (ವರ್ತ). ಹೋಗಲ್ಪಟ್ಟನು(ಭೂತ), ತಿನ್ನಲ್ಪಡುವೆನು(ಭವಿಷ್ಯ), ನೀಡಲ್ಪಡಿರಿ- (ವಿಧಿ), ಸೇರಲ್ಪಡೆವು(ನಿಷೇ), ಪೇಳಲ್ಪಟ್ಟಾನು, ಕೇಳಲ್ಪಟ್ಟೇವು (ಸಂಭಾವನ).

ಕರ್ತರಿ ಮತ್ತು ಕರ್ಮಣಿ ಪ್ರಯೋಗಗಳು :

ಕ್ರಿಯಾಪದಗಳಲ್ಲಿ ಕರ್ತರಿಪ್ರಯೋಗ, ಕರ್ಮಣಿ ಪ್ರಯೋಗವೆಂದು ಎರಡುಬಗೆಯುಂಟು. ಆಖ್ಯಾತಪ್ರತ್ಯಯಗಳು **ಕರ್ತರ್ಥ**ದಲ್ಲಿ ಬಂದರೆ **'ಕರ್ತರಿ ಪ್ರಯೋಗ'** ವೆನಿಸುತ್ತದೆ. ಆಖ್ಯಾತಪ್ರತ್ಯಯಗಳು **ಕರ್ಮಾರ್ಥದಲ್ಲಿ** ಬಂದರೆ **'ಕರ್ಮಣಿಪ್ರಯೋಗ'** ವೆನ್ನುತ್ತೇವೆ.

೧) **ಕರ್ತರಿ ಪ್ರಯೋಗ :** ಈ ಕರ್ತರಿ ಪ್ರಯೋಗದಲ್ಲಿ **'ಕರ್ತೃ'ಪ್ರಧಾನ**ವಾಗಿರುತ್ತದೆ. ಇದು ಅಕರ್ಮಕ, ಸಕರ್ಮಕ ಧಾತುಗಳೆರಡರಲ್ಲೂ ಬರುತ್ತದೆ. ಈ ಕರ್ತರಿ ಪ್ರಯೋಗಗಳೇ ಕನ್ನಡದಲ್ಲಿ ಹೆಚ್ಚು. ಕರ್ತರಿಪ್ರಯೋಗದಲ್ಲಿ **ಕ್ರಿಯಾಪದವು ಕರ್ತೃವಿನ** ಲಿಂಗ, ವಚನ, ಪುರುಷಗಳಲ್ಲೇ ಇರುತ್ತದೆ. **ಕರ್ತೃಪದವು ಪ್ರಥಮಾವಿಭಕ್ತಿ**ಯಲ್ಲಿರುತ್ತದೆ. ಕರ್ಮಪದವು ದ್ವಿತೀಯಾ ವಿಭಕ್ತಿಯಲ್ಲಿರುತ್ತದೆ. ಕೆಲವೊಮ್ಮೆ ಚತುರ್ಥೀಯಲ್ಲಿರುವುದೂ ಉಂಟು:

ಉದಾ : (ಕರ್ತೃ.ಪ್ರ) (ಕ್ರಿ.ಪದ)

ಅ. **ಹಸುವು ನೀರನ್ನು** ಕುಡಿಯಿತು. (ಕರ್ಮ ದ್ವಿತೀಯೆಯಲ್ಲಿದೆ).

ಆ. ಹುಡುಗಿ **ಮನೆಗೆ** ಹೋದಳು. (ಕರ್ಮ ಚತುರ್ಥೀಯಲ್ಲಿದೆ).

ಇ. ನೀನು **ಕಥೆಯನ್ನು** ಹೇಳುತ್ತೀಯೆ. (ಕರ್ಮ ದ್ವಿತೀಯೆಯಲ್ಲಿದೆ).

೨) ಕರ್ಮಣಿ ಪ್ರಯೋಗ :

ಸಂಸ್ಕೃತಭಾಷೆಯಲ್ಲಿ ಈ ಪ್ರಯೋಗಗಳು ಹೆಚ್ಚು. ಅದರ ಪ್ರಭಾವದಿಂದ ಕನ್ನಡದಲ್ಲೂ ವಿರಳವಾಗಿ ಬಳಕೆಯಲ್ಲಿವೆ. ಕರ್ಮಣಿ ಪ್ರಯೋಗದಲ್ಲಿ ಕ್ರಿಯಾಪದವು **ಕರ್ಮದ** ಲಿಂಗ, ವಚನ, ಪುರುಷಗಳನ್ನು ಅನುಸರಿಸಿ ಬರುತ್ತದೆ. ಇಲ್ಲಿ **ಕರ್ತೃಪದವು ತೃತೀಯಾ** ವಿಭಕ್ತಿಯಲ್ಲಿ ಇರುತ್ತದೆ. **ಕರ್ಮಪದವು ಪ್ರಥಮಾ** ವಿಭಕ್ತಿಯಲ್ಲಿ ಇರುತ್ತದೆ. ಕರ್ಮಣಿ ಪ್ರಯೋಗಗಳು **ಸಕರ್ಮಕ ಧಾತು**ಗಳಲ್ಲಿ ಮಾತ್ರ ಬರುತ್ತವೆ. ಸಾಮಾನ್ಯವಾಗಿ ಧಾತುಗಳ ಮುಂದೆ **'ಅಲ್'** ಪ್ರತ್ಯಯವು, ಅದರ ಮುಂದಿನ **'ಪಡು'** ವಿನೊಂದಿಗೆ ಬರುತ್ತದೆ.

ಉದಾ : ವಿವೇಕಿಯಿಂದ ಪ್ರಾಣಿಗಳು ಹಿಂಸಿಸಲ್ಪಡುವುದಿಲ್ಲ.

ಕರ್ತರಿವಾಕ್ಯದಿಂದ ಕರ್ಮಣಿವಾಕ್ಯವಾಗಿ ಎಲ್ಲ ಕ್ರಿಯಾರೂಪಗಳ ಪರಿವರ್ತನೆ:

ಕರ್ತರಿ ಪ್ರಯೋಗ		ಕರ್ಮಣಿ ಪ್ರಯೋಗ
ಭೂತ : ರಾಜನು ಹಾಡನ್ನು ಕೇಳಿದನು	-	ರಾಜನಿಂದ **ಹಾಡು** ಕೇಳಲ್ಪಟ್ಟಿತು.
ವರ್ತ : ಬಲಿಷ್ಠನು ರೌಡಿಯನ್ನು ಸೆರೆಹಿಡಿಯುತ್ತಾನೆ.	-	ಬಲಿಷ್ಠನಿಂದ ರೌಡಿಯು ಸೆರೆ ಹಿಡಿಯಲ್ಪಡುತ್ತಾನೆ.
ಭವಿ : ಶ್ರೀಮಂತರು ಬಡವರನ್ನು ಹಿಂಸಿಸುವರು	-	ಶ್ರೀಮಂತರಿಂದ **ಬಡವರು** ಹಿಂಸಿಸಲ್ಪಡುವರು.
ವಿಧಿ : ರಾಮನು ಈ ಕಾರ್ಯವನ್ನು ನಡೆಸಲಿ.	-	ರಾಮನಿಂದ ಈ **ಕಾರ್ಯವು** ನಡೆಯಲ್ಪಡಲಿ.
ನಿಷೇ : ಆ ಕಾರ್ಯವು ಅವರಿಂದ ಮಾಡಲಾಗದು.	-	ಅವರಿಂದ ಆ **ಕಾರ್ಯವು** ಮಾಡಲ್ಪಡಲಾಗದು.
ಸಂಭಾ : ಹುಡುಗನು ಲೇಖನಿಯಿಂದ ಬರೆದಾನು.	-	ಲೇಖನಿಯಿಂದ ಹುಡುಗನು ಬರೆಯಲ್ಪಟ್ಟಾನು.

ಕೃದಂತ ಪ್ರಕರಣ

ಧಾತುವಿಗೆ ಆಖ್ಯಾತ ಪ್ರತ್ಯಯಗಳಲ್ಲದ ಬೇರೆ ಪ್ರಕಾರದ ಪ್ರತ್ಯಯಗಳೂ ಸೇರುತ್ತವೆ. ಅವು **'ಕೃತ್ಪ್ರತ್ಯಯ'** ಗಳೆನಿಸುತ್ತವೆ. ಆ ಪ್ರತ್ಯಯಗಳು **ಅ, ಅದೆ, ಉತೆ, ಉತ್ತ, ಅಲು, ಪು, ಇಸು, ಕೆ, ಉದು, ಅಸು, ಮೆ, ತ** ಇತ್ಯಾದಿ ಸುಮಾರು ನಲ್ವತ್ತೂಮ್ರು ಪ್ರತ್ಯಯಗಳನ್ನು ಹೇಳಲಾಗುತ್ತದೆ. ಇವುಗಳು **ಕಾರಕಾರ್ಥ**ದಲ್ಲಿ ಬರುತ್ತವೆ.

ಇವುಗಳು ಕ್ರಿಯಾರ್ಥವುಳ್ಳ ಧಾತುವಿನಿಂದ ನಿಷ್ಪನ್ನವಾದರೂ(೧) ಕ್ರಿಯಾಪದಗಳಲ್ಲದ ನಾಮರೂಪಗಳು. ಇವು **'ಕೃದಂತ'** ವೆನಿಸುತ್ತವೆ. ಉದಾ : ಅದು **'ಕುಡಿಯುವ'** ನೀರಲ್ಲ , ಇಲ್ಲಿ **'ಕುಡಿವ'** -ಯು **'ಕುಡಿ'** ಧಾತುವಿಗೆ **'ಅ'** ಎಂಬ **'ಕೃತ್'** ಪ್ರತ್ಯಯ ಸೇರಿ ಸಂಧಿ ನಿಯಮದಂತೆ **'ಯ್'** ಕಾರಾಗಮವಾಗಿ, ಕುಡಿ+ಯ್+ಉವ್+**ಅ** (ಉವಾದೇಶ) = **'ಕುಡಿಯುವ'** ರೂಪವಾಗಿದೆ. ಕೃದಂತಗಳು **ಸಿದ್ಧರೂಪವಾದಅರ್ಥ** ನೀಡುತ್ತವೆ. ಇವು ನಾಮರೂಪಾತ್ಮಕವಾಗಿ ಲಿಂಗ, ವಚನ, ವಿಭಕ್ತಿ, ಪ್ರತ್ಯಯಗಳನ್ನು ಪಡೆಯಬಲ್ಲವು. ಉದಾ: ಕುಡಿಯುವ**ನು** (ಪ್ರ), ಕುಡಿಯುವ**ನನ್ನು** (ದ್ವಿ), ಕುಡಿಯುವ**ನಿಂದ** (ತೃ) ಇತ್ಯಾದಿ. ಹೀಗೇ ಲಿಂಗ, ವಚನಪ್ರತ್ಯಯಗಳನ್ನು ಪಡೆಯುತ್ತವೆ. **ಕೃದಂತಗಳಲ್ಲಿ ಮೂರು ವಿಧ.**

೧) ಕೃದಂತ ನಾಮಗಳು : ಕೇಳುವ, ನಿಲ್ಲುವ (ನಿಲ್ವ), ಹೊಯ್ಯುವ (ಹೊಯ್ವ).
೨) ಕೃದಂತ ಭಾವನಾಮಗಳು : ತಿನ್ನುವಿಕೆ, ನಡತೆ, ಮಾಟ, ಒಲ್ಮೆ ಬರವು.
೩) ಕೃದಂತಾವ್ಯಯಗಳು : ಉಣ್ಣದೆ, ತಿಂದು, ನಡೆಯುತ್ತೆ, ನಗಲ್ಕೆ.

(೧) ಕೃದಂತನಾಮ :

ಧಾತುಗಳಿಗೆ ಕರ್ತೃ ಮೊದಲಾದ ಅರ್ಥಗಳಲ್ಲಿ **'ಅ'** ಮೊದಲಾದ **ಕೃತ್** ಪ್ರತ್ಯಯಗಳು ಸೇರಿ **'ಕೃದಂತ ನಾಮ'** ಗಳೆನಿಸುತ್ತವೆ. **'ಕೃತ್'** ಪ್ರತ್ಯಯ ಬರುವಾಗ, ಧಾತು ಕೃತ್ಪ್ರತ್ಯಯಗಳ ನಡುವೆ ವರ್ತಮಾನ ಕಾಲದ **'ಉವ'** ಕಾಲಸೂಚಕ (ರೂಪಾಂತರ) ಪ್ರತ್ಯಯವು ಬರುತ್ತದೆ. ಹಾಗೆಯೇ ಭವಿಷ್ಯತ್ಕಾಲದಲ್ಲಿ **'ವ'** ಪ್ರತ್ಯಯವೂ ಭೂತಕಾಲದ **'ದ'** ಪ್ರತ್ಯಯವೂ ಬರುತ್ತವೆ. ನಿಷೇಧಾರ್ಥದಲ್ಲಿ **'ಅದ'** ಎಂಬ ಆಗಮವಾಗುತ್ತದೆ.

ಉದಾ: i) **ವರ್ತಮಾನ ಕೃದಂತಕ್ಕೆ :-**

ಅ) ಅವನು **'ಬರೆಯುವ'** ಪುಸ್ತಕ. (ಬರೆ+ಉವ+ಅ).
ಆ) ಇದು **ಜಿಗಿಯುವ** ಕುದುರೆ (ಜಿಗಿ+ಉವ+ಅ).

ಇಲ್ಲಿ **'ಜಿಗಿಯತಕ್ಕದು'** ಇದೆ (ಜಿಗಿ+ಯ್+ಅತಕ್ಕ+ಆ) ಯಕಾರಾಗಮವಾಗಿದೆ. ಇಂಥರೂಪಗಳೂ ಕೆಲವೊಮ್ಮೆ ಬರುವುದುಂಟು. ಈ ರೀತಿ **ಬರುವ, ಹೋಗುವ, ತಿನ್ನುವ, ನೋಡುವ, ನಡೆಯುವ, ಕುಣಿವ** ಇತ್ಯಾದಿ ರೂಪಗಳು ಕೃದಂತನಾಮಗಳು.

೧) ಕೃದಂತ, ತದ್ಧಿತಾಂತ, ಸಮಾಸ ಪದಗಳು ಸಾಧಿತರೂಪಗಳು. ಅವು ತಮ್ಮ ಮೂಲದ ಅರ್ಥವನ್ನು ಉಳಿಸಿಕೊಂಡು ಬೇರೆಯ (ಸಾಧಿತರೂಪದ) ಅಖಂಡಾರ್ಥವನ್ನು ಪುಷ್ಟೀಕರಿಸುತ್ತವೆ. ಹೀಗಿರುವುದರಿಂದಲೇ ಇವುಗಳನ್ನು "ಪರಾರ್ಥಾಭಿಧಾನಂ ವೃತ್ತಿಃ" ವೃತ್ತಿಯೆಂದು ಕರೆಯಲಾಗಿದೆ.

ii) ಭೂತ ಕೃದಂತರೂಪ :

ಉದಾ :- ಅ) ಆತ <u>**ದುಡಿದ**</u> ವೃದ್ಧ - (ದುಡಿ+ದ+**ಅ**).

ಆ) ಅವನು **ತಿಂದ** ಹಣ್ಣು - (ತಿನ್ನು+ದ+**ಅ**).

ಇ) ಅವನು <u>**ತುಳಿದ**</u> ದಾರಿ ಕೆಟ್ಟದ್ದು - (ತುಳಿ+ದ+**ಅ**).

ಈ) ಕಳ್ಳತನ <u>**ಮಾಡಿ**</u>ದ್ದವನು ಸಿಕ್ಕಿದ.(೧)

ಇವಲ್ಲದೆ ಉದಾ : **ಕೊಟ್ಟದು, ತುಳಿದದ್ದು, ಇದ್ದದ್ದು** ಇತ್ಯಾದಿ ರೂಪುಗಳುಂಟು.

iii) ಭವಿಷ್ಯತ್ ಕಾಲ :

ಅ) ಆಕಾಶದಲ್ಲಿ **'ಹೊಳೆವ'** ಚಂದ್ರನಿದ್ದಾನೆ - (ಹೊಳೆ+ವ್+**ಅ**).

ಆ) ಅವನು **'ಓದುವ'** ಹುಡುಗನಿದ್ದಾನೆ - (ಓದು+ವ್+**ಅ**).

ಇ) ಆಕೆ **'ಹಾಡುವ'** ಹುಡುಗಿಯಾಗಿದ್ದಾಳೆ. - (ಹಾಡು+ವ್+**ಅ**).

ಇಲ್ಲಿ **ಹೊಳೆವವನು, ಓದುವವನು, ಹಾಡುವವಳು** ಇತ್ಯಾದಿ ಪ್ರಯೋಗಗಳುಂಟು.

iv) ನಿಷೇಧ ಕೃದಂತರೂಪ :

ಉದಾ : ಅ) ಅವನು **'ಮಾಡದ'** ಕೆಲಸವಿಲ್ಲ - (ಮಾಡು+(ಅದ)+ಅ).

ಆ) ಇವಳು **'ಆಡದ'** ಆಟವಿಲ್ಲ - (ಆಡು+ (ಅದ)+ಅ).

ಇ) ಅವು **'ಬೀಳದ'** ಹಣ್ಣುಗಳು - (ಬೀಳು+(ಅದ)+ಅ).

(೨) ಕೃದಂತ ಭಾವನಾಮ : (ಭಾವವೆಂದರೆ ಕ್ರಿಯೆ) ಧಾತುಗಳ ಮೇಲೆ ಭಾವಾರ್ಥದಲ್ಲಿ **'ಕೃತ್'** ಪ್ರತ್ಯಯಗಳುಸೇರಿ <u>**'ಕೃದಂತಭಾವ'**</u> ನಾಮಗಳೆನಿಸುತ್ತವೆ.

ಉದಾ: ಅ) ಆಡುವುದರ ಭಾವ **'ಆಟ'** - ಇದು ಭಾವನಾಮ.

ಆ) ನೆಗೆಯುವುದರ ಭಾವ **'ನೆಗೆತ'** - ಇದು ಭಾವನಾಮ.

ಆ ಪ್ರತ್ಯಯರೂಪಗಳನ್ನು <u>ಪಟ್ಟಿಯ</u> ರೂಪದಲ್ಲಿ ಬರೆಯಲಾಗಿದೆ :-

'ಧಾತು' +ಭಾವಾರ್ಥ + ಕೃತ್‌ಪ್ರತ್ಯಯಗಳು = **ಕೃದಂತಭಾವ**ರೂಪಗಳು.

'ಅಡು' (ಬೇಯಿಸುವುದರ **ಭಾವ**)+ **ಇಗೆ** (ಅಡು+ಇಗೆ) = **ಅಡಿಗೆ** ಹೀಗೇ **ಉಡಿಗೆ, ತೊಡಿಗೆ,** ಹಾಸಿಗೆ, ಮುತ್ತಿಗೆ ಇತ್ಯಾದಿ.

'ಕೊರೆ' (ರಂಧ್ರ) ವುದರ **ಭಾವ + ತ** (ಕೊರ+ತ) = **ಕೊರೆತ, ಪನಿತ, ನೆಗೆತ, ಅರಿತ, ಇಳಿತ** ಇತ್ಯಾದಿ

೧) ಈ ರೂಪಗಳನ್ನೂ ನಾವು ನೋಡಬಹುದು. ಈ ಮೇಲ್ಕಂಡ ಕೃದಂತ ನಾಮಗಳಲ್ಲಿ ಅವನು, ಅವಳು ಮುಂತಾದವು ಸೇರದಿದ್ದಾಗ, ಬರಿಯ ವಿಶೇಷಣಗಳಾಗುತ್ತವೆ. ಅವುಗಳ ಮೇಲೆ ವಿಭಕ್ತಿಪ್ರತ್ಯಯಗಳು ಬರುವುದಿಲ್ಲ. ಇವು 'ಕೃದಂತವಿಶೇಷಣ' ವೆನಿಸುತ್ತವೆ.

'ನಡೆ'ವುದರ ಭಾವ+**ವಳಿ+ಇಕೆ**=ನಡವಳಿ+ಇಕೆ	=	**ನಡವಳಿಕೆ**[೧], ಓಡುವಳಿ, ತಿಳಿವಳಿಕೆ.
'ಕಾ' (ರಕ್ಷಣೆ) ಭಾವ+**ಪು**	=	ಕಾಪು, ನೆನಪು, ಹೊಳಪು, ಒನಪು
'ಏಳ್' (ಎಚ್ಚರ/ವೃದ್ಧಿಯ ಭಾವ)+**ಗೆ/ಇಗೆ**	=	**ಏಳ್ಗೆ**/ಬೇಗೆ, ಮೆರವಣಿಗೆ, ಸಲಿಗೆ, ಒಲಿಗೆ ಇತ್ಯಾದಿ
'ಅಂಜು' (ಭಯ) ಭಾವ+**ಇಕೆ**	=	**ಅಂಜಿಕೆ** , ಬೆದರಿಕೆ, ಹಾಡುಪಿಕೆ, ತೂಕಡಿಕೆ, ಅನಿಸಿಕೆ, ನಂಬಿಕೆ, ನಾಚಿಕೆ, ಕಲಿಕೆ ಇತ್ಯಾದಿ
'ಊಡು' (ತಿನ್ನಿಸು) ಭಾವ+**ಟ** ಊಟ, ಓಟ	=	**ಕೂಟ**, ಕಾಟ, ಮಾಟ.
'ಬೆಳೆ'[೨] (ವೃದ್ಧಿ) ಭಾವ+**ಅಸು** **ಬೆಳಸು**,'ಬಳವಿ' (ಉವಿ)	=	ಏಂದು ಸಸ್ಯೇತರ ವೃದ್ಧಿಯಲ್ಲಿ ಪ್ರ.ಗ.
'ಕ್ಷಯು' (ನಶಿಸು) ಭಾವ+**ಇಸು/ಅಸು** **ಕ್ಷಯಿಸು**	=	**ತಿನಿಸು**, ತಿನಸು, ಕನಸು, ನಾಚಿಸು, ಮುಳಿಸು, ಸೊಗಸು.
'ಬಿಡು' (ಬಂಧನಮುಕ್ತಿ)ಯ ಭಾವ **+ತೆ**	=	**ಬಿಡುತೆ**, ಅಳತೆ, ನಡತೆ, ನಾಗರಿಕತೆ **ಪ್ರಸಾದಿತೆ**[೩], **ವಾಗ್ಮಿತೆ**
'ಬಯ್' (ಹೀನಮಾತು) ಭಾವ+**ಗುಳ, ಗಳ್**	=	**ಬಯ್ಗುಳ**, ತೆಗಳ್ ಇತ್ಯಾದಿ.
'ಬಿಡು' ವುದರ ಭಾವ + **ವು**	=	**ಬಿಡುವು** ಮರವು, ನೋವು, ಹಸಿವು, ಸಾವು, ಅರಿವು.
'ಕಾಣ್' (ಕಾಣು) ವುದರ ಭಾವ+**ಕೆ** = **ಕಾಣ್ಕೆ, ಪೂಣ್ಕೆ**	=	**ಬೆರಕೆ**, ಅಂಜಿಕೆ, ಅರಿಕೆ, ಅಪ್ಕೆ, ಬಯಕೆ, ಅಗಲ್ಕೆ, ಹೊಳಕೆ ಇತ್ಯಾದಿ.
'ಒಲಿ'-ವುದರ ಭಾವ + **ಮೆ** = **ಒಲ್ಮೆ**,ಬಿಲ್ಮೆ	=	**ತಾಳ್ಮೆ**, ನಲ್ಮೆ, ಕೀಳರಿಮೆ, ಮೇಲರಿಮೆ
'ಕಳು'ವಿನ ಭಾವ + **ಅವು**	=	**ಕಳವು**, ಬರವು, ಗೆಲುವು, ನಿಲವು, ತೆರವು, ಸೆಳವು
'ನಗು'ವಿನ ಭಾವ + ಎ = **ನಗೆ, ಹೊರೆ**	=	**ಕೊರೆ**
ಅಳೆವುದರ ಭಾವ + **ತೆ/ಪು/ಹು** = **ಅಳತೆ**	=	**ನಡತೆ**, ನೆನಪು, ಸೊಹು, ಬಲುಹು, ಹೊಳಪು, ಒನಪು, ಕೂರ್ಪು.
'ತಪ್ಪು'ವುದರ ಭಾವ+ **ತೆ/ಗೆ** = **ತಪ್ಪಿತ**	=	**ಒಪ್ಪಿತ**/ ಒಪ್ಪಿಗೆ, ಬೇಗೆ, ಸುಲಿಗೆ.

ಇನ್ನೂ ಕೆಲವು ; **'ಅಣೆ'-ಒಕ್ಕಣೆ, 'ಓಣ' - ಕಲಿಯೋಣ** ಇತ್ಯಾದಿ ಕೃದಂತಪ್ರತ್ಯಯ ರೂಪಗಳುಂಟು.

---

೧) ಸಾಧಿತ ರೂಪಗಳಲ್ಲಿ ನಡೆ+ವಳಿ+ಇಕೆ, ಸಾಗಾಣಿ+ಇಕೆ = ಸಾಗಾಣಿಕೆ, ಹೀಗೆಯೆ ಅನಿಸು+ಇಕೆ = ಅನಿಸಿಕೆ/ ಅನ್ನಿಸಿಕೆ ರೂಪಗಳುಂಟು. ಇಲ್ಲಿ ಎರಡುಪ್ರತ್ಯಯಗಳು ಸೇರಿರುವ ನೂತನ ರೂಪಗಳು ಬಳಕೆಯಾಗುತ್ತಿವೆ ಇದು ಸ್ವಾಗತಾರ್ಹ. ಇವೆರಡೂ ರೂಢಿಬಲದಿಂದ ಬಂದವೆನ್ನಬಹುದು.

೨) ಇತ್ತೀಚೆಗೆ ಎಲ್ಲದರ ವೃದ್ಧಿಯಲ್ಲೂ ರೂಢಿಬಲದಿಂದ ಬಂದಪ್ರಯೋಗ.

೩) ರೂಢಿ ಪ್ರಯೋಗ- ನಿಸ್ಸಾರ್ ಅಹಮದ್‌ರ ಕಾವ್ಯ.ಪ್ರಯೋಗ.

೧) **ವಿಧಿ, ಪ್ರಾರ್ಥನೆ** ಇತ್ಯಾದಿ ಅರ್ಥಗಳಲ್ಲಿ **'ಉವುದು'** ಪ್ರತ್ಯಯ ಸೇರುತ್ತದೆ: ಉದಾ : ತಿಳಿ+ಉ/ವುದು-**ತಿಳಿವುದು, ಕೊಡುವುದು, ಈವುದು,ಬೇವುದು, ಕಾವುದು** ಇತ್ಯಾದಿ.

೨) ಕೆಲವು ಧಾತುಗಳ ಆದಿಸ್ವರ ದೀರ್ಘರೂಪವಾಗಿ ಕೃದಂತಭಾವವಾಗಿ ಸಲ್ಲುತ್ತವೆ. ಉದಾ: ಬಿಡು-**ಬೀಡು**, ಕೆಡು-**ಕೇಡು**, ಪಡು-**ಪಾಡು**, ಸುಡು-**ಸೂಡು**.

೩) ಕೆಲವು ಧಾತು ರೂಪದಲ್ಲೇ **ಕೃದಂತಭಾವ** ರೂಪಗಳೆನಿಸುತ್ತವೆ. ಉದಾ : **ಹುಟ್ಟು, ನಡೆ, ನುಡಿ, ಉಗುಳು, ಉರಿ, ಬದುಕು, ಬೀಳು** ಇತ್ಯಾದಿ. ಹೀಗೆಯೇ ಯಾವ ಯಾವ **ಕೃತ್‌ಪ್ರತ್ಯಯಗಳು** ಬಂದಿವೆಂಬುದನ್ನು ಪ್ರಯೋಗಗಳನ್ನು ನೋಡಿ ರೂಢಿಯಿಂದ ತಿಳಿಯಬೇಕಾಗುತ್ತದೆ.

(೩) ಕೃದಂತ ಅವ್ಯಯ :

ಧಾತುಗಳ ಮೇಲೆ **ಉತ್, ಉತ್ತ, ಅದೆ, ಅಲು, ಆ** ಇತ್ಯಾದಿ ಅವ್ಯಯಗುಣವುಳ್ಳ ಪ್ರತ್ಯಯಗಳು ಸೇರಿ **'ಕೃದಂತಾವ್ಯಯ'** ಗಳೆನಿಸುತ್ತವೆ. ಇವೆಲ್ಲವೂ ಪೂರ್ಣಕ್ರಿಯೆಯನ್ನು ಕೊಡುವ, ಇನ್ನೊಂದು ಕ್ರಿಯಾರೂಪದಲ್ಲಿ ವಿಶೇಷಣವಾಗಿ ಅನ್ವಯವಾಗುತ್ತದೆ. ಆದ್ದರಿಂದಲೇ ಇದನ್ನು **'ಅಪೂರ್ಣಕ್ರಿಯೆ'** ಅಥವಾ **'ನ್ಯೂನಕ್ರಿಯೆ'** ಗಳೆನ್ನುತ್ತಾರೆ.

ಉದಾ : ರಾಮನು **'ಉಣ್ಣದೆ'** ಮಲಗಿದನು - (ಉಣ್+**ಅದೆ**).
ಅವಳು **'ಬರಲು'** ತಡವಾಯ್ತು - (ಬರು+**ಅಲ್**).
ಅದು **'ನೋಡಲ್ಕೆ'** ಬಂದಿತು - (ನೋಡು+**ಅಲ್ಕೆ**).

ಈ ಗೆರೆಎಳೆದ ಕ್ರಿಯೆಗಳು ಪೂರ್ಣಕ್ರಿಯೆಯನ್ನು ಕೊಡದೆ **ಮಲಗು** ಇತ್ಯಾದಿ ಇನ್ನೊಂದು ಕ್ರಿಯೆಯನ್ನು ಅಪೇಕ್ಷಿಸುತ್ತವೆ.

'ಮಾಡು'+ಉತ್ತ	= **ಮಾಡುತ್ತ**, ನೋಡುತ್ತ, ಮಾರುತ್ತ, ದೂರುತ್ತ.
'ತಿನ್ನು' + ಉತ	= **ತಿನ್ನುತ**, ನಡೆಯುತ, ನುಡಿಯುತ, ಮಾರುತ.
'ಬರು' + ಅದೆ	= **ಬರದೆ**, ಕೇಳದೆ. ತಿನ್ನದೆ, ಕೋರದೆ, ಹೇಳದೆ.
'ಹೇಳು' + ಅಲು	= **ಹೇಳಲು**, ಬರಲು, ಉಣ್ಣಲು, ಕರೆಯಲು.
'ಕೊಡು' + ಅಲಿಕೆ(ಕ್ಕೆ)	= **ಕೊಡಲಿಕ್ಕೆ,** ತರಲಿಕ್ಕೆ, ಬರಲಿಕೆ(ಕ್ಕೆ), ಕೆಡಲಿಕೆ (ಕ್ಕೆ).
'ನೀಡು' + ಅ	= **ನೀಡಬಂದನು**, ನೋಡಹೋದನು.
'ಬೇಡು' + ಇ	= **ಬೇಡಿಬಂದನು**, ಕೇಳಿ ಅತ್ತನು, ನೋಡಿ ತಂದನು.
'ಕರೆ' + ದು	= **ಕರೆದು**, ತಿರಿದು, ನುಡಿದು, ತಿಂದು, ಕೊಂದು.
'ನುಡಿ' +ಒಡೆ/ ಅಡೆ	= **ನುಡಿದೊಡೆ**(೧), ಬಂದೊಡೆ, ಬಂದರೆ, 'ಕರೆದಡೆ (ಓ-(**ಅರೆ**) ಎನ್ನನೇ ಶಿವನು')
ಹರಿ +ವನಕ/ ತನಕ	= ದೃಷ್ಟಿ **ಹರಿವನಕ / ಹರಿವತನಕ** (ವರೆಗೆ ಎಂದರ್ಥ)

(೧) ಪಕ್ಷಾರ್ಥದಲ್ಲಿ 'ಒಡೆ' ಪ್ರತ್ಯಯ ಬಂದಿದೆ. ನಡುವೆ 'ಇದಾ'ಗಮ. ಅದು 'ಅಡೆ' ರೂಪವಾಗಿ, 'ಅರೆ' ರೂಪಾಂತರವನ್ನೂ ಹೊಂದಿದೆ.

ಬಗೆ, ಹಾಗೆ, ಹಾಂಗ = ಜೀಸಿ ಒಗೆದ್ಹಾಂಗ, ಎತ್ತು ದುಡಿದ್ಹಾಂಗ (ಕ್ರಿಯಾ ಸಾದೃಶ್ಯಾರ್ಥದಲ್ಲಿ)

i) ಏಕಕರ್ತೃಕ ಕೃದಂತಾವ್ಯಯಗಳು :

'ಪಾಟೀಲನು **ನೆಗೆಯುತ್ತ** ಹೋದನು' - ಈ ವಾಕ್ಯದಲ್ಲಿ ಪಾಟೀಲ **'ನೆಗೆಯುವ'** 'ಹೋಗುವ' ಕ್ರಿಯೆಗಳೆರಡನ್ನೂ ಮಾಡಿದವನಾದ್ದರಿಂದ ಇಲ್ಲಿ **'ಉತ್ತ'** ಬಂದಿದೆ. **'ಏಕಕರ್ತೃಕ' ಕೃದಂತಾವ್ಯಯ**ವೆನ್ನಲಾಗುತ್ತದೆ. ಹೀಗೆ ಒಂದು ಕರ್ತೃವಿನಿಂದ ಎರಡು ಕ್ರಿಯೆಗಳು ನಡೆದಾಗ ಮೊದಲು ಹೇಳುವ ಕ್ರಿಯೆಗೆ ಭೂತಕಾಲದ **'ದು', 'ಇ', ಅದೆ** ಪ್ರತ್ಯಯಗಳು ಬರುತ್ತವೆ:

ಉದಾ: ಅ) ತಿಂ**ದು** ಹೋದನು. (ತಿನ್+ದು = ತಿಂದು).

ಕೇಳ್ದು ಕಂಡನು. (ಕೇಳ್+ದು = ಕೇಳ್ದು).

ಆ) ನೋ**ಡಿ** ಹೇಳಿದನು. (ನೋಡು+ಇ = ನೋಡಿ).

ಕೂಡಿ ಉಂಡನು. (ಕೂಡು+ ಇ = ಕೂಡಿ).

ಇಲ್ಲಿ ಮೊದಲನೆಯ ಕ್ರಿಯೆಗೆ **'ದು', 'ಇ'** (ಉಣ್+ಅದೆ = ಉ**ಣ್ಣದೆ**) ಪ್ರತ್ಯಯಗಳು ಬಂದಿವೆ. ಹೀಗೆಯೆ ನಿಷೇಧ ತೋರಿದಾಗ **'ಅದೆ'** ಪ್ರತ್ಯಯ ಬರುತ್ತದೆ :

ಇ) ಅವಳು **ಉಣ್ಣದೆ** ಹೋದಳು.

ಕೆಲವೊಮ್ಮೆ ಭವಿಷ್ಯತ್ಕಾಲದಲ್ಲಿ ಪ್ರಯೋಜನ ತೋರುವಾಗ **'ಅಲು'** ಪ್ರತ್ಯಯ ಬರುತ್ತದೆ. ಕೆಲವೊಮ್ಮೆ **ಅಲು**ವಿನ ಮುಂದೆ **'ಇಕ್ಕೆ'** ಬರುತ್ತವೆ. ಉದಾ :

ಈ) ಸಿನಿಮಾ **ನೋಡಲು** ಹೋಗುವನು (ನೋಡು+**ಅಲು**).

ಉ) ಹುಡುಗ **ಓದಲಿಕ್ಕೆ** ಬರುವನು (ಓದು+**ಅಲು**+**ಇಕ್ಕೆ**).

ಮೊದಲ ಕ್ರಿಯೆಗೆ **'ಅರ್ಹ'** (ದಕ್ಷ) ಎನ್ನುವ ಅರ್ಥದಲ್ಲಿ **'ಅಲ್'** ಪ್ರತ್ಯಯ ಬರುತ್ತದೆ:-

ಋ) ಎತ್ತಲ್ ತಕ್ಕವನು. (ಎತ್ತು+**ಅಲ್**= ಎತ್ತಲ್),

ಮಾಡಲ್ ತಕ್ಕವನು. (ಮಾಡು+**ಅಲ್** = ಮಾಡಲ್)

ii) ಭಿನ್ನಕರ್ತೃಕ ಕೃದಂತಾವ್ಯಯ :

'ಮಳೆ **ಬರಲು** ಕೆರೆ ತುಂಬಿತು' ಈ ವಾಕ್ಯದಲ್ಲಿ **'ಮಳೆ'** - ಬರುವ ಕ್ರಿಯೆ **'ಕೆರೆ'** (ತುಂಬುವ ಕ್ರಿಯೆಗೆ) ಕರ್ತೃವಾಗಿದೆ. ಇವೆರಡೂ ಕ್ರಿಯೆಗೆ ಬೇರೆ ಬೇರೆ ಕರ್ತೃಗಳಿರುವುದರಿಂದ **'ಬರಲು'**ಎಂಬುದು-**'ಭಿನ್ನಕರ್ತೃಕಕೃದಂತ'**ಗಳೆನಿಸುತ್ತದೆ. ಹೀಗೆ ಬೇರೆಬೇರೆ ಕರ್ತೃಗಳಿಂದ ಎರಡು ಕ್ರಿಯೆಗಳುಂಟಾದಾಗ, ಮೊದಲ ಕ್ರಿಯೆಗೆ **'ಅಲು'** ಮತ್ತು **'ದು'** ಪ್ರತ್ಯಯಗಳು ಬರುತ್ತವೆ. ಉದಾ :

ಅ) ಮಳೆ **ಬರಲು**(೧) ಕೂಡ ತುಂಬಿತು. - (ಬರು+ಅಲು).

ಆ) ಅವನು ಶಬ್ದ **ಕೇಳ್ದು** ಬಂದ. - (ಕೇಳು+ದು).

---

೧) ಹಳಗನ್ನಡರೂಪಗಳಲ್ಲಿ ಬರಲ್, (ಅಲ್ ಪ್ರಯೋಗವಾಗುತ್ತದೆ). ಹೀಗೆಯೇ 'ಉದುಂ' ಪ್ರಯೋಗವಾಗುತ್ತದೆ. ಉದಾ. 'ಬರುವುದುಂ ಕಂಡ'.

೨) ಹಳಗನ್ನಡ ಪ್ರಯೋಗಗಳಲ್ಲಿ 'ಒಡೆ', 'ಎ' ಪ್ರತ್ಯಯ ಬರುತ್ತವೆ. ಉದಾ : ಗಾಯಕಂ ಪಾಡೆ ದೇವ ಮೆಚ್ಚಿದಂ. (ಇದನ್ನೇ 'ಸತಿಸಪ್ತಮಿ' ಎನ್ನಲಾಗಿದೆ).

ಇಲ್ಲಿ **ಕಾರಣ-ಕಾರ್ಯಭಾವ** ತೋರುತ್ತದೆ.

ಪಕ್ಷಾರ್ಥದಲ್ಲಿ ಮೊದಲ ಕ್ರಿಯೆಗೆ **'ಅರೆ'** (**'ಒಡೆ'** ಹ.ಗ) ಪ್ರತ್ಯಯ ಬರುತ್ತದೆ. ಉದಾ :

ಇ) ನೀನನಗಿದ್ದರೆ ನಾನಿನಗೆ ೨ (ಇರ್+ದ+ಅರೆ = ಇದ್ದರೆ).

ಈ) ನೀನು ಕರೆಯೆ ನಾನು ಬಂದೆ (ಕರೆ+ಎ = ಕರೆಯುವಷ್ಟರಲ್ಲಿ **'ಎ'** ಸತಿಸಪ್ತಮಿ ('ಇರು' ಎನ್ನುವ ಅರ್ಥದಲ್ಲಿದೆ) ಕೆಲವೊಮ್ಮೆ **'ಅದೆ'** ಪ್ರತ್ಯಯ ಬರುತ್ತದೆ:

ಉ) ಅವನು ಕರೆಯದೆ ನಾನು **ಹೋಗೆನು** (ಕರೆ+ಅದೆ = ಕರೆಯದೆ).

ಸಾರಸಂಗ್ರಹ

ಕೃದಂತ (ಧಾತು + ಕೃಪ್ರತ್ಯಯ = ಕೃದಂತ) (೩ ವಿಧ)

೧) **ಕೃದಂತನಾಮ**	೨) **ಕೃದಂತಭಾವನಾಮ**	೩) **ಕೃದಂತಾವ್ಯಯ**
ಧಾತು+(ಅ) ಕೃತ್‌ಪ್ರತ್ಯಯ	ಧಾತು+ಭಾವಾರ್ಥ ಕೃ.ಪ್ರ.	ಧಾತು+ಕೃ.ಅವ್ಯಯ ಪ್ರ.
ಉದಾ: ಜಗಿ+ಅ= ಜಗಿವ,	ಮಾಡು+ಟ = ಮಾಟ	ತಿನ್ನು+ಉತ್ತ=ತಿನ್ನುತ್ತ
ಮಾಡಿದ.	ತಾಳ್ಮೆ ಅಂಜಿಕೆ.	ಕೊಡದೆ.

ತದ್ಧಿತಾಂತಗಳು

ನಾಮಪದಗಳ ಮೇಲೆ ಬೇರೆ ಬೇರೆ ಅರ್ಥಗಳಲ್ಲಿ (ಬೇರೆಯಾದ) **ಕಾರ, ಗಾರ, ವಂತ, ಇಗ, ವಳ, ತನ, ಇಕೆ, ಅಂತೆ, ವರೆಗೆ** ಇತ್ಯಾದಿ ತದ್ಧಿತ ಪ್ರತ್ಯಯಗಳು ಸೇರಿ ಕೆಲವು ರೂಪಗಳಾಗುತ್ತವೆ. ಇವುಗಳಿಗೆ **'ತದ್ಧಿತಾಂತ'** ಗಳೆನ್ನುತ್ತೇವೆ. ಉದಾ:

ಮೋಸ**ವನ್ನು** + 'ಮಾಡು**ವವ**'ನೆಂಬರ್ಥದಲ್ಲಿ (ಗಾರ) ಪ್ರತ್ಯಯ= ಮೋಸಗಾರ.

ಹಾ**ವನ್ನು** + 'ಆಡಿಸು**ವವ**ನು' ಎಂಬರ್ಥದಲ್ಲಿ (ಆಡಿಗ) = ಹಾವಾಡಿಗ.

ಈ ತದ್ಧಿತ ಪ್ರತ್ಯಯಗಳು ಸೇರುವಾಗ ಹಿಂದಿನ **ನಾಮಪದದ ಪ್ರತ್ಯಯಲೋಪ**ವಾಗುತ್ತದೆ. ಈ ಅಂಶವನ್ನು ಸಮಾಸದಲ್ಲೂ ನೋಡುತ್ತೇವೆ. ಇಲ್ಲೆಲ್ಲ ಎರಡು ಪದಗಳನ್ನು ಹೇಳುವ ಬದಲು ಸೌಲಭ್ಯಕ್ಕನುಗುಣವಾಗಿ ಒಂದು ಪದವನ್ನು ಮಾಡಿಕೊಳ್ಳುತ್ತೇವೆ. **ಕೃದಂತ, ತದ್ಧಿತಾಂತ, ಸಮಾಸ**ಗಳು ಈ ದೃಷ್ಟಿಯಲ್ಲಿ ಒಂದೇ. ಅವನ್ನು **'ವೃತ್ತಿ'**ಗಳೆನ್ನಲಾಗಿದೆ. ಇವುಗಳು **ಸಾಧಿತ**ರೂಪಗಳೆಂದು ಹಿಂದೆ ತಿಳಿಸಲಾಗಿದೆ.

ತದ್ಧಿತಗಳಲ್ಲಿ ೩ ಬಗೆಗಳಿವೆ:

೧) **ತದ್ಧಿತನಾಮ** ೨) **ತದ್ಧಿತಭಾವನಾಮ** ೩) **ತದ್ಧಿತಾವ್ಯಯ**

೧) **ತದ್ಧಿತನಾಮ : ವ್ಯಕ್ತಿಯ ವೃತ್ತಿ, ಶೀಲ, ನಿಪುಣತೆ, ಜಾತಿ, ಹುಟ್ಟು, ನೇಮಕ**

ಇವುಗಳ ಆಧಾರದಿಂದ ಕೆಲವು ನಿಷ್ಪನ್ನ ನಾಮರೂಪಗಳಾಗುತ್ತವೆ. ಅವುಗಳನ್ನು **'ತದ್ಧಿತಾಂತ ನಾಮ'** ವೆನ್ನಬಹುದು. ಅವುಗಳನ್ನು ಕೆಳಗಿನಂತೆ ಪಟ್ಟಿಯರೂಪದಲ್ಲಿ ತಿಳಿಸಬಹುದು:

ತದ್ಧಿತ ಪ್ರತ್ಯಯ, ನಾಮಪದ+ಅವುಗಳು ಬರುವ ಅರ್ಥ=ತದ್ಧಿತನಾಮ ರೂಪಗಳು:

'ಗಾರ' - ಮಾಲೆಯನ್ನು + **ಕಟ್ಟುವವನು**/ಗಾರ = ಮಾಲೆಗಾರ.

ಬಳೆಯನ್ನು + **ಮಾರುವವನು**(ಗಾರ) = ಬಳೆಗಾರ, ಹೂಗಾರ/ ಹೂವಡಿಗ[೧]

ಬರಹವನ್ನು + **ಮಾಡುವವನು** = ಬರಹಗಾರ,ಪರದಿಗಾರ, ಕಾರ್ಯಾಗಾರ (ನಪುಂ)

ಹೀಗೆಯೆ **ಛಲಗಾರ, ಹಾಸ್ಯಗಾರ, ಕಥೆಗಾರ, ತೀರ್ಪುಗಾರ, ಬೇಸಾಯಗಾರ, ಮಾತುಗಾರ, ಚಳುವಳಿಗಾರ, ಎದೆಗಾರ** (ಧೈರ್ಯಮಾಡುವವ.)

'ಕಾರ'- ನಗೆಯಲ್ಲಿ + **ಪ್ರವೀಣ** (ಕಾರ) = ನಗೆಕಾರ, ಭಾಷಣಕಾರ

ಓಲೆಯನ್ನು + **ತರುವವನು** = ಓಲೆಕಾರ

ಕುಂಭವನ್ನು + **ಮಾಡುವವ**(ಕಾರ)= ಕುಂಭಕಾರ (ಕುಂಬಾರ), ಧಾಳಿಕಾರ ಪತ್ರಕಾರ, ಕೃತಿಕಾರ, ಹಾಸ್ಯಕಾರ/[೨](ಗಾರ)

ಶಾಸ್ತ್ರವನ್ನು + **ರಚಿಸುವವ** = ಶಾಸ್ತ್ರಕಾರ

'ಉಗ' - ನಾರಿನಲ್ಲಿ + **ತೊಡಗಿರುವವ** = ನಾರುಗ, ಪೆಣ್ಣುಗ, ಮಣ್ಣುಗ

'ಇಗ' - ಕನ್ನಡವನ್ನು + **ಬಲ್ಲವನು**(ಇಗ) = ಕನ್ನಡಿಗ, ಗಾರುಡಿಗ (ಇಂದ್ರಜಾಲ ಬಲ್ಲವ)

ಪಟ್ಟಣದಲ್ಲಿ + **ವಾಸಿಸುವವ**(ಇಗ) = ಪಟ್ಟಣಿಗ, ಹೆಣ್ಣಿಗ (ಅಧೀನವಾಸಿ)

ಗಂಧವನ್ನು + **ಮಾರುವವನು**(ಇಗ)= ಗಂಧಿಗ, ತಂಬುಲಿಗ, ದವಸಿಗ

ಕುಂಚಿಟಿಗ **'ಜಾತಿವಾಚಕ+ವೃತ್ಯರ್ಥ'** ದಲ್ಲಿ **'ಇಗ'** ಬಂದಿದೆ. ಹೀಗೆಯೆ ಒಕ್ಕಲಿಗ, ಗಾಣಿಗ, **ಮಾವಟಿಗ** (ಆನೆನಡೆಸುವ (ಜಾತಿ)+ವೃತಿ ಅರ್ಥದಲ್ಲಿ **'ಇಗ'** ಬಂದಿದೆ).

ಕಬ್ಬವನ್ನು (ಕಾವ್ಯ) + **ರಚಿಸುವವನು**(ಇಗ) = ಕಬ್ಬಿಗ, ಲೆಕ್ಕಿಗ (ಬಲ್ಲವ)

ಸುಂಕವನ್ನು + **ವಸೂಲಿಮಾಡುವವನು**(ಇಗ)= ಸುಂಕಿಗ,

ಚೆನ್ನ (ಸೌಂದರ್ಯ)+ **ಉಳ್ಳವ** = ಚೆನ್ನಿಗ

---

೧) ಇದೇ ಅರ್ಥದಲ್ಲಿ 'ಅಡಿಗ' ಪ್ರತ್ಯಯದ ರೂಪಗಳು - 'ಹೂವಾಡಿಗ', ಕುಂಬಾರ, ಕುಂಚಿಟಿಗ ಇಂಥ ಪ್ರಯೋಗಗಳು ರೂಢಿಯಲ್ಲಿ ಬಳಕೆಯಾಗುತ್ತಿರುವ ರೂಪಾಂತರ.

೨) 'ಪುರುಷಾಕಾರ' ವೆಮಗಾಯ್ತು (ಹ.ಗ) ಪುರುಷ ಪ್ರಯತ್ನಮಾಡುವುದೆಂದರ್ಥ.

'ವಂತ' - ಗುಣವನ್ನು + **ಉಳ್ಳವನು** (ವಂತ) = ಗುಣವಂತ, ಹಣವಂತ, ನೀತಿವಂತ, ಕುಲವಂತ ಇತ್ಯಾದಿ.

ಇದೇ ಅರ್ಥದಲ್ಲಿ **ಧನಿಕ, ಕರಿಕ, ಸಿನಿಕ** ಇತ್ಯಾದಿ ರೂಪಗಳುಂಟು.

'ವಳ/ವಳ್ಳ' - ಮಡಿಯನ್ನು+**ಮಾಡಲು ನೇಮಕವಾದವ** (ಜಾತಿ) ಮಡಿವಳ, ಮಡಿವಳ್ಳ(೧), ಹಡಪವಳ

'ಆಡಿಗ/ವಡಿಗ' - ಹಾವನ್ನು+**ಆಡಿಸುವುದರಲ್ಲಿ** ನಿಪುಣ (ಜಾತ್ಯಾರ್ಥದಲ್ಲಿ) **ಹಾವಾಡಿಗ**, ದೇವಡಿಗ (ಕುಣಿಸುವವ). ದೀಪ+ಪಟಿಗ = ದೀವಟಿಗೆ(೨)
ಹೂವನ್ನು + **ಮಾರುವವನು** = ಹೂವಾಡಿಗ. (ಸಾಮ್ಯತೆಯಿಂದಾದ ಪ್ರಯೋಗ)

'ಗ/ ವಣಿಗ' - ಲಂಚವನ್ನು+ಪಡೆದು **ಜೀವಿಸುವವ** = ಲಂಚಗ, ಲಂಚವಣಿಗ.

'ಕ' - ಸೇವೆಯನ್ನು+**ಮಾಡುವುದು** (ಗುಣ) = ಸೇವಕ, ವಾದಕ, ಗಾಯಕ, ಸುಧಾರಕ
ಧನವನ್ನು+**ಉಳ್ಳವನ** = ಧನಿಕ, ಕರಿಕ, ಅನುಭಾವಿಕ

'ಇಚ' - ಅಲರಲ್ಲಿ (ಹೂ)+**ಹುಟ್ಟಿದವ**= ಅಲರಿಚ, ಪೊಳಲಿಚ (**ಪಟ್ಟಣ/ಪೊಟರೆಯಲ್ಲಿ**).

'ಆಳಿ/ ಗುಳಿ' - ಮಾತನ್ನು+**ಆಡುವುದು** (ಶೀಲಾರ್ಥ) = ಮಾತಾಳಿ, ಓದಾಳಿ/ **ಲಂಚಗುಳಿ**(೩)

'ರ/ ಆರ' - ಕಮ್ಮವನ್ನು (ಕಬ್ಬಿಣದ **ಕೆಲಸ**)+ಮಾಡುವವನು=**ಕಮ್ಮರ/ ಕಮ್ಮಾರ**. (೪)
ಚಮ್ಮವನ್ನು (ಚರ್ಮದ **ಕೆಲಸ**)+ಮಾಡುವವನು = **ಚಮ್ಮರ, ಚಮ್ಮಾರ**(೪)
ಕುಂಭವನ್ನು (ಗಡಿಗೆ)+**ಮಾಡು**ವವನು = **ಕುಂಬರ/ ಕುಂಬಾರ** (೪)
ಒಂದೇ ಅರ್ಥದಲ್ಲಿ ಬೇರೆ ಬೇರೆ ಪ್ರತ್ಯಯಗಳು ಬರುದುಂಟು.

'ಆಯ್ತ' - ಲಿಂಗವನ್ನು ಅಧಿಕೃತವಾಗಿ (ಅರ್ಹರಿಂದ)+ಹೊಂದಿದವನು=ಲಿಂಗಾಯ್ತ.
ಸೂಳಲ್ಲಿ (**ಸರದಿ**ಕಾರ್ಯ)+**ನೇಮಕ**ಗೊಂಡವ = ಸೂಳಾಯ್ತ. (೫)

'ದಾರ' - **ಜೋಡಿ**ಗ್ರಾಮಗಳ ಮೇಲೆ+**ಅಧಿಕಾರ** ಮಾಡುವವ = **ಜೋಡಿ**ದಾರ, **ತರಪೇತುದಾರ**, ಮತದಾರ.(೬)

'ಅನೆಯ' - ಒಂದರ **ಸಂಖ್ಯೆ+ಉಳ್ಳದ್ದು** = ಒಂದನೆಯ, ನೂರನೆಯ, ಒಂದನೇ (೧)
ಅನಿತು (**ಅಷ್ಟು+ಪ್ರಮಾಣ**)ವುಳ್ಳವ = ಅನಿತನೆಯ, ಇನಿತನೆಯ.
ಉದ್ದ (**ಗುಣ**) + **ವುಳ್ಳದ್ದು** = ಉದ್ದನೆಯ.

---

೧) 'ಮಡಿವಾಳ' ಎಂಬ **ರೂಢಿಪ್ರಯೋಗವಿದೆ.**

೨) ದೀಪ+ **ಪಟ್ಟಿಕೆಯನ್ನು (ಹಿಡಿಯುವ)** 'ದೀವಟಿಗ', 'ಹಾವಾಡಿಗ' **ಎಂಬಿವು ರೂಢಿಪ್ರಯೋಗ.**

೩) **ಲಂಚವನ್ನು ತೆಗೆದುಕೊಳ್ಳುವುದು** 'ಶೀಲ'**ವೆಂದು ತಿಳಿದವ** 'ಲಂಚಗುಳಿ' **ಲಂಚಂಗುಳಿ, ಹೀಗೇ ಮರೆವನ್ನು ತೆಗೆದುಕೊಳ್ಳುವವ** 'ಮರೆಗುಳಿ' **ಇತ್ಯಾದಿ ಪ್ರಯೋಗಗಳಿವೆ.**

೪) ಮರಾಠಿ ಶಬ್ದದಂತೆ 'ಲಂಚಕೋರ' ಚಾಡಿಕೋರ ('ಕ್ರೂರತೆ' ಅರ್ಥದಲ್ಲಿ 'ಕೋರ' ಪ್ರತ್ಯಯ) ಬಂದಿದೆ. ೫) 'ಕಲ್ಲಾಯ್ತ' = ಆಚಾರ್ಯ (ಗುರು) ಹ.ಗ ಪ್ರಯೋಗವಿದೆ.

೬) ಭಾಷಾಭಿವೃದ್ಧಿಯಲ್ಲಿ ನೂತನ ಪ್ರಯೋಗಗಳನ್ನು ಗುರುತಿಸಬಹುದು: ದಾರ, ಗಾರ, ಪ್ರತ್ಯಯ ರೂಪಗಳು ಗಮನಾರ್ಹವಾದವು. ಅವು ಪಾರಸಿ, ಅರಬ್ಬಿಶಬ್ದದ ಹೋಲಿಕೆಯಿಂದ ಇಂಥಹ ರೂಪಗಳಾಗಿವೆ.

'ಅಣ' ಮೂಡ (ಪೂರ್ವ) ದಿಕ್ಕಿನಲ್ಲಿ **ಇರು/ಹುಟ್ಟಿ**ದವ = ಮೂಡಣ, ತೆಂಕಣ (ದಕ್ಷಿಣ)

ಮೇಲೆ ತಿಳಿಸಿರುವ ಪ್ರತ್ಯಯರೂಪಗಳು ಪುಲ್ಲಿಂಗಕ್ಕೆ ಸಂಬಂಧಿಸಿದವುಗಳು. ಹೀಗೆಯೆ **ಸ್ತ್ರೀಲಿಂಗದ ಕೆಲವು ತದ್ಧಿತಪ್ರತ್ಯಯಗಳಿವೆ**. ಅವೂ ಈ ಗುಂಪಿಗೆ ಸೇರುತ್ತವೆ:

'ಇತಿ/ಇತ್ತಿ' - ಒಕ್ಕಲಿಗನ (ಜಾತಿವಾಚಕ)+**ಸ್ತ್ರೀ** = ಒಕ್ಕಲಿಗಿತಿ, ಒಕ್ಕಲಿಗಿತ್ತಿ.
ಪಾರ್ವನ (ಜಾತಿವಾಚಕ)+ಹೆಂಡತಿ = ಪಾರ್ವಿತಿ, ಗೌಡಿತಿ ಇತ್ಯಾದಿ.

'ತಿ' - ಮಾಟಗಾರನ+ಹೆಂಡತಿ = ಮಾಟಗಾತಿ, **ಮಾಟಗಾರ್ತಿ** (ಹ.ಗ).
ಧೈರ್ಯಗಾರನ+ಸತಿ=ಧೈರ್ಯಗಾತಿ, (೧)**ಧೈರ್ಯಗಾರ್ತಿ, ಓಟಗಾತಿ**(೧), ಓಟಗಾರ್ತಿ (ರಕಾರದ ಮುಂದಿನ ವ್ಯಂಜನಕ್ಕೆ **ದ್ವಿತ್ವ**ವಾಗುತ್ತದೆ)

'ಇ' - ಅರಸನ+ಪತ್ನಿ = ಅರಸಿತಿ, ಅಧಿಕಾರಿಣಿ ಇತ್ಯಾದಿ.

'ಎ' - ಜಾಣನ+ಸತಿ = ಜಾಣೆ. ಗುಣವಂತೆ, ಸೂಳಾಯ್ತ (ಸರದಿ ಕಾರ್ಯದಲ್ಲಿ ನೇಮಕವಾದವಳು)

ವಿಶೇಷ : ಕೆಲವೊಮ್ಮೆ ಒಂದೇ ಅರ್ಥದಲ್ಲಿ **ಹಲವು ಪ್ರತ್ಯಯಗಳು, ಹಲವು ಅರ್ಥಗಳಲ್ಲಿ ಒಂದುಪ್ರತ್ಯಯವೂ ಬರಬಹುದು.**

೨) ತದ್ಧಿತಾಂತ ಭಾವನಾಮ :

ಸಾಮಾನ್ಯವಾಗಿ ಷಷ್ಠೀವಿಭಕ್ತ್ಯಂತಗಳಾದ ನಾಮಪದಗಳ ಮೇಲೆ ಭಾವಾರ್ಥದಲ್ಲಿ **ಇಕೆ, ತನ, ಪು, ಮೆ, ಉ** ಇತ್ಯಾದಿ ಪ್ರತ್ಯಯಗಳು ಸೇರಿ **'ತದ್ಧಿತಾಂತ ಭಾವನಾಮ'** ಗಳೆನಿಸುತ್ತವೆ. (ಇಲ್ಲಿ ಭಾವವೆಂದರೆ **ಸ್ವಭಾವ, ಗುಣ, ಕ್ರಿಯೆ**ಗಳಿಗೆ) ಶಬ್ದಪ್ರವೃತ್ತಿಗೆ ಯಾವುದು ನಿಮಿತ್ತವಾಗುತ್ತದೋ ಅದು **'ಭಾವ'** ವೆನಿಸುವುದು.

ತದ್ಧಿತಭಾವಪ್ರತ್ಯಯ+ನಾಮಪದ = ತದ್ಧಿತಾಂತ ಭಾವನಾಮರೂಪಗಳು

'ತನ' - ದೊಡ್ಡವನ+ಭಾವ (ಇರುವಿಕೆ) ತನ = ದೊಡ್ಡತನ, ಹಿರಿತನ, ಕಲಿತನ, ಅಸಲಿತನ
ಧೀರನ+ಭಾವ = ಧೀರತನ, ಮರುಳ್ತನ, ನಸುಗುನ್ನಿತನ, ನೆಂಟಸ್ತನ, ದೊಡ್ಡಸ್ತನ
ಅಲೆಮಾರಿತನ, ರಕ್ಕಸತನ(೨), ಸೋಗಲಾಡಿತನ (ವೇಷಾಂತರ ವರ್ತನೆ).

'ಇಕೆ' - ಚೆಲುವಿನ+ಭಾವ = ಚೆಲುವಿಕೆ, ಉನ್ನತಿಕೆ, ನಂಟಸ್ತಿಕೆ.

'ಉ' - ಛಲದ+ಭಾವ = ಛಲವು, ಉಗ್ಗು, ಹೆಳವು, ಕಿವುಡು.
ಒಲವಿನ+ಭಾವ = ಒಲವು, ನಲಿವು, ನಿಲುವ (ನಿಲವು).

'ತೆ' - ಕಠಿಣದ+ಭಾವ = ಕಠಿಣತೆ, **ಸಭ್ಯತೆ**(೨), ಸುಜನತೆ, ಮಾನವತೆ, ಪ್ರಸಾದಿತೆ ಶಾಬ್ದಿಕತೆ, ಆಪ್ತತೆ.

---

೧) ರೂಢಿಬಲದಿಂದ ಬಳಕೆಯಾಗುತ್ತಿರುವ ಪ್ರಯೋಗಗಳು.

೨) 'ತನ' ಪ್ರತ್ಯಯವು ತತ್ಸಮ, ತದ್ಭವ, ದೇಶ್ಯ ಶಬ್ದಗಳಲ್ಲೂ ಬರುತ್ತದೆ. ಉದಾ: ಸಭ್ಯತಾ/ತೆ ಸಂಸ್ಕೃತ ತದ್ಧಿತ.

‘ಮೆ’ - ಹಳದರ+ಭಾವ = **ಹಳಮೆ** (೧), ಕೂರ್ಮೆ (ಪ್ರೀತಿ), ಓರಿಮೆ, ಒಲ್ಮೆ ಜಾಣ್ಮೆ
‘ಪು’ - ಇನಿದರ(ರುಚಿ)+ಭಾವ = ಇಂಪು, ತಂಪು, ಕಂಪು, ಪೆಂಪು, ಸೊಂಪು (ದಟ್ಟಿ), ನುಣ್ಪು, ಮೆಲ್ಪು (ತದ್ದಿತರೂಪಗಳಲ್ಲಿ ನಾಮಪದಗಳ ವಿಭಕ್ತಿಲೋಪವಾಗಿವೆ)

೩) ತದ್ಧಿತಾಂತಾವ್ಯಯಗಳು :

ನಾಮಪದಗಳಿಗೆ ಅವ್ಯಯಗಳೆನಿಸುವ **ಅಂತೆ, ವೊಲ್, ತನಕ, ವರೆಗೆ, ಓಸ್ಕರ, ಮಟ್ಟಿಗೆ, ಆಗಿ,** ಇಂತ ಇತ್ಯಾದಿ ಪ್ರತ್ಯಯಗಳು ಸೇರಿ **‘ತದ್ಧಿತಾಂತಾವ್ಯಯ’** ಗಳೆನಿಸುತ್ತವೆ. ಆ ಪ್ರತ್ಯಯಗಳು ಬಂದಾಗ ನಾಮಪದಗಳ **ವಿಭಕ್ತಿಪ್ರತ್ಯಯು ಸಾಮಾನ್ಯವಾಗಿ ಲೋಪವಾಗುವುದಿಲ್ಲ.**

ತದ್ಧಿತಾಂತಾವ್ಯಯಗಳು		ಉದಾ:
‘ಅಂತೆ’- ರಾಮನ+ಅಂತೆ (ಹೋಲಿಕೆ)	=	ರಾಮನಂತೆ, ಚಂದ್ರನಂತೆ, ಹೆಬ್ಬಾವಂತೆ
‘ತವ’‘ತುಟು’ - ಭೀಮನ+ಅಂತುಟು	=	ಭೀಮನಂ**ತುಟು** ,ರಾಮನಂ**ತವ** (೨)
‘ವೊಲ್/ ವೋಲ್’-ಇಂದ್ರನ(ಅ)+ವೊಲ್ (ಹೋಲಿಕೆ)	=	ಇಂದ್ರನವೊಲ್/ ಇಂದ್ರನವೋಲ್. ಹರಿಯವೊಲು (**ಹ.ಗ ರೂಪ**).
‘ಬೊಲ್’-ಉಪೇಂದ್ರ(ಅ)+ಬೊಲ್	=	ಉಪೇಂದ್ರಂಬೊಲ್.
‘ವರೆಗೆ’ - ಎಲ್ಲಿಯ+ವರೆಗೆ	=	ಎಲ್ಲಿಯವರೆಗೆ, ಅಲ್ಲಿಯವರೆಗೆ.
‘ತನಕ’ - ಇಲ್ಲಿಯ+ತನಕ	=	ಇಲ್ಲಿಯತನಕ, ಅಲ್ಲಿಯತನಕ.
‘ಮಟ್ಟಿಗೆ’- ಅವನ(ಅ)+ಮಟ್ಟಿಗೆ ಕಾಲಮಿತಿ	=	ಅವನಮಟ್ಟಿಗೆ, ಅದರಮಟ್ಟಿಗೆ.
‘ಓಸ್ಕರ’ - ಕೃಷ್ಣನ+ಓಸ್ಕರ	=	ಕೃಷ್ಣನಿಗೋಸ್ಕರ, ಜನತೆಗೋಸ್ಕರ.
‘ಸಲುವಾಗಿ’- ರಮಾಳ+ಸಲುವಾಗಿ	=	ರಮಾಳಸಲುವಾಗಿ.
‘ಇಂತ’ - ಅವನ+ಇಂತ (ತಾತ್ಪೂರ್ತಿಕ)	=	ಅವನಿಗಿಂತ ಹಿರಿಯ, ಚಿಕ್ಕವನಿಗಿಂತ.
‘ಆಗಿ’ - ಅವನ+ಆಗಿ	=	ಅವನಿಗಾಗಿ, ಇವರಿಗಾಗಿ, ಅದಕ್ಕಾಗಿ.
‘ಓಸುಗ’-ರವಿಗೆ + ಓಸುಗ	=	ರವಿಗೋಸುಗ ಇತ್ಯಾದಿ.

ಸಾರಸಂಗ್ರಹ

ತದ್ಧಿತಾಂತಗಳು (ತದ್ಧಿತ ಪ್ರತ್ಯಯಗಳೇ ಅಂತ್ಯವಾದವು)

ತದ್ಧಿತನಾಮ	ತದ್ಧಿತಭಾವನಾಮ	ತದ್ಧಿತ ಅವ್ಯಯ
(ನಾಮಪದಗಳಿಗೆ ವೃತ್ತಿ, ಶೀಲಾದಿ ಅರ್ಥಗಳಲ್ಲಿ ತದ್ಧಿತ ಪ್ರತ್ಯಯ)ಉದಾ: ಮೋಸಗಾರ, ಗುಣವಂತ, ಒಂದನೆಯ, ಓಟಗಾತಿ.	(ನಾಮಪದ+ ಭಾವಾರ್ಥ ಪ್ರತ್ಯಯಸೇರುತ್ತವೆ) ಉದಾ: ಕರಿಣತೆ, ಒಲಮು, ಜಾಣತನ, ಚೆಲುವಿಕೆ, ನಂಟಸ್ತಿಕೆ, ನಂಟಸ್ತನ.	(ನಾಮಪದ+ಅವ್ಯಯ ಅರ್ಥದ ಶಬ್ದಗಳು) ಉದಾ: ರಾಮನಂತೆ, ಅವನಿಗ್ಗಾಗಿ, ಜನರ ಮಟ್ಟಿಗೆ.

೧) ‘ಪಳಮೆ’ ಎಂದು ಹಳಗನ್ನಡ ರೂಪ. ಕೂರ್ಮೆ/ಕೂರ್ಪು- ‘ಪ್ರೀತಿ’ ಹಳಗನ್ನಡ ರೂಪಗಳು.

೨) ಹೋಲಿಕೆಯ (ಸಾದೃಶ್ಯ) ಅರ್ಥದಲ್ಲಿ ಹಳ/ ಹೊಸಗನ್ನಡಗಳಲ್ಲಿ ‘ತುಟ’, ‘ತೆ’, ‘ತವ’ - ಪ್ರತ್ಯಯ ಬಂದ ರೂಪಗಳುಂಟು.

ಅವ್ಯಯ

ನಾಮಪದ ಕ್ರಿಯಾಪದಗಳಂತೆ ಲಿಂಗ, ವಚನ, ವಿಭಕ್ತಿಗಳಲ್ಲಿ ರೂಪಭೇದವನ್ನು ಹೊಂದದೆ ಏಕರೂಪವಾಗಿ ನಿಲ್ಲುವಶಬ್ದಗಳನ್ನು **'ಅವ್ಯಯ'** (೧) ಗಳೆನ್ನುತ್ತೇವೆ. ಉದಾ. ಸುಮ್ಮನೆ, ನೆಟ್ಟನೆ, ಮೆಲ್ಲಗೆ, ಸುತ್ತಲು, ತೆಳ್ಳಗೆ, ಬೆಳ್ಳಗೆ, ಹಾಗೆ ಇತ್ಯಾದಿ.

೧) ಅವನು **'ಸುಮ್ಮನೆ'** ಕುಳಿತನು.

೨) ಅವಳು **'ಸುಮ್ಮನೆ'** ಇದ್ದಳು.

೩) ಅವರು/ ಅದು ಸುಮ್ಮನಾಗಲಿಲ್ಲ.

ಇಲ್ಲಿ ಲಿಂಗ, ವಚನರೂಪಗಳಲ್ಲಿ ಅವ್ಯಯಶಬ್ದವ್ಯತ್ಯಾಸವಾಗಿಲ್ಲ. ಇಂತಹ **ಅವ್ಯಯಗಳನ್ನು:** ೧) ಸಾಮಾನ್ಯಾವ್ಯಯ ೨) ಅನುಕರಣಾವ್ಯಯ ೩) ಭಾವಸೂಚಕಾವ್ಯಯ ೪) ಕ್ರಿಯಾರ್ಥಕಾವ್ಯಯ ೫) ಸಂಬಂಧಾರ್ಥಕಾವ್ಯಯ ೬) ಕೃದಂತಾವ್ಯಯ ೭) ತದ್ಧಿತಾಂತಾವ್ಯಯ ೮) ಅವಧಾರಣಾರ್ಥಕ ಅವ್ಯಯಗಳೆಂದು ವಿಂಗಡಿಸಲಾಗುತ್ತದೆ.

೧) ಸಾಮಾನ್ಯಾವ್ಯಯಗಳು :

ಯಾವುದಾದರೊಂದು **ಕ್ರಿಯೆಯಕಾಲ, ಸ್ಥಾನ, ರೀತಿ** ಇತ್ಯಾದಿಗಳನ್ನು ತಿಳಿಸುವ ಶಬ್ದಗಳು **'ಸಾಮಾನ್ಯವ್ಯಯ'** ಗಳೆನಿಸುತ್ತವೆ. ಇವನ್ನು **'ಕ್ರಿಯಾವಿಶೇಷಣ'**ಗಳೆಂದೂ ಕರೆಯುತ್ತಾರೆ. ಉದಾ : **'ಸೊಗಸಾಗಿ'** ಹಾಡುತ್ತಾನೆ. **ಚೆನ್ನಾಗಿ** ಓಡಿದಳು.

ಅವ್ಯಯಗಳಿಗೆ ವಿಶೇಷಾರ್ಥಗಳಿವೆ : ನೆಟ್ಟಗೆ / ನೆಟ್ಟನೆ-(**ನೇರಾರ್ಥ**); ಸುಮ್ಮನೆ (ಮೌನಾರ್ಥ); ಸೊಗಸು, ಚೆನ್ನಾಗಿ (**ಮೆಚ್ಚುಗೆ**); ಹಾಗೆ, ಹೀಗೆ. ಬಳಿಕ (**ಸಂದರ್ಭಾನುಸಾರ ಅರ್ಥಗಳುಂಟು**); ನಿನ್ನೆ, ಮೊನ್ನೆ, ನಾಳೆ-(**ನಿರ್ದಿಷ್ಟ ದಿನ**), ಬೇಗ, ತಟ್ಟನೆ, ಚಕ್ಕನೆ, ಕೂಡಲೆ (**ಶೀಘ್ರಾರ್ಥ**); ತಣ್ಣನೆ/ ತಣ್ಣಗೆ (**ಶೀತಾರ್ಥ**); ನುಣ್ಣನೆ/ ನುಣ್ಣಗೆ (**ಮೃದು**); ಮೆಲ್ಲನೆ/ ಮೆಲ್ಲಗೆ -(ನಿಧಾನಾರ್ಥ) ಗಡ, ಗಳ, **ಅಲ್ಲವೆ** ಎಂದರ್ಥ.

೨) ಅನುಕರಣಾವ್ಯಯಗಳು :

ಇವು ಭಾಷೆಯ ವಿಶೇಷ ಪ್ರಯೋಗಗಳೆನಿಸಿರುವ ರೂಪಗಳು. ವರ್ಣಾನಾತ್ಮಕ ಗುಣವುಳ್ಳ ಒಂದುಶಬ್ದದ ಮೇಲೆ ಒತ್ತುಹಾಕಿ ಭಾವನೆವ್ಯಕ್ತಪಡಿಸುವುದನ್ನು ಕೇಳಿದ್ದೇವೆ. ಅವುಗಳಲ್ಲಿ ಅರ್ಥವುಳ್ಳ, ಅರ್ಥವಿರದ ಧ್ವನಿವಿಶೇಷಗಳಿರುತ್ತವೆ. ಅವುಗಳನ್ನು ಕೇಳಿದಂತೆ ಪುನಃ ಉಚ್ಚರಿಸಿ (ಅನುಕರಿಸಿ) ತಿಳಿಸುತ್ತೇವೆ. ಈ ಶಬ್ದಗಳನ್ನು **'ಅನುಕರಣಾವ್ಯಯ'** ಗಳೆನ್ನುತ್ತೇವೆ. ಕನ್ನಡದಲ್ಲಿ ಇವುಗಳಸಂಖ್ಯೆ ಹೆಚ್ಚು. ಉದಾ :

೧) **'ಗಡಗಡನೆ'** ಪೊಡವಿ ನಡುಗಿತು (**ಭಯಾರ್ಥ**).

೨) **'ಗಳಗಳನೆ'** (**ನಿರಂತರ**) ಅತ್ತರು.

೩) **'ಥಳಥಳನೆ'** (**ಪ್ರಕಾಶಾರ್ಥ**) ಸೂರ್ಯಮೂಡಿದ.

ಸಿಮಿಸಿಮಿ,ಗೊಣಗೊಣ, ಮುಸುಮುಸು, ಚಿಲಿಪಿಲಿ, ರಪರಪ, ಪಿಸುಪಿಸು, ಕಚಾಪಿಚ ಕಚಪಿಚ, ವಟವಟ, ಡಣಡಣ (ಸ್ಫುಟ); ಜಗಮಗ (ಪ್ರಕಾಶ); ಗಿರಗಿರನೆ,ತಿರ್ರನೆ

(ಸುತ್ತುವಿಕೆ); ಗಳಗಳನೆ (ಧಾರಾಕಾರ); ಚಟಚಟ, ದಢದಢ (ತಡಮಾಡದೆ); ಸರಸರ (ಶೀಘ್ರಾರ್ಥ); ಡವಡವ, (ಭಯ); ಧಗಧಗ (ದಹನಶಬ್ದ) ಘಮಘಮ, (ಸುವಾಸನಾರ್ಥ), (ಇತ್ಯಾದಿಯಾಗಿ **ಸಂದರ್ಭ ವಿಶೇಷಗಳನ್ನು ನೋಡಿ ಅರ್ಥನಿರ್ಧರಿಸಬೇಕು**).

೩) **ಭಾವಸೂಚಕಾವ್ಯಯ** : (ನಿಪಾತಾವ್ಯಯ) ವ್ಯಕ್ತಿಯಮನಸ್ಸಿನಲ್ಲಿ ಉಂಟಾದ **ಆಶ್ಚರ್ಯ, ಸಂಶಯ, ಪ್ರಶ್ನೆ,** ನಿಶ್ಚಯ, **ಕೋಪ, ತಾಪ, ದುಃಖ, ಮೆಚ್ಚುಗೆ, ಆಕ್ಷೇಪ, ತಿರಸ್ಕಾರ** ಇತ್ಯಾದಿ ಭಾವಗಳನ್ನು ವ್ಯಕ್ತಪಡಿಸುವ ವಿಶೇಷಶಬ್ದಗಳು '**ಭಾವಸೂಚಕಾವ್ಯಯ**' ಗಳೆನಿಸುತ್ತವೆ. ಉದಾ :

೧. **ಅಯ್ಯೋ!** ಮಹಾತ್ಮನಿಗೂ ಸಂಕಟ ಬಂದೀತೆ ? (ಖೇದಾರ್ಥ).

೨. **ಭಲೇ!** ಒಳ್ಳೆಯ ಧೈರ್ಯಗಾರ (ಮೆಚ್ಚುಗೆ).

ಅಕಟ, ಅಕ್ಕಟ **(ವ್ಯಥೆ)**; ಏ, ಎಲಾ **(ಸಂಬೋಧನಾರ್ಥ)**; ಆಹಾ! ಅಬ್ಬಾ! ಅಹಹ್ಹಾ(ಆಶ್ಚರ್ಯ). ಉಫೇ, ಚಾಂಗು, ಭಲೆ, ಭಲಾ, ಭೇಷ್-**(ಮೆಚ್ಚುಗೆ,** ಉತ್ತೇಜನಾರ್ಥ); ನೆರೆ, ಕಡು **(ಅಧಿಕಾರ್ಥ)**; ಅಃ, ಆಃ **(ವೇದನೆ, ಆಕ್ಷೇಪ, ವಿಸ್ಮಯ)**; ಛೇ, ಥೂ, ಚಿಃ **(ಕೀಳು, ಖೇದ, ಅಸಹ್ಯಾರ್ಥ)**; ಅರೆ (ಅರ್ಧ), ಓ, ಓಹೋ **(ಆಶ್ಚರ್ಯ, ಅದ್ಭುತ, ವಿಡಂಬನೆ, ವ್ಯರ್ಥ)**; ಅಲ್ತೆ (ಅಲ್ಲವೆ) ಹುಂ (ಅನುಮೋದನೆ), ಗಡ, ಗಳ **(ಅಲ್ಲವೆಂದರ್ಥ)**.

೪) **ಕ್ರಿಯಾರ್ಥಕಾವ್ಯಯಗಳು** : ಕ್ರಿಯಾಪದಗಳ ಸ್ಥಾನದಲ್ಲಿ ನಿಂತು ಕ್ರಿಯಾಪದದ ಅರ್ಥವನ್ನು ಪೂರ್ಣಗೊಳಿಸುವ ಶಬ್ದಗಳು '**ಕ್ರಿಯಾರ್ಥಕಾವ್ಯಯ**' ಗಳೆನಿಸುತ್ತವೆ. ಅವು, ಅಲ್ಲ, ಹೌದು, ಬೇಕು, ಉಂಟು, ಇಷ್ಟಾರ್ಥ, ಬೇಡ, ಸಾಕು, (ನಿಷೇಧಾರ್ಥಕ) ಇತ್ಯಾದಿ. **(ಇವೆಲ್ಲವೂ ಮೂಲದಲ್ಲಿ ಧಾತುಗಳೇ ಆಗಿದ್ದವು)**.

ಉದಾ: ಆಕೆಯಲ್ಲಿ ರೂಪ'**ವುಂಟು**' (ಇರು ಎಂಬ ಕ್ರಿಯಾರ್ಥ).
ನನಗೆ ನೀತಿ '**ಸಾಕು**' - (ಇಷ್ಟವಿಲ್ಲವೆಂದರ್ಥ) .
ಉಂಟು, ಬೇಕು, ಹೌದು (ಇಷ್ಟ/ಒಪ್ಪಿಗೆ)

೫) **ಸಂಬಂಧಾರ್ಥಕಾವ್ಯಯಗಳು** : ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ಪದಗಳನ್ನಾಗಲೀ, ವಾಕ್ಯಗಳನ್ನಾಗಲೀ ಜೋಡಿಸುವಂತಹ ಮತ್ತು ಸಂಬಂಧಗೊಳಿಸುವ ಶಬ್ದಗಳು '**ಸಂಬಂಧಾರ್ಥಕಾವ್ಯಯ**'ಗಳೆನಿಸುತ್ತವೆ. ಅವು ಆದರೆ; ಉ, ಸಹ ಮತ್ತು ಅಲ್ಲವೆ, ಆದ್ದರಿಂದ, ಆದರೂ,ಒಡನೆ, ಅದಕ್ಕೆ, (ಹಿಂದಿನದ್ದಕ್ಕೆ ಆಕ್ಷೇಪಾರ್ಥ)ಆದ್ದರಿಂದ (ಪರಿಣಾಮಾರ್ಥ)ಇತ್ಯಾದಿ. ಉದಾ :

೧) ಇವನೂ ಸಹ ಭಾರತೀಯನೇ (ಕೂಡ ಎಂಬರ್ಥ)

೨) ರಂಗನೂ ರಾಜನೂ(೧) ಒಟ್ಟಿಗೆ ಇದ್ದರು (ಮತ್ತು ಎಂಬರ್ಥ)

---

(೧) ಹಳಗನ್ನಡದಲ್ಲಿ ಇದೇ ಅರ್ಥದಲ್ಲಿ 'ಅಂ', 'ಉಂ' ಗಳೆಂಬ ಸಮುಚ್ಚಯ ಬರುತ್ತವೆ.

೬) **ಕೃದಂತಾವ್ಯಯಗಳು :** ಧಾತುಗಳ ಮೇಲೆ ಸೇರುವ ಉತ, ಉತ್ತ, ಅದೆ, ಅಲು, ಅಲಿಕೆ, ಅ, ಇ, ದು ಇತ್ಯಾದಿ **'ಕೃತ್'**ಪ್ರತ್ಯಯಗಳುಸೇರಿ **'ಕೃದಂತಾವ್ಯಯ'** ಗಳೆನಿಸುತ್ತವೆ. ಉದಾ : ೧) ಅವನು **ತಿನ್ನುತ್ತ** ಓದುತ್ತಾನೆ.
೨) ಅವಳು **ನೋಡದೆ** ಹೋದಳು.

(ಕೃದಂತ ಪ್ರಕರಣದಲ್ಲಿ ವಿವರವಾಗಿ ತಿಳಿಸಿದೆ)

೭) **ತದ್ಧಿತಾವ್ಯಯಗಳು** (ಅನುಸರ್ಗಾವ್ಯಯ) : ನಾಮಪದಗಳ ಮೇಲೆ ಬರುವ **ಪ್ರಯೋಜನ, ಹೋಲಿಕೆ, ಅವಧಿ ಸೂಚಕವಾಗಿ ಅಂತೆ, ವೋಲ್, ವೊಲು, ಮಟ್ಟಿಗೆ, ಹೊರತು, ಸಂಗಡ, ಓಸ್ಕರ, ವರೆಗೆ, ಇಂತ** ಇತ್ಯಾದಿ ತದ್ದಿತಪ್ರತ್ಯಯಗಳು ಸೇರಿ **'ತದ್ಧಿತಾಂತಾವ್ಯಯ'** ಗಳೆನಿಸುತ್ತವೆ. **(ತದ್ಧಿತಪ್ರಕರಣದಲ್ಲಿ** ವಿವರವಾಗಿ ತಿಳಿಸಿದೆ)

೮) **ಅವಧಾರಣಾರ್ಥಕಾವ್ಯಯಗಳು** (ನಿಶ್ಚಯಾರ್ಥ) : ಹಲವು ವ್ಯಕ್ತಿ, ಸ್ಥಳ, ವಸ್ತುಗಳಲ್ಲಿ ಒಂದನ್ನು ನಿಶ್ಚಯ, ನಿರ್ಧಾರಾರ್ಥಗಳಲ್ಲಿ ಒತ್ತಿ ಹೇಳುವ ಶಬ್ದಗಳು ಕನ್ನಡದ ವಿಶಿಷ್ಟವಾದ ಶಬ್ದಗಳು ಅವು **'ಅವಧಾರಣಾರ್ಥಕಾವ್ಯಯ'** ಗಳೆನಿಸುತ್ತವೆ. ಉದಾ : ೧) ಅವ**ನೇ** ಈತ. ೨) ಅ**ದೇ** ಊರಿನವನು. ೩) ನೀ**ನೇ** ಮಾಡಿರಬೇಕು. ೪) ಅ**ದೇ** ದಾರಿ. (ಇಲ್ಲೆಲ್ಲ **ಎ, ಏ**ಗಳೇ ನಿರ್ಧಾರವಾದ ಅರ್ಥವನ್ನು ಸೂಚಿಸುತ್ತವೆ. ಅಲ್ಲಿ**ಯೇ**, ಬೇ**ಕೇ**ಬೇಕು, ಮಳೆ**ಯೋ**ಮಳೆ, ಮಾ**ತೇ**ಮಾತು. ನಿರ್ಧಾರವಲ್ಲದ ಯಾ**ರೋ**, ಏ**ನೋ**,ಏ**ಕೋ** ಇತ್ಯಾದಿಗಳನ್ನು ಪ್ರಶ್ನಾರ್ಥಕಾವ್ಯಯಗಳೆನ್ನುತ್ತಾರೆ).

ಸಾರಸಂಗ್ರಹ

ಅವ್ಯಯಗಳು (ಲಿಂಗ, ವಚನ, ವಿಭಕ್ತಿಗಳಲ್ಲಿ ವ್ಯತ್ಯಾಸವಾಗದವು)

೧. ಸಾಮಾನ್ಯಾವ್ಯಯ. **(ಹಾಗೆ, ಸುಮ್ಮನೆ)**

೨. ಅನುಕರಣಾವ್ಯಯ: **(ಧಡಧಡನೆ, ಗಳಗಳನೆ)**

೩. ಭಾವಸೂಚಕಾವ್ಯಯ: **(ಅಯ್ಯೋ, ಅಬ್ಬಾ, ಓ)**

೪. ಕ್ರಿಯಾರ್ಥಕಾವ್ಯಯ : **(ಉಂಟು, ಸಾಕು, ಅಲ್ಲ)**

೫. ಸಂಬಂಧಾರ್ಥಕಾವ್ಯಯ: **(ಮತ್ತೆ, ಊ, ಸಹ)**

೬. ಕೃದಂತಾವ್ಯಯಗಳು: **(ಉತ, ಉತ್ತ, ಅದ)**

೭. ತದ್ಧಿತಾವ್ಯಯಗಳು : **(ಮಟ್ಟಿಗೆ, ಇಂತ, ಅಂತೆ)**

೮. ಅವಧಾರಣಾವ್ಯಯ : **(ಎ, ಏ)**

ಕನ್ನಡಶಬ್ದ ಸಂಪತ್ತು

ದೇಶೀಯ ಶಬ್ದಗಳು, ಅನ್ಯದೇಶೀಯ ಶಬ್ದಗಳು, ತತ್ಸಮ-ತದ್ಭವಗಳು.

ಭಾಷೆಯು ಸಮಾಜದ ಜೀವನಾಡಿಯಾಗಿದೆ. ಸಮಾಜದಲ್ಲಿ ಭಿನ್ನಭಿನ್ನ ಭಾಷೆಯನ್ನಾಡುವ ಜನರು ಬೆರೆತು ಬಾಳುತ್ತಾರೆ. ಹೀಗಾಗಿ ಒಂದುಭಾಷೆಗೆ ಅನ್ಯಭಾಷೆಗಳ ಸಂಬಂಧ, ಸಂಪರ್ಕವಿರುತ್ತದೆ. ಇದು ಸಹಜವೂ ಅನಿವಾರ್ಯವೂ ಹೌದು. ಈ ಹಿನ್ನೆಲೆಯಲ್ಲಿ ಒಂದು ಭಾಷೆಯ ಶಬ್ದಗಳನ್ನು ಇನ್ನೊಂದು ಭಾಷೆಗೆ ಕೊಡುವುದು, ಪಡೆಯುವುದು ಆ ಭಾಷೆಯ ಜೀವಂತಿಕೆಯ ಲಕ್ಷಣ.

ನಮ್ಮನಾಡಿನ ಸಂಪತ್ತು ಪರಕೀಯರನ್ನು ಆಕರ್ಷಿಸಿತ್ತು. ಅರಬ್ಬರು, ಪೋರ್ಚುಗೀಸರು, ಇಂಗ್ಲೀಷರು ಇಲ್ಲಿ ಬಂದುನೆಲೆಸಿದರು. ಆಡಳಿತವನ್ನೂ ಮಾಡಿಹೋದರು. ಹಾಗೆಯೇ ನಮ್ಮರಾಜರು ತಮ್ಮಪ್ರಾಂತೀಯ ವಿಸ್ತರಣೆಯನ್ನು ಮಾಡಿದರು. ಇದರಿಂದ ಕನ್ನಡ ಭಾಷೆಯಲ್ಲಿ ಅನ್ಯಭಾಷೆಯ ಶಬ್ದಗಳು ಹಾಸುಹೊಕ್ಕಾಗಿವೆ. ಇದರಿಂದ ಭಾಷೆಯಶಬ್ದ ಸಂಪತ್ತು ಅಧಿಕವಾಯಿತೆನ್ನಬಹುದು.

ಕನ್ನಡಭಾಷೆಯು ಶಬ್ದಸಂಪತ್ತನ್ನು **ದೇಶೀಯ**$_{(೧)}$(ಅಚ್ಚಗನ್ನಡ) ಶಬ್ದಗಳು **ಅನ್ಯಭಾಷೀಯ**$_{(೨)}$ಶಬ್ದಗಳು **ಅನ್ಯದೇಶೀಯ**$_{(೩)}$ ಶಬ್ದಗಳೆಂದು **ಮೂರುವಿಧ**ಗಳಾಗಿ ಗುರುತಿಸಬಹುದು.

೧) ದೇಶೀಯ ಶಬ್ದಗಳು :

ಕನ್ನಡಭಾಷೆಗೆ ತನ್ನದೇಆದ ಶಬ್ದಭಂಡಾರವಿದೆ. ಆ ಶಬ್ದಗಳನ್ನು ಜನರು ತಾವೇ ಕಲ್ಪಿಸಿಕೊಂಡು ಬಳಸಿ ಮುಂದಿನ ಪೀಳಿಗೆಗೆ ಕೊಡುಗೆಯಾಗಿ ಕೊಟ್ಟಿದ್ದಾರೆ. ಅವುಗಳಲ್ಲಿ ವಿಶಿಷ್ಟವಾದ ಜಾಯಮಾನ, ಗುಣಲಕ್ಷಣಗಳಿವೆ. ಆ ಶಬ್ದಗಳು **'ದೇಶೀಯಶಬ್ದ'** ಗಳೆನಿಸುತ್ತವೆ.

ಅವುಗಳನ್ನು ದಿನನಿತ್ಯದ ಜೀವಾಳವಾಳದ ಮಾತಿನಲ್ಲಿ ಬಳಸುತ್ತೇವೆ.ಕನ್ನಡದ **ನಾಮವಾಚಕ, ಧಾತುಗಳು, ದಿಗ್ವಾಚಕ, ಕಾಲವಾಚಕ, ಸಂಖ್ಯಾವಾಚಕ, ಸರ್ವನಾಮ, ಭಾವವಾಚಕ, ಗುಣವಾಚಕ ಮತ್ತು ಪ್ರಕಾರ ವಾಚಕ**ಗಳಲ್ಲಿ ವಿಶೇಷವಾಗಿ ಗುರುತಿಸಬಹುದು. ಇವುಗಳಿಗೆ ಪ್ರತಿಯಾಗಿ ಅನ್ಯಭಾಷೆಯ ಶಬ್ದಗಳನ್ನು ಸಾಮಾನ್ಯವಾಗಿ ಬಳಸುವುದಿಲ್ಲ. (ದೇಶೀಯ) ಮೂಲಶಬ್ದಗಳಲ್ಲಿ ವ್ಯತ್ಯಾಸವೂ ಆಗಿರುವುದುಂಟು.

ಕನ್ನಡ ದೇಶೀಯಶಬ್ದಗಳಲ್ಲಿ ತೋರುವ ವಿಶೇಷ ಲಕ್ಷಣಗಳು :-

ಈ ದೇಶೀಯ ಶಬ್ದಗಳನ್ನೂ ಮುಂದೆ ತತ್ಸಮ, ತದ್ಭವಗಳನ್ನೂ ಖಚಿತವಾಗಿ ಗುರುತಿಸಲು ದೇಶೀಯಶಬ್ದಗಳ ಸ್ಥೂಲಸ್ವರಸಂಯೋಜನೆಯನ್ನು ಕೊಡಲಾಗಿದೆ:

೧) ಕನ್ನಡದಲ್ಲಿ **ಏ, ಐ, ಓ, ಔ ಕಾರಾತ್ಮಕ** ಶಬ್ದಗಳಿಲ್ಲ. ಅಂತಹ ಶಬ್ದಗಳಿದ್ದರೆ ಅವುಗಳು

ಸಂಸ್ಕೃತದಿಂದ ಬಂದ**ತತ್ಸಮ**, **ತದ್ಭವ**ಗಳೆಂದು ನಿರ್ಧರಿಸಬೇಕಾಗುತ್ತದೆ. ಉದಾ: **ವೇತ್ತ** (ಸಂ)-ಬೆತ್ತ, **ವೇಗ** (ಸಂ) - ಬೇಗ, **ವೈರ** (ಸಂ)-ಬೇರ, **ವೈಶಾಖ** (ಸಂ) - **ಬೇಸಗೆ** ಇತ್ಯಾದಿ.

೨) ಕನ್ನಡದಲ್ಲಿ **'ಋ'** ಕಾರಾತ್ಮಕ , ವಿಸರ್ಗಾಂತಶಬ್ದಗಳು ಕಂಡುಬಂದರೆ ಅವು ಸಂಸ್ಕೃತದಿಂದ ಬಂದವುಗಳೆಂದು ನಿರ್ಧರಿಸುವುದು. ಉದಾ : **ಋಣ**-ರಿಣ, **ಮೃಗ**-ಮಿಗ, **ಶೃಂಗ**-ಸಿಂಗ, **ಋಷಿ**-ರಿಸಿ ಇತ್ಯಾದಿ.

೩) ಕನ್ನಡದಲ್ಲಿ **ಶ**, **ಷ**ಕಾರಾಂತ ಶಬ್ದಗಳಿಲ್ಲ (ಅವು ಸಂಸ್ಕೃತದಲ್ಲಿವೆ). ಉದಾ : **ಋಷಿ**-ರಿಸಿ/ರುಸಿ, **ಔಷಧ**-ಔಸದ, **ಭಾಷೆ**-ಬಾಸೆ, **ವೇಷಾ**-ವೇಸ ಇತ್ಯಾದಿ.

೪) ಮಹಾಪ್ರಾಣಯುತವಾದ ಶಬ್ದಗಳು ಸಹಜವಾಗಿ ಕನ್ನಡದಲ್ಲಿಲ್ಲ. ಅವು **ಸಂಸ್ಕೃತ, ಮರಾಠಿ, ಪ್ರಾಕೃತ**ಗಳಿಂದ ತದ್ಭವಗೊಂಡು ಬಂದವುಗಳಾಗಿವೆ. ಉದಾ: **ಗ್ರಂಥಿ**-ಗಂಟು, **ಚತುರ್ಥೀ**-ಚೌತಿ, **ಘೂಕ**-ಗೂಗೆ, **ಘಟಿಕಾ**-ಘಳಿಗೆ, **ಘೋಷಣೆ**-ಗೋಸಣೆ, **ಘೋಷ್ಠಿ**-ಗೊಟ್ಟಿ ಇತ್ಯಾದಿ.

೫) ಕನ್ನಡದಲ್ಲಿ ಆದಿವ್ಯಂಜನ ದ್ವಿತ್ವಶಬ್ದಗಳಿಲ್ಲ ಅವು ಸಂಸ್ಕೃತದಿಂದ ಬಂದವು. ಉದಾ: **ಬ್ರಹ್ಮನ್** - ಬ್ರಹ್ಮ **ಪ್ರಲಾಪ**-ವಿಲಾಪ, **ಶ್ರೇಣಿ**-ಪಣೆ (ಪೇಣೆ)? **ತಂತ್ರಿ**-ತಂತಿ.

೬) ಕನ್ನಡದಲ್ಲಿ ವಿಜಾತಿವ್ಯಂಜನದ ದ್ವಿತ್ವಶಬ್ದಗಳಿಲ್ಲ (ಅವು ಸಂಸ್ಕೃತದಲ್ಲಿವೆ. ಉದಾ : **ಸ್ವರ್ಗ-ಸಗ್ಗ, ಪಕ್ಷಿ-ಪಕ್ಕಿ, ನಿತ್ಯ-ನಿಚ್ಚ** ಇತ್ಯಾದಿ.

೭) ಕನ್ನಡದಲ್ಲಿ **ಗ, ಜ, ಡ, ದ, ಬ, ಎ, ಒ** ಕಾರ ಗಳಿಂದ ಕೂಡಿದ ಶಬ್ದಗಳೇ ಹೆಚ್ಚು:-

ಉದಾ: **ಗ** - ಅಗಸ, ಗಂಟು, ಇಟ್ಟಿಗೆ. **ಜ** - ಜನ, ಜೂಜೂ, ಸಂಜೆ.

ಡ - ಜಡೆ, ಕಡಗ, ಅಡವಿ, ಮಡು. **ದ** - ದನಿ, ದೆಸೆ, ದಿವಸ.

ಬ - ಬಡಗಿ, ಬವರ, ಬಯಲು ಇತ್ಯಾದಿ.

೮) ಕನ್ನಡದಲ್ಲಿ **ಪ, ಬ, ಮ** ಗಳಿಗೆ **'ವ'** ಕಾರಾದೇಶವೂ, **ವ**ಕಾರಕ್ಕೆ- **'ಮ'**ಕಾರವೂ, **ಹ** ಗೆ - **'ಪ'**ವೂ ಪಲ್ಲಟಗಳಾಗುತ್ತವೆ. ಉದಾ: ಮರ**ಮ**ಣೆ-ಮರ**ವ**ಣೆ, ಕೈ**ಪೊ**ಲ-ಕೈ**ವೊ**ಲ, **ಪ**ಗೆ-**ಹ**ಗೆ.

ಕನ್ನಡದಲ್ಲಿ **ಙ, ಞ, ಣ, ಳ**, ಗಳಾದಿಯಾದ ಪದಗಳಿಲ್ಲ.

೯) ಕನ್ನಡದಲ್ಲಿ ಬೇರೆ ಬೇರೆ ಆಖ್ಯಾತ, ತದ್ಧಿತ ಪ್ರತ್ಯಯಗಳನ್ನು ಹಚ್ಚುವುದರ ಮೂಲಕ ಪದಗಳನ್ನು ವಿಪುಲವಾಗಿ ಸೃಷ್ಟಿಸಬಹುದು.

೧೦) ಮೂಲದ ದೇಶಿಯಶಬ್ದಗಳು **ಒಂದು ಅಕ್ಷರದಿಂದ ಮೂರು ಅಕ್ಷರ**ಯುತವಾಗಿದ್ದು, ವ್ಯಂಜನಾಂತವಾಗಿವೆ. ಅವು ಸಾಂದರ್ಭಿಕವಾಗಿ ಕ್ರಿಯಾಪದಗಳಾಗುತ್ತವೆ.

ಹೀಗೇ ಪಟ್ಟಿಯಲ್ಲಿ ಹೇಳುತ್ತ ಹೋಗಬಹುದು. ಇವುಗಳಲ್ಲಿ ಕನ್ನಡತನವನ್ನು ಗುರುತಿಸಿ

ದೇಶೀಯಶಬ್ದಗಳೆಂದು ಅರಿಯಬಹುದು.

ಅನ್ಯಭಾಷೀಯ ಶಬ್ದಗಳು :

ಕನ್ನಡ ಜನರಮೇಲೆ ಸಾಂಸ್ಕೃತಿಕ, ಸಾಹಿತ್ಯಿಕ, ತಾತ್ವಿಕಭಾವನೆಗಳಲ್ಲಿ ಪ್ರಾಚೀನ ಕಾಲದಿಂದ ಗಾಢಪ್ರಭಾವ ಬೀರಿರುವಭಾಷೆ ಸಂಸ್ಕೃತ ಮತ್ತು ಪ್ರಾಕೃತ. ಕನ್ನಡಭಾಷೆ ಬೆಳೆಯಲು, ಬದುಕಲು ಈ ಪರಭಾಷಾ ಶಬ್ದಗಳಸ್ವೀಕಾರ ಅಗತ್ಯವೂ ಅನಿವಾರ್ಯವೂ ಆಗಿದೆ. ಈ ಅಭಿಪ್ರಾಯವನ್ನು ಸು. ೭೦೦ ವರ್ಷಗಳ ಹಿಂದೆಯೇ ಪ್ರಸಿದ್ಧ ವ್ಯಾಕರಣಕಾರನಾದ ಕೇಶಿರಾಜನು **'ಲೋಕರೂಢಿ ಕೆಡದಂತೆ ಅನ್ಯಭಾಷಾ ಪದಗಳನ್ನು ಬಳಸಬಹುದೆಂದು'** ಹೇಳಿದ್ದಾನೆ. ಆತ ತೋರಿದ ಭಾಷಾಬೆಳವಣಿಗೆಯ ಸೂತ್ರವೂ, ಮಾರ್ಗದರ್ಶಕವೂ ಹೌದು.

ಭಾಷೆಯು ನಿಂತನೀರಲ್ಲ, ಅದು ಹರಿಯುವ ನೀರಿನಂತೆ. ಭಾಷೆಯಲ್ಲಿ ಮಡಿ, ಮೈಲಿಗೆಗಳಿಲ್ಲ. ಅದರಲ್ಲಿ ಶಿಷ್ಟತೆಯನ್ನರಸುವುದು ಸರಿಯಲ್ಲ. ಬೆಳವಣಿಗೆಯ ದೃಷ್ಟಿಯಲ್ಲಿ ಇದು ಸೂಕ್ತವಾದುದಲ್ಲ. ಭಾವನೆಗಳನ್ನು ಅಭಿವ್ಯಕ್ತಪಡಿಸುವಾಗ ಸಂಪರ್ಕದಲ್ಲಿರುವ ಶಬ್ದಗಳು ಕನ್ನಡಭಾಷೆಯಲ್ಲಿ ನುಸುಳಿ ಬಂದಿವೆ. ಹೀಗಾಗಿ ಒಂದು ಭಾಷೆಯ ವ್ಯಾವಹಾರಿಕ ಶಬ್ದಗಳಿಂದ ಅವುಗಳನ್ನು ಖಚಿತವಾಗಿ ಗುರುತಿಸಲು ಆಯಾ ಮೂಲಭಾಷೆಯ ಶಬ್ದಗಳ ವರ್ಣಸಂಯೋಜನೆಯನ್ನು ಗುರುತಿಸಬೇಕಾಗುತ್ತದೆ.

ಅನ್ಯಭಾಷೀಯ ಶಬ್ದಗಳು (ಸಂಸ್ಕೃತ ಶಬ್ದಗಳು): ಈಶಬ್ದಗಳು ಅನ್ಯಭಾಷೆಯ ಶಬ್ದಗಳೆನಿಸಿದರೂ ಕನ್ನಡದಲ್ಲಿ ಸಹಜವಾಗಿ, ವಿಪುಲವಾಗಿ ಬೆರೆತಿವೆ. ಅವು ನಾಮವಾಚಕ, ಗುಣವಾಚಕ, ಪಾರಿಭಾಷಿಕ ಪದಗಳು, ಕೃದಂತ, ತದ್ಧಿತಾಂತ, ಸಮಾಸಗಳು, ಧಾತುಗಳ ಸಾಧಿತರೂಪಗಳಲ್ಲಿ ಹೆಚ್ಚಾಗಿ ಕಾಣಬಹುದು. ಅವುಗಳನ್ನು **'ತತ್ಸಮಶಬ್ದ'**ಗಳು, **'ತದ್ಭವಶಬ್ದ'**ಗಳೆಂದು ಸ್ಥೂಲವಾಗಿ ವಿಂಗಡಿಸಬಹುದು.

೧. ತತ್ಸಮಗಳು : ಸಂಸ್ಕೃತದಿಂದ ನೇರವಾಗಿಬಂದು ಕನ್ನಡದಲ್ಲಿ ಬಳಕೆಯಾಗಿರುವ ಶಬ್ದಗಳು **'ತತ್ಸಮ'**(೧) ಗಳೆನಿಸುತ್ತವೆ. ಉದಾ : ಸತ್ಯ, ಶಾಂತಿ, ಸೂರ್ಯ, ಚಂದ್ರ, ಭಾಷಾ, ಹರ್ಷ ಇತ್ಯಾದಿಗಳು. ಇವುಗಳು ರೂಪದಲ್ಲಿ ಕನ್ನಡದಲ್ಲೂ ಸಂಸ್ಕೃತದಲ್ಲೂ ಸಮಾನವಾಗಿರುತ್ತವೆ. (ಇಂದು **ಯಾವುದೇ ಭಾಷೆಯ ಶಬ್ದಗಳಾಗಲಿ ವಿಕಾರ ಹೊಂದದೆ ನೇರವಾಗಿ ಕನ್ನಡದಲ್ಲಿ ಬಂದು ಸೇರುವ ಶಬ್ದಗಳಿಗೆ 'ತತ್ಸಮ'**ವೆಂದು ಹೆಸರಿಸುವುದು ಸೂಕ್ತ) 'ಇಂಗ್ಲೀಷ್' ಅನ್ಯಭಾಷಾ**ಬೆಡ್**(ಗಳು), **ಬಲ್ಬ್**(ಗಳು), **ಕಪ್ಪು**(ಗಳು) ಇತ್ಯಾದಿ.

---

೧) ಕೇಶಿರಾಜನು ತನ್ನಕಾಲದ ಮಣಿ, ಮಂಚ, ಪಟ್ಟ, ತೋರಣ ಇತ್ಯಾದಿ ೨೧ ಶಬ್ದಗಳನ್ನು ಮಾತ್ರ 'ತತ್ಸಮ' ಗಳೆಂದು ಕರೆದಿದ್ದಾನೆ. ಈ ಸಂಸ್ಕೃತ ಶಬ್ದಗಳೊಂದಿಗೆ ಕನ್ನಡ ಶಬ್ದಗಳನ್ನು ಸೇರಿಸಿ ಸಮಾಸ ಮಾಡಬಹುದೆಂದು ಹೇಳಿದ್ದಾನೆ. ಹಾಗೆಯೇ ಅಂತ್ಯದಲ್ಲಿ ಅಲ್ಪವಿಕಾರವನ್ನು ಹೊಂದುವ ಸಂಸ್ಕೃತಶಬ್ದಗಳನ್ನು 'ಸಮಸಂಸ್ಕೃತ' ಗಳೆಂದು ಕರೆದಿದ್ದಾನೆ. ಇಂದು ಇವೆಲ್ಲವನ್ನು ಬೇರೆಯೆಂದು ಗ್ರಹಿಸುವ ಅಗತ್ಯವಿಲ್ಲ. ಇವುಗಳೆಲ್ಲವನ್ನೂ ತದ್ಭವಗಳೆಂದು ತಿಳಿಯಲಾಗುತ್ತಿದೆ.

ಮುನ್ಸೀಫ್(ಗಳು), **ಬಾಬು**ಗಳು, **ದುಖಾನು**+ಗಳು, **ಮುತ್ಸದ್ದಿ** (ಗಳು) (ಅರೇಬಿಕ್) ಇತ್ಯಾದಿ.

೨. ತದ್ಭವಗಳು: (ವ್ಯತ್ಯಾಸ ಹೊಂದಿದಶಬ್ದಗಳು) ಸಂಸ್ಕೃತ, ಇತರ ಅನ್ಯಭಾಷೆಯ ಶಬ್ದಗಳು ಕನ್ನಡಕ್ಕೆ ಬರುವಾಗ ಅಲ್ಪ ಅಥವಾ ಪೂರ್ಣವ್ಯತ್ಯಾಸವನ್ನಾಗಲಿ ಹೊಂದಿ ಬರುತ್ತವೆ. ಇವು **'ತದ್ಭವ'**ಗಳೆನಿಸುತ್ತವೆ. ಇವುಗಳಲ್ಲಿ ಕೆಲವು ಶಬ್ದಗಳು ಪ್ರಾಕೃತಜನ್ಯವಾದವುಗಳಾಗಿವೆ. (ಇವುಗಳನ್ನು ಹಿಂದೆ **ಅಪಭ್ರಂಶ**ಗಳೆಂದು ಕರೆಯಲಾಗುತ್ತಿತ್ತು). ಉದಾ: ಅಜ್ಜ - (ಆರ್ಯ), ಚಂದಿರ-(ಚಂದ್ರ), ಮಿಗ-(ಮೃಗ), ಕನ್ನಡ-ಕರ್ಣಾಟ ಇತ್ಯಾದಿ.

ಈ ರೀತಿ ವ್ಯತ್ಯಾಸವಾಗಲು ಕಾರಣ : ಅಲ್ಪಶ್ರಮ, ಅಜ್ಞಾನ, ಶೀಘ್ರೋಚ್ಚಾರಣೆ, ಆವೇಶ, ದೇಶ, ಕಾಲ, ಪರಿಸರಗಳು, ಲಿಪಿಯ ಅಪೂರ್ಣತೆಗಳು ಕಾರಣವಾಗುತ್ತವೆ. ಹೀಗೆಂದು **ಹಳ ಗನ್ನಡ ರೂಪಗಳನ್ನಾಗಲಿ, ಗ್ರಾಮ್ಯರೂಪಗಳ**ನ್ನಾಗಲಿ **ತದ್ಭವ**ಗಳೆಂದು ತಿಳಿಯಲಾಗದು.

ಉದಾ: ೧) ಹಳಗನ್ನಡದ ವ್ಯಂಜನಾಂತಗಳು ಸ್ವರಾಂತಗಳಾಗುತ್ತವೆ: (**ಇವು ತದ್ಭವಗಳಲ್ಲ**) ಅಲರ್-ಅಲರು, ಬೆರಳ್-ಬೆರಳು, ಪೊನ್-ಪೊನ್ನು.

೨) ಲ/ ೞ ಗಳು-**'ಳ'** ಕಾರವಾಗುತ್ತವೆ. ಹೀಗೆಯೇ 'ಪ' ಕಾರ-**'ಹ'** ಕಾರವಾಗುತ್ತದೆ: ಬೆರಲ್-ಬೆರಳ್=**ಬೆರಳು** ಬಾೞ್=**ಬಾಳು**; ಪೊನ್-ಹೊನ್=**ಹೊನ್ನು**.

೩) ರೇಫದಒತ್ತಕ್ಷರ, ಸಜಾತಿಒತ್ತಕ್ಷರವಾಗುವುದು : ತಿರ್ದು-**ತಿದ್ದು**, ತರ್ಗು-**ತಗ್ಗು**. ಮರ್ದು-**ಮದ್ದು** ಇತ್ಯಾದಿ.

೪) ಅನುಸ್ವಾರಗಳನ್ನು ಕಳೆದುಕೊಂಡರೂಪಗಳು : ಅಡಂಗು-**ಅಡಗು**, ಬೇಂಟೆ-**ಬೇಟೆ** ಬೆಡಂಗು - **ಬೆಡಗು** ಇತ್ಯಾದಿ.

ಹೀಗೆಯೆ ಹಳಗನ್ನಡಗಳನ್ನು ಸಂಸ್ಕೃತ ರೂಪಗಳೆಂದೂ ಭ್ರಮಿಸಬಾರದು. ಆ ಸಂಸ್ಕೃತರೂಪಗಳು ಹಳಗನ್ನಡ ರೂಪವಾಗಿಯೇ ರೂಪಾಂತರ ಹೊಂದಿದಾಗ **'ತದ್ಭವ'**ಗಳೆನಿಸುತ್ತವೆ. ಉದಾ: **ನಿತ್ಯ-ನಿಚ್ಚ, ರಕ್ಷಾ-ರಕ್ಕೆ, ಘೋಷ್ಠಿ-ಗೊಟ್ಟಿ, ತ್ಯಾಗ-ಚಾಗ, ಪ್ರಮಾಣ-ಪವಣ್, ಕಾವ್ಯ - ಕಬ್ಬ, ಕನ್ಯಾ -ಕನ್ನೆ, ವೈದ್ಯ-ಬೆಜ್ಜ** ಇತ್ಯಾದಿ.

ಕನ್ನಡ ಭಾಷೆಯಲ್ಲಿ ಸಂಸ್ಕೃತಶಬ್ದಗಳು ವಿಫುಲವಾಗಿ ಬಳಕೆಯಾಗಿವೆ. ಆ ಸಂಸ್ಕೃತ ಶಬ್ದಗಳ ವರ್ಣಸಂಯೋಜನೆ ಇಷ್ಟೇ ಎಂದುಹೇಳಲಾಗದು. ಅದರ ಅವಶ್ಯಕತೆಯೂ ಇಲ್ಲ. ಕೆಲವು **ಉಪಸರ್ಗನಿಷ್ಪನ್ನರೂಪಗಳ ವಿಚಾರವನ್ನು ತಿಳಿಸುವಾಗ, ವಿರುದ್ಧಾರ್ಥ ಶಬ್ದಗಳನ್ನು ತಿಳಿಸುವಾಗ ಅಗತ್ಯಾಂಶಗಳನ್ನು ತಿಳಿಸಲಾಗಿದೆ.**

ತತ್ಸಮ ರೂಪಗಳನ್ನು ಗುರುತಿಸುವುದು ಹೇಗೆ ? ಅದಕ್ಕೆ ಆ **ಭಾಷೆಯ**

ಶಬ್ದಜ್ಞಾನವಿರಬೇಕು. ಸಾಮಾನ್ಯವಾಗಿ ಅವುಗಳು **ರಚನೆಯಲ್ಲಿ ಬಿಗಿಯಿಂದ ಕೂಡಿ, ತೊಡಕಾಗಿರುತ್ತವೆ.** ತದ್ಭವಗಳು ಸೌಲಭ್ಯಕ್ಕನುಸಾರವಾಗಿ **ಸರಳಗೊಂಡ ರೂಪ**ಗಳಾಗುತ್ತವೆ. ಆ ತತ್ಸಮಗಳನ್ನು ಅಭ್ಯಾಸಕ್ಕೆ ಅನುಕೂಲವಾಗುವಂತೆ ಸ್ಥೂಲವಾಗಿ ಕೆಲವು ನಿಯಮಗಳ ಅಡಿಯಲ್ಲಿ **ವರ್ಗೀಕರಿಸಿ ತಿಳಿಸಲಾಗಿದೆ.** ಕೆಲವು **ಕ್ಲಿಷ್ಟ ರೂಪಗಳ ಅರ್ಥ**ವನ್ನು ಆವರಣದಲ್ಲಿ ಕೊಡಲಾಗಿದೆ. ಕೆಲವೊಮ್ಮೆ ತದ್ಭವಗಳ ಅರ್ಥಕ್ಕಿಂತ ತತ್ಸಮಗಳ **ಅರ್ಥಗಳೇ ಚೆನ್ನಾಗಿ ತಿಳಿಯುತ್ತವೆ.** ಅವುಗಳ **ಅಡಿಗೆರೆ ಎಳೆದು** (-) ಸೂಚಿಸಲಾಗಿದೆ. ಕೆಲವೊಮ್ಮೆ ತತ್ಸಮಗಳು ತದ್ಭವಗಳಾದಾಗ ಅವುಗಳ ಮೂಲಾರ್ಥವನ್ನೇ ಕಳೆದುಕೊಂಡು ಅನ್ಯಾರ್ಥ ಧರಿಸಿರುವುದುಂಟು. ಅಲ್ಲಿ ತಾತ್ಪರ್ಯಾರ್ಥ ಗ್ರಹಿಸಬೇಕಾಗುತ್ತದೆ. ಅವುಗಳತ್ತ ಓದುಗರ ಗಮನ ಸೆಳೆಯಲು **ವಿಶೇಷಗೆರೆ**ಯಿಂದ (↔) ಸೂಚಿಲಾಗಿದೆ. **ಆ ತತ್ಸಮ ರೂಪಗಳನ್ನು ಅಭ್ಯಾಸಕ್ಕೆ ಅನುಕೂಲವಾಗಲು ತದ್ಭವಗಳೊಂದಿಗೆ ಅಕಾರಾದಿಯಲ್ಲಿ ಪಟ್ಟಿಮಾಡಲಾಗಿದೆ:**

ತತ್ಸಮ(ಸಂ)	ತದ್ಭವ (ಕ)	ತತ್ಸಮ(ಸಂ)	ತದ್ಭವ (ಕ)
೧. ಕೆಲವು ತತ್ಸಮ ಶಬ್ದಗಳು ವಿಜಾತಿ ಸಂಯುಕ್ತಾಕ್ಷರಗಳಾಗಿದ್ದು, ತದ್ಭವಗಳಲ್ಲಿ ಸಜಾತಿ ಸಂಯುಕ್ತಗಳಾಗುತ್ತವೆ :-		ಊರ್ಧ್ವ	ಉದ್ದ
		ಕರ್ಕಶ	ಕಕ್ಕಸ (ಅಸಹ್ಯ).
		ಕರ್ಮ	ಕಮ್ಮ (ಕೆಲಸ).
		ಕನ್ಯಾ	ಕನ್ನೆ (ಅವಿವಾಹಿತೆ).
ಅನ್ಯಾಯ	ಅನ್ನೆಯ.	ಕನ್ಯಕಾ	ಕನ್ನಿಕೆ.
ಅಶ್ರದ್ಧೆ	ಅಸಡ್ಡೆ.	ಕರ್ತರಿ	ಕತ್ತರಿ (ಆಯುಧ).
ಅಕ್ಷರ	ಅಕ್ಕರ.		
ಅರ್ಕ	ಎಕ್ಕ.		
ಅಗ್ನಿ	ಅಗ್ಗಿ.	ಕರ್ಪಟ	ಕಪ್ಪಡ (ಬಟ್ಟೆ).
ಅರ್ಘ	ಅಗ್ಗ (ದಾರ).	ಕಸ್ತೂರಿ	ಕತ್ತುರಿ.
ಆರ್ಯ	ಅಜ್ಜ / ಅಯ್ಯ.	ಕರ್ಣಾಟ	ಕನ್ನಡ.
ಇಚ್ಛಾ	ಇಚ್ಚೆ.	ಕಾರ್ಯ	ಕಜ್ಜ.
ಇಷ್ಟಿಕಾ	ಇಟ್ಟಿಗೆ.	ಕಾವ್ಯ	ಕಬ್ಬ.
ಉಚ್ಛ	ಉಚ್ಚ (ಶ್ರೇಷ್ಠ).	ಕಾಷ್ಠ	ಕಡ್ಡಿ.
ಉದ್ಯೋಗ	ಉಜ್ಜುಗ.	ಕುಕ್ಷಿ(೧)(ಹೊಟ್ಟೆ)↔	ಕುಕ್ಕೆ (ಬುಟ್ಟಿ).
ಉದ್ವೇಗ	ಉಬ್ಬೆಗ (ತಳಮಳ).	ಕುಬ್ಜ	ಗುಜ್ಜ (ಕುಳ್ಳ).

೧) ತದ್ಭವೀಕರಣದಿಂದಾಗಿ ಮೂಲಾರ್ಥವನ್ನು ಕಳೆದುಕೊಂಡಿರುವುದಕ್ಕೆ ಚಿಹ್ನೆ. (↔) ಇವುಗಳಲ್ಲಿ ಸಂಸರ್ಗ, ಹೋಲಿಕೆಗಳಿಂದ ಸಾಮ್ಯಾರ್ಥವೆನಿಸುವುದುಂಟು.

ತತ್ಸಮ(ಸಂ)	ತದ್ಭವ (ಕ)	ತತ್ಸಮ(ಸಂ)	ತದ್ಭವ (ಕ)
ಕುಂಕುಮ	ಕುಂಕುವ (ಮಂಗಳವಸ್ತು).	ಪೌರ್ಣಿಮಾ	ಹುಣ್ಣಿಮೆ (ಬೆಳಕಿನರಾತ್ರಿ).
ಕುಸ್ತುಂಬರ	ಕೊತ್ತಂಬರಿ.	ಬ್ರಹ್ಮ	ಬೊಮ್ಮ.
ಕೂರ್ಪಾಸ	ಕುಪ್ಪಸ.	ಭದ್ರ	ಬದ್ದ (ಮಂಗಳ).
ಘೋಷ್ಠಿ	ಗೊಟ್ಟಿ (ಕೂಟ).	ಭಿಕ್ಷಾ	ಬಿಕ್ಕೆ / ಬೈಕ (ತಿರಿ).
ಚರ್ಮ -	ಚಮ್ಮ / ಸಮ್ಮ.	ಬಿಲ್ವಪತ್ರ	ಬೆಲ್ಲವತ್ತ.
ಚರ್ಮಪಟ್ಟಿಕೆ	ಚಮ್ಮಟಿಗೆ (ಸುತ್ತಿಗೆ).	ಮಾರ್ಜನ	ಮಜ್ಜನ (ತೊಳೆ).
ಚಿಕಿತ್ಸೆ	ಚಿಕಿಚ್ಚೆ.	ಮಾನ್ಯ	ಮನ್ನೆ (ಗೌರವಸ್ಥ).
ಚಿತ್ರ	ಚಿತ್ತಾರ (ಬಣ್ಣದ ರೇಖೆ).	ಮೃತ್ಯು	- ಮಿಳ್ತು / ಮಿತ್ತು (ಸಾವು).
ಛತ್ರಿಕಾ	ಸತ್ತಿಗೆ (ಛತ್ರಿ).	ಮುಕ್ತಾ	ಮುತ್ತು
ಚೂರ್ಣ	ಸುಣ್ಣ (ತಾಂಬೂಲವಸ್ತು).	ಯಜ್ಞ	ಜನ್ನ.
ಜ್ಯೋತ್ಸ್ನಾ	ಜೊನ್ನ (ಬೆಳದಿಂಗಳು).	ರತ್ನ	ರನ್ನ / ರತುನ.
ತೀಕ್ಷ್ಣ	ತಿಕ್ಕ (ಚುರುಕು).	ರಾಕ್ಷಸ	ರಕ್ಕಸ.
ತ್ರಿಗುಣ	ತಿಗುಣ.	ರಕ್ಷಾ	ರಕ್ಕೆ.
ದೃಷ್ಟಿ	ದಿಟ್ಟಿ.	ಲಕ್ಷಣ	ಲಕ್ಕಣ / ಲಚ್ಚಣ.
ಧರ್ಮ	ದಮ್ಮ.	ಲಕ್ಷ	ಲಕ್ಕ.
ತಥ್ಯ	ತತ್ತ (ಸತ್ಯ).	ಲಕ್ಷ್ಮೀ	ಲಕುಮಿ, ಲಚ್ಚಿ / ಲಕ್ಕಿ.
ನರ್ತಕಿ	ನಚ್ಚಣಿ.	ಲೇಪ್ಯ	ಲೆಪ್ಪ (ಅಂಟು).
ನಿಶ್ಚಲ	ನಿಚ್ಚಳ.	ವರ್ಧಮಾನ↔ಬದ್ಧವಣ (ಏಳ್ಗೆಹೊಂದು).	
ನಿದ್ರಾ	ನಿದ್ದೆ / ನಿದ್ರೆ.	ವಜ್ರ	ಬಜ್ಜರ.
ನಿತ್ಯ	ನಿಚ್ಚ.	ವತ್ಸಲಾ	ಬಚ್ಚಳಿ.
ನಿಷ್ಠಾ	ನಿಷ್ಠೆ / ನಿಟ್ಟೆ.	ವಿಸ್ತಾರ	ಬಿತ್ತರ.
ಪಕ್ಷ	ಪಕ್ಕ.	ವೃದ್ಧ	ವಡ್ಡ.
ಪರೀಕ್ಷಾ	ಪರೀಕ್ಷೆ / ಪರಿಕೆ.	ವೃದ್ಧಿ	ಬಡ್ಡಿ (ಅಧಿಕ).
ಪಕ್ಷರಕ್ಷಾ	ಪಕ್ಕರಕ್ಕೆ (ಧಡಿ).	ವ್ಯಾಖ್ಯಾನ	ವಕ್ಕಣೆ (ವಿವರಣೆ).
ಪಕ್ಷಿ (ನ್)	ಹಕ್ಕಿ.	ವ್ಯಾಘ್ರ	ಬಗ್ಗ (ಹುಲಿ).
ಪರ್ವ	ಹಬ್ಬ.	ವಿದ್ಯ	ಬಿಜ್ಜೆ.
ಪುತ್ರಿಕಾ	ಪುತ್ಥಳಿ (ಬೊಂಬೆ).	ವೈದ್ಯ	ಬೆಜ್ಜ.
ಪ್ರಗ್ರಹ	ಹಗ್ಗ.	ವಿಜ್ಞಾನ	ಬಿನ್ನಣ/ ಬಿನ್ನಾಣ
ಪ್ರಜ್ವಲ	ಪಜ್ಜಳ (ಅತಿಬೆಳಕು).	ಶಿಲ್ಪಿಕ	ಚಿಪ್ಪಿಗ(ಕರಕುಶಲ ಕರ್ಮಿ).
ಪ್ರತಿಷ್ಠಾ	ಪಡಿಟೆ (ಮೊಪ್ಪಸ್ತಿಕೆ).		
ಪುಸ್ತಕ	ಹೊತ್ತಗೆ/ ಪೊತ್ತಗೆ.		

ತತ್ಸಮ(ಸಂ)	ತದ್ಭವ (ಕ)
ಶೂನ್ಯ	ಸೊನ್ನ /ಸುನ್ನೆ.
ಶ್ರೇಷ್ಠಿ	ಶೆಟ್ಟಿ (ವ್ಯಾಪಾರಿ).
ಸಂಸ್ಕೃತ	ಸಕ್ಕದ.
ಸಂಜ್ಞಾ (ಹೆಸರು)↔	ಸನ್ನೆ (ಅಂಗಚೇಷ್ಟೆ).
ಸೂತ್ರಿಕಾ	ಸುತ್ತಿಗೆ.
ಸ್ವರ್ಗ	ಸಗ್ಗ.
ಸಲ್ಪಲ	ಸಪ್ಪಳ (ಶಬ್ದ).
ಸಪ್ತ (ಸಂಖ್ಯೆ)↔	ಸತ್ತ (ಸಾವು).
ಹವ್ಯ (ಯಜ್ಞ)[೧]↔	ಹಬ್ಬ /(ಧಾ.ನಡವಳಿಕೆ).

೨. ತತ್ಸಮಗಳು ದ್ವಿತ್ವವನ್ನು ಕಳೆದುಕೊಂಡು ತದ್ಭವಗಳಾಗುವುದು:

ಅವಸ್ಥೆ	ಅವತೆ.
ಅರ್ಹ	ಅರುಹ.
ಅರ್ಗಲ	ಅಗುಳಿ (ತಡೆಗೋಲು).
ಅಂಗುಷ್ಠ	ಉಂಗುಟ (ಕಾ.ಹೆಬ್ಬೆರಳು).
ಆಲಸ್ಯ	ಆಲಸ.
ಆಜ್ಞಾ (ವಿಧಿ)↔	ಆಣೆ (ಪ್ರಮಾಣ).
ಆಜ್ಞಪ್ತಿ	ಆಣತಿ (ಅಪ್ಪಣೆ ಮಾಡು).
ಕ್ರಕಚ	ಗರಗಸ(ರಂಪ -ಆಯುಧ).
ಕ್ಷಣ	ಕಣ / ಚಣ (ಕಾಲ).
ಕ್ಷಪಣ	ಸವಣ (ಜೈನ ಸಂನ್ಯಾಸಿ).
ಕ್ಷಾರ	ಕಾರ (ನಾಲಿಗೆಗೆ ರುಚಿ).
ಕ್ರೇಣಿ	ಕೇಣಿ (ವ್ಯಾಪಾರ).
ಕ್ಷೀರ[೧] ↔	ಕೀರ (ಹಾಲು).
ಕೀರ್ತಿ	ಕೀರುತಿ.
ಕುಬ್ಜೆ	ಕುಬುಜೆ (ಕುಳ್ಳಿ).
ಕ್ರೂರ	ಕೂರ (ಕಠಿನ).

ತತ್ಸಮ(ಸಂ)	ತದ್ಭವ (ಕ)
ಸ್ಫಿಕ್ಕಾ	ಹಿಕ್ಕೆ (ಆಡಿನಮಲ).
ಸಾಕ್ಷಿ	ಸಕ್ಕಿ.
ಸೃಷ್ಟಿ	ಸುಟ್ಟಿ.
ಶರ್ವ	ಸಬ್ಬ / ಶಿವ.
ಸುರಪರ್ಣೀ	ಸುರಹೊನ್ನೆ.
ಶ್ರದ್ಧಾ	ಸಡ್ಡೆ.
ಶಿಲ್ಪಿಕ	ಚಿಪ್ಪಿಗ.
ಹಸ್ತ ↔	ಹತ್ತ (ಕೈ / ನಕ್ಷತ್ರ).
ಕೂಷ್ಮಾಂಡ	ಕುಂಬಳ.
ಕ್ರೌಂಚ	ಕೊಂಚೆ (ಪಕ್ಷಿ).
ಗವ್ಯೂತ	ಗಾವುದ (೬ ಮೈಲಿ).
ಗ್ರಹ(ನವಗ್ರಹ)↔	ಗರ (ವಿಷ)
ಗ್ರಹಣ	ಗರಣ.
ಗ್ರಾಮೀಣ	ಗಾವಿಲ (ವಿದ್ಯೆಯಿಂದ ವಂಚಿತ).
ಚಂದ್ರ	ಚಂದಿರ.
ಚತುರ್ವೇದಿ	ಚೌವೇದಿ(೪ ವೇದಬಲ್ಲವ)
ಚತುಷ್ಕ	ಚೌಕ (ನಾಲ್ಕು-ವಸ್ತು, ದಾರಿ ಕೂಡಿದ್ದು).
ಚತುರ್ಥೀ	ಚೌತಿ (೪ನೆಯ ತಿಥಿ).
ಜ್ವರ	ಜರ.
ಜನ್ಮ	ಜನುಮ.
ಜ್ಯೋತಿಷ್ಕ	ಜೋಯಿಸ (ಗ್ರಹಗತಿ ಹೇಳುವವ).
ತಪಸ್ವಿನ್	ತವಸಿ/ (ತಪಸ್ವಿ).
ತ್ವರಿತ	ತುರಿಹ (ಜಾಗ್ರತ).
ತ್ಯಾಗ	ಚಾಗ.
ತ್ರಿಪದಿ	ತಿವದಿ (೩ ಪಾದವುಳ್ಳದ್ದು)
ತ್ರಿಶೂಲ	ತಿಸುಳ (೩ ಬಾಯಿಯ

೧. ಇಲ್ಲಿ ತಾತ್ಪರ್ಯಾರ್ಥ ಗ್ರಹಿಸಿದರೆ ವ್ಯತ್ಯಾಸವಿಲ್ಲ.

ತತ್ಸಮ(ಸಂ)	ತದ್ಭವ (ಕ)
	ಆಯುಧ).
ತಂತ್ರಿ	ತಂತಿ
ದ್ವಿಗುಣ	ದುಗುಣ (೨ ಪಟ್ಟು).
ದ್ವಿತೀಯಾ	ಬಿದಿಗೆ (ತಿಥಿಯ೨ನೆಯ ದಿನ).
ದ್ವೀಪ	ದೀವ (ನಡುಗಡ್ಡೆ).
ಧ್ವನಿ	ದನಿ
ದಂಷ್ಟ್ರಾ	ದಾಡೆ (ಕೋರೆಹಲ್ಲು).
ದ್ರೋಣೀ	ದೋಣಿ (ನಾವೆ).
ದ್ಯೂತ	ಜೂಜು (ಪಗಡೆ).
ನ್ಯಾಯ	ನಾಯ (ತೀರ್ಪು).
ನಿರೀಕ್ಷಿಸು	ನಿರುಕಿಸು (ಕಾಯುವುದು).
ಪದ್ಮ	ಪದುಮ.
ಪತಿವ್ರತೆ	ಹದಿಬದೆ.
ಪರೀಕ್ಷಿಸು	ಪರಿಕಿಸು.
ಪ್ರತಿ	ಪಡಿ (ಸಮಾನವಾದ್ದು).
ಪ್ರಣವ	ಪಣವ (ಓಂಕಾರ).
ಪ್ರಸಾದ	ಹಸಾದ (ಅನುಗ್ರಹ).
ಪ್ರಸರ	ಪಸಾರ (ಹರಡು).
ಪ್ರಣತಿ	ಹಣತಿ (ದೀಪ).
ಪ್ರಣತೆ	ಹಣತೆ
ಪ್ರತಿಷ್ಠೆ	ಹದಿಟೆ (ದೊಡ್ಡತನ).
ಪ್ರತೀಹಾರ	ಪಡಿಯರ (ದ್ವಾರಪಾಲಕ)
ಪ್ರಲಾಪಿಸು	ಪಳಯಿಸು/ ವಿಲಪಿಸು.
ಪ್ರಲಯ	ವಿಳಯ.
ಪ್ರಕರಣ	ಹಗರಣ.
ಪ್ರಯಾಣ	ಪಯಣ.
ಪ್ರವಾಲ	ಹವಳ (ಅಮೂಲ್ಯವಸ್ತು)
ಪ್ರಸಾಧನ	ಪಸದನ (ಅಲಂಕಾರ).
ಪ್ರಾಯ	ಹರಯ (ಯೌವನ).
ಪ್ರಾಣ	ಹರಣ.
ಪ್ರಭಾ (ಕಿರಣ) ↔	ಹಬೆ (ಆವಿ).

ತತ್ಸಮ(ಸಂ)	ತದ್ಭವ (ಕ)
ಪ್ರತಿಮಾ	ಪ್ರತಿಮೆ (ಕೆತ್ತನೆಮೂರ್ತಿ).
ಪ್ರಮಾಣ	ಹವಣು (ಮಿತಿ).
ಭಕ್ತಿ	ಬಕುತಿ.
ಮರ್ಕಟ	ಮಕ್ಕಡ (ಕೋತಿ).
ಮಾಣಿಕ್ಯ	ಮಾಣಿಕ.
ಮುಕ್ತಿ	ಮುಕುತಿ (ಬಿಡುಗಡೆ).
ಮುಗ್ಧ	ಮುಗುದ.
ಮೂರ್ತಿ	ಮೂರುತಿ (ವಿಗ್ರಹ).
ಯತ್ನ	ಯತನ/ ಜತನ.
ಯುಗ್ಮ	ಜುಗುಮ (ಜೋಡಿ).
ಯುಕ್ತಿ	ಯುಕುತಿ (ಕೌಶಲ್ಯ).
ರಕ್ತ	ರಕುತ.
ವರ್ಷ	ವರುಷ/ಬರಿಸ.
ವರ್ದ್ಧಕಿ	ಬಡಗಿ (ಮರಗೆಲಸದವ)
ವ್ಯವಹಾರ	ಬೇಹಾರ.
ವ್ಯಾಕುಲ	ಬಾಗುಳ (ಕಳವಳ).
ವ್ಯಾಕರಣ	ಬಾಗರಣ.
ವ್ಯಾಧ	ಬಿಯದ (ಬೇಡ).
ವ್ಯಾಜ	ವಾಯ (ನೆಪ).
ವ್ಯವಹಾರ	ಬೇಹಾರ.
ವ್ಯಾಸಂಗ	ಬಿಯಸಂಗ.
ವಿರಕ್ತಿ	ವಿರತಿ (ವೈರಾಗ್ಯ).
ಶ್ಮಶಾನ	ಮಸಣ.
ಶಬ್ದ	ಸಬುದ
ಶ್ರವಣ	ಸವಣ (ಜೈನಯತಿ).
ಶುಲ್ಕ	ಸುಂಕ (ತೆರಿಗೆ).
ಶೀರ್ಷಕ	ಸೀಸಕ (ಶಿರಸ್ತ್ರಾಣ).
ಶ್ರೇಯ	ಸೇಯ (ಏಳ್ಗೆ).
ಸ್ತುತಿ	ತುತಿ/ ನುತಿ.
ಸನ್ಮಾನ	ಸನುಮಾನ
ಸಹಸ್ರ	ಸಾವಿರ / ಸಾಸಿರ.

ತತ್ಸಮ(ಸಂ)	ತದ್ಭವ (ಕ)	ತತ್ಸಮ(ಸಂ)	ತದ್ಭವ (ಕ)
ಸಂಸ್ಥಾ ↔ (ಸಂಘಟನೆ).	ಸಂತೆ (ವ್ಯಾಪಾರ ಸ್ಥಳ)	ಸ್ಥಲ ↔	ತಳ.
		ಸಸ್ಯಾ	ಸಸಿ.
ಸ್ಥಾನ	ತಾಣ/ ತಾನ.	ಸ್ಫಟಿಕಾ	ಪಳಿಕು/ಪಳಿಗೆ(ಶಿಲೆ).
ಸ್ವಾಮಿ	ಸಾಮಿ.	ಸ್ನೇಹ	ನೇಹ.
ಸ್ವಾಮಿನಿ	ಸಾನಿ (ಒಡತಿ).	ಸ್ನುಷಾ	ಸೊಸೆ.
ಸ್ಪಂದನ	ಪಂದನ (ಅಲುಗಾಟ).	ಸೂತ್ರಿಕಾ	ಸುತ್ತಿಗೆ (ಸುರುಳಿಸುತ್ತಿದ್ದು).
ಸ್ವೇದ	ಸೇದೆ (ಬೆವರು).	ಸ್ಥೂಲ	ತೋರ (ದಪ್ಪ).
ಸ್ನೇಹ	ನೇಹ	ಸೂರ್ಯ	ಸೂರಿಯ.
ಸ್ತಂಭ	ಕಂಬ.	ಹರ್ಷ	ಹರುಷ.
ಸಂಧ್ಯಾ	ಸಂಜೆ.	ಹಸ್ತವರ್ತಿ	ಹತ್ತೋಟಿ.
ಸ್ವರ	ಸರ (ಶಬ್ದ).		

೩. ತತ್ಸಮಗಳ ಶ, ಷಕಾರಗಳು ಸಕಾರವಾದ ತದ್ಭವಗಳು :

ಅಶೋಕ	ಅಸುಗೆ (ವೃಕ್ಷ).
ಅಂಕುಶ	ಅಂಕುಸ (ಭರ್ಜಿ).
ಆಕಾಶ	ಆಗಸ.
ಋಷಿ	ರಿಸಿ.
ಔಷಧ	ಔಸದ.
ಕಲಶ	ಕಲಸ.
ಚತುರ್ದಶಿ	ಚೌದಸೆ (ತಿಥಿಯ ೧೪ ನೆಯ ದಿನ).
ದ್ವಾದಶಿ	ಬಾರಸೆ (ತಿಥಿಯ ೧೨ ನೆಯ ದಿನ).
ತ್ರಯೋದಶಿ	ತೇರಸೆ (ತಿಥಿಯ ೧೩ ನೆಯ ದಿನ).
ದಿಶಾ	ದಿಸೆ.
ದಿಶಾಬಲಿ	ದೆಸೆವಲಿ (ದಿಕ್ಕಿಗೆ ಬಲಿ)
ಪಶು	ಪಸು.
ಪರಶು	ಪರಸು (ಕೊಡಲಿ).
ಪಾಶ	ಪಾಸ (ಹಗ್ಗ).
ಪಾಷಾಣ(ಕಲ್ಲು) ↔	ಪಾಸಾನ (ವಿಷ).

ಭಾಷಾ	ಭಾಸೆ.
ಮಷಿ	ಮಸಿ (ಕಪ್ಪು ಬಣ್ಣ).
ರಾಶಿ	ರಾಸಿ.
ವಶ	ಬಸ.
ವೃಷಭ	ಬಸವ.
ವೇಷ	ವೇಸ.
ವೈಶಿಕ	ವೈಸಿಕ (ಮೋಸ).
ವಿಷ	ವಿಸ.
ಶಂಕಾ ↔	ಸಂಕೆ.
ಶವ	ಸವ.
ಶರಣ	ಸರಣ.
ಶರಣು	ಸರಣು.
ಶಶಿ	ಸಸಿ (ಚಂದ್ರ).
ಶಿಶು	ಸಿಸು (ಹಸುಗೂಸು).
ಶಾಂತಿ	ಸಾಂತಿ.
ಶುದ್ಧ	ಸುದ್ದ.
ಶುಚಿ	ಸುಚಿ.
ಶುಂಠಿ	ಸುಂಟಿ (ಸಾಂಬಾರು -ಪದಾರ್ಥ).

ತತ್ಸಮ(ಸಂ)	ತದ್ಭವ (ಕ)	ತತ್ಸಮ(ಸಂ)	ತದ್ಭವ (ಕ)
ಶುಂಡಾ	ಸೊಂಡೆ (ಆನೆ)	ಶಿಖಾ	ಸಿಕೆ (ತಲೆಜುಟ್ಟು).
ಶುನಕ	ಸೊಣಗ (ನಾಯಿ).	ಶೃಂಖಲಾ	ಸಂಕಲೆ (ಸರಪಳಿ).
ಶೂಲ	ಸೂಲ.	ಶೇಷಾ	ಸೇಸೆ (ಅಕ್ಷತೆ).
ಶಿರ	ಸಿರ (ತಲೆ).	ಶೇಷ	ಸೇಸ (ಸರ್ಪರಾಜ).
ಶಾಣ	ಸಾಣೆ (ತೀಡುಗಲ್ಲು).	ಶೃಂಗಾರ	ಸಿಂಗಾರ / ಸಿಂಗರ.
ಶಿರಾ ↔	ಸೆರೆ (ರಕ್ತನಾಳ).	ಸಂತೋಷ	ಸಂತಸ.
ಶಯ್ಯಾ	ಸಜ್ಜೆ (ಹಾಸಿಗೆ).		
ಶಿಲಾ	ಸಿಲೆ.		

೪. ಅಲ್ಪಪ್ರಾಣಾಕ್ಷರಗಳಲ್ಲಿ ಕ-ಗ, ಚ-ಜ, ಟ-ಡ, ತ-ದ ಬದಲಾವಣೆ ಹೊಂದಿದ ತದ್ಭವ:

ಅಚ್ಚಮಲ್ಲಿಕಾ	ಅಚ್ಚಮಲ್ಲಿಗೆ.	ಚತುರ್ಥೀ	ಚೌತಿ(ಪಕ್ಷದ ೪ನೆಯದಿನ
ಅಟವಿ	ಅಡವಿ.	ಜೀರಿಕೆ	ಜೀರಿಗೆ (ಸಾಂಬಾರು ಕಾಳು).
ಆಟರೂಷ	ಆಡುಸೋಗೆ (ಗಿಡಭೇದ)	ತಟೀ	ತಡಿ / ದಡ.
ಆಕಾಶ	ಆಗಸ.	ದುಕೂಲ	ದುಗುಲ (ರೇಷ್ಮೆಬಟ್ಟೆ).
ಕಟಕ	ಕಡಗ (ಬಳೆ).	ದೂತೀ	ದೂದಿ (ಸೇವಕಿ).
ಕಪಟ	ಕವಡು (ಮೋಸ).	ದೀಪಿಕಾ	ದೀವಿಗೆ (ಜ್ಯೋತಿ).
ಕೃತಕ	ಗತಕ- (ಮೋಸ).	ದೇವಕುಲ	ದೇಗುಲ (ದೇವಾಲಯ).
ಕಾಕ	ಕಾಗೆ.	ಪತ್ತನ	ಪಟ್ಟಣ
ಕಾಚ ↔	ಗಾಜು.	ಪಾಟಲ	ಪಾದರಿ (ಪುಷ್ಪ).
ಕುದ್ದಾಲ	ಗುದ್ದಲಿ.	ಡಮರುಕ	ಡಮರುಗ.
ಕೋಟೆ	ಗೋಡೆ.	ಫಲಕ	ಹಲಗೆ.
ಕುಟೀ(ರ)	ಗುಡಿ (ಗುಡಿಸಲು).	ಮಂಡಕ	ಮಂಡಿಗೆ (ತಿನಿಸು).
ಘಟ	ಗಡ (ಕೊಡ).	ಮಠಿಕಾ	ಮಳಿಗೆ (ಅಂಗಡಿ ಸಾಲು).
ಚತುರಂಗ	ಚದುರಂಗ(ಪಗಡೆ ಆಟ)	ಮೂಕ	ಮೂಗ.
ಚತುರ	ಚದುರ.	ಲೋಕ	ಲೋಗ.
ಚರ್ಮಯಷ್ಟಿಕಾ	ಚಮ್ಮಟಿಗೆ (ಚಾಟಿ) (ರೂಢಿಯಲ್ಲಿ ಕಬ್ಬಿಣದ ಕೊಡತಿ).	ವಾಸುಕಿ	ವಾಸುಗಿ (ಆದಿಶೇಷ).
ಜಟಾ	ಜಡೆ.	ವಿಕಟ	ವಿಗಡ (ವಿಕೃತ).
ಛುರಿಕಾ	ಸುರಿಗೆ (ಸಣ್ಣ ಕತ್ತಿ).	ವ್ಯಥೆ	ಬೆದೆ (ಚಿಂತೆ, ನೋವು).
		ಸೂಚೀ(ನಕ್ಷೆ)	ಸೂಜಿ (ಹೊ.ಸಾಧನ)

೫) ತತ್ಸಮಗಳ ಮಹಾಪ್ರಾಣಾಕ್ಷರ ಅಲ್ಪಪ್ರಾಣಾಕ್ಷರವಾದ ತದ್ಭವಗಳು :

ಅವಸ್ಥೆ	ಅವತೆ.	ಆಷಾಢ	ಆಸಡಿ (ಮಾಸ).
ಅರ್ಘ್ಯ	ಅಗ್ಗ.	ಕಂಠಿಕಾ	ಕಂಟಿಕೆ (ಕತ್ತಿನಸರ).

ತತ್ಸಮ(ಸಂ)	ತದ್ಭವ (ಕ)	ತತ್ಸಮ(ಸಂ)	ತದ್ಭವ (ಕ)
			(ಅಮೂಲ್ಯನಿಧಿ, ಆತುರವಿಲ್ಲದ)
ಕಥಾ	ಕತೆ.	ನಿಧಿ	ನಿದಿ (ಸಂಪತ್ತು).
ಕುಸುಂಭ	ಕುಸುಬೆ (ಎಣ್ಣೆಬೀಜ).	ಪಥ	ಪತ (ಮಾರ್ಗ).
ಕುಠಾರ	ಕೊಡಲಿ.	ಫಾಲ	ಪಾಲ (ಹಣೆ).
ಗಂಧ	ಗಂದ.	ಬಂಧೂಕ	ಬಂದುಗೆ (ತುಪಾಕಿ).
ಖನಿ	ಕಣಿ (ನೆಲೆ).	ಭಯ	ಬಯ.
ಘಟಿಕಾ	ಗಡಿಗೆ.	ಬಂಧಿನ್	ಬಂದಿ (ಸೆರೆ).
ಘನ	ಗನ (ಅತಿಶಯ).	ಭೂತಿ	ಬೂದಿ (ಭಸ್ಮ).
ಘಂಟಾ	ಗಂಟೆ.	ಭುಕ್ತಿ	ಬುತ್ತಿ (ತಿನಿಸು).
ಘೂಕ	ಗೂಗೆ (ಗೂಬೆ).	ಭಂಗಾರ	ಬಂಗಾರ (ಚಿನ್ನ).
ಘೋಷಣ	ಗೋಸಣೆ.	ಮಠ ↔	ಮಡ (ಮನೆ). (ವಿದ್ಯಾರ್ಥಿನೆಲೆ)
ಘೋಷ್ಠಿ	ಗೊಟ್ಟಿ (ಆಸಕ್ತರ ಮೇಳ)	ಮುಖ	ಮೊಗ.
ಗ್ರಂಥಿ	ಗಂಟು.	ರೂಢಿ	ರೂಡಿ (ಅಭ್ಯಾಸ).
ಗೋಧೂಮ	ಗೋದುವೆ.	ಲಘು	ಲಗು (ಅಲ್ಪ).
ಗೂಢಾಗಾರ	ಗೂಡಾರ (ನೆಲೆ).	ವಿಧಿ	ಬಿದಿ (ಬ್ರಹ್ಮ).
ಛಂದ(ಲಯಯುತ)↔	ಚಂದ (ಸುಂದರ)	ವೀಥಿ	ಬೀದಿ (ರಸ್ತೆ).
ಛವಿ	ಚವಿ (ಕಾಂತಿ).	ವೈಶಾಖ	ಬೇಸಗೆ.
ಛಾಂದಸ	ಚಾಂದಸ (ಛಂದ ರಚಿಸಿದವ).	ಶ್ರೀಖಂಡ	ಸಿರಿಗಂಧ (ಶ್ರೀಗಂಧ).
ಠಕ್ಕ	ಟಕ್ಕ (ಮೋಸಗಾರ).	ಸುಧಾ	ಸೊದೆ (ಅಮೃತ).
ಧನ (ಹಣ)↔	ದನ (ರಾಸು).	ಸಂಘ ↔	ಸಂಗ (ಗುಂಪು-ಜೊತೆ).
ನಿಧಾನ ↔	ನಿದಾನ.		
ಹಠ	ಹಟ (ಮೊಂಡು).		

೬. ತತ್ಸಮಗಳ 'ಯ' ಕಾರ 'ಜ' ಕಾರವಾದ ತದ್ಭವಗಳು :

ಉದ್ಯೋಗ	ಉಜ್ಜುಗ.	ಯತಿ	ಜತಿ.
ಧ್ಯಾನ	ಜಾನ.	ಯತನ	ಜತನ (ತೊಡಗು).
ದ್ಯೂತ	ಜೂದು (ಪಗಡೆ).	ಯಾಮ	ಜಾವ (೩ ಘಂ. ಕಾಲ)
ಯವನಿಕಾ	ಜವನಿಕೆ (ತೆರೆ).	ಯಾತ್ರಾ ↔	ಜಾತ್ರೆ.
ಯಮ	ಜವ (ದಿಕ್ಪಾಲಕ).	ಯುಗ್ಮ	ಜುಗುಮ (ಜೋಡಿ).
ಯಂತ್ರ	ಜಂತ್ರ.	ಯುಕ್ತಿ	ಜುಕ್ತಿ/ ಜುಕುತಿ(ತಂತ್ರ).
ಯಮಲ	ಜವಳ (ಜೋಡಿ).	ಯುದ್ಧ	ಜುದ್ದ.
ಯಮುನ	ಜಮುನ (ನದಿ).	ಯೋಗಿ	ಜೋಗಿ.

ತತ್ಸಮ(ಸಂ)	ತದ್ಭವ (ಕ)	ತತ್ಸಮ(ಸಂ)	ತದ್ಭವ (ಕ)
ಯೋಧ	ಜೋದ (ಸಿಪಾಯಿ).	ರಾಜ	ರಾಯ.
ಯೌವನ	ಜವ್ವನ.	ವ್ಯಾಧಿ	ಬಿಯದಿ (ರೋಗ).
ಸಂಧ್ಯಾ	ಸಂಜೆ.	ವಿದ್ಯಾ	ಬಿಜ್ಜೆ.

೨. ತತ್ಸಮದ 'ಪ' ಕಾರವು 'ಹ' ಕಾರವಾದ ತದ್ಭವಗಳು:

ಅಂತಃಪುರ	ಅಂತಹುರ (ರಾಣಿಯ ನೆಲೆ).	ಪಾದುಕಾ	ಹಾವುಗೆ (ಪಾದರಕ್ಷೆ).
ಗೋಪುರ	ಗೋಹುರ.	ಪಾಶ	ಹಾಸ (ಕಟ್ಟು).
ಪದ	ಹದ (ಸ್ಥಿತಿ).	ಪಿಷ್ಟ	ಹಿಟ್ಟು.
ಪನಸ	ಹನಸು / ಹಲಸು.	ಪಲ್ಯಯನ	ಹಲ್ಲಣ (ಜೀನು).
ಪಶು	ಹಸು.	ಪುಷ್ಕರಿಣಿ	ಹೊಕ್ಕರಿಣಿ (ಸರೋವರ)
ಪ್ರಚ್ಛದ	ಹಚ್ಚಡ (ಹೊದಿಕೆ).	ಪುರ	ಹುರ (ನಗರ).
ಪ್ರಮದ	ಹಮ್ಮದ (ಮೂರ್ಛೆ).	ಪಂಕ್ತಿ	ಹಂತಿ(ಸಾಲುಕಟ್ಟು).
ಪ್ರಣತೆ	ಹಣತೆ (ದೀಪ).	ಪಿಸುಣ	ಹಿಸುಣ (ಚಾಡಿ).
ಪ್ರಕರಣ	ಹಗರಣ (ವಿವಾದ).	ಪೇಟಿಕಾ	ಹೇಳಿಗೆ/ ಪೆಟ್ಟಿಗೆ (ಕುಕ್ಕೆ).
ಪಂಜರ	ಹಂಜರ (ಗೂಡು).	ಪೋಲಿಕಾ(ಕೆ)	ಹೋಳಿಗೆ (ಸಿಹಿಖಾದ್ಯ).

೩ ತತ್ಸಮಗಳ 'ವ' ಕಾರ 'ಬ' ಕಾರವಾದ ತದ್ಭವಗಳು :

ವಸಂತ	ಬಸಂತ	ವಾರ್ತಾ	ಬಾರ್ತೆ (ಸುದ್ದಿ)
ವಂಶ	ಬಂಚ	ವಿಧು	ಬಿದು (ಚಂದ್ರ)
ವಜಾ(ವಜೆ)	ಬಜೆ (ಸಾಂಬಾರ ವಸ್ತು).	ವಿದ್ಯಾ	ಬಿಜ್ಜೆ
ವಂಧ್ಯಾ(ವಂದ್ಯೆ) ↔	ಬಂಜೆ (ಪತಿಹೀನೆ)	ವಿಧಿ	ಬಿದಿ
ವಜ್ರ	ಬಜ್ಜರ/ಬಜ್ರ.	ವಿನೋದ	ಬಿನದ
ವನ	ಬನ.	ವಿಂಧ್ಯ	ಬಿಂಜ
ವಲ್ಲಭ ↔	ಬಲ್ಲಹ (ಒಡೆಯ)	ವಂದಿ ↔	ಬಂದಿ (ಹೊಗಳುವವ)
ವಲ್ಲೀ	ಬಳ್ಳಿ	ವಿಲ	ಬಿಲ (ರಂಧ್ರ)
ವಲಯ	ಬಳೆ	ವಿಷ	ಬಿಸ
ವ್ರತ	ಬ್ರತ (ಆಚಾರ)	ವಿಸ್ತಾರ	ಬಿತ್ತರ (ಹರವು)
ವಶ	ಬಸ	ವೀಥಿ	ಬೀದಿ
ವ್ಯಯ	ಬಿಯ (ನಷ್ಟ)	ವೀರ	ಬೀರ
ವಾಪೀ	ಬಾವಿ (ನೀರಿನ ನೆಲೆ)	ವೀಣೆ	ಬೀಣೆ
ವ್ಯಸನ	ಬೆಸನ (ಚಿಂತೆ)	ವೈರಾಗಿ	ಬೈರಾಗಿ (ಸನ್ಯಾಸಿ)
ವಾಯನ	ಬಾಗಿನ (ಮಂಗಳ ವಸ್ತು)	ವೈಶಾಖ	ಬೇಸಗೆ (ಮಾಸ)

ತತ್ಸಮ(ಸಂ)	ತದ್ಭವ (ಕ)	ತತ್ಸಮ(ಸಂ)	ತದ್ಭವ (ಕ)
ವೈದ್ಯ	ಬೆಜ್ಜ	ಶಿಭಿಕಾ	ಶಿವಿಗೆ (ಪಲ್ಲಕ್ಕಿ)
ವೈರ	ಬೇರ	ದಿಶಾಬಲಿ	ದೆಸೆವಲಿ

೯ ತತ್ಸಮಗಳ ಅಕ್ಷರವನ್ನು ಕಳೆದುಕೊಂಡು ತದ್ಭವವಾಗುವುದು :

ಅಮಾವಾಸ್ಯೆ	ಅಮಾಸೆ (ಕತ್ತಲ ರಾತ್ರಿ).	ಮರುವಕ	ಮರುಗ (ಪುಷ್ಪಜಾತಿ)
ಆಂದೋಲಿಕಾ	ಅಂದಣ (ಪಲ್ಲಕ್ಕಿ).	ಮಯೂರ	-ಮೋರ (ನವಿಲು).
ಉಜ್ಜಯಿನಿ	ಉಜ್ಜನಿ(ಪುರಾತನ ನಗರ).	ಮಹಾದೇವ	ಮಾದೇವ.
ಉದ್ಯೋಗ	ಉಜ್ಜುಗ (ಕೆಲಸ)	ಮಹಾಲಕ್ಷ್ಮೀ	ಮಾಲಕ್ಷ್ಮಿ (ಮಾಲಕುಮಿ).
ಕುಮಾರ	ಕೋರ/ ಕುವರ.	ಮಹಾಪಾತಕ	ಮಾಪಾತಕ.
ಕುಕ್ಕುಟ	ಕೋಳಿ.	ಮಹಿಮೆ	ಮೈಮೆ.
ಕಹಳೆ	ಕಾಳೆ.	ಮೌಕ್ತಿಕ	ಮುತ್ತು.
ಕ್ಷೀರಾಗಾರ	ಕೀಲಾರ.	ವಿಜ್ಞಾಪನಾ	ಬಿನ್ನಃ (ಹಿರಿಯರಲ್ಲಿ ಕೋರಿಕೆ).
ಗಹನ ↔	ಗಾನ (ಸಂಗೀತ).	ಮಹಿಷೀ	ಮೈಸಿ (ರಾಣಿ).
ದೇವಕುಲ	ದೇಗುಲ.	ವಿನಾಯಕ	ಬೆನಕ.
ದೀಪಾವಳಿ	ದೀವಳಿ.	ಸಹಜ	ಸಾಜ.
ದೀಪಪಟ್ಟಿಕಾ	ದೀವಟ್ಟಿಗೆ.	ಸಹದೇವ	ಸಾದೇವ.
ನಾರಾಯಣ	ನಾರಯಣ.	ಸಾಹಸ	ಸಾಸ.
ನಿಯಮ	ನೇಮ.	ಸಹವಾಸಿ	ಸಾವಾಸಿ

೧೦ ತತ್ಸಮಗಳ ಆದಿಯ ಋತ್ವಕ್ಕೆ - ಇತ್ವ, ಉತ್ವಕ್ಕೆ -ಒತ್ವ ಬರುವ ತದ್ಭವಗಳು:-

ಋಷಿ	ರಿಸಿ.	ಕುಂತ	ಕೊಂತ (ಆಯುಧ).
ಋತು	ರಿತು.	ಕುಠಾರ	ಕೊಡಲಿ.
ಋಣ	ರಿಣ.	ತುಳಸಿ	ತೊಳಸಿ (ಆಯು.ಸಸ್ಯ).
ತೃಣ	ತಿಣ (ಅಲ್ಪ).	ಭುಜಂಗ	ಭೊಜಂಗ (ಸರ್ಪ).
ಭೃಂಗಾರ	ಬಂಗಾರ (ಚಿನ್ನದಗಿಂಡಿ)	ಮುಖ	ಮೊಗ.
ಮೃಗ	ಮಿಗ.	ಸುಬಗ	ಸೊಬಗ (ಚೆಲುವ).
ಮೃದು	ಮಿದು / ಮೆದು.	ಸುಖ	ಸೊಗ.
ಮೃತ್ಯು	ಮಿಳ್ತು (ಸಾವು).	ಶುನಕ	ಸೊಣಗ (ನಾಯಿ).
ಹೃದಯ	ಹಿದಯ / ಎರ್ದೆ.		

೧೧ ತತ್ಸಮಗಳ 'ಟ' ವರ್ಗಾಕ್ಷರಗಳು 'ಳ' ಕಾರವಾದ ತದ್ಭವಗಳು :

ಕೂಷ್ಮಾಂಡ	ಕುಂಬಳ.	ಘೋಟಾಯಿಲ	ಘೋಳಾಯಿಲ (ಕುದುರೆ ಸವಾರ).
ಕ್ರೀಡೆ	ಕೇಳಿ.		
ಖಡ್ಗ	ಖಳ್ಗ.	ಧಾಟೀ	ದಾಳಿ.

ತತ್ಸಮ(ಸಂ)	ತದ್ಭವ (ಕ)	ತತ್ಸಮ(ಸಂ)	ತದ್ಭವ (ಕ)
ದಾಡಿಂಬ	ದಾಳಿಂಬ.	ರಘಟಾ	ರಗಳೆ (ಛಂದರೂಪ).
ಪೀಠಿಕಾ(ಕೆ)	ಪೀಳಿಗೆ.	ಸ್ಫಟಿಕ	ಪಳಿಕು (ಕಲ್ಲು).

೧೨ ತತ್ಸಮಗಳ 'ಮ' ಕಾರ 'ವ' ಕಾರವಾದ ತದ್ಭವಗಳು :

ಅಮರೆ	ಅವರೆ.	ಚಮರ	ಚವರಿ (ಮೃಗ).
ಆರಾಮ	ಆರವೆ (ಉದ್ಯಾನ).	ಭ್ರಮಣೆ	ಬವಣೆ (ತಿರುಗು).
ಕಲಮಾ	ಕಳವೆ (ಬತ್ತ).	ತಾಮರೆ	ತಾವರೆ.
ಕಾಮ	ಕಾವ.	ದಶಮೀ	ದಸವೆ.
ಕುಮಾರ	ಕುವರ.	ಭೂಮಿ	ಬುವಿ.
ಕುಮಾರಿ	ಕುವರಿ.	ಭ್ರಮರೀ	ಬವರಿ (ಹೆ.ದುಂಬಿ).
ಕುಂಕುಮ	ಕುಂಕುವ	ಹನುಮಾನ್	ಅಣುವ.
ಗೋಧೂಮಾ	ಗೋದುವೆ.	ರತ್ನಮಣಿ	ರನ್ನವಣಿ.
ಗ್ರಾಮೀಣ	ಗಾವಿಲ.		

೧೩ ತತ್ಸಮಗಳ 'ಲ' ಕಾರಕ್ಕೆ 'ಳ' ಕಾರವಾದ ತದ್ಭವಗಳು :

ಅಮಲ	ಅಮಳ (ಪವಿತ್ರ).	ಕಲಮ	ಕಳವೆ (ಭತ್ತ)
ಅಚಲ	ಅಚಳ (ಪರ್ವತ).	ಗೋಪಾಲ	ಗೋವಳ (ಗೋರಕ್ಷಕ)
ಅನಲ	ಅನಳ (ಬೆಂಕಿ).	ಜಲ	ಜಳ.
ಅಖಿಲ	ಅಖಿಳ (ಸಮಸ್ತ).	ತಿಲ	ತಿಳ (ಎಳ್ಳು).
ಆಂದೋಲನ	ಆಂದೋಳನ (ಪಲ್ಲಕ್ಕಿ).	ಫಲ	ಪಳ (ಹಣ್ಣು).
ಕಮಲ	ಕಮಳ.	ಪ್ರಜ್ವಲ	ಪಜ್ಜಳ.
ಕವಲ ↔	ಕವಳ (ತುತ್ತು).	ಪ್ರಲಾಪ	ಪಳವ (ಅಳು).
ಕಲಶ	ಕಳಸ.	ಭಾಲ	ಭಾಳ (ಹಣೆ).
ಕೋಮಲ	ಕೋವಳ.	ವಿಕಲ(ಹೊರತಾದ)	ವಿಕಳ (ಅಂಗಹೀನ).
ಕಠಿನ	ಕಠಿಣ	ವಿಮಲ	ವಿಮಳ (ಪರಿಶುದ್ಧ).

೧೪ ಮೇಲಿನ ನಿಯಮಗಳಿಗೆ ಭಿನ್ನವಾದ ವಿರಳ ತದ್ಭವ ರೂಪಗಳು :

ಅಂಗಣ	ಅಂಗಳ.	ಕೃಪಣ	ಜಿಪುಣ
ಅಮೃತ	ಅಮರ್ದು.	ಕ್ರೌಂಚ	ಕೊಂಚೆ.
ಅತಸೀ	ಅಗಸೆ/ ಸಿ (ಧಾನ್ಯ).	ಕೌಪೀನ	ಕೋವಣ (ಲಂಗೋಟಿ).
ಇಳಾ	ಇಳೆ (ಭೂಮಿ).	ಕುಹಕ	ಕುಯಕ (ಕಪಟ).
ಉದ್ಧತ	ಉದ್ದಟ (ಗರ್ವಿ).	ಕಂಠಿಕಾ	ಕಂಟಿಕೆ (ಕೊರಳ ಹಾರ)
ಏಕಸರ	ಎಕ್ಕಸರ.	ಕೃಪಾ	ಕೃಪೆ/ ಕುರುಪೆ.
ಕಪಿಲಾ	ಕವಿಲೆ (ಕಪಿಲವರ್ಣದ ಹಸು)	ಕುರಂಟ	ಗೋರಟೆ (ಹೂರಸ).

ತತ್ಸಮ(ಸಂ)	ತದ್ಭವ (ಕ)	ತತ್ಸಮ(ಸಂ)	ತದ್ಭವ (ಕ)
ಗೋಪಾಲ	ಗೋವಳ.	ಮರೀಚ	ಮೆಣಸು (ಸಾಂಬಾರು ಧಾನ್ಯ)
ಗಾಥಾ	ಗಾದೆ/ (ಗಾಹೆ).	ಮದನ	ಮಯಣ (ಮನ್ಮಥ).
ಛುರಿಕಾ(ಕೆ)	ಸುರಿಗೆ (ಸಣ್ಣಕತ್ತಿ).	ಮೌನ	ಮೋನ.
ದಂತ	ಜಂತ (ದಾಡೆ).	ಯುಗಾದಿ	ಉಗಾದಿ (ಹಬ್ಬ).
ತಾಂಬೂಲ	ತಂಬುಲ (ಎಲೆಅಡಿಕೆ).	ಭಾಂಡ	ಭಂಡ (ಪಾತ್ರೆ).
ತ್ರಿಪದಿ	ತಿವದಿ (ಛಂದೋ ಪದ್ಯ).	ಸನ್ನಾಹ	ಸನ್ನಣ (ಸಿದ್ಧತೆ).
ನೂಪುರ	ನೇವುರ (ಕಾಲಂದುಗೆ).	ಸಂದೇಹ	ಸಂದೆಯ.
ಪತ್ತನ	ಪಟ್ಟಣ (ನಗರ).	ಸ್ಥಾನ	ಠಾಣ.
ಪ್ರಾಣಿ	ಪ್ಯಾಣಿ / ಪೇಣಿ?	ಸಂಪುಟಕ	ಸಂಬಳಿಗೆ (ಓಲೆಗರಿ ಮುಚ್ಚಳ).
ಪುತ್ರಿಕಾ(ಕೆ)	ಪುತ್ಥಳಿ (ಪ್ರತಿಮೆ).		
ಫಲ್ಗುಣ	ಪಲುಗುಣ (ಅರ್ಜುನ).	ಚೀರ	ಸೀರೆ
ಪರ್ಯಸ್ತ	ಪಲ್ಲಟ (ಸ್ಥಳಾಂತರ).	ಹಾರ	ಆರ (ಸರ).
ಪುಣ್ಯ	ಪುನ್ನೆ/ ಪುನ್ನೈ	ಹಂಸ	ಅಂಚೆ ಇತ್ಯಾದಿ.
ಭಂಗ	ಬನ್ನ (ನಾಶ)		ಸಂಸ್ಕೃತದ ಕೆಲವು ನಾಮಪ್ರಕೃತಿಗಳು

ಅಂತ್ಯದಲ್ಲಿ **ಅಲ್ಪವ್ಯತ್ಯಾಸ** (ಆದೇಶ, ಲೋಪಗಳಾಗಿ) ಹೊಂದಿ **ಸಮಸಂಸ್ಕೃತ**(೧) (ಕನ್ನಡದಶಬ್ದ)ಗಳೆನಿಸುತ್ತವೆ. ಇವನ್ನೂ **'ತದ್ಭವ'** ಗಳೆಂದು ಪರಿಗಣಿಸಲಾಗುತ್ತಿದೆ. ಅಂತ್ಯದ **ಅಲ್ಪವ್ಯತ್ಯಾಸ**ಗಳು ಕೆಳಕಂಡಂತಿವೆ:

ಸಂಸ್ಕೃತದ ಸ್ವರಾಂತ ನಾಮಪ್ರಕೃತಿಗಳು ಅಲ್ಪವ್ಯತ್ಯಾಸದೊಂದಿಗೆ ತದ್ಭವಗಳೆನಿಸುತ್ತವೆ:

೧) ಸಂಸ್ಕೃತದ **'ಆ'ಕಾರಾಂತ** ಶಬ್ದಗಳು **'ಎ'** ಕಾರಾಂತವಾಗಿ ಕನ್ನಡದಲ್ಲಿ ಬಳಕೆಯಾಗಿವೆ: ಉದಾ : ಉ**ಮಾ**-ಉ**ಮೆ**, ಶಾ**ಲಾ**-ಶಾ**ಲೆ**, ಕರು**ಣಾ**-ಕರು**ಣೆ**, ಗಂ**ಗಾ**-ಗಂ**ಗೆ**, ಭಾ**ಷಾ**-ಭಾ**ಷೆ**, ಕ್ಷ**ಮಾ**-ಕ್ಷ**ಮೆ**, ಮಾತ್ರಾ-ಮಾತ್ರೆ, ಅಕ್ಷ**ತಾ**-ಅಕ್ಷ**ತೆ**, ಸೇ**ನಾ**-ಸೇ**ನೆ**. (ಈ ಮಾದರಿಯಲ್ಲೆ ಪ್ರಯೋಗದಲ್ಲಿ ಬರುವ ಇತರಶಬ್ದಗಳನ್ನು ಗುರುತಿಸಿಕೊಳ್ಳಬಹುದು).

೨) **'ಅ' ಕಾರಾಂತ** ಸಂಸ್ಕೃತಶಬ್ದಗಳು **'ಎ'** ಕಾರಾಂತವಾಗುತ್ತವೆ : ಉದಾ: ಪ್ರ**ಶ್ನ** - ಪ್ರ**ಶ್ನೆ**, ವ**ಧ**-ವ**ಧೆ**, ಶ**ಮ**-ಶ**ಮೆ**, ಉದಾಹರ**ಣ**-ಉದಾಹರ**ಣೆ** ಇತ್ಯಾದಿ.

೩) **'ಈ' ಕಾರಾಂತ** ಸಂಸ್ಕೃತಶಬ್ದಗಳು ಹ್ರಸ್ವ **'ಇ'** ಕಾರಾಂತವಾಗುತ್ತವೆ: ಉದಾ: **ಲಕ್ಷ್ಮೀ-ಲಕ್ಷ್ಮಿ**, **ಗೌರೀ-ಗೌರಿ**, **ಕಾವೇರೀ-ಕಾವೇರಿ**, **ಶಾಸ್ತ್ರೀ-ಶಾಸ್ತ್ರಿ** ಇತ್ಯಾದಿ.

೪) **'ಊ'ಕಾರಾಂತ** ಶಬ್ದಗಳು ಹ್ರಸ್ವ **'ಉ'** ಕಾರಾಂತವಾಗುತ್ತವೆ:
ಉದಾ: ವ**ಧೂ**-ವ**ದು**, ಸರ**ಯೂ**-ಸರ**ಯು** ಇತ್ಯಾದಿ.

೧) ಕೇಶೀರಾಜನು 'ಸಮಸಂಸ್ಕೃತಲಿಂಗ' ಗಳೆಂದು ವಿವರವಾಗಿ ಪ್ರಸ್ತಾಪಿಸಿದ್ದಾನೆ.

೫) **'ಋ'ಕಾರಾಂತ** ಶಬ್ದಗಳು **'ಅ', 'ಅರ'** ಆದೇಶವನ್ನು ಹೊಂದುತ್ತವೆ:
ಉದಾ: **ಕರ್ತೃ - ಕರ್ತ/ ಕರ್ತಾರ**, ಧಾತೃ-ಧಾತ/ ಧಾತಾರ, ಭರ್ತೃ-ಭರ್ತ/ ಭರ್ತಾರ. **'ಮಾತೃ'** ಶಬ್ದ **'ಮಾತ'** ಎಂದಾಗುತ್ತದೆ. **'ಪಿತೃ'** ಶಬ್ದಕ್ಕೆ **'ಅರ'** ಆದೇಶವಾಗಿ=**ಪಿತ, ಪಿತರ** ಎಂಬ ರೂಪಹೊಂದಿ ಕನ್ನಡಶಬ್ದಗಳೆನಿಸಿ ಪ್ರಯೋಗಗಳಾಗಿವೆ.

ಸಂಸ್ಕೃತದ ಕೆಲವುವ್ಯಂಜನಾಂತ ನಾಮರೂಪಗಳು ಅಂತ್ಯವ್ಯತ್ಯಾಸವಾಗಿವೆ:

೧) **ಅಂತ್ಯವಿಸರ್ಗವನ್ನು ಕಳೆದು**ಕೊಂಡು ಕನ್ನಡದಲ್ಲಿ ಪ್ರಯೋಗಗೊಂಡವು:
ಉದಾ: ಶ್ರೀಮಂತಃ-ಶ್ರೀಮಂತ, ಭಗವಂತಃ-ಭಗವಂತ, ವಿದ್ವಾಂಸಃ-ವಿದ್ವಾಂಸ ಇತ್ಯಾದಿ.

೨) ಕೆಲವುಶಬ್ದಗಳು ಅಂತ್ಯಾಕ್ಷರ **ಲೋಪ** ಇಲ್ಲವೆ **ಉಕಾರಾದೇಶ**ವಾಗಿ ಕನ್ನಡಕ್ಕೆ ಬರುತ್ತವೆ:
ಉದಾ: ಶಿರಸ್-ಶಿರ /ಶಿರಸ್ಸು ಎಂಬರೂಪವಿದೆ. ಯಶಸ್-ಯಶ/ ಯಶಸ್ಸು, ಮನಸ್-ಮನ/ ಮನಸ್ಸು, ಪರಿಷತ್-ಪರಿಷತ್ತು/ಪರಿಷದ, ವಿದ್ವತ್-ವಿದ್ವತ್ತು, ದಿಕ್-ದಿಕ್ಕು, ಜಗತ್-ಜಗ/ ಜಗತ್ತು ಇತ್ಯಾದಿ.

೩) ಕೆಲವು ನಾಮಪ್ರಕೃತಿಗಳು **ಅಂತ್ಯಾಕ್ಷರಮಾತ್ರ ಲೋಪವಾಗಿ** ಬಳಕೆಗೊಂಡಿವೆ: ರಾಜನ್-ರಾಜ, ಮರುತ್-ಮರುತ, ಜಗತ್-ಜಗ/ ಜಗದ, ಬ್ರಹ್ಮನ್-ಬ್ರಹ್ಮ ಮಹಿಮನ್-ಮಹಿಮ(ಮೆ), ಘರಿಮನ್-ಘರಿಮ/(ಮೆ) ಇತ್ಯಾದಿ. ಈ ರೀತಿ ಪ್ರಯೋಗವಾಗುವ ಇತರ ಶಬ್ದಗಳನ್ನು ಸಂದರ್ಭಾನುಸಾರ ಗುರುತಿಸಿಕೊಳ್ಳಬೇಕಾಗುತ್ತದೆ.

ಕನ್ನಡ ಭಾಷೆಗೆ ಇಂಗ್ಲೀಷಿನ ಸಂಪರ್ಕದಿಂದಾಗಿ ಆ ಶಬ್ದಗಳು ಬಂದು ಸೇರಿವೆ: ಅವು ಸಹಜವಾಗಿ ಬೆರೆಯಬೇಕು. ಅಸಹಜವಾಗಿ ಇಂಗ್ಲೀಷ್‌ಶಬ್ದಗಳನ್ನು ತುರುಕುವ ಭ್ರಮೆ ತರವಲ್ಲ. **ಈ ಮಾತು ಯಾವುದೇ ಭಾಷೆಯ ಶಬ್ದಕ್ಕೂ ಅನ್ವಯುವಾಗುತ್ತದೆ.** ಹಾಗಾದಾಗ ನಮ್ಮಭಾಷೆಗೆ ಪೂರಕವೂ ಆಯ್ತೆನ್ನಬಹುದು. ನಾವು ನಮ್ಮಅಭಿವ್ಯಕ್ತಿ ಸಾಧನವಾಗಿ ಆಂಗ್ಲಶಬ್ದಗಳನ್ನು ಬಳಸುತ್ತ ಬಂದಿದ್ದೇವೆ. ಮಾತನಾಡುವ ಸಮಯದಲ್ಲಿ ಯಾರೂ ಶಬ್ದಗಳನ್ನು ಆಯ್ದು ಪಟ್ಟಿಮಾಡಿಕೊಂಡು, ಜೋಡಿಸಿ ಮಾತನಾಡುವುದಿಲ್ಲ. ಅಗತ್ಯ ಭಾವನೆಗೆ ಅನುಸಾರವಾದ, ತೋಚಿದ ಶಬ್ದಗಳನ್ನು ಹಿಂದೆಮುಂದೆ ನೋಡದೆ ಬಳಸುತ್ತೇವೆ. ಹೀಗೆ ಇಂಗ್ಲೀಷ್‌ಶಬ್ದಗಳನ್ನು ಬಳಸಿ ಮಾತನಾಡುವುದು ನಾಗರಿಕತೆಯೆಂಬ ಭ್ರಮೆಯಿದೆ. ಹೀಗಾಗಿ ಕನ್ನಡ ಶಬ್ದಗಳನ್ನು ತಳ್ಳಿ, ವಿಫುಲವಾಗಿ ಇಂಗ್ಲೀಷ್‌ಶಬ್ದಗಳು ಕನ್ನಡಭಾಷೆಯಲ್ಲಿ ಬೆರೆತಿವೆ. ಮಡಿವಂತಿಕೆ ಮಾಡದೆ ನಮ್ಮ ಶಬ್ದಭಂಡಾರದಲ್ಲಿ ತುಂಬಿಕೊಳ್ಳಲೇಬೇಕು. ಹೀಗೆಯೇ ಇಂಗ್ಲೀಷ್‌ನಂತೆ,ಅನ್ಯ ಭಾಷಾಶಬ್ದಗಳು ಕನ್ನಡಕ್ಕೆ ಬರುವಾಗ ರೂಪಾಂತರವಾಗಿ ಬರುವುದುಂಟು. ಅವೆಲ್ಲವನ್ನೂ ನಾವು **'ತದ್ಭವ'** ಗಳೆಂದೇ ಪರಿಗಣಿಸಬೇಕಾಗುತ್ತದೆ.

೧) ರೈಲು, ಕೋರ್ಟ್, ಬ್ಯಾಂಕ್, ಬಸ್, ಇತ್ಯಾದಿ **ಇಂಗ್ಲೀಷ್ ಶಬ್ದಗಳು ಅಲ್ಪವ್ಯತ್ಯಾಸವಾಗಿ ಕನ್ನಡಕ್ಕೆ ಬಂದಿವೆ: ಕಂತ್ರಾಟು, ಪಿಟೀಲು, ಗಿಲಾವು ಇವು ಹೆಚ್ಚಿನ**

ವ್ಯತ್ಯಾಸದೊಂದಿಗೆ ಬಂದಿವೆ: ಕಾಫಿ, ಬೇಕರಿ, ಟೀ, ಇತ್ಯಾದಿಗಳು ಇರುವಂತೆಯೆ ಬಳಕೆಗೆ ಬಂದಿವೆ. ಕೆಲವು ಇಂಗ್ಲೀಷ್‌ಶಬ್ದಗಳು ಆ ಭಾಷೆಯ ಜಾಯಮಾನದಲ್ಲಿ ವ್ಯಂಜನಾಂತ ರೂಪಗಳಾಗಿದ್ದು, ಅವು ಕನ್ನಡ ಜಾಯಮಾನಕ್ಕನುಸಾರವಾಗಿ ಸ್ವರಾಂತವಾಗುತ್ತವೆ. ಅವು **'ಉ' ಕಾರಾಂತವಾಗುವುದೇ ಹೆಚ್ಚು. ಅವುಗಳನ್ನು ಒತ್ತಕ್ಷರದಂತೆ ಬಳಸಿ ಭಾರತೀಯ ಭಾಷಾಜಾಯಮಾನಕ್ಕೆ ಹೊಂದಿಸಿಕೊಳ್ಳುವುದು ರೂಢಿಯಲ್ಲಿದೆ.** ಉದಾ:

ಇಂಗ್ಲೀಷ್ -	ಕನ್ನಡ (ತದ್ಭವ)	ಇಂಗ್ಲೀಷ್	- ಕನ್ನಡ (ತದ್ಭವ)
ಸ್ಲೇಟ್	ಸ್ಲೇಟು	ಮಾಸ್ಟರ್	ಮಾಸ್ಟರು/ಮಾಸ್ತರು.
ರೈಲ್	ರೈಲು	ಚೆಕ್	ಚೆಕ್ಕು.
ಕೋರ್ಟ್	ಕೋರ್ಟು	ಜೈಲ್	ಜೈಲು / ಜೇಲು.
ಪ್ಲಾಸ್ಟಿಕ್	ಪ್ಲಾಸ್ಟಿಕು/ ಪ್ಲಾಸ್ಟಿಕ್ಕು	ರೋಡ್	ರೋಡು.
ಬೈಸಿಕಲ್	ಬೈಸೈಕಲ್/ ಬೈಸಿಕಲ್ಲು	ಸ್ಕೇಲ್	ಸ್ಕೇಲು.
ಇಮೇಜ್	ಇಮೇಜು	ಕ್ರಿಕೆಟ್	ಕ್ರಿಕೆಟು.
ಸ್ವಿಚ್	ಸ್ವಿಚ್ಚು	ಏಸು	ಏಸು

೨) ಕೆಲವು ಇಂಗ್ಲೀಷ್ ಶಬ್ದಗಳು ಇರುವಂತೆಯೇ **ಕನ್ನಡಪ್ರತ್ಯಯ ಹೊಂದಿ** ಬರುವುದುಂಟು: ಇಂ+ತದ್ಭವ (ಕನ್ನಡ) ಜಡ್ಜ್+ಜಡ್ಜಿ/ ಜಡ್ಜ್**ಗಳು**, ಬೆಡ್-ಬೆಡ್**ಗಳು**, ವಾರ್ಡ್-ವಾರ್ಡ್**ಗಳು**, ಕಾರ್ಡ್ - ಕಾರ್ಡ್**ಗಳು**, ಕಂಡಕ್ಟರು**ಗಳು**, ಟಿಕೇಟು**ಗಳು**, ಪರ್ಸು**ಗಳು**, ಸ್ಟೇಡಿಯಂ**ಗಳು**, ಬ್ರೆಡ್**ಗಳು**, ಹಾರ್ಸ್**ಗಳು**, ಇತ್ಯಾದಿ.

೩) ಕೆಲವು ಇಂಗ್ಲೀಷ್‌ಶಬ್ದಗಳು ರೂಪಾಂತರವಾಗಿಯೂ ಬರುತ್ತವೆ:
ಪೆನ್ಷನ್(ಇಂ) ಪಿಂಚಣಿ(ಕ), ಹಾಸ್ಪಿಟಲ್(ಇಂ) ಆಸ್ಪತ್ರೆ (ಕ) ಇತ್ಯಾದಿ

೪) ಕೆಲವು ಇಂಗ್ಲೀಷ್ ಪದಗಳು ಕ್ರಿಯಾಪದದಿಂದ ಹುಟ್ಟಿದ **ಐ.ಎನ್.ಜಿ.** ಗಳೆನಿಸುವವು. ಇಂಗ್ಲೀಷ್‌ಪದದ ರೂಪದಲ್ಲಿಯೇ ಅವು ಕನ್ನಡದಲ್ಲಿ ಬಳಕೆಯಲ್ಲಿವೆ:

ಉದಾ : ಪೈಂಟ್-**ಪೈಂಟಿಂಗ್‌ಬ್ರಶ್**, ಬಿಲ್ಡಿಂಗ್-**ಬಿಲ್ಡಿಂಗ್ ಕಂಟ್ರಾಕ್ಟರು**, ಸೇಲಿಂಗ್ - **ಸೇಲಿಂಗ್ ಕ್ಲಾತ್**/ಗರ್ಲ್ಸ್/ಬಾಯ್ಸ್, ಕ್ಲೀನಿಂಗ್ - **ಕ್ಲೀನಿಂಗ್‌ಪೌಡರ್**, ಡ್ರೈವಿಂಗ್- **ಡ್ರೈವಿಂಗ್ ಸ್ಕೂಲ್ಸ್**, ಪ್ರಿಂಟಿಂಗ್-**ಪ್ರಿಂಟಿಂಗ್ ಕಾರ್ಡ್** ಇತ್ಯಾದಿಯಾಗಿ ಬಳಸುತ್ತೇವೆ.

ಇಲ್ಲೆಲ್ಲಾ **ಮೂಲ ಇಂಗ್ಲೀಷ್** ಪದಗಳ **ಉಚ್ಚಾರಣೆ ಅತ್ಯಂತ ಸೂಕ್ತವಾಗಿದ್ದರೆ ಒಳ್ಳೆಯದು**. ಈ ಶಬ್ದಗಳನ್ನು ಕೇವಲ ಲಿಪಿವ್ಯತ್ಯಾಸ ಮಾಡಿ ಬಳಸುವಾಗ **ವರ್ಣ, ಉಚ್ಚಾರ** ವ್ಯತ್ಯಾಸವಾಗುವುದುಂಟು. ಬರವಣಿಗೆಯಲ್ಲಿ ಈ ವಿಚಾರವನ್ನು ಗಮನಿಸಬೇಕಾಗುತ್ತದೆ.

ಈ ರೀತಿಯಲ್ಲಿ ಬಂದ ತದ್ಭವಗಳನ್ನು ಸೇರಿಸಿ ಸಾಧಿತರೂಪಗಳನ್ನೂ ಮಾಡಿಕೊಳ್ಳಲಾಗುತ್ತಿದೆ. ಉದಾ. **ನೋಟುಬುಕ್ಕು**ಗಳು(ಸಮಾಸ), **ಸ್ವಿಚ್ಚುಬಲ್ಬು**ಗಳು,

ಕೇಸುಹಾಕು, ಅರ್ಜಿ ಬರೆ(ಧಾತು), **ಜೋಮ್ಮಿತಹೊಡೆ** (ಮರಾಠಿ), ತರಪೇತುದಾರ (ತದ್ಧಿತ) (ಅರಬಿ). ಈ ಮೇಲ್ಕಂಡ ಭಾಷಾಶಾಸ್ತ್ರದ ವಿಚಾರದ ಹಿನ್ನಲೆಯಲ್ಲಿ ನೋಡಬಹುದು.

೩ **ಅನ್ಯದೇಶೀಯ ಶಬ್ದಗಳು:** ವಿದೇಶಿಯರ ಸಂಪರ್ಕದಿಂದಾಗಿ ಬಂದು ಸೇರಿದ ಈ ಅನ್ಯದೇಶೀಯ ಶಬ್ದಗಳನ್ನು ಬೇರೆ ಬೇರೆಯಾಗಿ ಪಟ್ಟಿ ಮಾಡಬಹುದಷ್ಟೇ. ಆಸಾಮಿ, ಇಲಾಖೆ, ಖಜಾನೆ, ನಾಜುಕು, ಮುಂತಾದವು **ಅರಬ್ಬಿಶಬ್ದಗಳು**. ಸಿಬ್ಬಂದಿ, ಸುಮಾರು, ಸರಬರಾಯಿ, ಮುಂತಾದವು **ಪಾರಸಿಶಬ್ದಗಳು**. ಅರ್ಜಿ, ಬಾಕಿ, ಟೋಪಿ, ನಾಡಿ. ಕಛೇರಿ, ಸಲಿಸು, ದೌಲತ್ತು, ಮುಂತಾದವು **ಹಿಂದುಸ್ತಾನಿಶಬ್ದಗಳು**. ಅಲಮಾರು, ಸಾಬೂನು, ಪಾದ್ರಿ, ಮೇಜು, ಮುಂತಾದವು ಪೋರ್ಚುಗೀಸ್ ಶಬ್ದಗಳು. ಠರಾವು, ಕಿಲಾಡಿ, ಖಾನಾವಳಿ, ಇತ್ಯಾದಿ ಶಬ್ದಗಳು **ಉರ್ದು-ಮರಾಠಿ** ಪ್ರಭಾವದಿಂದ ಬಂದವು. ಅವುಗಳಲ್ಲಿ ಪ್ರಸಿದ್ಧವಾದ, ಚಾಲ್ತಿಯಲ್ಲಿರುವ ಕೆಲವು **ಅನ್ಯದೇಶೀಯ ಶಬ್ದಗಳನ್ನು ಅರ್ಥಸಹಿತ, ಅಕಾರಾದಿಯಾಗಿ ಕೊಡಲಾಗಿದೆ.** ಅವುಗಳಲ್ಲಿ ಅರಬ್ಬಿ, ಪಾರಸಿ, ಮರಾಠಿ, ಪೋರ್ಚುಗೀಸ್, ಉರ್ದು, ಹಿಂದೂಸ್ಥಾನಿ ಶಬ್ದಗಳೂ ಸೇರಿವೆ. ಇವುಗಳನ್ನು **'ಅನ್ಯದೇಶೀಯ'** ಶಬ್ದಗಳೆಂದು ಗುರುತಿಸಬಹುದು. ಇಲ್ಲಿನ ಕೆಲವು ಶಬ್ದಗಳು ಸಹಜವಾಗಿ ಇಲ್ಲವೇ ಮೂಲವನ್ನು ವ್ಯತ್ಯಾಸ ಮಾಡಿಕೊಂಡು ಕನ್ನಡಭಾಷೆಯಲ್ಲಿ ಬಳಕೆಗೆ ಬಂದಿವೆ. ಇವುಗಳನ್ನು ಖಚಿತವಾಗಿ ನಿರ್ಣಯಿಸಲು ಅವುಗಳ ಪರಿಜ್ಞಾನಬೇಕಾಗುತ್ತದೆ.

ಅಮಲ್ದಾರ್ (ಅರಬ್ಬಿ) - ಅಧಿಕಾರವನ್ನು ಕಾರ್ಯಗತಗೊಳಿಸುವಾತ.

ಅರ್ಜಿ (ಅ)-ಪ್ರಾರ್ಥನಾಪತ್ರ.

ಅಲಿಯಾಸ್ (ಲ್ಯಾಟಿನ್)-ಅಲ್ಲದಿದ್ದರೆ.

ಅವಗಡ (ಮರಾಠಿ) - ಇಕ್ಕಟ್ಟಾದ (ಗುಣವಾಚಕ).

ಅವಘಡ = ವಿಪತ್ತು.

ಅವಾಜು (ಪಾರಸಿ/ ಮರಾಠಿ)- ಸದ್ದು.

ಅಸ್ತಮಾ (ಗ್ರೀಕ್)-ಕಷ್ಟಕರವಾದ ಉಸಿರಾಟ.

ಅಹವಾಲು (ಅ)-ಪರಿಹಾರಕ್ಕೆ ಅರ್ಜಿ

ಅಂಗನವಾಡಿ (ಹಿಂದೀ)-ಅಂಗನ್ (ಬಾಲ ವಿಹಾರ)+ವಾಟಿ (ಪುಷ್ಪವೃಕ್ಷ ಸ್ಥಳ).

ಅಚಾನಕ್ (ಹಿಂ)-ಅನಿರೀಕ್ಷಿತ.

ಅಕ್ಕಲ್ (ಅ)-ಜಾಣತನದ ಹುಶಾರಿ ಹೇಳುವುದು.

ಅಜಮಾಸು (ಪಾ)- ತನಿಖೆ, ಊಹೆ ಎಂಬರ್ಥವಿದೆ.

ಅಡ್ವಿಕೇಟ್ (ಲ್ಯಾ)-ಅನ್ಯರಪರ ವಾದಿಸುವವ.

ಅಪ್ಪಣ್ಣೆ(ತುಳು)-ಜಲಾಧಿದೇವತೆ ಹೆಸರು.

ಅಬ್ಕಾರಿ (ಪಾ)-ಮದ್ಯತಯಾರಿಕೆಯ -ವ್ಯಾಪಾರ.

ಆಖೈರು (ಅ/ಪಾ)-ಕಡೆ, ಕೊನೆ.

ಆಲೋಚನಾ (ಹಿಂ)- ಟೀಕೆ, ವಿಮರ್ಶೆ.

ಆವಕ(ಮ)-ಹೊರಗಿನಿಂದಬರುವ. ದಾಖಲೆ ಪುಸ್ತಕ.

ಆಸಾಮಿ (ಅ/ಪಾ)- ವ್ಯಕ್ತಿ, ಮನುಷ್ಯ.

ಆಸುಪಾಸು (ಮ)-ಅಕ್ಕಪಕ್ಕ.

ಇಜ್ಜತ್ತ (ಪಾ)-ಗೌರವ.

ಇಲಾಖೆ (ಅ/ಮ)-ಆಡಳಿತಶಾಖೆ.

ಇಸ್ತಿಹಾರ್ (ಅ/ಮ)-ಹಾರಾಡು,
ನೋಟೀಸು.

ಇಸ್ತ್ರಿ (ಹಿ/ಪೋರ್ಚ್)-ಉಕ್ಕಿನ ಪೆಟ್ಟಿಗೆಯಲ್ಲಿ
ಬಟ್ಟೆ ಉಜ್ಜುವುದು.

ಇಸ್ಪೀಟು (ಲ್ಯಾ)-ಎರಡು ಅಲಗಿನ ಕತ್ತಿ.
(ಇತ್ತೀಚೆಗೆ **ಎಲೆಯಾಟ** ಎಂಬರ್ಥ)

ಉಢಾಳ (ಮ)-ತಿಂಡಿಪೋತ.

ಉರುಫ್ (ಉ)-ಎರಡನೆಯ ಹೆಸರು.

ಐನಾತಿ (ಪಾ)-ಮುಖ್ಯ, ಪ್ರಧಾನ.

ಐಬು (ಅ)-ಕುಂದು, ಕೊರತೆ.

ಐಷಾರಾಮ (ಅ+ಪಾ)-ಸುಖಭೋಗ.

ಕಂದೀಲು (ಅ)-ಮೋಂಬತ್ತಿ, ದೀಪ.

ಕಛೇರಿ (ಮ)-ಆಡಳಿತದ ಕಾರ್ಯಾಲಯ.

ಖರಾಬು (ಅ)-ಕೃಷಿಗೆ ಯೋಗ್ಯವಲ್ಲದ್ದು.

ಕಸುಬು (ಅ)-ವೃತ್ತಿ.

ಕರ್ಫ್ಯೂ (ಫ್ರೆಂಚ್)- ಗಲಭೆತಡೆವಕಾಯ್ದೆ

ಕಾಗಜ (ಪಾ/ಅ)-ಕಾಗದ.

ಕಾರಭಾರ (ಪಾ)-ಚಟುವಟಿಕೆ.

ಕಿಚಾಯಿಸು (ಮ)-ಚುಡಾಯಿಸು.

ಕಿತಾಪತಿ (ಮ)-ಗಂತಲು, ತಕರಾರು.

ಕಿರಾಣಿ (ಮ)-ದಿನಸಿಅಂಗಡಿ.

ಕಿರ್ದಿ (ಪಾ)-ಲೆಕ್ಕವಪುಸ್ತಕ.

ಕೊತ್ವಾಲ (ಪಾ)-ಸೇನೆ/ ಪೊಲೀಸಿನ ದಪ್ತ ವ್ಯಕ್ತಿ.

ಕೋರಂ (ಲ್ಯಾ)-ನಿಗದಿತಸಂಖ್ಯಾಬಲ.

ಖಜಾಂಚಿ (ಪಾ/ ಅ)-ಭಂಡಾರಿ.

ಖದೀಮ(ಅ)-ಸಮರ್ಥ, ಸಮಯಸಾಧಕ.

ಖಾತೆ (ಮ)-ಭೂವಿವರದ ಪುಸ್ತಕ.

ಖಾದಿ (ಪಾ)-ಕೈಯಿಂದ ತಯಾರಿಸಿದ್ದು.

ಖಾನಾವಳಿ (ಮ)-ಊಟದ ಹೋಟೆಲ್

ಖಾಯಿಷ್ (ಹಿಂ)-ಆಸೆ, ಬಯಕೆ.

ಖಾಯಿಲೆ (ಅ) - ರೋಗ.

ಖಾವಂದ (ಪಾ) - ಒಡೆಯ.

ಖಿಲಾಡಿ (ಮ) - ಆಟಗಾರ.

ಖುಲಾಸೆ (ಅ) - ಅಪರಾಧದಿಂದ ಮುಕ್ತಿ.

ಖುಷಿ (ಅ) - ಆನಂದ.

ಖುಷ್ಕಿ (ಪಾ) - ಮಳೆಆಶ್ರಿತ ಭೂಮಿ.

ಖೆಡ್ಡ (ಮಲಯಾಳಿ)-ಆನೆಹಿಡಿವ ಗುಂಡಿ.

ಖೋತ (ಪಾ)-ಕಡಿತಗೊಳಿಸು.

ಗಡದ್ದು (ಮ)-ಗಡತ್ತು - ಭರ್ಜರಿ.

ಗರಜು (ಅ) -ಅವಶ್ಯಕತೆ.

ಗಾದಿ (ಹಿಂ)-ಸ್ಥಾನ, ಸಿಂಹಾಸನ.

ಗುಮಾಸ್ತ (ಪಾ)- ಕರಣಿಕ.

ಗುಲಾಮ (ಅ)-ಸೇವಕ.

ಗ್ಯಾರಂಟಿ (ಫ್ರೆಂಚ್)- ಜವಾಬ್ದಾರಿ.

ಚಕ್ಕರ್ (ಮ/ಹಿಂ)-ತಪ್ಪಿಸಿಕೊಳ್ಳುಪಿಕೆ.

ಚಪ್ರಾಸಿ (ಹಿ) - ಲೋಹದ ಬಿಲ್ಲೆಧರಿಸಿದ
ಸೇವಕ.

ಚಮಚ(ಹಿಂ)-ತೆಗೆದುಕೊಳ್ಳಲು ಬಳಸುವುದು.

ಚಳವಳಿ (ಮ)- ಓಡಾಟ, ಮುಷ್ಕರ.

ಜಂಜಾಟ (ಹಿಂ)- ಜಗಳ.

ಜನಾಬ್ (ಅ/ಪಾ)- ಘನತೆಯುಳ್ಳವ್ಯಕ್ತಿ.

ಜಪ್ತಿ (ಅ)- ವಶಪಡಿಸಿಕೊಳ್ಳು.

ಜಬರ್ದಸ್ತು (ಪಾ)- ಒತ್ತಾಯ.

ಜಲ್ದಿ (ಅ) -ವೇಗ.

ಜುಜುಬಿ (ಹಿಂ/ಮ) - ತೀರಾಸಾಮಾನ್ಯ.

ಜುಲುಮೆ (ಅ) - ಪೀಡೆ.

ಠರಾವು (ಮ) - ತೀರ್ಮಾನ.

ಠಾಕುಠೀಕು (ಮ) - ಸುವ್ಯವಸ್ಥೆ.

ಡಾಂಬರು (ಹಿಂ) - ಟಾರೆಣ್ಣೆ.

ಡುಮ್ಕಿ (ಮ)-ಮುಳುಗು, ಅನುತ್ತೀರ್ಣ.

ಡೌಲು (ಅ)-ಪ್ರಚಾರ, ದಿಮಾಕು.

ಡೋಂಗಿ (ಹಿಂ/ಮ) - ಸುಳ್ಳು, ಕಪಟ.

ತಕರಾರು (ಅ) - ದೂರು, ವಿವಾದ.

ತಖ್ತೆ (ಪಾ) - ವಿವರದಪಟ್ಟಿ.

ತಗಾದೆ(ಅ) - ಸಾಲತೀರುವಳಿಗೆ ಒತ್ತಾಯ.

ತರಪೇತಿ (ಅ) - ಶಿಕ್ಷಣ, ತಿದ್ದುವಿಕೆ.

ತರ್ಜುಮೆ (ಅ) - ಅನುವಾದಮಾಡು.

ತರಲೆ (ತುಳು) - ಕಿತಾಪತಿ.

ತರಾವರಿ (ಮ) - ಬೇರೆಬೇರೆ.

ತಹಸೀಲ್ದಾರ (ಅ) - ತಾ|| ಅಧಿಕಾರಿ.

ತಾಕತ್ತು (ಅ) - ಶಕ್ತಿ, ಬಲ.

ತಾಯಿತ (ಪಾ) - ಕತ್ತಿಗೆಕಟ್ಟುವಯಂತ್ರ.

ತಾರೀಫು (ಅ) - ಹೊಗಳಿಕೆ.

ತಾರೀಖು (ಅ/ಪಾ) - ದಿನಾಂಕ.

ತಾಲೀಮು (ಮ/ಅ) - ಶಾರೀರಿಕ ವ್ಯಾಯಾಮ.

ಥೇಟ್ (ಮ) - ಅದೇ ತರಹದ.

ದಂಧೆ (ಹಿಂ/ಮ)- ಮಾರ್ಗ, ಹುದ್ದೆ.

ದಫ್ತರ್ (ಅ) -ದಾಖಲೆ, ಕಾಗದಪತ್ರ.

ದರೋಡೆ (ಮ) -ಹೆದರಿಸಿ ಸುಲಿಗೆ ಮಾಡು.

ದರ್ಬಾರು (ಪಾ) - ಆಸ್ಥಾನ/ಸಭೆ

ದವಾಖಾನೆ (ಅ/ಪಾ) - ಔಷಧಾಲಯ.

ದಸ್ಕತ್ತು (ಪಾ) - ಸಹಿ, ಹಸ್ತಾಕ್ಷರ.

ದಸ್ತಗಿರಿ (ಪಾ) - ಬಂಧಿಸು.

ದಸ್ತಾವೇಜು (ಪಾ) - ಕಾಗದಪತ್ರ.

ದಾಖಲು (ಅ) - ಲೆಕ್ಕಕ್ಕೆ ಸೇರಿಸು.

ದಿಬ್ಬಣ (ತುಳು) - ಮದುವೆ ಮೆರವಣಿಗೆ.

ದುಬಾರಿ (ಪಾ) - ಇಮ್ಮಡಿ (ಎರಡರಷ್ಟು).

ದುಂಬಾಲು (ಪಾ) - ಅಂಗಲಾಚು.

ದುಕಾನ್ (ಅ) - ಅಂಗಡಿ.

ದುರ್ಬೀನು (ಪಾ) - ದೂರದ್ದನ್ನು ಸಮೀಪವಾಗಿ ತೋರಿಸುವ ಸಾಧನ.

ದೇಶಪಾಂಡೆ (ಮ) - ಜಿಲ್ಲೆಯ ಮುಖ್ಯಸ್ಥ

ದೇಶಾವರಿ (ಮ)- ದೇಶದೇಶಸುತ್ತಿ ಸಂಗ್ರಹಿಸುವುದು.

ದಡೂತಿ (ಮ) - ಗಟ್ಟಿಮುಟ್ಟಾದ.

ಧೋತರ (ಹಿಂ/ಮ) - ಉಡುಪು, ವಸ್ತ್ರ.

ನಮೂನೆ (ಹಿಂ/ಮ) - ರೀತಿ, ಕ್ರಮ.

ನಾಲಾಯಕ್ಕು (ಪಾ/ಅ) - ಅಯೋಗ್ಯ.

ನಾಷ್ತಾ (ಪಾ) - ಉಪಾಹಾರ.
ನೊಂದಾಯಿಸು(ಮ) - ದಾಖಲು ಮಾಡು.
ಪಡಪೋಷಿ (ಮ) - ಕೆಲಸಕ್ಕೆ ಬಾರದ.
ಪಹಣಿ (ಮ) - ಎಲ್ಲೆ ಗುರುತಿನದಾಖಲೆ.
ಪುಡಾರಿ (ಮ) - ರಾಜಕೀಯ ಪುಂಡಾಟಿಕೆ.
ಪುರವಣಿ (ಮ) - ಪೂರಕಪ್ರತಿ.
ಪುರಸೊತ್ತು (ಅ) - ವಿರಾಮ.
ಪೇಟೆ (ಹಿಂ) - ನಗರದ ಅಂಗಡಿ ಬೀದಿ.
ಪೊಗದಸ್ತು (ಮ)- ಸಮೃದ್ಧ, ಕಟ್ಟುಮಸ್ತಾದ.
ಪೋಷಾಕು (ಪಾ)- ಉಡುಗೆ-ತೊಡುಗೆ.
ಫಟಿಂಗ (ಮ) -ಪೋಕರಿ, ಉಂಡಾಡಿ.
ಬಂಡುಕೋರ (ಮ) -ಬಂಡಾಯಗಾರ.
ಬಕ್ಷೀಸು (ಹಿಂ) -ಬಹುಮಾನ.
ಬಗರ್ ಹುಕುಂ (ಹಿಂ) -ಅಪ್ಪಣೆ ಪಡೆಯದ ಭೂಮಿ.
ಬಚಾವ್ (ಹಿಂ) -ತಪ್ಪಿಸಿಕೊಳ್ಳು.
ಬಟವಾಡೆ (ಮ) -ಹಣ ಹಂಚುವುದು.
ಬರಖಾಸ್ತು (ಪಾ) -ಪೂರೈಸಿದ ವಿಷಯ.
ಬಾತ್ಮೀದಾರ (ಅ) - ಸುದ್ದಿ ಸಂಗ್ರಹಕ.
ಬರೋಬರಿ (ಪಾ) -ಸರಿಯಾದ
ಬಾಬು (ಅ) - ವಿಷಯ/ ವಿಚಾರ.
ಬಾಜಂತ್ರಿ (ಮ) - ವಾದ್ಯವಿಶೇಷ.
ಬಾಜೂ (ಪಾ)- ಪಕ್ಕಸರಿ- ಎಚ್ಚರಿಕೆ ನುಡಿ.
ಬಿಲ್‌ಕುಲ್ (ಅ) - ಖಂಡಿತವಾಗಿ.
ಬುನಾವಟ್(ಹಿಂ)-ಜೋಡಿಸುವಿಕೆ, ನೆಯ್ಗೆ.
ಬೇಕೂಪ್ಪ (ಪಾ) -ವಿವೇಕಹೀನ, ಪಡ್ಡ.

ಬೇಜಾನ್-ಬೇ+ಜ್ಞಾನ(ಪಾ) (ನಿಷೇಧಾರ್ಥ) - ಲೆಕ್ಕಕ್ಕೆ ಸಿಕ್ಕದ, ಅರಿವಿಗೆ ಬಾರದ.
ಬೇಷರತ್ (ಅ) - ಜವಾಬ್ದಾರಿಯಿಲ್ಲದ.
ಬೊಮ್ಡ (ಮ) - ದುಃಖಾತಿಶಯದ ಧ್ವನಿ.
ಬೋಣಿ (ಮ) - ವ್ಯಾಪಾರದಲಾಭ.
ಭರವಸೆ (ಹಿಂ) - ಆಶ್ವಾಸನೆ.
ಬಾತು (ಮ) - ಅನ್ನಸಂಬಂಧ ಪಾಕ.
ಮೈದಾನ (ಪಾ) - ಬಯಲು.
ಮಂಜೂರು (ಅ)-ಸಮ್ಮತಿಸು, ಸಾಧುರೂಪ (ಮುಂಜೂರು ರೂಢಿಪ್ರಯೋಗ).
ಮನೂತಿ (ಮ) -ಆಮಿಷತೋರಿಸು.
ಮರ್ಜಿ (ಅ) -ದಯೆ, ಅಪೇಕ್ಷೆ.
ಮಷ್ಕರಿ (ಹಿಂ) -ವಿನೋದ.
ಮಾಜಿ (ಅ) -ಗತಕಾಲದ.
ಮಾನ್ಸೂನ್ (ಅ) -ಋತು/ ಗಾಳಿ.
ಮಾರಾಮಾರಿ (ಹಿಂ/ಮ) -ಹೊಡೆದಾಟ.
ಮಾರಿಫತ್ತು (ಅ) -ಮುಖಾಂತರ.
ಮಾಲ್ಕಿ (ಪಾ) -ಒಡೆತನ.
ಮುಂಡಾಸು (ಮ) -ತಲೆಬಟ್ಟೆ.
ಮುಗುಂ (ಅ) - ಹೇಳಿದಂತೆ ಮೌನವಾಗಿರು
ಮುಜರಾಯಿ(ಹಿಂ)- ದೇವಾಲಯಗಳ ಇಲಾಖೆ.
ಮುತ್ಸದ್ದಿ (ಅ) - ಚಾಣಾಕ್ಷ.
ಮುದ್ದಾ (ಮ/ಅ) - ಸ್ವಂತ, ಸೇವಕನಿಂದ.
ಮುನ್ಸಿಫ್ (ಅ) - ನ್ಯಾಯಾಧೀಶ.
ಮೂರಾಬಟ್ಟೆ (ಮ) - ಹಾಳು.

ರಖಂ (ಅ) - ಹಣ, ಧನ.
ರಜಾ (ಅ) - ಬಿಡುವು.
ರವಾನೆ (ಪಾ) - ಕಳುಹಿಸುವುದು.
ರಾಜೀನಾಮೆ (ಪಾ) - ಅಧಿಕಾರತ್ಯಾಗಪತ್ರ.
ರಿಯಾಯ್ತಿ (ಅ) - ಸೋಡಿ.
ರಿವಾಜು (ಹಿಂ) - ಸಂಪ್ರದಾಯ.
ರುಷುವತ್ತು (ಅ/ಪಾ)ಲಂಚಸಂಬಂಧವಾದ್ದು
ರುಸ್ತುಂ (ಪರ್ಷಿಯ)- ಪರಾಕ್ರಮಿ.
ರೂಬುರೂಬು (ಪಾ)-ಎದುರು ಎದುರಿಗೆ.
ರೈತ (ಅ) - ಒಕ್ಕಲಿಗ.
ರೋಟಿ (ಹಿ/ಮ)-ತಟ್ಟಿದಆಹಾರಖಾದ್ಯ.
ರೋಪ್ (ಅ) -ಜೋರುಮಾಡು.
ಲಕೋಟೆ (ಹಿಂ)- ಮುದ್ರೆಯಕವರು.
ಲಕ್ವ (ಅ/ಮ) -ಪಾರ್ಶ್ವವಾಯು.
ಲಷ್ಕರ್ (ಪಾ)-ಸೈನ್ಯ, ದಂಡು.
ಲಾಂಡ್ರಿ (ಲ್ಯಾ)-ಬಟ್ಟೆತೊಳೆವಜಾಗ.
ಲಾಗಾಯತು (ಅ/ಹಿಂ)-ಅಂದಿನಿಂದ.
ಲಾಗೋಡು (ಮ)-ಜಮೀನಿನಲ್ಲಿಬಿತ್ತಿದ್ದು.
ಲಾವಣಿ (ಮ)-ನೆಲವನ್ನು ಹದಗೊಳಿಸುವುದು.
ಲೂಟಿ(ಹಿಂ/ಮ)-ಅರ್ಥಕೊಳ್ಳೆ ಹೊಡೆಯುವುದು.
ಲೇವಡಿ (ಹಿಂ) - ಹೀನಾಯವಾಗಿಕಾಣು.
ವಜನ್(ಅ) - ಭಾರ (ತೂಕ)
ಸುಬೇದಾರ್ (ಪಾ)- ರೆವಿನ್ಯೂ ಅಧಿಕಾರಿ.
ಸೆಮಿಸ್ಟಾರ್(ಲ್ಯಾ)-೬ ತಿಂಗಳವಧಿ (ಪರೀಕ್ಷೆ)
ಹಂಗಾಮಿ(ಪಾ)-ಅಲ್ಪ ಸಮಯದಲ್ಲಿರುವವ.
ಹಕೀಕತ್ (ಅ)-ಸತ್ಯವನ್ನುಕುರಿತಹೇಳಿಕೆ ಪತ್ರ ಅಥವಾ ಘಟನೆ.
ಹಜಾಮತಿ (ಅ)-ಕೂದಲುತೆಗೆಯುವುದು.
ಹಪಾಪಿ→ಹಪಹಪಿ(ಮ) - ಬಯಕೆ, ಆಸೆ.
ಹಮಾಲ್ (ಅ)-ಭಾರಹೊರುವಕೂಲಿ.
ಹಡತಾಳ (ಹಿಂ) ಹರಿತಾಳ - ಮುಷ್ಕರ.
ಹಲಾಲ್‌ಟೋಪಿ (ಹಿ/ಮ)-ಮೋಸಗಾರ.
ಹಾಕಿ (ಫ್ರೆಂಚ್)-ಕೋಲುಆಟ.
ಹಾಜರಾತಿ (ಅ)-ಎದುರಿಗಿರುವುದು.
ಹಾರ್ಮೋನಿಯಂ (ಲ್ಯಾ)-ತಿದಿಯಿಂದ ಧ್ವನಿ -ಮಾಡುವವಾದ್ಯ.
ಹಿಂದೂ(ಪಾ) - ಸಿಂಧೂಬಯಲನ್ನು ಆಧರಿಸಿ ಬಂದ ಹೆಸರು.
ಹಿಕಮತ್ (ಅ) - ಉಪಾಯ.
ಹುಂಬ (ಮ) - ದಡ್ಡ.
ಹುಕುಮ್ (ಅ) - ಅಪ್ಪಣೆ.
ಹುಜೂರ್ (ಅ) - ಒಡೆಯ.
ಹುನ್ನಾರ (ಪಾ) - ಯೋಜನೆ, ಪಿತೂರಿ.
ಹೈರಾಣ (ಅ) - ಆಶ್ಚರ್ಯ, ಗೋಜು.
ಹೈವಾನ್ (ಅ) -ಚತುಷ್ಪಾದಿ ಪ್ರಾಣಿ.

ಈ ಮೇಲ್ಕಂಡ ಹೆಚ್ಚುಬಳಕೆಯ ಕೆಲವು ಅನ್ಯಭಾಷೀಯಶಬ್ದಗಳನ್ನು ಸಂಗ್ರಹಿಸಲಾಗಿದೆ. ಈ ಶಬ್ದಗಳು ಕನ್ನಡ ಜಾಯಮಾನಕ್ಕನುಗುಣವಾಗಿ ಕನ್ನಡ ಭಾಷೆಯಲ್ಲಿ ಹೊಂದಿಕೊಂಡು ಬಳಕೆಯಲ್ಲಿವೆ.

ದ್ವಿರುಕ್ತಿ

ನಾವು ಕನ್ನಡದ ವಿಶಿಷ್ಟಪ್ರಯೋಗಗಳಾದ ಕ್ರಿಯಾರೂಪ, ಅವ್ಯರೂಪ, ಕ್ರಿಯಾವಿಶೇಷಣ ಇಲ್ಲವೆ ನಾಮವಿಶೇಷಣ ಪದವನ್ನೋ ವಾಕ್ಯಭಾಗವನ್ನೋ ವಿಶೇಷವಾಗಿ **ಹೆಚ್ಚಳ, ತ್ವರೆ, ಎಚ್ಚರಿಕೆ, ಆತಂಕ, ತಿರಸ್ಕಾರ, ಅತಿಶಯ** ಅರ್ಥವಿರುವ ಸಂದರ್ಭಗಳಲ್ಲಿ ಎರಡುಬಾರಿ ಪ್ರಯೋಗಿಸುತ್ತೇವೆ. ಇದು **'ದ್ವಿರುಕ್ತಿ'** ಯೆನಿಸುತ್ತದೆ. (ಕೆಲವೊಮ್ಮೆ ಮೂರುಬಾರಿ ಪ್ರಯೋಗಿಸುವುದೂ ಉಂಟು. ಇದನ್ನು ಕಾವ್ಯಮೀಮಾಂಸೆಯಲ್ಲಿ **'ಪುನರುಕ್ತಿ'** ಎನ್ನಲಾಗಿದೆ. ವಿಶೇಷ ಸಂದರ್ಭಗಳಲ್ಲಿ ಈ ಪದದ ಪುನರುಕ್ತಿ ಅತಿಶಯವಾದ (ವ್ಯಂಜಕ) ಅರ್ಥಸ್ಫೂರ್ತಿಗೆ ವಸ್ತುವಾಗಬಹುದು. ಉದಾ: ಅಶ್ವತ್ಥಾಮನ್ ನಾಟಕದಲ್ಲಿ ತನ್ನ ದಿಕ್ಕುತಪ್ಪಿ ನಡೆದ ಕೃತ್ಯಗಳ ಪರಿಣಾಮವನ್ನು ಕುರಿತು: ಪುಡಿಯೊಳಗೆ **ಪುಡಿಪು**ಡಿಯಾದೆನ್ ಇತ್ಯಾದಿಯರೂಪಗಳು ನಿದರ್ಶನವಾಗಿವೆ.

೧) ಮುತ್ತುರತ್ನಗಳನ್ನು **'ರಾಶಿರಾಶಿ'** ಯಾಗಿ ಅಳೆದುಮಾರಿದರು.

೨) **'ಆಗು ಆಗು'** ನೀ ಅನಿಕೇತನ.

೩) ಈತ ನನ್ನ **'ಖಾಸಖಾಸ'** ಭಾವ.

ಈ ರೀತಿಯ ದ್ವಿರುಕ್ತಿಗಳನ್ನು ಹೇಳುವುದರಿಂದ ಕೇಳುವವರ ಮನಸ್ಸಿನಮೇಲೆ ಹೆಚ್ಚಿನ ಪರಿಣಾಮವಾಗುತ್ತದೆ. ಭಾವನೆಗಳ ಅಭಿವ್ಯಕ್ತಿಗೆ ಪುಷ್ಟಿದೊರೆಯುತ್ತದೆ. ಈ ದ್ವಿರುಕ್ತಿಗಳನ್ನು **ಅನೇಕಾರ್ಥ**ಗಳಲ್ಲಿ ಬಳಸಲಾಗುತ್ತದೆ:

೧) **ಅತಿಶಯಾರ್ಥ**(ಅಧಿಕಾರ್ಥ)ದಲ್ಲಿ ದ್ವಿರುಕ್ತಿ ಬರುತ್ತದೆ :

  ೧) ನಮ್ಮ ಬಾವುಟ **'ಎತ್ತರೆತ್ತರ'**ಕ್ಕೆ ಹಾರಲಿ. (ಎತ್ತರಕ್ಕೆ ಎತ್ತರಕ್ಕೆ)

  ೨) ನಾಡು **'ಉತ್ತರುತ್ತರ'** ಕ್ಕೆ ಬೆಳೆಯಲಿ. (ಉತ್ತರಕ್ಕೆ ಉತ್ತರಕ್ಕೆ)

  ೩) ಅವರು **'ಉರುಳಿ ಉರುಳಿ'** ಸೇವೆಸಲ್ಲಿಸಿದರು.

  ೪) ಕಾವೇರಿ **'ಹೊಳೆಹೊಳೆಹೊಳೆ**ವಳು', **'ಕಳೆ ಕಳೆ ಕಳೆ**ವಳು'

೨) **ಅಧಿಕಾರ್ಥ**ದಲ್ಲಿ ದ್ವಿರುಕ್ತಿ :-

  ೧) **'ಕಿತ್ತು ಕಿತ್ತೂ'** ಎಸೆದನು.

  ೨) **'ಮಸೆದು ಮಸೆದೂ'** ನೋಡಿದನು.

  ೩) **'ಲಕ್ಷಲಕ್ಷ'** ಮಂದಿ ಬಂದರು.

  ೪) **'ಹೆಚ್ಚು ಹೆಚ್ಚು'** ಕಲಿಯಿರಿ.

೩) **ಆವೃತ್ಯರ್ಥದಲ್ಲಿ** (ಪುನಃಪುನಃ) :

೧) **'ಹೇಳಿ ಹೇಳಿ'** ಸಾಕಾಯ್ತು.
೨) **'ಪರಿಪರಿ'** ಯಾಗಿ ಹೇಳಿದನು.
೩) **'ತಿಂದುತಿಂದೂ'** ಮುಗಿಯಿತು.

೪) **ತ್ವರೆ, ಉತ್ಸಾಹಾರ್ಥ**- ಇಲ್ಲಿನ ಕ್ರಿಯೆಯಲ್ಲಿ ಹೇಳುವವರ ಸಹಯೋಗವಿರುತ್ತದೆ:

೧) **'ನಡೆನಡೆ'** ಹೋಗೋಣ.
೨) **'ಬರೆಬರೆ'** ಯೆಂದು ಬರೆದ.
೩) **'ಬೇಗ ಬೇಗನೆ'** ಬಾ.

೫) **ಭಯಾರ್ಥದಲ್ಲಿ** (ಎಚ್ಚರಿಕೆ)

೧) **'ಹಳ್ಳಹಳ್ಳ'** ಬಿದ್ದೀಯೆ.
೨) **'ಕಲ್ಲು ಕಲ್ಲೂ'** ಬಿದ್ದೀತು.

೬) **ಆದರಾರ್ಥ** (ಪ್ರೀತಿ) ಯಲ್ಲಿ :

೧) **'ಮನೆಮನೆ'** ಗೂ ಹೋಗಿಕರೆದನು.
೨) **'ಇಲ್ಲಿಬನ್ನಿ ಇಲ್ಲಿಬನ್ನಿ'.**
೩) **'ನೀವುತಿನ್ನಿ, ನೀವುತಿನ್ನಿ'.**

೭) **'ದೂರ'** ಅಥವಾ **ಸಮೀಪಾರ್ಥಗಳಲ್ಲಿ** :

೧) ಇನ್ನೂ **'ಮೇಲೆ ಮೇಲೆ'** ಹೋಗು.
೨) ಅಲ್ಲೇ **'ಕೆಳಗೆ ಕೆಳಗೆ'** ಸರಿ.

೮) **ಕೋಪಾರ್ಥದಲ್ಲಿ** :

೧) ಕಳ್ಳಾ! **ನಿಲ್ಲು ನಿಲ್ಲು.**
೨) **ನೀಚಾ! ನೀಚ** ಬಾಯಿಮುಚ್ಚು

೯) **ಅಂಗೀಕಾರಾರ್ಥ** (ಒಪ್ಪಿಗೆ) ಯಲ್ಲಿ :

೧) **'ಸರಿಸರಿ'** ಅವನೇ ಇರಲಿ.
೨) ನನಗೆ **ಅದೇ ಇರಲಿ ಅದೇ ಇರಲಿ.**

೧೦) **ಅನುಕ್ರಮಾರ್ಥದಲ್ಲಿ** (ಕ್ರಮಾನುಸಾರ):

೧) **'ಚಿಕ್ಕಚಿಕ್ಕ'**ವರಿಗೆ ಮೊದಲುಕೊಡಿ.
೨) **'ದೊಡ್ಡದೊಡ್ಡ'**ವರು ಮೊದಲುಬನ್ನಿ.
೩) **'ಸ್ವಲ್ಪ ಸ್ವಲ್ಪ'** ಅಭ್ಯಾಸಪಡಿಸಿ.

೧೧) ಪ್ರತ್ಯೇಕಾರ್ಥ (ವಿಂಗಡಣೆ) ದಲ್ಲಿ :

೧) **'ಕಪ್ಪು ಕಪ್ಪ'**ನೆಯವುಗಳನ್ನು ಒಂದುಕಡೆಯಿಡು.

೨) **'ದಪ್ಪದಪ್ಪ'** ನೆಯ ಹಣ್ಣುಕೊಡು.

ದ್ವಿರುಕ್ತಿಗಳಲ್ಲಿ ಕೆಲವು ಕಾರ್ಯಗಳಾಗುತ್ತವೆ : (ಅಧಿಕಾರ್ಥದ ದ್ವಿರುಕ್ತಿಗಳಲ್ಲಿ)

ಮೊದಲು ಮೊದಲು = **ಮೊತ್ತಮೊದಲು**-'ಮೊದಲ' ಶಬ್ದಾಂತ್ಯಲೋಪ, 'ದ' ಕಾರಕ್ಕೆ ದ್ವಿತ್ವ ಸಹಿತ ವರ್ಗದ ಪ್ರಥಮಾಕ್ಷರ ಬರುತ್ತದೆ. ಉದಾ :

೧)	ತುದಿ **ತುದಿ**	=	**ತುತ್ತ ತುದಿ.**	- ದ್ವಿತ್ವಸಹಿತವಾದವರ್ಗದ ಪ್ರಥಮಾಕ್ಷರಾದೇಶ.
	ಕಡೆ **ಕಡೆ**	=	**ಕಟ್ಟಕಡೆ.**	- ದ್ವಿತ್ವಸಹಿತವಾದ ವರ್ಗದ ಪ್ರಥಮಾಕ್ಷರಾದೇಶ.
	ಕೊನೆ **ಕೊನೆ**	=	**ಕೊಟ್ಟಕೊನೆ.**	- ಮೇಲಿನಂತೆ ಹೋಲಿಕೆಯಿಂದ ಬಂದ ರೂಪಗಳು
	ನಡುವೆ **ನಡುವೆ**	=	**ನಟ್ಟ ನಡುವೆ.**	- ಇಲ್ಲಿಮೊದಲ ಶಬ್ದಾಂತ್ಯಲೋಪವಾಗಿದೆ
	ಹಾಸ **ಹಾಸ**	=	**ಅಟ್ಟಹಾಸ.** (ಗಟ್ಟಿನಗು)	- ರೂಢಿಯ ರೂಪಾಂತರ
	ಮಧ್ಯಾಹ್ನ **ಮಧ್ಯಾಹ್ನ**	=	**ಮಟಮಧ್ಯಾಹ್ನ.**	
	ಬಯಲು **ಬಯಲು**	=	**ಬಟ್ಟಬಯಲು.**	
೨)	ಕೆಳಗೆ **ಕೆಳಗೆ**	=	**ಕೆಳಕೆಳಗೆ**	-
	'ತೆಳುತೆಳ್ಳನೆ' 'ಬೆಳುಬೆಳ್ಳನೆ' ಮುಗಿಲುಣ್ಣೆಯ ರಾಶಿ.			- -- " --
	ಕುಸಿದು ಕುಸಿದು	=	**ಕುಸಿಕುಸಿದು.**	- -- " --
೩)	ಹಸಿರು ಹಸಿರು	=	**ಹಚ್ಚಹಸಿರು.**	- ಶಬ್ದದಮಧ್ಯದ ಸಕಾರಕ್ಕೆ ದ್ವಿತ್ವ,
	ಹೊಸದು ಹೊಸದು	=	**ಹೊಚ್ಚಹೊಸದು.**	- ಚಕಾರಾದೇಶ.
	ನುರಿ ನುರಿ	=	**ನುಗ್ಗುನುರಿ**	- **'ರಿ' 'ಡಿ'**ಗಳಿಗೆ ಗುಕಾರಾದೇಶ.
	ಬಡಿ ಬಡಿ	=	**ಬಗ್ಗುಬಡಿ**	-

ದ್ವಿರುಕ್ತಿಯ ರೂಪದಲ್ಲೇ ಮೇಲ್ನೋಟಕ್ಕೆ ಕೆಲವು ತೋರಿದರೂ **ದ್ವಿರುಕ್ತಿಯೆನಿಸವು: 'ಘಳಘಳ'** ಹೊಳೆಯಿತು. **'ಥಳಥಳ'** ಉದಯಿಸಿದ. **'ಝುಳಝುಳನೆ'** ಹರಿಯಿತು. ಇವು **'ಅನುಕರಣಾತ್ಮಕ'** ಶಬ್ದಗಳು (ಇವು ಅನುಕರಣಾತ್ಮಕ ನಾಮವಿಶೇಷಣವಾಗಿ ಬರುತ್ತವೆ) ಇವು ದ್ವಿರುಕ್ತಿಯಂತೆ ಕಾಣುತ್ತವೆ. ಈ ವ್ಯತ್ಯಾಸವನ್ನು ಸೂಕ್ಷ್ಮವಾಗಿ ಗಮನಿಸಿ ಗುರುತಿಸಬೇಕು.

ವಿರುದ್ಧಾರ್ಥಕ ಶಬ್ದಗಳು

ನಾವು ಶಬ್ದಗಳನ್ನು ಅರ್ಥೋಚಿತವಾಗಿ ಪ್ರಯೋಗಿಸಬೇಕು. ಶಬ್ದಗಳು ಅರ್ಥವನ್ನು ಅನುಸರಿಸಿಯೇ ಇರುತ್ತವೆ. ಈ ಅರ್ಥಗ್ರಹಣೆ ಖಚಿತವಾಗಿ ಆಗಬೇಕಾದರೆ, ಶಬ್ದಗಳ ಮೂಲರೂಪ ರಚನೆಗಳನ್ನು ಸೂಕ್ಷ್ಮವಾಗಿ ಗ್ರಹಿಸಬೇಕು.

ಈ ದೃಷ್ಟಿಯಿಂದ ವಿರುದ್ಧಾರ್ಥಕಶಬ್ದಗಳ ಪರಿಶೀಲನೆ ಅಗತ್ಯ. **ವಿರುದ್ಧಾರ್ಥಕ ಶಬ್ದಗಳೆಂದರೇನು?** ಇದಕ್ಕೆ ಸೂತ್ರಪ್ರಾಯವಲ್ಲಿ ಅರ್ಥಹೇಳಲಾಗದು. ಇದು ಚರ್ಚಾರ್ಹ ಸಂಗತಿ. ವಿರುದ್ಧಾರ್ಥ ಎನ್ನುವುದಕ್ಕೆ ಸಂಸ್ಕೃತವ್ಯಾಕರಣದಲ್ಲೇ ಸೂಚನೆಗಳಿವೆ: **'ಶಬ್ದಗಳಿಗಿರುವ ಅರ್ಥಕ್ಕೆ ತಡೆಯನ್ನು ತಂದು, ವಿಶೇಷವಾದ ಅರ್ಥಬದಲಾವಣೆಯನ್ನುಂಟುಮಾಡುವುದು'**(೧) ಇಲ್ಲಿ ಇರುವ **ಅರ್ಥಕ್ಕೆ ತಡೆಯನ್ನು** ತರುವುದು. ಹಾಗೆಯೇ **'ಪ್ರತಿಕೂಲಾರ್ಥ'** ಅಥವಾ **ಪೂರ್ಣ ವಿರೋಧಾರ್ಥವುಳ್ಳ** ಶಬ್ದಗಳನ್ನು ಸೂಚಿಸುವುದು ಎನ್ನಬಹುದು.

ಈ ವಿರುದ್ಧಾರ್ಥಕ ಶಬ್ದಗಳನ್ನು ಬರೆಯುವುದು ಸುಲಭವೆಂದು ಪರಿಗಣಿಸಲಾಗಿದೆ. ಹೀಗಾಗಿ ಕೆಲವುವೇಳೆ ಅರ್ಥವ್ಯತ್ಯಾಸವನ್ನು ಗಮನಿಸದೆ, **ಪ್ರಾಸ ಬದ್ಧತೆ**ಯಿಂದ ಕೂಡಿದಶಬ್ದಗಳನ್ನೇ ವಿರುದ್ಧಾರ್ಥಕ ಶಬ್ದಗಳೆಂದು ತಿಳಿಯುವ ಸಾಧ್ಯತೆಯಿದೆ. ಉದಾ. **ತನುಜxಅನುಜ**?, **ನಿರ್ಜನxದುರ್ಜನ**?, **ನಿಶಾಚರxಅನುಚರ**?, **ಭಾಗ್ಯxದೌರ್ಭಾಗ್ಯ?, ವೀರxಶೂರ**? ಇತ್ಯಾದಿಯಾಗಿ ಬರೆದಿರುವ ಪ್ರಸಂಗಗಳಿವೆ. ಅಲ್ಲದೆ **ದಿಗಂತ, ಕಿಟಕಿ, ಬಾಗಿಲು, ನೀರು, ಗಾಳಿ, ಬಯಲು, ವಾತ, ಬಾವಿ** ಇಂತಹ ಶಬ್ದಗಳಿಗೆಲ್ಲಾ ವಿರುದ್ಧ (ಪ್ರತಿಕೂಲ) ಶಬ್ದಗಳಿರಬೇಕೆಂಬ ಭ್ರಮೆಯಿರಬಾರದು. ಉದಾ: **ಸ್ವತಂತ್ರ** /ಅಸ್ವತಂತ್ರ/ಅತಂತ್ರ/ ಪರತಂತ್ರ, **ಆಕ್ರಮಣxಅನಾಕ್ರಮಣ/ ದುರಾಕ್ರಮಣ, ಉಷ್ಣxತಂಪು/ ಶೀತ**. ಈ ರೀತಿಯಲ್ಲಿ ಎರಡುಮೂರು ಶಬ್ದಗಳಿದ್ದು **ಸಂದಿಗ್ಧತೆ ತೋರುವುದುಂಟು**. ಇತ್ತೀಚೆಗೆ ಇಂಗ್ಲೀಷ್‌ಸಾಮ್ಯದಿಂದ ಎಲ್ಲಾಶಬ್ದಗಳಿಗೂ ವಿರುದ್ಧಾರ್ಥಶಬ್ದ ನಿರೀಕ್ಷಿಸಲಾಗುತ್ತಿದೆ. ಕ್ರಿಯಾವಾಚಕ ಶಬ್ದ, ಗುಣವಾಚಕಗಳು, ವಸ್ತುವಾಚಕ, ದಿಗ್ವಾಚಕ, ಸಾಮರ್ಥ್ಯವಾಚಕ, ಶಬ್ದಗಳಿಗೂ ಉದಾ : **ಬುದ್ಧಿ-?, ಸ್ಮೃತಿ-?** ಇವು (Faculty) ಇದನ್ನು **ಸುಬುದ್ಧಿ x ದುರ್ಬುದ್ಧಿ** ಎಂದು ಹೇಳಬಹುದು.

ಇಂತಹ ಸಮಯದಲ್ಲಿ ಗುರುತಿಸುವುದಾದರೂ ಹೇಗೆ? ಕನ್ನಡದಲ್ಲಿ ಬಹುಪಾಲು ಸಂಸ್ಕೃತ ಶಬ್ದಗಳು ಸೇರ್ಪಡೆಯಾಗಿವೆ. ಅವುಗಳ ಅರ್ಥಸೂಕ್ಷ್ಮತೆಯನ್ನು ಗಮನಿಸಬೇಕಾಗುತ್ತದೆ. ಉದಾ: ಜನರು, ಜನಕ, ಜನನಿ ಇತ್ಯಾದಿ ಶಬ್ದಗಳಿವೆ. ಈ ಶಬ್ದಗಳೆಲ್ಲ ಸಂಸ್ಕೃತದ **'ಜನಿ'** ಧಾತುವಿನಿಂದಾಗಿವೆ. ಈ ಧಾತುವಿಗೆ **'ಪ್ರಾದುರ್ಭಾವ'** (ಹುಟ್ಟು) ಎಂಬರ್ಥವುಂಟು.

---

(೧) **"ವಿಶೇಷೇಣ ಅರ್ಥವಿಶೇಷಂ ಋಣದ್ಧಿ ಇತಿ ವಿರುದ್ಧಃ"** -ಎನ್ನಲಾಗಿದೆ.

ಹೀಗಾಗಿ ಜನನ×ಮರಣ **(ಗುಣಾಧಾರದಿಂದ)** ಎನ್ನಬಹುದು. ಜನನಿ×ಜನಕ (ಲಿಂಗ ಆಧಾರದಿಂದ ವಿರುದ್ಧಾರ್ಥಕ ಎಂದು ನಿರ್ಧರಿಸಬಹುದೇ? ಹೀಗೆಯೇ ಕನ್ನಡದಲ್ಲಿ **'ಹಾರ'** ಎಂಬ ಸಂಸ್ಕೃತ ಧಾತುವಿದೆ. ಅದಕ್ಕೆ **'ಒಯ್ಯು'** ಎಂದರ್ಥವಿದೆ. **'ವಿ'** ಎಂಬ ಉಪಸರ್ಗ ಸೇರಿ ವಿ+ಹಾರ = **ವಿಹಾರ** (ಹಿತವಾಗಿ ಸುತ್ತಿಬರುವುದು) **'ಪ್ರ'**, ಸೇರಿ ಪ್ರ+ಹಾರ = **ಪ್ರಹಾರ** (ಹೊಡೆ), **ಸಂ**+ಹಾರ = **ಸಂಹಾರ** (ಕೊಲ್ಲು), **ಉಪ**+ಆಹಾರ = **ಉಪಾಹಾರ** (ಲಘುವಾದ ಆಹಾರ) ಇತ್ಯಾದಿ ಭಿನ್ನಾರ್ಥರೂಪಗಳು ರೂಪುಗೊಳ್ಳುತ್ತವೆ. ಅಭ್ಯಾಸಿಗಳಿಗೆ ಈ ಶಬ್ದಜ್ಞಾನ ಪೂರಕವಾಗಿರಬೇಕಾಗುತ್ತದೆ.

ವಿಶೇಷವಾಗಿ ನಾವು ವಿರುದ್ಧಾರ್ಥಕ ಶಬ್ದಗಳನ್ನು ನಿರ್ಧರಿಸುವಾಗ ಕೇಳಿರುವ ಶಬ್ದ ಅದು **ಕನ್ನಡಶಬ್ದವೇ, ಸಂಸ್ಕೃತವೇ ಗಮನಿಸಬೇಕು. ಸಂಸ್ಕೃತ ಶಬ್ದಗಳಿಗೆ ಸಂಸ್ಕೃತ ವಿರುದ್ಧಾರ್ಥಕ ಶಬ್ದವೇ ಇರಬೇಕೆಂಬುದನ್ನು ಗಮನಿಸಬೇಕು.** ಕನ್ನಡ ಶಬ್ದವಾಗಿದ್ದರೆ ವಿರುದ್ಧಾರ್ಥಕ ಕನ್ನಡಶಬ್ದವನ್ನೇ ಬರೆಯಬೇಕಾಗುತ್ತದೆ. ಉದಾ: **ದಿಟ**×ಸಟೆ, **ಬೆಳಕು**×ಕತ್ತಲು, **ತೆಳು**×ದಪ್ಪ ಹೀಗೆಯೇ ಜವಾಬ್ದಾರಿ×**ಬೇ+ ಜವಾಬ್ದಾರಿ** ಹೀಗೆ ಕೆಲವೊಮ್ಮೆ ಅನ್ಯಭಾಷೆಯ **'ಉಪಸರ್ಗ'**ಗಳಿಂದಾದ ಕನ್ನಡ ತದ್ಭವರೂಪಗಳನ್ನು ಆಗತ್ಯವಾಗಿ ತಿಳಿಯಬೇಕಾಗುತ್ತದೆ. ಇಂತಹ ಶಬ್ದಗಳು **ಭಾಷಾಸೌಂದರ್ಯ**ವನ್ನೂ ಹೆಚ್ಚಿಸಬಲ್ಲವು. **'ಪ್ರಾಚೀನ'** ಶಬ್ದಕ್ಕೆ **ಈಚಿನ,** ಎಂದು ಬರೆಯದೆ **ನವೀನ, ನೂತನ** ಇತ್ಯಾದಿಗಳು ವಿರುದ್ಧಾರ್ಥಕ ಗಮನಿಸಬಹುದು. ಇಲ್ಲಿ **'ಅರ್ವಾಚೀನ'** ಶಬ್ದಸೂಕ್ತ. ಅಂತಹ ಪ್ರಸಂಗಗಳಲ್ಲಿ ಅತ್ಯಂತ **ಸೂಕ್ತವೆನಿಸಿದ ಶಬ್ದಕ್ಕೆ ಮೊದಲಪ್ರಾಶಸ್ತ್ಯ** ನೀಡುವುದು ಒಳ್ಳೆಯದು.

ಇನ್ನು ವಿರುದ್ಧಾರ್ಥಕಶಬ್ದ ಹೇಳಿರೆಂದು ಕೇಳಿರುವ ಶಬ್ದಸಂಸ್ಕೃತದ್ದಾಗಿದ್ದರೆ ಅವುಗಳಿಗೆ ಬಹುಪಾಲು ಸಂಸ್ಕೃತದ ಉಪಸರ್ಗಗಳಿಂದ ರಚನೆಗೊಂಡ ಶಬ್ದಗಳು ಸೂಕ್ತವೆನಿಸುತ್ತದೆ. ಹಾಗೆಯೆ ನಾಮರೂಪವೋ ಕ್ರಿಯಾರೂಪವೋ ಗಮನಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಅವುಗಳನ್ನು **ರೂಢಿಯ ಆಧಾರದಿಂದ ವರ್ಗೀಕರಿಸಬಹುದು:-**

೧) ಸಂಸ್ಕೃತದ **'ನಯ್'** ತತ್ಪುರುಷರೂಪದ ನಿಷೇಧಾರ್ಥ ವಿರುದ್ಧಾರ್ಥಕ ಶಬ್ದಗಳು. ಈ ಶಬ್ದಗಳೆಲ್ಲವೂ ಸಂಸ್ಕೃತಶಬ್ದಗಳೇ ಆಗಿರುತ್ತವೆ. ಇವುಗಳನ್ನು ವಿಂಗಡಿಸಿರುವ **ಸಕಾರಾತ್ಮಕ (ಹೌದೆಂಬಾರ್ಥ)** ಶಬ್ದಗಳಿಗೆ ವಿರುದ್ಧಾರ್ಥಕವಾದ **ನಕಾರಾತ್ಮಕ (ಅಲ್ಲ, ಇಲ್ಲ ಎಂಬರ್ಥ)** ಶಬ್ದಗಳನ್ನು ಕೊಡಲಾಗಿದೆ. **ಅಕಾರಾದಿ :**

ಸಮಾನಾರ್ಥಕರೂಪಗಳ ನಿರ್ಧಾರದಲ್ಲೂ ನಿಜವಾಗಿ ಸರ್ವರೀತಿಯಲ್ಲಿ ಸಮಾನವೆನಿಸುವ ಶಬ್ದಗಳು ವಿರಳ. ಉದಾ. 'ಈಶ್ವರ' - ಒಡೆಯ ಎಂಬರ್ಥವಿದೆ. 'ಶಿವ' (ಮಂಗಳಾರ್ಥ), 'ರುದ್ರ' - ಭಯಂಕಾರಾರ್ಥ, 'ಕಪಾಲಿ' - ತಿರುಕಾರ್ಥ, 'ಗೌರೀಶ' - ಸಾಮರಸ್ಯಾರ್ಥ. ಇಂತಹ ಪ್ರಸಂಗಗಳಲ್ಲಿ ತೀರಾ ಸಮಂಜಸವಾದುದಕ್ಕೆ ಮೊದಲು ಗಮನ ಹರಿಸಬೇಕು. ಇಂಥಹ ಪ್ರಸಂಗಗಳಲ್ಲಿ ಅಧ್ಯಾಪಕರಿಗಾಗಲಿ, ಪರೀಕ್ಷಕರಿಗಾಗಲಿ ಸ್ಪಷ್ಟ, ಸೂಕ್ಷ್ಮತಿಳುವಳಿಕೆ ಅಗತ್ಯ. ಮಹಾಕವಿಗಳು ಈ ಮರ್ಮವನ್ನರಿತೇ ಕಾವ್ಯಸೃಷ್ಟಿ ಮಾಡಿರುತ್ತಾರೆ. ಅವರ ಕಾವ್ಯಪ್ರವೇಶಕ್ಕೆ ನಮಗೆ ಈ ಹಿನ್ನೆಲೆಅರಿವು ಅಗತ್ಯವಾಗಿದೆ.

ಅಗತ್ಯ	x	ಅನಗತ್ಯ	ಗೋಚರ	x	ಅಗೋಚರ
(ಸ) ಅಪೇಕ್ಷೆ	x	ನಿರಪೇಕ್ಷೆ / ಅನಪೇಕ್ಷೆ	ಘೋಷಣೆ	x	ಅಘೋಷಣೆ
ಅತಿವೃಷ್ಟಿ	x	ಅನಾವೃಷ್ಟಿ	ಚೇತನ	x	ಅಚೇತನ
ಅಧಿಕಾರಿ	x	ಅನಧಿಕಾರಿ	ಜರ	x	ಅಜರ
ಅರ್ಹ	x	ಅನರ್ಹ	(ಸು)ಜ್ಞಾನಿ	x	ಅಜ್ಞಾನಿ
ಅಧಿಕೃತ	x	ಅನಧಿಕೃತ	(ಸಂ) ತೃಪ್ತಿ	x	ಅತೃಪ್ತಿ
ಅನುಭವ	x	ಅನನುಭವ	ತಿಥಿ	x	ಅತಿಥಿ
ಅನುಗ್ರಹ	x	ಅನನುಗ್ರಹ	ಧರ್ಮ	x	ಅಧರ್ಮ
ಅರ್ಥ	x	ಅನರ್ಥ	ದೃಶ್ಯ	x	ಅದೃಶ್ಯ
ಅನುಕೂಲ	x	ಅನನುಕೂಲ	ಧೈರ್ಯ	x	ಅಧೈರ್ಯ
ಅಂತ	x	ಅನಂತ	ನಿರ್ಧಾರ	x	ಅನಿರ್ಧಾರ
ಅವಶ್ಯ	x	ಅನವಶ್ಯ	ಧೀರ	x	ಅಧೀರ
ಅವಸ್ಥೆ	x	ಅನವಸ್ಥೆ	ದಿಗಂತ	x	ಅದಿಗಂತ [೨]
ಅಕ್ಷರಸ್ಥ	x	ಅನಕ್ಷರಸ್ಥ	ನಿತ್ಯ	x	ಅನಿತ್ಯ
ಆದರ	x	ಅನಾದರ	ನಿಶ್ಚಿತ	x	ಅನಿಶ್ಚಿತ
ಆಕರ್ಷಣೆ	x	ಅನಾಕರ್ಷಣೆ	ನಿಮಿತ್ತ	x	ಅನಿಮಿತ್ತ
ಆಸಕ್ತಿ	x	ಅನಾಸಕ್ತಿ	ನೀತಿ	x	ಅನೀತಿ
ಆರ್ಯ	x	ಅನಾರ್ಯ	ನೈತಿಕ	x	ಅನೈತಿಕ
ಆಸ್ಥೆ	x	ಅನಾಸ್ಥೆ	ನ್ಯಾಯ	x	ಅನ್ಯಾಯ
ಆಚಾರ	x	ಅನಾಚಾರ	ನಿಶ್ಚಯ	x	ಅನಿಶ್ಚಯ
ಆಸ್ತಿಕ	x	ನಾಸ್ತಿಕ/ಅನಾಸ್ತಿಕ	ನಿಕೇತನ	x	ಅನಿಕೇತನ
ಉಪಮಾ	x	ಅನುಪಮಾ	ನಿಶ್ಚಿತ	x	ಅನಿಶ್ಚಿತ
ಉದಿಸು	x	ಅಸ್ತಮಿಸು/ ಅನುದಿಸು	ನಿರೀಕ್ಷಿತ	x	ಅನಿರೀಕ್ಷಿತ
ಇಷ್ಟ	x	ಅನಿಷ್ಟ (ಕೆಟ್ಟದು)	ಪರಿಚಿತ	x	ಅಪರಿಚಿತ
ಋತ	x	ಅನೃತ	ಪ್ರಕಟಿತ	x	ಅಪ್ರಕಟಿತ
ಐಕ್ಯ	x	ಅನೈಕ್ಯ	ಪ್ರಧಾನ	x	ಅಪ್ರಧಾನ
ಔಪಚಾರಿಕ	x	ಅನೌಪಚಾರಿಕ	ಪ್ರೀತಿ	x	ಅಪ್ರೀತಿ
ಕ್ಷಮ್ಯ	x	ಅಕ್ಷಮ್ಯ	ಪ್ರಗತಿ	x	ಅಪ್ರಗತಿ
ಕ್ಷಯ	x	ಅಕ್ಷಯ	ಪ್ರವೃತ್ತಿ	x	ಅಪ್ರವೃತ್ತಿ
ಗೌರವ	x	ಅಗೌರವ	ಪವಿತ್ರ	x	ಅಪವಿತ್ರ

೧) ಕಾಲಾರ್ಥ ಕಳೆದು ವ್ಯಕ್ತಿವಾಚಕಾರ್ಥ ಪಡೆದುಕೊಂಡಿದೆ.

೨) ಅಸ್ಸೀಮ ಅದು ಅದಿಗಂತ...... ಕನ್ನಡ ಗೀತೆಯಲ್ಲಿ ನಿಸ್ಸಾರ್‌ಅಹಮದ್ ಪ್ರಯೋಗಗಳಿವೆ.

ಪ್ರಸಿದ್ಧ	x	ಅಪ್ರಸಿದ್ಧ	ಶಕ್ತ	x	ಅಶಕ್ತ
ಪ್ರಿಯ	x	ಅಪ್ರಿಯ	ಶುದ್ಧ	x	ಅಶುದ್ಧ
ಪ್ರತ್ಯಕ್ಷ	x	ಅಪ್ರತ್ಯಕ್ಷ	ಶುಭ	x	ಅಶುಭ
ಪೂರ್ಣ	x	ಅಪೂರ್ಣ	ಶೀಕ	x	ಅಶ್ಲೀಲ
ಪ್ರಚಾರ	x	ಅಪ್ರಚಾರ	ಶೀಲ	x	ಆಶೀಲ
ಪ್ರಾಕೃತ	x	ಅಪ್ರಾಕೃತ	ಶ್ರದ್ಧೆ	x	ಅಶ್ರದ್ಧೆ
ಭೇದ	x	ಅಭೇದ	ಶಿಸ್ತು	x	ಅಶಿಸ್ತು
ಮಾನುಷ	x	ಅಮಾನುಷ	ಶಾಶ್ವತ	x	ಅಶಾಶ್ವತ
ಮಾನವೀಯ	x	ಅಮಾನವೀಯ	ಶಾಂತ	x	ಅಶಾಂತ
ಮೂರ್ತ	x	ಅಮೂರ್ತ	ಶಾಂತಿ	x	ಅಶಾಂತಿ
ಮೂರ್ಖ	x	ಪ್ರಾಜ್ಞ	ಸಭ್ಯ	x	ಅಸಭ್ಯ
ಮಂಗಳ	x	ಅಮಂಗಳ	ಸಹಕಾರ	x	ಅಸಹಕಾರ
ಯೋಗ್ಯ	x	ಅಯೋಗ್ಯ	ಸಹನೆ	x	ಅಸಹನೆ
ಯೋಗ	x	ಅಯೋಗ	ಸಹಾಯ	x	ಅಸಹಾಯ
ರಸಿಕ	x	ಅರಸಿಕ	ಸಮಾನ/ತೆ	x	ಅಸಮಾನ/ತೆ
ರುಚಿ	x	ಅರುಚಿ	ಸದೃಶ್ಯ	x	ಅಸದೃಶ್ಯ
ಲಕ್ಷ	x	ಅಲಕ್ಷ/ನಿರ್ಲಕ್ಷ	ಸಂತೋಷ	x	ಅಸಂತೋಷ
ಲಿಖಿತ	x	ಅಲಿಖಿತ	ಸಂಖ್ಯಾ	x	ಅಸಂಖ್ಯಾ
ಲೌಖಿಕ	x	ಅಲೌಖಿಕ	ಸಾತ್ವಿಕ	x	ಅಸಾತ್ವಿಕ
ವಶ	x	ವಿವಶ	ಸಕಾರ	x	ನಕಾರ
ವ್ಯಕ್ತ	x	ಅವ್ಯಕ್ತ	ಸಾಧಾರಣ	x	ಅಸಾಧಾರಣ
ವಾಸ್ತವ	x	ಅವಾಸ್ತವ	ಸಾಧ್ಯ	x	ಅಸಾಧ್ಯ
ವೇಳೆ	x	ಅವೇಳೆ	ಜ್ಞಾನಿ	x	ಅಜ್ಞಾನಿ
ವೈಜ್ಞಾನಿಕ	x	ಅವೈಜ್ಞಾನಿಕ	ಸುಖ	x	ದುಃಖ
ವಿಶ್ರಾಂತಿ	x	ಅವಿಶ್ರಾಂತಿ	ಸುಪ್ರಸಿದ್ಧ	x	ಅಪ್ರಸಿದ್ಧ
ವಿಧೇಯ	x	ಅವಿಧೇಯ	ಸುಂದರ	x	ಅಸುಂದರ
ವಿಶ್ವಾಸ	x	ಅವಿಶ್ವಾಸ	ಸಮರ್ಥ	x	ಅಸಮರ್ಥ
ವಿವೇಕ	x	ಅವಿವೇಕ	ಸಹಕಾರ	x	ಅಸಹಕಾರ
ವಿನಯ	x	ಅವಿನಯ	ಸಮಾಧಾನ	x	ಅಸಮಾಧಾನ
ವ್ಯವಸ್ಥೆ	x	ಅವ್ಯವಸ್ಥೆ	ಸತ್ಯ	x	ಅಸತ್ಯ
ವ್ಯಕ್ತ	x	ಅವ್ಯಕ್ತ	ಬಲ	x	ಅಬಲ
ವಿದ್ಯೆ	x	ಅವಿದ್ಯೆ	ಫಲ	x	ವಿಫಲ

ಸಮ್ಮತಿ	x	ಅಸಮ್ಮತಿ	ಸಾಮರ್ಥ್ಯ	x	ಅಸಾಮರ್ಥ್ಯ
ಸಹಜ	x	ಅಸಹಜ	ಸಾಧು	x	ಅಸಾಧು
ಸಭ್ಯ	x	ಅಸಭ್ಯ	ಸಾಧ್ಯ	x	ಅಸಾಧ್ಯ
ಸಂತುಷ್ಟಿ	x	ಅಸಂತುಷ್ಟಿ	ಸುರ	x	ಅಸುರ
ಸ್ವಾಭಾವಿಕ	x	ಅಸ್ವಾಭಾವಿಕ	ಸಾಹಸ	x	ಅಸಾಹಸ
ಸಧವೆ	x	ವಿಧವೆ	ಸಂಸ್ಕೃತಿ	x	ಅಸಂಸ್ಕೃತಿ
ಸ್ಥಿರ	x	ಅಸ್ಥಿರ	ಸಮರ್ಥ	x	ಅಸಮರ್ಥ
ಸಾಮಾನ್ಯ	x	ಅಸಾಮಾನ್ಯ	ಹಿಂಸೆ	x	ಅಹಿಂಸೆ

ಇದೇ ಅರ್ಥವಲ್ಲಿ ಸಂಸ್ಕೃತವ (ಅವ್ಯಯ) ಉಪಸರ್ಗಗಳಾದ ***ಅವ, ಅಪ, ನಿರ್, ಸತಿ, ನಿಸ್, ದುರ್, ದುಸ್, ವಿ, ಸು, ಪ್ರ*** *ಇತ್ಯಾದಿಗಳು ಸೇರಿ ಆದ ವಿರುದ್ಧಾರ್ಥಕ ಶಬ್ದಗಳು:-*

ಅರ್ಹ	x	ಅನರ್ಹ	ಉದ್ಯೋಗ	x	ನಿರುದ್ಯೋಗ
ಅನುರಕ್ತಿ	x	ವಿರಕ್ತಿ	ಉತ್ಕೃಷ್ಟ	x	ನಿಕೃಷ್ಟ
ಅಭಿಮುಖ	x	ವಿಮುಖ	ಕಪಟಿ	x	ನಿಷ್ಕಪಟಿ
ಅರ್ಹ	x	ಅನರ್ಹ	ಕೀರ್ತಿ	x	ಅಪಕೀರ್ತಿ
ಅಪರಾಧಿ	x	ನಿರಪರಾಧಿ	ಕರುಣೆ	x	ನಿಷ್ಕರುಣೆ
ಅದೃಷ್ಟ	x	ನತದೃಷ್ಟ	ಕಾಮ	x	ನಿಷ್ಕಾಮ
ಅಹಂಕಾರ	x	ನಿರಂಹಕಾರ	ಗರ್ವಿ	x	ನಿಗರ್ವಿ/ಅಗರ್ವಿ
ಆಯಾಸ	x	ನಿರಾಯಾಸ	ಗುಣ	x	ನಿರ್ಗುಣ
ಆಧಾರ	x	ನಿರಾಧಾರ	ಖ್ಯಾತಿ	x	ಅಪಖ್ಯಾತಿ
ಆರೋಗ್ಯ	x	ಅನಾರೋಗ್ಯ	ಚಿಂತೆ	x	ನಿಶ್ಚಿಂತೆ
ಆಕಾರ	x	ನಿರಾಕಾರ	ಜಯ	x	ಅಪಜಯ
ಆಧಾರ	x	ನಿರಾಧಾರ	ಜೀವ	x	ನಿರ್ಜೀವ
ಆಕ್ರಮಣ	x	ನಿಷ್ಕ್ರಮಣ	ಜನ	x	ನಿರ್ಜನ
ಆಯಾಸ	x	ನಿರಾಯಾಸ	ದಯೆ	x	ನಿರ್ದಯೆ
ಆಕಾರ	x	ನಿರಾಕಾರ	ದೆಸೆ	x	ನಿರ್ದೆಸೆ
ಆಶ್ರಿತ	x	ನಿರಾಶ್ರಿತ	ದೋಷಿ	x	ನಿರ್ದೋಷಿ
ಆಶೆ	x	ನಿರಾಶೆ	ಧನ	x	ನಿರ್ಧನ
ಆತಂಕ	x	ನಿರಾತಂಕ	ನಂಬಿಕೆ	x	ಅಪನಂಬಿಕೆ
ಆಡಂಬರ	x	ನಿರಾಡಂಬರ	ನಾಗರಿಕ	x	ಅನಾಗರಿಕ
ಉನ್ನತಿ	x	ಅವನತಿ	ನಿಶ್ಚಿಂತೆ	x	ಅನಿಶ್ಚಿಂತೆ
ಉತ್ಸಾಹ	x	ನಿರುತ್ಸಾಹ	ಪಕ್ಷಪಾತ	x	ನಿಷ್ಪಕ್ಷಪಾತ

ಪ್ರವೃತ್ತಿ	x	ನಿವೃತ್ತಿ
ಪರಿಣಾಮ	x	ದುಷ್ಪರಿಣಾಮ
ಪ್ರಬಲ	x	ದುರ್ಬಲ
ಸದ್ಬುದ್ಧಿ	x	ದುರ್ಬುದ್ಧಿ
ಭೀತಿ	x	ನಿರ್ಭೀತಿ
ಭಯ	x	ನಿರ್ಭಯ
ಭಾಗ್ಯ	x	ನಿರ್ಭಾಗ್ಯ
ಮರ್ಯಾದೆ	x	ಅವಮರ್ಯಾದೆ
ಮುಖ	x	ವಿಮುಖ
ಮತ್ಸರ	x	ನಿರ್ಮತ್ಸರ
ಸನ್ಮಾನ	x	ಅವಮಾನ/ ಅಪಮಾನ.
ಮೋಹ	x	ನಿರ್ಮೋಹ
ಮೌಲ್ಯ	x	ಅಪಮೌಲ್ಯ
ಮೌನ	x	ನಿರ್ಮೌನ
ಯಶಸ್ಸು	x	ಅಪಯಶಸ್ಸು
ಯೋಗ	x	ವಿಯೋಗ/ ಅಯೋಗ
ರತಿ	x	ವಿರತಿ
ರೂಪ	x	ವಿರೂಪ
ರೋಗಿ	x	ನಿರೋಗಿ
ಲಜ್ಜೆ	x	ನಿರ್ಲಜ್ಜೆ
ಲಕ್ಷಣ	x	ವಿಲಕ್ಷಣ/ಅವಲಕ್ಷಣ
ವಶ	x	ನಿರ್ವಶ
ವಂಚನೆ	x	ನಿರ್ವಂಚನೆ
ವಿನಿತ	x	ಅವಿನಿತ
ವಿಗತಿ	x	ಪ್ರಗತಿ
ವಿರಕ್ತಿ	x	ಅನುರಕ್ತಿ
ವೈರಿ	x	ನಿರ್ವೈರಿ
ವಿರಳ	x	ಅವಿರಳ
ವಿಜೇತ	x	ಪರಾಜಿತ
ವಿಪರ್ಯಾಸ	x	ಅಪರ್ಯಾಸ
ಶಬ್ದ	x	ನಿಶಬ್ದ
ಶಂಕೆ	x	ನಿಶಂಕೆ
ಶೇಷ	x	ನಿಶ್ಶೇಷ
ಶಕ್ತಿ	x	ನಿಶ್ಶಕ್ತಿ
ಸಂದೇಹ	x	ನಿಸ್ಸಂದೇಹ
ಸದ್ವ್ಯಯ	x	ಅಪವ್ಯಯ
ಸದಭಿಮಾನ	x	ದುರಭಿಮಾನ
ಸಜ್ಜನ	x	ದುರ್ಜನ
ಸರಸ	x	ವಿರಸ
ಸತ್ಕಾರ್ಯ	x	ದುಷ್ಕಾರ್ಯ
ಸದ್ಗತಿ	x	ದುರ್ಗತಿ
ಸಂಯೋಗ	x	ವಿಯೋಗ
ಸ್ವರ	x	ಅಪಸ್ವರ
ಸ್ವದೇಶಿ	x	ವಿದೇಶಿ
ಸಾರ	x	ನಿಸ್ಸಾರ
ಸ್ವಾರ್ಥ	x	ನಿಸ್ವಾರ್ಥ
ಸಾರ್ಥಕ	x	ನಿರರ್ಥಕ
ಸ್ವಾವಲಂಬನೆ	x	ಪರಾವಲಂಬನೆ
ಸ್ವಾಭಿಮಾನ	x	ನಿರಭಿಮಾನ
ಸಂದೇಹ	x	ನಿಸ್ಸಂದೇಹ
ಸಂಕೋಚ	x	ನಿಸ್ಸಂಕೋಚ
ಸ್ವೀಕಾರ	x	ಅಸ್ವೀಕಾರ/ತ್ಯಾಗ
ಸ್ಮೃತಿ	x	ವಿಸ್ಮೃತಿ (ಮರೆವು)
ಶಬ್ದ	x	ನಿಶ್ಶಬ್ದ
ಸುದೈವ	x	ದುರ್ದೈವ
ಸುಗಂಧ	x	ದುರ್ಗಂಧ
ಸುಗುಣ	x	ದುರ್ಗುಣ
ಹಾಸ್ಯ	x	ನಿರ್ಹಾಸ ವಿಹಾಸ

೨. ಕ್ರಿಯೆ / ಗುಣಾಧಾರದಿಂದ ರಚಿತವಾದ ವಿರುದ್ಧಾರ್ಥಕ ಶಬ್ದಗಳು :

ಅಸಾಧಾರಣ	x	ಸಾಧಾರಣ
ಅರಳು	x	ಮುದುಡು
ಅಮೃತ	x	ವಿಷ
ಅಪಾರ	x	ಅಲ್ಪ
ಅಂತರಂಗ	x	ಬಹಿರಂಗ
ಉಳಿವು	x	ಅಳಿವು
ಉದ್ದ	x	ಗಿಡ್ಡ
ಉಪಕಾರ	x	ನಿರುಪಕಾರ/ಅಪಕಾರ
ಉಕ್ಕು	x	ಇಂಗು
ಉತ್ತಮ	x	ಅಧಮ
ಉಚ್ಚ	x	ನೀಚ
ಉಷ್ಣ	x	ಶೀತ/ ತಂಪು
ಉಬ್ಬು	x	ತಗ್ಗು
ಋಜು	x	ವಕ್ರ
ಎರವಾಗು	x	ನೆರವಾಗು
ಏಳು	x	ಬೀಳು
ಏರಿಕೆ	x	ಇಳಿಕೆ
ಒಳಗೆ	x	ಹೊರಗೆ
ಒಳಿತು	x	ಕೆಡುಕು
ಕನಿಷ್ಠ	x	ಗರಿಷ್ಠ
ಕರೆ	x	ಕಳಿಸು
ಕಹಿ	x	ಸಿಹಿ
ಕುಗ್ಗು	x	ಹಿಗ್ಗು
ಕೀಳು	x	ಮೇಲು
ಕನಸು	x	ನೆನಸು
ಕಟ್ಟು	x	ಬಿಚ್ಚು
ಕಠಿಣ	x	ಮೃದು
ಕ್ಷಯ	x	ವೃದ್ಧಿ
ಕೃತಜ್ಞ	x	ಕೃತಘ್ನ
ಕುಲವಂತ	x	ಕುಲಹೀನ
ಕೊನರು	x	ಕಮರು (ಬಾಡು)

ಗುಟ್ಟು	x	ರಟ್ಟು
ಗ್ರಾಹಕ	x	ಅಗ್ರಾಹಕ/ಉತ್ಪಾದಕ
ಘೋಷಣೆ	x	ನಿರ್ಘೋಷಣೆ/ ಅಘೋಷಣೆ
ಜನನ	x	ಮರಣ
ಜಂಗಮ	x	ಸ್ಥಾವರ
ಜಾಣ	x	ದಡ್ಡ
ಜಾಗೃತಿ	x	ಅಜಾಗೃತಿ
ಜೋಡಿ	x	ಒಂಟಿ
ತೂಕ	x	ಹಗುರ
ತಿರುಕ	x	ಧನಿಕ
ತಿರುವು	x	ನೇರ
ತೆಗಳಿಕೆ	x	ಹೊಗಳಿಕೆ
ತಂಪು	x	ಉಷ್ಣ / ಬಿಸಿ
ತಾತ್ಕಾಲಿಕ	x	ಶಾಶ್ವತ
ತೇಲಿಸು	x	ಮುಳುಗಿಸು
ತ್ಯಾಗ	x	ಭೋಗ
ತುಂಬಾ	x	ತುಸು
ತೆರೆ	x	ಮರೆ (ಮುಚ್ಚು)
ತೆಳು	x	ದಪ್ಪ
ದೀರ್ಘ	x	ಹ್ರಸ್ವ
ದಿಟ	x	ಸಟೆ
ದೊಡ್ಡ	x	ಚಿಕ್ಕ
ದೆಸೆ	x	ದುರ್ದೆಸೆ
ದೂರ	x	ಸಮೀಪ
ದುಷ್ಟ	x	ಸಭ್ಯ / ಶಿಷ್ಟ
ಧನಿಕ	x	ನಿರ್ಧನಿಕ
ಧೈರ್ಯ	x	ಅಧೈರ್ಯ
ನಿಂದಿಸು	x	ಸ್ತುತಿಸು
[illegible]	x	[illegible]
[illegible]	x	[illegible]
ನಗು	x	[illegible]

ಪರ	x	ವಿರೋಧ	ಶತ್ರು	x	ಮಿತ್ರ
ಪಾಶ್ಚಾತ್ಯ	x	ದೇಶೀಯ/ಪೌರಾತ್ಯ	ಶ್ರೇಷ್ಠ	x	ಕನಿಷ್ಠ
ಪಾಲಕ	x	ಸೇವಕ	ಶಾಖ (ಬಿಸಿ)	x	ಶೀತ
ಪಾಲನೆ	x	ಪೀಡಕ	ಶಿಷ್ಟ	x	ದುಷ್ಟ
ಪುಣ್ಯ	x	ಪಾಪ	ಸರಿ	x	ತಪ್ಪು
ಪುರಸ್ಕರಿಸು (ಕ್ರಿ)	x	ತಿರಸ್ಕರಿಸು	ಸರಳ	x	ಸಂಕೀರ್ಣ
ಪ್ರೀತಿ	x	ದ್ವೇಷ	ಸಮ	x	ವಿಷಮ
ಪೀಡಿಸು (ಕ್ರಿ)	x	ಮೋದಿಸು	ಸಟೆ	x	ದಿಟ
ಪಂಡಿತ	x	ಪಾಮರ	ಸ್ವಲ್ಪ	x	ಬಹು
ಬಲ್ಲಿದ	x	ಬಡವ	ಸ್ವೀಕರಿಸು (ಕ್ರಿ)	x	ತಿರಸ್ಕರಿಸು
ಬಡತನ	x	ಸಿರಿತನ	ಸತ್ಯ	x	ಅಸತ್ಯ/ ಮಿಥ್ಯ
ಬಂಜರು	x	ಭಾಗಾಯ್ತು	ಸಂಕ್ಷೇಪ	x	ವಿಸ್ತೃತ
ಬಲವಂತ	x	ಬಲಹೀನ	ಸ್ವರ್ಗ	x	ನರಕ
ಬುದ್ಧಿವಂತ	x	ಬುದ್ಧಿಹೀನ	ಸದಾಚಾರಿ	x	ದುರಾಚಾರಿ
ಬೇಕು	x	ಬೇಡ	ಸಗಟು	x	ಚಿಲ್ಲರೆ
ಬೇಡು	x	ನೀಡು	ಸಣ್ಣದು	x	ದೊಡ್ಡದು
ಬಿಚ್ಚು	x	ಮುಚ್ಚು	ಸಿಹಿ	x	ಕಹಿ
ಬಿಳುಪು	x	ಕಪ್ಪು	ಸೃಷ್ಟಿ	x	ಲಯ
ಬೀಳು (ಕ್ರಿ)	x	ಏಳು	ಸ್ಥಿರ	x	ಚರ
ಬೀಳ್ಕೊಡು (ಕ್ರಿ)	x	ಸ್ವಾಗತಿಸು	ಸುಂದರ	x	ಕುರೂಪಿ/ಅಸುಂದರ
ಭಯ	x	ನಿರ್ಭಯ	ಸುಳ್ಳು	x	ದಿಟ
ಮಿತ್ರ	x	ಶತ್ರು	ಸೂರ್ಯಾಸ್ತ	x	ಸೂರ್ಯೋದಯ
ಮುಂದೆ	x	ಹಿಂದೆ	ಸಖ್ಯ	x	ದ್ವೇಷ್ಯ
ರಕ್ಷೆ	x	ಶಿಕ್ಷೆ	ಸುಖ	x	ದುಃಖ
ರಫ್ತು	x	ಆಮದು	ಸಿಟ್ಟು	x	ತಾಳ್ಮೆ
ರಕ್ಷಿಸು	x	ಶಿಕ್ಷಿಸು	ಸ್ವಾತಂತ್ರ್ಯ	x	ಪಾರತಂತ್ರ್ಯ
ರಾಗ	x	ವಿರಾಗ	ಸ್ವದೇಶಿ	x	ವಿದೇಶಿ/ ಪರದೇಶಿ
ಲಾಭ	x	ನಷ್ಟ	ಸ್ನೇಹ	x	ದ್ವೇಷ
ವಿಷ	x	ಅಮೃತ	ಸಾಕು	x	ಬೇಕು
ವೀರ/ಬೀರು	x	ಖೇಡಿ/ಹೇಡಿ	ಹತ್ತು	x	ಇಳಿ
ವೃದ್ಧಿ	x	ಕ್ಷೀಣ	ಹಿರಿತನ	x	ಕಿರಿತನ
ವ್ಯಕ್ತ	x	ಅವ್ಯಕ್ತ	ಹಿನ್ನಡೆ	x	ಮುನ್ನಡೆ

ಹತ್ತಿಸು	x	ಆರಿಸು	ಹೆಚ್ಚು	x	ಕಡಿಮೆ
ಹೊಳೆ	x	ಮಂಕು/ಮಸುಕು	ಹೆದರು	x	ಧೈರ್ಯತಾಳು
ಹಿರಿಮೆ	x	ಕಿರಿಮೆ/ ಕೀಳರಿಮೆ	ಹೊಗಳು	x	ತೆಗಳು
ಹಗಲು	x	ರಾತ್ರಿ	ಹೊಸತು	x	ಹಳತು
ಹಂಚು	x	ಕೂಡಿಡು	ಹೊಮ್ಮು	x	ಮುರುಟು
ಹಿಗ್ಗು (ಕ್ರಿ)	x	ಕುಗ್ಗು			

೩. ದಿಗ್ವಾಚಕ ಸಂಬಂಧವಾಗಿರುವ ವಿರುದ್ಧಾರ್ಥಕ ಶಬ್ದಗಳು :

ಆಚೆ	x	ಈಚೆ	ಬಲ	x	ಎಡ
ಉದ್ದ	x	ಅಡ್ಡ	ಭವಿಷ್ಯ	x	ಭೂತ
ಉತ್ತರ	x	ದಕ್ಷಿಣ	ಮೂಡಣ	x	ಪಡುವಣ
ಕೊನೆ	x	ಮೊದಲು	ಮೇಲೆ	x	ಕೆಳಗೆ
ದೂರ	x	ಹತ್ತಿರ	ಹಿಂದೆ	x	ಮುಂದೆ
ಪೂರ್ವ	x	ಪಶ್ಚಿಮ			

೪. ಕಾಲಮಾನ (ಸಮಯ)ದ ಸಂಬಂಧವಾದ ವಿರುದ್ಧಾರ್ಥಕ ಶಬ್ದಗಳು :

ಅಂದು	x	ಇಂದು	ಪ್ರಾರಂಭ	x	ಮುಕ್ತಾಯ
ಆದಿ	x	ಅನಾದಿ	ಪ್ರಾಚೀನ	x	ನವೀನ/ ಅರ್ವಾಚೀನ
ಆಧುನಿಕ	x	ಪೂರ್ವಿಕ	ಪ್ರಾಕೃತ	x	ಅಪ್ರಾಕೃತ
ಆರಂಭ	x	ಅಂತ್ಯ	ಮುಸ್ಸಂಜೆ	x	ಮುಂಜಾನೆ
ಇಹ	x	ಪರ	ಹಿಂಚಿನ	x	ಮುಂಚಿನ
ಉದಯ	x	ಅಸ್ತಮ	ಹೊತ್ತಾರೆ	x	ಸಂಜೆ
ಜನನ	x	ಮರಣ	ಸಂಧ್ಯೆ	x	ಉಷೆ
ತಡ	x	ಬೇಗ	ಹುಟ್ಟು	x	ಸಾವು
ಮುಂದಿನ	x	ಹಿಂದಿನ	ಹಗಲು	x	ರಾತ್ರಿ
ಬೆಳಗು	x	ಬೈಗು	ಹತ್ತಿರ	x	ದೂರ
ಬೈಗು	x	ಬೆಳಿಗ್ಗೆ			

ಲಿಂಗಾಧಾರದಿಂದಾಗುವ ವಿರುದ್ಧಾರ್ಥಕ ಶಬ್ದಗಳೆಂದು ಪರಿಗಣಿಸುವ ರೂಢಿ ಕೆಲವರಲ್ಲಿದೆ. ಇದು ಇಂಗ್ಲೀಷ್‌ಸಾಮ್ಯದಿಂದ ಬಂದಿದೆ. ವಾಸ್ತವವಾಗಿ ಲಿಂಗಾಧಾರದಿಂದ ವಿರುದ್ಧಾರ್ಥಕ ಶಬ್ದಗಳನ್ನು ನಿರ್ಣಯಿಸುವುದು ಅಷ್ಟು ಸಮಂಜಸವೆನಿಸಬಹುದು. ಉದಾ: ತಂದೆ ಶಬ್ದಕ್ಕೆ ತಾಯಿ ಅನ್ಯ

ಲಿಂಗವಾಗುವುದಷ್ಟೇ. ಆದರೆ ಇಬ್ಬರಲ್ಲಿ ವಿರುದ್ಧಾರ್ಥವನ್ನು ನಾವು ಗುರುತಿಸುವುದಾದರೂ ಹೇಗೆ? ಅಲ್ಲಿ ಒಂದುಪಕ್ಷ ವಿರುದ್ಧಾರ್ಥ ಇದ್ದರೆ ಹೊಂದಿಕೆಯಾದರು ಹೇಗೆ ಇತ್ಯಾದಿ ಸಂಶಯಗಳಿಗೆ ಎಡೆ ಮಾಡುತ್ತದೆ. ಮಗ, ತಂದೆ ಎಂದಾಗಲೂ ಇಂತಹ ಶಬ್ದಗಳನ್ನು ಅನ್ಯಲಿಂಗಗಳೆಂದೇ ಭಾವಿಸುವುದು ಸೂಕ್ತ.

ಈ ವಿರುದ್ಧಾರ್ಥ ಶಬ್ದಗಳ ನಿರ್ಣಯದಲ್ಲಿ ಇಂತಹ ಗೊಂದಲಗಳು ಸಹಜವಾಗಿದ್ದು, ಚರ್ಚಾವಿಷಯಗಳಲ್ಲೊಂದು. (ಎಲ್ಲ ಶಬ್ದಗಳಿಗೂ ವಿರುದ್ಧಾರ್ಥಗಳಿರಬೇಕೆಂಬುದು ಸರಿಯಲ್ಲ. ಪ್ರಯೋಗಾಧಾರದಿಂದ ಪ್ರಮಾಣಿಸಬೇಕು).

ಉದಾ :

ಅಜ್ಜ	X	ಅಜ್ಜಿ (ಇ ಪ್ರತ್ಯಯ)
ಅರಸ	X	ಅರಸಿ/ ಅರಸಿತಿ
ಅಧ್ಯಕ್ಷ	X	ಅಧ್ಯಕ್ಷೆ/ ಅಧ್ಯಕ್ಷಿಣಿ (೧)
ಅತ್ತೆ	X	ಮಾವ
ಅಧ್ಯಾಪಕ	X	ಅಧ್ಯಾಪಕಿ
ಉಪನ್ಯಾಸಕ	X	ಉಪನ್ಯಾಸಕಿ/(ಇ)
ಉಪಾಧ್ಯಾಯ	X	ಉಪಾಧ್ಯಾಯಿನಿ(ಯಿನಿ)
ಕಳ್ಳ	X	ಕಳ್ಳಿ
ಕವಿ	X	ಕವಯತ್ರಿ
ಗಂಡ	X	ಹೆಂಡತಿ
ಕಾರ್ಯದರ್ಶಿ	X	ಕಾರ್ಯದರ್ಶಿನಿ (ಇನಿ)
ಕಾದಂಬರಿಕಾರ	X	ಕಾದಂಬರಿಕಾರ್ತಿ
ಗಾಯಕ	X	ಗಾಯಕಿ (ಇ)
ಗೆಳೆಯ	X	ಗೆಳತಿ
ಗೆಣೆಕಾರ	X	ಗೆಣೆಕಾತಿ (ಇ)
ಗೃಹಸ್ಥ	X	ಗೃಹಸ್ಥೆ (ಎ)
ತನುಜ	X	ತನುಜೆ
ತಜ್ಞ	X	ತಜ್ಞೆ
ತಿರುಕ	X	ತಿರುಕಿ/ ತಿರುಕೆ
ದೇವ	X	ದೇವಿ (ಇ)
ದೊರೆ	X	ದೊರೆಸಾನಿ
ಧೀರ	X	ಧೀರೆ (ಎ)
ಧೈರ್ಯಗಾರ	X	ಧೈರ್ಯಗಾತಿ (ಇ)
ನಿಪುಣ	X	ನಿಪುಣೆ (ಎ)
ನೀತಿವಂತ	X	ನೀತಿವಂತೆ (ಎ)
ಪುರುಷ	X	ಸ್ತ್ರೀ
ಪ್ರಿಯಾ	X	ಪ್ರಿಯೆ/ ಪ್ರೇಯಸಿ(ಇ)
ಬೀಗ	X	ಬೀಗತಿ (ಇ)
ಭಕ್ತ	X	ಭಕ್ತೆ
ಮಗ	X	ಮಗಳು
ಮದುಮಗ	X	ಮದುಮಗಳು
ಮುಗ್ಧ	X	ಮುಗ್ಧೆ (ಎ)
ಮಾನ್ಯ	X	ಮಾನ್ಯೆ
ಪ್ರೌಢ	X	ಪ್ರೌಢೆ
ಯುವಕ	X	ಯುವತಿ
ರಸಿಕ	X	ರಸಿಕೆ
ಲೇಖಕ	X	ಲೇಖಕಿ
ವಾದಕ	X	ವಾದಕಿ
ವಿಧುರ	X	ವಿಧವೆ (ಎ)
ವಾಚಕ	X	ವಾಚಕಿ (ಇ)
ವಿದ್ವಾಂಸ	X	ವಿದುಷಿ (ಇ)
ವೈದ್ಯ	X	ವೈದ್ಯೆ
ಶಕ್ತ	X	ಶಕ್ತೆ (ಎ)
ಶಿಕ್ಷಕ	X	ಶಿಕ್ಷಕಿ
ಸನ್ಯಾಸಿ	X	ಸನ್ಯಾಸಿನಿ (೨)
ಸದಸ್ಯ	X	ಸದಸ್ಯೆ (ಎ)
ಸಹೋದರ	X	ಸಹೋದರಿ
ಸ್ವಾಮಿ	X	ಸ್ವಾಮಿನಿ/ಸಾನಿ (ಇ)

(೧) 'ಇನಿ' ಎಂಬ ಸ್ತ್ರೀ ಪ್ರತ್ಯಯಸೇರಿ ರೂಢಿಬಲದಿಂದಾದವು. ಇವುಗಳು ಮಾನ್ಯಮಾಡಿ ಸ್ವೀಕರಿಸಿರುವ ಪ್ರಯೋಗಗಳು. (೨) ರೂಢಿಪ್ರಯೋಗ ಟೈಪಿಗ-ಟೈಪಿಣಿ ಶಬ್ದಗಳಂತೆ ಮಾನ್ಯ ಮಾಡುವುದು

ನೂತನ ಪ್ರಯೋಗಗಳು : ಭಾಷೆಯು ಹರಿಯುವ ನದಿಯನೀರಿನಂತೆ. ನದಿಯು ಮೂಲದಲ್ಲಿ ಅಲ್ಪವಾಗಿ ಕಾಣಿಸಿಕೊಂಡು ಸಾಗುತ್ತ ವಿಪುಲತೆಯನ್ನು ಪಡೆದುಕೊಳ್ಳುತ್ತದೆ. ಹಾಗೇ ಭಾಷೆಯಲ್ಲಿ ಅಗತ್ಯಕ್ಕನುಗುಣವಾಗಿ ಎರವಲಾಗಿ, ಅನುವಾದಗೊಂಡು ಹೊಸ ಶಬ್ದಗಳಲ್ಲಿ ಸಂಸ್ಕೃತ, ಇಂಗ್ಲೀಷ್ ಇತರ ಭಾಷೆಗಳಿಂದ ಹೊಸ ಸಮಾಸಗಳು, ಕೃದಂತ, ತದ್ಧಿತಾಂತ ರೂಪುಗಳು, ಹೊಸ ನುಡಿಗಟ್ಟುಗಳು ಅವಶ್ಯಕತೆಗಳಿಗನುಗುಣವಾಗಿ ಕನ್ನಡೀಕರಣ ಗೊಳಿಸಿಕೊಳ್ಳುವಸೃಷ್ಟಿ ನೈಸರ್ಗಿಕವಾಗಿ ಆಗುತ್ತಲೇಯಿದೆ. ಅದು ಭಾಷೆಗೆ ಅತ್ಯಗತ್ಯವಾದ **ನೈಸರ್ಗಿಕ ಗುಣ**ವೆನಿಸುತ್ತದೆ. ಆ ಪ್ರಯೋಗಗಳ ಪರಿಚಯ :

ಭಾಷೆಬೆಳೆಯುವ ಮಾರ್ಗಗಳನ್ನು ಹೀಗೆ ಗುರ್ತಿಸಬಹುದು :

೧) ಸಂಸ್ಕೃತಶಬ್ದಗಳು ಇರುವ ಹಳೆಯಅರ್ಥದೊಂದಿಗೆ ನವೀನಾರ್ಥವನ್ನು **ಪಡೆದುಕೊಳ್ಳುತ್ತವೆ:** ಭೂಗತದೊರೆ, ಅನ್ನಬ್ರಹ್ಮ ಇತ್ಯಾದಿ. ಹಾಗೆಯೇ ಕ್ರಿಯಾಪದಗಳಿಂದ, ನಾಮಪದ ಮತ್ತು ನಾಮವಿಶೇಷಣಗಳಾಗುತ್ತವೆ. ಉದಾ : **ರಕ್ಷಿಸು-ರಕ್ಷ, ರಕ್ಷಕ, ರಕ್ಷಣೆ, ರಕ್ಷಣೀಯ. ಜನಿಸು-ಜನಕ, ಜನ್ಯ; ಮನ್ನಿಸು-ಮನನ, ಮನ್ನಣೆ, ಮಾನ್ಯ, ಮಾನ್ಯೆ** ಇತ್ಯಾದಿ. ಹೀಗೆ ಕನ್ನಡದ ಶಬ್ದಗಳನ್ನು ಸೃಷ್ಟಿಸಿಕೊಂಡು ಕೊರತೆಯನ್ನು ನೀಗಿಸಿಕೊಳ್ಳುತ್ತದೆ.

೨) ಇಂಗ್ಲೀಷ್‌ನಂತೆ ನಾಮಪದ, ನಾಮವಿಶೇಷಣ, ಕ್ರಿಯಾಪದಗಳಾಗಿ ಒಂದೇ ಶಬ್ದವನ್ನು ಬಳಸುವ ಸೌಲಭ್ಯಕ್ಕೆ ಅವಕಾಶವಿದೆ: ಉದಾ : **ಬ್ಯೂಟಿ**ಪಾರ್ಲರ್, **ಫ್ಯಾನ್ಸಿ**ಸೆಂಟರ್, **ಕ್ಲೀನಿಂಗ್**-ಕ್ಲೀನಿಂಗ್‌ಪೌಡರ್, **ಬೈಂಡಿಂಗ್**-ಬೈಂಡಿಂಗ್‌ಪೈಪರ್, **ಪ್ರಿಂಟಿಂಗ್**-ಪ್ರಿಂಟಿಂಗ್‌ಪೇಪರ್, **ರೀಡಿಂಗ್**-ರೀಡಿಂಗ್‌ರೂಂ, **ಡೈನಿಂಗ್**-ಡೈನಿಂಗ್‌ಹಾಲ್ ಇತ್ಯಾದಿ.

ಹೀಗೆಯೇ ಕನ್ನಡದಲ್ಲಿ ,ಇಂಗ್ಲೀಷ್‌ಪದಗಳಿಗೆ **ಮಾಡು** ಎಂಬುದನ್ನು ಸೇರಿಸಿಕೊಂಡು **ಕೆಲವು ರೂಪುಗಳು ಪ್ರಯೋಗಗೊಂಡಿರುವುದು ಕಾಣುತ್ತವೆ:** ಉದಾ : **ಜಂಪ್** ಮಾಡು, **ಡ್ಯಾನ್ಸ್** ಮಾಡು, **ರನ್** ಮಾಡು, **ಫಾರ್ವಡ್** ಮಾಡು, **ಡ್ರಿಂಕ್** ಮಾಡು ಇತ್ಯಾದಿ ನಾಮವಿಶೇಷಣಗಳಾಗಿ ಬಳಕೆಗೊಳ್ಳುತ್ತಿವೆ. ಹೀಗೆಯೇ ಸಂಸ್ಕೃತದಿಂದ ಅಸಂಖ್ಯಾತಶಬ್ದಗಳು ಬಂದುಸೇರಿವೆ. ಉದಾ : **ಕನ್ಯಾಶುಲ್ಕ, ಆಕಾಶವಾಣಿ.**

೩) **ಇಂಗ್ಲೀಷ್‌ಶಬ್ದಗಳಿಗೆ ಸಂಸ್ಕೃತಶಬ್ದಗಳನ್ನು ಅನುವಾದಿಸಿಕೊಳ್ಳಲಾಗುತ್ತದೆ:** ಉದಾ: ರೆಕಾರ್ಡು-**ಪ್ರಸ್ತಾವನ**, ಹಾಸ್ಪಿಟಲ್-**ಔಷಧಾಲಯ**, ಪೊಲೀಸ್ ಸ್ಟೇಷನ್ - **ಆರಕ್ಷಕ ಠಾಣೆ** (ಕೇಂದ್ರ), ಮೆಮೋರಾಂಡಂ - **ವಿನಂತಿಪತ್ರ,** ಎಸ್ಟಾಬ್ಲಿಷ್ - **ಸ್ಥಾಪಿಸು.**

ಹೊಸಸಮಾಸ ರೂಪಗಳು ಹಾಗೂ ಸಹಜಶಬ್ದಗಳು **ಸೇರಿಕೊಳ್ಳುತ್ತವೆ:** ಉದಾ

ಕೋಳಿ**ಸಾಕಣೆ**, ಉಪವಾಸ **ಮುಷ್ಕರ**, ದೇವಾ**ಗಾರ**, ಆರಣ್ಯೀ**ಕರಣ**, ಅಗಲೀ**ಕರಣ**, ಕಥಾ**ನಾಯಕಿ**, ಪ್ರಜ್ಞಾ**ಹೀನತ**, ಅರಿ**ವಳಿಕೆ**, ಅಸಲಿ**ತನ**, ಅನು**ಭಾವಿಕ**, ಜನ**ಕೀಯ**, ಕುಗ್ರಾಮ, ಸುತ್ರ**ರಾಮ್**, ಶಾಬ್ದಿ**ಕತೆ**, ಪಳ**ತಿಕೆ**, ಕೀ**ಳುಗ**, ಓ**ದುಗ**, ಗೊಟಾ**ಯಿಸು**, ಲಗಾ**ಯಿಸು**, ಕಲಾ**ಯಿಸು**, ಅಕ್ಕ**ರಿಸು**, ಕೃತಿ, ಲೇಪಿ**ಸು**, ಪರಿಮ**ಳಿಸು**, ಪರಿಣ**ವಿಸು**, ಕಾರ್ಯದರ್ಶಿನಿ ಇತ್ಯಾದಿ. ದಾಖ**ಲಿಸು**, ಲಗ**ತ್ತಿಸು**, ಲಗಾ**ಯಿಸು**, ದಬಾ**ಯಿಸು**, ಬಡಾ**ಯಿಸು**,ಬಡಾ**ವಣೆ**, ಆಯಿಸುಪ್ರತ್ಯಯ ಸೇರಿ ಪ್ರೇರಣಾರ್ಥ ರೂಪಗಳಾಗಿವೆ ಇತ್ಯಾದಿಗಳು. ಕನ್ನಡದ ನಾಮಪದಗಳು ಸಂಸ್ಕೃತರೂಪ ಧರಿಸಿ **ನಾಮವಿಶೇಷಣ**ಗಳಾಗುತ್ತಿವೆ. ಉದಾ : ಕೈಗಾರಿಕಾ **ಕ್ರಾಂತಿ**. ಕಲಿಕಾ-**ಕಲಿಕಾಕೇಂದ್ರ**, ಮುಂದುವರಿಕಾ-ಮುಂದು**ವರಿಕಾ ಶಿಕ್ಷಣ**, ಇತ್ಯಾದಿ ರೂಪಗಳು ಬಳಕೆಗೊಳ್ಳುತ್ತಿದೆ. ಸಂಸ್ಕೃತರೂಪಗಳು ಕನ್ನಡಪ್ರತ್ಯಯದೊಂದಿಗೆ ಕನ್ನಡತನ ಪಡೆದುಕೊಳ್ಳುತ್ತಿದೆ. ಸಂಕಲನ+ಕಾರ=ಸಂಕಲನಾ**ಕಾರ**, ಚಿತ್ರ+ಕಾರ= ಚಿತ್ರ**ಕಾರ**, ಪತ್ರ+ಕಾರ=ಪತ್ರ**ಕಾರ**. ಇಂತಹರೂಪಗಳು ಭಾಷಾಭಿವೃದ್ಧಿಗೆ ಪೂರಕವಾಗಿವೆ. ಇವು ವ್ಯಾಕರಣ ನಿಯಮಕ್ಕೆ ಅಸಹಜ ರೂಪಗಳೆನಿಸಬಹುದು. ಇವು ಜನಾಂಗಗಳ ಭಾವಮಿಲನದಿಂದ ರೂಪುಗೊಂಡವು.

ಇವುಗಳೂ ಕಿವಿಗೆಹಿತವೆನಿಸಬೇಕು. ಬರಹಕ್ಕೆ ಸಂಗ್ರಹವಾಗಿ ಉಚ್ಚಾರಣೆಗೆ ಸುಲಭವೆನಿಸಿದಾಗ ಖಂಡಿತವಾಗಿ ಅವು ಹೊಂದಿಕೊಂಡು ಉಳಿಯಬಲ್ಲವು. ಇತ್ತೀಚಿನ ಭಾಷಾ ಬೆಳವಣಿಗೆಯಲ್ಲಿ ಇವುಗಳದ್ದೇ ಭರಾಟೆ. ಅಂತೂ ಯಾವುದೇ ಶಬ್ದಗಳನ್ನು ಮೂಲ ಭಾಷೆಯ ಉಚ್ಚಾರಣೆಗೆ ಸಮನಾಗಿ ಪ್ರಯೋಗಿಸಲು ಪ್ರಯತ್ನ ನಡೆಯುತ್ತಿರುತ್ತದೆ. ಆ ಶಬ್ದಗಳ ಬಳಕೆಹೆಚ್ಚಾದಂತೆ ಬದಲಾವಣೆಗಳು ಹೆಚ್ಚಾಗುತ್ತವೆ. ಅವುಗಳು ಉಳಿಯುವುದು ಸಹಜವೂ ಸೂಕ್ತವೂ ಆಗಿದೆ. ಅವುಗಳು ಭಾಷೆಯಲ್ಲಿ ಭದ್ರವಾಗಿ ನೆಲೆಸುವವರೆಗೆ ಅವುಗಳನ್ನು ವ್ಯಾಕರಣ ನಿಯಮಗಳ ಅಡಿಯಲ್ಲಿ ಸೇರಿಸಲು ಬರುವುದಿಲ್ಲ.

ಇವುಗಳಲ್ಲದೆ ಕನ್ನಡದಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡು ಭಾಷೆಯ ಕಸುವು, ಸೊಗಡನ್ನು ಹೆಚ್ಚಿಸುವ ವಿವಿಧಕ್ಷೇತ್ರಗಳ, ಪರಿಕರಗಳ, ವಿಶಿಷ್ಟರೂಪಗಳುಂಟು. ಇವು ನಮ್ಮ ಭಾಷಾ ಪುಷ್ಟಿಗನುಸಾರವಾಗಿ ಜಾಯಮಾನಕ್ಕನುಗುಣವಾಗಿ ಮಾಡಿಕೊಳ್ಳಬೇಕು.ಅವು : **'ನುಡಿಗಟ್ಟುಗಳು'**, **'ಜೋಡುನುಡಿಗಳು'**, **'ಪ್ರತಿಧ್ವನಿ'**, **'ಆಡುನುಡಿಗಳು'** ಇತ್ಯಾದಿ. ವಿಶಿಷ್ಟವಾದ ಈ ರೂಪಗಳ ಪರಿಚಯ ಅವಶ್ಯಕವಾಗಿದೆ.

೧) ನುಡಿಗಟ್ಟುಗಳು : ಭಾಷಾ ಜಾಯಮಾನಕ್ಕನುಗುಣವಾಗಿ (ಸ್ವಭಾವ) ನಾಮವಿಶೇಷಣ, ಕ್ರಿಯಾವಿಶೇಷಣಗಳನ್ನು ವಿಶೇಷ ಸಂದರ್ಭಗಳಲ್ಲಿ ನುಡಿಗಟ್ಟುಗಳಾಗಿ ಬಳಸುತ್ತೇವೆ. **'ಊಟದಲ್ಲಿ ಉಪ್ಪಿನಕಾಯಿ'**ಯಿದ್ದಂತೆ ಅರ್ಥದೀಪ್ತಿಗೆ ನುಡಿಗಟ್ಟು. ಬರವಣಿಗೆಯಲ್ಲಿ ಬರೆದುಕೊಂಡಾಗ **ಬಿಗಿ, ಸೊಗಸು, ಕಾಂತಿ** ಹೆಚ್ಚು. ಅರ್ಥೈಸುವಾಗ ಪಿಶಾಲಾರ್ಥದಲ್ಲಿ ಬಳಸಬೇಕಾಗುತ್ತದೆ. ಇವುಗಳಿಗೆ ನಿಘಂಟಿನ ಅರ್ಥವನ್ನು ಪರಿ

ಗಣಿಸಲಾಗುವುದು. ಆಚಾರ, ವಿಚಾರ, ಸಂದರ್ಭ, ಮಾತಿನವರಸೆ, ಸನ್ನಿವೇಶಕ್ಕೆ ಅನುಸಾರವಾಗಿ ಅರ್ಥನೋಡಿ ತಿಳಿಯಬೇಕು. ಉದಾ : **ಮಸಿಬಳಿ, ಹಿತ್ತಾಳೆಕಿವಿ, ಟೋಪಿಹಾಕು, ಧನಪಿಶಾಚಿ,** ಇವುಗಳನ್ನು ನುಡಿಗಟ್ಟುಗಳು ಎನ್ನುತ್ತೇವೆ.

ಹೆಸರೇ ತಿಳಿಸುವಂತೆ ಹೊಂದಿಕೊಳ್ಳುವ ಎರಡು ಬೇರೆ ಬೇರೆ ನುಡಿಗಳಿಂದ ರೂಪಿತವಾದ ಹೆಚ್ಚಿನ ಅರ್ಥಕ್ಕೆ ಆಸ್ಪದವಾಗುವ ವಿಶಿಷ್ಟಶಬ್ದಸಮೂಹವನ್ನು **'ನುಡಿಗಟ್ಟು'**ಗಳೆನ್ನುತ್ತೇವೆ. ಅವು ನಿಷ್ಪನ್ನಶಬ್ದಗಳ ಗುಂಪಿಗೆ ಸೇರುತ್ತವೆ. ಆದರೂ ಅವುಗಳ ನಿಷ್ಪನ್ನತೆಯನ್ನು (ರೂಪುಗೊಂಡ ವಿಧಾನವನ್ನು) ವ್ಯಾಕರಣದ ನಿಯಮಗಳಿಂದ ಸೂತ್ರೀಕರಿಸಿ ಹೇಳಲು ಬರುವುದಿಲ್ಲ. ಈ ನುಡಿಗಟ್ಟುಗಳಿಂದ ಅಲಂಕೃತವಾದ ವಾಕ್ಯಗಳಿಂದ ಓದುಗನ ಮನಸ್ಸಿನಲ್ಲಿ ಸಾಕಾರಗೊಂಡ ಅರ್ಥಪ್ರತಿಗಳು ಮೂಡುತ್ತವೆ. ಹೀಗಾಗಿ ಇವು ವಾಕ್ಯದಅರ್ಥಪ್ರತೀತಿಗೆ ಅನುಕೂಲವಾಗಿವೆ. ಗಾದೆಗಳ ರಚನೆಯಲ್ಲಿ ಇವುಗಳ ಪಾತ್ರಹಿರಿದು. ಶಿಷ್ಟಭಾಷೆಯಲ್ಲಿ ಈ ರೂಪಗಳ ಬಳಕೆ ಕಡಿಮೆಯೆನ್ನಬಹುದು. **ಉದಾ: 'ಕತ್ತಿ ಮಸೆ'** ಎಂಬುದೊಂದು ನುಡಿಗಟ್ಟು. ಕತ್ತಿ+ಮಸೆ=**ಕತ್ತಿ ಹರಿತಮಾಡು** ಎಂಬಿಷ್ಟೇ ಅರ್ಥದಲ್ಲಿ ಅದು ವಿರಮಿಸುವುದಿಲ್ಲ. ಸಮಯ ನೋಡಿ **ಪ್ರತೀಕಾರಕ್ಕೆ ಸಿದ್ಧಗೊಳ್ಳು** ಎಂಬರ್ಥ. ಇದು **ವಾಚಕನ ಸೇಡಿನ ಇಂಗಿತ**ದ ಅರ್ಥದಮೇಲೆ ರೂಪುಗೊಂಡಿದೆ.

'ಯಮಸಾಹಸ' ಯಮ+ಸಾಹಸ ಇಲ್ಲಿ ಕೇವಲ ಪದಗಳು ತಮ್ಮ ಅರ್ಥದ ಮಟ್ಟಿಗೇ ನಿಂತಿಲ್ಲ. **'ಯಮ'** ಶಬ್ದದಿಂದ ಸಾಹಸದಲ್ಲಿ ಎದುರಾಗುವ ಆ ಸಮಾನವಾದ **ಭಯಾನಕತೆ, ದಿಕ್ಕುಕಾಣದ** ಅನನ್ಯಸ್ಥಿತಿ ಅರಿವಾಗುತ್ತವೆ. ಇಲ್ಲಿನ ತಾತ್ಪರ್ಯಾರ್ಥವು **'ಅಖಂಡ'** ಶಬ್ದದ ಭಾವಗ್ರಹಣಕ್ಕೆ ಕಾರಣವಾಗುತ್ತದೆ. ಇತ್ತೀಚೆಗೆ ಶಾಲಾಪಠ್ಯಗಳಲ್ಲಿ ಅಗತ್ಯವನ್ನನುಸರಿಸಿ ಇಂತಹ ನುಡಿಗಟ್ಟುಗಳಿಗೆ ಗಮನ ಕೊಡಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ನುಡಿಗಟ್ಟುಗಳನ್ನು ಪಟ್ಟಿ ಮಾಡಿ ತೋರಿಸಲಾಗುತ್ತಿದೆ. ಇವುಗಳು ಮಕ್ಕಳ ಭಾಷಾಭಿವೃದ್ಧಿಗೆ ಪೂರಕವಾಗುತ್ತವೆ.

ಕೆಲವು ನುಡಿಗಟ್ಟುಗಳು (ಅರ್ಥಸಹಿತ) :

ಮೈಗರ - ಗುಪ್ತವಾಗಿರು, ಅನ್ಯರೂಪಧರಿಸಿ ಕಾಣದೇಹೋಗು.

ಕಣ್ತೆರೆ - ಜ್ಞಾನೋದಯವಾಗು.

ವಿಷಕಾರು - ಅನಿಷ್ಟಕ್ಕೆ ತೊಡಗುವುದು.

ಜೋತುಬೀಳು - ಅಂಟಿಕೊಳ್ಳುವುದು, ಅನ್ಯರಿಗೆ ಭಾರವಾಗುವುದು.

ನಿಟ್ಟುಸಿರುಬಿಡು - ವ್ಯಥೆ, ನೋವನ್ನು ವ್ಯಕ್ತಪಡಿಸು.

ಮೈ ತಣ್ಣಗಾಗು - ಶಕ್ತಿಹೀನವಾಗು.

ಮೈಮರೆ - ತಲ್ಲೀನವಾಗು / ಎಚ್ಚರ ತಪ್ಪುವುದು.

ಒಳಗಣ್ಣು ತೆರೆ - ಅಂತರಂಗದ ಕಡೆ ದೃಷ್ಟಿಬೀರು.

ಒಮ್ಮೆಟ್ಟು	-	ಒಂದೆ ಸರಿವುದು.
ರಾಮರಾಜ್ಯ	-	ಸುಭಿಕ್ಷ ಸಮಾಜದ ಕಲ್ಪನೆ.
ತುಟಿಪಿಟಿಕೆನ್ನು	-	ಮಾತು ಹೊರಡದ ಸ್ಥಿತಿಯಾಗು (ಭಯ).
ತಲೆ ಹೋಗು	-	ಅಪಾಯಕ್ಕೀಡಾಗು.
ಪಣಕ್ಕಿಡು	-	ಬಾಜಿ ಕಟ್ಟುವಾಗಿನ ವಸ್ತುವಾಗಿ ಮಾಡು.
ಕುಗ್ಗಿಹೋಗು	-	ಅಲ್ಪವಾಗು / ಶಕ್ತಿಹೀನ.
ಸಂಚಕಾರ ಹಾಕು	-	ನಾಶಕ್ಕೆ ಕೈ ಹಾಕು, ತಂತ್ರ ಹೂಡು.
ಮಾನದಂಡ	-	ಅಳತೆ ತಿಳಿಯಲು ಬಳಸುವ ಸಾಧನ.
ರಾಮಬಾಣ	-	ಅತ್ಯಂತ ಪರಿಣಾಮಕಾರಿಯಾದುದು.
ಹೊಂಚುಹಾಕು	-	ಸಮಯಕಾಯಿ/ ಸಮಯಸಾಧಕನಾಗು.
ಇಂಗಿಹೋಗು	-	ಪೂರ್ಣ ನಾಶವಾಗು.
ಶತಾಯಗತಾಯ	-	ಏನಾದರೂ ಸರಿಯಾಗಬೇಕೆಂಬ ಛಲಬಿಡದೆ ಮಾಡು.
ಗದಾಪ್ರಹಾರ	-	ನಾಶರೂಪದ ಏಟು (ನಿರ್ನಾಮ ಮಾಡು).
ತೂರಿಬಿಡು	-	ಪೂರ್ಣವಾಗಿ ಕಳೆದುಬಿಡುವುದು (ಧಿಕ್ಕರಿಸು).
ಬೋಟಿತೆಗೆ	-	ಶಕ್ತಿಗುಂದಿಸು
ಪದರಗುಟ್ಟು	-	ನಡುಗು

ಹೀಗೆ **ಪಿಸುಗುಟ್ಟು, ತಲೆಹೋಗು, ಗುರುಗುಟ್ಟು, ಕೋಪತೋರು, ಪೂರ್ವಗ್ರಹ ಗಾಳಿಸುದ್ದಿ, ಪ್ರಾಣಹೀರು, ತಲೆತಗ್ಗಿಸು, ಹೃದಯಬರಿ, ಹುಟ್ಟುಹಾಕು, ರಕ್ತಗತ, ಹಿಮ್ಮುಖ, ತಳಹದಿ,** ಇತ್ಯಾದಿ ನುಡಿಗಟ್ಟುಗಳನ್ನು ಪರಿಚಯಕ್ಕೆ ಕೊಡಬಹುದು. ಅವುಗಳಅರ್ಥ ಹೇಳಬಹುದಾದರೂ ವಾಕ್ಯದಲ್ಲಿ ಅವುಗಳ ಸಾಂದರ್ಭಿಕ ಅರ್ಥನೋಡಿ ತಿಳಿದುಕೊಳ್ಳಬೇಕು.

೨) **ಜೋಡುನುಡಿ :** (ಕೂಡುನುಡಿ)

ಪ್ರತಿಯೊಂದು ಭಾಷೆಯಲ್ಲೂ **ಜೋಡುನುಡಿ**ಗಳಿರುತ್ತವೆ. ಎಲ್ಲ ಪ್ರಸಂಗಗಳಲ್ಲೂ ಇವು ಜೋಡಿಯಾಗಿಯೇ ಬಳಕೆಯಾಗಿ ಕಾವ್ಯಭಾಗದಲ್ಲಿ, ಮಾತಿಗೆ ಮೆರುಗನ್ನು ತರುತ್ತವೆ. ಇವುಗಳ ಸ್ವರೂಪಗಳನ್ನು ಗಮನಿಸಿದಾಗ ಕನ್ನಡದವಲ್ಲಿನ **ಪ್ರಾಸದ ಅತಿಶಯತೆಯ ಹಿನ್ನೆಲೆ**ಯಿಂದ ರಚಿತವಾಗಿರುವುದು ಕಂಡುಬರುತ್ತದೆ. ಇವು ಕನ್ನಡದ ಜಾಯಮಾನಕ್ಕೆ ಹೊಂದಿಕೊಂಡು ಬಂದನುಡಿಗಳೆನ್ನಬಹುದು. ಇವು **ಹೊಸತನ ಬಯಸುವ ಮಾನಸಿಕ**

ತೃಪ್ತಿಯ ಭಾವನೆಗೆ ಅಭಿವ್ಯಕ್ತಿಗೆ ಹೊಮ್ಮಿದವುಗಳಾಗಿವೆ. ಅವುಗಳ ಬಳಕೆಯಿಂದ ಭಾಷೆಯ ಒಂದು ಸೊಗಸು ಬರುತ್ತದೆ.

ಅವುಗಳ (ಜೋಡಿ) ನ್ನು ಶಬ್ದದೃಷ್ಟಿಯಿಂದ ಸಂಸ್ಕೃತ-ಸಂಸ್ಕೃತ, ಸಂಸ್ಕೃತ-ಕನ್ನಡ ಹೀಗೆಯೇ ಕನ್ನಡ - ಕನ್ನಡ ಶಬ್ದಗಳಲ್ಲಿ ತದ್ಭವ - ತದ್ಭವಶಬ್ದಗಳಲ್ಲಿ, ಆಡುನುಡಿಗಳಲ್ಲಿ ರಚನೆಯಾಗಿರುವುದನ್ನು ಗುರುತಿಸಬಹುದು. ಅವುಗಳನ್ನು **ಅರ್ಥದೃಷ್ಟಿಯಿಂದ ಪರಿಶೀಲಿಸಿ**ದಾಗ ೧) **ಸಮಾನಾರ್ಥಕ ಜೋಡುನುಡಿ**ಗಳು ೨) **ಪೂರಕಾರ್ಥಕ ಜೋಡು ನುಡಿ**ಗಳು ೩) **ವಿರುದ್ಧಾರ್ಥಕ ಜೋಡು ನುಡಿ**ಗಳು ೪) **ಅಸ್ಪಷ್ಟ ಪರಶಬ್ದದ ಜೋಡುನುಡಿ**ಗಳೆಂದು ವರ್ಗೀಕರಿಸಬಹುದು :

ಉದಾ: ಪಟ್ಟಿ ರೂಪದಲ್ಲಿ ಶಬ್ದದೃಷ್ಟಿಯ ಜೋಡಣೆಗಳು

ಸಂ+ ಸಂ	**ಸಂಸ್ಕೃತ+ಕನ್ನಡ /ಇತರೆ**	**ಕನ್ನಡ+ಕನ್ನಡ**	**ತದ್ಭವ+ತದ್ಭವ / ಗ್ರಾಮರೂಪ**
ರೋಗರುಜೆ	ಪಂಡಿತ ಪಾಮರ	ಕುಂದು ಕೊರತೆ	ಜಾತ್ರೆ ಯಾತ್ರೆ
ಗತ್ತುಗಮ್ಮತ್ತು	ಭುವಿ ಬಾನು(೧)	ಕಾಡು ನಾಡು	ಐಬು ಸೈಬು
ಆದಿ ಅಂತ್ಯ	ಲಂಚ ರುಷುವತ್ತು (ಅರಬ್ಬಿ)	ಕಾಯಿ ಕಸರು	ಅವಳಿಜವಳಿ
ಸುಖ ದುಃಖ	ಆಸ್ತಿ ಪಾಸ್ತಿ	ಎಡರುತೊಡರು	
ಆಚಾರವಿಚಾರ		ನೀರು ನಿಡಿ	
ಅಲ್ಪ ಸ್ವಲ್ಪ		ಅರೆ ಬರೆ	
		ಕೆಲಸ ಕಾರ್ಯ	
		ಕಾಯಿಲೆ ಕಸಾಲೆ	
		ಮರ ಮಂಡಿ	
		ಬಟ್ಟೆ ಬರೆ	
		ಹಿಗ್ಗಾ ಮುಗ್ಗಾ	
		ಅಡ್ಡಾ ದಿಡ್ಡಿ	

ಅ) ಅವುಗಳನ್ನು ಅರ್ಥದ ಹಿನ್ನೆಲೆಯಲ್ಲಿ ಹೀಗೇ ವರ್ಗೀಕರಿಸಬಹುದು :

---

೧) ಇವು ದ್ವಿಗು ಸಮಾಸದಂತೆ ಮೇಲ್ನೋಟಕ್ಕೆ ಕಾಣುತ್ತವೆ. ಆದರೂ 'ಜೋಡುನುಡಿ'ಯಾಗಿಯೇ ಹೆಚ್ಚು ರೂಢಿಯಲ್ಲಿವೆ.

ಸಮಾನಾರ್ಥಕ	ಪೂರಕಾರ್ಥಕ	ವಿರುದ್ಧಾರ್ಥಕ	ಅಸ್ಪಷ್ಟಜೋಡುನುಡಿ (ಗ್ರಾಮ್ಯರೂಪ)
ಗೆಡ್ಡೆ ಗೆಣಸು	ನೀರು-ನಿಡಿ(ನೊರೆ)	ಅಂದಾ-ದುಂದಿ	ಐಬು ಸೈಬು?
ಉಡಿಗೆ-ತೊಡಿಗೆ	ಸಂಧಿ-ಗೊಂದಿ(ಇಕ್ಕಟ್ಟು)	ಲೀಲಾಜಾಲ	ಕೂಲಿ ನಾಲಿ
ಕಾಡು ಮೇಡು	ಅಂಕೆ ಸಂಕೆ (ಭಯ)	ಪಂಡಿತಪಾಮರ	ಹುಳುಹುಪ್ಪಟೆ
ರೋಗರುಜಿನ	ಓದುಬರಹ	ಸುಖದುಃಖ	ಅರೆಬರೆ
ಹಣ್ಣುಹಂಪಲು	ಅಚ್ಚುಮೆಚ್ಚು	ಬೆಳಗು ಬೈಗು	ಯಾಪಾರ ಸಾಪಾರ
ಕಾಳುಕಡ್ಡಿ (ತುಣುಕು)	ಅಕ್ಕಪಕ್ಕ	ನೋವುನಲಿವು	ಮರಮಂಡಿ?
ದವಸಧಾನ್ಯ	ಆಚಾರವಿಚಾರ	ಹಗಲುರಾತ್ರಿ	ಅವಡುಸವಡು
ಕಪ್ಪಕಾಣಿಕೆ	ಕೇಡುಸೂಡು	ಹೆಚ್ಚಾಗುಪೆಚ್ಚಾಗು	(ನುರಿಯದ್ದು)
ಬಂಧುಬಳಗ	ಕಟ್ಟುಕಟ್ಟಳೆ	ಬೇವುಬೆಲ್ಲ	ಅಡ್ರಾಬಡ್ರಾ
ರೀತಿನೀತಿ	ನೀತಿನಿಯಮ	ಧಾರಣಪಾರಣ	(ಅಳತೆಯಿಲ್ಲದ್ದು)
ಬೆಟ್ಟಗುಡ್ಡ	ಹಿತಮಿತ	ಕಾಡುನಾಡು	ಅಯೋಮಯ
ಹಾದಿಬೀದಿ	ನೋವುನಲಿವು	ಆದಿ ಅಂತ್ಯ	(ಹಿಡಿತ ತಪ್ಪು)
ಜಾತ್ರೆಯಾತ್ರೆ	ತಿಂಡಿತೀರ್ಥ(ನೀರು)	ಕನಸು ನನಸು	ಅಡ್ಡಾ ದಿಡ್ಡಿ
ರೀತಿರಿವಾಜು	ನಡೆನುಡಿ	ಭುವಿಬಾನು (ಆಕಾಶ)	ಅಚ್ಚು ಮೆಚ್ಚು
ಎಡರುತೊಡರು	ಆಸ್ತಿಅಂತಸ್ತು	ಕಳ್ಳಕಾಕರು (ಕಾಯುವವರು)	
ಮಾನಮರ್ಯಾದೆ	ಗಿಡಗಂಟೆ	ಸಿಹಿಕಹಿ.	ಗರ್ತಿ ಗಮ್ಮತ್ತು
ದುಗುಡದುಮ್ಮಾನ	ಕನಸುಮನಸು		(ತಮಾಷೆ ಮಾಡು)
ಏರುಪೇರು	ಎಕ್ಕಸಕ್ಕ (ಚೂರು)		ಪ್ರೀತಿ ಪಾತ್ರ
ಅವಳಿಜವಳಿ	ನಾಡು ನುಡಿ		
ತೊಳಗುಬೆಳಗು	ಕಾಡುಮೇಡು(ನಾ)		
ತಳಬುಡ	ಕಾಯಿಕಸರು		
ಅಂದಚೆಂದ	ಮನೆಮಠ		
ನೆರೆ ತೆರೆ	ಗತ್ತುಗಮ್ಮತ್ತು		
ಸುತ್ತಮುತ್ತ	ಕಾಡುನಾಡು		
ಮಕ್ಕಳುಮರಿ	ಅಲ್ಲೋಲಕಲ್ಲೋಲ		
ಲಂಚರುಷುವತ್ತು	ಪೋಲಿಪಟಿಂಗ		
	(ಪೋಕರಿ)		
	ಸಂಬಳ ಗಿಂಬಳ		
ಕಾಯಿಲೆಕಸಾಲೆ	ಬಟ್ಟೆಬರೆ.		

ಸಮಾನಾರ್ಥಕ	ಪೂರಕಾರ್ಥಕ
(ಬೇಸರ)	ಪಾತ್ರೆ ಪರಡಿ
ಸಾಲಸೋಲ	ತೋಟತುಡಿಕೆ (ಹಣ್ಣುಸಂಗ್ರಹದ ಮನೆ).
ಅರಿವೆ ಹಚ್ಚಡ	
ನೆರೆಹೊರೆ	ಅಕ್ಕಾ (ಸೋದರಿ) ಪಕ್ಕ (ರಕ್ಷೆ).
(ಕಾಪಾಡು).	ಪುಂಡ ಪೋಕರಿ
ಆಟ ಪಾಠ	ಹಮ್ಮುಬಿಮ್ಮು (ಪ್ರತಿಷ್ಠೆ)
ಇತ್ಯಾದಿಗಳು.	
ಅಲ್ಪಸ್ವಲ್ಪ	
ಕೆಲಸ ಕಾರ್ಯ	

ಒ) ಪ್ರತಿಧ್ವನಿ (ಮಾತಿಗೊಂದು ಗೀತು) :

ಭಾಷೆಯಸೊಗಡು ಕಾಣುವುದು ಗ್ರಾಮೀಣ ಜನತೆಯಮಾತಿನಲ್ಲಿ. ಅವರ ಮಾತುಗಳು ಬದುಕಿನಲ್ಲಿ ಬೆಸುಗೆಯಾಗಿ ಬಂದಿರುತ್ತವೆ. ಅವರ ಆಡುಮಾತಿನಲ್ಲಿ ತಮ್ಮ ಅರ್ಥಸ್ಪಷ್ಟತೆಗಾಗಿ, ಶಬ್ದದ ಒಂದುಭಾಗ ಪ್ರಾಸಬದ್ಧತೆಯಿಂದ **'ಪ್ರತಿಧ್ವನಿ'** ಗೊಳ್ಳುತ್ತದೆ. ಮೊದಲಶಬ್ದಕ್ಕೆ ಅರ್ಥವಿದ್ದು, ಎರಡನೆಯ ಶಬ್ದಕ್ಕೆ ಅರ್ಥವಿರುವುದಿಲ್ಲ. ಅದು ಮೊದಲಮಾತಿಗೆ ಒತ್ತುಕೊಟ್ಟು ಹೇಳುವಂತಹ **'ಮರಿಮಾತೆ'**ಯನಿಸುತ್ತದೆ. ಇದು ಮುಗ್ಧತೆಯಿಂದ ಬಂದದ್ದೆನಿಸುತ್ತದೆ. **'ಮಾತಿಗೊಂದು ಗೀತು'** ಎನಿಸಿದೆ. ಈ ಹೆಸರೇ ಸ್ವರೂಪವನ್ನು ಸೂಚಿಸುತ್ತದೆ. ಇಲ್ಲಿ ಭಾಷೆಯ **ಪ್ರಾಸದಮೂಲದ** ಮಣ್ಣಿನ ವಾಸನೆಯನ್ನು ಹೊತ್ತು ಸಾಗುತ್ತಿದೆ. ಉದಾ: ನೀತಿ-**ಗೀತಿ**, ಬುದ್ಧಿ-**ಗಿದ್ಧಿ**, ಮಾನ-**ಗೀನ**, ಓದು-**ಗೀದು**, ಸಾಲ-**ಗೀಲ**, ಆಳು-**ಗೀಳು**, ಸೀರೆ-**ಗೀರೆ**, ಊಟ-**ಗೀಟ**, ರಜ-**ಗಿಜ**, ಕಾಲು-**ಗೀಲು**, ಮನೆ-**ಗಿನೆ**, ಕಾಪಿ-**ಗೀಪಿ**, ತಲೆ-**ಗಿಲೆ**, ಬಟ್ಟೆ-**ಗಿಟ್ಟೆ**, ಸಾರು-**ಗೀರು**, ದೆವ್ವ-**ಗಿವ್ವ**, ಸುಂಕ-**ಗಿಂಕ** ಇತ್ಯಾದಿ. ಈ ಶಬ್ದಗಳನ್ನು ವ್ಯಾಕರಣದ ಹಿನ್ನೆಲೆಯಲ್ಲಿ ನೋಡಲಾಗದು. ನಮ್ಮ ಮಾತುಗಳು ಇಂತಹ ಶಬ್ದಗಳಿಂದ ಮೆರುಗನ್ನು ಪಡೆಯುತ್ತವೆ.

ಳ) ಆಡುನುಡಿಗಳು :

ಇವು ಜಾನಪದ ಜಾಯಮಾನಕ್ಕೆ ಹೊಂದಿಕೆಯಾದ ವಿಶೇಷ ಶಬ್ದಗಳು. ಇವು ಕೇವಲ [illegible] ...ಳ್ಳುತ್ತವೆ. [illegible]ಗಳಲ್ಲಿ ಪ್ರಾಂತೀಯತೆ, ಪರಿಸರಗಳ ಜ್ಞಾನಗಳನ್ನು ಗುರುತಿಸಬಹುದು. ಇವುಗಳು **ಸೌಲಭ್ಯಾಕಾಂಕ್ಷೆ, ಅವಿದ್ಯೆ, ಕೌಟುಂಬಿಕ, ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆ** ಇತ್ಯಾದಿಗಳಿಂದ ಹುಟ್ಟಿಕೊಂಡವು. ಬದುಕಿನ ಭಾಗವಾಗಿ ಆಡುತ್ತ ರೂಢಿಯಿಂದ ಪ್ರಯೋಗಗೊಳ್ಳುತ್ತ ಬಂದಿವೆ. (ಅವು ವ್ಯಾಕರಣ ನಿಯಮಗಳಿಂದ ದೂರವಾಗುತ್ತವೆ). ತಮ್ಮದೇಆದ ನೇರಭಾವನೆಗಳು ಇಂತಹ

ವಿಶಿಷ್ಟರೂಪಗಳಿಂದ ತಮ್ಮ ಮಾತಿನ ಜೀವಾಳವಾಗಿ ಹೊರಹೊಮ್ಮಿವೆ. ಇವುಗಳು **'ಆಡುಮಾತು'** ಗಳೆನಿಸಿವೆ.

(ಈ ಶಬ್ದಗಳನ್ನು ಕೇವಲ ಪರಿಚಯಕ್ಕಾಗಿ ಪಿಂಗಡಿಸಿ ಹೇಳಲಾಗಿದೆ) ಉದಾ :- ಎತ್ತಗೋಳು (**ಎತ್ತುಗಳು**-ಗ್ರಾಂಥಿಕ), ಅರಳ್ಯಾವು (**ಅರಳಿಯಾವು**-ಗ್ರಾಂ), ಬೇಡೋರು (**ಬೇಡುವವರು**), ಮಗ್ಗೆ (**ಮಗನಿಗೆ**), ಕೊಳ್ಳು (**ಕೊರಳು**), ತುಂಬೈತಿ (**ತುಂಬಿದೆ**), ಮಲಗೈತಿ (**ಮಲಗಿದೆ**), ಚಾವೊತ್ತಿಗೆ (ಸ್ವಲ್ಪ **ಹೊತ್ತಿಗೆ**), ಪೇಷೆಂಟು (**ಪೇಷಂಟ್**-ಇಂ), ಮರ್ತೆಹೋತು (**ಮರೆತೆ ಹೋಯಿತು**), ಮ್ಯಾಲೆಸಿವಾ ಅಪ್ನೆ (**ಮೇಲೆ ಶಿವಾ ಇದ್ದಾನೆ**)

ಕನ್ನಡದಲ್ಲಿರುವ ವಿಶೇಷವಾಗಿ ಬಳಕೆಯಾಗುತ್ತಿರುವ ಸಂಸ್ಕೃತದ ನಿಷ್ಪನ್ನರೂಪಗಳು :

ಸಂಸ್ಕೃತ ಭಾಷೆಯು ಅತ್ಯಂತ ಪ್ರಾಚೀನ ಹಾಗೂ ಸಂಪದ್ಭರಿತವಾದುದು. ಆ ಭಾಷೆಯಿಂದ ಭಾರತೀಯ ಭಾಷೆಗಳಿಗೆ ಶಾಸ್ತ್ರೀಯ, ತಾತ್ವಿಕವಿಚಾರಗಳ ಅಪಾರವಾದ ಅಗತ್ಯ ಶಾಬ್ದಿಕಸಂಪತ್ತು ಹರಿದು ಬಂದಿದೆ. ಕನ್ನಡದ **ಪ್ರತಿಶತ ಎಪ್ಪತ್ತು ಶಬ್ದಗಳು** ಸಂಸ್ಕೃತದಿಂದ ಬಂದವು. ನಾವು ಬಳಸುವ ಗ್ರಾಂಥಿಕ ಹಾಗೂ ಆಡುಭಾಷೆಗಳಲ್ಲಿ ಆ ಶಬ್ದಗಳನ್ನು ಬೇರ್ಪಡಿಸಿ ನೋಡುವುದಿಲ್ಲ. ಅವುಗಳನ್ನು ಹೆದ್ದಟ್ಟಾಗಿ (ಅರಿವಿಲ್ಲದೇ) ಪ್ರಯೋಗಿಸುತ್ತ ಬಂದಿದ್ದೇವೆ. ಹೀಗಾಗಿ ಅವುಗಳ ಅರ್ಥಸ್ಪಷ್ಟತೆ, ದೋಷ ನಿವಾರಣೆಯ ಕಡೆ ಗಮನವಿಡುವುದು ಅಗತ್ಯ.

ಒಂದುಭಾಷೆಗೆ ಸಾಧಿತರೂಪಗಳೇ ಬಂಡವಾಳ. ಭಾಷೆಯನ್ನು ಬಳಸುವವರ ಭಾವನೆಗಳ ಸಂವಹನೆಗೆ ಅಗತ್ಯವಾದ ಶಬ್ದಗಳನ್ನು ಈ ರೂಪಗಳು ಪೂರೈಸುತ್ತವೆ. ಎರಡು ಶಬ್ದಗಳನ್ನು ಉಪಯೋಗಿಸಬೇಕಾದ ಸಂದರ್ಭಗಳಲ್ಲಿ ಒಂದೇಸಂಸ್ಕೃತನಿಷ್ಪನ್ನ ಶಬ್ದ ಅರ್ಥ ನಿರ್ದುಷ್ಟತೆ ಹಾಗೂ ಅರ್ಥಪೂರ್ಣತೆಯನ್ನು ತಂದುಕೊಡಬಲ್ಲದು. ಅವುಗಳ ಪರಿಚಯವಿಲ್ಲದಿದ್ದರೆ **ಅರ್ಥಸ್ಪಷ್ಟತೆ, ಅರ್ಥವೈಶಾಲ್ಯತೆ** ಮತ್ತು **ಭಾವಸೌಂದರ್ಯ**ಗಳನ್ನು ಕಾಣಲಾಗುವುದಿಲ್ಲ. ಕೆಲವೊಮ್ಮೆಗೊಂದಲವಾಗುವುದುಂಟು. ಈ ಅಂಶವನ್ನು ಮನಗಂಡು ಆಸಕ್ತ ಓದುಗರ ಗಮನವನ್ನು ಸೆಳೆಯಬೇಕಾಗಿದೆ.

ಆ ನಿಷ್ಪನ್ನರೂಪಗಳನ್ನು ಸಂಸ್ಕೃತದ ಉಪಸರ್ಗ ಅಥವಾ ಅವ್ಯಯಗಳಿಂದ ನಿಷ್ಪನ್ನವಾದ **ಕೃದಂತ, ತದ್ಧಿತಾಂತ, ಸಮಾಸರೂಪಗಳು** ಮತ್ತು **'ಪ್ರತ್ಯುಕ್ತಿ'**ಗಳಲ್ಲಿ ಗುರುತಿಸಬಹುದು. ಅವುಗಳಲ್ಲಿ ಪ್ರತಿನಿಧಿಸುವಂತಹ ಬಹುರೂಢಿಯ ಕೆಲವು ಶಬ್ದರೂಪಗಳನ್ನು ಮಾತ್ರ ಸ್ಥೂಲವಾಗಿ ಪರಿಚಯಿಸಲು ಯತ್ನಿಸಲಾಗಿದೆ. ಸಂಸ್ಕೃತದ ಶಬ್ದಗಳನ್ನು ಕುರಿತು ಹೇಳುವಾಗ, ಪ್ರಾಯಶಃ **'ಎಲ್ಲ ಶಬ್ದಗಳು ಧಾತುಜನ್ಯಗಳು'**(೧) ಎನ್ನಲಾಗಿದೆ. ಹೀಗಾಗಿ ಎಲ್ಲ ಭಾಷೆಯಲ್ಲೂ ಧಾತುಗಳಿಗೆ ಹೆಚ್ಚು ಮಹತ್ವವಿದೆ. ಉಪಸರ್ಗಗಳ ಸಂಪರ್ಕದಿಂದ ಧಾತುಗಳಲ್ಲಿ **ಮೂರು ವಿಧವಾದ ಅರ್ಥವ್ಯತ್ಯಾಸವಾಗುತ್ತದೆ**(೨).

---

(೧) 'ಸರ್ವಂಧಾತುಜಮಾಹ ನಿರುಕ್ತೆ' ಎನ್ನಲಾಗಿದೆ.

(೨) "ಧಾತ್ವರ್ಥಂ ಬಾಧತೆ ಕಶ್ಚಿತ್, ಕಶ್ಚಿತ್ತಮನುವರ್ತತೆ, ತಮೇವ ವಿಶಿನಷ್ಟ್ಯನ್ಯಃ -ಉಪಸರ್ಗಗತಿಸ್ತ್ರಿಧಾ"

ಉಪಸರ್ಗಗಳು ಸೇರಿ ಧಾತುವಿನ **ಅರ್ಥವನ್ನು ತಡೆದು ವಿರೋಧ**ಗೊಳಿಸುತ್ತವೆ. ಕೆಲವೊಮ್ಮೆ ವಿಧೇಯತೆಯಿಂದ ಅದರ **ಅರ್ಥವನ್ನೇ ಅನುಸರಿಸುತ್ತದೆ**. ಕೆಲವು ವೇಳೆ ಧಾತುವಿನ **ಅರ್ಥವನ್ನೇ ವಿಶ್ಲೇಷಿಸಿ, ವಿಮರ್ಶೆಮಾಡಿ ಸ್ಪಷ್ಟಾರ್ಥ**ವನ್ನು ನೀಡುತ್ತವೆ. ಹೀಗೆ ಮೂರು ರೀತಿಯ ಉದ್ದೇಶದಿಂದ ಉಪಸರ್ಗಗಳು ಧಾತುವಿನೊಂದಿಗೆ ಸೇರುತ್ತವೆ: ೧) ಉದಾ:**'ಸ್ಪೃಹ್'** ಧಾತುವಿದೆ (ಇಚ್ಛಾಯಾಂ) **'ಬಯಕೆ'** ಎಂದರ್ಥ. ಇದಕ್ಕೆ (ಉಪಸರ್ಗ) ನಿಸ್+ಸ್ಪೃಹ = **'ನಿಸ್ಪೃಹ'** ರೂಪ. **'ಬಯಕೆಯಿಲ್ಲದವ'** ಪ್ರಾಮಾಣಿಕ ಅರ್ಥಗಳನ್ನು ಕೊಡುತ್ತದೆ. ಇಲ್ಲಿ ಮೊದಲರ್ಥಕ್ಕೆ **ತಡೆಯಾಗಿ ವಿರೋಧಾರ್ಥ** ಬಂದಿದೆ. ಇದು ಧಾತುವಿಗೆ ಉಪಸರ್ಗ **'ನಿಸ್'** ಸೇರಿದ್ದರಿಂದ ಆಗಿರುವ ವ್ಯತ್ಯಾಸ.

ಹೀಗೆಯೇ **'ಗಮನ'** (ಹೋಗು) **ನಿರ್**(ಉಪಸರ್ಗಸೇರಿ)+ಗಮನ = **ನಿರ್ಗಮನ** **(ಹಿಂತಿರುಗು/ಬರು ವಿರೋಧಾರ್ಥ**ವಾಗಿದೆ.)ಇತ್ಯಾದಿ. ಹೀಗೆಯೇ **'ಯಶ'** (ಕೀರ್ತಿ) **ಅಪ** (ಉಪಸರ್ಗ ಸೇರಿ) +ಯಶ = **ಅಪಯಶ** (ಅಪಕೀರ್ತಿ)

೨) **'ಯೋಗ'** ಧಾತು (ಸಂಬಂಧಾರ್ಥಕ)(ಉ) **ಸಂ**+ಯೋಗ = **ಸಂಯೋಗ** 'ಚೆನ್ನಾಗಿ ಸೇರು' ಎಂಬರ್ಥವಾಗಿದೆ. ಇಲ್ಲಿ **ಧಾತುವಿನ ಅರ್ಥವನ್ನೇ ಉಪಸರ್ಗ ಅನುಸರಿಸುತ್ತಿದೆ.** ಹೀಗೇ **'ತುಷ್'ಧಾತು - (ಹೃದಯಕ್ಕೆ ಹಿತ)** ಎಂದರ್ಥ. **'ಸಂ'** ಎಂಬ ಉಪಸರ್ಗ ಸೇರಿದರೆ **'ಸಂತೋಷ'**, ಮನಸ್ಸಿಗೆ ಅತಿಹಿತವನ್ನುಂಟು ಮಾಡು ಎಂಬರ್ಥ ಬಂದಿದೆ. ಹೀಗೆ **ಸಂಚಲನೆ, ಸಂಘಟನೆ** ಇತ್ಯಾದಿ ರೂಪಗಳುಂಟು.

೩) **'ಮಿಲ'** ಧಾತು **'ಸೇರು'** ಎಂಬರ್ಥ. **'ಸಂ'** ಉಪಸರ್ಗ- ಸಂ+ಮಿಲನ (ಅನಾದೇಶ) = **ಸಮ್ಮಿಲನ** 'ಚೆನ್ನಾಗಿ ಸೇರು' ಎಂಬರ್ದವಾಗಿದೆ. ಇಲ್ಲಿ ಇರುವ **ಅರ್ಥಕ್ಕೆ ಸ್ಪಷ್ಟತೆ** ಬಂದಿದೆ.

'ವಿಶ್' ಧಾತು (ಪ್ರವೇಶಾರ್ಥ) **ಸಂ+ಆ**+ವಿಶ್ **ಎರಡುಉಪಸರ್ಗಗಳು** ಸೇರಿ ಸಮಾ+ವಿಶ್ = **ಸಮಾವೇಶ** 'ಎಲ್ಲರೂ ಒಟ್ಟುಗೂಡಿಸೇರುವುದು'.ಹೀಗೇಯೆ ಪರಿ+ಗಣನೆ = **ಪರಿಗಣನೆ**, ಸು+ವಿ+ಹಾರಿ = **ಸುವಿಹಾರಿ** ಇತ್ಯಾದಿ.

ಹೀಗೇ ಇವುಗಳ ವಿವರವಾದ ಪರಿಚಯವನ್ನು ಮುಂದೆ ಮಾಡಿಕೊಳ್ಳಬಹುದು. ಇಂತಹ **೨೩** ಉಪಸರ್ಗಗಳು ಧಾತುಗಳ ಪೂರ್ವದಲ್ಲಿ ಸೇರಿ ಅರ್ಥವ್ಯತ್ಯಾಸಕ್ಕೆ ಕಾರಣವಾಗುತ್ತವೆ$_{(೧)}$. ಇಂಗ್ಲೀಷ್ ಹಿನ್ನೆಲೆಗಿಂತಲೂ ಸಂಸ್ಕೃತ ಹಿನ್ನೆಲೆಯ ಅನಿವಾರ್ಯತೆಯಿದೆ. ಆ ಕೆಲವು ಪ್ರಸಿದ್ಧ ಪ್ರಾತಿನಿಧಿಕರೂಪಗಳನ್ನು ಪರಿಚಯಿಸಲಾಗಿದೆ. ಅವುಗಳು ರೂಪುಗೊಳ್ಳುವ ಹಿನ್ನೆಲೆ, ಅರ್ಥ ಸೂಕ್ಷ್ಮತೆ ಗಮನಿಸಬೇಕು.

೧. 'ಪ್ರ' ಉಪಸರ್ಗ - **ಅಧಿಕ, ಹೆಚ್ಚು, ಚೆನ್ನಾಗಿ, ಅತಿಶಯ** ಇತ್ಯಾದಿ ಅರ್ಥಗಳಿವೆ.

ರೂಪ		ವಿಭಾಗ	ಅರ್ಥ		ತಾತ್ಪರ್ಯಾರ್ಥ	ನಾಮರೂಪಗಳು
'ಪ್ರಬುದ್ಧ'	-	ಪ್ರ+**ಬುಧ್** (ಧಾ)	(ತಿಳಿಯುವುದು)	=	ಹೆಚ್ಚಿನ ಜ್ಞಾನವುಳ್ಳ,	ಪ್ರಬುದ್ಧತಾ/ತೆ (ತದ್ಧಿ)
'ಪ್ರಕ್ಷುಬ್ಧ'	-	ಪ್ರ +**ಕ್ಷುಬ್** (ಧಾ)	(ಅಲ್ಲೋಲ)	=	ತಳಮಳಗೊಂಡ,	ಪ್ರಕ್ಷುಬ್ಧತಾ/ ತೆ (ಕ. ತದ್ಧಿತ)
'ಪ್ರಶಸ್ತಿ'	-	ಪ್ರ+ಶಂಸ್+ತಿ(ಸ್ತುತಿ)	ಕ್ತಿನ್ ಪ್ರತ್ಯಯ	=	ಚೆನ್ನಾಗಿಗೌರವಿಸು/	ಸ್ತುತಿಸುವುದು ನಾಮ(ಕೃದಂತ)ರೂಪ
'ಪ್ರದಕ್ಷಿಣೆ'/	-	ಪ್ರ+ದಕ್ಷ(ಧಾ)	ಪ್ರತ್ಯಯ+ಇನ್	=	ಬಲಮುಖ ಸುತ್ತು.	ಅತಿಶಯವಾಗಿ ಸುತ್ತುಹಾಕು -ಕೃದಂತ

ಇದೇ ರೀತಿಯಲ್ಲಿ ರೂಪುಗೊಂಡವು :- ಪ್ರ+ಲಯ(ನಾಶ)+ಅ= **'ಪ್ರಲಯ'** (ಕೃದಂತ). ಪ್ರ+ಭಾವ(ಇರು) = **'ಪ್ರಭಾವ'** (ಕೃ)= ಪರಿಣಾಮ. ಪ್ರ+ಚಲಿತ=**'ಪ್ರಚಲಿತ'** (ನಡೆಯುತ್ತಿರುವ) ಪ್ರ+ಅರ್ಥ+ಅನಾಗಮ = **'ಪ್ರಾರ್ಥನೆ'** (ಚೆನ್ನಾಗಿ ಬೇಡುವುದು). ಹೀಗೆಯೇ **'ಪ್ರಾರಂಭ', 'ಪ್ರವೇಶ', 'ಪ್ರಸಿದ್ಧ'**, ಪ್ರ+ಅಂಜಲ=**'ಪ್ರಾಂಜಲ'** (ತೆರೆದ ಮನಸ್ಸು), **'ಪ್ರಭೇದ'** ಇತ್ಯಾದಿ ರೂಪಗಳಾಗುತ್ತವೆ.

೨. 'ಪರಾ' ಉಪಸರ್ಗ - ಇಷ್ಟವಲ್ಲದ, ಒಳ್ಳೆಯದ್ದಕ್ಕೆ ಬೇರೆಯಾದ, ಪ್ರೀತಿಯಿಲ್ಲದ ಇತ್ಯಾದಿ ಅರ್ಥಗಳಿವೆ.

'ಪರಾಭವ' - ಪರಾ+**ಭವ** (ಸಂಭವಿಸು) ಸೋಲುವುದು (ಕೃದಂತ)

'ಪರಾಮರ್ಶೆ' - ಪರಾ+**ಆ**+ಮೃಶ್ (ಧಾ) ವಿಚಾರಮಾಡು/ಆಲೋಚಿಸು (ಇಲ್ಲಿ ಎರಡು ಉಪಸರ್ಗಗಳುಸೇರಿವೆ).

ಪರಾಙ್ಮುಖ - ಪರಾ+**ಆ**+ಮುಖ (ಎರಡುಉಪಸರ್ಗ) ಮುಖ ಹಿಂತಿರುಗಿಸು/ ಅನಾಸಕ್ತನಾಗು.

ಹೀಗೆಯೇ **'ಪರಾಜಯ'** (ಸೋಲು), **'ಪರಾಸಕ್ತಿ'** (ಅನ್ಯಾಸಕ್ತಿ), **'ಪರಾಧೀನ'** (ಬೇರೆಯವರ ವಶ).

೩. 'ಅಪ' ಉಪಸರ್ಗ - ಕೆಟ್ಟ, ಹೀನ, ಕೀಳು ಇತ್ಯಾದಿ ಅರ್ಥಗಳಿವೆ. ತಾತ್ಪರ್ಯಾರ್ಥ.

'ಅಪಮಾರ್ಗ' ಅಪ+(ಮೃಗ-ಧಾ)→ಮಾರ್ಗ-ದಾರಿ = ಹೀನಮಾರ್ಗ/ದಾರಿ (ಕೃ)

'ಅಪವಾದ' ಅಪ+ವದ್ → ವಾದ-ಧಾ-ಆರೋಪಾರ್ಥ = ಕೆಟ್ಟದ್ದನ್ನು ಹೇರು (ಕೃ).

'ಅಪಕೀರ್ತಿ' ಅಪ **ಕೃತ್**-ಧಾ + 'ಕ್ತಿನ್' ಪ್ರತ್ಯಯ - ಕೀರ್ತಿ = ಕೆಟ್ಟ ಹೆಸರು.

'ಅಪಘಾತ' ಅಪ+ಘಾತ - ಧಾ - ಹೊಡೆತ = ಅನಿರೀಕ್ಷಿತ ಗಾಯವಾಗು.

ಹೀಗೆಯೇ **'ಅಪಚಾರ'**=ಹೀನವರ್ತನೆ, **'ಅಪರಾಧ'**=ತಪ್ಪಾದ ಕಾರ್ಯ, **'ಅಪಯಶ'**=

ಕೆಟ್ಟಹೆಸರು, **'ಅಪಸ್ಮಾರ'**=ನೆನಪು ಹೋಗುವ ಮೂರ್ಛೆ- ಇತ್ಯಾದಿ ರೂಪಗಳು.

೪. 'ಸಮ್' ಉಪಸರ್ಗ - ಒಳ್ಳೆಯ, ಚೆನ್ನಾಗಿ, ಉತ್ತಮ ಒಂದಾಗಿ ಎಂಬ ಅರ್ಥಗಳಿವೆ.

'ಸನ್ನಿವೇಶ'	ಸಂ+ನಿ+**ವಿಷ್** - ಧಾ (ಘಯ್ ಪ್ರ) - ಪ್ರವೇಶ	=	ಚೆನ್ನಾಗಿರುವುದು.
'ಸಮಾಗಮ'	ಸಂ+**ಆ**+**ಗಮ್** - ಧಾ ಕೃದಂತ (ಹೋಗು)	=	ಒಂದಾಗು, ಸೇರು
'ಸಮಾಚಾರ'	ಸಂ+**ಆ**+**ಚಾರ** ಧಾತು (ವರದಿ) ನಡೆವದ್ದು	=	ಸಮಾಚಾರ.
'ಸಂಯಮ'	ಸಂ+**ಯಮ**/ ಧಾ (ನಿಯಂತ್ರಣ) (ಕೃ).	=	ಮನೋನಿಗ್ರಹ
'ಸಮಾವೇಶ'	ಸಂ(೧)+**ಆ**+**ವಿಶ್** ಧಾ (ಸೇರು)	=	ಎಲ್ಲರೂ ಒಟ್ಟುಗೂಡುವುದು
'ಸಂಪಾದನೆ'	ಸಂ+**ಪದ** (ಗಳಿಕೆ) -ಪಾದ(ವೃದ್ಧಿ)+ಅನಾದೇಶ	=	ಒಳ್ಳೆಯ ಗಳಿಕೆ.
'ಸಂಚಯ'	ಸಂ+**ಚೀ**-ಧಾತು/'ಚಯ'-ಸೇರು/ಕೂಡು	=	ಚೆನ್ನಾಗಿ ಕೂಡಿಸಿದ್ದು.
'ಸಂಮ್ಮೇಲನ'	ಸಂ+ಮಿಲ(ಧಾ)+ಅನಾದೇಶ-ಸೇರು	=	ಒಟ್ಟುಗೂಡು, ಮಹಾಸಭೆ (ಕೃ

ಹೀಗೆಯೇ ಸಂಕೀರ್ಣ - ಒಂದೆಡೆಯಲ್ಲಿ ಹರಡಿದ್ದು, **'ಸಂಯೋಗ'** - ಚೆನ್ನಾಗಿ ಸೇರಿದ, **'ಸಂಪುಟ'** - ಒಗ್ಗೂಡಿದ ಗ್ರಂಥ, **'ಸಂಚಲನೆ'**, **'ಸಂಘಟನೆ'**, **'ಸಂಗ್ರಹ'**, **'ಸಮ್ಮಿಲನ'** ಇತ್ಯಾದಿ.

೫. 'ಅವ' ಉಪಸರ್ಗ - ಕೀಳು, ಕೆಳಗೆ ಇತ್ಯಾದಿ ಅರ್ಥಗಳಿವೆ: ತಾತ್ಪರ್ಯಾರ್ಥ

'ಅವತರಣ' - ಅವ+**ತರ**+ಅನಾದೇಶ+ ಅ (ದಾಟು) = ಇಳಿವುದು.

'ಅವತರಣಿಕೆ' - ಅವತರಣ+ಇಕೆ ಕನ್ನಡತದ್ಧಿತ ಪ್ರತ್ಯಯ =ಹಿನ್ನೆಲೆ, ಪ್ರಸ್ತಾವನೆ.

'ಅವಲೋಕನ' - ಅವ+**ಲೋಕ್** (ಧಾ)+ಅನಾದೇಶ ನೋಡು. = ಸೀಮೆಯೆಲ್ಲವನ್ನೂ ದೃಷ್ಟಿಸಿದ್ದು

'ಅವಮರ್ಯಾದೆ' = ಅವ+**ಮರ್ಯಾದ** (ಕ.ತದ್ಧಿತ) - ಗೌರವ=ಕೀಳಾಗಿ ಕಾಣುವುದು. ಹೀಗೆಯೇ **'ಅವಮಾನ'**, **'ಅವಗಾಹನೆ'** (ಗಮನಕ್ಕೆ) ಇತ್ಯಾದಿಗಳು.

೬. 'ನಿಸ್' ಉಪಸರ್ಗ - ಸಂಪೂರ್ಣವಿಲ್ಲದ, ದೂರವಾದ, ಹೊರಗೆ ಇತ್ಯಾದಿ ಅರ್ಥಗಳಿವೆ ತಾತ್ಪರ್ಯಾರ್ಥ

'ನಿಸ್ಸಂಕೋಚ' = ನಿಸ್+ಸಂ+**ಕುಚ್**(ಧಾ)ಸಂಕೋಚ = ಸಂಕೋಚವಿಲ್ಲದ್ದು - ಕೃ

೧. ಇಂಗ್ಲೀಷ್‌ನಲ್ಲೂ ಐವತ್ತು ಉಪಸರ್ಗಗಳಿದ್ದು, ಅವುಗಳು ನಾಮಪದ ಮತ್ತು ಕ್ರಿಯಾಪದದೊಂದಿಗೆ ಇಂತಿಂತಹುಗಳನ್ನೇ ಹೀಗಿಗೆ ಉಪಯೋಗಿಸಬೇಕೆಂಬ ನಿಯಮವಿದ್ದು, ಅವುಗಳ ಅರಿವಿಲ್ಲದೆ ತಪ್ಪುಮಾಡದವರಿಲ್ಲ.

'ನಿಷ್ಣಾತ' = ನಿಸ್+ಷ್ಣಾ (ಧಾ) ಶೌಚ- ಸಮರ್ಥದಲ್ಲಿ ('ಕ್ತ' ಪ್ರತ್ಯಯ) = ನಿಪುಣ

'ನಿರ್ಜೀವ' = ನಿಸ್+ಜೀವ್‌ಸ ರೇಫಾದೇಶ = ಪೂರ್ಣಜೀವವಿಲ್ಲದ

'ನಿಷ್ಪತ್ತಿ' = ನಿಸ್+ಪತ್ತಿ -ಪದ್-ಧಾತು **ಕ್ತಿನ್** ಪ್ರ./ ಪದ/ ಪಾ/ = ಪೂರ್ಣವಾಗಿ ರೂಪವಾದುದು. ಹೀಗೇ **ನಿಸ್ತೇಜ** ಇತ್ಯಾದಿ.

'ನಿಗ್ರಹ' = ನಿಸ್+**ಗ್ರಹ** (ಧಾ) **ಹಿಡಿ** ಉಪಸರ್ಗ ಉಪಸರ್ಗದ 'ಸ್' ಕಾರ ಕ್ಕೆ ಸಂಬಂಧದಿಂದ ಅರ್ಥಕ್ಕೆ ಬಾಧೆಯಾಗಿದೆ. **ಹಿಡಿತದಲ್ಲಿಡು** ಎಂದರ್ಥ. ಲೋಪ.

ಹೀಗೇ ನಿಸ್+ವೃತಿ=**'ನಿವೃತ್ತಿ'**-ಉದ್ಯೋಗಾವಧಿ ಮುಗಿದ ಎಂದರ್ಥ. **'ನಿಶ್ಚಯ'**, **'ನಿರ್ದಿಗಂತ'** (ಕ) ನಿಸ್+ದಿಗಂತ (ದಿಗಂತ ಮೀರಿದ್ದು) **'ನಿಶ್ಶಂಕೆ'**, **'ನಿಸ್ಪೃಹ'**=(ಆಶೆಯಿಲ್ಲದ)

ನಿಷ್ಪಾಪ, ನಿಷ್ಕಾಳಜಿ - **ಹೋಲಿಕೆಯಿಂದಾದ ಪ್ರಯೋಗಗಳು.**

೭. 'ನಿರ್' ಉಪಸರ್ಗ - ಹೀನ, ಇಲ್ಲದ್ದು ಇತ್ಯಾದಿ **ಅರ್ಥ,** ತಾತ್ಪಾರ್ಯಾರ್ಥ

'ನಿರುಪದ್ರವ' - ನಿರ್+ಉಪ(ದ್ರು-ಧಾತು)→**ದ್ರವ**-ತೊಂದರೆ=ಹಿಂಸೆಯಿಂದ ದೂರವಾದದ್ದು

'ನಿರ್ಧಾರ' - ನಿರ್+ಧೃ-(ಧಾ) ಧಾರ **'ರೂಢ್ಯರ್ಥ' - ನಿಶ್ಚಯ** (ಕೃ).

'ನಿರ್ಗಮನ' - ನಿರ್+**ಗಮ್** (ಧಾ) ಅನಾದೇಶ + ಗಮನ -ಗತ್ಯರ್ಥ = **ಹಿಂತಿರುಗು.**

'ನಿರ್ಲೇಪನ' - ನಿರ್+**ಲಿಪ್** (ಧಾ) ಅನಾದೇಶ + ಲೇಪನ = ಅಂಟಿಕೊಳ್ಳದ್ದು. ಹೀಗೆಯೇ **ನಿರ್ಜೀವ, ನಿರ್ವಂಶ** ಇತ್ಯಾದಿ.

೮. 'ದುಸ್' ಉಪಸರ್ಗ - ಕೆಟ್ಟ, ಹೀನ, ಕಷ್ಟ ಇತ್ಯಾದಿ ಅರ್ಥಗಳಿವೆ.
ತಾತ್ಪರ್ಯಾರ್ಥಗಳಿವೆ

'ದುಸ್ಸಾಹಸ' - ದುಸ್+**ಸಹ್**+ಅಸ್ ಪ್ರತ್ಯಯ (ಧಾ) ತಡೆದುಕೊಳ್ಳು = ಮಾಡಬಾರದಕ್ಕೆ ಮಾಡುವ ಯತ್ನ.

'ದುರ್ಗತಿ' - ದುಸ್+**ಗತಿ** (ಧಾ) ಗಮನಾರ್ಥ = ಹೀನಸ್ಥಿತಿ ಹೊಂದು.

'ದುಸ್ತರ' - ದುಸ್+(ತೃಞ್) ತರ-ದಾಟು ಅರ್ಥ = ದಾಟಲು ಕಷ್ಟವಾದ್ದು.

'ದುಸ್ಸಾಧ್ಯ' - ಕಷ್ಟ ಸಾಧ್ಯ. **'ದುಷ್ಫಲ'** ಫಲಿಸಲು ಕಷ್ಟವಾದ್ದು.

'ದುಷ್ಕರ' - ಮಾಡಲು ಕಷ್ಟವಾದ್ದು ಇತ್ಯಾದಿ.

೯. 'ಅಭಿ' ಉಪಸರ್ಗ - ಸುತ್ತಲೂ, ಎದುರಿಗೆ ಎಲ್ಲರೀತಿಯಿಂದಲೂ ಅರ್ಥಗಳುಂಟು

'ಅಭಿನಂದನಾ' - ಅಭಿ+ (ನದಿ)**ನಂದ** (ಧಾ)-ಸಮೃದ್ಧ್ಯರ್ಥ-**ಅನಾದೇಶ** = ಎಲ್ಲ ರೀತಿಯಿಂದಲೂ ಗೌರವಿಸುವಿಕೆ. (ತಾತ್ಪರ್ಯಾರ್ಥ)

'ಅಭಿನಯ' - ಅಭಿ+ನೀ (ಧಾ)-ನಯ್ ಒಯ್ಯುಅರ್ಥ+ ಅ.ಕೃತ್ ಪ್ರತ್ಯಯ ಸೇರಿ = ಭಾವಾಭಿವ್ಯಕ್ತಿ.

'ಅಭಿಪ್ರಾಯ' - ಅಭಿ+(ಪ್ರಿಞ್) -ಪ್ರಾಯ - ಇಚ್ಛಾರ್ಥ= ಆಶಯ, ಆಂತರಿಕಇಚ್ಛೆ.

'ಅಭಿವಂದನಾ' - ಅಭಿ+ವಂದ್ (ಧಾ) ನಮಿಸು ಅರ್ಥ + **ಅನಾದೇಶ** = ಸರ್ವ ರೀತಿಯಿಂದಲು ಗೌರವಿಸುವುದು.

ಹೀಗೆಯೇ **'ಅಭಿಜಾತ'**=ಸತ್ಕುಲದಲ್ಲಿ ಹುಟ್ಟಿದ, **'ಅಭಿವ್ಯಕ್ತಿ'**=ಅಭಿಪ್ರಾಯ ವ್ಯಕ್ತಪಡಿಸು. **'ಅಭಿನಿವೇಶ'**= ಮನಸ್ಸನ್ನು ಹೆಚ್ಚು ಲೀನಗೊಳಿಸು. **'ಅಭಿರುಚಿ'**=ಆಸಕ್ತಿ. **'ಅಭಿಮತ'**= ಒಪ್ಪಿಗೆಯಾದ.

೧೦. **'ಪ್ರತಿ' ಉಪಸರ್ಗ - ವಿರೋಧ, ಎದುರು ಬಿಡಿಬಿಡಿ, ಎಲ್ಲ** ಅರ್ಥಗಳಿವೆ

'ಪ್ರತೀಕಾರ' - ಪ್ರತಿ+ಕೃ-ಕಾರ-ವೃದ್ಧಿ (ಧಾ) ಮಾಡು = ಸೇಡನ್ನು ತೀರಿಸುವುದು

'ಪ್ರತಿರೋಧ' - ಪ್ರತಿ+**ರುಧ್** (ಧಾ) ತಡೆ = ಪ್ರತಿಭಟನೆ, ವಿರೋಧ
ಹೀಗೇ **'ಪ್ರತಿಬಿಂಬ'**, **'ಪ್ರತಿಫಲ'**, **'ಪ್ರತಿಪಾದನೆ'**, **'ಪ್ರತಿನಿಧಿ'**, ಇತ್ಯಾದಿ **'ಪ್ರತಿಕೂಲ'** (ಅಖಂಡರೂಪ) .

೧೧. **'ಪರಿ' ಉಪಸರ್ಗ - ಸುತ್ತಲೂ, ಸಮಗ್ರ** ಎಲ್ಲಕಡೆ ಅರ್ಥ. ತಾತ್ಪರ್ಯಾರ್ಥ

'ಪರಿಚಯ' - ಪರಿ+ಚಿ-**ಚಯ** +ಅನಾದೇಶ 'ಸಂಗ್ರಹಾರ್ಥ' = ವಿಷಯಗಳನ್ನು ಕಲೆಹಾಕು.

'ಪರಿಜ್ಞಾನ' - ಪರಿ+ಜ್ಞಾ-**ಜ್ಞಾನ**-ಅನಾದೇಶ+ತಿಳಿ, = ಎಲ್ಲ ಅರಿವು.

'ಪರಿಭವ' - ಪರಿ+ಭೂ - **ಭವ**+ಅ-ಇರು+ಕೃ.ಪ್ರ. = ಅನಾದರ, ಸೋಲು.

'ಪರಿಕಲ್ಪನಾ' - ಪರಿ+**ಕ್ಲೃಪ್** (ಧಾ) **ಕಲ್ಪ**+ಅನಾದೇಶ-ಆಲೋಚನೆ = ಸಮಗ್ರ ಅರಿವಾಗು.

'ಪರಿವಾರ' - ಪರಿ+'ವೃ'ವರಣೆ(ವೃದ್ಧಿ)-ಜೊತೆಯಲ್ಲಿರುವವರು **ವಾರಾದೇಶ** = ಪರಸ್ಪರ ಸಂಬಂಧಿಸಿದವರು.

ಹೀಗೆಯೆ **'ಪರಿಜನ'** = ಎಲ್ಲವನ್ನೂ ಮಾಡುವ ಸೇವಕರು, **'ಪರಿಗಣನೆ'**= ಸಮಗ್ರವಾಗಿ ಲೆಕ್ಕಹಾಕು, **'ಪರಿಹಾಸ'**=ಎಲ್ಲರನ್ನೂ ನಗಿಸುವುದು, **'ಪರೀಕ್ಷಿಸು'**=ಸಮಗ್ರವಾಗಿ ನೋಡುವುದು ಇತ್ಯಾದಿ ರೂಪಗಳನ್ನು ತಿಳಿಯಬಹುದು.

೧೨. **'ಉಪ' ಉಪಸರ್ಗ - ಸಮೀಪ, ಅಧೀನ, ಸಣ್ಣ, ಕಡಿಮೆ**, ಪ್ರಧಾನಾರ್ಥಗಳಿವೆ

'ಉಪವಾಸ' - ಉಪ+ವಸ್- (ವಾಸ) ನಿವಾಸ-ಇರು = ದೈವದ ಸಾಮಿಪ್ಯವಿರುವುದು.

'ಉಪಾಧ್ಯಾಯ'- ಉಪ+ಅಧಿ+**ಅಯ**+ಯಣ್‌ಸಂಧಿ+ಕಲಿಸು = ಮಕ್ಕಳಿಗೆ ಸಮೀಪವಾಗಿ ಕಲಿಸುವುದು

'ಉಪಹಾರ' - ಉಪ+ಹೃ(ಧಾ) + **ಅನಾದೇಶ**, ಅಲ್ಪಾಹಾರ(ತಿಂಡಿ)ತೆಗೆದುಕೊಳ್ಳುವ.

'ಉಪನಯನ' - ಉಪ+**ನಯ್**(ಧಾ)+**ಅನಾದೇಶ** ಒಯ್ಯುವುದು = ಗುರುವಿನರಹಸ್ಯ ತಿಳಿಸಿವುದು.

'ಉಪಾಖ್ಯಾನ' - ಉಪ+ಆ+(ಖ್ಯಾ)ಆಖ್ಯಾನ+**ಅನಾದೇಶ** ಹೊಗಳು, ಪ್ರಸಿದ್ಧಕತೆಗೆ ಅಂಗವಾಗಿ ಬರುವುದು

೧೩. **'ಆ' ಉಪಸರ್ಗ ವರೆಗೆ, ಮೊದಲು, ಕಾಲ, ವ್ಯಾಪಿಸಿಕೊಂಡದ್ದು,ಎಲ್ಲೆ** ಅರ್ಥಗಳಿವೆ. ತಾತ್ಪರ್ಯಾರ್ಥಗಳಿವೆ

'ಆಜೀವ' - ಜೀವ ಹಿ ಜೀವವಿರುವ ಆ (ಕಾಲ) ವರೆಗೆ. **'ಆಜೀವ'** (ವ [illegible]

‘ಆರಕ್ಷಕ’ - ಆ+**ರಕ್ಷ**+ಕ (ಕೃ ಪ್ರತ್ಯಯ) = ಎಲ್ಲ ರೀತಿಯಲ್ಲೂ ರಕ್ಷಿಸುವವ. (**ಅರಕ್ಷಕ**- ರಕ್ಷಣೆ ಮಾಡದವನೆಂಬರ್ಥ ಬರುತ್ತದೆ).

‘ಆಜಾನುಬಾಹು’ - ಜಾನು - ಮಂಡಿಯ, ಆ - ವರೆಪಿಗೆ, ಬಾಹು - ತೋಳುಗಳುಳ್ಳವ. ಹೀಗೆಯೇ **‘ಆಗರ್ಭ’** - ಗರ್ಭದಿಂದ ಮೊದಲುಗೊಂಡು. **‘ಆಲೋಕನ’**-ಆ+ಲೋಕ ಧಾ (ದರ್ಶನೆ)+ ‘ಅ’ ಕೃ.ಪ್ರ = ಎಲ್ಲವನ್ನೂ ಲಕ್ಷ್ಯಕೊಟ್ಟು ನೋಡುವುದು. **‘ಆಬಾಲವೃದ್ಧ’** ಬಾಲ - ಹುಡುಗನಿಂದ ಹಿಡಿದು ವೃದ್ಧನವರೆಗೆ (**‘ಅಬಾಲವೃದ್ಧ’** ಬಾಲಪಿಲ್ಲದ ವೃದ್ಧನೆಂದರೆ ಅಸಹ್ಯಾರ್ಥ) ಹೀಗೇ **‘ಆಸೇತುಹಿಮಾಚಲ’** ಇತ್ಯಾದಿ ರೂಪತಿಳಿಯುವುದು. ಹೀಗೆ ಕಾಲ, ಎಲ್ಲೆ ಅರ್ಥಗಳುಂಟು.

೧೪ ‘ವಿ’ ಉಪಸರ್ಗ - **ಬೇರೆಯಾದ, ಕಳೆದುಹೋದ, ವಿಶೇಷವಾದ** ಅರ್ಥ,

			ತಾತ್ಪರ್ಯ
‘ವಿಕ್ಷಿಪ್ತ’	-	ವಿ+**ಕ್ಷಿಪ್**(ಧಾ) ಉತ್ತೇಜಿಸು+‘ಕ್ತ’ ಪ್ರತ್ಯಯ	=ಚಂಚಲ,ಕ.ತ.ರೂ. ವಿಕ್ಷಿಪ್ತತೆ
‘ವಿಘಟನಾ’	-	ವಿ+**ಘಟ** (ಧಾ)+ಅನಾದೇಶ (ಆಕಸ್ಮಿಕ)	= ಬೇರೆಬೇರೆಯಾಗು : ವಿಘಟನೆ (ಕನ್ನಡತದ್ಧಿತ)
‘ವಿಚಕ್ಷಣ’	-	ವಿ+**ಚಕ್ಷಿ**+ಅನಾದೇಶ (ವ್ಯಕ್ತಮಾಡು)	= ಒಳಹೊಕ್ಕುನೋಡು.
‘ವಿಜ್ಞಾನ’	-	ವಿ+**‘ಜ್ಞಾ’** ಧಾ + ಅನಾದೇಶ (ತಿಳಿ)	= ವಿಶೇಷವಾದ ತಿಳುವಳಿಕೆ.
‘ವಿಚ್ಛಿನ್ನ’	-	ವಿ+**ಛಿದ್**+ಕ್ತ ಪ್ರತ್ಯಯ - ಕತ್ತರಿಸು	= ತುಂಡಾದ,= ವಿಚ್ಛಿನ+ತೆ (ಕ.ತದ್ದಿ)
‘ವಿಜೃಂಭಣೆ’	-	ವಿ+**ಜೃಂಭ್**+ಅನಾದೇಶ - ವೈಭವ	= ವೈಭವದ ತೋರಿಕೆ
‘ವಿಜ್ಞಾಪನೆ’	-	ವಿ+**ಜ್ಞಾ**+ಅನಾದೇಶ - ತಿಳುವಳಿಕೆ	=ನಿವೇದಿಸು, ವಿಜ್ಞಾಪನಾ/ನೆ - (ಕ.ತ)
‘ವಿಲೋಕನ’	-	ವಿ+**ಲೋಕ್**+ಅನಾದೇಶ-ದರ್ಶನ	= ಚೆನ್ನಾಗಿ ನೋಡುವುದು
‘ವಿಚಲ’	-	ವಿ+**ಚಲ್**+ಅ (ಕೃ.ಪ) - ಸಂಚಲನ	= ಅಲುಗಾಟ - (ಕ.ತ)

ಹೀಗೆಯೇ **‘ವಿಹಾರ’** - ಹಿತವಾಗಿಸುತ್ತಾಡು, **‘ವಿಹ್ವಲ’** - ಹೆದರಿದ, **‘ವಿಶ್ಲೇಷಣೆ’** - ಬೇರ್ಪಟ್ಟ-(ಕ.ತ.), **‘ವಿಖ್ಯಾತ’** - ಪ್ರಸಿದ್ಧ, **‘ವ್ಯಾಮೋಹ’** = ವಿಶೇಷವಾದಅಮಲು, **ವಿಜಯ, ವಿಯೋಗ, ವಿದೇಶ, ವಿರೂಪ, ವಿಮಲ** ಇತ್ಯಾದಿ ವಿಶೇಷವಾದರೂಪಗಳಾಗುತ್ತವೆ.

೧೫. ‘ಅದಿ’ ಉಪಸರ್ಗ - **ಹೆಚ್ಚು, ಪ್ರಮುಖ, ಪ್ರಧಾನ, ಮೇಲೆ** ಇತ್ಯಾದಿ ಅರ್ಥಗಳಿವೆ.

			ತಾತ್ಪರ್ಯಾರ್ಥ
‘ಅಧಿವೇಶನ’	=	ಅಧಿ+**ವಿಶ್**(ಧಾ)+ಅನಾದೇಶ (ಪ್ರವೇಶ)	= ಸರ್ವರಸಭೆ, ಮಹಾಸಭೆ
‘ಅಧಿಸೂಚನೆ’	=	ಅಧಿ+**ಸೂಚ್**(ಧಾ) ಅನಾದೇಶ +ನಿರ್ದೇಶನ	= ನಿರ್ದೇಶನಬರಹ
‘ಅಧ್ಯಕ್ಷ’	=	ಅಧಿ+**ಅಕ್ಷ** ಧಾ+‘ಅ’ ಕೃ.ಪ್ರ.-ಕಣ್ಣಿನ ಸಮಾನ	= ಪ್ರಧಾನಸ್ಥಾನದವ
‘ಅಧ್ಯಾರೋಪ’	=	ಅಧಿ+**ಆರೋಪ**(ಧಾ)(ಯಣ್ ಸಂಧಿ) ಹೊರಿಸು	= ಹೆಚ್ಚಿನದ್ದನ್ನು ಹೇಳು

'ಅಧಿಕ್ಷೇಪ' = ಅಧಿ+ಕ್ಷಿಪ್ (ಧಾ) ಪ್ರೇರಣೆ 'ಅ' ಕೃ.ಪ್ರ = ದೋಷವೆತ್ತಿ ಹೇಳುವುದು

೧೬. 'ಅತಿ' ಉಪಸರ್ಗ - **ಮೀರಿದ, ಬಹಳ, ಅಧಿಕ, ಆಚೆ** ಎಂಬರ್ಥ, ತಾತ್ಪರ್ಯ

'ಅತಿಕ್ರಮಣ' = ಅತಿ+ಕ್ರಮ (ಧಾ) ಹೆಜ್ಜೆಹಾಕು + ಅನಾದೇಶ = ಮೀರಿದ ನಡೆ

'ಅತಿರೇಕ' = ಅತಿ+ರಿಚ್ - ಧಾ - ತಳ್ಳು + ಅ.ಕೃ.ಪ್ರ. = ಮಿತಿಮೀರಿದ್ದು.

'ಅತಿವೃಷ್ಟಿ' = ಅತಿ+'ವೃಷ್' ಧಾ - ಸುರಿಸು+(ಕ್ತಿನ್) = ಮಿತಿಮೀರಿದ ಮಳೆ.

'ಅತೀಂದ್ರಿಯ' = ಅತಿ+ಇದಿ-ಧಾ - ಪರಮೈಶ್ವರ್ಯ (ಘಞ್+ಇಯಾದೇಶ) + ರ್ ಆಗಮ ಆತ್ಮಶಕ್ತಿ ಹೀಗೆಯೆ **'ಅತಿವ್ಯಾಪಿ'** ಇತ್ಯಾದಿರೂಪಗಳು.

೧೭. 'ಉತ್' ಉಪಸರ್ಗ - **ಮೇಲೆ, ಉತ್ತಮ, ಒಳ್ಳೆಯ** ಅರ್ಥ, ತಾತ್ಪರ್ಯಾರ್ಥ

'ಉತ್ಪತ್ತಿ' - ಉತ್+ಪದ್-ಧಾ+(ಕ್ತಿನ್ ಪ್ರತ್ಯಯ)(ಗಮನ, ಸ್ವಭಾವ) = ಹುಟ್ಟುವಿಕೆ.

'ಉತ್ಕೃಷ್ಟ' - ಉತ್+ಕೃಷ್ ಧಾ (ಕ್ತ ಪ್ರತ್ಯಯ) = ವಿಲೇಖನ, ಸಮೃದ್ಧ (ಕೃ).

'ಉತ್ಕರ್ಷ' - ಉತ್+ಕೃಷ್ ಧಾ+ ಘಞ್ ಪ್ರತ್ಯಯ - ಮೇಲ್ಮೆ = ಮೇಲೇಳುವಿಕೆ.

'ಉತ್ಥಾನ' - ಉತ್+ಸ್ಥಾ-ಧಾ ಅನಾದೇಶ - ಗತಿ ನಿಲುಗಡೆ = ಎದ್ದು ನಿಲ್ಲುವಿಕೆ.

'ಉದ್ಬೋಧ' - ಉತ್+ಬುಧ್-ಬೋಧ ಧಾ (ತಿಳಿ) = ಹೆಚ್ಚುತಿಳಿ.

'ಉತ್ಸರ್ಪಿಣೀ' - ಉತ್+ಸೃಪ್+ಇನಿ ಪ್ರತ್ಯಯ-ಸರಿ (ವ್ರತವಿಶೇಷ) = ಎತ್ತರಕ್ಕೇರುವುದು.

'ಉದ್ಯಾಪನೆ' - ಉತ್+ಯಾ-ಧಾ (ಅನಾದೇಶ) ಹೊಂದು = ವ್ರತಸಮಾಪ್ತಿ ಮಾಡು

'ಉದ್ವರ್ತನ' - ಉತ್+ವೃತ್- ಅನಾದೇಶ - ಉಜ್ಜು = ಸುಗಂಧ ದ್ರವಲೇಪನ

'ಉತ್ತೇಜನ' - ಉತ್+ತಿಜ್ +ಅನಾದೇಶ, ತೀಕ್ಷ್ಣಾರ್ಥ = ಹುರಿದುಂಬಿಸು.

'ಉತ್ತೀರ್ಣ' - ತೇರ್ಗಡೆ ಇತ್ಯಾದಿ.

<u>೧೮. 'ಸು' ಉಪಸರ್ಗ - **ಚೆನ್ನಾಗಿ, ಒಳ್ಳೆಯ**</u> ಇತ್ಯಾದಿ ಅರ್ಥಗಳಿವೆ, ತಾತ್ಪರ್ಯಾರ್ಥ.

'ಸುವಿಹಾರಿ' - ಸು+ವಿ+ಹೃ-ಹಾರ್+ಇನಿಪ್ರತ್ಯಯ(ಹರಣೆ-ಒಯ್ಯು) = ಹಿತವಾಗಿ ಕರೆದೊಯ್ಯುವುದು (ಇಲ್ಲಿ ಎರಡು ಉಪಸರ್ಗಗಳು ಸೇರುವುದುಂಟು)

'ಸುವಿಚಾರ' - ಸು+ವಿ+ಚರ್-ಚಾರ (ಸಾಗು) = ಶ್ರೇಷ್ಠಸಂಗತಿ.

'ಸುಕೃತಿ' - ಸು+ಕೃತ್(ಧಾ)+ 'ಇನಿ', ಪ್ರತ್ಯಯ **ಮಾಡು** = ಪುಣ್ಯಕಾರ್ಯ.

ಹೀಗೆಯೇ 'ಸುಗುಣ', 'ಸುಫಲ', 'ಸುಜಲ', 'ಸುಜನ', 'ಸುಗಂಧ'(ತ); 'ಸುಜ್ಞಾನ', 'ಸುಬೋಧ' ಕೃದಂತರೂಪುಗಳು.

<u>೧೯. 'ಅನು' ಉಪಸರ್ಗ - **ಹಿಂದೆ, ಬಳಿಕ, ಅನುಸರಿಸು, ಹೊಂದಿಕೆ, ಸಂಬಂಧ**</u> ಅರ್ಥಗಳು, ತಾತ್ಪರ್ಯಾರ್ಥ.

'ಅನುವಂಶೀಯ' - ಅನು+ವನ್ ಧಾ+ ಶಕ್ಆಗಮ+ಛ ಪ್ರತ್ಯಯ+ಈಯಾದೇಶ- ಆಕರ್ಷಣೀಯ- (ತದ್ಧಿತ) = ವಂಶವನ್ನನುಸರಿಸಿದ್ದು

'ಅನುಸಂಧಾನ' - ಅನು+ಸಂ+ಧಾ+ಅನಾದೇಶ-ಧರಿಸು = ಧ್ಯಾನಿಸು, ತನ್ನದ್ದಾಗಿಸು.

'ಅನುರೋಧ' - ಅನು+(ರುಧ್) ರೋಧ-ತಡೆ+('ಅ'.ಕೃತ್.ಪ) ಕೂಡಲೆ = ಬಲಾತ್ಕರಿಸು.

'ಅನುಷ್ಠಾನ' - ಅನು+ಸ್ಥಾ+ಅನ್ ಆದೇಶ - ಗಮನದ, ತಡೆ = ಆಚರಿಸು.

'ಅನುಮಾನ' - ಅನು+'ಮನು' ಧಾ+ವೃದ್ಧಿ+ತಿಳಿ = ಅನ್ಯಸಂಬಂಧವಾದ

ಸಂಶಯ.'**ಅನುವಾದ**'- ಅನು+(ವದ್)- ವಾದ- ವ್ಯಕ್ತಪಡಿಸು = ಅನುಸರಿಸಿ ಹೇಳು.
'**ಅನುಸರಣೆ**' - ಅನು+ಸೃ - ಸರ ಅನಾದೇಶ - ಸರಿ =ಹೊಂದಿಕೊಂಡು ಸಾಗು.
ಹೀಗೆಯೇ '**ಅನುಚರ**' = ಹೊಂದಿಕೊಂಡು ನಡೆಯುವವ ಇತ್ಯಾದಿ.

೨೦. **'ದುರ್' ಉಪಸರ್ಗ - ಹೀನ, ಕೆಟ್ಟ, ಅಸಾಧ್ಯ** ಅರ್ಥಗಳಿವೆ, ತಾತ್ಪರ್ಯಗಳಿವೆ.

'ದುರ್ಜಯ' - ದುರ್+ಜಿ-ಜಯ (ಧಾ)-ಗೆಲ್ಲು (ಕೃ) = ಗೆಲ್ಲಲು ಕಷ್ಟವಾದುದು (ಕೃ).
'ದುರಾಚಾರ' - ದುರ್+ಚರ್+ಅ (ಧಾ)-ನಡೆ (ಘಞ್) = ಹೀನವಾದ ನಡವಳಿ
'ದುರ್ಗತಿ' - ದುರ್+ಗಮ್ ಧಾ+ಕ್ತಿನ್, ಇಕಾರಾದೇಶ ಹೋಗುವಿಕೆ = ಕೆಟ್ಟಸ್ಥಿತಿ.
'ದುರ್ಮಾರ್ಗ' - ದುರ್+ಮೃಗ್-ಮಾರ್ಗ -(ಧಾ)+ಘಞ್ ದಾರಿ = ಕೆಟ್ಟದಾರಿ.
'ದುರ್ಘಟನೆ' - ದುರ್+ಘಟ (ಧಾ)-ಅನಾದೇಶ- ಕೆಟ್ಟ ಸಂದರ್ಭ = ದುಷ್ಕರವಾದುದು

೨೧. **'ಅತಿ' ಉಪಸರ್ಗ ಆಧಿಕಾರ್ಥ ಅತ್ಯುಕ್ತಿ, ಅತ್ಯವಶ್ಯ, ಅತ್ಯುಪಕಾರ, ಅತ್ಯಾನಂದ,**(ಯಣ್ ಸಂಧಿ ನಿಯಮದಂತೆ) 'ಯ್' ಕಾರಾದೇಶವಾಗಿದೆ.

೨೨. **'ನಿ' ಉಪಸರ್ಗ, ತಡೆ. ನಿವಾರಣೆ, ನಿರೋಧ** ಇತ್ಯಾದಿ.

೨೩. **'ಕು' ಉಪಸರ್ಗ - ಕೀಳು, ಕೆಟ್ಟ,** ಇತ್ಯಾದಿ ಅರ್ಥಗಳು, ತಾತ್ಪಯಾರ್ಥಗಳು

'ಕುತಂತ್ರ' - ಕು+ತಂತ್ರ = ಕೆಟ್ಟಯೋಚನೆ, **'ಕುಯುಕ್ತಿ'** - ಕು+ಯುಕ್ತಿ = ಹೀನಕಾರ್ಯ

ಈ ಮೇಲೆ ಸೇರಿರುವ ಸಂಸ್ಕೃತದ ಉಪಸರ್ಗ (ಅವ್ಯಯ) ಗಳನ್ನು ಸ್ವತಂತ್ರವಾಗಿ ಪ್ರಯೋಗಿಸುವುದಿಲ್ಲ. ಅವು ಧಾತುಗಳ ಮೇಲೆ ಹತ್ತುತ್ತವೆ. ಸಂಸ್ಕೃತದ ನಾಮಪದಗಳೂ ಧಾತುವಿನಿಂದಲೇ ಜನಿಸಿದವು. ಹೀಗಾಗಿ ನಾಮಪದಗಳ ಮೇಲೂ ಉಪಸರ್ಗಗಳು ಸೇರಿ ಅರ್ಥಬದಲಾವಣೆಯಾಗಿ ಅಂತ್ಯವ್ಯತ್ಯಾಸದೊಂದಿಗೆ ವಿಪುಲವಾಗಿ ಈ ರೂಪಗಳು ಕನ್ನಡದಲ್ಲಿ ಬಳಕೆಯಲ್ಲಿವೆ.

ಕೆಲವು ಸಂಧಿರೂಪಗಳು ಉಪಸರ್ಗಗಳಿಂದ ರೂಪುಗೊಂಡಂತೆ ಕಾಣುತ್ತವೆ:

೧) ಸಂಸ್ಕೃತದಲ್ಲಿ **'ನಯ್' ತತ್ಪುರುಷ** ಸಮಾಸ ರೂಪ: **'ಅಪವಿತ್ರ'** = ನ+ಪವಿತ್ರ= ಅಪವಿತ್ರ. **ಅಜ್ಞಾನ** = ನ+ಜ್ಞಾನ. ಹೀಗೇ **ಅವಿದ್ಯೆ, ಅಧರ್ಮ, ಅವಿಚಾರ, ಅನಿಯಮ, ಅನನುಕೂಲ** ಇತ್ಯಾದಿ. ಇಲ್ಲಿ ಉತ್ತರದಲ್ಲಿ ವ್ಯಂಜನವಿದ್ದಾಗ **'ಅ'** ಕಾರವೂ ಸ್ವರಪರದಲ್ಲಿದ್ದಾಗ **'ಅನ್'** ಆದೇಶಗಳೂ ಬರುತ್ತವೆ.

೨) **ಪ್ರತ್ಯುಕ್ತಿಗಳು** : ಮಾತುಮಾತು=**'ಪ್ರತಿಮಾತು'**, ದಿನದಿನ=**ಪ್ರತಿದಿನ**, ಬಿಂಬಬಿಂಬ= **ಪ್ರತಿಬಿಂಬ**, ರೂಪರೂಪ= **ಪ್ರತಿರೂಪ**,ಇವು **'ಪ್ರತ್ಯುಕ್ತಿ'** ಗಳೆನಿಸುತ್ತವೆ. ಹೀಗೇ ಕಾಣುವ **ಪ್ರತಿಪಕ್ಷ, ಪ್ರತಿವುಟ** ಇತ್ಯಾದಿ ರೂಪಗಳು **'ಅವ್ಯಯೀಭಾವ'**ಸಮಾಸರೂಪಗಳು. ಆದರೆ **'ಪ್ರತಿಕೂಲ'- ಅಖಂಡ** ಶಬ್ದರೂಪಗಳೆಂದು ತಿಳಿಯಬೇಕಾಗುತ್ತದೆ.

ಸಂಸ್ಕೃತದ ಅನೇಕ ತದ್ಧಿತಪ್ರತ್ಯಯಗಳು ಕನ್ನಡದಲ್ಲುಂಟು. ಅವುಗಳಲ್ಲಿ ಬಳಕೆಯಾಗಿರುವ ಕೆಲವು **ತದ್ಧಿತರೂಪಗಳನ್ನು ಸ್ಥೂಲವಾಗಿ ಪರಿಚಯಿಸಬಹುದು :**

೧) ಆದಿಯಲ್ಲಿನ **'ಅ'** ಕಾರ ವೃದ್ಧಿಯಾಗಿ **'ಆ' ಕಾರಾತ್ಮಕವಾಗುತ್ತವೆ:** ಹಾಗೆಯೇ **ಇಕ** ಇತ್ಯಾದಿ ತದ್ಧಿತ ಪ್ರತ್ಯಯುಗಳು, (**'ಇರುವುದು'**, **'ಸಂಬಂಧಿಸಿದ್ದು'**, **'ಮಾಡುವವನು'**, **'ಅರಿತವನು'**, **'ಭಾವಾರ್ಥ'** ಭಾವಾರ್ಥಗಳಲ್ಲಿ ತದ್ಧಿತ ಪ್ರತ್ಯಯಗಳು ಬರುತ್ತವೆ).

ಉದಾ : **'ಪ್ರಕೃತಿ'** ಯಲ್ಲಿ (ಇರುವುದು) - **ಪ್ರಾಕೃತಿಕ**-ಸಂ.ತ. ಪ್ರಾಕೃತಿಕತೆ - **ಪ್ರಾತ್ಯಕ್ಷಿಕ** ಪ್ರಾತ್ಯಕ್ಷಿಕತೆ ಕ.ತದ್ಧಿತ. ಹೀಗೆಯೇ **'ಪ್ರದೇಶ'** ದಲ್ಲಿ (ಇರುವುದು) **ಪ್ರಾದೇಶಿಕ**-ಪ್ರಾದೇಶಿಕ**ತೆ** ಕ.ತ. **'ಪರಮಾರ್ಥ'**ದ (ಸಂಬಂಧ/ ಇರು) **ಪಾ**ರಮಾರ್ಥಿಕ/ **ತಾ**, ಪಾರಮಾರ್ಥಿಕ**ತೆ** (ಕ.ತ). ಅನುಗುಣವಾಗಿ (ಇರುವುದು) **ಆ**ನುಗುಣ್ಯ, ತೆ (ಕ.ತ). **ಚಾ**ರಿತ್ರಿಕ-**ತೆ/** ಪ್ರಜ್ಞೆ (ಇರುವುದು) **ಪ್ರಾ**ಜ್ಞ**ತಾ/ತ್ವ** = ಸಂ.ತ, ಪ್ರಾಜ್ಞ**ತೆ** - ಕ.ತ. **ರ**ಸಾಯನದಲ್ಲಿ (ಇರು) ರಾಸಾಯನಿಕ**ತಾ/ತೆ**. ಅರ್ಥ(ಸಂಬಂಧವಾದ್ದು) ಆರ್ಥಿಕ**ತಾ/ತೆ**. ಸಂಸ್ಕೃತಿ - **ಸಾ**ಂಸ್ಕೃತಿ**ಕ/ ತೆ**. ಸಾಮಾಜಿಕ**ತಾ** - ಸಾಮಾಜಿಕ**ತೆ**. **ಪಾ**ವಿತ್ರತಾ-ಪಾವಿತ್ರ**ತೆ**. **ಅ**ತಿಥಿಗೆ **'ಸಂಬಂಧಿ'**ಸಿದ್ದು ಆತಿಥ್**ಯ**. ಹೀಗೇ **ಪ್ರಾ**ಸಂಗಿಕ**ತೆ**, **ಆ**ಂತರಿಕ**ತೆ**, **ಪಾ**ರತಂತ್ರ್ಯ**ತೆ**, **ವ್ಯಾ**ವಹಾರಿಕತೆ, **ನಾ**ಗರೀಕತೆ(೧), ಸೃಜನಶೀಲತೆ. ಮಾದಕ, ತಾರಕ ಇತ್ಯಾದಿ ರೂಢಿ ಪ್ರಯೋಗಗಳು ಕನ್ನಡದಲ್ಲುಂಟು.

೨) ಕರ್ತೃರ್ಥದಲ್ಲಿ ಅಂತ್ಯಕ್ಕೆ **'ಕ'** ಪ್ರತ್ಯಯ ಬಂದಿರುವ **ತದ್ಧಿತ ರೂಪಗಳು** : ಯಂತ್ರವನ್ನು **'ಮಾಡುವವ'** +ಇಕಾರಾದೇಶ = **ಯಾಂತ್ರಿಕ**, **ತಾರ್ಕಿ**ಕ, **ಧಾರ್ಮಿಕ**, **ಕಾರ್ಮಿಕ**, **ಮಾ**ನಸಿಕ, ವೈದಿಕ, ಪರೀಕ್ಷಕ, ವೀಕ್ಷಕ, ಪ್ರೇಕ್ಷಕ, ನಿರ್ಮಾಪಕ, ಗಾಯಕ, ವಾದಕ, ಆಗಮಿಕ, ವೈನೋಧಿಕ, ಪ್ರೇಕ್ಷಕ ಇವುಗಳ ಮೇಲೆ **'ತೆ'** ಪ್ರತ್ಯಯ ಬಂದು ಕನ್ನಡ ತದ್ಧಿತರೂಪಗಳಾಗಿ ಬಳಕೆಯಲ್ಲಿವೆ : ಉದಾ: ಯಾಂತ್ರಿಕ**ತೆ**, ಧಾರ್ಮಿಕ**ತೆ** ಇತ್ಯಾದಿ.

೩) ಕೆಲವು ತದ್ಧಿತ ರೂಪಗಳಲ್ಲಿ **'ಈಯಾ'** ದೇಶವಾಗುತ್ತದೆ :- ಉದಾ : ಶಾಸ್ತ್ರದಲ್ಲಿ (ಇರುವುದು) ಶಾಸ್ತ್ರೀಯ (ಸಂ.ತ.) ಶಾಸ್ತ್ರೀಯ**ತೆ** ಕ. ತದ್ಧಿತ. ಪ್ರಾಂತದಲ್ಲಿ **'ಇರು'** ಪ್ರಾಂತೀಯ/ತಾ. ಪ್ರಾಂತೀಯ**ತೆ** (ಕ.ತ.) ರಾಷ್ಟ್ರ (ಸಂಬಂಧ) ರಾಷ್ಟ್ರೀಯ**ತೆ/ತ್ವ** ಮತೀಯ, ನಾಟಕೀಯ, ವಿಭಾಗೀಯ ಇತ್ಯಾದಿ ರೂಢಿಪ್ರಯೋಗಗಳು .

೪) ಕೆಲವು ಸಂಸ್ಕೃತರೂಪಗಳಿಗೆ (ಭಾವಾರ್ಥದಲ್ಲಿ) ಆದಿಯ **'ಇ'** ಕಾರಕ್ಕೆ **'ಐ'** ಕಾರಾದೇಶ 'ಒ' ಕಾರಕ್ಕೆ 'ಔ' ಕಾರ ಆದೇಶವಾಗಿ ಪ್ರಯೋಗಗಳು ಕನ್ನಡದಲ್ಲುಂಟು. ಉದಾ : ವಿರಾಗದ **'ಭಾವ'** - **ವೈ**ರಾಗ್ಯ. ನಿರ್ಮಲದ 'ಭಾವ' **ನೈ**ರ್ಮಲ್ಯ. ವಿವಿಧಭಾವ - ವೈವಿಧ್ಯ**ತಾ/ತೆ**. ವಿಚಿತ್ರ - ವೈಚಿತ್ರ್ಯ**ತಾ/ತೆ**, ವಿಭವ-ವೈಭವತೆ ದೀನ - **ದೈನ್ಯ**, **ವಿನೋದ-ವೈನೋದ**. ನಿಸರ್ಗದಲ್ಲಿ **'ಇರು'** - **ನೈ**ಸರ್ಗಿಕ. ಇತಿಹಾಸದಲ್ಲಿರುವುದು **'ಐತಿಹಾಸಿಕ'**. ಲೋಕದಲ್ಲಿರುವುದು - ಲೌಕಿಕ. ಜೀವಿ ಸಂಬಂಧವಾದದ್ದು - **ಜೈ**ವಿಕ. **ಶೈ**ಕ್ಷಣಿಕ, **ವೈ**ಷಯಿಕ-(ವಿಷಯ ಸಂಬಂಧವಾದ್ದು), **ವೈ**ಜ್ಞಾನಿಕ(ತೆ), **ನೈ**ತಿಕ(ತೆ), **'ತೆ'**

(೧) 'ನಾಗರಿಕತಾ', ನಾಗರೀಕತಾ-ಸ.ತ; ನಾಗರಿಕತೆ, ನಾಗರೀಕತೆ ಕನ್ನಡ ತದ್ಧಿತ ರೂಪಗಳೆನಿಸುತ್ತವೆ.
(೨) 'ದೇನಂದಿನ' - ರೂಢಿ ಪ್ರಯೋಗ.

ದೈನಿಕ-ದೈನಂದಿನ (ದಿನ ಸಂಬಂಧವಾದದ್ದು) (ರೂಢಿ ಪ್ರಯೋಗ) ಐಹಿಕ(ತೆ) ಇವುಗಳಲ್ಲಿ **ತೆ** ಸೇರಿಸಿ ಕನ್ನಡತದ್ಧಿತ ರೂಪಗಳಾಗುತ್ತವೆ. ವೀಣೆಯಲ್ಲಿ **ನಿಪುಣ** - ವೈಣಿಕ, **ಪೌರಾಣಿಕ** (ಬಲ್ಲವ), ಶಿವನಲ್ಲಿ **ಭಕ್ತಿಯಿರುವವರು ಶೈ**ವರು, **ವೈಷ್ಣ**ವರು, **ಕ್ರೈಸ್ತ**ರು, ಇತ್ಯಾದಿ.

೫) **'ಉಳ್ಳ'** ಎಂಬರ್ಥದಲ್ಲಿ **'ಕ'**,**'ಇ'** **ಇನಿ** ತದ್ಧಿತಪ್ರತ್ಯಯಗಳು ಬರುತ್ತವೆ:- ಧನವುಳ್ಳವ-ಧನಿಕ, (ಧನಿ-ಧಣಿ, ಒಡೆಯಾರ್ಥದಲ್ಲಿ ರೂಢಿ ಪ್ರ.), ದೂರದರ್ಶ**ಕ**, ವೇಗವರ್ಧ**ಕ**, ಜ್ಞಾನವುಳ್ಳವ - ಜ್ಞಾ**ನಿ**, ಮೌ**ನಿ**, ಗುಣವ**ತಿ**, ಧೈರ್ಯವ**ತಿ** (ಸ್ತ್ರೀ ತದ್ಧಿತ ರೂಪ)

೬) **'ಕೊಡುವುದು'** ಎಂಬರ್ಥದಲ್ಲಿ (ನಪುಂಸಕ) ದಲ್ಲಿ **'ಅನ್'** ಆದೇಶವಾದ ತದ್ಧಿತರೂಪಗಳು: ದೂರದರ್ಶ**ನ**, ಮೌಲ್ಯಮಾಪ**ನ**, ಗುಣಗಾ**ನ** ಇತ್ಯಾದಿ.

೭) **'ಮಾಡುವವ'** ಎಂಬರ್ಥದಲ್ಲಿ **'ಕರ'** ಕೃತ್‌ಪ್ರತ್ಯಯ ಬಂದಪ್ರಯೋಗಗಳಿವೆ: ಖುಚಿಯನ್ನು ಮಾಡುವುದು ಖುಚಿ**ಕರ** (ಕೃ), ಸುಖ**ಕರ**, ಆಯಾಸ**ಕರ**, ಕಷ್ಟ**ಕರ**, ತೃಪ್ತಿ**ಕರ**, ಕ್ಷೇಮ**ಕರ**. ಇವು ಸಂಸ್ಕೃತದಲ್ಲಿ **'ಉಪಪದ ತತ್ಪುರುಷಸಮಾಸ'** ವೆನಿಸುತ್ತವೆ.

೮) **'ಕೊಡುವುದು'** ಎಂಬರ್ಥದಲ್ಲಿ **'ಅಕ'** **ಪ್ರತ್ಯಯದ ಕೃದಂತರೂಪಗಳು** : ಸಂತೋಷ (ಕರ) ಕೊಡು-ಸಂತೋಷದಾ**ಯಕ**, ಶಕ್ತಿದಾ**ಯಕ**, ಫಲದಾ**ಯಕ**, ಶ್ರಮದಾ**ಯಕ** ಹಾಗೆಯೇ ಮಾರ**ಕ**, ತಾರ**ಕ**, ಉತ್ತೇಜ**ಕ** ಇತ್ಯಾದಿ.

೯) **'ಇಲ್ಲದ್ದು'** ದೂರವಾದ ಎಂಬರ್ಥಗಳಲ್ಲಿ **'ರಹಿತ'**, **'ಬಾಹಿರ'** :- ಪ್ರಾಂತ್ಯ (ಇಲ್ಲದ್ದು) ಪ್ರಾಂತ್ಯ**ರಹಿತ**, ವರ್ಣ**ರಹಿತ**, ವರ್ಗ**ರಹಿತ**. ನೀತಿಯಿಂದ (ದೂರ) ನೀತಿ**ಬಾಹಿರ**, ಧರ್ಮ**ಬಾಹಿರ**, ಗುಣ**ಬಾಹಿರ** ಸಂ. ತದ್ಧಿತ ರೂಪಗಳು.

೧೦) ಕೆಲವು ಸಂಸ್ಕೃತ ರೂಪಗಳಿಗೆ **'ಭಾವಾರ್ಥ'** ದಲ್ಲಿ **'ತ್ವ'**, **'ತಾ'** **ಪ್ರತ್ಯಯಗಳು** : ಮನುಷ್ಯಭಾವ ಮನುಷ್ಯ**ತ್ವ-ತಾ**/ ಮಾನವತ್ವ/ತಾ (ಮಾನವತೆ ಕನ್ನಡತದ್ಧಿತ). **ಕವಿತ್ವ** - **ಕವಿತಾ** - ಕವಿ**ತ್ವ**ತೆ - ಕನ್ನಡರೂಪ. ಪಟುತ್ವ/ತಾ/ತೆ (ಕ.ತ.). ಶುಭ್ರತ್ವ/ತಾ/ತೆ (ಕ.ತ) ಪ್ರಸಾದತಾ/ತೆ (ಕ.ತ) ಇತ್ಯಾದಿ.

೧೧) **'ಅನ್ಯ'**/**'ಬೇರೆ'** ಎಂಬರ್ಥದಲ್ಲಿ **'ಅಂತರ'** ಪ್ರತ್ಯಯಬಂದ ತದ್ಧಿತರೂಪಗಳು **ಕನ್ನಡದಲ್ಲಿವೆ** : ಅನ್ಯ ಆದ ಕಾಲ = ಕಾಲಾಂ**ತರ**, ಕಾರಣಾಂ**ತರ**, ಭಾಷಾಂ**ತರ**, ರೂಪಾಂ**ತರ**, ದೇಶಾಂ**ತರ** (ಅನ್ಯದೇಶ). ಕಾರ್ಯಾಂ**ತರ** (ಬೇರೆ ಕಾರ್ಯ).

೧೨) 'ಒಳಗೆ' ಎಂಬರ್ಥ **ಅಂತರ್** ಎಂಬ ಅವ್ಯಯ ಬರುವುದುಂಟು: ಉದಾ : **ಅಂತರ್ಮುಖ, ಅಂತರ್ಜಾಲ, ಅಂತರಂಗ** ಈ ಪ್ರಯೋಗಗಳು ಸರಿಯಾದ ರೂಪಗಳೇ ಆದರೆ ಇತ್ತೀಚೆಗೆ ಅಜ್ಞತೆಯಿಂದ **ಅಂತ**ರ್ಜಾತಿ, **ಅಂತ**ರ್ದೇಶಿ, ಈ ಪ್ರಯೋಗಗಳಿಗೆ ಎನ್ನೋಣ. **ಹೊರ** ಎಂಬರ್ಥವನ್ನು ಪಡೆದಿದೆ. ಇವು ಅಪಪ್ರಯೋಗವೋ!, ರೂಢಿಪ್ರಯೋಗವೋ ವಿಚಾರಮಾಡಬೇಕು.

ಹೀಗೇ ಸಂಸ್ಕೃತದ ತದ್ಧಿತ, ಕೃದಂತರೂಪಗಳು ಕನ್ನಡದಲ್ಲಿ ಹೆಚ್ಚಿನಸಂಖ್ಯೆಯಲ್ಲಿ ಪ್ರಯೋಗಕ್ಕೆ ಬಂದಿವೆ. ಇದು ನಿರಂತರಕ್ರಿಯೆ(೧) ಅವೆಲ್ಲವುಗಳನ್ನು ಹೇಳುವ ಉದ್ದೇಶ ನಮ್ಮದಲ್ಲ. ಸಂಸ್ಕೃತರೂಪಗಳ ವೈವಿಧ್ಯತೆ ಹಾಗೂ ಅವುಗಳ ಅರ್ಥವೈಶಾಲ್ಯತೆಯನ್ನು ಕೆಲವೇ ಶಬ್ದಗಳನ್ನು, ಉದಾಹರಣೆಗಳಿಂದ, ನಿರ್ದೇಶನ ಮಾಡಿ ತೋರಿಸಲಾಗಿದೆ. ಆಸಕ್ತರು ಈ ಓನ್ನೆಲೆಯಲ್ಲಿ ಹೆಚ್ಚಿನ ವಿಚಾರಗಳನ್ನು ತಿಳಿಯಬಹುದು.

ಅಲಂಕಾರ

ಹೆಣ್ಣು ತಾನು ಆಕರ್ಷಿತಳಾಗಿ ಕಾಣಲು ಬಣ್ಣ, ಬಟ್ಟೆ, ಗೆಜ್ಜೆ, ಸರ ಇತ್ಯಾದಿ ಅಲಂಕಾರಿಕವಸ್ತುಗಳಿಂದ ಅಲಂಕರಿಸಿಕೊಳ್ಳುತ್ತಾಳೆ. ಹೆಣ್ಣಿಗೆ ಆ ವಸ್ತುಗಳು **ಬಾಹ್ಯ**ಸೌಂದರ್ಯವನ್ನು ಹೆಚ್ಚಿಸುವುದಿಲ್ಲವೆ? ಆ ಹೆಣ್ಣಿಗೆ **ಆಂತರಿಕ** ಹುಟ್ಟುಗುಣಗಳಾದ ತಾಳ್ಮೆ ಜಾಣ್ಮೆ ಸೌಜನ್ಯಾದಿಗಳಿದ್ದರೆ ಶೋಭೆ ಹೆಚ್ಚುತ್ತದೆ. ಹಾಗೆಯೇ ಕಾವ್ಯದಲ್ಲಿ ಆಂತರಿಕ-ಬಾಹ್ಯ, ಆಕರ್ಷಣೆಯನ್ನು ಹೆಚ್ಚಿಸಲು **'ಅಲಂಕಾರ'** ಗಳಿರುತ್ತವೆ.

ಕಾವ್ಯವು ಶಬ್ದ-ಅರ್ಥಗಳಿಂದ ಕೂಡಿರುತ್ತದೆ. ಅರ್ಥವಿಲ್ಲದ ಶಬ್ದಗಳಿಗೆ ಮಹತ್ವವಿಲ್ಲ. ಆ ಅರ್ಥ-ಚಮತ್ಕಾರದಿಂದ ಕೂಡಿದ್ದರೆ, ಆ ಕಾವ್ಯಕ್ಕೆ ಮಹತ್ವ ಹೆಚ್ಚಾಗುತ್ತದೆ. ಹೀಗೆ **'ಕಾವ್ಯದ ಸೌಂದರ್ಯವನ್ನು ಉಂಟುಮಾಡುವ ಶಬ್ದಾರ್ಥಗಳ ಚಮತ್ಕಾರಕ್ಕೆ' "ಅಲಂಕಾರ"** ವೆಂದು ಹೆಸರು.

ರಸ-ಧ್ವನಿಗಳೂ ಕಾವ್ಯದಲ್ಲಿ ಆತ್ಮಸ್ವರೂಪಗಳಾಗಿದ್ದು ಸೌಂದರ್ಯವನ್ನು ಹೆಚ್ಚಿಸುವ ಅಂಶಗಳಾಗಿವೆ. ಇವು ಕಾವ್ಯದ ಆಂತರಿಕ ಸೌಂದರ್ಯವನ್ನು ಹೆಚ್ಚಿಸುವ ಅಗತ್ಯಾಂಶಗಳೆಂದು ತೀರ್ಮಾನಿಸಲಾಗಿದೆ. ಈ ಶಬ್ದಾರ್ಥ ಅಲಂಕಾರಗಳೂ ರಸಪುಷ್ಟಿಯನ್ನುಂಟುಮಾಡಬೇಕು. ಅದರಲ್ಲೇ ಅವುಗಳ ಸಾರ್ಥಕತೆಯಿರುವುದು.

ಅಲಂಕಾರಗಳಲ್ಲಿ i) **ಶಬ್ದಾಲಂಕಾರ** ii) **ಅರ್ಥಾಲಂಕಾರ**ಗಳೆಂದು ಎರಡು ವಿಧಗಳಿವೆ. 'ಶಬ್ದಾಲಂಕಾರ'ಗಳು ಹೆಂಗಸರು ಸದ್ದಿಗೋಸ್ಕರ ಕಟ್ಟಿಕೊಂಡ ಗೆಜ್ಜೆಗಳಂತೆ. ಅವು ಶಬ್ದ ಚಮತ್ಕಾರವನ್ನುಂಟು ಮಾಡುವವು. **ಶಬ್ದಾಲಂಕಾರಗಳ** ಕೇವಲ ಶಬ್ದಚಮತ್ಕಾರದಿಂದ ಕೆಲವೊಮ್ಮೆ ರಸಕ್ಕೆಭಂಗವನ್ನೂ ತರಬಲ್ಲವು. ಹಾಗೆಯೆ ಅರ್ಥಚಮತ್ಕಾರವನ್ನುಂಟುಮಾಡುವವು **ಅರ್ಥಾಲಂಕಾರ.** ಅವುಗಳಿಂದ ಕಾವ್ಯದ ಆತ್ಮಸ್ವರೂಪವಾದ ರಸಕ್ಕೆಪುಷ್ಟಿ ದೊರಕುತ್ತದೆ. ಇವುಗಳನ್ನೇ **'ಅರ್ಥಾಲಂಕಾರ'** ಗಳೆನ್ನುತ್ತೇವೆ. ಉದಾ : **'ನವ ನವೋದಯಕ್ಕಾಗಿ ಪ್ರಕೃತಿ ತಪವಿರುವಂತೆ ತೋರುತ್ತಿತ್ತು'** -ಇಲ್ಲಿ ಹಂಬಲಕ್ಕಾಗಿ ಪ್ರಕೃತಿತಪಸ್ಸಿನಲ್ಲಿ ತೊಡಗಿದೆ, ಈ ಕಲ್ಪನೆಯಲ್ಲಿ ಸೊಗಸುಂಟು.

---

(೧) ಸಂಸ್ಕೃತರೂಪಗಳ ಮೇಲೆ ಕನ್ನಡದ 'ತದ್ಧಿತಭಾವ' ಪ್ರತ್ಯಯ ಸೇರುವ : (ಮೂರ್ಖ+ತನ ಸಂ.+ಕ.ತ. ಪ್ರತ್ಯಯ). ಹೀಗೇ ವಿಭಿನ್ನ ಕ್ಷೇತ್ರಗಳಶಬ್ದಗಳು ಇಂದಿನ ಮಡಿವಂತಿಕೆಯಿರದ ಸೃಜನಶೀಲ ಮನೋಧರ್ಮದಲ್ಲಿ ಬೆಳೆಯುತ್ತಿವೆ. ಅವುಗಳನ್ನು ಆಯಾ ಪ್ರಸಂಗದ ಪ್ರಯೋಗಗಳಲ್ಲಿ ಗಮನಿಸಿ ತಿಳಿಯಬಹುದು.

I. ಶಬ್ದಾಲಂಕಾರಗಳು : ಮೂರು ಪ್ರಕಾರಗಳುಂಟು. ೧) **ಅನುಪ್ರಾಸ** ೨) **ಯಮಕ** ೩) **ಚಿತ್ರಕವಿತ್ವ**

i) **ಅನುಪ್ರಾಸ :** ಪದ್ಯಗಳಲ್ಲಿ ಒಂದೋ ಎರಡೋ ಅಕ್ಷರಗಳು ನಿಯತವಾಗಿರದೆ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ. ಉದಾ : **ಅಲ್ಲಿಗೆಲ್ಲಿಗೆ ಬೆಳೆದ ಬೆಳೆಗಳಿಂ ಮೆಳೆಗಳಿಂ- ಲ, ಳ** ಕಾರಗಳುಆವೃತ್ತಿಯಾಗಿವೆ. ಹೀಗೆಯೇ **'ಬಲ್ಲವನೇ ಬಲ್ಲ ಬೆಲ್ಲದ ಸವಿಯ'**, **'ಹೇಳು ಅಜ್ಜಿಗೆ ಬೇಕು ಮಜ್ಜಿಗೆ'**, ಹೀಗೆ **ಲ್ಲ, ಜ್ಜ,** ಈ ಅಕ್ಷರಗಳು ಮತ್ತೆ ಮತ್ತೆ ಬಂದಿವೆ.

ಉದಾ : **'ಮಲಗು ಮನದನ್ನೆ ಮಲಗೆನ್ನ ಚಿನ್ನೆ'**-(ಇಲ್ಲಿ **ಮ,** ನ ಅಕ್ಷರಗಳು ಮತ್ತೆ ಮತ್ತೆ ಬಂದಿವೆ). ಇದಕ್ಕೆ '**ಅನುಪ್ರಾಸ**' ವೆನ್ನುತ್ತೇವೆ. ಇದರಲ್ಲಿ **'ಛೇಕಾನುಪ್ರಾಸ'** **ಮತ್ತು** **'ವೃತ್ಯನುಪ್ರಾಸು'** ವೆಂಬ ಎರಡುಭೇದವನ್ನೂ ಹೇಳಲಾಗುತ್ತದೆ.

ಹಿಂದಿನಿಂದಲೂ ಪ್ರಾಸಕ್ಕೆ ಮಹತ್ವವಿದೆ. **'ಪ್ರಾಸವಿಲ್ಲದ ಹಾಡ ತಾಸು ಹಾಡಿದರೇನು'** ಎಂಬ ಸೂಕ್ತಿಯಿದೆ. ಪ್ರಾಸವು **ಆರಂಭ ಅಂತ್ಯ**ಗಳನ್ನು ಸೂಚಿಸುವುದಲ್ಲದೆ, ಕಂಠಪಾಠಕ್ಕೆ ಅನುಕೂಲವಾಗಿದೆ. ಕೇಳಲುಸೊಗಸು, ಹೀಗಾಗಿ ಇಂದೂ ಅವುಗಳು ಪ್ರಚುರವಾಗಿವೆ: ಹೀಗೆಯೆ ಕವಿಜಗತ್ತಿನಲ್ಲಿ ಪರಿಚಿತವಾದ ಇನ್ನೂ ಮೂರುರೀತಿಯ ಪ್ರಾಸಗಳುಂಟು. ೧) **ಆದಿಪ್ರಾಸ** ೨) **ಅಂತ್ಯಪ್ರಾಸ** ೩) **ಮಧ್ಯಪ್ರಾಸ.**

೧) **ಆದಿಪ್ರಾಸ :** ಪ್ರತಿಪಾದದ ಮೊದಲ ಹಾಗೂ ಎರಡನೆಯ ಸ್ವರಗಳ **ನಡುವೆ ಒಂದೇ ರೀತಿಯ** ವ್ಯಂಜನಗಳು ನಿಯತವಾಗಿ ಬರುವುದಕ್ಕೆ **'ಆದಿಪ್ರಾಸ'** ವೆನಿಸುತ್ತದೆ. ಇದನ್ನು ಹಿಂದಿನಿಂದಲೂ **'ಖಂಡಪ್ರಾಸ ಅತಿಶಯ'** ವೆಂದುಕರೆದು ಪಾಲಿಸಿ, ಪರಿಗಣಿಸಿಕೊಂಡು ಬರಲಾಗುತ್ತಿತ್ತು.

ಉದಾ: ಆ**ಡು**ವ ಗುಂಡಯ್ಯನ ನೃತ್ಯಂ
ನೋ**ಡು**ವ ಶಿವಗೆ ಮುಟ್ಟಿತು ಸತ್ಯಂ.

(ಈ ಆದಿಪ್ರಾಸವನ್ನು **ಸಿಂಹ, ಗಜ, ವೃಷಭ, ಅಜ, ಶರಭ, ಹಯ** ಪ್ರಾಸಗಳೆಂದು **ಆರು ವಿಧ**ವಾಗಿ ಅಲಂಕಾರ ಗ್ರಂಥಗಳಲ್ಲಿ ಗುರುತಿಸಿದ್ದಾರೆ.)

೨) **ಅಂತ್ಯಪ್ರಾಸ :** ಪಾದಗಳ ಕೊನೆಯ ಎರಡುಸ್ವರಗಳ ನಡುವೆ ನಿಯತವಾಗಿ ಒಂದೇ ವಿಧವಾದ ವ್ಯಂಜನಾಕ್ಷರಗಳು ಬರುವುದನ್ನು **'ಅಂತ್ಯಪ್ರಾಸ'** ವೆನ್ನಲಾಗುತ್ತದೆ.

ಉದಾ: ಕನ್ನಡ ನುಡಿ ನಮ್ಮ ಹೆ**ಣ್ಣು,**
ನಮ್ಮ ತೋಟದಿನಿಯ ಹ**ಣ್ಣು.**

೩) **ಮಧ್ಯಪ್ರಾಸ :** ಪಾದಗಳ ನಡುವೆ ಒಂದೇಅಕ್ಷರ ನಿಯತವಾದ ಸ್ಥಳದಲ್ಲಿ ಬಂದರೆ ಅದನ್ನು **'ಮಧ್ಯಪ್ರಾಸ'** ವೆನ್ನಲಾಗುತ್ತದೆ. (ಮೇಲ್ಕಂಡ ಉದಾಹರಣೆಯಲ್ಲೇ ಗುರುತಿಸಿ ತೋರಲಾಗಿದೆ). ಇತ್ತೀಚಿನ ಕವನ, ಕಾವ್ಯಗಳಲ್ಲಿ ಅವಿ,

ಅಂತ್ಯಪ್ರಾಸಗಳ ಬಳಕೆ ಹೆಚ್ಚು. **ಉದಾ :** ಗಿರಿಝರಿಯ ಒರತೆ
ಜೀವರಾಶಿಯ ಚರಿತ

ii) **ಯಮಕಾಲಂಕಾರ :** ಒಂದೇ ರೂಪದ ಭಿನ್ನಾರ್ಥಕ ಶಬ್ದಗಳು ಪ್ರತಿಪಾದದಲ್ಲಿಯೂ ಮತ್ತೆಮತ್ತೆ ಬರುವುದನ್ನು(೧) **'ಯಮಕಾಲಂಕಾರ'** ವೆನ್ನಬಹುದು. ಉದಾ :

ಎಳೆಯದಾದ **ದಾರವಂದರ್ಥ** - **'ಎಳೆವಾಸೆ'** ತೊಡರ್ದುದೆನೆ ಮಿಸು
ಅಲುಗಾಡುವ **ಮುಂಗುರುಳು** - **'ಪೆಳೆವಾಸೆ'** ಯದೆಸೆಯೆ ನಿಂದಳಂಕೈವಿಡಿದೊ
ಸೆಳೆದ್ಯೊಯ್ಯುವ ಬಯಕೆ - **'ಲ್ದಳೆವಾಸೆ'** ಯಾಂತನಂಬುಜ
ಮೃದುಹಾಸಿಗೆಯಾದ -**'ದೆಳವಾಸೆ'** ಡಗೊಂಡ ಪುಳಿನದೆಡೆಗವನೀಶಂ॥(೨)

ಈ ಪದ್ಯಾರ್ಥ ಹೀಗಿದೆ : ಆಕೆ ಅಲುಗಾಡುವ ನವಿರಾದ ಕೂದಲನ್ನು ಅತಿಶಯವಾಗಿ ಉಳ್ಳವಳು. ಆಕೆಗೆ ಮನಸ್ಸಿನಲ್ಲಿ ಅನುರಾಗ ಮೂಡಿದೆ. **'ಎಳೆಯದಾರ ತೊಡರಿತು'** ಎಂಬ ಕುಂಟುನೆಪ ಹೇಳಿ ನಿಂತಿದ್ದಾಳೆ. ಅಂತಹ ಮುಂಗುರುಳುಳ್ಳವಳನ್ನು ಮರಳರಾಶಿಯಲ್ಲಿಗೆ ಸೆಳೆದೊಯ್ಯುವ ಬಯಕೆಯುಳ್ಳವನಾದ ಪ್ರಿಯ, ಅವಳ ಮನಸ್ಸಿನ ಮರ್ಮವನ್ನು ತಿಳಿದು ನಿರ್ಭಯವಾಗಿ ಜೊತೆಯಲ್ಲಿ ಕಮಲದ ಹಾಸಿನಹತ್ತಿರ ಕರೆದುಕೊಂಡು ಹೋದನು.

ಸಮನ್ವಯ : ಮೇಲಿನ ಉದಾಹರಣೆಯ ಪದ್ಯದ ಪಾದಗಳ ಆರಂಭದ, ಪದಗಳಲ್ಲಿ ಸಮಾನ ರೂಪವಿದೆ. ಅರ್ಥಗಳು ಭಿನ್ನಭಿನ್ನವಾಗಿವೆ. ಆ ಶಬ್ದಗಳು ಪುನಃ ಪುನಃ ಬಂದಿವೆ. ಇದನ್ನು **'ಯಮಕಾಲಂಕಾರ'** ವೆನ್ನಬಹುದು.

iii) **ಚಿತ್ರಕವಿತ್ವ :** ಬುದ್ಧಿಸಾಮರ್ಥ್ಯದ ಪ್ರದರ್ಶನಕ್ಕಾಗಿ, ಕೇವಲಶಬ್ದಗಳ ಚಮತ್ಕಾರದಿಂದ ಕೂಡಿರುವ ಕುತೂಹಲ ಪದ್ಯರಚನೆಯಾಗುತ್ತಿದ್ದವು. ಅದನ್ನು **'ಚಿತ್ರಕವಿತ್ವ'** ವೆನ್ನಲಾಗಿದೆ. ಉದಾ:

ನನ್ದನ ನನ್ದನ ನಿನ್ನೊ

ನ್ದನ್ದದ ಮೈಮುಂದೆ ನಿನ್ದುದೆನ್ದನೆ

(ಇಲ್ಲಿ ಕೇವಲ **'ನ', 'ದ'** ಅಕ್ಷರಗಳಲ್ಲೇ ಪದ್ಯಾರ್ಥ ರಚನೆಯಾಗಿದೆ ಇದೊಂದು ಶಬ್ದ ಚಮತ್ಕಾರ). ಹೀಗೆ **ಅತಾಲವ್ಯ, ನಿರೋಷ್ಠ್ಯ** ಇತ್ಯಾದಿ ಭೇದಗಳಿವೆ.

II. ಅರ್ಥಾಲಂಕಾರಗಳು :

ಇವುಗಳಿಂದ ಕಾವ್ಯಗಳಲ್ಲಿ ಅರ್ಥಚಮತ್ಕಾರ, ಸೊಗಸುಗಳು ಬಂದು ರಸ

(೧) ಪದ್ಯಗಳಲ್ಲಿ 'ಸ್ವರವ್ಯಂಜನ ಯುಗ್ಮಗಳ ಪುನರುಕ್ತಿ ಯಮಕ' ಎನ್ನಲಾಗಿದೆ. ಇದು ಛೇಕಾನುಪ್ರಾಸದ ಲಕ್ಷಣವಾಗುತ್ತದೆ. ಯಮಕದ ಲಕ್ಷಣದಲ್ಲಿ ಭಿನ್ನತೆಯಿದೆ.: "ಅರ್ಥೇಸತಿ ಭಿನ್ನಾರ್ಥಕಾನಾಂ ಸಮಾನ ಆನುಪೂರ್ವಿಕಾನಾಂ ಶಬ್ದಾನಾಂ ಪುನರಾವೃತ್ತಿರ್ಯಮಕ" ಎಂಬ ಲಕ್ಷಣ ಸೂತ್ರವಿದೆ.

(೨) 'ಕನ್ನಡ ಕೈಪಿಡಿ' ಯಲ್ಲಿ ಯಮಕಕ್ಕೆ ಉದಾಹರಣೆಯಾಗಿ ಕೊಟ್ಟಿರುತ್ತದೆ.

ಪುಷ್ಟಿಯುಂಟಾಗುತ್ತದೆ. ಉದಾ: **"ಬೆಣ್ಣೆಯಂತೆ ನುಣ್ಣಗಿರುವ ಸುಣ್ಣವನ್ನು ತಾ"**. ಇಲ್ಲಿ ಅಗತ್ಯವಾಗಿರುವುದು **'ಸುಣ್ಣ'**. ಅದು ಹೇಗೆ? ಎಂತಿರಬೇಕೆಂಬುದನ್ನು - **'ಬೆಣ್ಣೆಯಂತೆ'** ಎನ್ನಲಾಗಿದೆ. ಇಲ್ಲಿ **ಸುಣ್ಣ-ಬೆಣ್ಣೆ**ಗಳು ಕೇವಲ ಪ್ರಾಸಕ್ಕಾಗಿ ಬಂದಿಲ್ಲ. ಬೆಣ್ಣೆಯಲ್ಲಿರಬಹುದಾದ **'ಬಿಳುಪು'**, **'ಮೃದುತ್ವ'**, **'ಶುದ್ಧೀಕೃತಗುಣ'** ಈ ಅಂಶಗಳು ಸುಣ್ಣದಲ್ಲಿರಬೇಕೆಂಬುದೇ ವಾಚಕನ ಅಪೇಕ್ಷೆ. ಕೇವಲ **'ಸುಣ್ಣವನ್ನು ಕೊಡು'** ಎನ್ನುವುದಕ್ಕೂ ಹೀಗೆ ಬೆಣ್ಣೆಯ ಹೋಲಿಕೆಯಿಂದ ಹೇಳುವುದಕ್ಕೂ ವ್ಯತ್ಯಾಸ ನೋಡಿ ತಿಳಿಯಬಹುದು.

ಈ ರೀತಿಯ ಅರ್ಥಚಮತ್ಕೃತಿಯ ಸೊಗಸು ಅರ್ಥಾಲಂಕಾರಗಳ ಗುರಿ. ಈ ಅಂಶವನ್ನು ಎಲ್ಲ ಅರ್ಥಾಲಂಕಾರಗಳಲ್ಲೂ ಗುರುತಿಸಬಹುದು. ಮಕ್ಕಳು ಅಲಂಕಾರಗಳನ್ನು ತಿಳಿಯಲು ಆಸಕ್ತಿ ಮೂಡಿಸುವುದಕ್ಕಾಗಿ ವಿವರವಾಗಿ ಕೆಲವು **ಬಳಕೆಯಲ್ಲಿರುವ ಮುಖ್ಯ** **ಅಲಂಕಾರಗಳನ್ನು ಪದ್ಯ-ಗದ್ಯದ ಉದಾಹರಣೆ**ಗಳೊಂದಿಗೆ ಪರಿಚಯಿಸಲಾಗಿದೆ :

೧) ಪೂರ್ಣೋಪಮಾಲಂಕಾರ : ಎರಡು ವಸ್ತುಗಳಿಗಿರುವ **ಸಾದೃಶ್ಯ** (ಹೋಲಿಕೆ)ಯನ್ನು **'ಉಪಮಾ'** ಎನ್ನುತ್ತೇವೆ. ಅಲ್ಲಿ ಸುಂದರವಾದ ಸಾದೃಶ್ಯ **'ಸಂಪತ್ತು'** ಇರಬೇಕು. ಅದಿಲ್ಲದೆ **'ನಾಯಿನರಿಯಂತಿದೆ'** ಎಂದು ಹೇಳಿದರೆ, ಹೋಲಿಕೆ ಸರಿಯೇ ಮೇಲುನೋಟಕ್ಕೆ ಒಂದೇ ಎನಿಸಬಹುದು. ಆಂತರಿಕವಾಗಿ ಹೋಲಿಕೆ ಸರಿಬರುವುದಿಲ್ಲ ಏಕೆಂದರೆ ನಾಯಿಯ ಗುಣ ವಿಧೇಯತೆ, ಕೃತಜ್ಞತೆಗಳೇ ಬೇರೆ, ನರಿಯ ಕುತಂತ್ರಬುದ್ಧಿಯೇ ಬೇರೆ. ಹೋಲಿಕೆ ಸರಿಯಾಗಿರಲು **'ಬಾಹ್ಯ - ಆಂತರಿಕ' ಹೋಲಿಕೆ ಸುಂದರವಾಗಿಯೂ** **ಸಮೃದ್ಧವಾಗಿಯೂ ಇರಬೇಕೆಂದು** ಅಭಿಪ್ರಾಯವಿದೆ.

ಉಪಮಾಲಂಕಾರದಲ್ಲಿ ಪೂರ್ಣತೆ ತೋರಬೇಕಾದರೆ **ಕೆಲವು** ಅಂಶಗಳಿಂದ ಕೂಡಿದ ಸುಂದರ ಸಾದೃಶ್ಯಸಂಪತ್ತು ಇರಬೇಕು. ಅದು **'<u>ಪೂರ್ಣೋಪಮಾಲಂಕಾರ</u>'** ವೆನಿಸುತ್ತದೆ.

<u>ಉಪಮೇಯ</u> : (ಕಾವ್ಯವಿಷಯ) ಹೇಳಲು ತೆಗೆದುಕೊಂಡಿರುವ ವಸ್ತು.

<u>ಉಪಮಾನ</u> : ಪ್ರಸಿದ್ಧವಾಗಿದ್ದು ವಿಷಯಕ್ಕೆ ಹೋಲಿಸಲು ಅರ್ಹವಾದುದು.

<u>ಸಾಧಾರಣಧರ್ಮ</u> : ಉಪಮಾನ, ಉಪಮೇಯಗಳೆರಡರಲ್ಲೂ ಸಮಾನವಾಗಿ ಕಾಣು **ಗುಣಧರ್ಮ**.

<u>ಉಪಮಾವಾಚಕ</u> : **ಹೋಲಿಕೆಯಾಗಿದೆ** ಎಂಬುದನ್ನು ಸೂಚಿಸುವ ಶಬ್ದಗಳು (**ಅಂ** **ಅಂತ, ಅಂತಹ, ಪೋಲ್, ವೊಲ್, ರೀತಿ, ಆಂತು, ಹ** ಇತ್ಯಾದಿ ಶಬ್ದಗಳು. **ಹಾಂಗ** ಇವ ಜಾನಪದೀಯ ಶಬ್ದಗಳು)

ಈ ನಾಲ್ಕು ಅಂಶಗಳಿಂದ ಕೂಡಿದ ಸುಂದರಸಾದೃಶ್ಯವೂ (ಹೋಲಿಕೆ) ಇರಬೇಕು.

೧. ಉದಾ. **"ರಾಮನು ತೊರೆದನೆಂದು ಕೇಳಿದ ಸೀತೆ,**

ಸಿಡಿಲಪೆಟ್ಟಿಗೆ ಉರುಳುವ ಮರದಂತೆ ದೊಪ್ಪನೆ ಕೆಳಗುರುಳಿದಳು

ಸಮನ್ವಯ : 'ಕೇಳಿದ **ಸೀತೆ**'-**ಉಪಮೇಯ**', ಉರುಳುವ **ಮರ**'-**ಉಪಮಾ**

'ದೊಪ್ಪನೆ ಬಿದ್ದಾಗ' 'ಸೀತೆ-ಮರ' -ಗಳಲ್ಲಿ ಕಾಣುವ ಸಾಮಾನ್ಯವಾದ 'ಅಸ್ತವ್ಯಸ್ತತೆ', ಆ ಶಬ್ದ, ತೀವ್ರಾಘಾತ ಇವುಗಳು **ಸಾಧಾರಣಧರ್ಮ**. 'ಅಂತೆ' - **ಉಪಮಾವಾಚಕ** ಶಬ್ದವಿದೆ. ಇಲ್ಲಿ ಪುಷ್ಟವಾಗಿ ನೀಳವಾಗಿ ಬೆಳೆದ 'ಸೀತ - ಮರ' ಇವುಗಳಲ್ಲಿರುವ ಆಕರ್ಷಣೆ, ಅಮೂಲ್ಯತೆ ಇವುಗಳಲ್ಲಿ ಸುಂದರವಾದ ಹೋಲಿಕೆಯು ವಿಪುಲವಾಗಿ ಕಾಣುತ್ತಿದೆ. ಈ ಮಾತನ್ನು ಕೇಳಿದವರಿಗೆ ಹೆಣ್ಣಿನಲ್ಲಾದ ತೀವ್ರ ಪರಿಣಾಮದ ಚಿತ್ರಮೂಡಿ ಕೇಳುಗನ ಮನಸ್ಸು ಕರಗುವುದೇ ಇಲ್ಲಿ ಚಮತ್ಕಾರ, ಸೊಗಸುಗಳಾಗಿವೆ.

ಉದಾ: ೨ 'ಸುಲಿದ **ಬಾಳೆಯಹಣ್ಣಿನಂದದಿ** ಸುಲಭವಾಗಿರ್ಪ **ಲಲಿತವಹ ಕನ್ನಡ**'

(ಉ.ಮಾನ) (ಉ.ವಾಚಕ) (ಸ.ಧರ್ಮ) ಉ.ಮೇಯ

೨) ಲುಪ್ತೋಪಮಾಲಂಕಾರ :

ಉಪಮಾಲಂಕಾರದ ನಾಲ್ಕು ಅಂಶಗಳಲ್ಲಿ ಒಂದೆರಡು ಅಂಶಲುಪ್ತ (ಕಾಣದೆ) ಹೋಗಿ, ಅಲ್ಲಿ ಸುಂದರವಾದ ಹೋಲಿಕೆ ತೋರುತ್ತಿದ್ದರೆ ಅದು **'ಲುಪ್ತೋಪಮಾಲಂಕಾರ'** ವೆನಿಸುತ್ತದೆ.

i) ಉದಾ: ಅಂಬೇಡ್ಕರರ ಮೃದು ಕಠಿಣಸ್ವಭಾವಗಳನ್ನು ಚಿತ್ರಿಸುವಾಗ :

"ಕೋಶಕಠಿಣ ಬೀಜಮೃದುವಾಗಿದ್ದ ಕಾಯಿಯಂತಿದ್ದರು".

ಸಮನ್ವಯ : ಇಲ್ಲಿ **'ಕಾಯಿ'** ಎಂಬ ಉಪಮಾನವಿದೆ. **'ಕಾಯಿ'**, (ಅಂಬೇಡ್ಕರ್ ಬಾಹ್ಯ ನಡೆ) ಅವೆರಡರಲ್ಲೂ ಸಮಾನವಾಗಿ ತೋರುವ ಮನದ **ಅಚಲತೆ**, ಮಾತಿನ ಬಾಹ್ಯದ ಕಠಿಣತೆಗಳನ್ನು ಕಾಯಿಯಚಿಪ್ಪಿಗೆ ಹೋಲಿಸಲಾಗಿದೆ. ಅವರ ಅನುಕಂಪದ ಹೃದಯವನ್ನು ಕಾಯಿಯ ತಿರುಳಿಗೆ ಹೋಲಿಸಿದೆ. **'ಮೃದುತ್ವ' ಆರ್ದ್ರತೆ** ಆದಿ ಸಾಧಾರಣ ಧರ್ಮಗಳಾಗಿವೆ. (ಯಂತೆ) **'ಅಂತೆ'** ಎಂಬ ಉಪಮಾವಾಚಕ ಶಬ್ದವಿದೆ. ಇಲ್ಲಿ ಸುಂದರ ಸಾದೃಶ್ಯವೂ ಇದೆ. ಜನರಿಗೆ ಸಮಸ್ಯೆಗಳು ಎದುರಾದಾಗ ಅವರ ಬಗ್ಗೆ **'ಕನಿಕರದ, ಕರುಣೆಯ ಹೃದಯವಿತ್ತು'.** ಪರಿಣಾಮದ ಮಾತಿನಲ್ಲಿ ನಿಷ್ಠುರತೆ, ಕಠಿಣತೆ, ದಿಟ್ಟತನಗಳಿದ್ದವು. ಈ ಮಾತುಗಳಲ್ಲಿ ಅವರ **ದಿಟ್ಟತನ, ಕನಿಕರದ ಹೃದಯದ, ಪ್ರೀತಿಯ ಮನಸ್ಸಿನ** ಚಿತ್ರಗಳು ಮೂಡುತ್ತದೆ. ಯಾರದ್ದೆಂಬುದನ್ನಿಲ್ಲಿ ಹೇಳಿಲ್ಲ. **'ಅಂಬೇಡ್ಕರ್'**-ರ (ಉಪಮೇಯ) ಲುಪ್ತವಾಗಿದೆ. ಆದ್ದರಿಂದ **ಉಪಮೇಯಲುಪ್ತೋಪಮಾಲಂಕಾರ**ವೆನ್ನುತ್ತೇವೆ.

ii) ಧರ್ಮೋಪಮೇಯ ಲುಪ್ತೋಪಮೇಯ : ಉದಾ ೧

೧. ಉದಾ : 'ಉರಿಯುವ ಬೆಂಕಿಗೆ ತುಪ್ಪವ ಹೊಯ್ದಂತೆ'.

ಕೆರಳಿದ ಆಸೆಗಳ ಮನಸ್ಸಿಗೆ ಅರಿಷಡ್ವರ್ಗಗಳ ಸಹಯೋಗದ ಪರಿಣಾಮವನ್ನು ಹೇಳುವಾಗ

ಸಮನ್ವಯ : ಇಲ್ಲಿ ತುಪ್ಪ ಹಾಕಿದಂತಾದುದು. ಯಾವುದಕ್ಕೆ ಎಂಬ ಮಾತಿನ ವಿಷಯವಾದ (ಆಸೆಗಳ ಮನಸ್ಸು)**'ಉಪಮೇಯ'** ವಾಗಲಿ, (ಅದರ ತೀವ್ರ ಪರಿಣಾಮ) **'ಸಾಧಾರಣ ಗುಣ'** (ಧರ್ಮ)ವೂ ಇಲ್ಲಿ ಹೇಳಿರುವುದಿಲ್ಲ. ಆದ್ದರಿಂದ ಇದು **'ಧರ್ಮೋಪಮೇಯ**

ಲುಪ್ತೋಪಮೇ' ಯೆನಿಸುವುದು.

೨. **'ಬಳಿ ಜಾರುವಂತೆ ಜಾರಿದುದು'**- ಇಲ್ಲಿ ಭರತನ **ಕೋಪ** ಶಮನವನ್ನು **ಗರುಡನ ಮಂತ್ರಕ್ಕ ವಿಷವಳಿವಂತೆ ಜಾರಿತು** ಎಂಬುದನ್ನು ಹೇಳುವಾಗ - **ಸರಾಗ**ವಾಗಿ, **ಸುಲಭ**ವಾಗಿ ಎಂಬುದು ಧರ್ಮವು ಉಕ್ತವಾಗಿಲ್ಲ. ಹಾಗೆಯೇ **ಬಾಹುಬಲಿ**ಯ ಕೋಪ **ಉಪಮೇಯ**ವುಉಕ್ತವಾಗಿಲ್ಲ. ಆದ್ದರಿಂದ ಇದು **ಧರ್ಮೋಪಮೇಯ ಲುಪ್ತಾಲಂಕಾರ**.

iii) ವಾಚಕ-ಧರ್ಮ-ಉಪಮಾನ ಲುಪ್ತೋಪಮೆ :-

ಉದಾ: **'ಹಂಸಗಮನೆ'** (ಉಪಮೇಯ) - ಎಂದರೆ ಹಂಸದಗಮನದಂತೆ ನಡಿಗೆಯುಳ್ಳವಳು ಎಂದರ್ಥ. ಈ ವಾಕ್ಯದಲ್ಲಿ **'ಅಂತೆ'** ಎಂಬ ವಾಚಕವು ಕಾಣುವುದಿಲ್ಲ. ಸಾಧಾರಣ ಧರ್ಮವಾದ **'ಮನೋಹರ'** ಇತ್ಯಾದಿ ಶಬ್ದಗಳೂ ಹೇಳಲಾಗಿಲ್ಲ. **'ಹಂಸಗಮನ'** ವೆಂಬ ಉಪಮಾನವು ಕಾಣುವುದಿಲ್ಲ. ಆದ್ದರಿಂದ ಇದು **'ವಾಚಕ-ಧರ್ಮ-ಉಪಮಾನ ಲುಪ್ತೋಪಮೆ'** ಯೆನಿಸುತ್ತದೆ.

iv) ಉಪಮೇಯ ಲುಪ್ತೋಪಮೆ :-

ಮನುಷ್ಯನವ್ಯಕ್ತಿತ್ವ ನಿರ್ಮಾಣವನ್ನು ಕುರಿತು ಹೇಳುವಾಗ : **"ಮೋಡದಂತೆ ಗುರಿಯಿಲ್ಲದೆ ಗಾಳಿಯ ತೊತ್ತಾಗಬಾರದು"** - (ಗುರಿಯಿರಬೇಕು ಅದನ್ನು ಸಾಧಿಸುವುದರಲ್ಲಿ ಆತ್ಮಾಭಿಮಾನಯಿರಬೇಕೆಂದು ಅರ್ಥ) ಇಲ್ಲಿ ವ್ಯಕ್ತಿ ಯಾರೆಂಬ ಉಪಮೇಯ ಲುಪ್ತವಾಗಿದೆ. ಆದ್ದರಿಂದ **'ಉಪಮೇಯ ಲುಪ್ತೋಪಮೆ'**ಯೆನಿಸಿದೆ. ಹೀಗೆಯೇ (ಉದಾಹರಣೆಗಳನ್ನು ನೋಡಿ ತೀರ್ಮಾನಿಸಬೇಕಾಗುತ್ತದೆ).

೩) ಉತ್ಪ್ರೇಕ್ಷಾಲಂಕಾರ :

('ಸಂಭಾವನೆ' ಮಾಡುವುದು) **'ಸಂಭಾವನೆ'** ಅದೊಂದು ತಿಳಿವಳಿಕೆ (ಕಲ್ಪನೆ). **'ನಿಶ್ಚಯ'** ಜ್ಞಾನಕ್ಕಿಂತ ಕೀಳಾಗಿಯೂ **'ಸಂದೇಹ'** ಜ್ಞಾನಕ್ಕಿಂತಲೂ ಮೇಲಾಗಿರುವಂತಹುದು. ಸಹಜವಾಗಿ ಇಲ್ಲದ್ದನ್ನು (ಉಪಮಾನವನ್ನು) ಇದೆಯೆಂದು ಕವಿ ಕಲ್ಪಿಸುತ್ತಾನೆ. ತಪ್ಪು ಮಾಡದ ಏಸುವಿಗೆ ಶಿಕ್ಷೆಯಾಗಿ ಬಾಸುಂಡೆಗಳು ಬಂದಿವೆ. ಆಗಿನ ಕವಿಯ ಮಾತು:

ಉದಾ : "ನಿರಪರಾಧಕ್ಕೆ ಮೂಕಸಾಕ್ಷಿಯೆಂಬಂತೆ(೧) **ಬಾಸುಳೆಗಳೆದ್ದು ನೆತ್ತರುಕ್ಕಿ ಹರಿಯಿತು"**. ಏಸುವಿಗೆ ಹೊಡೆತದಿಂದ ಬಾಸುಳೆಗಳೆದ್ದಿವೆ. ಅವುಗಳು ನಿಜಸ್ಥಿತಿಯನ್ನು ಹೇಳುವಂತಹ **'ಮಾತಿರದ ಸಾಕ್ಷಿ'**ಯೆಂದು ಕವಿ ಸಂಭಾವನೆ (ಕಲ್ಪಿಸಿದ್ದಾನೆ) ಮಾಡಿದ್ದಾನೆ.

ಚಮತ್ಕಾರ : ನಿರಪರಾಧಕ್ಕೆ **ಮೂಕಸಾಕ್ಷಿ** (ಹೇಳಲಾಗಿದ್ದು,) ಧರ್ಮ ಗಮನಿಸಬೇಕು. ಅಪರಾಧವಿರಲಿಲ್ಲ ಇದನ್ನು ಹೇಳಲು-ಕೇಳಲು ಮಾತುನಿಂತಿವೆ. ನಿರಪರಾಧಿಗೆ ಇಂತಹ ಶಿಕ್ಷೆಯಾಗಿದೆ. ಆದರೂ ಏಸುಪಿನಲ್ಲಿ ದಿವ್ಯ ಮೌನವಿದೆ. ತನಗೆ ಸಾಧಿಸುವ ಮನವಿಲ್ಲ,

ಅನುಕಂಪ ಬರುತ್ತಿದೆ. ಅದಕ್ಕಾಗಿಯೇ ಕಪಿ ಓಗೆ ಕಲ್ಪಿಸಿರುವುದು.

ಸಮನ್ವಯ : ಅಸಹಾಯಕ ಸ್ಥಿತಿಯನ್ನು ಕಪಿ ಕಲ್ಪಿಸಿ ಹೇಳಿರುತ್ತಾನೆ. ಈ ಬಾಸುಂಡೆಗಳು ಇಲ್ಲಿ **'ಮೂಕಸಾಕ್ಷಿ'** ನಿಜವೇ, ಅಲ್ಲ. (ಉಪಮಾನವನ್ನು) **ಕವಿನಿರ್ಮಿತ**ವೆನ್ನ ಬಹುದಲ್ಲವೆ? ಇಲ್ಲಿ ಉಪಮಾಲಂಕಾರದಂತೆ ತೋರುತ್ತದೆ(೧). ಸೂಕ್ಷ್ಮವಾಗಿ ಗಮನಿಸಿದರೆ ಈ ಉಪಮಾನ ಸಹಜವಾಗಿಲ್ಲ. ಇದು ಗಮನಾರ್ಹ ವ್ಯತ್ಯಾಸವೆಂದು ತಿಳಿಯಬೇಕು. **ಮೂರು ವಿಧಗಳಿವೆ.** ೧) **ವಸ್ತೂತ್ಪ್ರೇಕ್ಷೆ** ೨) **ಫಲೋತ್ಪ್ರೇಕ್ಷೆ** ೩) **ಕಾರಣೋತ್ಪ್ರೇಕ್ಷೆ.**

i) **ವಸ್ತೂತ್ಪ್ರೇಕ್ಷಾಲಂಕಾರ :** ಒಂದು ವಸ್ತುವನ್ನು ಮತ್ತೊಂದು ವಸ್ತುವೆಂದು ತಿಳಿಯುವುದು -ಸಂಭಾವನೆ.

ಉದಾ: ಲವಕುಶರ ಯುದ್ಧದಸನ್ನಿವೇಶದ ವರ್ಣನೆ : **"ರಕ್ತ ಸಮುದ್ರಕ್ಕೆ ಕಟ್ಟೆ ಕಟ್ಟಲು ಹರಡಿದ ಗಂಡು ಬಂಡೆಗಳಂತೆ ಸತ್ತಆನೆಹಿಂಡುಗಳಿದ್ದವು".**

ಸಮನ್ವಯ : ಯುದ್ಧದಗುರಿ ಮತ್ತು ಪರಿಣಾಮವಾಗಿ ಆನೆ ಹಿಂಡುಗಳು ಸತ್ತು ಬಿದ್ದಿವೆಯಷ್ಟೇ. ಈ ಶವ (ವಸ್ತು)ಗಳನ್ನು ಕಟ್ಟೆ ಕಟ್ಟಲು ವ್ಯವಸ್ಥಿತವಾಗಿ **'ಹರಡಿದ ಬಂಡೆಗುಂಡು'** ಎಂದು **ಬೇರೆವಸ್ತುವನ್ನಾಗಿ ಕವಿಯಿಂದ ಕಲ್ಪಿಸಲಾಗಿದೆ.** ಇದು **'ವಸ್ತೂತ್ಪ್ರೇಕ್ಷೆ'** ಎನಿಸುತ್ತದೆ.

ii) **ಫಲೋತ್ಪ್ರೇಕ್ಷೆ ಅಲಂಕಾರ :** ಇಲ್ಲಿ ಫಲ (ಪ್ರಯೋಜನ) ವನ್ನು ಕಲ್ಪಿಸಲಾಗಿರುತ್ತದೆ: ಉದಾ: ಆ **"ಯುದ್ಧವನ್ನು ನೋಡಲು ದಿನಪನುದಯಿಸಿ ಬಂದ".**

ಸಮನ್ವಯ : ನಿತ್ಯ ನಿಯಮವಾಗಿ ಸೂರ್ಯ ಉದಯಿಸಿ ಬಂದಿದ್ದಾನೆ. ಹೀಗಿದ್ದರೂ ಸೂರ್ಯ **ಯುದ್ಧವನ್ನು ನೋಡುವ ಫಲಕ್ಕಾಗಿ** ಬಂದನೆಂಬುದು, ಕವಿಯಿಂದ ಫಲಕಲ್ಪಿತ (ಸಂಭಾವಿತ) ವಿಷಯವಾಗಿದೆ. ಆದ್ದರಿಂದ ಇದು **'ಫಲೋತ್ಪ್ರೇಕ್ಷೆ'** ಯೆನಿಸುತ್ತದೆ.
ಚಮತ್ಕಾರ : ಇಲ್ಲಿ ಸೂರ್ಯನಂಥವನಿಗೂ ಯುದ್ಧ ನೋಡುವ ಕುತೂಹಲ ವಾಯ್ತೆಂಬುದೇ ಕವಿಯ ಚಮತ್ಕಾರ.

iii) **ಕಾರಣೋತ್ಪ್ರೇಕ್ಷೆ :** ಕಾರಣ(ಹೇತು)ವನ್ನು ಕವಿಕಲ್ಪಿಸಿರುವುದು. ಉದಾ: "ವೀರಾವೇಶದಿಂದ ಹೋರಾಡಿ ಸೆಣಸಿ ಮಡಿದ ರಾಜನನ್ನು ನೋಡಿದ ದಿನಪ: **ಈತನಿರದ ನಾಡಿನಲ್ಲಿ ನನಗೇನೆಂದು ಜಾರಿದನು".**

---

(೧) ಕಲ್ಪಿತ ಉಪಮಾನ ವಾಚಕಗಳಾದ 'ಅಂತೆ', 'ವೋಲ್', 'ವೊಲ್', 'ಎನೆ', 'ಎನಲ್', 'ಮಾಳ್ಕೆ', ತೆರದಿ ಇತ್ಯಾದಿಗಳೂ ಉಪಮಾ ಉತ್ಪ್ರೇಕ್ಷೆಗಳಲ್ಲಿ ಬರುತ್ತವೆ.

ಸಮನ್ವಯ : ರಾಜನ ಹೋರಾಟ ಪ್ರವೃತ್ತಿಯನ್ನು **ಮೆಚ್ಚಿಕೊಂಡ ಸೂರ್ಯನಿಗೂ** ರಾಜನಿರದ ಭೂಮಿಯಲ್ಲಿರಲು ಬೇಸರವಾಗಿದೆ. 'ಈತನಿರದ ನಾಡಿನಲ್ಲಿ ಇರುವುದೇ ಬೇಡವೆಂಬ **ಕಾರಣ**ದಿಂದ ಮುಳುಗಿದ'ನೆನ್ನಲಾಗಿದೆ. ಈ ಕಾರಣ ಇಲ್ಲಿ ಸಹಜವಾದುದ್ದಲ್ಲ. ಇದು ಕವಿಕಲ್ಪಿತವಾಗಿರುವುದರಿಂದ **'ಕಾರಣೋತ್ಪ್ರೇಕ್ಷೆ'** ಅಲಂಕಾರವೆನಿಸುತ್ತದೆ.

ಳ) **ರೂಪಕಾಲಂಕಾರ :** ಒಂದು ವಸ್ತುವನ್ನು ಮತ್ತೊಂದೆಂದು ಹೇಳುವುದು **'ರೂಪಕ'** ವೆನಿಸುವುದು. ಇದರಲ್ಲಿ ಒಂದು ವಸ್ತುವನ್ನು ಮತ್ತೊಂದರಂತೆ ಎಂದು ಹೇಳಿದರೆ ಉಪಮಾಲಂಕಾರವಾಗುತ್ತದೆ. ಆದರೆ ಇಲ್ಲಿ **ಒಂದು ವಸ್ತುವನ್ನು ಮತ್ತೊಂದು ವಸ್ತುವೆಂದು ಹೇಳುವಾಗ** (i) ಉಪಮಾನ ಉಪಮೇಯಗಳನ್ನು ಅಭೇದವಾಗಿ ಹೇಳುವುದು **'ಅಭೇದ ರೂಪಕ'** ವೆನಿಸುತ್ತದೆ. (ii) ಉಪಮಾನ ಉಪಮೇಯ ಪದಾರ್ಥಗಳಲ್ಲಿ, **ಅದರಂತಿರುವು**ದೆಂದು (ತಾದ್ರೂಪ್ಯತೆ) ತೋರಿದರೆ ಅದು **'ತಾದ್ರೂಪ್ಯ ರೂಪಕ'** ವೆಂದು **ಎರಡು ಪ್ರಕಾರ**ವಾಗಿವೆ.

i) **ಅಭೇದ ರೂಪಕ** : ಒಂದು ವಸ್ತುವನ್ನು ಮತ್ತೊಂದೆಂದು ಹೇಳುವಾಗ ಆ ವಸ್ತುವಿನ ಗುಣ (ಧರ್ಮ) ಮತ್ತೊಂದರಲ್ಲಿರಬೇಕಾಗುತ್ತದೆ.

ಉದಾ : ಹರಿಶ್ಚಂದ್ರನು ನಾಡನ್ನು ತೊರೆಯುವ ಪ್ರಸಂಗದಲ್ಲಿ :

೧. **'ಪುರದಪುಣ್ಯಂ ಪುರುಷ ರೂಪಿಂದೆ ಪೋಗುತಿದೆ!'.**

ಸಮನ್ವಯ : ಇಲ್ಲಿ ಹರಿಶ್ಚಂದ್ರನನ್ನು **'ಪುರದ ಪುಣ್ಯ'** (ರೂಪಣ) ವೆಂದು ಕವಿ ಹೇಳಿದ್ದಾನೆ. ಸಾಮಾನ್ಯ ವ್ಯಕ್ತಿಯೊಬ್ಬನನ್ನು ಹೀಗೆ ಹೇಳಲು ಬರುತ್ತಿರಲಿಲ್ಲ. ಆತ ಪುಣ್ಯರೂಪನೆನಿಸಿದ್ದಾನೆ. **'ಪುಣ್ಯ'** ನಾಡಿಗೆ ಹಿತವನ್ನು ಕೊಡುತ್ತದೆ. ಹಾಗೆಯೆ **ಪುಣ್ಯದ ನಿಷ್ಠೆ, ಸತ್ಯ, ಪಾವಿತ್ರ್ಯ, ಪೂಜ್ಯತೆ** ಅವೆಲ್ಲ ಧರ್ಮಗಳೂ ಈ ಹರಿಶ್ಚಂದ್ರನಲ್ಲಿವೆ. ಹೀಗಿರುವುದರಿಂದಲೇ ಈ **'ಪುಣ್ಯ-ಪುರುಷ'** ನನ್ನು **'ಪುರದ ಪುಣ್ಯ'** ವೆಂದು ರೂಪಣ ಮಾಡಲಾಗಿದೆ. ಇಲ್ಲಿ ಪುಣ್ಯಕ್ಕೂ ಪುರುಷನಿಗೂ ಭೇದಕಾಣದು. ಹೀಗಿರುವುದರಿಂದ **'ಅಭೇದರೂಪಕ'** ವೆನ್ನಬಹುದು.

ಇದು ಆಧುನಿಕ ಕಾವ್ಯಗಳಲ್ಲಿ ವಿಪುಲವಾಗಿ ಬಳಕೆಯಿದೆ: ಉದಾ :

೨. **'ಎದೆಯ ಬಾದಂಣದಲ್ಲಿ ಹಗಲ ಹೂ' - ಇಲ್ಲಿ ಎದೆಯ ಬಾಂದಳವೆಂದು ಹಗಲನ್ನು ಹೂವೆಂದು ಹೇಳಲಾಗಿದೆ. ಹೀಗಾಗಿ ಅಭೇದರೂಪಕ.**

ii) **ತಾದ್ರೂಪ್ಯ ರೂಪಕ** : ಉಪಮಾನ ಉಪಮೇಯಗಳಲ್ಲಿ (ತಾದೃಪ್ಯತೆ) ಅದರಂತಿರುವ ಗುಣತೋರುವುದು. (ಲಕ್ಷ್ಮೀಕಾಂತನ ಕೃಪಾದೃಷ್ಟಿ ಬೀಳಲಿ

---

೧. ಇಲ್ಲಿನ ಉಪಮಾನ ಕವಿಕಲ್ಪಿತವೋ ನಿಜವೋ ತಿಳಿದು, ಉತ್ಪ್ರೇಕ್ಷೆಯೋ ಇಲ್ಲವೆ 'ಉಪಮಾಲಂಕಾರ'ವೋ ಎಂದು ನಿರ್ಧರಿಸುವುದು.

ಎಂಬರ್ಥದಲ್ಲಿ)

ಉದಾ: ೧. **"ಲಕ್ಷ್ಮೀರಮಣನ ಮುಖಚಂದ್ರ ಆನಂದವನ್ನು ನೀಡಲಿ".**

೨) **"ಕತ್ತಲೆಗೂಡಿನ ಅವ್ವನ ಕಣ್ಣೊಳಗೆ ಒಲೆಯುರುತ್ತಿತ್ತು."**

ಸಮನ್ವಯ : ಇಲ್ಲಿ **ದಿಕ್ಕಿಲ್ಲದವರ ಕಣ್ಣು ಕತ್ತಲೆ ಗೂಡಿನಂತೆ. 'ಮುಖಚಂದ್ರ'** ಎನ್ನುವಾಗ ಅದರಂತಿದೆ ಎಂಬುದು ತೋರುತ್ತದೆ. **'ಮುಖ' 'ಚಂದ್ರನಂತಿದೆ'** - (ಅದರಂತೆ ಮತ್ತೊಂದು ಎಂದು ತೋರುತ್ತಿದೆ). ಆದ್ದರಿಂದ ಇದನ್ನು **'ತಾದ್ರೂಪ್ಯ ರೂಪಕ'**ವೆನ್ನಬಹುದು.

೫) **ದೃಷ್ಟಾಂತಾಲಂಕಾರ** : ಎರಡು ಬೇರೆಬೇರೆ ವಾಕ್ಯಗಳು ಅರ್ಥದ ಸಾದೃಶ್ಯದಿಂದ (ಹೋಲಿಕೆಯಿಂದ) ಒಂದರ **'ಪ್ರತಿಬಿಂಬ'** (೧) ಮತ್ತೊಂದೆಂದು ತೋರುವುದು. (ಎರಡೂ ವಾಕ್ಯಗಳು ಧರ್ಮದ ಹೋಲಿಕೆಯಲ್ಲಿ ಒಂದೇ ಎನಿಸುವುದು).

ಉದಾ: **'ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ'.**

ಸಮನ್ವಯ : ಇಲ್ಲಿ **'ತಾಯಿಗಿಂತ...ವಿಲ್ಲ' -ಉಪಮೇಯ, 'ಉಪ್ಪಿಗಿಂತ ...ಯಿಲ್ಲ'** -ಉಪಮಾನ. ಈ ಎರಡೂ ವಾಕ್ಯಗಳ ಧರ್ಮದ ಹೋಲಿಕೆಯಿಂದ ಒಂದರ **'ಪ್ರತಿಬಿಂಬ'** ಮತ್ತೊಂದೆಂದೆನಿಸುತ್ತವೆ. ಇಲ್ಲಿ **ತಾಯಿ, ಉಪ್ಪು** ಹೋಲಿಕೆಯಲ್ಲ. ಬೇರೆ ಇವುಗಳು ಅರ್ಥದ ಹೋಲಿಕೆಯಿಂದ ಅನನ್ಯ, ಅನಿವಾರ್ಯವಾದವೆಂದರ್ಥ. ಇಲ್ಲಿ **ಬಿಂಬಪ್ರತಿಬಿಂಬ** ಭಾವವಿರುವುದರಿಂದ **'ದೃಷ್ಟಾಂತಾಲಂಕಾರ'**ವೆನಿಸುತ್ತದೆ.

೬) **ಅರ್ಥಾಂತರನ್ಯಾಸಾಲಂಕಾರ** : i) ಸಾಮಾನ್ಯಾರ್ಥದಿಂದ ವಿಶೇಷಾರ್ಥವನ್ನು ಸಮರ್ಥಿಸುವುದು (ಪ್ರತಿಪಾದಿಸುವುದು). ii) **ವಿಶೇಷಾರ್ಥದಿಂದ ಸಾಮಾನ್ಯಾರ್ಥ**ವನ್ನು ಸಮರ್ಥಿಸುವುದು. ಇವನ್ನು **'ಅರ್ಥಾಂತರನ್ಯಾಸಾ'**ಲಂಕಾರವೆನ್ನುತ್ತೇವೆ. ಹೀಗೆ ಎರಡು ಪ್ರಕಾರವಾಗಿದೆ :

i) **ಸಾಮಾನ್ಯಾರ್ಥದಿಂದ ವಿಶೇಷಾರ್ಥ** ಸಮರ್ಥನೆ :

ಉದಾ: **"ರವಿಚಂದ್ರನು ಉನ್ನತಶ್ರೇಣಿಯಲ್ಲಿ ತೇರ್ಗಡೆಯಾದನು, ಬುದ್ಧಿವಂತ ವಿದ್ಯಾರ್ಥಿಗಳಿಗೆ ಯಾವುದು ತಾನೆ ಅಸಾಧ್ಯ".**

ಸಮನ್ವಯ : 'ಬುದ್ಧಿವಂತ ವಿದ್ಯಾರ್ಥಿಗಳಿಗೆ ...' ಇತ್ಯಾದಿ ವಾಕ್ಯ ಎಲ್ಲ ಬುದ್ಧಿವಂತರಿಗೆ ಅನ್ವಯಿಸುವುದರಿಂದ ಇದು **'ಸಾಮಾನ್ಯಾರ್ಥ'**ವಾಗಿದೆ. 'ರವಿಚಂದ್ರಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದನು' ಇಲ್ಲಿ ರವಿಚಂದ್ರನಂಥ

(೧) ಇಲ್ಲಿ **'ಬಿಂಬಪ್ರತಿಬಿಂಬ ಭಾವ'** ತೋರುತ್ತದೆ. ಅರ್ಥಸಾದೃಶ್ಯ (ಹೋಲಿಕೆ)ದಿಂದ ಅಭಿನ್ನವೆನಿಸಿದ ಎರಡು ಭಿನ್ನ ಭಿನ್ನ ಧರ್ಮಗಳನ್ನು ಉಪಮಾನ ಉಪಮೇಯ ವಾಕ್ಯಗಳಲ್ಲಿ ಬೇರೆ ಬೇರೆಯಾಗಿ ಹೇಳುವುದು ಎಂದರ್ಥ.

ವಿಶೇಷವಾದ ಒಬ್ಬನಿಗೆ ಅನ್ವಯಿಸುವುದರಿಂದ ಇದು **ವಿಶೇಷಾರ್ಥ.** ಅತ್ರ ಬುದ್ಧಿವಂತ. **'ಉನ್ನತ ಶ್ರೇಣಿಯಲ್ಲಾದನು'** ಸಾಮಾನ್ಯಾರ್ಥದಿಂದ ಅದಕ್ಕಾಗಿಯೆ ಎಂಬ ವಿಶೇಷಾರ್ಥ ಸಮರ್ಥಿತವಾಗಿದೆ. ಆದ್ದರಿಂದ ಇದು **'ಅರ್ಥಾಂತರನ್ಯಾಸಾಲಂಕಾರ'** ವೆನ್ನಬಹುದು.

೨) **ವಿಶೇಷಾರ್ಥದಿಂದ ಸಾಮಾನ್ಯಾರ್ಥ ಪ್ರತಿಪಾದನೆ :**

ಉದಾ: **"ಅತುಲ ಬಲಶಾಲಿಯು ಅಸಮರ್ಥನ ಮೇಲೆ ಶಕ್ತಿ ಪ್ರಯೋಗಿಸುವನೇ? ಅಧಿಕೋನ್ನತ ಗಜವೃಂದವು ವೃಕ್ಷವನ್ನು ಪುಡಿ ಮಾಡುವಂತೆ ಹುಲ್ಲನ್ನು ಮುರಿಯಬಲ್ಲುದೆ?".**

ಸಮನ್ವಯ : ಇಲ್ಲಿ **'ಅತುಲ ಬಲಯುತನು'** ಅಶಕ್ತನಲ್ಲಿ ಶಕ್ತಿ ಪ್ರಯೋಗಿಸನು. ಎಲ್ಲ ರಂಗದಲ್ಲಿನ ಅತಿಶಯ ಬಲವಂತರಿಗೆಲ್ಲ ಇದು ಅನ್ವಯವಾಗುತ್ತದೆ. ಆದ್ದರಿಂದ ಇದು **'ಸಾಮಾನ್ಯಾರ್ಥ'**ವಾಗಿದೆ. **'ಗಜ'** ಜಗತ್ತಿನಲ್ಲಿ ಅಧಿಕ ಬಲಶಾಲಿಯಾದ ಪ್ರಾಣಿಗಳಲ್ಲಿ ವಿಶೇಷವಾದುದಾಗಿದೆ. ಇದರ ಸಂಬಂಧವಾದ ಅರ್ಥವು **'ವಿಶೇಷಾರ್ಥ'**ವಾಗಿದೆ.

ವಿಶೇಷ ಬಲವುಳ್ಳ ಗಜವೇಹುಲ್ಲನ್ನು ಮುರಿಯದೆನ್ನುವಾಗ **'ಬಲವಂತನು ಅಶಕ್ತನ ಮೇಲೆ ಶಕ್ತಿ ಪ್ರಯೋಗಿಸುವುದಿಲ್ಲ'** (ತರವಲ್ಲ). ವಿಷೇದಾರ್ಥದಿಂದ ಸಾಮಾನ್ಯಾರ್ಥಸಮರ್ಥಿತವಾಗಿದೆ. ಆದ್ದರಿಂದ ಇದೂ **'ಅರ್ಥಾಂತರ ನ್ಯಾಸಾಲಂಕಾರ'**ವಾಗಿದೆ.

೭) **<u>ಶ್ಲೇಷಾಲಂಕಾರ</u> :** ಒಂದೇ ಶಬ್ದರೂಪದ ಉಪಮೇಯ ಮತ್ತು ಉಪಮಾನ ಪರವಾದ ವಾಕ್ಯಗಳು ಬೇರೆಬೇರೆ ಅರ್ಥಗಳನ್ನು ಕೊಡುವುದು. ಇದನ್ನು **'ಶ್ಲೇಷಾಲಂಕಾರ'** ವೆನ್ನುತ್ತೇವೆ. ಉದಾ: ದುರ್‍ಯೋಧನನ ಅಂತ್ಯವನ್ನು ಚಿತ್ರಿಸುವಾಗ:

"ಕುರುಕುಲಾರ್ಕನುಂ ಅರ್ಕನುಂ ಅಸ್ತಮೆಯ್ದಿದರ್".ಕುರುಕುಲ-(ಅರ್ಕ) ದುರ್‍ಯೋಧನನೂ (ಅರ್ಕನೂ) ಸೂರ್ಯನೂ ಮುಳುಗಿದರೆಂಬರ್ಥವಿದೆ.

ಸಮನ್ವಯ : ಈ ವಾಕ್ಯಾಂಶಗಳಲ್ಲಿ **'ಅರ್ಕ' 'ಅಸ್ತ'** ಶಬ್ದಗಳಿಗೆ ಉಪಮೇಯ, ಉಪಮಾನ ಪರವಾದ ಬೇರೆ ಬೇರೆ ಅರ್ಥಗಳಿವೆ. ಕುರು**ಕುಲಾರ್ಕ** - ಕೌರವಕುಲದ (ಸೂರ್ಯ)-ದುರ್ಯೋಧನ **'ಅಸ್ತ'**ಮೆಯ್ದಿದನು - ಪ್ರಾಣ ತ್ಯಾಗಮಾಡಿದನು. ಇದು ಉಪಮೇಯಪರ ವಾಕ್ಯಾರ್ಥ. ಮುಂದಿನ **'ಅರ್ಕ'**ನುಂ - ನಿಜವಾದ ಸೂರ್ಯನೂ ಅಸ್ತಮೇಯ್ದು- ಮುಳುಗಿದನು ಎಂಬಿದು (ಉಪಮಾನ) ಸೂರ್ಯನ ಪರವಾದ ಅರ್ಥ.

ಹೀಗೆ ಒಂದೇರೂಪದ ಶಬ್ದಗಳು **ನಾನಾರ್ಥವನ್ನು ಕೊಡುವುದರಿಂದ** ಇದು **'ಶ್ಲೇಷಾಲಂಕಾರ'** ವಾಗುತ್ತದೆ.

೮) **ಅತಿಶಯೋಕ್ತಿ : ಅತಿಶಯವಾದ** (ಉಕ್ತಿ) ಹೇಳಿಕೆ . ಕೇವಲ **ಎರಡು ವಿಧ**ಗಳನ್ನು ನೋಡೋಣ :

೧) **ಭೇದವಿಲ್ಲದಿದ್ದರೂ ಭೇದವಿದೆಯೆಂದು ಅತಿಶಯವಾಗಿ ಹೇಳುವುದು:** ಉದಾ: **"ಈ ರಾಷ್ಟ್ರನಾಯಕ ಅತ್ಯಂತ ಪ್ರಾಮಾಣಿಕ, ಅನನ್ಯ ದೇಶಭಕ್ತ. ಇಂತಹ ಅಪೂರ್ವರು ಹುಟ್ಟರು!".**

ಸಮನ್ವಯ : ಒಬ್ಬ ರಾಷ್ಟ್ರನಾಯಕನನ್ನು ಕುರಿತು **'ಅತ್ಯಂತ' ಪ್ರಾಮಾಣಿಕ, 'ಅನನ್ಯ' ದೇಶಭಕ್ತ, 'ಅಪೂರ್ವ'** ವ್ಯಕ್ತಿಯೆಂದು ಹೇಳಿದೆ. ನಾಯಕನು (ಭೇದವಿರದ) ಸಾಮಾನ್ಯನೆನಿಸಿದ್ದರೂ ಭೇದವಿದೆಯೆಂದು ಅತಿಶಯವಾಗಿ ಹೇಳಿರುವುದರಿಂದ ಇದು **'ಭೇದಕಾತಿಶಯೋಕ್ತ್ಯಾಲಂಕಾರ'**ವೆನ್ನುವರು.

೨) **ಸಂಬಂಧವಿಲ್ಲದಿದ್ದರೂ ಸಂಬಂಧವಿದೆಯೆಂದು** ಹೇಳುವುದು : ಉದಾ : **"ಇದು ಸಿರಿದೇವಿಯಿಟ್ಟ ಅಶೋಕ; ಶಚಿದೇವಿಯಿಟ್ಟ ಅರನೇರಿಳೆ".**

ಸಮನ್ವಯ : ಇಲ್ಲಿ ಸಾಮಾನ್ಯವೆನಿಸುವ **'ಅಶೋಕ ವೃಕ್ಷ'ವಿದೆ**. ಆದರೆ ಅದನ್ನು **ಲಕ್ಷ್ಮೀದೇವಿ ಹಾಕಿದಳೆಂದು** ಹೇಳಲಾಗಿದೆ. ಹಾಗೆಯೇ **'ಶಚಿ'** (ಇಂದ್ರನ ಸತಿ) ಹಾಕಿ ಬೆಳೆಸಿದ **'ನೇರಿಳೆವೃಕ್ಷ'** ವೆಂದು ಹೇಳಲಾಗಿದೆ. ಇಲ್ಲಿ ಸಂಬಂಧವಿರದ ವೃಕ್ಷಗಳಿಗೆ ದೇವತೆಗಳ ಸಂಬಂಧವನ್ನು **'ಇದೆ'** ಎಂದು ಹೇಳುವುದೇ **ಅತಿಶಯತೆ**ಯಾಗಿದೆ. ಇದು **'ಸಂಬಂಧಾತಿಶಯೋಕ್ತಿ'** ಯೆನಿಸುತ್ತದೆ.

೯) <u>**ವಿಷಮಾಲಂಕಾರ**</u> **:** ಕಾರ್ಯ ಕಾರಣಗಳಲ್ಲಿ ವಿರೋಧ ಕಾಣುವುದನ್ನು **'ವಿಷಮಾಲಂಕಾರ'** ವೆನ್ನುತ್ತೇವೆ.

ಉದಾ: **"ಬೇಟೆ ನಾಯಿಗೆ ಬೆನ್ನಟ್ಟಿದ ಮೊಲವೇ ಭಯ".**

ಸಮನ್ವಯ : ಬೇಟೆನಾಯಿ ಮೊಲದ ಬೆನ್ನಟ್ಟಿ ಹೋಗುತ್ತದೆ. ಮೊಲಕ್ಕೆ ನಾಯಿಯಿಂದ ಭಯ ಸಹಜ. ಆದರೆ ಇಲ್ಲಿನ ಚಮತ್ಕಾರವೆಂದರೆ ನಾಯಿಗೇ ಭಯವಾಗಿದೆ. (ಕಾರಣವಾದ ಮೊಲವು ನಾಯಿಯ ಉತ್ಸಾಹಕ್ಕೆ ಕಾರಣವಾಗಬೇಕು). ಇಲ್ಲಿ ಕಾರಣಕ್ಕೆ ಬೇರೆಯಾದ ಕಾರ್ಯ ಭಯನಾಯಿಯಲ್ಲುಂಟಾಗಿದೆ. ಹೀಗಾಗಿ ಈ ಮಾತಿನಲ್ಲಿ **'ವಿಷಮಾಲಂಕಾರ'** ತೋರುತ್ತಿದೆ. (ಸನ್ನಿವೇಶವನ್ನು ಇಲ್ಲಿಗೆ ಪರಿಗಣಿಸಬಾರದು)

೧೦) <u>**ಅಪ್ರಸ್ತುತ**</u> <u>**ಪ್ರಶಂಸಾಲಂಕಾರ**</u> **:** ಅಪ್ರಸ್ತುತ (ಉಪಮಾನ) ವರ್ಣನೆಯಿಂದ ಹೇಳಬೇಕೆಂದಿರುವ (ಪ್ರಸ್ತುತ) ಉಪಮೇಯದ, ಅರ್ಥವನ್ನು ವ್ಯಕ್ತ ಮಾಡುವುದು, **'ಅಪ್ರಸ್ತುತಪ್ರಶಂಸಾಲಂಕಾರ'**ವೆನಿಸುತ್ತದೆ.

ಉದಾ: ದತ್ತೂರ-ಉಮ್ಮತ್ತಿ ಗಿಡವಹೂ ವಿಚಾರ : **"ಒರೆದೊಡೆ ಬಣ್ಣ ಬರುತ್ತದೆಯೆ? ವಿರಚಿಸಿದರೆ ಒಡವೆಯಾಗುವುದೆ? ಬಳಸಲುಂಟೆ?"**

ಸಮನ್ವಯ : 'ದತ್ತೂರ' ವೆಂಬ ಗಿಡದ ಹೂ ಚಿನ್ನದ ಬಣ್ಣದ ಆಕರ್ಷಣೆಯಿಂದ ಕೂಡಿದೆ. ಆದರೂ ಅದನ್ನು ತಿಕ್ಕಿ ನೋಡಿದರೆ (ಚಿನ್ನದ) ಹೊಳಪು ಬರುವುದಿಲ್ಲ. ಹಾಗೆಯೆ ಅದರಿಂದ ವಿಶೇಷ ಆಭರಣವನ್ನು ಮಾಡಿಸಲು ಸಾಧ್ಯವಿಲ್ಲ. ಅಂತೂ ಚಿನ್ನದಂತೆ ಬೆಲೆಕೊಟ್ಟು ಇಟ್ಟುಕೊಳ್ಳಲೂ ಆಗದು. ಇದೇನು? ಹೀಗೆ? ಯಾವುದೋ ಹೋಲಿಕೆಯ ವಿಚಾರವೆನಿಸುತ್ತದೆ. ಹೀಗಾಗಿ ಅಪ್ರಸ್ತುತ ಮಾತಿನ ವಿಷಯದ ವರ್ಣನೆಯು ಸಾಮ್ಯದಿಂದ, ಹೋಲಿಕೆಗೆ ಪಾತ್ರವಾದ (ಕೇವಲ ಹೆಸರಿಗೆ ವಿದ್ವಾಂಸನೆನಿಸಿರುವ) ಉಪಮೇಯದ ವರ್ಣನೆ. **'ವಿದ್ವಾಂಸ'**ನೆನಿಸಿರುವ ಶಾಲುಧಾರಿ **ಪಂಡಿತನ, ಯೋಗ್ಯತೆಯಿಲ್ಲದ (ಪಾಂಡಿತ್ಯವಿಲ್ಲದ) ನಗೆಗೀಡಾದ ವಿಚಾರ ಪ್ರಸ್ತುತ.** ಆದ್ದರಿಂದ ಇದನ್ನು **ಅಪ್ರಸ್ತುತವರ್ಣನೆ** ಯ ಅಪ್ರಸ್ತುತ ಪ್ರಶಂಸಾಲಂಕಾರವೆನ್ನಬಹುದು.

ಕಾವ್ಯಗಳಲ್ಲಿ ಬರುವ ಕೆಲವು ಆಲಂಕಾರಿಕ ಮುಖ್ಯಾಂಶಗಳು :

'ಕವಿಸಮಯ' ವೆಂಬ ಕಟ್ಟುಕಥೆ : ಜಗತ್ತಿನಲ್ಲಿ ವಸ್ತುತಃ ಇಲ್ಲದ, ಶಾಸ್ತ್ರದ ಕಾಣದ ಕೆಲವು ಅಸಹಜವಾದ ಸಂಗತಿಗಳುಂಟು. ಇವುಗಳನ್ನು ಕವಿಗಳು ಪರಂಪರಾಗತವಾಗಿ ರೂಢಿಯಿಂದ ಕಾವ್ಯಗಳಲ್ಲಿ ತಂದಿರುತ್ತಾರೆ. ಇವುಗಳನ್ನೂ **'ಕವಿಸಮಯ'** (ಕವಿಯ ಸಾಂಪ್ರದಾಯಿಕಅಂಶ)ವೆನ್ನಬಹುದು. ಇವು ಇತ್ತೀಚಿನ ಕವಿತೆಗಳಲ್ಲೂ ವಿರಳವಾಗಿ ಬಳಕೆಗೊಂಡಿದೆ. ಇವುಗಳು **ಸಾಂಕೇತಿಕತೆಗಳಿಂದ ಅರ್ಥಪುಷ್ಟಿಗೆ ಕಾರಣವಾಗಲೆಂದು** ತಂದುಕೊಂಡವುಗಳು. ಅಂತಹ ಕೆಲವು ಸಂಗತಿಗಳನ್ನು ಕಾವ್ಯಜಗತ್ತಿನಲ್ಲಿ ಅರಿತು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಅಂತಹ ಕೆಲವು ಸಂಗತಿಗಳು:

೧) **'ಎಲ್ಲನೀರಿನಲ್ಲೂ ಹಂಸಗಳಿವೆ'**-ಎಂಬುದು ಸಹಜವೆನಿಸುವುದಿಲ್ಲ. ಏಕೆಂದರೆ ಹಂಸಗಳು ಇಷ್ಟಪಡುವ ನೆಲೆ ವಾತಾವರಣ, ಸನ್ನಿವೇಶಗಳಲ್ಲಿ ಮಾತ್ರ ಇರಬಲ್ಲವಷ್ಟೇ.

೨) **'ಎಲ್ಲಹೊಳೆಗಳಲ್ಲಿ ಕನ್ನೈದಿಲೆಗಳಿವೆ'- 'ಅವು ರಾತ್ರಿಅರಳುತ್ತವೆಂಬುದು'**- ಕಪ್ಪು ನೈದಿಲೆ ರಾತ್ರಿಯಲ್ಲೇ ಅರಳುತ್ತವೆಂಬುದು ಸಹಜವೆನಿಸಿದರೂ, ಸೆಳೆತವಿರುವ ಅಲುಗಾಟವಿರುವ, ಹೊಳೆಗಳಲ್ಲಿರಲು ಸಾಧ್ಯವಿಲ್ಲ.

೩) **'ಬೆಟ್ಟಗುಡ್ಡಗಳಲ್ಲಿ ರತ್ನಗಳು ಸಿಗುತ್ತವೆ'** - ಕೆಲವು ಅಮೂಲ್ಯ ಖನಿಜಗಳ ಅದಿರು ಸಿಕ್ಕುವ ಸಾಧ್ಯತೆಯುಂಟು. ಬೆಟ್ಟಗಳಲ್ಲಿ ರತ್ನಗಳು ಸಿಕ್ಕುವುದು ನಂಬಲಾಗದೆನ್ನುತ್ತಾರೆ.

೪) **'ಗಂಗಾನದಿಯಲ್ಲಿ ನೀರಾನೆಗಳಿವೆ'**-ಇಂದಿನ ಸ್ಥಿತಿಯಲ್ಲಿ ಒಪ್ಪುವ ವಿದ್ಯಾರ್ಥಿಗಳಿಲ್ಲ.

೫) **'ಬೆಳದಿಂಗಳನ್ನು ಹಿಡಿದಿಟ್ಟುಕೊಳ್ಳಬಹುದು'** - ವಾಸ್ತವಿಕವಾಗಿ ಇದು ಅಸಾಧ್ಯ.

೬) **'ಚಕ್ರವಾಕ ಪಕ್ಷಿಗಳು ಎಲ್ಲ ರಾತ್ರಿಯಲ್ಲೂ ವಿರಹ ಅನುಭವಿಸುತ್ತವೆಂಬುದು'** - ಕಾಲಚಕ್ರದಲ್ಲಿ ವಿರಹ ಉಂಟಾಗುತ್ತದೆ. ಆದರೆ ಅನ್ಯೋನ್ಯವಾಗಿರುವ ಪಕ್ಷಿಗಳಲ್ಲಿ ಯಾವಾಗಲೂ ಸಾಧ್ಯವೇ? ವಿರಹ ಅಸಹಜವೆನಿಸುತ್ತದೆ.

೭) **'ಚಕೋರಿಗಳು ಬೆಳದಿಂಗಳನ್ನು ಕುಡಿಯುತ್ತವೆ'** - ಬೆಳದಿಂಗಳು ಸಂಪೂರ್ಣ

ಆಹಾರವಾಗಲಾರದು.

೮) **'ಕೋಗಿಲೆ ವಸಂತಕಾಲದಲ್ಲೇ ಕೂಗು**[illegible]**ೆ'-'ನವಿಲು ವರ್ಷಕಾಲದಲ್ಲೇ ಕುಣಿಯುತ್ತದೆ'** - ಇವು ಆಯಾ ಕಾಲದಲ್ಲಿ [illegible] ಉತ್ತೇಜಿತವಾಗುವುದುಂಟು. ಅನ್ಯಕಾಲದಲ್ಲೂ ಮೌನವಾಗಿರಲು ಸಾಧ್ಯವಿಲ್ಲ.

೯) **'ಕೀರ್ತಿ, ನಗುಗಳಲ್ಲಿ ಬಿಳುಪನ್ನೂ ಅಪಕೀರ್ತಿಯಲ್ಲಿ ಕಪ್ಪನ್ನೂ ಅನುರಾಗಕ್ಕೆ ಕೆಂಪನ್ನೂ'** ಸಾಂಕೇತಿಕವಾಗಿ ಹೇಳಲಾಗಿದೆ- ಇವುಗಳು ಕವಿಕಲ್ಪನೆಯಲ್ಲಿ ಹೋಲಿಕೆ, ಸಾಂಕೇತಿಕತೆಯಿಂದ ಬಂದವು.

೧೦) **'ಶ್ರೀಗಂಧದ ಮರಗಳು ಮಲಯ ಪರ್ವತದಲ್ಲೇ ಇರುತ್ತವೆಂಬುದು'**-ಇಂದಿನ ನಂಬಿಕೆಗೆ ಸರಿಯೆನಿಸದು. ಅದು ಪುರಾಣದ ಕಲ್ಪನೆ.

'ಶುಕ್ಲಪಕ್ಷದಲ್ಲಿ ಕೇವಲ ಬೆಳದಿಂಗಳೆಂದೂ ಕೃಷ್ಣಪಕ್ಷದಲ್ಲಿ ಕತ್ತಲೆಯೇ ಇರುವುದೆಂ'ಬುದು ಇವು ಸ್ಥೂಲವಾಗಿ ಸರಿಯೆನಿಸಬಹುದು. ಸೂಕ್ಷ್ಮವಾಗಿ ಗಮನಿಸಿದಾಗ ಸರಿಯೆನಿಸದು. ಚಂದ್ರನಲ್ಲಿರುವ ಗುರುತನ್ನು **'ಮೊಲ'** ವೆಂದೂ **'ಜಿಂಕೆ'** ಯೆಂದೂ ಹೇಳಲಾಗಿದೆ. ಆದರ ಆದರೆ ಇಂದಿನ ವೈಜ್ಞಾನಿಕ ಹಿನ್ನೆಲೆಯ ವಿದ್ಯಾರ್ಥಿಗಳು **'ಭೂಮಿಯ ನೆರಳೆಂದರೆ'** ಒಪ್ಪುತ್ತಾರೆ. ಈ ಅಂಶಗಳನ್ನು ವೈಚಾರಿಕತೆಗೆ ಪ್ರಾಶಸ್ತ್ಯ ಕೊಡದೆ ಕವಿಗಳು ಪೂರ್ವಸಂಗತಿಗಳನ್ನು ಮಾನ್ಯ ಮಾಡುವ ದೃಷ್ಟಿಯಿಂದ ಬಂದ ತಮ್ಮಕಲ್ಪನೆಯ ಚರ್ವಿತಚರ್ವಣ (ಹೇಳಿದಂತೆಹೇಳುವ) ಸಾಂಪ್ರದಾಯಿಕ ಸಂಗತಿಗಳೆನ್ನಬಹುದು.

ರಸ ಪರಿಚಯ

ಭಾರತೀಯ ಅಲಂಕಾರದಲ್ಲಿ ರಸವಿಷಯಕ್ಕೆ ಮಹತ್ವಸ್ಥಾನವಿದೆ. ರಸದ ಬಗ್ಗೆ ಪಾಶ್ಚಾತ್ಯ ಕಾವ್ಯಮೀಮಾಂಸೆಯಲ್ಲಿ ರಸಪರಿಭಾಷೆ ಇಲ್ಲದಿದ್ದರು, ಪರಿಣಾಮದಲ್ಲಿ ಅದೇ ನಿಲುವಿಗೆ ಬಂದಿದ್ದಾರೆ. ಇಂದಿನಕಾಲದ ವಿಮರ್ಶೆಯ ಆಳತೆಗೋಲಾಗಿ ಅನೇಕ ದೃಷ್ಟಿಕೋನಗಳು ಬಂದಿವೆ. ಹಾಗೆ ಗೊಂದಲಗಳು ಸೃಷ್ಟಿಯಾಗಿವೆ. ಅಲಂಕಾರದಲ್ಲಿ ರಸವಿಷಯ ಮಹತ್ವವಾದುದೆಂದೂ ವಿಸ್ತಾರವಾದುದೆಂದೂ ವಿವರಿಸಲಾಗಿದೆ. ಅದು ಕಾವ್ಯಪರಿಚಯಕ್ಕೆ ಮುಖ್ಯಾಂಶವೂ ಹೌದು. ಅದನ್ನು **ಅಗತ್ಯಕ್ಕೆತಕ್ಕಷ್ಟು** ಸಂಕ್ಷಿಪ್ತವಾಗಿ, ಸರಳವಾಗಿ ಪರಿಚಯಿಸಲಾಗಿದೆ:

ಈ ಸನ್ನಿವೇಶ **'ರಸವತ್ತಾಗಿದೆ'**. ಇದು **'ರಸಭರಿತ'** ಕಾವ್ಯವಾಗಿದೆ. -ಇತ್ಯಾದಿ ಮಾತುಗಳನ್ನು ಕೇಳಿದ್ದೇವೆ. 'ರಸ' ವೆಂದರೇನು? ಉಪ್ಪು, ಖಾರ, ಹುಳಿ, ಸಿಹಿ ಇತ್ಯಾದಿಗಳಲ್ಲ. ಅವು ನಾಲಗೆಯರುಚಿಗಳು. ಪ್ರಾಣಿಪಕ್ಷಿಗಳೂ ಅವುಗಳ ರುಚಿಯನ್ನು ತಿಳಿಯಬಲ್ಲವು. ಆದರೆ **'ಕಾವ್ಯರಸ'** ಎಂಬುದು ಮನುಷ್ಯನಿಗೆ ಬಂದ ವಿಶೇಷವಾದ ಕೊಡುಗೆ. ಕಾವ್ಯ?! ಕಾವ್ಯರಸ!! ಅದು ನಮಗೇಕೆ? ಪಂಡಿತರಿಗೆ, ವಿದ್ವಾಂಸರಿಗಿರಲಿ ಎನ್ನಲಾಗುವುದಿಲ್ಲ. ಅವರ **ಮುಖ್ಯಾಂಶಗಳೇನು? ರಸಾನುಭವ ಹೇಗೆ? ಯಾರಿಗೆ? ರಸಗಳಾವುವು?** ಇತ್ಯಾದಿ ಅಂಶಗಳನ್ನು **ಅಗತ್ಯಕ್ಕನುಗುಣವಾಗಿ ಸಂಗ್ರಹವಾಗಿ** ಪರಿಚಯ ಮಾಡಿಕೊಳ್ಳೋಣ.

'ಭಾವ' : ರಸವು ಭಾವಾಶ್ರಯವಾದುದು. ಭಾವವೆಂದರೆ ಮನಸ್ಸಿನ ಕಾರ್ಯ (ಚಿತ್ತವಿಕಾರ). ಕೊಳದಲ್ಲಿ ಕಲ್ಲೊಂದು ಬಿದ್ದಾಗ, ಅಲೆಗಳೆದ್ದು ಕಾಣಿಸುತ್ತವೆ. ಹಾಗೆಯೇ ಜೀವಿಯ ಮನಸ್ಸಿನ ಮೇಲೆ ಬಿದ್ದ, ಕಂಡಸಂಗತಿಗಳು ತಮ್ಮದೇ ಆದ ಮಾನಸಿಕಕ್ರಿಯೆಗೆ ಕಾರಣವಾಗುತ್ತದೆ. ಈ ಮನಸ್ಸಿನ ಕಾರ್ಯವನ್ನೇ **'ಚಿತ್ತವೃತಿ'** ಅಥವಾ **'ಭಾವ'**ವೆನ್ನುತ್ತಾರೆ. ಈ ಭಾವಗಳು ಅಸಂಖ್ಯಾತವಾಗಿವೆ. ವ್ಯಕ್ತಿವ್ಯಕ್ತಿಗೆ ಭಿನ್ನವಾಗಿವೆ, ಆದರೂ ಭರತಮುನಿ (ಮೊದಲನೆಯ ನಾಟ್ಯಶಾಸ್ತ್ರಕಾರ) ನಿರ್ಧಾರವನ್ನೇ ಪ್ರಮಾಣವೆಂದು ನಿರ್ದಿಷ್ಟವಾಗಿ ಪರಿಗಣಿಸಲಾಗಿದೆ. **'ವಿಭಾವ'** (ಚಿತ್ತವಿಕಾರಕ್ಕೆ ಕಾರಣರೂಪವಾದ ಭಾವಗಳು) **'ಅನುಭಾವ'** (ಕಾರ್ಯರೂಪ ವಾದ ಭಾವಗಳು). **'ವ್ಯಭಿಚಾರಿ'/'ಸಂಚಾರಿ' ಅಥವಾ ಸಹಕಾರಿ**ಭಾವ ಅಥವಾ (ಸಣ್ಣಪುಟ್ಟ ಸಹಕಾರಿರೂಪದ ಭಾವಗಳು). **'ಸ್ಥಾಯಿಭಾವ'** (ಮೂಲಾಧಾರವಾದ ಭಾವ) ಇವುಗಳ ಸಂಯೋಗದಿಂದ ರಸ ಪುಷ್ಟಿಹೊಂದಿ ಸ್ವಾನುಭವವಾಗುತ್ತದೆ.(೧) ಇದರ ವಿವರಣೆ:

೧) **ಸ್ಥಾಯಿಭಾವ :** ಹೆಸರೇ ತಿಳಿಸುವಂತೆ ಜೀವಿಯ ಮನಸ್ಸಿನಲ್ಲಿ ಹುಟ್ಟಿದಂದಿನಿಂದ ವಾಸನಾರೂಪವಾಗಿ, ಸುಪ್ತವಾಗಿರುವ, ಸ್ಥಿರವಾದಭಾವಗಳು. ಇವು ಸ್ಥಿರವಾಗಿರುವುದರಿಂದಲೇ ಸ್ಥಾಯಿಭಾವವೆಂಬ ಹೆಸರಿದೆ. ಸೂಕ್ತ ಕಾರಣವೊದಗಿದ ಕೂಡಲೇ ಅವು ತಲೆಯೆತ್ತುವವು. ಉದಾ: **ಹಾವೊಂದು** ಕಾಣಿಸಿಕೊಂಡಾಗ ನಮ್ಮ ಮನಸ್ಸಿನಲ್ಲಿ **'ಭಯ'** ತೋರುವುದು. ಭಯಕ್ಕೆ ಯಾರು ನಮಗೆ ತರಪೇತಿ ಕೊಟ್ಟಿರುವುದಿಲ್ಲವಷ್ಟೇ. ಆ ಭಯ ಅಲ್ಲಿ **'ಸ್ಥಾಯಿಭಾವ'** ವಾಗಿದೆ. ಕಾವ್ಯದಲ್ಲಿನ (ನವರಸ) ಒಂಬತ್ತು ರಸಗಳಿಗೆ ಒಂಬತ್ತು ಸ್ಥಾಯಿಭಾವಗಳಿವೆ : **ರತಿ, ಹಾಸ, ಶೋಕ, ಕ್ರೋಧ, ಉತ್ಸಾಹ, ಭಯ, ಜುಗುಪ್ಸೆ, ವಿಸ್ಮಯ, ಶಮ.** ರಸದಲ್ಲಿ ಈ ಸ್ಥಾಯಿಭಾವಗಳ ಪಾತ್ರ ಮಹತ್ವವಾದುದು.

೨) **'ವಿಭಾವ' (ಕಾರಣರೂಪ)** : ಕಾರಣವಿಲ್ಲದೆ ಕಾರ್ಯವಿರುವುದಿಲ್ಲ. **'ಹಾವು'** ಭಯಕ್ಕೆ ಕಾರಣ. ಅದೂ ಮೂಲಕಾರಣರೂಪವಾದ್ದು, ಅದನ್ನು **'ಆಲಂಬನ ವಿಭಾವ'**ವೆನ್ನಬಹುದು. ಆ ಹಾವಿನ ಮೈಬಣ್ಣ, ಗಾತ್ರ, ಚಲನೆ, ನಿರ್ಜನಪ್ರದೇಶ ಇತ್ಯಾದಿಗಳು ಉಂಟಾದಭಾವವನ್ನು ಉದ್ದೀಪನಗೊಳಿಸುತ್ತವ ಹೀಗಾಗಿ **'ಉದ್ದೀಪನ ವಿಭಾವ'** ವೆನಿಸುವವು. **ಈ ಹಾವೇ ಶೂರನೊಬ್ಬನಿಗೆ** ವೀರೋಚಿತ ಭಾವಕ್ಕೆ (ಮನೋವೃತ್ತಿಗೆ) ಕಾರಣವಾಗಬಹುದು. ಅಂತೂ ಮನಸ್ಸಿನಸ್ವಭಾವದ ಮೇಲೆ ವಿಭಾವಗಳು ಬೇರೆ ಬೇರೆಯಾಗಬಹುದು. (ಈ ಕಾರಣ, ಕಾರ್ಯರೂಪದ ಭಾವಗಳನ್ನು ನೋಡಿ ಈತನಲ್ಲಿ ಈ ಭಾವವುಂಟಾಗಿದೆಯೆಂದು ಹೊಂದಿಸಿಕೊಂಡು ನಿರ್ಧರಿಸುತ್ತೇವೆ).

೩) **ಅನುಭಾವ (ಕಾರ್ಯರೂಪ) :** ಹಾವೊಂದನ್ನು ನೋಡಿದ ವ್ಯಕ್ತಿಯಲ್ಲಿ ಕೆಲವು ಕಾರ್ಯಗಳು ಹೊರಗೆ ತೋರುತ್ತವೆ. ಅವುಗಳನ್ನು **'ಅನುಭಾವ'** ವೆನ್ನುತ್ತೇವೆ. ಉದಾ: ಹಾವೊಂದನ್ನು ಕಂಡಾಗ **ಬೆವರುವುದು, ಅತ್ತಿತ್ತ** ಸರಿವುದು, **'ನಡುಕ', ಎದೆಯಲ್ಲಿ**

---

(೧) "ವಿಭಾವಾನುಭಾವ ವ್ಯಭಿಚಾರಿ ಸಂಯೋಗಾತ್ ರಸನಿಷ್ಪತ್ತಿಃ" - ಇದು ಭರತಮುನಿಯ ರಸಸೂತ್ರವಾಗಿದೆ - ಭಾ.ಕಾ. ಮೀಮಾಂಸೆ.

ಡವಡವಶಬ್ದ - ಇವು **'ಅನುಭಾವ'**ಗಳು.

೪) **ಸಂಚಾರಿಭಾವ (ವ್ಯಭಿಚಾರಿ / ಸಹಕಾರಿ)** : ಕಾರಣರೂಪವಾದ ನೋಟ (ವಿಭಾವ) ಕಂಡಕೂಡಲೇ ಮನಸ್ಸು ಅನೇಕ ವಿಕಾರಕ್ಕೊಳಗಾಗುತ್ತದೆ. ದೊಣ್ಣೆಯಿಂದ ಸಾಯಿಸಲೇ! ಎನ್ನುವ **'ಧೈರ್ಯ'** (ಧೃತಿ), **'ಬದುಕಿ'** ಕೊಂಡರೆ ಎಂಬ **'ಚಿಂತೆ',** ಓಡೋಣವೆಂಬ **'ಬುದ್ಧಿ'** (ಮತಿ), ಕಾಪಾಡಿ ಎಂಬ ಕೂಗು **(ದೈನ್ಯ)** ಇತ್ಯಾದಿ ಸಣ್ಣಪುಟ್ಟ, ನೆಲೆಯಿರದ ಭಾವಗಳು ಸೇರಿಕೊಂಡು ಮೂಲಸ್ಥಾಯಿಭಾವದ ಉತ್ಕರ್ಷತೆಗೆ **'ಸಹಕಾರಿ'** ಯಾಗುತ್ತವೆ. ಹೀಗಾಗಿ ಇವುಗಳನ್ನು **'ಸಹಕಾರಿಭಾವ'** ಗಳೆನ್ನುತ್ತೇವೆ. ಈ ಭಾವಗಳು ರಸಕ್ಕೆ ಸಣ್ಣದ್ದೆಂದು ಉದಾಸೀನ ಮಾಡುವಂತಿಲ್ಲ. ಅವುಗಳು **'ಸಂಚಾರಿಭಾವ'** ಗಳೆನಿಸುತ್ತವೆ. ಅವು ಇದ್ದೂ, ಹೋಗಿ ಬರುವವಾದ್ದರಿಂದ **ವ್ಯಭಿಚಾರಿ ಭಾವ** ವೆನಿಸುತ್ತವೆ.

ಒಟ್ಟಿನಲ್ಲಿ ಈ ಮೇಲೆ ಹೇಳಿದ **ಕಾರಣ, ಕಾರ್ಯ, ಸಹಕಾರಿ** ರೂಪದಭಾವಗಳು (ವಿಭಾವಾನುಭಾವ ಸಹಕಾರಿಭಾವ) **'ದೃಶ್ಯಕಾವ್ಯಗಳಲ್ಲಿ'** (ದೃಶ್ಯಪ್ರಧಾನವಾದ ನಾಟಕಾದಿಗಳು) ಕಣ್ಣಿಗೆ ಕಟ್ಟಿದಂತೆ ಕಂಡುಬರುತ್ತವೆ. ಕಾವ್ಯದಲ್ಲಿ ಹೇಗೆ? ಅಲ್ಲಿ ಆ ರೀತಿಯ ಭಾವಗಳನ್ನೇ ಕವಿಯು ಶಬ್ದರೂಪದಲ್ಲಿ ದೃಶ್ಯದಂತೆ ಭಾಸವಾಗುವ ಹಾಗೆ ಕವಿ ತನ್ನ ಪ್ರತಿಭಾಬಲದಿಂದ ತನ್ನ ಕಾವ್ಯವನ್ನು ಚಿತ್ರಿಸಿರುತ್ತಾನೆ. ಆ ರೀತಿಯ ಭಾವಗಳು ಸಹೃದಯಿಯಾದ ಪ್ರೇಕ್ಷಕನ ಅಥವಾ ಓದುಗನಲ್ಲಿರುವ ವಾಸನಾರೂಪವಾದ **'ಸ್ಥಾಯಿಭಾವದ'** ಉತ್ಕರ್ಷತೆಗೆ ಪುಷ್ಟಿಕೊಡುತ್ತವೆ. ಆಗ ಕೆಂಪು ಕಲ್ಲುಸಕ್ಕರೆಯು ಆರೋಗ್ಯವಂತನ ನಾಲಗೆಯ ಮೇಲೆ ಬಿದ್ದಾಗ, ಹೇಗೆ ತನ್ನಷ್ಟಕ್ಕೆ ರುಚಿಕೊಡುತ್ತದೆಯೋ ಹಾಗೆಯೇ ಓದುಗನಿಗೆ ಆನಂದವುಂಟಾಗುತ್ತದೆ.

ರಸದಲ್ಲಿ ಸಹೃದಯನ ಪಾತ್ರ : ಸೂಕ್ಷ್ಮವಾದ ರಸಾನುಭವಕ್ಕೆ ಸರಿಯಾದ ಹಿನ್ನೆಲೆ ಬೇಕು. ಬಿತ್ತಲು ಹಸನಾದ ಭೂಮಿಯಿರದೆ ಬೀಜ, ಗೊಬ್ಬರ, ನೀರು ವ್ಯರ್ಥವಲ್ಲವೇ? ಹೀಗೆಯೇ ನಿಷ್ಕಲ್ಮಶ ಮನಸ್ಸುಳ್ಳ ವ್ಯಕ್ತಿಯನ್ನು **'ಸಹೃದಯಿ'** ಎನ್ನಲಾಗುತ್ತದೆ. ನಾಟಕ ನೋಡುವರೆಲ್ಲ ಸಹೃದಯಿಗಳಲ್ಲ. ಮಂದಿರಗಳಲ್ಲಿ ಸೀಟಿ ಊದಿ, ನೋಟು ಎಸೆದವರೆಲ್ಲಾ ರಸಾನುಭವಕ್ಕೆ ಅರ್ಹತೆ ಪಡೆದಿರುವುದಿಲ್ಲ. **'ಅರ್ಹತೆ'**ಯೆಂದರೇನು? ಅವನ ಮನಸ್ಸಿನ ಕನ್ನಡಿಯು ಶುಭ್ರವಾಗಿದ್ದರೆ ಮುಖ ಕಾಣಬಲ್ಲದು. ಅವನ ಮನಸ್ಸಿನ ಹಿನ್ನೆಲೆ ಹಾಗೆಯೇ ಇರಬೇಕು. ಕಾರ್ಯ-ಕಾರಣ ರೂಪವಾದ ಭಾವಗಳನ್ನು ನೋಡಿ ಹೊಂದಿಸಿಕೊಳ್ಳುವ ಅನುಭವವಿರುಬೇಕು.

ಮೇಲೆ ಹೇಳಿದ ಕಾವ್ಯನಾಟಕಗಳನ್ನು ಸುಮ್ಮನೇ ಓದುತ್ತ, ನೋಡುತ್ತ ಕುಳಿತು ತೂಕಡಿಸಿದರೆ ಕಂಬಕ್ಕೂ ಅವರಿಗೂ ವ್ಯತ್ಯಾಸವಿಲ್ಲ. ಪ್ರೇಕ್ಷಕ - ಓದುಗನೆನಿಸುವ (ಸಹೃದಯಿ) ಗೆ ಕವಿಯು ಕಾಣುವಾಗಿನ ಆ ಸನ್ನಿವೇಶದ ಹೃದಯದ, ಸ್ಥಿತಿ ಸ್ವಭಾವವುಳ್ಳವನಾಗಿರಬೇಕು. ಅವನಿಗೆ ನಾಟಕಾದಿಗಳಲ್ಲಿನ ವಿಭಾವಾದಿಗಳು ಅನುಭವರೂಪದಲ್ಲಿ ಪ್ರತ್ಯಕ್ಷವಾಗಿ ಕಾಣುತ್ತವೆ. (ಕಾವ್ಯಗಳಲ್ಲಾದರೆ ಅವು ಶಬ್ದಾರ್ಥ ರೂಪವಾಗಿರುತ್ತವೆ) ಆ ಕಾರಣ-ಕಾರ್ಯ-ಸಹಕಾರಿ ರೂಪದ

ಭಾವಗಳನ್ನು ನೋಡುವಾಗ ಈ **ಕಾರಣದಿಂದ ಈ ಕಾರ್ಯಗಳಾಗಿವೆ, ಇವನಲ್ಲಿ ಆ ಭಾವವು ಕೆಲಸ ಮಾಡುತ್ತಿದೆ** ಎಂದು ಹೊಂದಿಸಿಕೊಂಡು ತಿಳಿಯುವ ಪಕ್ವಾನುಭವ, ಜ್ಞಾನಗಳಿರಬೇಕು. **'ಶಾಕುಂತಲ'** ನಾಟಕದಲ್ಲಿನ ಶೃಂಗಾರರಸದ ಭಾವಗಳನ್ನು ಮುಗ್ಧ ಬಾಲಕ ನೋಡಿದಾಗ, ರಸಾನುಭವ ಪಡೆಯಲಾರ. ಅವನಿಗೆ ಕೇವಲ ವಿದೂಷಕನ ಅಸಹಜವಾದ ವೇಷ, ಭೂಷಣ, ಮಾತುಗಳು ರುಚಿಸಿ ನಗಬಲ್ಲನಷ್ಟೇ.

ಕಾವ್ಯ-ನಾಟಕಗಳಲ್ಲಿ ಬರುವ ಪಾತ್ರ - ವಿಭಾವಾದಿಗಳನ್ನು ನೋಡಿ, ಇವು **'ತನ್ನವು'** ಇವು **'ಪರರ'**ವೆಂಬ ಭಾವನೆ ಬರಬಾರದು. ಈ ಭಾವನೆ ಸಹೃದಯಿಗೆ ಬಂದರೆ, ತಾನೂ ಮಧ್ಯೆ ಪ್ರವೇಶಿಸಿ: **'ಅವನಿಗೆ ಆಗಲಿ'**, ಆಗಬೇಕೆಂದು ಮಾತಾಡಲು ಹೋಗುತ್ತಾನೆ. ರಂಗದ ಮೇಲೆಹೋಗಿ **'ವಿಶ್ವಾಮಿತ್ರ'** ನ ಪಾತ್ರಧಾರಿಗೆ ಹೊಡೆಯಲೂಬಲ್ಲ. ಸಹೃದಯಿಯೆನಿಸಿದವ ರಂಗಮಂದಿರದಲ್ಲಿರುವ ಮಟ್ಟಿಗಾದರೂ ಮನೆಯ, ಅನ್ಯರಾಗ, ದ್ವೇಷಗಳಿಂದ ದೂರವಾಗಿರಬೇಕು. ಕಾವ್ಯನಾಟಕಗಳಲ್ಲಿನ ಭಾವಗಳು **'ಸಾಧಾರಣತ್ವ'**ವನ್ನು ಪಡೆಯಬೇಕು. ಹಾಗೆಯೇ ಕವಿಕೃತಿನಿರ್ಮಾಣದಲ್ಲಿ ಸನ್ನಿವೇಶ, ಪದಗಳು, ಅಭಿನಯ ಕೌಶಲ್ಯ ಹಾಗೂ ವಾದ್ಯ, ಇತ್ಯಾದಿಗಳೂ ಹಿತಮಿತವಾಗಿ, ಸಮಂಜಸವಾಗಿರಬೇಕಾಗುತ್ತದೆ. ಈ ರೀತಿಯಲ್ಲಿ ಭಾವಗಳು ನೇರವಾಗಿ ತಿಳಿಯುವಂತೆ **ಮಧ್ಯವರ್ತಿಗಳೆನಿಸುವ ಎಲ್ಲವೂ ಪೂರಕವಾಗಿರಬೇಕು.** ಈ ಅಂಶವು ಈ ರಸಾನುಭವ ಹಂತದ ಕಾರ್ಯದಲ್ಲಿ ಮಹತ್ವವಾದುದು. (ಆಗಮಾತ್ರ **'ರಸವಿಘ್ನ'**(೧)ಗಳು ದೂರವಾಗುತ್ತವೆ). ಆ ಅಡ್ಡಿಗಳು ದೂರವಾಗದೆ ರಸಾನುಭವವಿಲ್ಲ.

ಸಹೃದಯನ ಹೃದಯಸಂವಾದ :

ವಿಭಾವಾದಿಗಳು ಮೇಲಿನಂತೆ **'ಸಾಧಾರಣತ್ವ'** ವನ್ನು ಪಡೆದಾಗ ಪ್ರೇಕ್ಷಕನ ಅಥವಾ ಓದುಗನ - ಸ್ಥಾಯಿಭಾವವು ಪುಷ್ಟಿಗೊಳ್ಳುವಲ್ಲಿ ಯಶಸ್ವಿಯಾಗುತ್ತವೆ. ಈ ವಿಭಾವಾದಿಗಳಿಂದ ಪ್ರಕರ್ಷತೆ ಹೊಂದಿದ ಸ್ಥಾಯಿಭಾವವು ಸಹೃದಯಿಯಲ್ಲಿ ತನಗರಿವಿಲ್ಲದೆ ಸೂಕ್ಷ್ಮವಾಗಿ ಹೃದಯದಲ್ಲಿ ಆಂತರಿಕಕಾರ್ಯ ನಡೆಯುತ್ತದೆ. ಅದನ್ನು ಶಾಸ್ತ್ರಕಾರರು **'ಹೃದಯಸಂವಾದ'** ವೆನ್ನುತ್ತಾರೆ. ಹೃದಯಸಂವಾದದಲ್ಲಿ ಕಾವ್ಯದ ಶಬ್ದಗಳಲ್ಲಿರುವಶಕ್ತಿ (ವ್ಯಂಜನವ್ಯಾಪಾರವೆಂಬುದು) ಸಹಕಾರಿಯಾಗಿ ಕೆಲಸ ಮಾಡುತ್ತದೆ. ಅದನ್ನು **ರಸಧ್ವನಿ** ಎನ್ನಲಾಗಿದೆ. ರಸಾನುಭವಕ್ಕೆ ಪೂರಕವಾಗಿ ಕೆಲಸ ಮಾಡುವುದರಿಂದಲೇ ಆ ಧ್ವನಿಗೆ ಸಾರ್ಥಕತೆ.

ರಸವೆಂದರೇನು ?

ಆ ಸಹೃದಯಿಯ ಮನಸ್ಸಿನಲ್ಲಿ **'ತನ್ಮಯತೆ' (ಏಕಾಗ್ರತೆ) ಮೂಡಿ**, ಹೃದಯದಲ್ಲಿ

---

೧) ರಸಾನುಭವದಲ್ಲಿ 'ಸಪ್ತರಸವಿಘ್ನ' ಗಳು ದೂರವಾಗಿರಬೇಕು. ಅವುಗಳ ಮಹತ್ವವನ್ನು ಒತ್ತಿ ಹೇಳಲಾಗಿದೆ. ವಿವರವನ್ನು ಭಾ.ಕಾ. ಮೀಮಾಂಸೆ ನೋಡಿ. ಪಾಶ್ಚಾತ್ಯಮೀಮಾಂಸಕರಲ್ಲಿ ಮಾನಸಿಕದೂರ ವಿಚಾರದಲ್ಲಿ ಈ ಅಂಶವನ್ನೊತ್ತಿ ಹೇಳಿದ್ದಾರೆ.

೨) 'ದುಗ್ಧಾಸ್ವಾದನದಂತೆ' - ಕುಡಿದ ಹಾಲಿನ ಸವಿಯನ್ನು ಮಾತಿನಲ್ಲಿ ಹೇಗೆ ಹೇಳಲಾಗದೋ ಹಾಗೆ.

೩) 'ಬ್ರಹ್ಮಾನಂದ ಸೋದರ' - ಯೋಗಿಗಳು ಕಾಣುವ ಆನಂದಕ್ಕೆ ಸೋದರ ಸಮಾನವಾದುದು.

ಆಹ್ಲಾದವುಂಟಾಗಿ ಪೂರ್ಣವಾದ ಆನಂದ ಸ್ಥಿತಿಗೇರುತ್ತಾನೆ. ಹೇಗೆಂದರೆ ಒಣಗಿದ ಸೌದೆಗೆ ಬೆಂಕಿ ತಗುಲಿದಾಗ ಎಲ್ಲವನ್ನೂ ಜ್ವಾಲೆಯು ವ್ಯಾಪಿಸುವುದಿಲ್ಲವೆ? ಆ ಅವಸ್ಥೆಯಲ್ಲಿ ಇದು **'ಭಾವಾವಸ್ಥೆ'** ಇದು **'ರಸಾವಸ್ಥೆ'**ಯೆಂದು ವಿಭಜಿಸಿ ಹೇಳಲೂ ತೋರಲೂ ಆಗದು. ಅದು ಸಹೃದಯಿಯ ಮನಸ್ಸಿನಲ್ಲಿ ಮೌನವಾಗಿ ನಡೆಯುವ ಹೃದಯದ ಮನಸ್ಸಿನಕ್ರಿಯೆ **-ಆನಂದಾನುಭವ**. ಅದನ್ನು ಮಾತಿನಿಂದಹೇಳಲು ಬರದು. ಹಾಲುಕುಡಿದವನಿಗೆ ಆ ಹಾಲಿನ ಸ್ವಾದ, ರುಚಿಗಳು ಅನುಭವಕ್ಕೆ **ಬರುತ್ತವಷ್ಟೆ** [೨]. ಅದನ್ನು ಹೇಳಲು ಬರುವುದಿಲ್ಲ. ಹೀಗಾಗಿ ರಸವು **ಅಲೌಕಿಕವಾದುದು**[೩]. ಲೋಕದಲ್ಲಿ ಸಿಕ್ಕುವವಸ್ತುಗಳಂತೆ ಕೊಂಡು ತರಲಾಗುವುದಿಲ್ಲ. ಈ **ಅಲೌಕಿಕತೆಯೆಂಬ 'ವಿಶೇಷತೆ' ರಸಕ್ಕಿರುವ ಒಂದು ಭೂಷಣ.**

ಹೀಗಾದಾಗ ಆ ಕಾವ್ಯಾನಂದ (ರಸವನ್ನು) ಸಂಗ್ರಹಿಸಿರಿಸಿಟ್ಟುಕೊಳ್ಳಬಹುದೆ! ಸಾಧ್ಯವಿಲ್ಲ. ವಿಭಾವಾದಿಗಳು ಇದ್ದು, ಸ್ಥಾಯಿಭಾವವನ್ನು ಪುಷ್ಟಿಗೊಳಿಸುವವರೆಗೆ ಮಾತ್ರ ಆ ಆನಂದ ಅನುಭವಿಸಲು ಸಾಧ್ಯ. ಅವುಗಳ ನಿರಂತರ ಪ್ರವಾಹ (ಹೃದಯ ಸಂವಾದ) ನಿಂತ ಕೂಡಲೇ ರಸಾನುಭವವು ನಿಲ್ಲುತ್ತದೆ. ಹೀಗೆಂದಾಗ ವಿಭಾವಾನುಭಾವಾದಿಗಳಿಗೂ ರಸಕ್ಕೂ ಯಾವ ರೀತಿಯ **ಕಾರಣ-ಕಾರ್ಯ, ಜನ್ಯ-ಜನಕ** ಇತ್ಯಾದಿ ಸಂಬಂಧಗಳನ್ನೂ ಹೇಳಲಾಗದು.

ಅದು ಸಹೃದಯಿಯಲ್ಲಿ ಅರ್ಹ ವಿಭಾವಾದಿಗಳಿಂದ ಸ್ಥಾಯಿಭಾವವು ಪ್ರಕರ್ಷ ಸ್ಥಿತಿಗೇರಿ, **'ಸಾಧಾರಣತ್ವ'** ಹೊಂದಿ, ಹೃದಯಸಂವಾದದಿಂದ ಉಂಟಾಗುವ ಅಲೌಕಿಕಾನುಭವ. ಕವಿಕಂಡ **ಆನಂದವನ್ನೇ** [೧] ಆ ಸಹೃದಯಿ ಪಡೆಯಬಲ್ಲ.

ಕಾವ್ಯಾನಂದ, ನಾಟಕಾನಂದಗಳಲ್ಲಿ ಭೇದವಿಲ್ಲ. ಕಾವ್ಯವೂ ನಾಟಕದಂತೆ[೨] ತಿಳಿಯಲ್ಪಟ್ಟು ಆನಂದ ತರಬಲ್ಲದೆಂದು ಶಾಸ್ತ್ರಕಾರರು ತೀರ್ಮಾನಿಸಿದ್ದಾರೆ.

ರಸ - ಸ್ಥಾಯಿಭಾವಗಳ ಪರಿಚಯ ಪಟ್ಟಿರೂಪದಲ್ಲಿ :-

ರಸಗಳು	*ಸ್ಥಾಯಿಭಾವ*		*ಪರಿಚಯ*
೧. **ಶೃಂಗಾರರಸ**	(ರತಿಸ್ಥಾಯಿ)	-	ಪರಸ್ಪರ ಪ್ರಿಯರಾದ ಹೆಣ್ಣುಗಂಡುಗಳಲ್ಲಿ ಆಕರ್ಷಣೆ ಯಾಗುವುದು, ಸೇರುವುದು.
೨. **ಹಾಸ್ಯರಸ**	(ಹಾಸ)	-	ವಿಕೃತವಾದವೇಷ, ಭೂಷಣ, ನಡೆ-ನುಡಿಗಳಿಂದಾಗಿ ನಗುವುದು.
೩. **ಕರುಣರಸ**	(ಶೋಕ)	-	ಇಷ್ಟವಾದುದು ದೂರವಾಗಿ, ದುಃಖಿಸುವುದು.
೪. **ರೌದ್ರರಸ**	(ಕ್ರೋಧ)	-	ತನ್ನ ಇಷ್ಟವಸ್ತುವಿನ ಅಪಹರಣಕ್ಕೆ ಅತಿಯಾಗಿ

೧) 'ಬ್ರಹ್ಮಾನಂದ ಸದೃಶ' - ಯೋಗಿಗಳಿಗೆ ಕಾಣುವ ಅಪೂರ್ವವಾನಂದಕ್ಕೆ ಸಮಾನವಾದುದು. ಕಾವ್ಯವು ಓದುಗರಿಗೆ ಒಂದು ಯೋಗವೇ ಇದೊಂದು ರಸಯೋಗ-'ಕವೀನಾಂ ಕವಿತೈವ ಯೋಗಃ'-*ನೀಲಕಂಠ ದೀಕ್ಷಿತ.*

೨) 'ನಾಟ್ಯಾಯಮಾನ' ಅಂದರೆ ರಂಗನಿರ್ಮಾಣವಾಗಿ, ಪಾತ್ರಳು ಬಂದು ಹೋದಂತೆ ತೋರುವುದು.

ಕೋಪಿಸಿ, ಆಟೋಪಗಳನ್ನು ವ್ಯಕ್ತಪಡಿಸುವುದು.

೫. **ವೀರರಸ** (ಉತ್ಸಾಹ) - ಇಷ್ಟ ವಸ್ತುವನ್ನೂ-ಕೀರ್ತಿಯನ್ನೂ ಸಂಪಾದಿಸಲು ಮಾಡುವ ಪ್ರಯತ್ನ.

೬. **ಭಯಾನಕರಸ** (ಭಯ) - ತನ್ನ ಉಳಿವಿಗೆ ಆತಂಕಬಂದೀತೆಂದು ಅಳುಕಿನಿಂದ ಭೀತಿಗೊಳ್ಳುವುದು.

೭. **ಭೀಭತ್ಸರಸ** (ಜುಗುಪ್ಸೆ) - ಮನಸ್ಸಿಗೆ ಅಸಹ್ಯವಾಗಿ ಹೇಸುವುದು, ಮೂಗು, ಕಣ್ಣು ಮುಚ್ಚಿಕೊಳ್ಳುವುದು ಇತ್ಯಾದಿ.

೮. **ಅದ್ಭುತರಸ** (ವಿಸ್ಮಯ) - ತನ್ನಿಂದಾಗಲಿ, ಪರರಿಂದಾಗಲಿ, ಆದ ಆಶ್ಚರ್ಯ ಘಟನೆಗಳನ್ನು ನೋಡಿ ಬೆರಗಾಗುವುದು.

೯. **ಶಾಂತರಸ** (ಶಮ) - ತನ್ನಿಂದ ಏನೂ ಆಗದೆಂದು ನಂಬಿಕೆಯಳಿದು, ಪರಮಾತ್ಮನಲ್ಲಿ ದೀನಭಾವನೆ ಬರುವುದು.

ಶಬ್ದಾರ್ಥಗಳ ಸ್ವರೂಪ ಮತ್ತು ಪರಿಚಯ

ಶಬ್ದಾರ್ಥಗಳಲ್ಲಿ ಶಬ್ದವನ್ನು ಉಚ್ಚರಿಸದೆ ಅರ್ಥವು ಬುದ್ಧಿಗೆ ಹೊಳೆಯುವುದಿಲ್ಲ. ಅವೆರಡೂ ಪಾರ್ವತಿ ಪರಮೇಶ್ವರರಂತೆ ಅನ್ಯೋನ್ಯವಾದವು. ಅವುಗಳ ಸಂಬಂಧವೂ ಅಷ್ಟೇ ಆಂತರಿಕವಾದುದು. ಗದ್ಯದಲ್ಲಾಗಲೀ ಪದ್ಯದಲ್ಲಾಗಲೀ ಅವುಗಳ ಪರಿಚಯವನ್ನು ತಿಳಿಯದೆ ಅರ್ಥಸ್ವಾರಸ್ಯ, ಸೊಗಸುಗಳನ್ನು ಕಾಣಲಾಗದು.

ಈ ಶಬ್ದಗಳಿಗೆ ಮೂರುಬಗೆಯ ಅರ್ಥಗಳಿರುತ್ತವೆ : ೧) **ವಾಚ್ಯಾರ್ಥ (ಮುಖ್ಯಾರ್ಥ)**. **೨) ಲಕ್ಷ್ಯಾರ್ಥ. ೩) ವ್ಯಂಗ್ಯಾರ್ಥ.**

೧) ವಾಚ್ಯಾರ್ಥ: (ಮುಖ್ಯಾರ್ಥ)

ಒಂದು ಶಬ್ದವನ್ನು ಕೇಳಿದ ಕೂಡಲೇ ತಟ್ಟನೆ ಮನಸ್ಸಿಗೆ ಹೊಳೆಯುವ (ರೂಢಿಯ) ಪ್ರಸಿದ್ಧವಾದ ಸಾಂಕೇತಿಕ ಅರ್ಥವನ್ನು **'ವಾಚ್ಯಾರ್ಥ'** ವೆಂದು ಕರೆಯುತ್ತಾರೆ. ಉದಾ. **'ಕಣ್ಣು'** (ನೋಡಲು ಸಾಧನ), **'ಊರು'** (ಮನೆಗಳ ಸಮೂಹ), **'ಬೆಂಕಿ'** (ಕೆಂಪಗಿದ್ದು ಸುಡುವುದು) ಇತ್ಯಾದಿ ಅರ್ಥಗಳು ರೂಢಿಯಿಂದ ಬಂದವು.

೨) ಲಕ್ಷ್ಯಾರ್ಥ :

ಮುಖ್ಯಾರ್ಥಕ್ಕೆ ಕುಂದುಂಟಾಗಿ (ಬಾಧೆ) ಅರ್ಥ ಹೊಂದಿಕೆಯಾಗದಿದ್ದಾಗ, **ರೂಢಿ, ಪ್ರಯೋಜನ**ಗಳ ಹಿನ್ನೆಲೆಯಲ್ಲಿ ಆ ಶಬ್ದಗಳಿಗಿರುವ ವಾಚ್ಯಾರ್ಥಕ್ಕೆ ಮತ್ತೊಂದು ಅರ್ಥವನ್ನು ಹೊಂದಿಸಿಕೊಳ್ಳುತ್ತೇವೆ. ಅದು **'ಲಕ್ಷ್ಯಾರ್ಥ'**ವೆನಿಸುತ್ತದೆ. ಉದಾ:

೧. **'ಜಾತ್ರೆಯನ್ನು ನೋಡಲು ಊರಿಗೆ ಊರೇ ಬಂದಿತು'.**

೨. **'ಕಣ್ಣಿನಲ್ಲಿ ಬೆಂಕಿಯನ್ನು ಸುರಿಸುತ್ತ ಗರ್ಜಿಸಿದನು'**

೩. **'ಅವನ ಬುದ್ಧಿ ಪಾದರಸ'** - ಹೀಗೆ ಮಾತನಾಡುವುದು, ತಿಳಿದುಕೊಳ್ಳುವುದು ರೂಢಿಯಾಗಿದೆ. **'ಜಾತ್ರೆ' ನೋಡಲು-'ಊರಿಗೆ ಊರೇ'** ಬಂದಿತು. ಇಲ್ಲಿ **'ಊರು'** (ಮನೆಗಳ ಸಾಲು) ಬರಲು ಸಾಧ್ಯವಿಲ್ಲ. ಹೀಗೆಂದು ಮನಸ್ಸು ಯೋಚಿಸಿ, ಮುಖ್ಯಾರ್ಥಕ್ಕೆ ಕುಂದುಂಟಾಗಿ, ಅನ್ಯಾರ್ಥವನ್ನು ಹೊಂದಿಸಿಕೊಳ್ಳಲು ಯತ್ನಿಸುತ್ತದೆ. ಆಗ 'ಊರು' - ಜನರನೆಲೆ, **'ಊರು'-(ಆಧಾರ), 'ಜನರು'-ಆಶ್ರಯ ಪಡೆದವರು (ಆಧೇಯ).** ಈ ಸಂಬಂಧದಿಂದ **'ಊರು'** ಎನ್ನುವುದಕ್ಕೆ **'ಜನ'** ಎಂದರ್ಥ ಮಾಡುತ್ತೇವೆ. ಹೀಗೆಂಬ ಅರ್ಥವನ್ನು ನಿಘಂಟಿನಲ್ಲೂ ಹೇಳಿಲ್ಲ. ಆದರೂ ಈ ರೀತಿ ತಿಳಿದುಕೊಳ್ಳುವುದು, ಮಾತನಾಡುವುದೂ ರೂಢಿಯಾಗಿದೆ. ಇಂಥಹ ಮಾತುಗಳನ್ನು ನಿತ್ಯ ನಾವು ಕೇಳುತ್ತೇವೆ. **ಎರಡನೆಯ ವಾಕ್ಯಾರ್ಥ**ದಲ್ಲಿ **'ಕಣ್ಣಿನಲ್ಲಿ ಬೆಂಕಿಸುರಿಯುವುದು'** ಅಸಾಧ್ಯವೆಂದು, ಮುಖ್ಯಾರ್ಥ ಹೊಂದಿಕೆಯಾಗದೇ ಹೋದಾಗ ಹೋಲಿಕೆಯ ಸಂಬಂಧದಿಂದ ಕೆಂಪು ಮತ್ತು ಉಜ್ವಲತೆಯಿಂದ, ಕೆರಳಿದಕಣ್ಣಿನಿಂದ ನೋಡುವುದು, **'ಕೂಗುವಿಕೆ'** ಇತ್ಯಾದಿ ಅರ್ಥ ಮಾಡಿಕೊಳ್ಳುತ್ತೇವೆ. ಹೀಗೆ ಹೊಂದಿಸಿಕೊಳ್ಳುವುದಕ್ಕೆ ಅರ್ಥಪುಷ್ಟಿರೂಪವಾದ **'ಪ್ರಯೋಜನ'** ಮತ್ತು **'ರೂಢಿ'**ಗಳು ಕೆಲಸ ಮಾಡುತ್ತೇವೆ. ಕೇವಲ **'ಊರಿನ ಜನಗಳುಬಂದರು'. 'ಕೋಪದಿಂದ ಕೂಗಿದ'. 'ಅವನಬುದ್ಧಿಚುರುಕು'** ಎಂಬ ಈ ಮಾತುಗಳಿಗೂ ಹೀಗೆ ಹೇಳಬಹುದಾದ ಮಾತುಗಳಿಗೂ ವಿಶಿಷ್ಟಾರ್ಥಪ್ರತೀತಿ, ಪ್ರಭಾವದಲ್ಲಿ ವ್ಯತ್ಯಾಸವಿದೆ.

೩) ವ್ಯಂಗ್ಯಾರ್ಥ :

ಕೇಳುವವನ ವಯಸ್ಸು, ಅನುಭವ, ಬುದ್ಧಿಗಳ ಆಧಾರದ ಮೇಲೆ ಮತ್ತೊಂದು ಅರ್ಥವೂ ಗೋಚರಿಸುತ್ತದೆ. ಆ ಅರ್ಥವು ವಾಚ್ಯವಾಗಿ (ಮಾತಿನಿಂದ) ತೋರುವುದಿಲ್ಲ, ಸೂಚ್ಯವಾಗಿರುತ್ತದೆ. ಆ ಮೂರನೆಯ ಅರ್ಥವು **'ವ್ಯಂಗ್ಯಾರ್ಥ'** ವೆನಿಸುತ್ತದೆ.

ಮೇಲಿನ ಉದಾಹರಣೆಗಳಲ್ಲಿ ಊರಿನಜನರೆಲ್ಲರೂ ಬಂದರು; ಊರು ನಿರ್ಜನವಾಗಿತ್ತು ಎಂಬಷ್ಟಕ್ಕೆ ನಿಲ್ಲುವುದಿಲ್ಲ. ಮುಂದೆ ಗಮನಾರ್ಹವಾದ ಅರ್ಥವಿದೆ. ಊರಿನ ಎಲ್ಲರೂ ಬರಬೇಕಾದರೆ ಅಲ್ಲಿನ ಜಾತ್ರೆಯ **'ಅತ್ಯದ್ಭುತ', 'ಆಕರ್ಷಣೆ', 'ವ್ಯವಸ್ಥೆ' 'ಮಹಿಮೆ'** ಗಳು ವ್ಯಕ್ತವಾಗುತ್ತವೆ. ಎರಡನೆಯ ವಾಕ್ಯದಲ್ಲಿ ಬೆಂಕಿ ಸುರಿಸಿದವನ **'ಬದ್ಧದ್ವೇಷ', ಕೋಪದ 'ತೀಕ್ಷ್ಣತೆ', ತೀವ್ರಪರಿಣಾಮ, ಕನಿಕರವಿಲ್ಲದ 'ವರ್ತನೆ'**

---

೧. **ಇವುಗಳ ವಿಸ್ತಾರವಾದ ಪರಿಚಯಕ್ಕೆ ಭಾರತೀಯಕಾವ್ಯಮೀಮಾಂಸೆ ತಿನಂಶ್ರೀ ನೋಡಬಹುದು. ಅದರಲ್ಲಿ ವ್ಯಂಜನಸಾಮಗ್ರಿಗಳು ಅಧ್ಯಯವನ್ನು ಓದಿ ವ್ಯಂಜನದ ವ್ಯಾಪಕತೆ, ಸ್ವಾರಸ್ಯಾದಿ ಹೆಚ್ಚಿನವಿಚಾರಗಳನ್ನು ತಿಳಿಯಬಹುದು.**

ಇತ್ಯಾದಿ ಅರ್ಥಗಳ ಸುರುಳಿ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಹಾಗೆಯೇ **ಮೂರನೆಯ** ವಾಕ್ಯದಲ್ಲಿ ಬುದ್ಧಿಗೆ **'ಪಾದರಸದ' ಹೋಲಿಕೆಯಿಂದ 'ಬುದ್ಧಿಯು' ಲವಲವಿಕೆ, 'ಚಾಕಚಕ್ಯತೆ', 'ಸೂಕ್ಷ್ಮಗ್ರಹಣಶಕ್ತಿ'** ಇತ್ಯಾದಿ ಅರ್ಥಗಳು **'ವ್ಯಂಗ್ಯಾರ್ಥ'** ವೆನಿಸುತ್ತವೆ. ಈ ವ್ಯಂಗ್ಯಾರ್ಥವನ್ನು **ಪದಜೋಡಣೆ, ಸ್ಥಾನವಿಶೇಷ, ಕ್ರಮಭಂಗ, ವಾಕ್ಯವಿನ್ಯಾಸ ವಿಶೇಷ, ಪುನರುಕ್ತಿ** ಇತ್ಯಾದಿಗಳಿಂದಲೂ ಹೆಚ್ಚಿಸಬಹುದು.

ಧ್ವನಿಯೆಂದರೇನು ?

ಈ ವ್ಯಂಗ್ಯಾರ್ಥವು ಪ್ರಧಾನವಾಗಿ ಸೂಚಿತವಾದರೆ ಅದು **'ಧ್ವನಿ'** ಯೆನಿಸುತ್ತದೆ. ಧ್ವನಿಯು ಮಾತಿನ ಹಿನ್ನೆಲೆಯಲ್ಲಿರುವ ಅರ್ಥಪರಂಪರೆಯೆನ್ನಬಹುದು. ಕಾವ್ಯಶರೀರದ ಪ್ರತಿಯೊಂದು ಅಂಶದ ವ್ಯಂಜಕಸಾಮರ್ಥ್ಯವನ್ನು ಮಹಾಕವಿಗಳು ಕಂಡುಕೊಂಡು ಅಳವಡಿಸಿರುತ್ತಾರೆ. ಆಧುನಿಕ ಕವನಗಳಲ್ಲೂ **ಸಂಕೇತ, ಪ್ರತಿಮೆ**ಗಳನ್ನುಬಳಸಿ **'ಧ್ವನ್ಯರ್ಥ'**ವನ್ನು ಸೂಚಿಸಲಾಗುತ್ತದೆ. ಇದು ರಸಕ್ಕೆ ಅಂಗವಾಗಿ ಬಂದಷ್ಟೂ ಕಾವ್ಯಸೌಂದರ್ಯ ಅನುಪಮವಾಗಿರುವುದೆಂದು ಶಾಸ್ತ್ರಕಾರರ ಅಭಿಮತವಾಗಿದೆ(೧).

ಪೂರಕವಾಗಿ ಕೆಲವು ಆಧುನಿಕ ಉಕ್ತಿಗಳೊಂದಿಗೆ ಸ್ವಾರಸ್ಯವನ್ನು ಸೂಚಿಸಬಹುದು.

ಉದಾ:

೧. **"ಒಕ್ಕಲ ಗೇರ್‍ಯಾಗೆ ಮಳೆರಾಜ -- ಮಕ್ಕಳಮಾರಿ ಭತ್ತಂತ ತಿರುಗ್ಯಾರ"**-- ಈ ಜಾನಪದ ಉಕ್ತಿಯಲ್ಲಿ ಮಳೆರಾಯನ ಅವಕೃಪೆಯಿಂದ **ಬರದತೀವ್ರತೆ, ಪರಿಣಾಮ, ಅವರ್ಣನೀಯ ಸ್ಥಿತಿ**ಗಳು ಧ್ವನಿತವಾಗುತ್ತವೆ. ಈ ಮಾತನ್ನು ಮೆಲುಕು ಹಾಕುತ್ತಾ ಹೋದರೆ ಬೇರೆ ಬೇರೆಯಾದ ಧ್ವನಿಪರಂಪರೆಯೇ ಉಂಟಾಗುತ್ತದೆ. ಇಲ್ಲಿಯ ಧ್ವನಿ **ಕರುಣ, ಅದ್ಭುತ** ರಸಗಳಿಗೆ ಪೋಷಕವಾಗಿ ಬಂದಿದೆ.

೨. **"ಇಂದಿನೊಂದಿರಳಲಿ ಸಲಹಲಾರೆಯ ಎನ್ನ?" ಮಹಾರಾತ್ರಿ** ನಾಟಕದಲ್ಲಿ ಸಿದ್ಧಾರ್ಥ ಚನ್ನನ ಕುರಿತು ಪ್ರಶ್ನಿಸುತ್ತಾನೆ: ಎಲ್ಲರನ್ನು ಸಲಹುವನು ಆತ ರಾಜಕುಮಾರ ಸಾಧಕನಾಗಿ ಸಾಧನೆಯ ಮಾರ್ಗವನ್ನು ಹುಡುಕಲು ಹೊರಟಿದ್ದಾನೆ. ಆತನ ವ್ಯಕ್ತಿತ್ವದ ತಿರುವಿನಲ್ಲಿ **ಕ್ಷಣ, ಕಣಗಳು ಮಹತ್ತರ**ವೆಂಬುದು ಇಲ್ಲಿ ಧ್ವನಿತವಾಗುತ್ತದೆ.

೩. ಇದೇ ಸನ್ನಿವೇಶದಲ್ಲಿ : **'ಸಿದ್ಧಾರ್ಥ' ತೊಳಗಿದ್ದಾರೆ ಬೆಳಗುವನು"** ಎನ್ನುವ ಚನ್ನನಮಾತುಗಳು. **"ಇದೇ ಅಂತ್ಯಸ್ಪರ್ಶ! ಇಂದಿಗೆ ಸಾಕು ನೀ ನನಗಿತ್ತ ಹರ್ಷ".** - ಸಿದ್ಧಾರ್ಥನಮಾತು ಇಲ್ಲಿ ಸಾಧಕ ಅಪಾರಸುಖದ ನೆಲೆಯನ್ನು ಹರಸಿ ಹೊರಟಿರುವಾಗ ಅಲ್ಪವಾದ ಸುಖವನ್ನು, ಸುಖದ ಬಂಧನವನ್ನು ಬಿಡಲು **ನಲುಗುವ ಸ್ಥಿತಿಯಿಲ್ಲಿ** ಧ್ವನಿತವಾಗುತ್ತದೆ.

೪. **"ಇರುವೆನೆಂಬುದು ಹಳಮೆ ಬರುವೆನೆಂಬುದು ಹೊಸಮೆ"** : ಶಂಕರಭಟ್ಟ

ಜಡತೆಯಿಂದ ಚಲನಶೀಲ ಕಾಲದ ಬದಲಾವಣೆಗೆ ಸಿದ್ಧವಾಗಿರುವ **ತವಕ, ಖಾತರತೆಗಳು** ಧ್ವನಿತವಾಗುತ್ತದೆ. **ಹಳಮೆ- ಹೊಸಮೆ** ಇಲ್ಲಿ ಹೊಸತು, ಹಳದರ, ವಿವರ, ವ್ಯಾಖ್ಯಾನವೇ ಸೂಚ್ಯವಾಗಿ ಧ್ವನಿತವಾಗಿದೆ.

೫. **"ಬೇರು ಸತ್ತೀ ಮರವನೆತ್ತಿ ನಿಲ್ಲಿಸು ಮಗೂ, ತಳಕ್ಕೆ ಕಟ್ಟೆಯಕಟ್ಟಿ ನೀರ ಹಾಕು"- ನಮ್ಮೀನಾಡು** ಕವಿತೆಯಲ್ಲಿ ಎಂ. ಗೋಪಾಲಕೃಷ್ಣ ಅಡಿಗರ ನೈಜತೆಯನ್ನು ಮರೆತು ತೋರಿಕೆಯ ಅನ್ಯಸಂಸ್ಕೃತಿಗೆ ಮರುಳಾಗಿರುವ ಯುವಪೀಳಿಗೆಯನ್ನು **'ಹಾಕು'** ಎಂಬ ವಿಧ್ಯರ್ಥವಿದ್ದರೂ ಅದು ವಿಡಂಬನಾರ್ಥದ ಧ್ವನಿ **ಬೇಡ** ಎಂಬ ನಿಷೇಧಾರ್ಥದಲ್ಲಿ ಕೊನೆಗೊಳ್ಳುತ್ತದೆ.

೬. **'ನೇಣಿಗೆ ಬೇಕೇಬೇಕು ಆಧಾರ ಈ ಕೊಂಬೆಗಿಂತ!- ನೆರಳು ಬೇಕೆ ಹೊನ್ನಿನ ಹೊದಿಕೆಗಿಂತ!'** - ಸ್ವಂತಿಕೆಯನ್ನು ಮರೆತ ತೋರಿಕೆ ಆಡಂಬರದ ಪಾಶ್ಚಾತ್ಯ ಪ್ರಭಾವದ ಹಾಸ್ಯವಿಡಂಬನೆ ಇಲ್ಲಿ ಧ್ವನಿತವಾಗುತ್ತದೆ. ಹೀಗೆ ಇದಕ್ಕೆ ನಿದರ್ಶನಗಳು ಕೊಡಬಹುದು. ಧ್ವನಿಗೆ ಪೂರಕವಾಗಿರುವ ಆಧುನಿಕ ತಂತ್ರಗಳಲ್ಲಿ ಸೂಕ್ಷ್ಮಮನಸಿನ ಓದುಗ ಇವುಗಳನ್ನು ಗುರುತಿಸಬಲ್ಲ.

ಛಂದಸ್ಸು

ಒಬ್ಬ ಯುವತಿಯ ನಡಿಗೆಯ ನಿಯಮದಿಂದ ಆಕೆಗೆ ಬೆಡಗು ಬಿನ್ನಾಣಗಳು ಬರುತ್ತವೆ. ಹಾಗಯೇ ಮಾತಿನಲ್ಲಿ ಕಾಲನಿಯಮ, ಗತಿನಿಯಮಗಳು ಬಂದು ರಮಣೀಯತೆಯನ್ನುಂಟು ಮಾಡುತ್ತವೆ. ಇದರಿಂದಲೇ ಗದ್ಯಕ್ಕಿಂತ ಪದ್ಯವು ಹೆಚ್ಚು ಆಕರ್ಷಕವಾಗುವುದು. ಪದ್ಯದಲ್ಲಿ ಗುರು-ಲಘುಗಳ ಸರಣಿರೂಪದ ಛಂದೋಗತಿಯು ಪ್ರಕೃತಿಸಹಜವಾಗಿ ಮೂಡಿಬರುತ್ತದೆ(೧). ಹಾಗೆ ಬಂದಾಗಲೇ ಚೆನ್ನ.

'ಛಂದಸ್ಸು' ಎಂಬುದು ನಿಜವಾಗಿ ಗುರುಲಘು ಅಕ್ಷರಗಳವಿನ್ಯಾಸ (ಇಡುವಿಕೆ). ಇದು ಸಮಸ್ತ ವಾಙ್ಮಯದಲ್ಲಿ (ಗದ್ಯಪದ್ಯ) ಇರುವ ಒಂದು ಗುಣಲಕ್ಷಣ. ಇದು ಶಬ್ದದ **'ಅಕ್ಷರಗಳ ಸಮತೆ'**ಯಿಂದ ಅಥವಾ ಉಚ್ಚಾರದ **ಮಾತ್ರಾಸಮತೆ**ಗಳಿಂದ (ಇಟ್ಟಿಗೆಯಂತೆ) ಒಳಗೊಂಡಿರುವ ಲಯಾಂಶಗಳಿಂದ ರೂಪುಗೊಂಡಿದೆ.

ಪದ್ಯ ಛಂದಸ್ಸಿನಿಂದ ಕೂಡಿರುತ್ತವೆ. ಪಾದ ನಿಯಮಗಳಿಂದ ಕೂಡಿರುತ್ತದೆ. ಇದರಲ್ಲಿ ಮೂರು ಪಾದಗಳ, ನಾಲ್ಕು ಪಾದಗಳ, ಆರು ಪಾದಗಳ ಪದ್ಯರೂಪಗಳನ್ನು ಕಾಣುತ್ತೇವೆ. ಅದೇ ಪಾದಗಳು ನಿರ್ದಿಷ್ಟವಾಗಿರದೆ ಸ್ವಚ್ಛಂದವಾಗಿ ಸರಳವಾಗಿ ಕರ್ತೃ, ಕರ್ಮ ಕ್ರಮಾನುಸಾರ

---

(೧) "ಕಾವ್ಯ ಭುವನದ ಭಾಗ್ಯ" ವೆನ್ನಲಾಗಿದೆ. ಈ ಮಾತು ಪದ್ಯಕಾವ್ಯವನ್ನೇ ಕುರಿತದ್ದು.

೨) "ಗದ್ಯಂ ಹೃದ್ಯಂ......" - ಗದ್ಯವು ಸರಳತೆಯಿಂದ ತೊಡಕಿಲ್ಲದೆ ಮನಸ್ಸನ್ನು ಮುಟ್ಟುತ್ತದೆ. "ಪದ್ಯಂ ವದ್ಯಂ" - ಈ ಮಾತು ಪದ್ಯದ ಅನ್ವಯಾದಿಗಳಿಂದ ಆಂತರಿಕಾಂಶವನ್ನು ಅರಿಯಲಾಗದೇ ಹೇಳಿದ್ದು. ಗದ್ಯ-ಪದ್ಯಗಳೆರಡರಲ್ಲೂ 'ನಾದ'ವಿರುತ್ತದೆ.

ಸಾಗಿದರೆ **ಗದ್ಯ**ವೆನಿಸುತ್ತದೆ(೨). ಗದ್ಯದಲ್ಲಿ ಇಷ್ಟಿಷ್ಟೇ ಇರಬೇಕೆಂಬ ಅವಯವಪರಿಮಾಣ, ಪಾದನಿಯಮಗಳಿರುವುದಿಲ್ಲ. ಇದು ಗದ್ಯ ಪದ್ಯಗಳ ಸ್ಥೂಲಪರಿಚಯವಾಯ್ತು. ಸಾಮಾನ್ಯ ವಾಕ್ಯವೊಂದರ ಕ್ರಿಯಾಪದವನ್ನು ಅದರಸ್ಥಾನದಿಂದ ಪಲ್ಲಟಗೊಳಿಸಿದರೆ ಕವಿತೆಯಂತೆ ಭಾಸವಾಗುತ್ತದೆ. ಉದಾ : **'ನಾನು ಮನೆಗೆ ಬಂದೆ'** ಇಲ್ಲಿ ಕರ್ತೃ, ಕರ್ಮ, ಕ್ರಿಯೆಗಳ ಸಾಂಪ್ರದಾಯಿಕ ಸರಣಿಯಿದೆ. ಇದನ್ನೇ **'ಬಂದೆ ಮನೆಗೆ ನಾನು'** ಎಂದು ಹೇಳುವಲ್ಲಿ ಪ್ರತೀತಿ ವ್ಯತ್ಯಾಸವಾಯಿತು. ನಿರೀಕ್ಷೆ ಮೀರಿ ಪದೋಚ್ಚಾರದಲ್ಲಿ ಹೊಸತನ ಕಂಡಿತು. ಮೂರು ಮಾತ್ರೆಯ ಲಯವೇನೋ ಒಂದೇ ಆದರು ಇಲ್ಲಿ ಒಂದು ವೈಚಿತ್ರ್ಯ, ವಕ್ರತೆಗಳಿವೆ. ಇದೇ ಇಲ್ಲಿ ಸಾಧಿಸಬೇಕಾದ್ದು. ಹೀಗಾಗಿ ಮನಸ್ಸು ಇಲ್ಲಿ ಮಗ್ನವಾಗುತ್ತದೆ.

ಇನ್ನು ಪದ್ಯದ ಆಂತರಿಕ ಸ್ವರೂಪವನ್ನು ತಿಳಿಯಬೇಕಾಗುತ್ತದೆ. ನಾವಾಡುವ ಮಾತುಗಳು ಒಂದು ಯೋಜಿತ ವ್ಯವಸ್ಥೆಯಿಂದ ಕೂಡಿರುವುದಿಲ್ಲ. ಹೀಗಾಗಿ ಕವಿಯ ಯೋಜಿತವಾದ ಸೂಕ್ಷ್ಮವಾದ ಮಾತುಗಳು ಒಂದು ಛಂದೋವ್ಯವಸ್ಥೆಯಲ್ಲಿ ವ್ಯಕ್ತವಾದರೆ, ಅದು ಅಸಾಮಾನ್ಯ ಅನುಭವ, ತೃಪ್ತಿಗಳನ್ನುಂಟುಮಾಡುತ್ತದೆ. ಹೀಗೇ ನಮ್ಮ ಮನಸ್ಸನ್ನು ಸೆಳೆಯಬಲ್ಲ ಛಂದ ಸರಣಿಯನ್ನೇ **'ಲಯ'** (ಗತಿ) ವೆನ್ನುತ್ತೇವೆ.

'ಲಯ'ವೆಂದರೆ **'ಕ್ರಿಯೆ-ಕಾಲಖಂಡಗಳ ಅನ್ಯೋನ್ಯ ಸಮತ್ವ'**ವೆನ್ನುತ್ತಾರೆ. 'ಕ್ರಿಯೆ'ಯೆಂದರೆ **'ದುಡಿಮೆ ಬಿಡುವುಗಳ ಸಮತ್ವ'**ವೆನ್ನಬಹುದು. ಹಾಗೆಂದರೆ ಈ ಕ್ರಿಯೆ-ಬಿಡುವುಗಳ ಪರಿಮಿತವೇ **'ಲಯ'** ವೆನಿಸುತ್ತದೆ. ಉದಾ.

'ಗಂಗೆ - ಬಾರೆ - ಗೌರಿ - ಬಾರೆ.
ತುಂಗ - ಭದ್ರೆ - ತಾಯಿ - ಬಾರೆ'.

ಇದೊಂದು ಲಯದಿಂದ ಕೂಡಿರುವ ಪದ್ಯಭಾಗ. ಇಲ್ಲಿ **'ಗಂಗೆ'** ಎಂದಾಗ ದುಡಿಮೆ (ಕ್ರಿಯೆ)ಯಾಯ್ತು. ನಂತರ ನಮಗರಿವಿಲ್ಲದಂತೆ ಬಿಡುವು (ಕಾಲ) ಬರುತ್ತದೆ; ಪುನಃ **'ಬಾರೆ'** ಎಂದಾಗ **ದುಡಿಮೆ**ಯಾದರೆ ನಂತರ **ಬಿಡುವು** ಬಂದಿತು. ಹೀಗೆ ಇಲ್ಲಿ ಗುರುತಿಸಿರುವಂತೆ ಮೂರು **ಮಾತ್ರೆ 'ಸಮತೆಯು' ಲಯ**ವು (ಗತಿ) ಪರಿಮಿತ ರೂಪದಲ್ಲಿ, ಇಲ್ಲಿ ಪುನರಾವರ್ತನೆಯಾಗುವುದನ್ನು ಕಾಣುತ್ತೇವೆ. ಇದೇ 'ಲಯ'. **ಗಡಿಯಾರದ ಟಿಕ್ ಟಿಕ್ ಶಬ್ದಗಳಲ್ಲಿ ದುಡಿಮೆ ಬಿಡುವುಗಳಿವೆ. ನಮ್ಮ ಹೃದಯಬಡಿತ, ಪಕ್ಷಿಯ ಕೂಗು, ಅಸ್ತಮಾನ, ನೀರಿನ ಜುಳುಜುಳು ಹರಿವಿಕೆ ಎಲ್ಲೆಲ್ಲೂ ಲಯವಿದೆ.** ಲಯವಿಲ್ಲದ ಜಗತ್ತಿಲ್ಲವೆನ್ನಬಹುದು.

ಈ **'ಲಯ'** ವೆಂಬುದು ಸಂಗೀತ ಸಂಬಂಧವಾದ ಅಂಶ. ಪರಿಮಿತಗಳು ಕಿವಿಗೆ ಮಾಧುರ್ಯತೆ ಕೊಡುತ್ತದೆ. ಉದಾ:

೪ +೨ ೩ ೩ ೩ ೩ +೩ ೩
ಕನ್ನಡ - ನುಡಿ - ನಮ್ಮ - ಹೆಣ್ಣು,ನಮ್ಮ - ತೋಟ ದಿನಿಯ - ಹಣ್ಣು ಇತ್ಯಾದಿ

ಈ ಪದ್ಯಭಾಗದ ಗುರುತು '–' ಮಾಡಿರುವ ಕಡೆ ನಮಗರಿವಿಲ್ಲದಂತೆ '**ನಿಂತು**' ಸಾಗುವ (ಗತಿ) ಕಿವಿಗೆ ಬೀಳುತ್ತದೆ. ಇಲ್ಲಿ '**ವಿಷಮ**'**ಗತಿಯ** ವಿಸ್ಮಯ ಲಯವಿದೆ. ಇಲ್ಲಿನ **ಗುರುಲಘು - ವರ್ಣಗಳಿಂದ ಕೂಡಿದ ಶಬ್ದಗಳಲ್ಲಿ ನಾದವಿದೆ.** ಕೇವಲ ರಚನಾ ಸೌಲಭ್ಯವಿದ್ದ ಮಾತ್ರಕ್ಕೆ ಲಯವಾಗುವುದಿಲ್ಲ. ಆ ಛಂದೋರೂಪವು ಲೋಕಪ್ರಿಯವಾಗದು.

ಉದಾ: '**ರೊಟ್ಟಿ ಅಂಗಡಿ ಕಿಟ್ಟಪ್ಪ, ನಂಗೊಂದ್ರೊಟ್ಟಿ ತಟ್ಟಪ್ಪ**'.

ಇಲ್ಲಿ **ಅನುಪ್ರಾಸ, ಲಯಗಳಿವೆ. ಆದರೆ ಭಾವ-ಭಾಷೆಗಳಲ್ಲಿ ಸೂಕ್ತವಾದ ಆಯ್ಕೆ ಜೋಡಣೆಗಳಿಲ್ಲ.** ಉದಾ : '**ಮೇಲೊಂದು ಗರುಡ ಹಾರುತಿಹುದು, ಕೆಳಗದರ ನೆರಳು ಓಡುತಿಹುದು**'.

'ಭಾಗ್ಯದ ಲಕ್ಷ್ಮೀ ಬಾರಮ್ಮ ..."
'ಮಾನವ ನಾಗಿ ಹುಟ್ಟಿದ ಮ್ಯಾಲೆ..."
ಅಡಿಯ ಗೆಜ್ಜೆ ನಡುಗೆ ಹೆಜ್ಜೆ.
ಇಡುತ ಸುಗ್ಗಿ ಬರುತಿದೆ......
ಸುಗ್ಗಿ ಬರೆ ಹಿಗ್ಗು ತರೆ ಸಗ್ಗ ಸಗವ ತರುತಿದೆ. ಇತ್ಯಾದಿ ಪದ್ಯಗಳ ಸಾಲುಗಳನ್ನು ಸೂಕ್ಷ್ಮವಾಗಿ ನೋಡಿದಾಗ **ಭಾವಭಾಷೆ**ಗಳಲ್ಲಿ ಮಧುರ ಹೊಂದಾಣಿಕೆ ಇರುವುದನ್ನು ಕಾಣುತ್ತೇವೆ. ಇಲ್ಲಿ ಬೆಳಗು, ಬೆಳಕಿನ ಜಾಜಿಯ ಪರಿಮಳವಿದೆ. ಕಾರಣ ಭಾವಾಭಾಷೆಗಳ ಹೊಂದಾಣಿಕೆ.

ಹೀಗೆ ಕವಿಯ ಅನುಭವವು ಭಾವೋಚಿತವಾದ ಲಯವನ್ನಾಶ್ರಯಿಸಿಯೇ ಬರುತ್ತದೆ(೧). ಈ ಕವನದಲ್ಲಿ ಗುರುತಿಸಿರುವಂತೆ ಮಿಶ್ರಲಯವಿದೆ. ಒಳ್ಳೆಯ ಸುಶ್ರಾವ್ಯತೆ (ಇಂಪು) ಇಲ್ಲಿದೆ. ಇಲ್ಲಿ '**ಪದಮೈತ್ರಿ**' **ಗತಿಸೌಂದರ್ಯ**ಗಳನ್ನು ಮಹಾಕವಿ ಸಾಧಿಸಿದ್ದಾರೆ. ಈ ಸಿದ್ಧಿಯಾಗಬೇಕಾದರೆ, ಕೇವಲ **ಸಾರ್ಥಕ ಅಕ್ಷರಗಳು** ವಾಚನಕ್ಕೆ ಹೊಂದಿಕೆಯಾಗುವುದಿಲ್ಲ. ಶಬ್ದಗಳ ಆಯ್ಕೆ ಮತ್ತು **ಜೋಡಣೆ** ಕೈಗೂಡಿರಬೇಕು. ಪದಗಳಲ್ಲಿ ಜಗ್ಗಾಟವಿದ್ದರೆ ಸರಾಗತೆಗೆ ಕುಂದು ಬರುವುದಲ್ಲದೆ, ಭಾವಕ್ಕೂ ಭಂಗವಾಗುತ್ತದೆ. ಹೀಗಾಗಿ ಶಬ್ದಗಳ ಆಯ್ಕೆಯಲ್ಲಿ **ಭಾವೋಚಿತವಾದ ಅರ್ಥಪುಷ್ಟಿಯಿ**ರಬೇಕಾಗುತ್ತದೆ. ಉದಾ: '**ದುರ್ಯೋಧನ**' - '**ಉರಗಪತಾಕ**' ಎರಡರಲ್ಲಿ ಮುಂದಿನ ಶಬ್ದದ '**ರ**' ವರ್ಣ, '**ಉರಗ**' (ಸರ್ಪ)- '**ಪತಾಕ**'- ಎಂಬಲ್ಲಿ ಸರ್ಪದ ಕೆರಳುವಿಕೆಯ ಸ್ವಭಾವದ ವ್ಯಕ್ತಿಯನ್ನು ಆ ಪದಸೂಚಿಸುತ್ತಿದೆ. ಸಂದರ್ಭದಲ್ಲಿ ಅದೇ ಸೂಕ್ತಪದವೆನಿಸಿದೆ. ಈ ಹಿನ್ನೆಲೆಯಲ್ಲಿ ಗೋವಿಂದ ಪೈಗಳು ಕವಿತೆಯ ಬಗೆಗೆ ಬರೆಯುತ್ತಾ "**ಕರುಣೆಯ ನಯನ ಬಿಂದುವೇ ಕಾಂತತೆಯ ಬಂಧು .... ವಿಪುಲಮಾನುಷ್ಯ ಜೀವನದ ಯಥಾರ್ಥ ಸಮಾಲೋಕನ** ರಸಭಾವ, ಸಮುಜ್ವಲವಾದ ಸಂದರ್ಭದಲ್ಲಿ ಅತ್ಯಂತ ಉತ್ಕಟಸ್ಥಿತಿಯನ್ನು ಮುಟ್ಟಿದ ಮನುಜನ ಮನೋಭೂಮಿಕೆಯಲ್ಲಿ

---

(೧) 'ಭದ್ರಿರಾಚ್ಛಾದನೆ' - ಛಂದಸ್ಸು, ಕೋಮಲಭಾವಗಳಿಗೆ ಹೊದಿಕೆಯಂತೆ ಬಂದು ಕೆಲಸ ಮಾಡುತ್ತದೆ.

ಗಾನಮಯ ಕಾವ್ಯ ಉದಯಿಸುತ್ತದೆ".

ಈ ಮಾತುಗಳು **ಕವಿತೆ ಬರೆಯುವುದು ಹೇಗೆ** ಎಂಬುವವರಿಗೆ ಮಾರ್ಗದರ್ಶಿಯಾಗಿದೆ. ಅಧ್ಯಯನ, ಅನುಭವದ ಪಕ್ವತೆ ಇವುಗಳು ಕವಿಗಳಿಗೆ ಬೇಕೇ ಬೇಕು. ವಾಲ್ಮೀಕಿಯ ಪಕ್ಷಿಸಂಬಂಧ **ಶೋಕವೇ ಶ್ಲೋಕವಾಗಿ ಹೊರ**ಹೊಮ್ಮಿತು. ಹೀಗೆ ಛಂದಸ್ಸಿನಲ್ಲಿ ಭಾವ-ಭಾಷೆಗಳ ಜ್ಞಾನ, ಅರ್ಥಸಮನ್ವಯತೆಯಿರಬೇಕಾಗುತ್ತದೆ. ಅದಕ್ಕಾಗಿಯೇ ಛಂದಸ್ಸೆಂಬುದು **'ಭಾಷೆಯನ್ನು ಕವಿತೆಯಾಗಿಸುವ ಕಲೆ'** ಎನ್ನಲಾಗಿದೆ. ಈ ಮಾತಿಗೆ ಮೇಲಿನವು ನಿದರ್ಶನವಾಗಿವೆ

ಛಂದಸ್ಸಿನ ಕಲಿಕೆ :

ಛಂದಸ್ಸನ್ನು ಶಾಸ್ತ್ರಾಭ್ಯಾಸದಿಂದ ತಿಳಿಯಬಹುದು. ಕವಿಗಳ ಕವಿತೆಯನ್ನು ಓದಿ, ರಚಿಸಿ ಗುರುತಿಸಿ ಅರಿಯಬಹುದು. ಕವಿಯಾದವನು ಛಂದಸ್ಸಿನ ಅರಿವನ್ನು ಪಡೆದೇ ಬರೆಯುವುದಿಲ್ಲ. ಕವಿತೆಯು (ಛಂದ) ತಿದ್ದಿತೀಡಿ ಬರೆಯುವುದಲ್ಲ. ಅದರಲ್ಲಿ ಬರುವ **'ಗಣ'** ಆಕಾರವಾಗಿ ಕಾಣಿಸುತ್ತವೆ. ಅದರಲ್ಲಿ **ಶಬ್ದಾರ್ಥ, ಲಯಗಳಲ್ಲಿ ಹೊಂದಾಣಿಕೆಯಿದ್ದು, ಸಂಗೀತಾಂಶ** ಗೋಚರವಾಗುತ್ತದೆ.

ಛಂದಸ್ಸಿನ ಪ್ರಯೋಜನ :

ಛಂದಸ್ಸಿನಿಂದ ಕೂಡಿರುವ ಪದ್ಯವನ್ನು ಬಾಯ್ದೆರೆದು ಓದಿದಾಗ (ಲಯ, ನಾದ, ಪ್ರಾಸಗಳಿಂದ) ಕಿವಿಗೆ ಮುದವನ್ನು ಕೊಡುತ್ತದೆ(೧). ಅತಿವಿಸ್ತಾರವಾದ ಸಂಗತಿಗಳನ್ನು (ಭಾಷೆಯ ಐಕ್ಯ, ಜೋಡಣೆಗಳಿಂದಾಗಿ) ಗದ್ಯದವಿಸ್ತಾರವಿರದೆ ಇಲ್ಲಿ **ಸಂಗ್ರಹ**ಗೊಳ್ಳುತ್ತದೆ. **ಪ್ರಾಸಬದ್ಧತೆ, ಸಂಕ್ಷಿಪ್ತ**ತೆಗಳಿರುವುದರಿಂದ ಕಂಠಪಾಠಗಳಿಂದ ನೆನಪಿನಲ್ಲಿಟ್ಟುಕೊಳ್ಳಲು ಸಹಾಯಕವಾಗುತ್ತದೆ. **"ಚಕ-ಮಕ ಚಂಚಲ, ಮಿಂಚಿನ ಗೊಂಚಲ, ಚಕ-ಮಕಿ ಜಲ-ಮಲ, ಕುಣಿಯೋಣ ಬಾರ."** ಇಂತಹ ಶಿಶು ಗೀತೆಗಳಂತೂ ಎಳೆಯ ಮನಗಳಿಗೆ **ಸ್ವಸಂತೋಷ, ಸ್ಮರಣೆ, ಸರಾಗಕೆ** ಸುಲಭವಾಗುತ್ತದೆ. ಇದರಿಂದ ನಿಜವಾದ ಕಲಿಕೆ ವಿಸ್ತಾರಗೊಳ್ಳುತ್ತದೆ. ಈ ಪರಿಣಾಮ ಪ್ರಾಸಬದ್ಧ ಗೀತೆಗಳಿಂದ ಎಂಬುದನ್ನು ಮರೆಯಲಾಗದು. ಹೀಗಾಗಿಯೇ ಮಹತ್ವದ ಅಂಶಗಳು, **ಕೃತಿಗಳು ಸೂತ್ರಪ್ರಾಯವಾಗಿ ಉಳಿದುಕೊಂಡು ಬಂದಿವೆ.**

ಛಂದಸ್ಸಿನ ಕಲ್ಪನೆ :

ಛಂದಸ್ಸೆಂಬುದು **ಮಾತ್ರೆ, ಲಘು, ಗುರು, ಪ್ರಸ್ತಾರ, ಗಣ, ಪ್ರಾಸ, ಲಯ, ನಾದಗಳಿಂದ ಕೂಡಿದ್ದು ಆಧುನಿಕ ಪರಿಕಲ್ಪನೆಗಳಾದ ಮುಡಿ, ಪದ್ಮಗಣ, ಗಣಪರಿವೃತ್ತಿ**

---

(೧) 'ಛದಿರಾಹ್ಲಾದೆ' - ಛಂದಸ್ಸು ಲಯದಿಂದ ಕೂಡಿದ್ದು ಭಾವೋಚಿತ ಪದ್ಯವನ್ನು ವಾಚಿಸಿದಾಗ ಆಹ್ಲಾದ, ಸಂತೋಷ ಕೊಡುತ್ತದೆ. ಮನಸ್ಸಿಗೆ ಮುದನೀಡುತ್ತದೆ. ಮೇಲಿನ ಪದ್ಯಗಳ ಪಾದಗಳೇ ನಿದರ್ಶನವಾಗಿವೆ.

೨) 'ನಿಮೇಷೋನ್ಮೇಷ ಕಾಲೇನ ಸಮಂ ಮಾತ್ರಾಸು ಸಾ ಸ್ಮೃತಾ'

ಇತ್ಯಾದಿಗಳಿಂದ ಕೂಡಿದ **'ಪದ್ಯದ ರಚನೆಯ (ಆಂತರ್ಯ) ನಿಯಮಗಳನ್ನು ಗುರುತಿಸಿ ತಿಳಿಸುತ್ತದೆ'**. ಹೀಗಾಗಿ ಅದೊಂದು **'ಪದ್ಯರಚನಾಶಾಸ್ತ್ರ'** ವೆನ್ನಬಹುದು.

ಮಾತ್ರೆ :

ಒಂದು ನಿಯತವಾದ **'ಕಾಲಪರಿಮಿತಿ'** ಯನ್ನು **'ಮಾತ್ರೆ'** ಯೆನ್ನಲಾಗುತ್ತದೆ. ಆ ಮಾತ್ರೆಯ ಕಾಲವನ್ನು ಒಂದುಪ್ರಸ್ವಾಕ್ಷರ ಉಚ್ಚರಿಸುವ ಕಾಲವೆನ್ನಬಹುದು. ಅವನ್ನು ಚಿಟಿಕಿ **ಹೊಡೆಯುವ** ಅಥವಾ ಸಹಜವಾಗಿ **ರೆಪ್ಪೆಮುಚ್ಚಿ** ತೆರೆಯುವಷ್ಟು ಸಮಯವೆನ್ನಬಹುದು.(೨) ಈ ಮಾತ್ರೆಗಳನ್ನು **'ಲಘು'**, **'ಗುರು'**ಗಳೆಂದು ಗುರುತಿಸಲಾಗುತ್ತದೆ.

ಲಘು : ಒಂದು ಮಾತ್ರೆಯ ಉಚ್ಚಾರಕಾಲದ ಬೆಲೆಯುಳ್ಳದ್ದು. ಲಘು ಅಕ್ಷರಗಳ ಮೇಲೆ (U) ಚಿಹ್ನೆಯಿಂದ ಗುರುತಿಸಲಾಗುತ್ತದೆ. ಉದಾ:

U U U U U U U U　　U U U U U U U U U U

ಕ ನ ಕ ಗಿ ರಿ ಧ ವ ಳ　　ಬೆ ಡ ಗಿ ನ ಕ ನ ಸಿ ನ ರ ತಿ

ಗುರು : ಎರಡು ಮಾತ್ರೆಗಳ ಉಚ್ಚಾರಕಾಲದ ಬೆಲೆಯುಳ್ಳದ್ದು. **ಗುರು** ಅಕ್ಷರಗಳ ಮೇಲೆ (-) ಚಿಹ್ನೆಯಿಂದ ಗುರುತಿಸಲಾಗುತ್ತದೆ. ಉದಾ :

– –　– – U – –　　– –　– UU – U U –

ಶೂರಾ ದೂರಕ್ಕೆ ಬಾರಾ　　ತೋರಾ ಸಾಹಸ ಪ್ರೌಢಿಮೆಯಾ

ಪದ್ಯಗಳಪ್ರಸ್ತಾರಗಳಲ್ಲಿ ಲಘುವನ್ನು **'ಲ'** ಎಂದೂ ಗುರುವನ್ನು **'ಗ'** ಸಂಕೇತಮಾಡಿ ತಿಳಿಯಲಾಗುತ್ತದೆ.

ಪ್ರಸ್ತಾರ :

ಪದ್ಯದಪಾದಗಳ ಅಕ್ಷರಗಳಿಗೆ ಗುರುಲಘುಗಳ ಚಿಹ್ನೆಗಳಿಂದ ಗುರುತಿಸುವುದು. ನಂತರ ಅವುಗಳನ್ನು ಗಣಗಳನ್ನಾಗಿ ವಿಂಗಡಿಸುವುದನ್ನು ರೂಢಿಯಲ್ಲಿ **'ಪ್ರಸ್ತಾರ'** ವೆಂದು ಕರೆಯಲಾಗುತ್ತದೆ. ಉದಾ :

UUU	U U U U	– U	U U U U
ಅವಳ	**ಚಲುವನು**	**ನಾನೆ**	**ಅರಿಯೆನು**

ಲಯ :

ಪದ್ಯವನ್ನು ಬಾಯ್ದೆರೆದು **ಓದಿದಾಗ ನಡೆ, ನಿಲುಗಡೆ** ಇವುಗಳು ಪುನರಾವರ್ತನೆಯಾಗುವುವು. ಅದು ಸೂಕ್ಷ್ಮವಾಗಿ ನಿಂತುನಡೆಯುವ ಪದ್ಯದ **'ಗತಿ'** ಯೆನ್ನಬಹುದು. ಪದ್ಯವಾಚನದಲ್ಲಿ ಸ್ವರಾಂದೋಲನ (ಪರಿಮಿತ) ಉಂಟಾಗಿ ಉಚ್ಚಾರದಲ್ಲಿ

ಮಾಧುರ್ಯತೆ ಬರುತ್ತದೆ. ನಿರೀಕ್ಷಣೆಯಂತೆ ನಿಯತವಾದ ಸ್ಥಳದಲ್ಲಿ ನಿಂತು ಸಾಗುವುದು **'ನಿಯತಲಯ'**. ಉದಾ :

೩ ೩ ೩ ೩

ನಾರಿ-ನಿನ್ನ-ಮೋರಿ-ಮ್ಯಾಲೆ

ಇಲ್ಲಿ ಅಕ್ಷರಗಳ ಮಾತ್ರೆಗಳ ಸಮತೆಯಂತೆ ನಿರೀಕ್ಷಣೆ ಮೇರೆಗೆ ನಿಂತು ಸಾಗುವ **'ನಿಯತಲಯ'** (ಸಮಗತಿ) ಕಾಣುತ್ತಿದೆ. ಅನಿರೀಕ್ಷಿತವಾಗಿ ನಿಂತು ಸಾಗುವ ಗತಿಯನ್ನು **'ಅನಿಯತಲಯ'** (ವಿಷಮಗತಿ) ಯೆನ್ನಲಾಗುತ್ತದೆ.

೩ ೩ ೫

ಉದಾ : **ಮನೆಯ ನೆಂದು, ಕಟ್ಟದಿರು**

ಇಲ್ಲಿ ಮೂರು ಮಾತ್ರೆಗಳ ಮುಂದೆ, ತಟ್ಟನೆ ಐದುಮಾತ್ರೆಗಳಲಯ ಬಂದಿದೆ. ಹೀಗೆ ಅನಿರೀಕ್ಷಿತ ಲಯಗಳಿಂದ ಪದ್ಯಗಳಲ್ಲಿ ವಿಸ್ಮಯಗಳುಂಟಾಗುತ್ತವೆ. ಕನ್ನಡದಲ್ಲಿ ಕೇವಲ ೩, ೪, ೫ ಮಾತ್ರೆಯ ಲಯಗಳಿವೆ. ಭಾಷೆಯ ಸ್ವರೂಪದ ಮೇಲೆ (೬, ೮ ಮಾತ್ರೆಯ ಮಿಶ್ರಲಯಗಳೂ ಉಂಟು) ಲಯನಿರ್ಧಾರ ಮಾಡಬೇಕಾಗುತ್ತದೆ.

ಸಂಸ್ಕೃತವು (ಉಚ್ಚಾರಣಾ ಪ್ರಾಧಾನ್ಯತೆಯಭಾಷೆ) ಅಲ್ಲಿ ಸಂಗೀತಲಯವಿದೆ. ಇಂಗ್ಲೀಷಿನಲ್ಲಿ ಶಬ್ದಗಳನ್ನು ಒತ್ತಿ ಹೇಳುವುದರಲ್ಲೇ **'ಲಯ'** ತೋರುತ್ತದೆ.

ಯತಿ :

ಸಂಸ್ಕೃತದಿಂದ ಬಂದವೃತ್ತಗಳು ಉದ್ದವಾದ ಪಾದಗಳಿಂದ ಕೂಡಿರುತ್ತವೆ. ಅವುಗಳನ್ನು ಓದುವಾಗ ಅರ್ಥಕೆಡದಂತೆ ನಿಯತವಾಗಿ ನಿಲ್ಲಿಸಿ(೧) ಓದುವುದಕ್ಕೆ **'ಯತಿ'** ಎನ್ನುತ್ತೇವೆ. ಅಲ್ಲಿ ಯತಿ ಅಗತ್ಯವಿರುವುದರಿಂದ ಕಡ್ಡಾಯವಾಗಿ ಕಂಡುಬರುತ್ತದೆ. ಆ ಸಂಸ್ಕೃತದ ದೀರ್ಘ ಸಮವೃತ್ತದ ಪದ್ಯಗಳಲ್ಲಿ ಯತಿಯೆಂಬುದನ್ನು ನಿಯಮದಂತೆ ಅನುಸರಿಸಲಾಗುತ್ತದೆ. ಅಲ್ಲಿನ ದೀರ್ಘಲಯಕ್ಕೆ ಯತಿ ಅಗತ್ಯವಾಗಿಯೇ ಕಾಣುತ್ತದೆ. ಚಂಪಕಮಾಲಾದಿ ವೃತ್ತಗಳಲ್ಲಿ ಕಡ್ಡಾಯವಾಗಿ **ಆವೃತ್ತನಿಯತಯತಿ**ಯನ್ನು ಹೇಳಿರುತ್ತಾರೆ.

ಕನ್ನಡದ ಛಂದೋರೂಪಗಳು ಚಿಕ್ಕಚಿಕ್ಕವಾದವು. ಯತಿಯನ್ನು ಅವು ಬಯಸುವುದಿಲ್ಲ. ೩, ೪, ೫ ಮಾತ್ರೆಯ ಲಯಗಳಿಗೆ ಶಬ್ದಾರ್ಥಗಳು ಹೊಂದಿಕೊಂಡೇ ಬರುತ್ತವೆ. ಯತಿಯ ಹೆಸರನ್ನು ಗುರುತಿಸದಿದ್ದರೂ ಸಹಜಯತಿ ಕನ್ನಡದಲ್ಲುಂಟು(೨). ಇದು **ಸಹಜಯತಿ** ಯೆನ್ನಬಹುದು.

---

(೧) "ಯತಿಯೆಂಬುದುಸಿರ್ದಾಣಂ" ಪದ್ಯವಾಚನದಲ್ಲಿ ಉಸಿರನ್ನುಬಿಟ್ಟು ಮುಂದೆಸಾಗುವ ನೆಲೆ-ನಾಗವರ್ಮ.

(೨) "ಯತಿವಿಲಂಘನದಿಂದರಿದಲ್ತೆ ಕನ್ನಡಂ" ಕನ್ನಡಯತಿಯ ವಿಚಾರದಲ್ಲಿ ಕಡ್ಡಾಯದ ಅಗತ್ಯವಿಲ್ಲವೆಂದು ಕೇಶಿರಾಜನು ಸಾರಿದ್ದಾನೆ.

(೩) ಒತ್ತಕ್ಷರವು ಶಿಥಿಲದ್ವಿತ್ವವಾಗಿದ್ದರೆ ಹಿಂದಿನ ಅಕ್ಷರವು ಗುರುವಾಗುವುದಿಲ್ಲ. ಉಚ್ಚಾರ ಪ್ರಾಧಾನ್ಯವಿದ್ದ ಹಳಗನ್ನಡ ವ್ಯಾಕರಣ ಶಬ್ದಮಣಿ ದರ್ಪಣದ ಕಾಲದಲ್ಲಿ ಆ ಶಿಥಿಲದ್ವಿತ್ವ ಶಬ್ದಗಳನ್ನು ತೇಲಿಸಿ ಉಚ್ಚರಿಸಬೇಕೆಂದು ತಿಳಿಸಿದೆ. ಉದಾ : ಕಾದಲ್ಗರ್ಗಳ್, ಮುಗುಳ್ಗಳ್.

೧) **ಗುರುವೆಂದು ಗುರುತಿಸಬೇಕಾದ ಅಕ್ಷರಗಳು :**

i) **ದೀರ್ಘಸ್ವರಗಳು** ಮತ್ತು ಅವುಗಳಿಂದ ಕೂಡಿದ ವ್ಯಂಜನಾಕ್ಷರಗಳು. ಉದಾ :

— — — —

ಆಟ ಊಟ ಐದು ಔಷಧ ಕಾಜಾಣ. ಕಾರ್ಮೋಡ,

ii) **ಸಂಯುಕ್ತಾಕ್ಷರದ** ಅಥವಾ **ಒತ್ತಕ್ಷರ**(೨) **ಹಿಂದಿನ ಶಿಥಿಲದಿತ್ವ ಬಿಟ್ಟು :**

—∪ —∪ —∪ —∪

ಅಕ್ಕ ವಕ್ರ ತರ್ಕ ಸೊಕ್ಕು

iii) **ಅನುಸ್ವಾರಗಳಿಂದ** ಕೂಡಿದ ಅಕ್ಷರ :

— — — — —

ಅಂಚಿ ಅಂಕ ಸುಂಕು ತುಂಗ, ಪಂಕ, ಮಂಕು

iv) **ವಿಸರ್ಗದಿಂದ** ಕೂಡಿದ ಅಕ್ಷರ :

— — — — —

ದುಃಖ ತಃಖ್ತೆ ಪ್ರಾಯಶಃ ಅಂತಃಕರಣ ನಮಃ

— — — —

v) **ಸಹಜವ್ಯಂಜನದ** ಹಿಂದಿನಾಕ್ಷರ : ಕೊರ ೞ್, ತಿರು ೞ್, ಕಾ ೞ್, ಕ ೞ್

vi) ಷಟ್ಪದಿಗಳಲ್ಲಿ ಮೂರು ಮತ್ತು ಆರನೆಯ ಪಾದಗಳ **ಕೊನೆಯುವರ್ಣ** ಲಘುವಾಗಿದ್ದರೂ ಗುರುವೆಂದು ಪರಿಗಣಿಸಬೇಕು.

ವಿ.ಸೂ. ಗುರುವೆನಿಸಲು ಅನೇಕಕಾರಣಗಳಿದ್ದರೂ ಒಂದೇಗುರುವೆಂದು ತೀರ್ಮಾನಿಸಬೇಕಾಗುತ್ತದೆ.

— ∪ — —

ಉದಾ: **ಸಾಂಖ್ಯ, ಸಾಂಕ್ರಾಮಿಕ**

ಇಲ್ಲಿ **'ಸಾಂ'** ದೀರ್ಘವೂ ಅನುಸ್ವಾರದಿಂದ ಕೂಡಿದ್ದೂ ಒತ್ತಕ್ಷರದ ಹಿಂದಿನ ಅಕ್ಷರವಾಗಿಯೂ ಇದೆ. ಈ ಮೂರು ಕಾರಣಕ್ಕೆ ಮೂರು ಗುರುಗಳೆಂದು ನಿರ್ಧರಿಸುವುದು ಸರಿಯಲ್ಲ. ಇಲ್ಲಿ ಕೇವಲ ಒಂದೇಗುರುವೆಂದು ತಿಳಿಯಲಾಗಿದೆ.

೨) **ಲಘುವೆಂದು ಗುರುತಿಸಬೇಕಾದ ಅಕ್ಷರಗಳು :**

i) **ಹ್ರಸ್ವಾಕ್ಷರಗಳು :** ∪ ∪ ∪ ∪ ∪ ∪ ∪ ∪ ∪

ಉದಾ: **ಅ, ಇ, ಉ ಕ ನ ಕ ಕ ಡ ಜ**

ii) **ಒತ್ತಕ್ಷರ** (ದ್ವಿತ್ವಾಕ್ಷರಗಳು): ∪ ∪ —∪ ∪

ಉದಾ: **ಯ್ಯ ದ್ರ ಅಕ್ಕ ಕ್ಕು**

iii) ಒತ್ತಕ್ಷರವನ್ನು ತೇಲಿಸಿ ಉಚ್ಚರಿಸುವಅಕ್ಷರಗಳು **'ಶಿಥಿಲದ್ವಿತ್ವ'**(೧) ವೆನ್ನುತ್ತೇವೆ. ಈ ಶಿಥಿಲದ್ವಿತ್ವಾಕ್ಷರಗಳ **ಹಿಂದಿನದ್ದು ಲಘು**ವೆಂದು ತಿಳಿಯಬೇಕು.

---

(೧) ಅಮರ್ದು, ಎರ್ದೆ, ಕರ್ದುಂಕು, ನೆಗಳ್ಗೆ, ಕೊನರ್ಗೆ, ಅಗಳ್ಗಳು, ನೆಗಳ್ಗಳು, ಕುಳಿರ್ಗಾಳಿ, ಅಲರ್ದ, ಬೆಮರ್ತ ಇತ್ಯಾದಿಶಬ್ದಗಳು 'ಶಿಥಿಲದ್ವಿತ್ವ'ಗಳೆನಿಸುತ್ತವೆ.

ಉದಾ : ∪–　　∪　　∪
ಕುಳಿರ್ಗಾಳಿ　ಅಲರ್ದಂ　ಬೆಮರ್ತ

ಗಣಗಳು :

'ಗಣ'ವೆಂದರೆ **ಗುಂಪು** ಎಂದರ್ಥ. ನಿಯತವಾದ ಮಾತ್ರೆ, ಅಕ್ಷರ, ಅಂಶಗಳ ಸಮೂಹವನ್ನೇ **'ಗಣ'**ವೆನ್ನುತ್ತೇವೆ. ಈ ಗಣಗಳೇ ಪದ್ಯದ **ಆಕಾರಸಾಮಗ್ರಿ**. ಅವು ಪದ್ಯ ನಿರ್ಮಿಸುವ ಘಟಕಗಳು. ಗಣಗಳಲ್ಲಿ ಮೂರು ವಿಧ : **i. ಮಾತ್ರಾಗಣ ii. ಅಕ್ಷರಗಣ iii. ಅಂಶಗಣ.**

i. ಮಾತ್ರಾಗಣ : ನಿರ್ದಿಷ್ಟವಾದ ಮಾತ್ರೆಗಳ ಸಮೂಹವನ್ನು **'ಮಾತ್ರಾಗಣ'**ವೆನ್ನುತ್ತೇವೆ. ಮೂರು ರೀತಿಯ ಮಾತ್ರಾಲಯದ ಗಣಗಳುಂಟು:

i) ಮೂರು ಮಾತ್ರೆಗಳಗಣ : (೩ ಪ್ರಕಾರ)
∪ ∪ ∪　　– ∪　　∪ –
೧) ನಿ ನ ಗೆ, ೨) ಸೋಗೆ, ೩) ಮರಂ

ii) ನಾಲ್ಕು ಮಾತ್ರೆಯಗಣ : (೫ ಪ್ರಕಾರ)
೧) ∪∪∪∪ **೨)** – ∪∪ **೩)** ∪ – ∪ **೪)** ∪∪– **೫)** – –

iii) ಐದು ಮಾತ್ರೆಯಗಣ : (೮ ಪ್ರಕಾರ)
೧) ∪∪∪∪∪ **೨)** –∪∪∪ **೩)** – –∪ **೪)** ∪∪–∪
೫) ∪∪∪– **೬)** – –∪ **೭)** ∪ – – **೮)** –∪–

ಈ ಮಾತ್ರಾಗಣಗಳ ಪದ್ಯಗಳಲ್ಲಿ **ಒಂದು ಗುರುವಿನ ಎರಡು ಮಾತ್ರೆಗಳನ್ನು** ಎರಡುಗಣಗಳಿಗೆ ಸೇರಿಸಿ ಗಣಗಳೆಂದು ವಿಂಗಡಿಸಿಕೊಳ್ಳಬಾರದು. ಹೀಗೆ ಹಂಚಿಕೊಡುವ ರೀತಿಯಲ್ಲಿ ಪದ್ಯದ ಪದರಚನೆಯೂ ಇದ್ದರೆ **'ಲಯ'** ತೊಡರುತ್ತದೆ.

ಉದಾ. – ∪ – ∪ – –

ಚಂ ದ ನಂ ಗ ಳಂ　ಇಲ್ಲಿ **'ನಂ'** ವರ್ಣದ ಎರಡು ಮಾತ್ರೆಗಳನ್ನು ಮೂರು ಮಾತ್ರೆ **ಎರಡುಗಣ**ಗಳೆಂದು, ಹಿಂದಿನ ಗಣಕ್ಕೆ ಒಂದುಮಾತ್ರೆ, ಮುಂದಿನ ಗಣಕ್ಕೆ ಒಂದುಮಾತ್ರೆಯೆಂದು ಪರಿಗಣಿಸಬಾರದು.

ಈ ಮಾತ್ರಾಗಣವುಳ್ಳ ಛಂದೋರೂಪಗಳು-**ಕಂದಪದ್ಯ, ಷಟ್ಪದಿ, ರಗಳೆ** ಇತ್ಯಾದಿ ವಿವಿಧ ಹೊಸಗನ್ನಡ ಪ್ರಕಾರಗಳು. ಇವುಗಳಲ್ಲಿ **(ಕಾಲಲಯ)** ಮಾತ್ರಾಲಯವಿರುತ್ತದೆ.

ii. ಅಕ್ಷರಗಣ (ವರ್ಣಗಣ)ಗಳು :

ಮೂರು ಮೂರುಅಕ್ಷರಗಳ ಸಮೂಹ **'ಅಕ್ಷರಗಣ'** ವೆನಿಸುತ್ತವೆ. ಇವು ೮ ಪ್ರಕಾರವಾಗಿವೆ. ಇವುಗಳನ್ನು ಗುರುತಿಸಲು ಪ್ರಸಿದ್ಧವಾದ ಸೂತ್ರವಿದೆ **(೧ ನೆಯ ವಿಧಾನ)**.

'ಯ ಮಾ ತಾ ರಾ ಜ ಭಾ ಸ ಲ ಗಂ'

ಇಲ್ಲಿ ಮೊದಲ ವರ್ಣ ಮೊದಲುಗೊಂಡು [illegible] ಅಕ್ಷರಗಳು ಗಣಗಳ ಹೆಸರನ್ನು ಸೂಚಿಸುತ್ತವೆ. ಆ ಗಣಗಳ ಸ್ವರೂಪ ತಿಳಿಯಲು ಮೊದಲಿನಿಂದ ಮೂರು ಅಕ್ಷರಗಳನ್ನು ತೆಗೆದು, ಅವುಗಳಿಗೆ ಲಘು ಗುರು ಚಿಹ್ನೆಗಳನ್ನು ಹಾಕಿ ನೋಡಿದರೆ, ಆ ಗಣಸ್ವರೂಪ ಅರಿವಿಗೆ ಬರುತ್ತದೆ. ಹೀಗೇ ಒಂದು ಗಣದ ಸ್ವರೂಪ ತಿಳಿದ ಮೇಲೆ, ಆ ಗಣ ಸೂಚಕ ಅಕ್ಷರ ಬಿಟ್ಟು ಮುಂದಿನ ಮೂರು ಮೂರು ಅಕ್ಷರಗಳನ್ನು ಹಾಗೆಯೇ ಹಿಂಗಡಿಸಿ ಸ್ವರೂಪವನ್ನು ತಿಳಿಯುತ್ತ ಹೋಗಬೇಕು. ಹೀಗಿದೆ :

'ಯಮಾತಾ ಮಾತಾರ ತಾ ರಾ ಜ ಭಾ ನ ಸಲಗಂ'

U – – – – – – – U – U – U – U – U U U U U U

ಯಮಾತಾ, ಮಾತಾರಾ, ತಾರಾಜ, ರಾಜಭಾ, ಜಭಾನ, ಭಾನಸ, ನಸಲ, ಸಲಗಂ

ಅಥವಾ ಈ ಕೆಳಗಿನ ಪಂಕ್ತಿಗಳನ್ನು ಕಂಠಪಾಠ ಮಾಡಿಯೂ ತಿಳಿಯಬಹುದು **(೨ ನೆಯ ವಿಧಾನ)**

ಗುರು ಲಘುಗಳ ಸ್ಥಾನ		**ಗಣಗಳ ಹೆಸರು**		**ಸ್ವರೂಪ**
'ಗುರು '	-	ಮಗಣ	–	– – –
'ಲಘು ಮೂರಿರೆ'	-	ನಗಣ	–	U U U
'ಗುರು '	-	ಭಗಣ	–	– U U
'ಲಘು ಮೊದಲಲಿ'	-	ಯಗಣ	–	U – –
'ಗುರು '	-	ಜಗಣ	–	U – U
'ಲಘು ನಡುವಿರೆ'	-	ರಗಣ	–	– U –
'ಗುರು '	-	ಸಗಣ	–	U U –
'ಲಘು ಕಡೆಯಲ್ಲಿ'	-	ತಗಣ	–	– – U

ಸುಲಭವೆನಿಸುವ **ಮೂರನೆಯ ವಿಧಾನ : ಭ ಜ ಸ, ಯ ರ ತ, ಮ ನ**

ಭ ಜ ಸ, ಯ ರ ತ, ಮ ನ ಇಲ್ಲಿ ಮೊದಲನೆಯ ಸ್ಥಾನದಲ್ಲಿ ಗುರು ಬರುವುದು ಹಾಗೆ ಎರಡನೆಯ ಮತ್ತು ಮೂರನೆಯ ಸ್ಥಾನಗಳಲ್ಲಿ ಗುರು ಬರುವುದನ್ನು ಕ್ರಮವಾಗಿ **ಭ ಜ ಸ** ಎಂದು, ಅದೇ ಸ್ಥಾನಗಳಲ್ಲಿ ಲಘು ಬರುವುದನ್ನು **ಯ ರ ತ** ಎಂದು, ಕ್ರಮವಾಗಿ ಮೂರು ಸ್ಥಾನಗಳಲ್ಲಿ ಗುರು, ಲಘು ಬರುವುದನ್ನು **'ಮ'** ಗಣ **'ನ'** ಗಣ ಎಂದು ತಿಳಿಯಬಹುದು :



ಸಂಸ್ಕೃತದಿಂದ ಕನ್ನಡಕ್ಕೆ ಬಂದಿರುವ **'ಖ್ಯಾತಕರ್ನಾಟಕ'** ವೃತ್ತಗಳೆನಿಸಿರುವ **'ಆರು**

ವೃತ್ತ'ಗಳಲ್ಲಿ ಈ ಗಣಗಳನ್ನು ಕಾಣಬಹುದು. ಇವುಗಳ ಲಯದಲ್ಲಿ ಜಗ್ಗಾಟವಿರುತ್ತದೆ. ಇಲ್ಲಿ **ಸಂಗೀತ ಲಯ**ವಿರುತ್ತದೆ. ಹೀಗಾಗಿ ಕನ್ನಡಕ್ಕೆ ಹೊಂದಿಕೊಳ್ಳುವ ಕೆಲವೇ ಸಂಸ್ಕೃತ ವೃತ್ತಗಳುಮಾತ್ರ ಕನ್ನಡದಲ್ಲಿ ಬಳಕೆಯಲ್ಲಿವೆ.

iii. **ಅಂಶಗಣಗಳು : (ದೇವಗಣ / ತ್ರಿಮೂರ್ತಿ**ಗಣ) ಈ ಗಣಗಳಲ್ಲಿ ನಿರ್ದಿಷ್ಟ ಅಂಶಗಳ ಸಮೂಹವಿರುತ್ತದೆ. ಈ ಅಂಶಗಳುಳ್ಳವು **'ಅಂಶಗಣ'** ವೆನಿಸುತ್ತವೆ. ಇಲ್ಲಿ ಮಾತ್ರೆ, ಅಕ್ಷರಗಳೆರಡನ್ನೂ ಒಳಗೊಂಡು ಈ ವಿಶಿಷ್ಟಗಣಗಳಾಗಿವೆ. ಇವು ಕನ್ನಡದಮೂಲ (ಅಚ್ಚಗನ್ನಡ) ಛಂದೋರೂಪಗಳಲ್ಲಿವೆ. ಈ ಛಂದೋರೂಪಗಳಲ್ಲಿ **'ರಾಗಲಯ'** ವಿರುತ್ತದೆ. ಹೀಗಾಗಿ ಗುರುವೂ ರಾಗಕ್ಕನುಸಾರವಾಗಿ ಒಂದು ಅಂಶವಾಗಬಹುದು. ಹಾಗೆಯೇ ಲಘುವೂ ಒಂದು ಅಂಶವಾಗುತ್ತದೆ. ಅಂಶಗಣಗಳಲ್ಲಿ ಮೂರುವಿಧಗಳಿವೆ.

೧) **ಬ್ರಹ್ಮಗಣ (ಎರಡು ಅಂಶ**ಗಳುಳ್ಳದ್ದು) ಮಾತ್ರೆಗಳ ಪ್ರಮಾಣದಲ್ಲಿ **೩ ರಿಂದ ೪ ಮಾತ್ರೆಯುಳ್ಳವು.** ಇದು **ನಾಲ್ಕು** ರೂಪಗಳಾಗಿವೆ.

೨) **ವಿಷ್ಣುಗಣ (ಮೂರುಅಂಶ**ಗಳುಳ್ಳದ್ದು) ಐದರಿಂದ **ಆರುಮಾತ್ರಾ** ಪ್ರಮಾಣವುಳ್ಳವು. ಇದರಲ್ಲಿ **ಎಂಟು ರೂಪ**ಗಳನ್ನು ನೋಡಬಹುದು.

೩) **ರುದ್ರಗಣ (ನಾಲ್ಕು ಅಂಶ**ಗಳುಳ್ಳದ್ದು) ಆರರಿಂದ **ಎಂಟುಮಾತ್ರಾ** ಪ್ರಮಾಣ ವಿರುತ್ತದೆ. **ಹದಿನಾರು ರೂಪ**ಗಳನ್ನು ನೋಡಬಹುದು.

ಈ ಅಂಶಗಣಗಳನ್ನು ಗುರುತಿಸುವ ಬಗೆ : ಗಣದ **ಆದಿಯಲ್ಲಿರುವ ಒಂದು ಗುರು, ಇಲ್ಲವೆ ಎರಡು ಲಘು**ಗಳಿಗೆ ಒಂದು ಅಂಶವೆಂದು ತೀರ್ಮಾನಿಸಬೇಕು. ನಂತರ ಬರುವ ಆ ಗಣದ ಅಕ್ಷರ ಲಘುವಾಗಿರಲಿ ಗುರುವಾಗಿರಲಿ (ಆ ಗಣ ಮುಗಿವವರೆಗೆ) ಒಂದೊಂದು ಅಕ್ಷರವನ್ನೂ ಒಂದು ಅಂಶವೆಂದು ಪರಿಗಣಿಸಬೇಕು. ಉದಾ :

ಅ) **ಕಮ|**ಲ, **ವಿಮ|**ಲ, **ಸುಜ|**ಲ - ಇಲ್ಲಿ ಶಬ್ದದಆದಿಯ ಮೊದಲ ಎರಡು ಲಘುಗಳಿಗೆ ಒಂದಂಶವೆಂದಾದರೆ, ಮುಂದೆ ಬರುವ ಒಂದು ಲಘುವಿಗೂ ಒಂದಂಶ. ಇಲ್ಲಿನಪ್ರತಿಶಬ್ದಗಳಲ್ಲಿ ಎರಡು ಅಂಶಗಳ **'ಬ್ರಹ್ಮಗಣ'** ಗಳಿವೆ.

ಆ) **ಕಾ|ನ|ನ|, ಬೇ|ವೂ|ರು|** - ಗಣದ ಶಬ್ದದಆದಿಯ ಮೊದಲ ಗುರು ಒಂದು ಅಂಶವಾದರೆ, ಮುಂದಿನ ಒಂದೊಂದು ಅಕ್ಷರಕ್ಕೂ ಗುರುವಾಗಲಿ ಲಘುವಾಗಲಿ ಆ ಒಂದು ಅಂಶವೆಂದು ತಿಳಿಯಲಾಗಿದೆ. ಈ ಎರಡುಶಬ್ದಗಳಲ್ಲಿ ಮೂರು ಅಂಶಗಳ ಎರಡು **'ವಿಷ್ಣುಗಣ'**ಗಳಾಗಿವೆ.

ಇ) **ಮೌ|ನ|ದ|ಲ್ಲಿ| ಬೇ|ಗೂ|ರಿ|ನ|**- ಇಲ್ಲೆಲ್ಲಾ ಮೇಲಿನಂತೆ ವಿಂಗಡಿಸಲಾಗಿದೆ. ಹೀಗೇ ನಾಲ್ಕು ಅಂಶಗಳವರೆಗೆ ಪರಿಗಣಿಸಲಾಗಿದೆ. ಎರಡೂ ಶಬ್ದಗಳಲ್ಲಿ ನಾಲ್ಕು ಅಂಶಗಳ ಎರಡು **'ರುದ್ರಗಣ'** ತೋರುತ್ತವೆ.

ಇವಕ್ಕೆ ಪೂರಕವಾಗಿ **ತ್ರಿಪದಿ, ಸಾಂಗತ್ಯಗಳ** ಪ್ರಸ್ತಾರವನ್ನು ನೋಡುವುದು.

ಅಂಶಗಣಗಳು ಮಾತ್ರಾಗಣಗಳಾಗಿ ಪರಿವರ್ತನೆ :

ದೇಸೀಯ ಛಂದಸ್ಸುಗಳೆಂದು ಪ್ರಸಿದ್ಧವಾಗಿರುವ ತ್ರಿಪದಿ, ಷಟ್ಪದಿ, ಸಾಂಗತ್ಯ, ಪಿರಿಯಕ್ಕರ ಇವು ಮೂಲದಲ್ಲಿ ಮೇಲ್ಕಂಡ **ಅಂಶಗಣ**ಗಳಿಂದಲೇ ಕೂಡಿದ್ದವು. ಕ್ರಮೇಣ ಮೊದಲ ಗುರುವಿನಅಂಶದ ಸ್ಥಾನದಲ್ಲಿ ೨ ಲಘುಬಳಕೆ ಪ್ರಾರಂಭವಾಯ್ತು. ಹೀಗೆ ಅಂಶಗಣಾತ್ಮಕವಾದವು ಮಾತ್ರಾರೂಪ ವಾಗಲಾರಂಭಿಸಿದವು. ೨, ೩, ೪ ಅಂಶಗಳ ಗಣಗಳ ಸ್ಥಾನದಲ್ಲಿ ೪, ೬, ೮ ಮಾತ್ರಾಗಣಗಳು ಬಂದವು. ಆದರ ಗುರುತಾಗಿ ಆದಿಪ್ರಾಸವು ಉಳಿದುಕೊಂಡೇ ಬಂದಿದೆ. ಹೀಗಾಗಿ ಬದಲಾವಣೆ ಹಂತದಲ್ಲಿರುವ ತ್ರಿಪದಿ, ಸಾಂಗತ್ಯ ಇವುಗಳ ಲಕ್ಷಣಗಳ ಗೊಂದಲಕಾಣುವುದುಂಟು.

ಈ ಗಣದ ಛಂದೋರೂಪಗಳ ಲಯದ ವೈಶಿಷ್ಟ್ಯ :

ಇಲ್ಲಿನ ಲಯವು **'ರಾಗಲಯ'**. ರಾಗಕ್ಕನುಗುಣವಾಗಿ ಇಲ್ಲಿನ ಗುರುವನ್ನೂ ಲಘುವಿನಂತೆ ಮೊಟಕಾಗಿ ಉಚ್ಚರಿಸುವರು. ಹೀಗೆಯೇ ಲಘುವೂ ಗುರುವಿನಂತೆ ಎಳೆದು ಉಚ್ಚರಿಸಲ್ಪಡುವವು. ಹೀಗಾಗಿ ತ್ರಿಪದಿಯೊಂದನ್ನು ಹಲವರು ಹಲವು ಪ್ರಕಾರವಾಗಿ ಹಾಡಬಲ್ಲರು. ಮೂರುಅಂಶಗಳ ಲಯಗಳು ಕನ್ನಡದಲ್ಲಿ ಹೆಚ್ಚು ಹೊಂದಿಕೊಳ್ಳುವವಾದ್ದರಿಂದ **ವಿಷ್ಣುಗಣಗಳ ಪ್ರಚುರತೆ** ಹೆಚ್ಚು. ಉದಾ:

|
ಸಾಮಿ ನನ್ನಯ ರಥವೇರಿ ಬರುವಾಗ
|
ನಾನೆದ್ದು ಕಯ್ಯ ಮುಗಿದೇನು

(-)- ಗೆರೆ ಎಳೆದ ಕಡೆಗಳಲ್ಲಿ ಲಘುವನ್ನೂ ಗುರುವಿನಂತೆ ಎಳೆದು ವಾಚಿಸಲಾಗುತ್ತದೆ.
(|)- ಗೆರೆ ಎಳೆದಲ್ಲಿ ಗುರುವನ್ನು ತೇಲಿಸಿ ಲಘುವಿನಂತೆ ಮೊಟಕಾಗಿ ಹಾಡುವ ರೂಢಿಯಿದೆ.

i. ಮಾತ್ರಾಗಣದ ಕೆಲವು ಛಂದೋರೂಪಗಳು :

೧) **ಕಂದಪದ್ಯ** : ಸಂಸ್ಕೃತದ ಆರ್ಯಾ ಛಂದೋರೂಪವು ಪ್ರಾಕೃತದ ಮೂಲಕ ಕನ್ನಡದಲ್ಲಿ ಬಳಕೆಯಲ್ಲಿದೆ. ಅದನ್ನು **ಕಂದಪದ್ಯ**ವೆಂದು ಕರೆಯಲಾಗುತ್ತದೆ.

ಲಕ್ಷಣ : ೧) ಇದು ಎರಡು ಅರ್ಧಸಮಗಳಿಂದ ಕೂಡಿದ, ನಾಲ್ಕು ಪಾದಗಳ ಪದ್ಯರೂಪ.

೨) ಒಂದು ಮತ್ತು ಮೂರನೆಯ ಪಾದಗಳು ಸಮ, ನಾಲ್ಕುಮಾತ್ರೆಯ ಮೂರು ಗಣಗಳಿರುತ್ತವೆ. (೪ x ೩=೧೨ ಮಾತ್ರೆ)

೩) ಎರಡು ಮತ್ತು ನಾಲ್ಕನೆಯ ಪಾದಗಳು ಸಮ, ನಾಲ್ಕುಮಾತ್ರೆಯ ಐದು ಗಣಗಳಿರುತ್ತವೆ. (೪x೫=೨೦ ಮಾತ್ರೆಗಳು).

೪) ಪದ್ಯಾರ್ಧದ ವಿಷಮಗಣ (೧, ೩, ೫, ೭) ಗಳಲ್ಲಿ ಮಧ್ಯೆ ಗುರುಪಿನ (∪–∪) ಗಣ **ಬರಬಾರದು.**

೫) **೬ ನೆಯ** ಸ್ಥಾನದಲ್ಲಿನಗಣ ಮಧ್ಯೆಗುರು ಇಲ್ಲವೆ, ಸರ್ವಲಘುಗಳ ಗಣ (∪–∪ / ∪∪∪∪) ವಿರಬೇಕು.

೬) ೮ ನೆಯ ಸ್ಥಾನದ ಗಣವು (∪∪– / – – –) ಗಣಗಳೆ ಬರಬೇಕು. ಒಟ್ಟು **೬೪** ಮಾತ್ರೆಗಳಿರುತ್ತವೆ. (ಇಲ್ಲಿನ ಗಣವಿಧಿ, ನಿಷೇಧಗಳು ಗತಿ ವೈಚಿತ್ರ್ಯಕ್ಕೆ ಅನುಗುಣವಾದವು.)

ಪ್ರಸ್ತಾರ ಉದಾ:

∪ ∪ – | – ∪ ∪ | – ∪ ∪
ಕುರುರಾ | ಜಂ ತೊಡೆ | ವೇನೆಗೆ **೪ x ೩** = ೧೨

∪∪∪∪ | ∪ ∪ – | ∪ ∪ ∪ ∪ | –∪∪ | – –
ನರ ಳನೆ | ಕುರುವಾ | ದ ತೊಡೆ ಯ | ಬೇನೆಗೆ | ಗಂಡರ್॥ = ೨೦

∪∪– | –∪∪ | ∪∪–
ನರಳಲ್ | ತಕ್ಕುದೆ | ಅರಸಂ = ೧೨

∪ – ∪ | – – | ∪ – ∪ | – ∪ ∪ | – –
ವಿರೋಧಿ | ಯಿಂದಾ | ದಮಾನ | ಹಾನಿಗೆ | ನೊಂದಂ ॥ = ೨೦

ಒಟ್ಟು = ೬೪

ವಿಶೇಷತೆ :

೧) ಕಂದಪದ್ಯ ಹಳಗನ್ನಡಕ್ಕೆ ಹೊಂದಿಕೊಂಡಿರುವುದು.

೨) ಹೊಸಗನ್ನಡದಲ್ಲಿ ಕಂದಪದ್ಯರಚನೆ ಕಷ್ಟಸಾಧ್ಯ. ಹೀಗಾಗಿ ಕೆಲವು ಪ್ರಯೋಗಗಳಲ್ಲಿ ನಿಯಮಗಳ ಜಾರಿಕೆ, ವ್ಯತ್ಯಾಸಗಳಾಗಿವೆ.

೩) ನಾನಾವಿಧವಾದ ಗತಿವೈಚಿತ್ರ್ಯಗಳನ್ನು ಲೀಲಾಜಾಲವಾಗಿ ಹೊಮ್ಮಿಸುವಶಕ್ತಿ ಕಂದಪದ್ಯಕ್ಕುಂಟು.

೪) ಕಂದಗಳಲ್ಲಿ ಚಿತ್ರಗಳನ್ನು ಕಣ್ಣಿಗೆ ಕಟ್ಟುವಂತೆ ಅಲಂಕಾರಗಳಿಂದ ಚಿತ್ರಿಸಬಹುದು.

೫) ಇದು ಆದಿಪ್ರಾಸದೊಂದಿಗೆ ಹಳಗನ್ನಡ ಸಾಹಿತ್ಯದಲ್ಲಿ ವಿಶೇಷಸ್ಥಾನ ಪಡೆದಿದೆ.

೨) ಷಟ್ಪದಿಗಳು : ಸಾಮಾನ್ಯಲಕ್ಷಣ :

೧) **ಆರುಪಾದ**ಗಳಿಂದ ಕೂಡಿರುತ್ತವೆ.

೨) ೧, ೨, ೪, ೫ ನೆಯ ಪಾದಗಳು ಸಮಾನವಾಗಿರುತ್ತವೆ. ಹಾಗೆಯೇ ೩-೬

ನೆಯ ಪಾದಗಳು ಸಮಾನವಾಗಿರುತ್ತವೆ.

೩) **೩-೬** ನೆಯ ಪಾದಗಳಲ್ಲಿ ೧-೨ ನೆಯ ಪಾದದ ಗಣಗಳ ಒಂದೂವರೆಯಷ್ಟು ಗಣಗಳಿದ್ದು, ಕೊನೆಯಲ್ಲಿ ಒಂದು ಗುರುವಿರುತ್ತದೆ. **(ಲಘುವಿದ್ದರೂ ಗುರುವೆಂದು ನಿರ್ಧರಿಸಬೇಕು)**. ಲಯೋಚಿತ ಪದಗಳ ಆಯ್ಕೆ ಈ ಪದ್ಯಗಳಲ್ಲಿರುತ್ತದೆ.

ಈ ನಿಯಮಗಳು ಎಲ್ಲ ಷಟ್ಪದಿಗಳಲ್ಲಿ ಸಾಮಾನ್ಯವಾಗಿರುತ್ತದೆ. ಮೂಲದಲ್ಲಿ ಕೇವಲ **ಒಂದು ಷಟ್ಪದ**ಯಿದ್ದು, **ವಿಸ್ತಾರ ಹಾಗೂ ಲಯದಬಳುಕನ್ನು ತರಲು** ಪ್ರಯತ್ನಗಳಾದವು. ಹೀಗಾಗಿ **ಹತ್ತುಷಟ್ಪದಿ**ಗಳನ್ನು ಹೆಸರಿಸುತ್ತಾರೆ. ಪ್ರಸಿದ್ಧವಾದ **ಆರುಅಗತ್ಯ** ಷಟ್ಪದಿಗಳನ್ನು ಕೊಡಲಾಗಿದೆ : ಇವು ವಿಸ್ತಾರದಲ್ಲಿ ಒಂದಕ್ಕಿಂತ ಮತ್ತೊಂದು ದೊಡ್ಡದಾಗಿವೆ. **೧) ಶರಷಟ್ಪದಿ ೨) ಕುಸುಮಷಟ್ಪದಿ ೩) ವಾರ್ಧಕ ಷಟ್ಪದಿ ೪) ಭೋಗಷಟ್ಪದಿ ೫) ಭಾಮಿನಿ ಷಟ್ಪದಿ ೬) ಪರಿವರ್ಧಿನಿ.**

೧) ಶರಷಟ್ಪದಿ : ಮೇಲೆ ಹೇಳಿದ ಸಾಮಾನ್ಯ ಲಕ್ಷಣಗಳಿರುತ್ತವೆ+ವಿಶೇಷ ಲಕ್ಷಣ :-

೧) **೧, ೨, ೪, ೫** ನೆಯ ಪಾದಗಳಲ್ಲಿ ನಾಲ್ಕುಮಾತ್ರೆಯ ಎರಡು ಗಣಗಳಿರುತ್ತವೆ.

೨) **೩-೬** ನೆಯ ಪಾದಗಳಲ್ಲಿ ನಾಲ್ಕು ಮಾತ್ರೆಯ ಮೂರುಗಣಗಳು, ಒಂದು ಗುರುವೂ ಇರುತ್ತವೆ. ಇದು ವಿಸ್ತಾರದಲ್ಲಿ ಕಿರಿಯಷಟ್ಪದಿಯಾಗಿದೆ.

ಪ್ರಸ್ತಾರ : ಉದಾ:
(ಅರ್ಧಪದ್ಯ)

–UU	UU UU			
ಈಶನ	**ಕರುಣೆಯ**			೪x೨ = ೮
–UU	UU UU			
ನಾಶಿ ಸಿ	**ವಿನಯದಿ**			
–U U	– U U	–UU	–	
ದಾಸನ	ಹಾಗೆಯೆ	ನೀ ಮನ	**ವೇ**	೪x೩=೧೨+೧=೧೩

೨) ಕುಸುಮ ಷಟ್ಪದಿ : + ವಿಶೇಷಲಕ್ಷಣ :

೧) **೧, ೨, ೪, ೫** ನೆಯ ಪಾದಗಳಲ್ಲಿ **ಐದು ಮಾತ್ರೆಯ ಎರಡು** ಗಣಗಳು ಬರುತ್ತವೆ.

೨) ೩-೬ ನೆಯ ಪಾದಗಳಲ್ಲಿ ಐದುಮಾತ್ರೆಯ **ಮೂರು ಗಣ**ಗಳು, ಒಂದು ಗುರುವಿರುತ್ತದೆ. (ನಾಲ್ಕು ಮಾತ್ರೆಯ ಲಯ)

ಪ್ರಸ್ತಾರ : ಉದಾ:
(ಅರ್ಧಪದ್ಯ)

UUUUU	– – U			
ಅವರವರ	**ಭಾವಕ್ಕೆ**			೫x೨ = ೧೦
UUUUU	UUU–			
ಅವರವರ	**ಭಕುತಿಗಂ**			
UUUUU	–U UU	– – U	–	
ಅವರವರಿ	ಗೆಲ್ಲ ಗುರು	ನೀನೊಬ್ಬ	**ನೇ**	೫x೩=೧೫+೧=೧೬

೩) **ಭೋಗಷಟ್ಪದಿ** : + ವಿಶೇಷ ಲಕ್ಷಣ : (ಅತ್ಯಂತಪ್ರಸಿದ್ಧ ಛಂದೋರೂಪ)

೧) ೧, ೨, ೪, ೫ ನೆಯ ಪಾದಗಳಲ್ಲಿ ೩ ಮಾತ್ರೆಯ ೪ ಗಣಗಳಿರುತ್ತವೆ.

೨) ೩, ೬ ನೆಯ ಪಾದಗಳಲ್ಲಿ ೩ ಮಾತ್ರೆಯ ೬ ಗಣಗಳೂ ಒಂದು ಗುರುವು ಬರುತ್ತದೆ. (ಕನಿಷ್ಠ ೩ ಮಾತ್ರೆಯ ಲಯವಿದೆ. ಗಣಗಳಲ್ಲಿ ದ್ವಿಗುಣತೆ ಇದೆ).

ಪ್ರಸ್ತಾರ : ಉದಾ: U U U | – U | – U | – U

(ಅರ್ಧಪದ್ಯ) **ಮರೆಯು | ತಿದ್ದ | ಭಾಗ್ಯ | ವೆಲ್ಲ** ೩×೪=೧೨

U U U | – U | U U U | U U U

ಹರಿದು | ಹೋಯಿ | ತೆನುತ | ತಿರುಕ

U U U | – U | – U | – U | U U U | – U | –

ಮರಳಿ | ನಾಚಿ | ಪೋಗು | ತಿದ್ದ | ಮರುಳ | ನಂತೆ | **ಯೋ** =೨೦

೪) **ಭಾಮಿನೀ ಷಟ್ಪದಿ :** (ಅತ್ಯಂತಪ್ರಸಿದ್ಧ ಛಂದೋರೂಪ). +ವಿಶೇಷ ಲಕ್ಷಣ :

೧) ೧, ೨, ೪, ೫ ನೆಯ ಪಾದಗಳಲ್ಲಿ **ಮೂರು ಮಾತ್ರೆಯ ಗಣದಮುಂದೆ** ನಾಲ್ಕು ಮಾತ್ರೆಯ ಗಣದಂತೆ ಎರಡುಜೋಡಿ ಗಣಗಳಿರುತ್ತವೆ.

೨) ೩ ಮತ್ತು ೬ ನೆಯ ಪಾದಗಳಲ್ಲಿ ಮೂರರ ಮುಂದೆ ನಾಲ್ಕುಮಾತ್ರೆಯ ಗಣಗಳ **ಮೂರುಜೋಡಿ** ಗಣಗಳು, ಕೊನೆಯಲ್ಲಿ ಒಂದುಗುರು ಬರುತ್ತದೆ. (ಮೂರು ನಾಲ್ಕರ ಮಿಶ್ರಲಯ).

ಉದಾ: – U | U U – | U U U | – U U

ಪ್ರಸ್ತಾರ ದೇವ | ಹಗೆಯಾ | ಗಿರನು | ಕರ್ಣನಿ

– U | U U – | U U U | U U U U

ದಾವ | ಹದನೆಂ | ದರಿಯೆ | ಮನದಲಿ ೩,೪×೪=೧೪

– U | U U U U | – U | – U U | U U U | U U U U | –

ನೋವು | ಮಿಗುವುದು | ಕೈ ಗ | ಳೀ ಳವು | ತುಡುಕು | ವಡೆಧನು | **ವ**

೩,೪×೬+೧=೨೨

೫) **ಪರಿವರ್ಧಿನೀ ಷಟ್ಪದಿ :** +(ವಿಶೇಷ ಲಕ್ಷಣ) ಇದು ಶರಷಟ್ಪದಿಯ ವಿಸ್ತಾರರೂಪ.

೧) **೧, ೨, ೪, ೫** ನೆಯ ಪಾದಗಳಲ್ಲಿ **೪ ಮಾತ್ರೆಯ** ೪ ಗಣಗಳು ಬರುತ್ತವೆ.

೨) **೩** ಮತ್ತು **೬** ನೆಯ ಪಾದಗಳಲ್ಲಿ **೪ ಮಾತ್ರೆಯ** ೬ ಗಣಗಳೂ ಒಂದುಗುರು ಬರುತ್ತದೆ.

ಉದಾ : U U U U | – U U | U U U U | – U U |

ಪ್ರಸ್ತಾರ ದುರಿತವ | ನಂಬಳೆ | ವುದಕೆಪೊ | ಲಂಕೊಳೆ | ೪×೪=೧೬

UUUU | UUUU | – UU | U U – |
ಪರಿಕಲಿ | ಸಿದನವ | ದೋಹಳ | ಮನ್ಯತಂ | ೪×೪=೧೬
U U – | U U U U | UU UU | – – | – – | UU – | – |
ಪರಿಕಾ | ಲುದಕಮ | ದಕೆ ಕಳ | ವನ್ಯ | ಸ್ತ್ರೀ ಸಂ | ಗಮೆ ಗೆ | ಯ್ಮೆ =೨೫

೬) ವಾರ್ಧಕ ಷಟ್ಪದಿ : (ವಿಶೇಷ ಲಕ್ಷಣ) ಇದು ಕುಸುಮಷಟ್ಪದಿಯ ವಿಸ್ತಾರರೂಪ.

೧) ೧, ೨, ೪, ೫ ನೆಯ ಪಾದಗಳಲ್ಲಿ ೫ ಮಾತ್ರೆಯ ೪ ಗಣಗಳಿರುತ್ತವೆ.

೨) ೩ ಮತ್ತು ೬ ರಲ್ಲಿ ೫ ಮಾತ್ರೆಯ ೬ ಗಣಗಳೂ ಒಂದು ಗುರುವೂ ಇರುತ್ತದೆ.

ಪ್ರಸ್ತಾರ : ಉದಾ:

UU U U U | – – U | – – U | – – U |
ಪೊರಮಡುವ | ಭೂಪಾಲ | ನಂ ಕಂಡು | ಕಂಗೆಟ್ಟು | ೫×೪=೨೦
U UU UU | – U U U | UUUUU | U U –U |
ಮರುಗಿ ಬಸು | ರಂ ಹೊಸೆದು | ಬಸವಳಿದು | ಬಿಸುಸುಯ್ದು
U U – U | – – U | – – U | UUU– | U U U – | U U–U | – |
ಪೊರಮಟ್ಟು | ಬಾಯ್ಬಿಟ್ಟು | ಕೈನೀಡಿ | ಕರೆದುಕ | ಟ್ಟೊರಲಿ ಸೈ | ರಿಸಲಾರ | ದೆ |
=೩೨

೩) <u>ರಗಳೆ</u> : ಸಾಮಾನ್ಯಲಕ್ಷಣ :

೧) ಇದರಲ್ಲಿ ಪಾದಗಳ ಸಂಖ್ಯೆ ಇಷ್ಟೇಯಿರಬೇಕೆಂಬ ನಿಯಮವಿಲ್ಲ.

೨) ಪ್ರತಿಪಾದಗಳು ಸಮಾನವಾದ ಮಾತ್ರೆಗಳಿಂದ ಕೂಡಿರುತ್ತವೆ. ಆದ್ದರಿಂದಲೇ ಇದನ್ನು **'ಮಾತ್ರಾಸಮಕ'** ವೆಂದು ಕರೆಯುತ್ತಾರೆ.

೩) ಎರಡೆರಡು ಪಾದಗಳಲ್ಲಿ ಆದಿಪ್ರಾಸ ಐಚ್ಛಿಕವಾಗಿದ್ದು, ಅಂತ್ಯಪ್ರಾಸವೂ ತೋರುತ್ತದೆ. ವಾಚನದಲ್ಲಿ ತಾಳಕ್ಕೆ ಹೊಂದಿಕೊಳ್ಳುವ ಗುಣವಿದೆ. ಇಲ್ಲಿನ ಲಯ ಪದಮೈತ್ರಿ ಎದ್ದುತೋರುತ್ತದೆ. ಇದು ಕಥೆಯ ಅಭಿವ್ಯಕ್ತಿಗೆ ಹೆಚ್ಚು ಉಪಯುಕ್ತವಾದುದು.

ವಿಶೇಷ ಲಕ್ಷಣ :

ರಗಳೆಯಲ್ಲಿ ಮೂರು ವಿಧಗಳಿವೆ. ೧) ಉತ್ಸಾಹರಗಳೆ (ಕಿರಿಯ ಪ್ರಮಾಣವುಳ್ಳದ್ದು) ೨) ಮಂದಾನಿಲ ರಗಳೆ (ಮಧ್ಯಮಪ್ರಮಾಣದ್ದು) ೩) ಲಲಿತ ರಗಳೆ (ಹಿರಿಯ ಪ್ರಮಾಣದ್ದು)

೧) ಉತ್ಸಾಹ ರಗಳೆ : ಮೇಲೆ ತಿಳಿಸಿದ ಸಾಮಾನ್ಯದ ಲಕ್ಷಣದ ಜೊತೆಗೆ ಈ ವಿಶೇಷ ಲಕ್ಷಣಗಳಿರುತ್ತವೆ.

೧ **ನೆಯ ಪ್ರಕಾರ :** ಪ್ರತಿಪಾದಗಳಲ್ಲಿ ೩ ಮಾತ್ರೆಯ ನಾಲ್ಕು ಗಣಗಳಿರುತ್ತವೆ.

೨ **ನೆಯ ಪ್ರಕಾರ :** ಪ್ರತಿಪಾದಗಳಲ್ಲಿ ೩ ಮಾತ್ರೆಯ **ಮೂರು ಗಣ** ಮತ್ತು ಒಂದು ಗುರು ಬರುತ್ತದೆ. (ಮೂರುಮಾತ್ರೆಯ ಲಯ)

೧ **ನೆಯ,** ಪ್ರಸ್ತಾರಕ್ಕೆ ಉದಾ:

– U | – U | – U | – U
ತುಂಬಿ | ಎಂಡಿ | ನಂತೆ | ಪಾ**ಡಿ**   ೩x೪=೧೨

– U | – U | – U | – U
ಜಕ್ಕ | ವಕ್ಕಿ | ಯಂತೆ | ಕೂ**ಡಿ**

೨ **ನೆಯ** ಪ್ರಸ್ತಾರಕ್ಕೆ ಉದಾ:

– U | U U U | – U | –
ಮಾವಿ | ನ ಡಿಯೊ | ಳಾ ಡು | **ತುಂ** | (ಗ) ೩x೩=೯+೨=೧೧

– U | – U | – U | –
ಪಾಡ | ನೆಯ್ದು | ಕೇಳು | **ತುಂ** (ಗ)

೨) ಮಂದಾನಿಲ ರಗಳೆ : (ಮೇಲ್ಕಂಡ ಸಾಮಾನ್ಯ ಲಕ್ಷಣವಿರುತ್ತದೆ)+ವಿಶೇಷಲಕ್ಷಣ:

೧ **ನೆಯ ಪ್ರಕಾರದಲ್ಲಿ :** **೪ ಮಾತ್ರೆಯ ನಾಲ್ಕು** ಗಣಗಳಿರುತ್ತವೆ.

೨ **ನೆಯ ಪ್ರಕಾರದಲ್ಲಿ :** **೩ ಮಾತ್ರೆಯ** ಗಣದಮುಂದೆ **ಐದು ಮಾತ್ರೆ** ಗಣಗಳಂತೆ **ಎರಡು ಜೋಡಿಯ** ಗಣಗಳಿರುತ್ತವೆ.

ಮಾತ್ರೆಗಳಸಂಖ್ಯೆ ಒಂದೇ ಆಗಿರುವುದರಿಂದ ಗಣವಿಭಜನೆಯಲ್ಲಿ ವ್ಯತ್ಯಾಸ ಮಾಡುವ ಅನುಕೂಲವಿದೆ. ಆದಿ-ಅಂತ್ಯ ಪ್ರಾಸಗಳಿರುತ್ತವೆ.

೧ **ನೆಯ** ಪ್ರಕಾರಕ್ಕೆ ಉದಾ:

– U U | – – | U U U U | – – |
ಆ**ಡು**ವ | ಗುಂಡ | ಯ್ಯನ ಪೊಸ | ನೃತ್ಯಂ |

– U U | U U – | – U U | – – |
ನೋ**ಡು**ವ | ಶಿವನಂ | ಮುಟ್ಟಿತು | ಸ**ತ್ಯಂ** | ೪x೪=೧೬

೨ **ನೆಯ** ಪ್ರಕಾರಕ್ಕೆ ಉದಾ:

– U | – U U U | U U U | – U – |
ಸುತ್ತ | ಲುಂ ನ ಲಿವ | ಪೊ ಸನ | ವಿಲ್ಲ **ಳಿಂ** |

– U | – U U U | U U U | – U – |
ಎತ್ತ | ಲುಂ ಪರಿವ | ಜರಿ ಪೊ | ನಲ್ಗ**ಳಿಂ** | ೩, ೫x೩=೧೬

೩) ಲಲಿತರಗಳೆ : ಮೇಲ್ಕಂಡ ಸಾಮಾನ್ಯ ಲಕ್ಷಣದಜೊತೆಗೆ ವಿಶೇಷವಾಗಿ ಪಾದವೊಂದಕ್ಕೆ ೫ ಮಾತ್ರೆಯ ನಾಲ್ಕು ಗಣಗಳಿರುತ್ತವೆ.

ಪ್ರಸ್ತಾರ ಉದಾ.:

– – U | – U – | U U – U | U U U – |
ನಿಂದಲ್ಲಿ | ನಿಂದಪೆಂ | ನಡೆದಲ್ಲಿ | ನಡೆದ**ಪೆಂ** |

– – ∪	– ∪ –	∪ ∪ – ∪	∪ ∪ ∪ –	
ಬಂದಲ್ಲಿ	ಬಂದಪೆಂ	ನುಡಿದಲ್ಲಿ	ನುಡಿದಪೆಂ	೫×೪=೨೦

ಹೊಸಗನ್ನಡದ ಮಾತ್ರಾಛಂದಸ್ಸಿನ ಪರಿಚಯ :

ಹಳಗನ್ನಡ ಪದ್ಯಕಾವ್ಯಗಳಲ್ಲಿ ಸಂಸ್ಕೃತದಿಂದ ಬಂದವೃತ್ತ, ಕಂದಗಳ ಪ್ರಚುರತೆ ಹೆಚ್ಚು. ನಡುಗನ್ನಡ ಸಾಹಿತ್ಯಗಳಲ್ಲಿ ಜಾನಪದೀಯ ಛಂದೋರೂಪಗಳೆನಿಸಿರುವ **ರಗಳೆ, ಷಟ್ಪದಿ, ದ್ವಿಪದಿ, ತ್ರಿಪದಿಗಳು** ತಮ್ಮವೈಭವವನ್ನು ತೋರಿಸಿದ್ದವು. ಆಧುನಿಕರಿಂದ ಇಂಗ್ಲೀಷ್ ಪ್ರಭಾವದೊಂದಿಗೆ ತಮ್ಮನೆಲೆಯನ್ನು ಕಂಡುಕೊಂಡು ನೂತನವೆನಿಸುವ ಪ್ರಯೋಗಗಳಾದುವು. ಕನ್ನಡ ಜಾಯಮಾನದ, ಭಾವಕ್ಕೆತಕ್ಕ ಆಧುನಿಕಛಂದೋರೂಪಗಳು ಹೆಚ್ಚಿನ ಪ್ರಯೋಗಗಳಾದವು. ಕವಿಗಳು ಕುತೂಹಲದ ಪ್ರಯೋಗಗಳನ್ನು ಮಾಡಿದರು.

'ಆಧುನಿಕತೆ'ಯೆಂದರೆ **ಹಳೆಯಲಯು ಹೊಸರೂಪು ಧಾರಣೆ** ಮಾಡಿದವೆನ್ನಬಹುದು. ಪ್ರಾಚೀನಕವಿಗಳ ಹೊಸಸಂಯೋಜನೆಗಳನ್ನು ಕಂಡ ಆಧುನಿಕ ಕವಿಗಳು ಹೊಂದಿಕೊಳ್ಳುವ **ಷಟ್ಪದಿ, ಅಕ್ಕರ, ರಗಳೆ**ಗಳ ೩, ೪, ೫ ಮಾತ್ರೆಯ ಲಯಗಳ ಜನಪ್ರಿಯತೆಯನ್ನು ಮನಗಂಡರು. ರಗಳೆಗಳಲ್ಲಿರುವ ೩, ೪, ೫ ಮಾತ್ರೆಗಳ ಲಯಗಳನ್ನು ಇದ್ದಂತೆ ಬಳಸಿದರು. ೬, ೭, ೮ ಮಾತ್ರೆಗಳ **(ಮಿಶ್ರಲಯ)** ವೈವಿಧ್ಯತೆಯನ್ನೂ ಪ್ರಯೋಗಗಳಲ್ಲಿ ಸಾಧಿಸಿದರು. ಜಾನಪದಛಂದದ ಹೊಸತನ ಕಂಡುಕೊಂಡು, ವಚನಗಳ ಗದ್ಯಲಯದ ಸೊಗಸನ್ನು ಅಳವಡಿಸಿಕೊಂಡರು. ಇಲ್ಲಿ ಅಷ್ಟು ವಿಸ್ತಾರವಾದ ಪ್ರಸ್ತಾಪ ಅಗತ್ಯವಿಲ್ಲ.

ಅವುಗಳ ಹೊಸತನ :

೧) ಭಾವಕ್ಕೆತಕ್ಕಂತೆ ಪಾದ, ಪದ್ಯಗಳಲ್ಲಿ ಗಣಸಂಖ್ಯೆ, ಗಾತ್ರಗಳಲ್ಲಿ ವ್ಯತ್ಯಾಸವಾದವು.

೨) ಮಾತ್ರೆ, ಪಾದಗಳ ಸಂಖ್ಯೆಯಲ್ಲಿ ಇಷ್ಟೇಇರಬೇಕೆಂಬ ಕಡ್ಡಾಯ ಸಡಿಲಿಸಿತು.

೩) ಪ್ರಾಸ ಕಡ್ಡಾಯವೆಂಬುದು ಸಡಿಲವಾಯ್ತು. ಹಿಡಿತಕ್ಕೆಸಿಕ್ಕುವ ಕಟ್ಟುಕಟ್ಟಳೆ ಗೋಚರವಾದವು.

೪) ಹೊಸಗನ್ನಡದ ಆರುವಿಧ ಲಯಗಳಲ್ಲಿ ಅನಿರೀಕ್ಷಿತ ಬೆರಗು ಕೊಡುವ ವೈವಿಧ್ಯತೆಗಳು ಬಂದವು.

ಮಹಾಛಂದಸ್ಸು :-(ಪ್ರಾತಿನಿಧಿಕವಾಗಿ)

ಏಕತಾನತೆ ಕಡಿಮೆಮಾಡಿ ಬಿಗಿನಿಯಮಗಳಿಂದ ಮಾತ್ರಸಂಖ್ಯೆ, ಗಣವಿನ್ಯಾಸ, ವಿರಾಮ ಸ್ಥಾನಗಳನ್ನು ಬದಲಾಯಿಸಿ ಸರಳರಗಳೆಯನ್ನೇ **'ಮಹಾಛಂದಸ್ಸಾಗಿ'** ಮಾರ್ಪಾಟು ಮಾಡಿಕೊಂಡರು. ಇದನ್ನು ಪರಿಷ್ಕರಿಸಿದ್ದೇನೆಂದು ಚಿತ್ರಾಂಗದಲ್ಲಿ (ಕುವೆಂಪು) : "ಐದೈದು ಮಾತ್ರೆಗಳಯಾಂತ್ರಿಕ ಲೆಕ್ಕಚಾರವನ್ನು ಮುರಿದು, ತುಂಡುಮಾಡಿ ಪ್ರಯೋಗಿಸಿದ್ದೇನೆ. ಗಣನಿಯಮಕ್ಕೆ ಒಂದೊಂದು ಪಾದಲೆಕ್ಕವಿಲ್ಲ, ಈ ವಾಕ್ಯವನ್ನೋ, ವಾಕ್ಯಖಂಡವನ್ನೋ ಮೂಲ ಮಾನವಾಗಿಟ್ಟುಕೊಂಡ್ದೇನೆಂದು ಹೇಳಿಕೊಂಡಿದ್ದಾರೆ. ಇಲ್ಲಿ ಯತಿ ಅರ್ಥನಾಸಾರವಾಗಿ

ಸ್ವಚ್ಛಂದವಾಗಿದೆ. ಅತಿನಿಯಮಬದ್ಧತೆಯನ್ನು ದೂರಮಾಡಿ, ಸ್ವಚ್ಛಂದತೆ ತರಲಾಯ್ತು. ಬಹುವಿಧವಾದ **'ಗಣಪರಿವೃತ್ತಿ'** (ಗಣ ಬದಲಾವಣೆ) ಬಂದಿದೆ. ಪಾದಗಳ ಅಕ್ಷರಗಳ ಮಿತಿಯಲ್ಲಿ ವ್ಯತ್ಯಾಸಗೊಂಡಿತು. ಕಥನಕ್ಕೆ ಹೊಂದಿಕೊಳ್ಳುವ, ಭಾವಕ್ಕೆ ತಕ್ಕಂತೆ **ಹಿಗ್ಗಿಸುವ, ಕುಗ್ಗಿಸುವ, ನಿಲ್ಲಿಸುವ ನಿಲುಗಡೆ**ಯನ್ನು ಕಂಡುಕೊಂಡರು. ಹೀಗಾಗಿ ಹಾಡಿಗೆ ಹೊಂದಿಕೊಳ್ಳುವ ರೂಪಗಳು ಬಂದವು.

'ಮಹಾಛಂದಸ್ಸು' ಲಕ್ಷಣ: ಇಲ್ಲಿ ಯಾವುದಾದರೊಂದು ಪಾದಗಣ ಪೂರ್ಣವಾಗಿ ವಿನ್ಯಾಸಕ್ಕೆ ಅರ್ಥಪೂರ್ಣವಾಗುವುದಿಲ್ಲ. ೧ ರಿಂದ ೧೫ ಪಾದಗಳವರೆಗೆ ಗಣವಿನ್ಯಾಸದ ಲೆಕ್ಕಾಚಾರ ನಿಂತರವಾಗಿ ಮುಂದುವರೆಯುತ್ತದೆ. ಹೀಗಾಗಿ **ಮಹಾಛಂದಸ್ಸು** ಎಂಬ ಅನ್ವರ್ಥ ಹೆಸರು ಬಂದಿತೆನ್ನಬಹುದು. ಇದನ್ನು **ಸಂಕೀರ್ಣರಗಳೆ** ಎಂಬುದು ಸರಿ ಎಂದು ವಿದ್ವಾಂಸರ ಅಭಿಪ್ರಾಯ. ಸಾಮಾನ್ಯವಾಗಿ ಮೇಲ್ನೋಟಕ್ಕೆ ಪಾದಗಳಲ್ಲಿ ೨೦ ಮಾತ್ರೆಗಳುಂಟು. ಕಡಿಮೆ ಮಾತ್ರಗಳಿದ್ದರೆ **ಪದ್ಮಗಣ,** ಇತ್ಯಾದಿ ಆಧುನಿಕ ಪರಿಕಲ್ಪನೆಗಳಿಂದ ತುಂಬಿಕೊಳ್ಳಬಹುದು. ಲಯ ವೈವಿಧ್ಯತೆ ಹೊಂದಿಕೊಳ್ಳುವುದು.

ಪ್ರಸ್ತಾರ ಉದಾ :

೩ ೪

– ∪ – –

ನೀಡ ವೇಳ್ಕುಂ ೩ ೭ ೩

–∪ – –∪∪∪ –∪

ಭಿಕ್ಷೆ? ನಿ ನ್ನನ್ನಳಿಗೆ ಭಿಕ್ಷೆ - (೨೦ ಮಾತ್ರೆ)

೫ ೫ ೭ ೩

– ∪ – – ∪ – – – ∪ ∪ ∪ ∪ –

ಇಂದಿನೀ ವೇಷದಿಂ ನೀಂ ಭಿಕ್ಷುಣಿಯೆ ದಿಟಂ(೧) - (೨೦ ಮಾತ್ರೆ)

– – ∪∪ – ∪ – – ∪ – ∪∪∪

ನಾನ್ ಪೊತ್ತಿಸಿದ ಕಿಚ್ಚನಾನ್ ನಂದಿಸ ಲ್ಕೆನೆಗೆ

– ∪ –∪ ∪ ∪ ∪ ∪ ∪ –∪ –

ನೀಡು ನಿನ್ನ ಅನುಮತಿಯ ಭಿಕ್ಷೆಯಂ

–∪∪∪

ಚಂದ್ರನಖಿ ....

ಗಣದ ಆರಂಭದಲ್ಲಿ ಒತ್ತನ್ನು ತಡೆಯಬಲ್ಲ ಗುರುವಿನಿಂದ ಆರಂಭವಾಗುವ ಗಣಗಳೇ

---

೧. ಹಳೇಗನ್ನಡದ ಛಂದಸ್ಸಿನಲ್ಲಿ ನಿಷೇಧಿತವಾದ (∪–) ಗಣ ಸರಗವಾಗಿ ಪ್ರವೇಶವಾಗಿದೆ. ಆಧುನಿಕ ಪ್ರಯೋಗಗಳಲ್ಲಿ ಇದನ್ನು ಬಳಸಿಕೊಂಡು ಧ್ವನಿ ವಿಶೇಷತೆಗೆ ದಾರಿ ಮಾಡಿಕೊಟ್ಟಿದ್ದಾರೆ. ಉದಾ : "ಬೊಬ್ಬುಳಿ ತೆರೆಯನು ದಡಕ್ಕೆ ಹೊಮ್ಮಿಸಿ" - ತೆಂಕಣಗಾಳಿಯಾಟದಲ್ಲಿ **ಅನಿರೀಕ್ಷಿತ ಆಘಾತ** ಧ್ವನಿತವಾಗಿದೆ.

ಇಲ್ಲಿವೆ. **ದಿಟಂ** ಇಲ್ಲಿ ಲಘುವಿನ ಆರಂಭದ ಗಣ ಒತ್ತನ್ನು ತಡೆದುಕೊಳ್ಳದು. ಹೀಗೆಂದು ಹಿಂದೆ ಇದನ್ನು ಬಳಸುತ್ತಿರಲಿಲ್ಲ. ಇಲ್ಲಿ ಅಂತಹ ಪ್ರಯೋಗವನ್ನೇ ಮಾಡಿ ಇಲ್ಲಿ ಸತ್ಯದ ಕಟುನಿಷ್ಠುರತೆಯ ಧ್ವನಿಗೆ ಇದನ್ನು ಬಳಸಿಕೊಂಡಿದ್ದಾರೆ. ಆಧುನಿಕರ ಔಚಿತ್ಯ ಪ್ರಜ್ಞೆಗೆ ಇದು ಸಾಕ್ಷಿ.

ಸರಳರಗಳೆ : (Blank Verse) ನ ನಿಯಮಗಳಲ್ಲಿ ಸಂಕೀರ್ಣತೆ ಹೆಸರನ್ನು ಹೆಸರು ಪಡೆದ ರೂಪವೇ ಸರಳರಗಳೆ. ಹೊಸಗನ್ನಡ ಛಂದಸ್ಸಿನಲ್ಲಿ ಕಥನ ಕಥನಗೀತೆಗೆ ಹೊಂದಿಕೊಳ್ಳುವ ಲಲಿತರಗಳೆಯನ್ನು ಬಳಸಿಕೊಂಡು, ಅಲ್ಲಿರುವ ಪ್ರಾಸವನ್ನು ಬಿಟ್ಟು ತಡೆಯಿಲ್ಲದ ಪಾದಗಳಲ್ಲಿ ಪ್ರಯೋಗಿಸುತ್ತಾ ಬಂದಿದ್ದಾರೆ. ಇದು ಕನ್ನಡ ನಾಟಕಗಳಲ್ಲಿ, ಕಥನಗೀತೆಗಳಲ್ಲಿ ಬಳಕೆಗೊಂಡಿದೆ. ಎಂ.ಆರ್.ಶ್ರೀ ಯವರ **ನಾಗರೀಕ,** ಕುವೆಂಪುರವರು **: ರಕ್ತಾಕ್ಷಿ, ಬಿರುಗಾಳಿ, ಯಮ ಸೋಲು, ಮಹಾರಾತ್ರಿ, ಚಿತ್ರಾಂಗದ**, (ಖಂಡಕಾವ್ಯ).

ಗೋವಿಂದಪೈಗಳು: ಗೋಲ್ಗೊತ್ತಾ ಕಥನಕಾವ್ಯಗಳಲ್ಲಿ ಬಳಸಿದ್ದಾರೆ. ಇದು ಐದುಮಾತ್ರೆ ಗಣದದಾಟಿಯಲ್ಲಿದೆ. ಪಾದ ಒಂದಕ್ಕೆ ಐದು ಮಾತ್ರೆಯ ನಾಲ್ಕುಗಣಗಳಿರುತ್ತವೆ. ಅದು ನಿಯತವಾಗಿರದೆ ಗಣಪ್ರವೃತ್ತಿ, **ಪದ್ಮಗಣ**ಗಳಿಗೆ ಅವಕಾಶವಿದೆ. ೨೪ ಮಾತ್ರೆಗಳು ಕಾಣುತ್ತವೆ. ಆರಂಭ ಅಂತ್ಯ ಗಣಗಳು ಕಡಿಮೆ ಗಣ ಹಾಗೂ ಅರ್ಥಾನುಸಾರಿಯಾದ **ಯತಿ** ಇರುತ್ತದೆ.

ಉದಾ : – U – U U U U U UUUUUU–

ಭೂಮಿಯಂ ಅಲೆಯುತಿಹ ರುಜೆಗಳನಿತುಮಂ
ಚಳುಕುಳುಕು* ತೊನ್ನು* ಹೊಟ್ಟೆಯ ನೋವು* ಕಣ್ಬೇನೆ
ಕಿವಿನೋವು, ತಲೆನೋವು, ನಾಯ್ಕೆಮ್ಮು ಬದಿಶೂಲೆ,
ಕಾಲೊಡಕ, ವಾತಪಿತ್ತಗಳೆಲ್ಲ ಭೈರವನ
ಸೆರೆಗೈದು ಪೀಡಿಸುಗೆ.

ವಿ.ಕೃ. ಗೋಕಾಕರು ಇದನ್ನು **ಅವ್ಯಹತಸಾಲು**ಗಳೆಂದಿದ್ದಾರೆ. ರಗಳೆಯೇ ತನ್ನ ನಿಯಮಗಳನ್ನು ಕಳೆದುಕೊಂಡು ಈ ರೂಪಧರಿಸಿದೆ.

ಮುಕ್ತ ಛಂದಸ್ಸು : ಇದೊಂದು ಸಾಂಪ್ರದಾಯಿಕ ಬಂಧಗಳನ್ನು ವಿರೋಧಿಸುತ್ತಾ ಬಂದ ಸ್ವಚ್ಛಂದ ಬಂದದ ಪದ್ಯ (Free Verse) ಮುಕ್ತಚಂದ. ಅನೀಯತಲಯ, ಅನೀಯತ ಪಾದ ಬಂಧಗಳನ್ನು ನವ್ಯರು ಹೆಚ್ಚಾಗಿ ಬಳಸಿದ್ದಾರೆ. ಸಾಮಾನ್ಯಲಕ್ಷಣ :

೧. ನಿಯತ ಚೌಕಟ್ಟು ಕಾಣಿಸುವುದಿಲ್ಲ.
೨. ಅನಿಯತ ಲಯ ಇಲ್ಲಿದೆ.
೩. ಗಣಗಳಲ್ಲಿ ವ್ಯತ್ಯಾಸ ಶೀಲತೆಯುಂಟು ಪದಗಳ ಅರ್ಥಾನುಸರಣೆಯೇ ಇಲ್ಲಿ ಮುಖ್ಯ
೪. ಗದ್ಯದಭಾಷೆಗೆ ತೀರಾ ಹತ್ತಿರವಾಗಿದೆ. ಪ್ರಾಸ, ಪಾದ ಮುಕ್ತಾಯ ಸೂಚಕವಾಗಿ ಬಂದಿದೆ.
೫. ಕ್ರಿಯೆಯನ್ನೋ, ಆಕಾರವನ್ನೋ ಪದವನ್ನು ಒಡೆಯುವುದುಂಟು
೬. ಅರ್ಥವಿಶ್ಲೇಷಣೆಗಾಗಿ ಎರಡು ಪಾದಗಳಿಗೂ ಹಂಚಲಾಗುತ್ತದೆ.

ಇದರಲ್ಲಿ ವಿಪರೀತ ಸ್ವಾತಂತ್ರದಿಂದಾಗಿ ಯಾಂತ್ರಿಕರಚನೆ ಕಾಣುತ್ತಿವೆ.

ಆಧುನಿಕ ಛಂದಸ್ಸಿನಲ್ಲಿ ವಾಚನ-ಗಾಯನ ದೃಷ್ಟಿಯಲ್ಲಿ ಹೊಸತನ :

ತಾಳದೃಷ್ಟಿಯಲ್ಲಿ : ಕನ್ನಡದ ಛಂದಸ್ಸಿನಲ್ಲಿ ೩, ೪, ೫ ಮಾತ್ರೆಯ ಶುದ್ಧಲಯಗಳು ಪೂರ್ಣಪದ್ಯದಲ್ಲಿ ಹಾಗೆಯೇ ಬರುವುದು ತೀರಾ ವಿರಳ. ಪಾದ ಪಾದಕ್ಕೆ ಅಥವಾ ಪದ್ಯಾರ್ಧದ ಕೊನೆಯಲ್ಲಿ ಒಂದು ಬಿಡಿಯಕ್ಷರವೋ ನಡೆಯುತ್ತಿರುವ ಲಯದ ಬೆಲೆಗಿಂತ ಕಡಿಮೆ ಬೆಲೆಯ ಎರಡು ಮೂರಕ್ಷರದ ಒಂದುಗುಂಪೋ ನಿಲ್ಲುತ್ತದೆ. ಇದು ಹೊಸ ಕವಿತೆಗಳಲ್ಲಿ ಸಾಮಾನ್ಯ. **ತಾಳದ ದೃಷ್ಟಿಯಿಂದ ಹಿಂದೆ ಸಾಗಿಬಂದ ಗಣದಬೆಲೆಯೇ ಆ ಅಕ್ಷರ ಅಥವಾ, ಅಕ್ಷರಗಳಗುಂಪಿಗಿರುತ್ತದೆ.** ಉದಾ :

೪ ೪ ೪ ೪

ಅದೃಶ್ಯ, ಲೋಕದ, ಅನೂಹ್ಯ, ರೂಪದ,

೪ ೪ ೪ ೧

ಅನಂತ, ಕಾಲದ, ಯಾತ್ರಿಕ, <u>ರೇ</u> - ಈ ಒಂದೇ ಅಕ್ಷರಕ್ಕೆ ನಾಲ್ಕುಮಾತ್ರೆಯ ಬೆಲೆಯಿರುತ್ತದೆ.

೨. ಗಣಪರಿವೃತ್ತಿ : (ಸಮಾನಗಣಗಳ ಬದಲಾವಣೆ)

ಒಂದು ನಿರ್ದಿಷ್ಟ ಲಯದಲ್ಲಿ ಒಂದುಹೊಸ ಬಳುಕನ್ನು ತರಲು ಒಂದು**ಗಣದ ಸ್ಥಾನದಲ್ಲಿ** ಅದೇಮಾತ್ರಾಪ್ರಮಾಣದ ಇನ್ನೊಂದು ಜಾತಿಯಗಣ ಇರಿಸುವುದಕ್ಕೆ **'ಗಣಪರಿವೃತ್ತಿ'** ಎನ್ನಲಾಗುತ್ತದೆ. ಉದಾ :

೩ ೩ ೩ ೩

ಗಂಗೆ ಯಮುನೆ ಕೂಡಿ ಹರಿದು

೪+೨=೬ ೩ ೩ ೪+೨=೬ ೩ ೩

<u>**ಸಂಗಮಜಲ**</u> ಬಿಳಿದು ಕರಿದು, <u>**ತಿಂಗಳನಗೆ**</u> ಮೇರೆ ವರಿದು.

ಇಲ್ಲಿ ತ್ರಿಮಾತ್ರಾಗಣಗಳ ಏಕತಾನತೆಯಲ್ಲಿ ಹೊಸಬಳುಕನ್ನು ತರಲು, ನಡುವೆ ಜೋಡಿಮೊತ್ತದ ಆರುಮಾತ್ರೆಗಣದಿಂದ ಹೊಸತನ ಮೂಡಿಸಲಾಗಿದೆ (ಇದು ಹಿಂದಿನ ಕವಿಗಳಲ್ಲಿ ವಿರಳವಾಗಿ ಗೋಚರಿಸುತ್ತದೆ).

೩. ಮಾತ್ರೆಯಲ್ಲಿ ಪ್ಲುತವಿಶೇಷತೆ : ಛಂದಸ್ಸಿನಲ್ಲಿ ಲಘು, ಗುರುವೆರಡನ್ನೇ ಬಳಸಲಾಗುತ್ತಿತ್ತು. ಹೊಸಗನ್ನಡದಲ್ಲಿ ಉಲ್ಲೇಖವಿದ್ದ **'ಪ್ಲುತ'** (ಮೂರುಮಾತ್ರೆ) ವನ್ನೂ ಗಣರಚನೆಯಲ್ಲಿ ಬಳಸಲಾಗುತ್ತಿದೆ. **ಗುರುವೊಂದಕ್ಕೆ ಕೆಲವೊಮ್ಮೆ ಮೂರುಮಾತ್ರೆಯ ಬೆಲೆಕೊಟ್ಟು,** ಅದನ್ನು <u>ಒಂದು</u>ಗಣದ <u>**ಸ್ಥಾನದಲ್ಲಿ**</u> ಔಚಿತ್ಯವರಿತು ತಂದು, ಪದ್ಯಗಳಲ್ಲಿ ಸೊಗಸನ್ನುಂಟು ಮಾಡಲಾಗುತ್ತಿದೆ. ಉದಾ :

ಕಂಸ |ಭಯಕೆ|ನಡುಗು|ತs|

ಹಡೆದ |ಕೂಸು|ಬಾಳ್ವ|ದೆಂತು|ಎನುತ|'ತs'|ಲ್ಲಣಿಸು| ತ (ತಾಳ)

ಇಂಥಹ ಪ್ರಸಂಗಗಳಲ್ಲಿ ಪ್ಲುತವನ್ನು ಸೂಚಿಸಲು **'s'** - ಚಿಹ್ನೆ ಬಳಸಲಾಗುತ್ತದ.

೪. ಮುಡಿ : ಈ ಪರಿಕಲ್ಪನೆ ಆಧುನಿಕ ಛಂದಸ್ಸಿನಲ್ಲಿ ಬಹುಪ್ರಚುರವಾದುದು. ಪಾದದ ಕೊನೆಯಲ್ಲಿ ನಿಲ್ಲುವಅಕ್ಷರ ಲಘುವನ್ನು **'ಗುರು'** ವೆಂದು ಭಾವಿಸುವುದು ರೂಢಿ. ತಾಳದ ದೃಷ್ಟಿಯಿಂದ ಆ ಒಂದಕ್ಷರ ಒಂದುಗಣದ ಸ್ಥಾನವಲ್ಲಿ ನಿಲ್ಲುತ್ತದೆ. ಅಂದರೆ ಆ **ಅಕ್ಷರವನ್ನು ಒಂದುಗಣ ಕಾಲಪರಿಮಿತಿಯಲ್ಲಿ ಎಳೆದೋ, ವಿರಾಮದಿಂದಲೋ** ತುಂಬಬಹುದು. ಹೀಗೆ ಪಾದದ ಕೊನೆಯಲ್ಲಿ ಬಿಡಿಯಾಗಿ ನಿಂತು ಅದಕ್ಕೆ **ಮುಡಿವು** (ಮುಕ್ತಾಯ) ಕೊಡುವ ಅಕ್ಷರಕ್ಕೆ **'ಮುಡಿ'** ಎಂದು ಕರೆಯಲಾಗುತ್ತದೆ. (ಇದು ಅಂಶಗಣದ ಷಟ್ಪದಿಯ **೩-೬** ಪಾದಾಂತ್ಯದ ಗುರುವಿನಲ್ಲಿ ಕಂಡು ಬರುತ್ತದೆ). (ಆಧುನಿಕರಲ್ಲಿ ಮಾತ್ರೆಯ ದೃಷ್ಟಿಯಿಂದ ಯಾವ ಯಾವ ಗಣದೊಂದಿಗೆ ಬರುವುದೋ ಆ ಗಣದ ಬೆಲೆ ಮುಡಿಗೆ ಬರುತ್ತದೆ).

ಉದಾ :

೩ ೩

ನೋಡ ಬಯಸಿ **ದೆ (ಮು)**

ಅವಳ ತೊಡಿಗೆ ಇವಳಿಗಿಟ್ಟು

ಹಾಡ ಬಯಸಿ + **ದೆ (ಮು)**. ∴ ಮೂರು ಮಾತ್ರೆಯ ಬೆಲೆ ಬರುತ್ತದೆ.

- ಹೀಗೆಯೇ ವಿಭಿನ್ನಗಣ ವಿನ್ಯಾಸದ ನಡುವೆಯೂ ತೋರಬಹುದು.

೫. ಪದ್ಮಗಣ : ಮುಡಿಗಿಂತಲೂ ಅಕ್ಷರಪ್ರಮಾಣದಲ್ಲಿ **ಉದ್ದವಾದ,** ಮುಕ್ತಾಯ ಭಾವನೆಯನ್ನು ತರುವ ನಾಲ್ಕುಮಾತ್ರೆಯ ವಿನ್ಯಾಸದಿಂದ ಮುಂದಿನಲಯಗಳಲ್ಲಿ ಬರುತ್ತದೆ. ಅದರ ಉಚ್ಚಾರಣೆಯ ಕಾಲ ಎಷ್ಟೇಮಾತ್ರೆಗಳಾದರೂ ರಚನೆಯಲ್ಲಿ ಎರಡೇ ಅಂಶಗಳಾಗಿರುತ್ತದೆ (ಅಂಶದ ಬ್ರಹ್ಮಗಣದಂತೆ) (UUU. UU–. ––. –U) ಈ ಲಕ್ಷಣದ ವಿಶೇಷ ಗಣವನ್ನು 'ಪದ್ಮಗಣ' ವೆನ್ನುತ್ತಾರೆ. (ಇದನ್ನು 'ಪ' ಎಂಬಸಂಕೇತದಿಂದ ಸೂಚಿಸುತ್ತಾರೆ).

ಉದಾ: – U U U UUU

ಹಾಡಿದನು **ಗಮಕಿ** – U (ಪದ್ಮಗಣ)

– – U UUU – UUU

ಮೇಲ್ಲೊಂದು ಗರುಡ ಹಾರುತಿಹು **ದು** – U (ಪದ್ಮಗಣ)

ಅರಸಿನ ಕುಲವೋ ಏನಿ **ದ್ದೇನು** – U (ಪದ್ಮಗಣ)

ಸುರವಧು ರೂಪೋ, ಏನಿ **ದ್ದೇನು** ನಾಲ್ಕುಮಾತ್ರೆಯ ಬೆಲೆ

ಗುಣವೋ ಸೊಬಗೋ ಏನಿ **ದ್ದೇನು**

ಪದುಮಾ, ಇದ್ದುವು ನಿನಗೆ ಲ್ಲಾ (ಮು)

ಆಧುನಿಕ ಛಂದೋರೂಪಗಳಲ್ಲಿ ಹೀಗೆ ಅಗತ್ಯವಾದ ಪರಿಕಲ್ಪನೆಗಳನ್ನು ಎತ್ತಿಹಿಡಿದು ಪ್ರಯೋಗಿಸಲಾಗುತ್ತಿದೆ. ಇವುಗಳಿಂದ ಸುಗಮ ಸಂಗೀತ ಉದಯವಾಗಿ ಪುಷ್ಟಿ ಪಡೆಯುತ್ತಿದೆ.

ಗುರುವಾದ ಅಕ್ಷರದ ವೈಶಿಷ್ಟ್ಯ : ಗುರುಅಕ್ಷರವನ್ನು ತ್ವರಿತವಾಗಿ ಉಚ್ಚರಿಸಿ ಮುಂದಿನ ಒತ್ತಕ್ಷರವನು, ಅನುನಾಸಿಕವನ್ನು ತೇಲಿಸಿ ಸೇರಿಸಬೇಕಾಗುತ್ತದೆ.

ಉದಾ :

U

ಕುರಿನೆಗೆದಾಟ ಕುರುಬರ ಕೊಳಲಿ | ನ್ದೂ | ದಾಟ

U –

ಬನದಲಿ ಬೆಳದಿಂ ಗಳ್ಳೊಟ

ಇದಕ್ಕೆ ಒಂದು ಮಾತ್ರೆಯ ಉಚ್ಚಾರ ಬಂದಿದೆ.

೬) 'ಕಂಪಿತ' : ಕೆಲವೊಮ್ಮೆ ಗುರುವನ್ನು (ಎರಡು ಮಾತ್ರೆ) ಒಂದೇ ಮಾತ್ರೆ ಬೆಲೆಕೊಟ್ಟು ಸ್ವರ ಉಚ್ಚರಿಸುವುದುಂಟು. (ಹ.ಗ. ಅಂಶಗಣದ ಜಾಯಮಾನ). **ಇದು ಒಂದು ಅಕ್ಷರದ ಕಾಲ, ಕೆಲವೊಮ್ಮೆ ಮೂರುಮಾತ್ರೆಗಳ ಪ್ರಮಾಣವನ್ನೂ ಮೀರಿರುವುದುಂಟು.** ಅಂತಹ ಅಕ್ಷರಕ್ಕೆ **'ಕಂಪಿತ'** ವೆಂದು (ತೀ.ನಂ.ಶ್ರೀ) ಕರೆದಿದ್ದಾರೆ. ಇದಕ್ಕೆ ζ ಸಂಕೇತವಿದೆ.

ಉದಾ:

ζ

ಕನ್ನಡ | **ವೇ** | ಸತ್ಯ

ಕುಮಾರವ್ಯಾಸನ ನಾಲಿಪ ಕಿವಿಯದು

ζ

ಕನ್ನಡ **ವೇ** ನಿತ್ಯ - ಇಲ್ಲಿ ಗುರು ನಾಲ್ಕು ಮಾತ್ರೆ ಉಚ್ಚಾರ ಪಡೆದಿದೆ.

೭) 'ಮೌನ' (ಹುಸಿಮೌನ) : ಕನ್ನಡದಲ್ಲಿ ಗಣಕ್ಕೆ ಸರಿಯಾಗಿ ಪದನಿಲುಗಡೆ ಅಥವಾ ವಿಭಾಗವಿರಬೇಕು. ಇದನ್ನೇ **'ಸಹಜಯತಿ'** ಯೆನ್ನಲಾಗಿದೆ. ಹೀಗಾಗದೆ ಕೆಲವೊಮ್ಮೆ ದೀರ್ಘಪಾದದಲ್ಲಿ ವಿರಾಮಕ್ಕೆ ಅವಕಾಶವಿರದೆಡೆ **'ಮೌನ'** ಅಥವಾ **'ವಿರಾಮ'** (∧ ಚಿಹ್ನೆ) ಗಳಿಂದ ಗಣಪೂರ್ತಿಗೊಳಿಸಲಾಗುತ್ತದೆ. ಈ ಮೌನಕ್ಕೆ **ಆಯಾ ಗಣದಧಾಟಿಯ ಅಗತ್ಯಕ್ಕೆ ತಕ್ಕ ಮಾತ್ರೆಯಬೆಲೆ ಬರುತ್ತದೆ.** ಅಲ್ಲಿ ಅರ್ಥದಲ್ಲೂ ವಿರಾಮವಿರುತ್ತದೆ.

ಉದಾ:

– U – | – – | – U – | – U –

'ಈಗಳೇ | ನಾದೆನ್ | ಕೇಳದೈ | ವೇಚ್ಛಯನ್ |'

∧ ∧

ಮಿಂಚು ಮಿಂಚನು ಸೆಣಸುವ ತರದಿ - ಇಲ್ಲಿ **ನಾದೆನ್** ನಾಲ್ಕುಮಾತ್ರೆಯಿದೆ ಉಳಿದ ಒಂದು ಮಾತ್ರೆಯನ್ನು ಮೌನದಿಂದ ಪೂರ್ತಿಗೊಳಿಸಬೇಕು. ಹೀಗೆ **ಮಿಂಚು** ಎಂಬಲ್ಲಿ

ಮೂರು ಮಾತ್ರೆಯಿದೆ ಉಳಿದ ಒಂದುಮಾತ್ರೆಯನ್ನು ಮೌನದಿಂದ ತುಂಬುತ್ತದೆ.

ಲ) 'ಅನಾಗತ': ಸಾಮಾನ್ಯವಾಗಿ ರೂಢಿಯಂತೆ ತಾಳ ಚರಣದ ಮೊದಲಾಗುತ್ತದೆ. ಆದರೆ ಕೆಲವೊಮ್ಮೆ ತಾಳಕ್ಕೆ ಮೊದಲೇ ಒಂದು ಅಕ್ಷರಬಿಡಿಯಾಗಿ ನಿಂತು, ತಾಳವನ್ನು ಎತ್ತಿಕೊಡುತ್ತದೆ. ಆ ಅಕ್ಷರವನ್ನು ತ್ವರಿತವಾಗಿ ಉಚ್ಚರಿಸಬಹುದು. ಆದರೆ ಇದರ ಮುಂದಿನ ಅಕ್ಷರ ಗುರುವಾಗಿರಬೇಕು. ಅಲ್ಲಿ ಸ್ವರಾಘಾತ (ಮೊದಲ ಸ್ವರದ ಉಚ್ಚಾರಣೆ ದುರ್ಬಲ) ವೂ ತಾಳವೂ ಸಹಜವಾಗಿ ಜೊತೆ ಸೇರುತ್ತವೆ. ಹೀಗೆ **ತಾಳವನ್ನೆತ್ತಿ ಕೊಡುವ ಪಾದದಾದಿಯ ಬಿಡಿಲಘುಅಕ್ಷರಕ್ಕೆ, ಕೆಲವೊಮ್ಮೆ ಎರಡುಲಘುಅಕ್ಷರಗಳಿಗೆ 'ಅನಾಗತ'** ಎನ್ನಲಾಗುತ್ತದೆ. ಇದು ವಾಚನಕ್ಕೆ ಗತ್ತು ಗಾಂಭೀರ್ಯಕ್ಕೆ ಪುಷ್ಟಿಕೊಡುತ್ತದೆ.

ಉದಾ. U – U

ಕು ಮಾರ ವ್ಯಾಸನು ಹಾಡಿದ ನೆಂದರೆ

ಈ ಅಂಶಗಳನ್ನು ಬಳಕೆಗೆ ತಂದು ಸುಶ್ರಾವ್ಯತೆಗೆ ಅನುವು ಮಾಡಿಕೊಡಲಾಗುತ್ತದೆ. ವಿಚಾರ ಮಾಡಿದರೆ ಹಳೆಯ ಛಂದೋರೂಪಗಳಲ್ಲೇ ಈ ಅಂಶಗಳಿರುವುದನ್ನು ಗುರುತಿಸಲಾಗಿದೆ. ಈ ಹಳೆಯದರಲ್ಲಿ ಹೊಸತನ ಕಂಡುಕೊಂಡದ್ದು ಆಧುನಿಕತೆಯೆನಿಸುತ್ತದೆ.

II ವರ್ಣವೃತ್ತಗಳು (ಅಕ್ಷರಗಣದ) :

ಕನ್ನಡದಲ್ಲಿ 'ಖ್ಯಾತಕರ್ನಾಟಕ' ವೃತ್ತಗಳೆಂದು ಕರೆಯುವ ಆರುವೃತ್ತಗಳ ಬಳಕೆ ಹೆಚ್ಚು. ಅವುಗಳಲ್ಲದೆ **ಮಾಲಿನಿವೃತ್ತ, ಪೃಥ್ವಿ, ಶಿಖರಿಣಿ, ಹರಿಣಿ, ಮಂದಾಕ್ರಾಂತ, ತರಳ, ಮಲ್ಲಿಕಾಮಾಲೆ** - ಈ ವೃತ್ತಗಳು ವಿರಳವಾಗಿ ಕನ್ನಡಚಂಪೂಕಾವ್ಯಗಳಲ್ಲಿವೆ. ಕಾರಣ ಅವುಗಳ ಲಯಸ್ವಲ್ಪಮಟ್ಟಿಗೆ ಕನ್ನಡದಲ್ಲಿ ಹೊಂದಿಕೊಳ್ಳುತ್ತವೆ.

ಅವುಗಳಲ್ಲಿ ಹೆಚ್ಚುಪ್ರಯೋಗವಾಗಿರುವ **ಆರುವೃತ್ತ**ಗಳುಂಟು. ಆ ವೃತ್ತಗಳಲ್ಲಿ **ನಾಲ್ಕು ಪಾದಗಳು ಸಮಾನವಾಗಿರುವುದರಿಂದ** ಪ್ರಸ್ತಾರಕ್ಕೆ ಒಂದುಪಾದವನ್ನು ಮಾತ್ರ ಕೊಡಲಾಗಿದೆ. (ಅವುಗಳ ಪ್ರಸಿದ್ಧಿಗನುಕ್ರಮವಾಗಿ ಆಯ್ಕೆಮಾಡಿ ಕೊಟ್ಟಿದೆ.)

೧) <u>ಚಂಪಕಮಾಲೆ</u> : (೨೧ ಅಕ್ಷರಗಳ **ಪ್ರಕೃತಿಛಂದಸ್ಸಿನ** ವೃತ್ತ). ಲಕ್ಷಣಸೂತ್ರವೂ ಲಕ್ಷಣಾನುಸಾರವಾಗಿದೆ:

U U U	U – U	– U U	U – U	U – U	U – U	– U –
ನ ಜ ಭ	**ಜ ಜಂ ಜ**	**ರಂ** ಬ ಗೆ	ಗೊ ಳು ತ್ತಿ	ರೆ **ಚಂ ಪ**	**ಕ ಮಾ ಲೆ**	ಯೆಂ ದ ಪರ್

ಪ್ರಸ್ತಾರಪಾದ :

ನ	ಜ	ಭ	ಜ	ಜ	ಜ	ರ
UUU	U – U	– U U	U – U	U – U	U – U	– U –
ಪವನ	ಜನಾಸ್ಯ	ಮಲ್ತಿದ	ವನಾನ	ನಮುಪ್ಪೊ	ಡೆ ಮಟ್ಟ	ಮಿರ್ದು ನೋ

ವಿಶೇಷತೆ : ಈ ವೃತ್ತವು **ಶೃಂಗಾರ, ಕರುಣ** ರಸಗಳಅಭಿವ್ಯಕ್ತಿಗೆ ಸೂಕ್ತವಾದದ್ದು.

೨. ಉತ್ಪಲಮಾಲೆ : (೨೦ ಅಕ್ಷರಗಳ **ಕೃತಿಛಂದಸ್ಸಿನ** ವೃತ್ತ) ಚಂಪಕಮಾಲೆಯ ವಿಶೇಷತೆ ಇದಕ್ಕೂ ಅನ್ವಯಿಸುವುದು.

ಲಕ್ಷಣಸೂತ್ರ : **"ಉತ್ಪಲಮಾಲೆಯಪ್ಪುದು ಭರಂನಭಭಂ ರಲಗಂ** ನೆಗಳ್ದಿರಲ್".

ಪ್ರಸ್ತಾರಪಾದ :

	ಭ	ರ	ನ	ಭ	ಭ	ರ	ಲ.ಗ
	– UU	– U –	UUU	–U U	– UU	– U –	
(ಅ)	ರಂಕುಶ	ಮಿಟ್ಟೊಡಂ	ನೆನೆವು	ದೆನ್ನ ಮ	ನಂ ಬನ	ವಾಸಿ ದೇ	ಶಮಂ.

೩. ಮತ್ತೇಭವಿಕ್ರೀಡಿತ ವೃತ್ತ : (೨೦ಅಕ್ಷರಗಳ **ಕೃತಿಛಂದಸ್ಸಿನ** ವೃತ್ತ)

ಲಕ್ಷಣಸೂತ್ರ : **"ಸಭರಂ ನಂ ಮಯಲಂಗಮುಂ** ಬಗೆಗೊಳಲ್ **ಮತ್ತೇಭವಿಕ್ರೀಡಿತಂ"**

ಪ್ರಸ್ತಾರಪಾದ :

ಸ	ಭ	ರ	ನ	ಮ	ಯ	
U U –	– U U	– U –	U U U	– – –	U – –	ಲ.ಗ
ಇದುವೆಂ	ನೋಡುವೆ	ನಿನ್ನು ಮೆ	ನ್ನೊಡಲೊ	ಳೆನ್ನೀಪ್ರಾ	ಣಮುಳ್ಳ	ನ್ನ ಮೋ

ವಿಶೇಷತೆ : **ರೌದ್ರ, ವೀರ** ರಸಗಳಅಭಿವ್ಯಕ್ತಿಗೆ ಸೂಕ್ತವಾದವೃತ್ತ.

೪) ಶಾರ್ದೂಲವಿಕ್ರೀಡಿತ ವೃತ್ತ : (೧೯ ವರ್ಣಗಳ **ಅತಿಧೃತಿಛಂದಸ್ಸಿನ** ವೃತ್ತ)

ಲಕ್ಷಣಸೂತ್ರ : **"ಕಣ್ಗೊಪ್ಪಲ್ ಮಸಜಂ ಸತಂತ ಗಮುಮಾ ಶಾರ್ದೂಲವಿಕ್ರೀಡಿತಂ"**.

ಪ್ರಸ್ತಾರಪಾದ :

ಮ	ಸ	ಜ	ಸ	ತ	ತ	
– – –	U U –	U – U	U U –	– – U	– – U	ಗ
ಇಂತೀ ಕಾ	ವ್ಯಮನೊ	ಲ್ದು ಕೇಳ್ದ	ವಿಬುಧರ್	ಮೈವೆರ್ಚಿ	ಕೊಂಡಾಡೆ	ಪೇ

ವಿಶೇಷ : ತತ್ವಚಿಂತನೆಯ ಅಭಿವ್ಯಕ್ತಿಗೆ ಸೂಕ್ತವೃತ್ತ

೫) ಸ್ರಗ್ಧರಾ ವೃತ್ತ (೨೧ನೆಯ **ಪ್ರಕೃತಿಛಂದಸ್ಸಿ** ವೃತ್ತ)

ಲಕ್ಷಣಸೂತ್ರ:"ತೋರಲ್ **ಮರಂಭನಂ ಮೂಯಯುಗಣ**ಮುಮದೆ ತಾಂ **ಸ್ರಗ್ಧರಾವೃತ್ತಮಕ್ಕುಂ"** (ವಿವರಗಳ ಚಿತ್ರಣಕ್ಕೆ ಸೂಕ್ತವೃತ್ತ)

ಪ್ರಸ್ತಾರ ಪಂಕ್ತಿ :

ಮ	ರ	ಭ	ನ	ಯ	ಯ	ಯ ಗ
– – –	– U –	– U U	UUU	U – –	U – –	U – –
ಕಾರುಣ್ಯಂ	ಗೆ ಯ್ಯು ಸ	ದ್ದೀಕ್ಷೆಯ	ನೆಸಗಿ	ಲಸ ಜ್ಞಿ	ತ್ರೈಯಾ ಮಾ	ರ್ಗ ಮಂ ಪೇ

೬) ಮಹಾಸ್ರಗ್ಧರಾ ವೃತ್ತ (೨೨ನೆಯ **ಆಕೃತಿ**ಛಂದಸ್ಸಿನವೃತ್ತ)

ಲಕ್ಷಣಸೂತ್ರ: **"ಸತತಂ ನಂ ಸಂ ರರಂಗಂ** ಸೆರೆದೆಸೆಯೆ **ಮಹಾಸ್ರಗ್ಧರಾ ವೃತ್ತಮಕ್ಕುಂ"**.

ಪ್ರಸ್ತಾರಪಂಕ್ತಿ :

ಸ	ತ	ತ	ನ	ಸ	ರ	ರ	ಗ
U U –	– – U	– – U	U U U	U U –	– U –	– U –	
ಚಲದೊಳ್	ದುರ್ಯೋಧ	ನಂ ನನ್ನಿ	ಯೊಳಿನ	ತನಯಂ	ಗಂಡಿನೊಳ್	ಭೀಮಸೇ	ನಂ

iii. ಅಂಶಗಣಗಳ ಛಂದೋರೂಪಗಳು :-

೧) ಒಂದು ಛಂದೋಬಂಧವು ತನ್ನ ಸಹಜಗತಿಯನ್ನು ತೊರೆದು ಬೇರೊಂದು ಗತಿಯಲ್ಲಿ ಹಾಡುವ ಸಂಪ್ರದಾಯ ಬೆಳೆಯುತ್ತದೆ. ಹೀಗಾದಾಗ ಕಾಲಕ್ರಮೇಣ ಆ ಬಂಧದ ಹೆಸರಿನಲ್ಲಿ ರಚಿತವಾಗುವ ಪದ್ಯಗಳಲಕ್ಷಣವೇ ಬೇರೆಯಾಗುತ್ತದೆ.

೨) ಗುರುವಿನ ಅಂಶದ ಸ್ಥಾನದಲ್ಲಿ ಬದಲಾದ ಲಘುವಿನ ಅಂಶಗಳ ಬಳಕೆ ಕಾರಣದಿಂದ ಅಂಶಗಣಾತ್ಮಕವಾದ ಛಂದೋರೂಪಗಳು ಮಾತ್ರಾಗಣಾತ್ಮಕವಾದವು.

ಹೀಗಾಗಿ ಹಿಂದೆ ಅಂಶಗಣಗಳ ರೂಪದಲ್ಲಿದ್ದ **ಷಟ್ಪದಿ, ತ್ರಿಪದಿ, ಅಕ್ಕರ, ಸಾಂಗತ್ಯ**ಗಳ ಲಕ್ಷಣವು ಮಾತ್ರಾಗಣವಾಗಿ ಪರಿವರ್ತನೆಗೊಂಡಿವೆ. ಕೇವಲ ಸ್ವಲ್ಪಮಟ್ಟಿಗೆ ತ್ರಿಪದಿ, ಸಾಂಗತ್ಯಗಳ ಪಿರಿಯಕ್ಕರಗಳಲ್ಲಿ ಉಳಿದುಬಂದಿವೆ.(೧)

೧) ತ್ರಿಪದಿ :

ಮೂರುಪಾದಗಳುಳ್ಳ ಪದ್ಯ **'ತ್ರಿಪದಿ'**ಯೆನಿಸುತ್ತದೆ. ಈ ತ್ರಿಪದಿಯ ಮೂಲ, ಮಹತ್ವವನ್ನು ಕುರಿತು ಬೇಂದ್ರೆ: ತ್ರಿಪದಿ **'ವೃತ್ತಗಳ ಗಾಯಿತ್ರಿ'** ಎಂದು ಕರೆದರು. ಸೇಡಿಯಾಪುರವರು ಇದರ ಸಾರ್ವತ್ರಿಕತೆಯ ಹಿನ್ನೆಲೆಯಲ್ಲಿ **'ವೃತ್ತಗಳರಂಗನಾಯಕಿ'** ಎಂದರು. ಈ ಮಾತುಗಳು ತ್ರಿಪದಿಯ **ಸ್ಥಾನ, ಮಹತ್ವ**ಗಳನ್ನು ಸಾರುತ್ತದೆ. ಮೂಲಕ್ಷೇತ್ರವಾದ ಜಾನಪದ ರಂಗದಲ್ಲಿ ಕನ್ನಡ ಜಾಯಮಾನಕ್ಕೆ ಹೊಂದಿಕೊಂಡು ಕಂಪನ್ನು ಸೂಸುತ್ತಿದೆ. ಇಂದೂ ತ್ರಿಪದಿ ಜನಪ್ರಿಯವಾಗಿ, ವೈಭವಯುತವಾಗಿಯೇ ಮೆರೆಯುತ್ತಿದೆ.

ತ್ರಿಪದಿಯ ಅಂಶಗಣಾತ್ಮಕ ಲಕ್ಷಣ :

೧) ಹನ್ನೊಂದು ಅಂಶಗಣಗಳುಳ್ಳ ಮೂರು ಪಾದಗಳ ಪದ್ಯ.

೨) **೯-೧೦** ನೆಯ ಸ್ಥಾನದಗಣಗಳು **ಬ್ರಹ್ಮಗಣ** (೨ ಅಂಶ) ವಾಗಿಯೂ ಉಳಿದ ಗಣಗಳು **ವಿಷ್ಣುಗಣ** (೩ ಅಂಶ) ವಾಗಿರುತ್ತವೆ.

(ಹಾಡಿನ ರೂಪದ ತ್ರಿಪದಿಗಳಲ್ಲಿ ಬ್ರಹ್ಮದ ಬದಲು ವಿಷ್ಣುವೂ ವಿಷ್ಣುವಿಗೆ ಬದಲಾಗಿ ರುದ್ರ

---

೧) ಅಂಶಗಣ ರೂಪವಾದ ರಚನೆಗಳನ್ನು ಬೇಂದ್ರೆ, ಮೊದಲಾದವರು ಮಾಡಿದ್ದಾರೆ.

(೪ ಅಂಶ) ಗಣವೂ ಬರಬಹುವುದು).

ಅಂಶಲಕ್ಷಣ ಸಹಿತವಾದ ಪ್ರಸ್ತಾರ ಪದ್ಯ : ಉದಾ:

ವಿಷ್ಣು	ವಿ	ವಿ	ವಿ	
ಬಿಸರುಹೋ	ದ್ಭವ ಗಣಂ	ರಸದಶ	ಸ್ಥಾನದೊಳ್	= ೪
ವಿ	**ಬ್ರಹ್ಮ**	ವಿ	ವಿ	
ಬಿಸರುಹ	ನೇತ್ರ	ಗಣಮೆ ಬ	ರ್ಕುಳಿದುವು	= ೪
ವಿ	**ಬ್ರಹ್ಮ**	ವಿ		
ಬಿಸರುಹ	ನೇತ್ರೇ	ತ್ರಿಪದಿಗೆ		= ೩ = ೧೧

ಸಮನ್ವಯ : ೧) ೩ ಪಾದಗಳ ಈ ತ್ರಿಪದಿಯಲ್ಲಿ ಒಟ್ಟು ೧೧ ಗಣಗಳಿವೆ.

೨) **೬-೧೦** ನೆಯ ಗುರುತು ಮಾಡಿರುವ ಗಣಗಳ ಬ್ರಹ್ಮಗಣಗಳಾಗಿವೆ. ಉಳಿದ ಗಣಗಳು ವಿಷ್ಣುಗಳಾಗಿರುತ್ತವೆ.

ಈ ತ್ರಿಪದಿಗಳು ಮೂಲತಃ ಎರಡು ಪಾದಗಳಲ್ಲಿದ್ದು, ನಂತರ ಮೂರುಪಾದಗಳ ಮಟ್ಟಾಯ್ತೆಂಬುದಕ್ಕೆ, ಹಾಡುವಾಗ ಒಳಪ್ರಾಸ ಪುನರಾವೃತ್ತಿ ಕಾಣಿಸುವುದು ಗುರುತಾಗಿದೆ. ಇದರಲ್ಲಿನ ವಿಷ್ಣುಗಣಕ್ಕೆ ಬದಲಾಗಿ ೫ ಮಾತ್ರೆಯ ಗಣಗಳೂ ಬ್ರಹ್ಮಗಣಕ್ಕೆ ಬದಲಾಗಿ ಮೂರು ಮಾತ್ರೆಯಗಣಗಳೂ ಬಂದು ಮಾತ್ರಾಗಣರೂಪಗಳಾಗಿವೆ.
ಪರಿವರ್ತನೆಗೊಂಡು ಈಗ ಕಾಣುವ '**ಮಾತ್ರಾತ್ಮಕ ತ್ರಿಪದಿ**'ಗೆ ಪ್ರಸ್ತಾರ ಉದಾ:

೫	೫	೫	೫	
– – ∪	– – ∪	– ∪ –	– – ∪	
ಮುಂಗೋಳಿ	ಕೂಗ್ಯಾವು	ಮೂಡು ಕೆಂ	ಪೇರ್ಯಾವು	= ೨೦
– ∪ –	∪ –	∪∪ –	∪∪∪ – ∪	
ಸಾಮಿ ನ	ನ್ನಯ್ಯ	ರಥವೇರಿ	ಬರುವಾಗ	= ೧೮
– – ∪	– ∪	∪ ∪ – ∪		
ನಾವೆದ್ದು	ಕೈಯ	ಮುಗಿದೇವು ॥		= ೧೩

(ಈ ಹಾಡು ರೂಪಗಳಲ್ಲಿ ಮಾತ್ರಾಸಂಖ್ಯೆಯೂ ಬದಲಾಗಬಹುದು).

೨) ಸಾಂಗತ್ಯ :

ಹಿಂದೆ ಇದನ್ನು **ಪಾಡು, ಪದಗವಿತೆ, ಪಾಡುಗಬ್ಬ**ಗಳೆನ್ನಲಾಗುತ್ತಿತ್ತು. ಹೆಸರೇ (ಸಂಗತಿ) ಸಂಗೀತವನ್ನು ಬೆರೆಸಿ ಹಾಡುವ ರೀತಿಯನ್ನು ತಿಳಿಸುತ್ತದೆ. ಈ ಛಂದೋರೂಪದ ಹಾಡನ್ನು ವಾಚಿಸುವಾಗ ಧಾಟಿ ಮುಖ್ಯ. ಗಣಬದಲಾವಣೆಗೆ ಹೊಂದಿಸಿಕೊಳ್ಳಬೇಕಾಗುತ್ತದೆ. ಹಾಡುವಾಗ **ಲಘುವನ್ನು ಎಳೆವುದು, ಗುರುವನ್ನು ಕುಗ್ಗಿಸಿ, ಹೇಳುವುದು** ಸಾಮಾನ್ಯ.

ಅಂಶಗಣಾತ್ಮಕ ಸಾಂಗತ್ಯ ಲಕ್ಷಣ :

೧) ಇದು ನಾಲ್ಕುಪಾದಗಳಿಂದ ಕೂಡಿರುತ್ತದೆ.

೨) ಮೊದಲೆರಡು ಪಾದಗಳಿಗೆ ಉಳಿದೆರಡು ಪಾದಗಳು ಸಮಾನವಾಗಿರುತ್ತವೆ.

೩) ಪದ್ಯಾರ್ಧದಲ್ಲಿ (ಎರಡುಪಾದ) **ಏಳು**ಗಣಗಳಿರುತ್ತವೆ.

೪) ಮೊದಲಲ್ಲಿ **ಆರುವಿಷ್ಣುಗಣ,** ಕೊನೆಯಲ್ಲಿ **ಒಂದುಬ್ರಹ್ಮಗಣವೂ** ಬರುತ್ತದೆ. ಉಳಿದರ್ಧವೂ ಹೀಗೇ ಇರುವುದು. ಒಟ್ಟು **ಹದಿನಾಲ್ಕು ಗಣ**ಗಳಿರುತ್ತವೆ.

ಪ್ರಸ್ತಾರ ಪದ್ಯ :

ವಿ	ವಿ	ವಿ	ವಿ
ಕಾವೇರಿ	ಯಿಂದ ಗೋ	ದಾವರಿ	ವರೆಗ ಮಿ

ವಿ	ವಿ	ಬ್ರ
ದರ್ಾ ವಸು	ಧಾ ತಳ	ವಳೆಯ ॥

ವಿ	ವಿ	ವಿ	ವಿ
ಭಾವಿಸೆ	ಕರ್ನಾಟ	ಕದ ಜನ	ಪದವ ನ

ವಿ	ವಿ	ಬ್ರ
ದಾವನೊ	ಲಿದು ಬಣ್ಣಿ	ಸುವನು॥

ಸಮನ್ವಯ : ಪದ್ಯಾರ್ಧದ ಆದಿಯಲ್ಲಿ ಆರುವಿಷ್ಣುಗಣಗಳೂ ಕೊನೆಯಲ್ಲಿ ಒಂದು ಬ್ರಹ್ಮವೂ ಇವೆ. ನಾಲ್ಕೂ ಪಾದಗಳಲ್ಲಿ ಒಟ್ಟು ಹದಿನಾಲ್ಕು ಗಣಗಳಿವೆ.

ವಾಕ್ಯರಚನೆ

ನಾವು ಮಾತಿನಲ್ಲಿ ಅಥವಾ ಬರಹದಲ್ಲಿ ಯೋಚನೆಗಳನ್ನು ಹೇಗೆ ತರ್ಕಬದ್ಧವಾಗಿ ಜೋಡಿಸಿಕೊಳ್ಳುತ್ತೇವೆ ಎಂಬ ತಿಳುವಳಿಕೆ ಭಾಷೆಯ ಅಭ್ಯಾಸದ ಪರಿಣತೆಗೆ ಪೂರಕ ಸಾಕ್ಷಿ. ಅದರಲ್ಲಿ ಸಣ್ಣ ವಾಕ್ಯಗಳು ಸುಲಭ, ಉದ್ದ ವಾಕ್ಯಗಳು ಕಷ್ಟವೆಂಬ ಭಾವನೆ ಸರಿಯಲ್ಲ. ಯೋಚನೆಗಳನ್ನು ಸುಸಂಬದ್ದವಾಗಿ ಜೋಡಿಸಿಕೊಂಡಿದ್ದರೆ ವಾಕ್ಯಉದ್ದವಿದ್ದರೂ ನಮಗೆ ಓದಿದೊಡನೆ ಅರ್ಥವಾಗುತ್ತದೆ. ಈ ರೀತಿ ನಮ್ಮ **ಬರಹದ ವಾಕ್ಯದಲ್ಲಿ ಯೋಚನೆಗಳನ್ನು ಸುಸಂಬದ್ಧವಾಗಿ ನಾಮವಿಶೇಷಣ, ಕ್ರಿಯಾವಿಶೇಷಣ ಸಂಜ್ಞೆಗಳನ್ನು ಜೋಡಿಸಿ, ಹಿಗ್ಗಿಸಿ ಬರೆಯುವುದನ್ನು ಕಲಿಯಬೇಕು.**

ಉದಾ : '**ಹದಿಮೂರು** ರೂಪಾಯಿ ಸಂಬಳ ಪಡೆಯುವ ಸರ್ಕಾರಿ ನೌಕರನನ್ನು ಸಮಾಜದ ಗಣ್ಯಪುರುಷನೆಂದು **ಭಾವಿಸುವದೇಶ**ದಲ್ಲಿ ಲೋಕನಿಂದನೆಗೆ ಗುರಿಯಾದ ನಾಟಕವೃತ್ತಿಯನ್ನವಲಂಬಿಸಿ ಧನ, ಮಾನ, ಪ್ರತಿಷ್ಠೆಗಳನ್ನು **ಸೂರೆಗೊಂಡಿರುವ** ವೀರಣ್ಣನವರು ಸ್ವತಂತ್ರ ಜೀವನದ ಸಾಧನಯೋಗದ ಮಹತ್ವವನ್ನು ಸಾರಿದ್ದಾರೆ'. ಇಲ್ಲಿ **ಹದಿಮೂರು .....**ಎನ್ನುವುದು **ದೇಶ** ಎನ್ನುವಪದಕ್ಕೆ ನಾಮವಿಶೇಷಣಾವಾಗಿ ಕೆಲಸಮಾಡಿದೆ. ಹೀಗೆ

ಲೋಕನಿಂದನೆಗೆ ಗುರಿಯಾದ ನಾಟಕ...... ಸೂರೆಗೊಂಡಿರುವ ಈ ಭಾಗಗಳು ವೀರಣ್ಣನವರಿಗೆ ನಾಮವಿಶೇಷಣವಾಗಿದೆ. **ಸ್ವತಂತ್ರ ಜೀವನದ ಸಾಧನಾಯೋಗದ** ಈ ಭಾಗದ **ಮಹತ್ವವನ್ನು** ಎಂಬ ಕರ್ಮಪದದ ವಿಶೇಷಣವಾಗಿವೆ. ಹೀಗೆ ಅನೇಕ ಯೋಚನೆ, ಅನಿಸಿಕೆಗಳು ಹೇಗೆ ಬಂದು ವಾಕ್ಯವಾಗುತ್ತವೆ ಎಂಬುದನ್ನು ತೋರಿಸಲು ವಿವರಿಸಲಾಗಿದೆ.

ವಾಕ್ಯವೊಂದನ್ನು ಮಾಡಲು **ಅವನತಿ**ಯೆಂಬ ಶಬ್ದಕೊಟ್ಟರೆ ಅರ್ಥಗೊತ್ತಿರುವವರೂ ಈ ಶಬ್ದ ಬಳಸಿ ತಟ್ಟನೆ ವಾಕ್ಯಮಾಡಲಾರರು; ಮಾಡಿದರೂ **'ವಿಜಯನಗರದ ಸಾಮ್ರಾಜ್ಯ ಅವನತಿಯ ಹಾದಿಯಲ್ಲಿತ್ತು.'** ಇತ್ಯಾದಿ. ಇದು ಸ್ವಂತ ವಾಕ್ಯವೆನಿಸಲು ಸಾಧ್ಯವೆ? ಇದು ಬೇರೆಯವರು ಮಾಡಿದ **ಯೋಜಿತ ವಾಕ್ಯ**. ಇದನ್ನೇ **'ಚರ್ಮದ ಪಾದರಕ್ಷೆ ಉದ್ಯೋಗ ಅವನತಿಯ ಹಾದಿಯಲ್ಲಿದೆ.'** ಎಂದರೆ ಅದು ಸ್ವಂತ ಯೋಚನೆಯ ವಾಕ್ಯವಾಗುತ್ತದೆ.

ಹೀಗೆ ಎಷ್ಟು ಸಾಧ್ಯವೋ ಅಷ್ಟು ವಸ್ತು, ಯೋಚನೆಗಳಿರುವ ವಾಕ್ಯಗಳನ್ನು ಮಾಡುವ, ಬರೆಯುವ ಕಲೆಯ ಆರಂಭವಾಗಬೇಕು. ಹೀಗೆ ಮೊದಲ ವಾಕ್ಯಮಾಡಲು ಮಾತ್ರ ಕಷ್ಟ. ಸಂಬಂಧಿಸಿದಂತೆ ಎರಡನೆಯವಾಕ್ಯ ಬೇಗನೆ ಮಾಡಬಹುದು. ಹಾಗೆ **ಯೋಚನೆಗಳಿದ್ದರೆ ಮಾತ್ರ ವಾಕ್ಯಗಳು ಸುಲಭವಾಗಿ ಬರುತ್ತವೆ.** ಈ ಯೋಚನೆಗಳನ್ನು ನಮ್ಮ ಸ್ವಂತ ವಾಕ್ಯ ಮಾಡುವುದೇ ಬರವಣಿಗೆ ಈ ಕಲೆಯನ್ನು ಕಲಿಸುವುದು ಮೊದಲ ಹೆಜ್ಜೆಯಾಗಬೇಕು.

ಒಬ್ಬನ ಭಾಷಾಕಲಿಕೆಯನ್ನು ಆತನು ಪ್ರಯೋಗಿಸುವ ವಾಕ್ಯರಚನೆಯಿಂದ ತಿಳಿಯಬಹುದು. ಶಬ್ದಾರ್ಥಗಳು ಗೌರೀಶರಿದ್ದಂತೆ. ಅವುಗಳಲ್ಲಿ ಅನ್ಯೋನ್ಯತೆ, ಆಂತರಿಕ ಹೊಂದಿಕೆಗಳಿರಬೇಕು. ಸರಿಯಾದ ಅರ್ಥಕ್ಕೆ ಸರಿಯಾದ ಪದಗಳನ್ನು ಸಂಬಂಧಕ್ಕನುಗುಣವಾಗಿ ಹೊಂದಿಸಬೇಕು. ಆದ್ದರಿಂದ ಸರಿಯಾದ ರೀತಿಯಲ್ಲಿ **'ವಾಕ್ಯರಚನೆ'** ಮಾಡುವುದನ್ನು ಕಲಿಯಬೇಕು.

ವಾಕ್ಯರಚನೆಯು ಸಾಹಿತ್ಯ ರಚನೆ ಮತ್ತು **ವ್ಯವಹಾರಗಳಲ್ಲಿ** ಮಹತ್ವವಾದುದು. ಭಾವನೆ ಅಥವಾ ಯೋಚನೆಗಳನ್ನು ಒಂದುಭಾಷೆಯಲ್ಲಿ ವ್ಯಕ್ತಪಡಿಸುವ ರೀತಿಗಿಂತ ಭಿನ್ನವಾಗಿರುತ್ತದೆ. ಒಂದು ಭಾಷೆಯಲ್ಲಿ ಬಳಸುವ ಶಬ್ದ, ನುಡಿಗಟ್ಟು, ರೀತಿಗಳನ್ನು , ಇನ್ನೊಂದು ಭಾಷೆಯಲ್ಲಿ ಬಳಸುವುದು ಕೃತಕತೆ, ಗೊಂದಲ, ಅಸ್ಪಷ್ಟತೆಗೆ ಆಸ್ಪದವಾಗುತ್ತದೆ. ಹೀಗಾಗಿ ವಾಕ್ಯರಚನೆಯಲ್ಲಿ ಕೆಲವುತಪ್ಪುಗಳು, ಗೊಂದಲಗಳು ಸಂಭವಿಸುವುದುಂಟು. ಉದಾ: **'ಶಬ್ದಸಾಮೀಪ್ಯದೋಷ'**(೧) (Error of proximity). ನಾವು ಬಳಸುವ ಶಬ್ದಗಳ ಸಾಮೀಪ್ಯದ ಸಂಬಂಧದಲ್ಲಿ ಏರುಪೇರಾದಾಗ ವಾಕ್ಯದ ಅರ್ಥಗಳಲ್ಲಿ ಗೊಂದಲವಾಗುತ್ತವೆ. ಇದನ್ನು **ಭಾಷಾಂತರದ ಹಿನ್ನೆಲೆಯಲ್ಲಿ ವಿಚಾರ ಮಾಡೋಣ:** ವಾಕ್ಯರಚನೆಯಲ್ಲಿ ಇಂಗ್ಲೀಷ್ ಭಾಷೆಯ ವಾಕ್ಯಗಳನ್ನು ಕನ್ನಡಕ್ಕೆ ಅನುವಾದಿಸುವಾಗ ಎಚ್ಚರವಿರಬೇಕಾಗುತ್ತದೆ. ಏಕೆಂದರೆ ಕನ್ನಡ ಪದಗಳ-ವಾಕ್ಯಗಳ ಜಾಯಮಾನಕ್ಕೂ ಇಂಗ್ಲೀಷ್ ಜಾಯಮಾನಕ್ಕೂ ಹೊಂದದೆ ಹೋಗಬಹುದು. ಭಾಷಾಂತರ ಮಾಡುವಾಗ ಮೂಲಭಾಷೆಯ ನುಡಿಗಟ್ಟಿಗೆ ಸಮನಾದ ಸೂಕ್ತ ನುಡಿಗಟ್ಟು ಇಲ್ಲದಿದ್ದರೆ ಅದನ್ನು ಕೈಬಿಟ್ಟು ಹೊಂದುವ ನುಡಿಗಟ್ಟನ್ನು ಆರಿಸಿಕೊಳ್ಳಬಹುದು. **ಭಾಷಾಂತರದಲ್ಲಿ ಶಬ್ದಶಃ ಭಾಷಾಂತರಿಸಲಾಗದು**. ಹಾಗಾದರೆ ಕೃತಕತೆಗೆ ಆಸ್ಪದವಾದೀತು. ಕಛೇರಿ, ಕಾರ್ಯಾಲಯದಲ್ಲಿ ಇಂತಹ ಭಾಷಾಂತರ ಗೊಂದಲ, ಆಭಾಸಕರ ವಾಕ್ಯಗಳಾಗುತ್ತವೆ.

ಅಂತಹ ಪ್ರಸಂಗಗಳಲ್ಲಿ ಕನ್ನಡದ ಸರಳ, ಚಿಕ್ಕವಾಕ್ಯಗಳ ಜಾಯಮಾನದ ವಾಕ್ಯಗಳಿಗೆ ಇಂಗ್ಲೀಷ್ ಸಂವಾದಿಯಾಗುವುದಿಲ್ಲ.

ಕೆಲವು ನಿದರ್ಶನಗಳು :

೧) "**ಸರ್ಕಾರದ ಔದಾರ್ಯದಿಂದ ತಾಯಿ**ಯಾಗುವ ಉದ್ಯೋಗಸ್ಥ ನೌಕರರಿಗೆ ಹೆರಿಗೆ ರಜಾ ಸಿಗುತ್ತದೆ". - ಇಲ್ಲಿ ಗೆರೆಎಳೆದ ಆಭಾಸದ ವಾಕ್ಯಭಾಗವನ್ನು ಗಮನಿಸಬೇಕು. ಇಲ್ಲಿ ಶಬ್ದಗಳಲ್ಲಿನ ಪರಸ್ಪರ ಸಂಬಂಧವನ್ನು ಗುರುತಿಸಬೇಕಾದುದು ಮುಖ್ಯ. ಅದರಲ್ಲೂ **ಗುಣವಾಚಕ** (ವಿಶೇಷಣ)ಗಳನ್ನು ಎಚ್ಚರದಿಂದ ಗಮನಿಸಬೇಕಾಗುತ್ತದೆ. ಈ ಮಾತು ಕ್ರಿಯಾ **ವಿಶೇಷಣಗಳಿಗೂ** ಅನ್ವಯಿಸುತ್ತದೆ.

೨) "ತಮಗೆ ಉಂಟಾದ ಅಪಘಾತವನ್ನು ತಿಳಿದು ನಮಗೆಲ್ಲ ಅತೀವ ವ್ಯಥೆಯಾಯಿತು. **ದೇವರೇತಮ್ಮನ್ನು ಕಾಪಾಡಿದನು; ಇನ್ನುಮುಂದೆ ಹೀಗಾಗದಿರಲೆಂದು ಪ್ರಾರ್ಥಿಸುತ್ತೇನೆ!"**. ಇಲ್ಲಿನ ಕೊನೆಯ ಭಾಗದ ಅರ್ಥವೇನು ? **ದೇವರು ಮುಂದೆ ಕಾಪಾಡಬಾರದೆಂದೇ**?

ಇಂಗ್ಲೀಷ್ ಭಾಷೆಯ ಜಾಯಮಾನಕ್ಕೂ ಕನ್ನಡದ ವಾಕ್ಯಗಳ ಸ್ವಭಾವಕ್ಕೂ ವ್ಯತ್ಯಾಸವಿದೆ. ಆ ವಾಕ್ಯಗಳಂತೆ ಕನ್ನಡವಾಕ್ಯಗಳನ್ನು ಅನುವಾದಿಸಿ ಹೇಳಲು ಯತ್ನಿಸಿದಾಗ, ಸೂಕ್ತವಾದ ಪದಪುಂಜ ಯಾವುದು ಎಂಬುದನ್ನು ತೀರ್ಮಾನಿಸಿ ಪ್ರಯೋಗಿಸಬೇಕು. ಇಲ್ಲದಿದ್ದರೆ ಅರ್ಥಸ್ಪಷ್ಟತೆಗೆ ಕುಂದುಬರುವ ಸಾಧ್ಯತೆಯುಂಟು. ಅನೇಕವೇಳೆ ಗೊಂದಲವಾಗುವುದಿದೆ. ಉದಾ :

೩) **"ನೀವು ಬಾರದಹೊರತು ನಾನು ಊರಿಗೆ ಹೋಗುವುದಿಲ್ಲ"** ಹಾಗೆಯೇ **('ನೀವು ಬಂದಹೊರತು ನಾನು ಊರಿಗೆ ಹೋಗುವುದಿಲ್ಲ')** ಈ ವಾಕ್ಯಗಳಲ್ಲಿ ಮೊದಲವಾಕ್ಯದಲ್ಲಿ 'ನೀವು ಬಾರದ ಹೊರತು' **ನಿಷೇಧಾರ್ಥಕಶಬ್ದ**ಬಳಕೆ ಸಮಂಜಸ ವೆನಿಸದು. ರೂಢಿಯ ಇಂತಹ ವಾಕ್ಯಗಳಲ್ಲಿ ಇವು ಗಮನಿಸಬೇಕಾದ ಅಂಶಗಳು.

೪) **"ವಿದ್ಯುತ್‌ದರ ಏರಿಕೆಗೆ ಪ್ರತಿಭಟನೆ"** ಎನ್ನುವುದನ್ನು **'ವಿದ್ಯುತ್‌ದರ ಏರಿಕೆ ವಿರುದ್ಧ ಪ್ರತಿಭಟನೆ'** - ಇದು ಸರಿಯೇ? ಇವು ರೂಢಿಯಮಾತೆಂದು ಜಾರಿಕೊಳ್ಳಲಾಗದು. ಶಬ್ದ ಗಳು ಔಚಿತ್ಯವರಿತು ವಾಕ್ಯದಲ್ಲಿ ಬಂದರೆ ಸೂಕ್ತ. ಹೀಗೆಯೇ **"ಉಪವಾಸ ಸತ್ಯಾಗ್ರಹ"** ಎನ್ನುವುದನ್ನು **"ಆಮರಣಾಂತ ಉಪವಾಸ ಸತ್ಯಾಗ್ರಹ"** ಎನ್ನುವ ವಾಕ್ಯಗಳಕಡೆ ಗಮನ ಹರಿಸಬೇಕಾಗಿದೆ. ಈ ದೋಷಗಳಿಗೆ ಪರಿಹಾರ ಹೇಗೆ? ಇತ್ತೀಚಿಗೆ 'ಸಲ್ಮಾನನ **ಮರಣೋತ್ತರ ಹೇಳಿಕೆ** ಮೇಲೆ ಪೊಲೀಸ್ ತನಿಖೆ ನಡೆಸುತ್ತಿದ್ದಾರೆ'- ಸಲ್ಮಾನನ ಹೇಳಿಕೆ ಮರಣೋತ್ತರ! ಇತ್ಯಾದಿ - ಇಲ್ಲಿನ ಭಾಷೆ ತನ್ನ ನಿಜಸಂವಹನ ಮಾಡುತ್ತಿದೆಯೇ. ವಿಚಾರಮಾಡಬೇಕಾಗಿದೆ. ಈ ಹಿನ್ನೆಲೆಯಲ್ಲಿ (ಜನರ

ಭಾಷೆಯಲ್ಲಿ ಮಾತ್ರ ಪೂರ್ಣಸಂವಹನೆ)ಒಂದು ಭಾಷೆಯು ಅದು ಆಡುಮಾತಿನಲ್ಲಿರುವ ರೀತಿ, ಬರಹದಲ್ಲಿರುವ ರೀತಿಗಿಂತ ಭಿನ್ನವಾಗಿರುತ್ತದೆ ಎಂಬ ಅಂಶವನ್ನು ನಾವು ಗಮನಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ **ವಾಕ್ಯವೆಂದರೇನು? ರಚನೆ ಹೇಗೆ?** ಇತ್ಯಾದಿ ಅಂಶಗಳನ್ನು ತಿಳಿಯಬೇಕಾಗುತ್ತದೆ.

ವಾಕ್ಯಗಳು :

ವಾಕ್ಯಗಳು ಕರ್ತೃ ಪದ, ಕರ್ಮಪದ, ಕ್ರಿಯಾ ಪದಗಳಿಂದಕೂಡಿ ಸಂಪೂರ್ಣ ಅರ್ಥವನ್ನು ಕೊಡುತ್ತವೆ. ಇವುಗಳನ್ನು **'ವಾಕ್ಯ'**ಗಳೆನ್ನುತ್ತೇವೆ. ಇಷ್ಟೇ ಅಲ್ಲದೆ ನಾಮಪದಗಳಿಗೆ ಬೇರೆಯಾದ ಉಪಪದಗಳು ಅಗತ್ಯವಾದ ಪ್ರತ್ಯಯಗಳು, ಅವ್ಯಯಗಳು ಸೇರುತ್ತವೆ. ಉದಾ :

೧) **ದೇವರು ನಮ್ಮನ್ನು ಕಾಪಾಡುವನು.**

(ಕರ್ತೃ) (ಕರ್ಮ) (ಕ್ರಿಯೆ)

೨) **ಹಕ್ಕಿಯು ನೀರಿನಲ್ಲಿ ಮುಳುಗಿತು.**

ಕೆಲವೊಮ್ಮೆಮುಖ್ಯ ವಸ್ತು ಕರ್ತೃ, ಕ್ರಿಯೆ, ಕರ್ಮಗಳಿಲ್ಲದ ವಾಕ್ಯಗಳನ್ನು ಪ್ರಯೋಗಿಸುತ್ತೇವೆ ಉದಾ: **೧) ಓಡಿ ಬಾ. ೨) ರವಿ ಕುಡಿದನು. ೩) ಅವನು ಶಕ್ತಿವಂತ.**

ಒಂದನೆಯ ವಾಕ್ಯದಲ್ಲಿ **'ನೀನು'** ಕರ್ತೃಪದವನ್ನು, ಎರಡನೆಯ ವಾಕ್ಯದಲ್ಲಿ **'ಹಾಲನ್ನೂ'** ಎಂಬ ಕರ್ಮಪದವನ್ನೂ ಮೂರನೆಯ ವಾಕ್ಯದಲ್ಲಿ **'ಆಗಿದ್ದಾನೆ'** ಎಂಬ ಕ್ರಿಯಾಪದಗಳನ್ನೂ ಹೇಳಿರುವುದಿಲ್ಲ. ಇವುಗಳನ್ನು ಕೆಲವೊಮ್ಮೆ ಅನ್ವಯಿಸಿಕೊಂಡು ಅರ್ಥಮಾಡಿಕೊಳ್ಳುತ್ತೇವೆ. ಹೀಗೇ **ವಾಕ್ಯಗಳಲ್ಲಿರದ ಅಗತ್ಯಪದಗಳನ್ನು ಅರ್ಥಪೂರ್ತಿಗನುಸಾರವಾಗಿ** ಇದೆಯೆಂದು ಊಹಿಸಿ, ಹೊಂದಿಸಿಕೊಳ್ಳುವುದಕ್ಕೆ **'ಅಧ್ಯಾಹಾರ'** ಎನ್ನುತ್ತೇವೆ.

ಮೇಲಿನ ಮೊದಲವಾಕ್ಯಗಳಲ್ಲಿ ಕರ್ತೃಪದದ ನಂತರ ಕರ್ಮಪದ, ಕೊನೆಯಲ್ಲಿ ಕ್ರಿಯಾಪದಗಳು ಬಂದಿವೆ. ಈ ಕ್ರಮವನ್ನು **'ಅನ್ವಯಕ್ರಮ'** ವೆನ್ನುತ್ತೇವೆ. ಈ ಕ್ರಮವು ಹೀಗೆ ಇರಬೇಕೆಂದು ವಿಧಿಸಲಾಗದು. ಅದೂ ಅಲ್ಲದೆ ಇತ್ತೀಚೆಗೆ ಕ್ರಿಯಾಪದಗಳಿರದ ವಾಕ್ಯಸರಣಿಯಲ್ಲಿ ಬಗೆಬಗೆಯ ಗದ್ಯಶೈಲಿಯಲ್ಲಿ ಬಳಕೆಯಲ್ಲಿವೆ.

'ಮಳೆಯಲ್ಲಿ ತೊಯ್ದು ಬಂದಿದ್ದ ವ್ಯಕ್ತಿಯನ್ನು ರಾಜ ಅರಮನೆಗೆ ಕರೆದುಕೊಂಡು ಹೋಗಿ, ಹೊದಿಕೆಯನ್ನು ಹೊದಿಸಿ, ಅಂಗಾಲಿಕೆ ಬೂದಿ ತಿಕ್ಕಿದರು, ಕಣ್ಣನು ತೆರೆದನು'- ಇಂತಹ ಅಪೂರ್ಣಕ್ರಿಯಾ ಪದಗಳ ಶೈಲಿಯಿಂದ ಕಾಲ್ಪನಿಕ ಚಿತ್ರಗಳು ಕಣ್ಮುಂದೆ ಮೂಡುವುದು. ಈ ರೋಚಕ ಕಥನಾಶೈಲಿಯಿಂದ ಓದುವಶಕ್ತಿ ಹಾಗೂ ಭಾಷಾಪ್ರವೃತ್ತಿಗಳು ಮಕ್ಕಳಲ್ಲಿ ಮೂಡಬಲ್ಲದು. ಈ ಅಂಶವನ್ನು ಪಠ್ಯರಚಿಸುವವರು ಗಮನಿಸಬೇಕಾಗುತ್ತದೆ.

ಅಸ್ತವ್ಯಸ್ತವಾಗಿರುವ ವಾಕ್ಯವನ್ನೂ ಅದರಸ್ವರೂಪವನ್ನೂ ತಿಳಿಯುವುದು ಹೇಗೆಂಬುದನ್ನು ವಿಚಾರಮಾಡೋಣ. ಉದಾ :

೧) **ಒಳ್ಳೆಯ** ಲೇಖನಿಯಿಂದ ಪಾಠವನ್ನು **ಚೆನ್ನಾಗಿ** ಬರೆದೆನು.

೨) ಜಾಣರು **ತುಂಟ** ಹುಡುಗರೊಂದಿಗೆ ಸೇರಬಾರದು.

ಒಂದನೆಯ ವಾಕ್ಯದಲ್ಲಿ **'ಒಳ್ಳೆಯ'**ಯೆಂಬುದು **'ಲೇಖನಿ'**ಯೆಂಬ ಕರ್ತೃವಿಗೆ ವಿಶೇಷಣವಾಗಿದೆ. ಹಾಗೆಯೇ **'ಬರೆ'**ಯೆಂಬ ಕ್ರಿಯೆಗೆ **'ಚೆನ್ನಾಗಿ'**ಯೆಂಬುದು **'ಕ್ರಿಯಾ ವಿಶೇಷಣ'**ವಾಗಿದೆ. ಈ ಕರ್ತೃಗಳು ಒಂದೋ, ಎರಡೋ ಬರಬಹುದು. ಕೃರ್ತ, ಕರ್ಮಗಳಿಗೆ ನಾಮವಿಶೇಷಣಗಳು ಬರುತ್ತವೆ. ಅವು ಗುಣ, ಪ್ರಕಾರ, ಸಂಖ್ಯಾ, ಪ್ರಮಾಣ, ಕೃದಂತ ಸಂಖ್ಯಾವಾಚಕಗಳಾಗಿರುತ್ತವೆ. **ಎರಡನೆಯ** ವಾಕ್ಯದಲ್ಲಿ **'ತುಂಟ'**ಯೆಂಬುದು, **'ಹುಡುಗ'**ಯೆಂಬ ಕರ್ಮಪದಕ್ಕೆ ವಿಶೇಷಣವಾಗಿ ಬಂದಿದೆ.

ಪಕ್ಷಿಯು ಎತ್ತರೆತ್ತರಕ್ಕೆ ಹಾರಿ ಹೋಯಿತು - ಇಲ್ಲಿ **ಪಕ್ಷಿ** ಕರ್ತೃ ಪದ, **ಹಾರು** ಅಕರ್ಮಕ ಕ್ರಿಯಾಪದವಾಗಿರುವುದರಿಂದ ಇಲ್ಲಿ ಕರ್ಮಪದವಿಲ್ಲ. **ಎತ್ತರೆತ್ತರಕ್ಕೆ** ಎಂಬುದು ಕ್ರಿಯಾ ವಿಶೇಷಣಾ. ಹೀಗೆ ಕರ್ತೃ, ಕರ್ಮ, ಕ್ರಿಯೆಗಳ ಮೊದಲು ಸಂಬಂಧಿಸಿದ ವಿಶೇಷಣಗಳು ಬರುತ್ತವೆ. ಕ್ರಿಯಾಪದ, ಕರ್ಮಪದಗಳ ಮುನ್ನ ಅವ್ಯಯಗಳು ಬರಬಹುದು. ಈ ರೀತಿಯ ಅನ್ವಯಕ್ರಮವನ್ನು ಗದ್ಯದಲ್ಲಿ ನೋಡಬಹುದು. ಹೀಗೆ ಅನ್ವಯ ಮಾಡುವಾಗ ವಾಕ್ಯಗಳ ಕರ್ತೃಗಳ ವಿಭಕ್ತಿ, ವಚನಕ್ಕನುಸಾರವಾದ ಕ್ರಿಯೆ, ಇರಬೇಕಾಗುತ್ತದೆ. ಉದಾ : ೧. **ಆ ಕೊಳದಲ್ಲಿ ತಾವರೆ ಹೂಳುಗಳು ಅರಳಿ ನಿಂತಿತ್ತು**- (ನಿಂತಿದ್ದ**ವು**) ೨. ಆತನಿಗೆ ಕುಶಲ ವಿದ್ಯೆ **(ಗಳು)** ತಿಳಿದಿದ್ದವು. ೩. ಆಯುಧಗಳೆಲ್ಲವು ಭದ್ರವಾಗಿರುತ್ತದೆ(**ವೆ**). ಇಲ್ಲಿ ವಚನ ದೋಷಗಳಾಗಿವೆ. **ಗದ್ಯದವಾಕ್ಯ**ಗಳಲ್ಲಿ ಈ ದೋಷಗಳಾಗದಂತೆ ಎಚ್ಚರ ವಹಿಸಬೇಕಾಗುತ್ತದೆ.

ಪದ್ಯದಲ್ಲಿ ಕವಿಗಳಿಗೆ ಭಾವತೀವ್ರತೆ, ಅರ್ಥಪುಷ್ಟಿಗಳು, ಪರಿಣಾಮಗಳು ಮುಖ್ಯ. ಅಲ್ಲಿ ಪದಗಳು ಛಂದಸ್ಸಿಗನುಗುಣವಾಗಿ ಹಿಂದೆ ಮುಂದೆ ಇರುವುದುಂಟು. **'ಕಟ್ಟುವೆವು ನಾವು ಹೊಸ ನಾಡೊಂದನ್ನು ರಸದ ಬೀಡೊಂದನ್ನು'** ಇಲ್ಲಿ ಪದ್ಯದ ಕರ್ತೃ, ಕರ್ಮ, ಕ್ರಿಯೆಗಳ **ಸ್ಥಾನಪಲ್ಲಟವೆ ಕವಿತೆಯ ಜೀವಾಳ**ವೆಂಬುದನ್ನು ನೋಡಬಹುದು. ಕವಿ ಭಾವ, ಲಯಾಶ್ರಯ ಚಮತ್ಕಾರಕ್ಕಾಗಿ ಈ ಪಲ್ಲಟವನ್ನು ಮಾಡಿರುತ್ತಾನೆ. ಈ ಪದ್ಯದಲ್ಲಿ ಅರ್ಥವನ್ನು ತಿಳಿದುಕೊಳ್ಳಲು **'ಅನ್ವಯಿಕ'** ವಿಧಾನ(೧) ಕರ್ತೃ, ಕ್ರಿಯಾಪದಗಳನ್ನು ಮೊದಲು ಗುರುತಿಸಿಕೊಂಡು ನಂತರ ಅವುಗಳ ವಿಶೇಷಣ, ಅವ್ಯಯಗಳನ್ನು ಹೊಂದಿಸಿಕೊಳ್ಳುವ ರೂಢಿಯಿದೆ. ಆಧುನಿಕ ಕವಿತೆಗಳಲ್ಲಿ ಸ್ವಚ್ಛಂದತೆ, ಸರಳತೆಗಳಿಗನುಸಾರವಾಗಿ ಪದಗಳ ಹಿನ್ನೆಲೆಯಲ್ಲಿ ಸಂಕೇತ, ಪ್ರತಿಮೆಗಳನ್ನು ಬಳಸಿಕೊಂಡು ಹೇಳಲಾಗುತ್ತದೆ. ಅಲ್ಲಿ ಅವುಗಳ ಹಿನ್ನೆಲೆಗಳ ಪರಿಚಯವಿರಬೇಕು.

ವಾಕ್ಯಪ್ರಕಾರಗಳು : ರಚನೆಯದೃಷ್ಟಿಯಿಂದ ವಾಕ್ಯಗಳಲ್ಲಿ ಮೂರು ವಿಧಗಳಿವೆ:

---

೧) ಪದ್ಯ ವಿವರಣೆಯಲ್ಲಿ ಅನುಸರಿಸುವ ಒಂದು ವಿಧಾನ. ಅದೊಂದು **ಬೋಧನಾ ವಿಧಾನ**ವಾಗಿದೆ.

i) ಸರಳವಾಕ್ಯ (ಸಾಮಾನ್ಯವಾಕ್ಯ). ii) ಮಿಶ್ರವಾಕ್ಯ. iii) ಸಂಯೋಜಿತವಾಕ್ಯ (ಸಂಯುಕ್ತ ವಾಕ್ಯ).

i) **ಸರಳವಾಕ್ಯ :** ಈ ಒಂದು ಪೂರ್ಣಕ್ರಿಯಾಪದವನ್ನುಳ್ಳ ಸ್ವತಂತ್ರವಾಕ್ಯಕ್ಕೆ **'ಸಾಮಾನ್ಯವಾಕ್ಯ'** ವೆನ್ನುತ್ತೇವೆ. ಅವು ಪೂರ್ಣಾರ್ಥವನ್ನು ಕೊಡುತ್ತವೆ.

ಉದಾ: ೧) ಬೆಕ್ಕು ಅಡಿಗೆಮನೆಗೆ **ನುಗ್ಗಿ** , ಪಾತ್ರೆಯ ಹಾಲನ್ನೆಲ್ಲಾ ಕುಡಿಯಿತು.

೨) ಹಲ್ಲುಗಳನ್ನು **ಉಜ್ಜಿ** ರಕ್ಷಿಸಿಕೊಳ್ಳಬೇಕು.

ಈ ವಾಕ್ಯಗಳಲ್ಲಿ **'ನುಗ್ಗಿ'** **'ಉಜ್ಜಿ'** ಎಂಬ ಸಾಪೇಕ್ಷಕ್ರಿಯಾಪದಗಳು ಪೂರ್ಣ ಕ್ರಿಯಾಪದದೊಂದಿಗೆ ಬಂದಿವೆ. ಹೀಗೇ **'ಸಾಮಾನ್ಯವಾಕ್ಯ'**ಗಳಲ್ಲಿ ಒಂದು ಪೂರ್ಣ ಕ್ರಿಯಾಪದದ ಜೊತೆಗೆ ಅನೇಕ **'ಸಾಪೇಕ್ಷ ಕ್ರಿಯಾಪದಗಳು'** ಬರಬಹುದು. ಈ ವಾಕ್ಯಗಳಲ್ಲಿ ಮುಖ್ಯವಾದ ಯೋಚನೆಯೊಂದು ಇದ್ದು, ಉಳಿದ ವಾಕ್ಯದಲ್ಲಿನ ಯೋಚನೆಗಳು ಅದಕ್ಕೆ ಸಂಬಂಧಿಸಿರುತ್ತದೆ.

ii) **ಮಿಶ್ರವಾಕ್ಯ :** ಒಂದುಪ್ರಧಾನವಾಕ್ಯಕ್ಕೆ ಒಂದು ಅಥವಾ ಅನೇಕವಾಕ್ಯಗಳು ಅಧೀನವಾಗಿದ್ದರೆ ಅಂತಹ ವಾಕ್ಯವು **'ಮಿಶ್ರವಾಕ್ಯ'** (ಸಂಕೀರ್ಣ)ವೆನಿಸುತ್ತದೆ.

ಉದಾ : ೧) ಸತ್ಯವೇ ಕೊನೆಗೆ ಜಯಿಸುವುದೆಂದು ಎಲ್ಲರೂ **ಒಪ್ಪುವರು**.

೨) ತಿರಿಯುವವರಿಗಿಂತಲೂ ಸಿರಿವಂತರಿಲ್ಲವೆಂದು ಸರ್ವಜ್ಞನು **ಹೇಳಿದನು**.

ಇಲ್ಲೆಲ್ಲ ಒಂದು **ಪ್ರಧಾನವಾಕ್ಯ**, ಮತ್ತೊಂದು **ಅಧೀನವಾಕ್ಯ**ಗಳಿವೆ. ಈ ಎರಡೂ ವಾಕ್ಯಗಳಿಂದ ಕೂಡಿ ಒಂದು **'ಮಿಶ್ರವಾಕ್ಯ'** ವಾಗಿದೆ. ಒಂದನೆಯ ವಾಕ್ಯದಲ್ಲಿ **'ಎಲ್ಲರೂ ಒಪ್ಪುವರು'**→ಪ್ರಧಾನವಾಕ್ಯ. **'ಸತ್ಯವೇ ಕೊನೆಗೆ ಜಯಿಸುವುದು'**→ಇದು ಅಧೀನವಾಕ್ಯ.

ಎರಡನೆಯ ವಾಕ್ಯದಲ್ಲಿ **'ಸರ್ವಜ್ಞನು ಹೇಳಿದನೆಂಬುದು'** - **ಪ್ರಧಾನವಾಕ್ಯ** ಹೀಗೆಯೇ **'ತಿರಿಯುವವರಿಗಿಂತಲೂ** (ನಾಮ ವಿಶೇಷಣಾ) **ಸಿರಿವಂತರಿಲ್ಲ'** - ಇದು ಅಧೀನವಾಕ್ಯ. ಇಲ್ಲಿ ಪೂರ್ಣಕ್ರಿಯಾಪದ ಒಂದೇ ಆಗಿರುವುದುಂಟು. ಈ ಉದ್ದುದ್ದನೆಯ ವಾಕ್ಯಗಳು ಭಾಷಾ ಪರಿಣತಿಗೆ ಪೂರಕವಾಗಿರುತ್ತದೆ. ಅವುಗಳ ತಾರ್ಕಿಕ ಅಂಶಗಳು ಸುಸಂಬದ್ಧವಾಗಿದ್ದರೆ ವಾಕ್ಯಉದ್ದವಿದ್ದರೂ ಓದಿದೊಡನೆ ಅರ್ಥವಾಗುತ್ತವೆ.

iii) **ಸಂಯುಕ್ತವಾಕ್ಯ : (ಸಂಯೋಜಿತವಾಕ್ಯ)** 'ಎರಡು ಅಥವಾ ಅನೇಕ (ಸ್ವತಂತ್ರವಾಗಿ ನಿಲ್ಲಬಲ್ಲ) ಪ್ರಧಾನವಾಕ್ಯಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಒಂದುಗೂಡಿದರೆ ಅವುಗಳನ್ನು **ಸಂಯುಕ್ತವಾಕ್ಯ**ಗಳೆನ್ನುತ್ತೇವೆ'. ಉದಾ :

೧) **ಶರೀರವು** ಅಳಿಯುವುದು, **ಬಳಿಕ** ಕೀರ್ತಿ ಉಳಿಯುವುದು.

೨) **ಎಲ್ಲರ** ಅಗತ್ಯಗಳನ್ನು ಪೂರೈಸಬಲ್ಲಷ್ಟು ಸಂಪತ್ತು ಭೂಮಿಯಲ್ಲಿದೆ, **ಆದರೆ** ಎಲ್ಲರ ದುರಾಸೆಗಳನ್ನಲ್ಲ.

ಈ ಎರಡೂ ಸಂಯುಕ್ತವಾಕ್ಯಗಳಲ್ಲಿ ಸ್ವತಂತ್ರವಾದ ಎರಡೆರಡು ಸರಳವಾಕ್ಯಗಳಿವೆ. ಅವೆರಡೂ ಪ್ರಧಾನವಾಕ್ಯಗಳೇ ಆಗಿವೆ. ಆ ಎರಡು ವಾಕ್ಯಗಳ ನಡುವೆ **'ಬಳಿಕ' 'ಆದರೆ'** ಎಂಬ ಸಮುಚ್ಚಯಾವ್ಯಯಗಳು (ಜೋಡಿಸುವಶಬ್ದ) ಬಂದು ಒಂದೊಂದು **'ಸಂಯೋಜಿತವಾಕ್ಯ'** ಗಳನ್ನಾಗಿ ಮಾಡಿವೆ. ಇಲ್ಲಿನ ಕರ್ತೃ ಒಂದೇ ಆಗಿರುವುದುಂಟು. [**ಊ, ಮತ್ತು, ಬಳಿಕ, ಆದರೂ, ಆದ್ದರಿಂದ, ಆದರೆ, ಓ** - ಇವುಗಳೆಲ್ಲವೂ **'ಸಮುಚ್ಚಯಾವ್ಯಯ'**ಗಳೆನಿಸುತ್ತವೆ]

ವಾಕ್ಯವಿಭಜನೆ :

ವಾಕ್ಯಗಳಲ್ಲಿರುವ ಪದಗಳ ಸಂಬಂಧವನ್ನು ತಿಳಿಯಲು, ಪದಗಳನ್ನು ಬೇರೆ ಬೇರೆಯಾಗಿ ವಿಂಗಡಿಸಿ ತೋರುವುದನ್ನು **'ವಾಕ್ಯವಿಭಜನೆ'** ಎನ್ನುತ್ತೇವೆ. ಈ ವಿಭಜನೆಯಿಂದ ವಾಕ್ಯ ರಚನೆ ಸ್ಪಷ್ಟವಾಗುತ್ತದೆ.

೧) ಸಾಮಾನ್ಯವಾಗಿ ಸರಳವಾಕ್ಯಗಳ ವಿಭಜನೆಯು ತೀರಾಸರಳ. ಆ ವಾಕ್ಯಗಳಲ್ಲಿರುವ **ಕರ್ತೃ, ಕರ್ಮ, ಕ್ರಿಯಾಪದಗಳು** ಮತ್ತು **ವಿಶೇಷಣಗಳನ್ನು ವಿಂಗಡಿಸಿದರೆ** ಸರಳ ವಾಕ್ಯಗಳವಿಭಜನೆಯಾಗುತ್ತದೆ.

೨) ಮಿಶ್ರ /ಸಂಕೀರ್ಣವಾಕ್ಯಗಳ ವಿಭಜನೆಯಲ್ಲಿ ಮೊದಲು ಅಂತ್ಯದ ಪ್ರಧಾನವಾಕ್ಯವನ್ನೂ ಹಿಂದಿನ ಅಧೀನವಾಕ್ಯಗಳನ್ನೂ ಬೇರ್ಪಡಿಸಬೇಕು. ಹಾಗೆಯೇ ಅವುಗಳಿಗಿರುವ ಸಂಬಂಧವನ್ನು ತಿಳಿದುಕೊಳ್ಳಬೇಕು. ಬಳಿಕ ಅವುಗಳನ್ನು ಸಾಮಾನ್ಯವಾಕ್ಯದಂತೆಯೇ ವಿಭಜಿಸಿಕೊಳ್ಳಬಹುದು.

೩) ಸಂಯುಕ್ತವಾಕ್ಯ ವಿಭಜನೆಯಲ್ಲಿ ನಡುವೆ ಇರುವ ಸಮುಚ್ಚಯಾವ್ಯಯಗಳನ್ನು ತೆಗೆದರೆ ವಿಭಜನೆ ಸುಲಭವಾಗುತ್ತದೆ. ನಂತರ ಅಲ್ಲಿರುವ ಪ್ರಧಾನವಾಕ್ಯಗಳನ್ನು ಬೇರ್ಪಡಿಸಿಕೊಳ್ಳಬೇಕು. **ಉಳಿದಅಂಶಗಳಲ್ಲಿ ಸರಳವಾಕ್ಯ** ವಿಭಜನೆಯಂತೆ ಮಾಡಿಕೊಳ್ಳಬಹುದು.

೧. ಸರಳವಾಕ್ಯಗಳ ವಿಭಜನೆ ಪಟ್ಟಿಯಲ್ಲಿ : ಉದಾ:

೧) ಸತ್ಸಂಗವು ಸಹಜವಾಗಿ ಸನ್ಮಾರ್ಗವನ್ನು ತೋರುವುದು.

೨) ಶ್ರದ್ಧಾಳುವಾದ ರೈತನು ಮೊದಲು ಉತ್ತಮ ಬೀಜದಗುಣವನ್ನು ನೋಡುವನು.

ಸರಳವಾಕ್ಯಗಳು ಉದಾ:	ಕರ್ತೃ ವಿಶೇಷಣ	ಕರ್ತೃ	ಕರ್ಮ ವಿಶೇಷಣ	ಕರ್ಮ	ಕ್ರಿಯಾ ವಿಶೇಷಣ	ಕ್ರಿಯೆ
೧) ಸತ್ಸಂಗವು ಸಹಜವಾಗಿ ಸನ್ಮಾರ್ಗವನ್ನು ತೋರುವುದು.	-	ಸತ್ಸಂಗವು	-	ಸನ್ಮಾರ್ಗ - ವನ್ನು	ಸಹಜ ವಾಗಿ	ತೋರು -ವುದು.
೨) ಶ್ರದ್ಧಾಳುವಾದ ರೈತನು ಮೊದಲು ಉತ್ತಮ ಬೀಜದ ಗುಣವನ್ನು ನೋಡುವನು.	ಶ್ರದ್ಧಾಳು -ವಾದ	ರೈತನು	ಉತ್ತಮ	ಬೀಜದ -ಗುಣವನ್ನು	ಮೊದಲು	ನೋಡು -ವನು.

೨) ಮಿಶ್ರವಾಕ್ಯಗಳವಿಭಜನೆ :

ಮಿಶ್ರ -ವಾಕ್ಯಗಳು	ಕರ್ತೃ ವಿಶೇಷಣ	ಕರ್ತೃ	ಕರ್ಮ ವಿಶೇಷಣ	ಕರ್ಮ	ಕ್ರಿಯಾ ವಿಶೇಷಣ	ಕ್ರಿಯೆ	ಸಂಬಂಧ ಸೂ.ಅ
ನಮ್ಮವರು ಪೂರ್ಣವಾಗಿ ನಂಬಿದ್ದರು. **(ಪ್ರಧಾನವಾಕ್ಯ)**	-	ನಮ್ಮ - ವರು(೧)	-	ಅನ್ನದಾನ	ಪೂರ್ಣ ವಾಗಿ	ನಂಬಿ -ದ್ದರು	ಎಂಬು -ದನ್ನು
ಅನ್ನದಾನಕ್ಕಿಂತ ಮಿಗಿಲಾದ ದಾನವಿಲ್ಲ. **(ಅಧೀನವಾಕ್ಯ)**	-	(ನಮ್ಮ - ವರು)	ಅನ್ನದಾನ ಕ್ಕಿಂತ ಮಿಗಿಲಾದ	ದಾನ	ಇಲ್ಲ	ನಂಬಿ -ದ್ದರು.	

ಉದಾ : ೧) ಅನ್ನದಾನಕ್ಕಿಂತ ಮಿಗಿಲಾದ ದಾನವಿಲ್ಲವೆಂಬುದನ್ನು ನಮ್ಮವರು ಪೂರ್ಣವಾಗಿ ನಂಬಿದ್ದರು.

೩) ಸಂಯುಕ್ತವಾಕ್ಯ ವಿಭಜನೆ :- ಉದಾ. ಶಿಕ್ಷಕರು ಮಕ್ಕಳ ತಂದೆತಾಯಿಗಳನ್ನು ಶಾಲೆಗೆ ಬರಲು ಹೇಳಿದರು, **ಆದರೆ** ಯಾರೂ ಬರಲಿಲ್ಲ.

ಸಂಯುಕ್ತ-ವಾಕ್ಯಗಳು	ಕರ್ತೃ ವಿಶೇಷಣ	ಕರ್ತೃ	ಕರ್ಮ-ವಿಶೇಷಣ	ಕರ್ಮ ಪದ	ಕ್ರಿಯಾ-ವಿಶೇಷಣಗಳು	ಕ್ರಿಯಾ ಪದ	ಸಂಬಂಧ ಸೂ.ಅ
ಶಿಕ್ಷಕರು ಮಕ್ಕಳ ತಂದೆತಾಯಿಗಳನ್ನು ಶಾಲೆಗೆ ಬರಲು ಹೇಳಿದರು.	-	ಶಿಕ್ಷಕರು	ಮಕ್ಕಳ	ತಂದೆ-ತಾಯಿ-ಗಳನ್ನು	ಶಾಲೆಗೆ ಬರಲು	ಹೇಳಿ-ದರು.	'ಆದರೆ'
ಯಾರೂ ಶಾಲೆಗೆ ಬರಲಿಲ್ಲ.	-	ಯಾರೂ		(ತಂದೆ ತಾಯಿ ಗಳು)	(ಶಾಲೆಗೆ)	ಬರ-ಲಿಲ್ಲ.	

೧) (ಕರ್ತೃ) ನಾಮಪದಕ್ಕೆ ಬದಲಾಗಿ ಸರ್ವನಾಮರೂಪ ಬಂದಿದೆ.

ವಾಕ್ಯಗಳ ಪರಿವರ್ತನೆ : ಮೇಲ್ಕಂಡ ವಾಕ್ಯಗಳನ್ನು ವ್ಯತ್ಯಾಸ ಮಾಡಿ ಬೇರೆ ವಾಕ್ಯವನ್ನಾಗಿ ಬದಲಾಯಿಸಬಹುದು. ಈ ರೀತಿಯ ವಾಕ್ಯಪರಿವರ್ತನೆಯಿಂದ **ವಾಕ್ಯಜ್ಞಾನ** ದೃಢವಾಗುತ್ತದೆ.

ಅ) **ಕೆಲವು ಸಂಯೋಜಿತವಾಕ್ಯಗಳನ್ನು → ಸರಳವಾಕ್ಯವಾಗಿ ಪರಿವರ್ತಿಸುವುದು:**

i) ಅವನು ಶಾಲೆಗೆ ಹೋದನು, **ಆದರೂ** ಕೆಟ್ಟಬುದ್ಧಿ ಬಿಡಲಿಲ್ಲ. - ಇದರಲ್ಲಿ ಎರಡು ಸರಳವಾಕ್ಯಗಳನ್ನು ಗುರುತಿಸಬಹುದು: ೧) **ಅವನು ಶಾಲೆಗೆ ಹೋದನು.**

೨) ಕೆಟ್ಟ ಬುದ್ಧಿ ಬಿಡಲಿಲ್ಲ.

ii) **'ಫಲವೆಲ್ಲ ಬಿಳಿಬಣ್ಣದಲ್ಲೇ ಇರುವುದರಿಂದ**; ಅದರಲ್ಲಿ ವರ್ಣವಿನ್ಯಾಸ ಸಾಧ್ಯವಿಲ್ಲವಾದ್ದರಿಂದ; ಉಬ್ಬು-ತಗ್ಗು ತೀರಾ ಅಲ್ಪವಾದುದರಿಂದ; ನೇರಳೆ ಬೆಳಕನ್ನು ಪ್ರಭಾವಶಾಲಿಯಾಗಿ ಯೋಜಿಸುವುದು ಶ್ರಮಸಾಧ್ಯ'. - ಇದರಲ್ಲಿ ಮೂರು/ ನಾಲ್ಕು ಸರಳ ವಾಕ್ಯಗಳನ್ನಾಗಿ ಪರಿವರ್ತಿಸಿ ಗುರುತಿಸಬಹುದು. ಇವುಗಳು ಹೀಗಿವೆ.

---

(೧) ಇಲ್ಲದ್ದನ್ನು ಅಧ್ಯಾಹಾರ ಮಾಡಿಕೊಳ್ಳಬೇಕು.

ಸರಳ ವಾಕ್ಯಗಳು :

ಅ) ಫಲವೆಲ್ಲ ಬಿಳಿಬಣ್ಣದಲ್ಲೇ ಇದ್ದವು.

ಆ) ಅದರಲ್ಲಿ ವರ್ಣವಿನ್ಯಾಸ ಸಾಧ್ಯವಿಲ್ಲವಾಗಿತ್ತು. ಅಥವಾ ಫಲವೆಲ್ಲ ಬಿಳಿಬಣ್ಣದಲ್ಲೇ **ಇದ್ದು,** ವರ್ಣವಿನ್ಯಾಸ ಅಸಾಧ್ಯವಾಗಿತ್ತು. (ಹೀಗೆ ಸಾಪೇಕ್ಷಕ್ರಿಯಾಪದ ತಂದು ಒಂದೇ ಸರಳವಾಕ್ಯವಾಗಿಸಲೂಬಹುದು)

ಇ) ಅದರಲ್ಲಿ ಉಬ್ಬು, ತಗ್ಗುಗಳು ತೀರಾಅಲ್ಪವಾಗಿದ್ದುವು.

ಈ) ನೇರಳೆ ಬೆಳಕನ್ನು ಪ್ರಭಾವಶಾಲಿಯಾಗಿ ಯೋಜಿಸುವುದು ಕಷ್ಟದಾಯಕವಾಗಿತ್ತು. (ಅಧ್ಯಾಹಾರ ಮಾಡುವುದು).

ಆ) ಮಿಶ್ರವಾಕ್ಯಗಳನ್ನು → ಸರಳವಾಕ್ಯಗಳಾಗಿ ಪರಿವರ್ತಿಸುವುದು :

i) **'ಆಶಿಸುವಮಾನವ ಪ್ರಕೃತಿಗೆ ಎಂತಹ ಅನ್ಯಾಯ ಬಗೆಯುತ್ತಿದ್ದಾನೆ,** ಎನ್ನುವುದನ್ನು ನೆನೆದರೆ ಭಯವಾಗುತ್ತದೆ'. - ಎರಡು ಸರಳವಾಕ್ಯಗಳಾಗಿ ಪರಿವರ್ತಿಸಬಹುದು:

ಅ) ಆಶಿಸುವ ಮಾನವ ಪ್ರಕೃತಿಗೆ ಎಂಥಹ ಅನ್ಯಾಯ ಬಗೆಯುತ್ತಿದ್ದಾನೆ.

ಆ) ಅನ್ಯಾಯವನ್ನು ನೆನೆದರೆ ಭಯವಾಗುತ್ತದೆ.

ii) 'ಅವನು ಮನೆಯನ್ನು ಮಾರಿಬಿಟ್ಟ <u>ನೆಂಬುದು</u> ನಿಮಗೆ ಗೊತ್ತಿಲ್ಲವೇ?' - ಇದರಲ್ಲಿ ಪ್ರಧಾನವಾಕ್ಯಗಳನ್ನು ಗುರುತಿಸಿ ವಿಂಗಡಿಸಬೇಕು

ಪ್ರಧಾನ: ೧) (ಮನೆ ಮಾರಿದ್ದು)$_{(೧)}$ ನಿಮಗೆ ಗೊತ್ತಿಲ್ಲವೆ?

ಅಧೀನ : ೨) **ಅವನು** ಮನೆಯನ್ನು ಮಾರಿಬಿಟ್ಟನು.

ಇ) ಸಂಯುಕ್ತವಾಕ್ಯವನ್ನು → ಮಿಶ್ರವಾಕ್ಯವಾಗಿ ಪರಿವರ್ತಿಸುವುದು:

ಸಂಯುಕ್ತವಾಕ್ಯ : 'ಎಲ್ಲರ ಅಗತ್ಯಗಳನ್ನು ಪೂರೈಸುವಷ್ಟು ಸಂಪತ್ತು ಭೂಮಿಯಲ್ಲಿದೆ; ಆದರೆ ಎಲ್ಲರ ದುರಾಶೆಗಳನ್ನು ಪೂರೈಸದು'. ಇಲ್ಲಿ ಸಮುಚ್ಚಯಾವ್ಯಯ - **'<u>ಆದರೆ</u>'** ಸೇರಿ **'ಸಂಯುಕ್ತವಾಕ್ಯ'** ವೆನಿಸಿದೆ.

ಮಿಶ್ರವಾಕ್ಯವಾಗಿ : 'ಎಲ್ಲರ ಅಗತ್ಯಗಳನ್ನು ಪೂರೈಸುವ ಸಂಪತ್ತು ಭೂಮಿಯಲ್ಲಿದೆ, ಎಲ್ಲರ ದುರಾಶೆಗಳನ್ನಲ್ಲ'. - ಇಲ್ಲಿ ಮೊದಲವಾಕ್ಯ ಅಧೀನವಾಕ್ಯವಾಗಿ ಎರಡನೆಯ ವಾಕ್ಯ ಪ್ರಧಾನವಾಕ್ಯಗಳೆಂದು ವಿಭಜಿಸಬಹುದು.

ಈ) ಮಿಶ್ರವಾಕ್ಯವನ್ನು → ಸಂಯುಕ್ತವಾಕ್ಯವಾಗಿ ಪರಿವರ್ತಿಸುವುದು:

ಮಿಶ್ರ : 'ಮಾನವನು ಪ್ರಕೃತಿಗೆ ಎಂತಹಅನ್ಯಾಯ ಬಗೆದಿದ್ದಾನೆ; ಎನ್ನುವುದನ್ನು ನೆನೆದರೆ ಭಯವಾಗುತ್ತದೆ'.

ಸಂಯುಕ್ತವಾಕ್ಯ : ಮಾನವನು ಪ್ರಕೃತಿಗೆ ಅನ್ಯಾಯ ಬಗೆದಿದ್ದಾನೆ. ಅದನ್ನು ನೆನೆದರೆ ನಮಗೆ ಭಯವಾಗುತ್ತದೆ.

೨. ಅರ್ಥದದೃಷ್ಟಿಯಿಂದ ಆಗುವ ವಾಕ್ಯಭೇದಗಳು : (ಐದುವಿಧ)

೧) **ನಿಶ್ಚಯವಾಕ್ಯ :** ನಡೆದ, ನಡೆಯುವ ಸಂಗತಿಗಳನ್ನು **'ನಿಶ್ಚಯಾರ್ಥ'** ತೋರುವಂತೆ ಯಥಾವತ್ತಾಗಿ ಹೇಳುವ ವಾಕ್ಯಗಳು.

ಉದಾ: ೧) **ಸತ್ಯವೇ ಗೆಲ್ಲುತ್ತದೆ** ೨) **ಆಸೆಯೇ ದುಃಖಕ್ಕೆ ಕಾರಣ.**

೨) **ನಿಷೇಧವಾಕ್ಯ : 'ಅಲ್ಲ', 'ಇಲ್ಲ', 'ಬೇಡ' 'ಅ'** ಇತ್ಯಾದಿ ಶಬ್ದಗಳಿಂದ **'ನಿಷೇಧಾರ್ಥ'** ವನ್ನು ಸೂಚಿಸುವ ವಾಕ್ಯಗಳಾಗುತ್ತವೆ. ಉದಾ:

೧) ಪೂರ್ಣಸಾಲಗಾರನು ಎಂದಿಗೂ ಉದ್ಧಾರವಾಗುವುದಿಲ್ಲ.
೨) ಅವನು ಸರಿಯಾದ ದಾರಿಗೆ ಬರನು.

೩) **ಪ್ರಶ್ನಾರ್ಥಕವಾಕ್ಯ : ಏನು, ಏಕೆ, ಹೇಗೆ, ಯಾವುದು, ಯಾರು** ಇತ್ಯಾದಿ ಪ್ರಶ್ನಾರ್ಥಕ ಶಬ್ದಗಳಿಂದ ಕೂಡಿರುವ ವಾಕ್ಯಗಳು **'ಪ್ರಶ್ನಾರ್ಥಕ ವಾಕ್ಯಗಳಾ'**ಗುತ್ತವೆ ಉದಾ:

೧) ನಿನ್ನದೇಶ ಯಾವುದು ?. ೨) ದಿನದಲ್ಲಿ ಅಭ್ಯಾಸಮಾಡುವ ವೇಳೆ ಎಷ್ಟು?. ೩) ಆ ಹಣ್ಣು ಏಕೆ ಚೆನ್ನಾಗಿಲ್ಲ?.

೪) **ವಿಧ್ಯರ್ಥಕ ವಾಕ್ಯಗಳು : ಆಜ್ಞೆ, ಅಪ್ಪಣೆ, ಆಶೀರ್ವಾದ, ಆಹ್ವಾನ, ಪ್ರಾರ್ಥನೆ** ಇತ್ಯಾದಿ ಅರ್ಥಗಳಿಂದ ಕೂಡಿರುವ ವಾಕ್ಯಗಳು **'ವಿಧ್ಯರ್ಥವಾಕ್ಯ'**ಗಳೆನಿಸುತ್ತವೆ. ಉದಾ:

೧) ಬರೆದವರು ಮನೆಗೆ ಹೋಗಿರಿ. ೨) ಪರಮಾತ್ಮನಿಮ್ಮನ್ನು ರಕ್ಷಿಸಲಿ.

೫) **ಭಾವಸೂಚಕ ವಾಕ್ಯ : ಆಶ್ಚರ್ಯ, ಭಯ, ವ್ಯಸನ, ಕೋಪ, ಸಂತೋಷ, ಒಪ್ಪಿಗೆ** - ಇತ್ಯಾದಿ ಭಾವಾತಿಶಯಗಳನ್ನು ಸೂಚಿಸುವ ವಾಕ್ಯಗಳು. ಉದಾ:

೧) ಜೀವನವನ್ನೇ ತೇದು ದುಡಿದವರು ಮಹಾತ್ಮರು!. (ಆಶ್ಚರ್ಯ).

೨) ಅಬ್ಬಾ!, ಹೇಗೆ ಈಜಿದಳು. (ಭಯ-ಆಶ್ಚರ್ಯ)

೩) ಅಯ್ಯೋ!, ಹೀಗಾಯ್ತೆ?. (ವ್ಯಸನ)

೪) ಅಬ್ಬಾ! ಎಂತಹ ಹಾವು (ಆಶ್ಚರ್ಯ).

೩. ಅರ್ಥದೃಷ್ಟಿಯ ಕೆಲವುವಾಕ್ಯಗಳ ಪರಿವರ್ತನೆ :

೧) ನಿಶ್ಚಯಾರ್ಥಕವಾಕ್ಯ → ನಿಷೇಧಾರ್ಥಕವಾಗಿ :

ಅ) ಬಸವಣ್ಣನವರ ಧರ್ಮದಗುರಿ ಸಮಾಜದ ಏಳ್ಗೆಯೇ ಆಗಿತ್ತು.

ಬಸವಣ್ಣನವರ ಧರ್ಮದಗುರಿ ಸಮಾಜದ ಏಳ್ಗೆಯಿಂದ ದೂರವಾದುದಲ್ಲ.

೨) ನಿಷೇಧಾರ್ಥಕ ವಾಕ್ಯಗಳು → ಪ್ರಶ್ನಾರ್ಥಕ ವಾಕ್ಯಗಳಾಗಿ :

ಅ) ನನ್ನನ್ನು ಮಾತ್ರ ದೂರಬೇಡಿರಿ. - ನನ್ನನ್ನೇಕೆ ದೂರುತ್ತೀರಿ?

ಆ) ಇಂತಹ ಮಾತುಗಳನ್ನು ಸಹಿಸಲಾರೆ. -ಇಂತಹ ಮಾತುಗಳನ್ನೇಕೆ ಸಹಿಸಲಿ?

೩) ಹೇಳಿಕೆಗಳು → ಭಾವಸೂಚಕ ವಾಕ್ಯಗಳಾಗಿ:

ಅ) ಬೆಳದಿಂಗಳು ಅತಿಮನೋಹರವಾಗಿದೆ.

ಆಹಾ! ಬೆಳದಿಂಗಳು ಎಷ್ಟು ಮನೋಹರವಾಗಿದೆ!

೪) ಪ್ರಶ್ನಾರ್ಥಕ ವಾಕ್ಯಗಳು → ಭಾವಸೂಚಕ → ನಿಷೇಧಾರ್ಥಕವಾಕ್ಯಗಳಾಗಿ :

ಅ) ಶಾಸ್ತ್ರೀಜಿಯಂತಹ ಮನೆಯಿರದ ಸರಳ, ಪ್ರಾಮಾಣಿಕ ರಾಜಕಾರಣಿಯುಂಟೆ?.

ಅಬ್ಬಾ !. ಶಾಸ್ತ್ರೀಜಿ ರಾಜಕಾರಣಿಗಳಾಗಿಯೂ ಮನೆ ಮಾಡಿಕೊಂಡಿರಲಿಲ್ಲ!

ಶಾಸ್ತ್ರೀಜಿಯಂತಹ ಮನೆಯಿಲ್ಲದ ಸರಳ ರಾಜಕಾರಣಿಯಿಲ್ಲ.

ಪ್ರಚಲಿತವಿರುವ ಹಲವುರೀತಿಯ ಅರ್ಥಭೇದಗಳ ವಾಕ್ಯಗಳನ್ನು ನೋಡಬಹುದು:

ಉದಾ : ೧. ನನ್ನನ್ನು ಸೋಮಾರಿ ಎಂದು ಕರೆಯಲು ಏನುಧೈರ್ಯ ನಿನಗೆ (ಸವಾಲು)

೨. ನನ್ನನ್ನು ಸೋಮಾರಿಯೆಂದು ಕರೆಯಬಾರದಿತ್ತು. (ನಿಷೇಧಾರ್ಥಕ ಬಯಕೆ)

೩. ಅವಳು ಓದುವುದಕ್ಕಿಂತ ಆಡುವುದಕ್ಕೆ ಇಷ್ಟಪಡುತ್ತಾಳೆ. (ಆಯ್ಕೆ)

೪. ನೀನು ನನ್ನ ಬ್ಯಾಟ್‌ನ್ನು ಅವನಿಗೆ ಕೊಡಬಾರದಿತ್ತು.(ನಿಷೇಧಾರ್ಥ)

೫. ನಾನು ಗ್ರೀಕ್ ಬರೆಯುತ್ತಿದ್ದೇನೆ. (ವರ್ತಮಾನಕಾಲಾರ್ಥ)

೬. ನಾನು ಮದ್ಯಪಾನ ಮಾಡುವುದಿಲ್ಲ. (ವರ್ತ/ಭೂತ/ನಿಷೇಧಾರ್ಥ)

೭. ಅವರಿಗೆ ನಿತ್ಯ ವ್ಯಾಯಾಮ ಮಾಡುವುದು ರೂಢಿಯಿಲ್ಲ. (ವರ್ತ/ನಿಷೇಧ)

೮. ನಾವು ನಿತ್ಯ ನಿಮ್ಮನ್ನು ನೋಡುತ್ತಿರುತ್ತೇವೆ. ಭೂತ (ವರ್ತ- ಭ್ರಮೆ)

೯. ನಿಮ್ಮ ತಾಯಿ ಬೇಗ ಗುಣಮುಖರಾಗುವಂತಾಗಲಿ-(ಆಶಯ-ವಿಧಿರೂಪ)

೧೦. ಮತ್ತೆ ನೀನು ಅಲ್ಲಿಗೆ **ಹೋದಿಯೆ** ಜೋಕೆ!.- **(ಆಜ್ಞೆ- ವಿಧಿರೂಪ)**

೧೧. ನಾನು ಹೇಳುತ್ತಿದ್ದೇನೆ, ತಮಾಷೆ **ನಿಲ್ಲಿಸು** - **(ಆಜ್ಞೆ-ವಿಧಿ = ನಿಷೇಧ)**

೧೨. ನಾನು ಆಗಾಗ ಅಲ್ಲಿಗೆ ಹೋ**ಗುತ್ತಿದ್ದೆ**. - **(ಭೂತ / ವರ್ತಮಾನ)**

೧೩. ನಾವು ದಿವಸ ಅವರನ್ನು ಎಬ್ಬಿಸ**ಬೇಕಾಗಿತ್ತು**. **(ಆಕ್ಷೇಪ ಸಹಿತ ಬದ್ಧತೆ)**

೧೪. ನಾನು ದಿನವಿಡಿ ಅಲ್ಲಿ ಇರ**ಬೇಕಾಗಿರಲಿಲ್ಲ**.**(ನಿಷೇಧಾರ್ಥ/ ಮುಕ್ತಾರ್ಥ)**

೧೫. ನೀನು ಪುನಃ ಅದನ್ನು ಬಯಸಬೇಡ - **(ಭವಿಷ್ಯದಲ್ಲಿ ಬದ್ಧತೆ)**

೧೬. ನಾವು ಆದನ್ನು ಮಾಡು**ವೆವು**. **(ಭವಿಷ್ಯದಲ್ಲಿ ಇಚ್ಛೆ)**

೧೭. ನಾನು ನಿಮಗೆ ಸಹಾಯ **ಮಾಡುವೇ**ನು. **(ಭವಿಷ್ಯದಲ್ಲಿ ಇಚ್ಛೆ)**

೧೮. ನಾನು ಬೇಸಿಗೆಯಲ್ಲಿ ಈಜು ಕಲಿಯಲು **ಭಯಪಡುತ್ತೇನೆ**.

(ವರ್ತ-ಅಂಜಿಕೆ)

೧೯. ಅವರು **ವೇಗವಾಗಿ ಓಡಿ**ದರು. - **(ಇಚ್ಛೆ / ಅಪೇಕ್ಷೆ = ಸಂಕೀರ್ಣ)**

೨೦. ಎಷ್ಟುಆಕರ್ಷಕವಾದ ಉಡುಪು - ಮೆಚ್ಚುಗೆ ಭಾವ

ಈ ರೀತಿ ಅನೇಕ ಸಂಕೀರ್ಣಭಾವಗಳ ವಾಕ್ಯಗಳು ಮೇಲಿನ ವಾಕ್ಯಗಳಲ್ಲೇ ಅಂತರ್ಭಾವ ಹೊಂದುವವೆಂದು ತಿಳಿಯಬೇಕಾಗುತ್ತದೆ.

ಸಾರಸಂಗ್ರಹ

ವಾಕ್ಯರಚನೆಗೆ

ರಚನೆಯದೃಷ್ಟಿ (೩ ವಿಧ)

೧) ಸರಳವಾಕ್ಯ.
೨) ಮಿಶ್ರವಾಕ್ಯ.
೩) ಸಂಯೋಜಿತ (ಸಂಯುಕ್ತ) ವಾಕ್ಯ.

ಅರ್ಥದದೃಷ್ಟಿ (೫ ವಿಧ)

೧) ನಿಷೇಧಾರ್ಥಕವಾಕ್ಯ.
೨) ನಿಶ್ಚಯಾರ್ಥಕವಾಕ್ಯ.
೩) ವಿಧ್ಯರ್ಥಕವಾಕ್ಯ.
೪) ಪ್ರಶ್ನಾರ್ಥಕವಾಕ್ಯ.
೫) ಭಾವಸೂಚಕ ವಾಕ್ಯ.

ಲೇಖನ ಚಿಹ್ನೆಗಳು

ಭಾಷೆ ಬಾಗಿಲಿದ್ದಂತೆ ಭಾವನೆಗಳನ್ನು ತೆರೆದಿರಿಸಬಹುದು, ಮರೆಮಾಚಲು ಬಹುದು. ಬರವಣಿಗೆಯ ವಾಕ್ಯಗಳಲ್ಲಿ ಅರ್ಥಸ್ಪಷ್ಟತೆಯಿರಬೇಕು. ಸಂದೇಹ, ಗೊಂದಲಗಳು ನಿವಾರಣೆಯಾಗಬೇಕು. ಅದಕ್ಕಾಗಿಯೇ ವಾಕ್ಯಗಳ ಉಚಿತಸ್ಥಳಗಳಲ್ಲಿ **'ಲೇಖನಚಿಹ್ನೆ'** ಗಳನ್ನು ಬಳಸಬೇಕಾಗುತ್ತದೆ. ಇವುಗಳ ಕಡೆ ಗಮನಹರಿಸದೆ ಆಗಿರುವ ಆಭಾಸಗಳಿಗೆ ಕೆಲವು

ಉದಾಹರಣೆಗಳು : ೧. ಎಲ್ಲವೂ(ವನ್ನು) ತಿಳಿದು ನೀನು, ಹೀಗೆ ದುಃಖ ಪಡುತ್ತಾ ಕೂರುವುದರಿಂದ, ನೀನು ಕರ್ತವ್ಯಭ್ರಷ್ಟನಾಗುದೊಂದು ಬಿಟ್ಟು ಮತ್ತೇನ್ನನ್ನು ಸಾಧಿಸಲಾರೆ. ಇಲ್ಲಿ ಸಾಪೇಕ್ಷಕ್ರಿಯಾ ಪದಗಳಿಗೆ **ಚಿಹ್ನೆಗಳನ್ನು ಬಳಸದಿದ್ದರೆ** ಹೇಗಿರುತ್ತದೆ ಎಂಬುದನ್ನು ಊಹಿಸಿಕೊಳ್ಳಬೇಕು.

ಇತ್ತೀಚಿನ ಕಥೆ, ಕಾದಂಬರಿ, ಭಾವಗೀತೆಗಳಲ್ಲಿ ಇವುಗಳ ಮಹತ್ವಹೆಚ್ಚು. ಅಲ್ಲಿ **ಭಾವಸೂಕ್ಷ್ಮತೆ, ಭಾವತೀವ್ರತೆಯನ್ನು ಗಮನಿಸಿ ಲೇಖನಚಿಹ್ನೆಗಳನ್ನು** ಬಳಸಲಾಗುತ್ತಿದೆ. ಅಂತಹ ಸಂದರ್ಭಗಳಲ್ಲಿ ಅರ್ಥಗ್ರಹಣೆಗೂ ಅವು ಸೂಚಕವಾಗಬಲ್ಲವು. ಹೀಗಾಗಿ ಅವುಗಳನ್ನು ಬರವಣಿಗೆಯ ಅಂಗವೆನ್ನಬಹುದು. ಅವುಗಳ ಪರಿಚಯ ಕೆಳಗಿನಂತಿದೆ:

೧) **ಪೂರ್ಣವಿರಾಮ : (.)** (ಫುಲ್‌ಸ್ಟಾಪ್) ಸಂಪೂರ್ಣಾರ್ಥವನ್ನು ಕೊಡುವ ಪೂರ್ಣಕ್ರಿಯೆಯಿಂದ ಕೂಡಿದ ವಾಕ್ಯಮುಗಿದಿದೆ ಎನ್ನುವುದನ್ನು ಸೂಚಿಸುವಾಗ ಈ ಚಿಹ್ನೆಯನ್ನು (.) ಬಳಸಲಾಗುತ್ತದೆ. ಉದಾ:
೧) ಮಗುವು ಊಟಮಾಡಿ ಮಲಗಿತು. ೨) ಡಾ|| ಬಿ.ಆರ್. ಅಂಬೇಡ್ಕರ್ (ಅಂತರಸೂಚಿಸಲು). ಇತ್ಯಾದಿ (ಹೆಚ್ಚಿನ ವಾಕ್ಯಗಳನ್ನು ಪಠ್ಯಗಳಲ್ಲಿ ಗಮನಿಸುವುದು).

೨) **ಅರ್ಧವಿರಾಮ** (;) ಪ್ರಧಾನವಾಕ್ಯದ ಅಡಿಯಲ್ಲಿ ವಿವರಣೆಯು ಮುಂದುವರಿದಾಗ ಉಪವಾಕ್ಯಗಳಾಗುತ್ತವೆ. ಅಂತಹ ಪ್ರಸಂಗದಲ್ಲಿ **ಅನೇಕಕ್ರಿಯೆಗಳು** ಬರುತ್ತವೆ. ಅದಕ್ಕೆ **'ಕರ್ತೃ' ಒಂದೇ** ಆಗಿರುತ್ತದೆ. ಆಗ ಉಪವಾಕ್ಯಗಳ ಕ್ರಿಯೆಗಳ ಕೊನೆಯಲ್ಲಿ ಈ ಚಿಹ್ನೆಯನ್ನು ಬಳಸಲಾಗುತ್ತದೆ. ಉದಾ : ಮನುಷ್ಯನಿಗೆ ಇತರ ಪ್ರಾಣಿಗಳಂತೆ ಹುಟ್ಟು ಸಾವುಗಳುಂ**ಟು;** ರೋಗ ಭೋಗಗಳುಂ**ಟು;** ಅವುಗಳ ಅರಿವಿರಬೇಕು.

೩) **ಅಲ್ಪವಿರಾಮ** (,) : ಹಲವು ವಿಶೇಷಣಗಳೋ ಹಲವು ನಾಮಪದಗಳೋ ಬಂದಾಗ, ಈ ಚಿಹ್ನೆಯನ್ನು ಬಳಸಲಾಗುತ್ತದೆ. (ಹಾಗೆ ಸಾಪೇಕ್ಷಕ್ರಿಯೆಗಳು ಬಂದಾಗಲೂ ಬಳಸಬಹುದು) ನಾಮಪದಗಳು ಅಥವಾ ಅಂತಹ ವಾಕ್ಯಾಂಶವನ್ನು ಅದರ ವಿವರಣೆಯ ಮಧ್ಯೆ ವಾಕ್ಯಭಾಗದಿಂದ ಪ್ರತ್ಯೇಕಿಸುವ ಪ್ರಸಂಗಗಳು **'ಮತ್ತು'** ಎನ್ನುವ ಅರ್ಥಕೊಡುವ **ಸಮುಚ್ಚಯ ಶಬ್ದಗಳು ಬಂದಾಗ** ಬಳಸುವ ಅಗತ್ಯವಿಲ್ಲ. ಉದಾ: ಸೃಷ್ಟಿಯಲ್ಲಿ ಕೆಟ್ಟದ್ದೂ-ಒಳ್ಳೆಯದೂ ಇದೆ. (ಇಲ್ಲಿ **'ಊ'** ಎಂಬುದೇ **ಮತ್ತುಅರ್ಥಸೂಚಕವಾಗಿದೆ.**

೧) ಶಾಸ್ತ್ರೀಯವರಿಗೆ ಸತ್ಯನಿಷ್ಠೆ, ಸಮಯನಿಷ್ಠೆ, ಕಾರ್ಯೋತ್ಸಾಹ, ಆತ್ಮವಿಶ್ವಾಸಗಳು ಲಕ್ಷಣಗಳಾಗಿದ್ದವು.
೨) ರಸ್ತೆಯ ಬದಿಯಲ್ಲಿ ಸಾಗುತ್ತಾ, ದಾರಿಯನ್ನು ಹುಡುಕುತ್ತಾ ಮನೆಯನ್ನು ಸೇರಿದೆವು.
೩) **ಶಂಕರಾಚಾರ್ಯ, ಬುದ್ಧ, ಬಸವರು** ಸಮನ್ವಾಡಿನ ದಾರ್ಶನಿಕರು, ಜಗತ್ತಿನ ಯಾವ ಮಹಾಪುರುಷರನ್ನು ಸರಿಗಟ್ಟಬಲ್ಲರು.
೪) ಶರಣರು ದೇವರನ್ನು ಕಂಡದ್ದು ಕಲ್ಲಿನಲ್ಲ, ಮಣ್ಣಿನಲ್ಲಲ್ಲ, ಮಾನವ

ಹೃದಯಮಂದಿರದಲ್ಲಿ. ರಘುರಾಮ ಎಂ.ಎ., ಬಿ.ಇಡಿ., ಪಿ.ಹೆಚ್.ಡಿ.

೫) ಸಂಬೋಧನಾ ಸೂಚಕದ ತರುವಾಯ : ಅಯ್ಯಾ, ದಲಿತನೆ ನೀನು ಸ್ವಾಭಿಮಾನಿಯಾಗು!

೪) **ಪ್ರಶ್ನಾರ್ಥಕ ಚಿಹ್ನೆ (?)** : ಪ್ರಶ್ನಾರ್ಥಕಪದ, ಪ್ರಶ್ನಾರ್ಥಕವಾಕ್ಯಗಳ ಕೊನೆಯಲ್ಲಿ ಈ ಚಿಹ್ನೆಯನ್ನು ಬಳಸಲಾಗುವುದು. ಉದಾ. **ಯಾರು? ಏಕೆ? ಏನು? ಯಾವಾಗ? ಎಷ್ಟು ? ಎಲ್ಲಿ ?** ಇತ್ಯಾದಿ.

೧) ಅಂಗೈ ಹುಣ್ಣಿಗೆ ಕನ್ನಡಿಯೇಕೆ?. ೨) ಸತ್ಯನಿಷ್ಠರನ್ನು ಗುರುತಿಸುವವರಾರು? ಧರ್ಮ ನುಡಿಯಲ್ಲಿದ್ದರೆ ಸಾಕೆ?

೫) **ಭಾವಸೂಚಕ ಚಿಹ್ನೆ (!) ಹರ್ಷ, ಆಶ್ಚರ್ಯ, ವಿಷಾದ, ಉದ್ವೇಗ - ಈ** ಭಾವ ತೀವ್ರತೆಯನ್ನು ಪ್ರಕಟಿಸುವಾಗ, ಆ ಭಾವಸೂಚಕಶಬ್ದಗಳ ಮುಂದೆ, ಈ ಚಿಹ್ನೆ ಬಳಸುವುದುಂಟು. (ಭಾವದತೀವ್ರತೆ ಹೆಚ್ಚಾದಂತೆ ಎರಡು ಮೂರು ಚಿಹ್ನೆಗಳನ್ನು ಬಳಸುತ್ತಾರೆ). ಉದಾ: ೧) ಅಹ! ಆಹಾ!! ಚೆನ್ನಾಗಿ ಆಡಿದರು.

೨) ಅಯ್ಯೋ! ಪಾಪ! ಅದು ಸತ್ತು ಹೋಯ್ತು!.

೩) ಆಹಾ! ಶಿಲುಬೆಗೇರಿಸಿ ಬಂದಾಗ ಸದ್ದಿಲ್ಲ! ಸುಳಿವಿಲ್ಲ!!

೬) **ಉದ್ಧರಣಾ ಚಿಹ್ನೆ ("...")** ಒಬ್ಬರು ಆಡಿದಮಾತನ್ನು ನೇರವಾಗಿ ಇದ್ದಹಾಗೆಯೇ ತೆಗೆದು (ಉದ್ಧರಿಸಿ) ಬರೆಯುವಾಗ, ಈ ಚಿಹ್ನೆ ಬಳಸಲಾಗುತ್ತದೆ. ಆ ಮಾತಿನ ಅಥವಾ ವಾಕ್ಯದ ಮೊದಲು, ಕೊನೆಯಲ್ಲಿ ಈ ಚಿಹ್ನೆಯನ್ನು ಬಳಸಲಾಗುತ್ತದೆ. ಉದಾ:

೧) ಬಸವಣ್ಣನವರು **"ದಯವೇ ಧರ್ಮದಮೂಲ"** ವೆಂದರು.

೨) ಗಮಕಿಗಳು **"ರಾಗ ಹಾಳಾಯ್ತು"**ಂದರು.

ವಾಕ್ಯದಲ್ಲಿ ವಿಶಿಷ್ಟಪದಗಳನ್ನು ಗಮನಕ್ಕೆ ತರುವಾಗ (' ') ಚಿಹ್ನೆಬಳಸುತ್ತಾರೆ. ಉದಾ:

೧) ಅತ್ತಿಮಬ್ಬೆಗೆ **'ದಾನಚಿಂತಾಮಣಿ'** ಎಂಬ ಬಿರುದಿತ್ತು.

೨) ಬಿ.ಎಂ.ಶ್ರೀಯವರು **'ಇಂಗ್ಲೀಷ್ ಗೀತೆಗಳು'** ಕೃತಿ ಬರೆದಿದ್ದಾರೆ.

೭) **ಆವರಣ ಚಿಹ್ನೆ [ ]()** ಕಂಸ. ಒಂದು ಶಬ್ದವನ್ನೋ ವಾಕ್ಯವನ್ನೋ ಹೇಳಿ, ಅದೇ ಅರ್ಥಸೂಚಿಸುವ ಸಮಾನ ಪದವನ್ನೋ, ವಿವರಣಾತ್ಮಕ ಪದಗಳನ್ನೋ ಆವರಣದಲ್ಲಿ ಕೊಡುವುದುಂಟು.

ಉದಾ: ಪ್ರಬಂಧ ಪರಿಚ್ಛೇದ(ಪ್ಯಾರಾಗ್ರಾಫ್)ಗಳಿಂದ ಕೂಡಿರಬೇಕು.

೮) **ವಿವರಣಾ ಚಿಹ್ನೆ (:)** ಒಂದು ಅಭಿಪ್ರಾಯವು ಮುಂದಿನಂತಿದೆ ಅಥವಾ ಅದರ ವಿವರವೆಂದು ಸೂಚಿಸುವಾಗ ಈ ಚಿಹ್ನೆಯನ್ನು ಬಳಸುತ್ತೇವೆ. ಉದಾ:

೧. ಕನ್ನಡದ ಕವಿಚಕ್ರವರ್ತಿಗಳೆಂದರೆ : ಪೊನ್ನ, ರನ್ನ ಮತ್ತು ಜನ್ನ.

೨. ಕನ್ನಡದ ರತ್ನತ್ರಯರು : ಪಂಪ, ಪೊನ್ನ ಮತ್ತು ರನ್ನ.

೯) **ಅಧಿಕ ಚಿಹ್ನೆ (+)** ಇದನ್ನು ಸೇರ್ಪಡೆಯ ಚಿಹ್ನೆಯೆನ್ನಬಹುದು. ಒಂದಕ್ಕೆ ಇನ್ನೊಂದನ್ನು ಸೇರಿಸುವಾಗ ಸಾಮಾನ್ಯವಾಗಿ (ಕೂಡಿಸಿದರೆ ಎಂಬರ್ಥದಲ್ಲಿ) ಈ ಚಿಹ್ನೆ ಬಳಕೆಯಾಗುತ್ತದೆ. ಉದಾ: ಅರಸನ+ಮನೆ = ಅರಮನೆ. ಕೆರೆ+ಅಲ್ಲಿ = ಕೆರೆಯಲ್ಲಿ.

೧೦) **ಹ್ರಸ್ವ ಸಮತಲ ರೇಖೆ** (-) ಸಮಾಸದ ಇಲ್ಲವೆ ಅಂತಹ ಪದಸೇರುವಿಕೆಯನ್ನು ಬೇರ್ಪಡಿಸುವಾಗ ಈ ಶಬ್ದಗಳಲ್ಲಿ ಆದ ವ್ಯತ್ಯಾಸ ಸೂಚಿಸುವಾಗ, ಮುಕ್ತಾಯದ ಪದಾಂಶವನ್ನು ಮುಂದಿನದಕ್ಕೆ ಸಂಬಂಧಿಸಿದ್ದು ಎಂಬುದನ್ನು ಸೂಚಿಸುವಾಗ ಈ ಚಿಹ್ನೆ ಬಳಸುತ್ತೇವೆ. ಉದಾ : ಕಾರ್ಯ - ಕಜ್ಜ, ಕೊಟ್ಟು-ತೆಗೆದುಕೊಳ್ಳಬೇಕು(ಸಂಬಂಧದಲ್ಲಿ) ಪಂಪ-ವಿಕ್ರಮಾರ್ಜುನವಿಜಯ. ಕೈ-ಇಲ್ಲಿ ಎತ್ವದೊಂದಿಗೆ **ಐತ್ವ**ವಿದೆ.

೧೧) **ಸಮಾನಾರ್ಥಕ ಚಿಹ್ನೆ** (=) ಎರಡೂ **ಸಮಾನಾರ್ಥ**ವೆಂಬರ್ಥದಲ್ಲಿ ಈ ಚಿಹ್ನೆ ಬಳಸುತ್ತಾರೆ. ಉದಾ: ದೈತ್ಯರು = ಅಸುರರು.

ಈ ಗದ್ಯಭಾಗಕ್ಕೆ ಲೇಖನಚಿಹ್ನೆ ಹಾಕಿ ಗುರುತಿಸಲಾಗಿದೆ :

“ಏಕೆ? ಆರ್ಯಸ್ತ್ರೀಯ ಕುಪ್ಪಸತೊಟ್ಟೊಡನೆ, ಆರ್ಯಸ್ತ್ರೀಯಾಗುವ ಬಯಕೆ ಬಿತ್ತೇ? ಅಲ್ಲ, ಹಸಿದನಾಯಿಗೆ ಚಂದ್ರ ರೊಟ್ಟಿಯಾದ ಹಾಗೆ!” ಎಂದಳು.

ಸಾರಸಂಗ್ರಹ

ಲೇಖನ ಚಿಹ್ನೆಗಳು

೧. ಪೂರ್ಣವಿರಾಮ (ಫುಲ್‌ಸ್ಟಾಪ್/ಗ್ಯಾಪ್) (.)
೨. ಅರ್ಧವಿರಾಮ (;)
೩. ಅಲ್ಪವಿರಾಮ (,) ಕಾಮ
೪. ಪ್ರಶ್ನಾರ್ಥಕ ಚಿಹ್ನೆ (?)
೫. ಭಾವಸೂಚಕ ಚಿಹ್ನೆ (!, !!, !!!)
೬. ಉದ್ಧರಣಾ ಚಿಹ್ನೆ (“ ”)
೭. ಆವರಣ ಚಿಹ್ನೆ ( ) [ ]
೮. ವಿವರಣಾತ್ಮಕ ಚಿಹ್ನೆ (:)
೯. ಅಧಿಕ ಚಿಹ್ನೆ (+)
೧೦. ಹ್ರಸ್ವ ಸಮತಲಾ ರೇಖೆ (-)
೧೧. ಸಮಾನಾರ್ಥಕ ಚಿಹ್ನೆ (=)

ಗಾದೆಗಳು ಹಾಗೂ ಒಗಟು :

ಗ್ರಾಮೀಣ ಜನತೆ ರಚಿಸಿ, ಬಳಸಿ-ಬೆಳೆಸಿದ ಸಾಹಿತ್ಯವೇ ಜಾನಪದಸಾಹಿತ್ಯ. ಗೀತೆ, ಒಗಟು, ಲಾವಣಿ, ಗಾದೆ , ಕಾವ್ಯಗಳು ಅದರ ಪ್ರಕಾರಗಳು. ಗೀತೆ, ಲಾವಣಿಗಳು, ರಾಗಾಲಾಪ, ರಂಜನಗಳ ಸಾಹಿತ್ಯ ಪ್ರಕಾರ, ಒಗಟುಗಳು ಯೋಚನೆಯನ್ನು ಕೆರಳಿಸುತ್ತ ಬೌದ್ಧಿಕ ಆಯಾಮವನ್ನು ಕೊಡುತ್ತವೆ. ಈ ಜಾನಪದ ಪ್ರಕಾರಗಳಲ್ಲಿ **ಒಗಟು** ಮತ್ತು **ಗಾದೆ** ಪರಿಚಯವನ್ನು ಮಾಡಿಕೊಳ್ಳೋಣ.

ಒಗಟುಗಳಸ್ವರೂಪ : ಮನಸ್ಸಿನಸೃಜನತೆಯ ಗುಣದಿಂದಾಗಿ ಒಗಟುಗಳು ರೂಪುಗೊಂಡಿವೆ. ಗಾದೆಗಳಂತೆ ಸರ್ವವಿಷಯಗಳಲ್ಲಿ ಒಗಟುಗಳುಂಟು.ಇವುಗಳ ಜೀವಾಳವೇ ಹೋಲಿಕೆ. ಅವು ಅದರಲ್ಲಿ ಪ್ರಾಸ ಗುಣ ವಿಫುಲವಾಗಿರುತ್ತದೆ. ತಾರ್ಕಿಕತೆ, ವೈವಿಧ್ಯತೆ, ವೈಚಾರಿಕತೆ ಮತ್ತು ನಿಷೇಧಾರ್ಥಕ ಗುಣಗಳಿಂದ ದಾರಿತೋರಿಸುತ್ತದೆ. ಕೇಳುಗರನ್ನು ಚಿಂತೆಗೀಡು ಮಾಡುತ್ತದೆ. ಕೀಟಲೆಯ ವಿದ್ಯಾರ್ಥಿಗಳಿಗೆ ಎರಡು ಒಗಟು ಬಿಡಿಸುಯೆಂದು ಕೇಳಿದರೆ ಸ್ತಬ್ದನಾಗಿ ಚಿಂತಿಸತೊಡಗುತ್ತಾನೆ. ಒಂದೊಂದು ಅಂಶವನ್ನು ಬಿಡಿಸಿ ಒಡೆದು ನೋಡುವ ಗುಣವಿರುವುದರಿಂದ **'ಒಡಪು'** ಎಂಬ ಹೆಸರುಂಟು.

ನಿದರ್ಶನಕ್ಕಾಗಿ ಕೆಲವು ಸರಳ ಒಗಟುಗಳು, ಅವುಗಳಸೂಚ್ಯಾರ್ಥ :

***ಏರಿ ಮೇಲೊಂದು, ಜೀರಿಗೆ ಮರ ಹುಟ್ಟಿ, ನೀರ್‍ನ ಕುಡಿತಾದೆ, ಬೇರ್‍ನ ತಿಂತಾದೆ-* (ಕಂಬಾಲಿ ದೀಪ)**

ಅರ್ಥ : *ಎತ್ತರವಲ್ಲಿರುವ ದೀಪದ ಕೆಂಬಣ್ಣ ಮರದ ಆಕಾರದ ಕುಡಿಯನ್ನು ಹೊಂದಿ ತಳದ ಎಣ್ಣೆಯನ್ನು ಹೀರಿ, ಬೇರು ಬತ್ತಿಯನ್ನು (ರೂಪಕ) ತಿನ್ನುತ್ತದೆ.* ವಿಚಿತ್ರವೆನಿಸಿದರೂ ಹೋಲಿಕೆಯಲ್ಲಿ ಸಹಜತೆಯಿದೆ.

***ಬಿಳಿ ಮಡಿಕೆಯಲ್ಲಿ, ಕರಿ ಕುಡಿಕೆ ಅದರ ಸುತ್ತ ಗರಿಕೆ* - (ಕಣ್ಣು)**- ಕಣ್ಣಿನ ಗುಡ್ಡೆಯ ಹೊಳಪು, ಆಕಾರ, ಬಣ್ಣಗಳ ರಚನೆಯನ್ನು ಗಮನದಲ್ಲಿಟ್ಟುಕೊಂಡು ಹೇಳಿದ ಚಮತ್ಕಾರದ ಹೇಳಿಕೆ. ಇಲ್ಲಿ ನಮ್ಮ ಮನಸ್ಸು ಕರಿ ಕುಡಿಕೆಯಲ್ಲೇ ಕುಳಿತರೆ ಸಾಲದು ಮುಂದೆ ಯೋಚಿಸುತ್ತಾ ಸಾಗಬೇಕು. ರೆಪ್ಪೆಯಕೂದಲ ಗರಿಕೆಯ (ರೂಪಕ) ಇದೆ.

ಇದನ್ನೇ ***ಬಿಳಿ ಕೊಠಡಿಯಲ್ಲಿ ಕರಿ ಕಳ್ಳನ ಓಡಾಟ, ಹೊರಗೆ ಬರಲು ದಾರಿಯಿಲ್ಲ.* (ಕಣ್ಣು)** - ಕಣ್ಣಿನ ಭದ್ರವಾದ ನೆಲೆ, ಚಲನ ಶೀಲ ಗುಣ ಇವುಗಳನ್ನು ಸ್ಪಷ್ಟಪಡಿಸಿಕೊಂಡು. ಇಲ್ಲಿ **ಕರಿಕಳ್ಳ**ನೆಂಬ ರೂಪಕದ ಧರ್ಮದಲ್ಲಿ ಸೊಗಸಿದೆ.

'ಗೂಡಲ್ಲೇ ಕೂತು ಊರೆಲ್ಲಾ ನೋಡುತ್ತದೆ' - (ಕಣ್ಣು) ಇಲ್ಲಿ ಸ್ಥಿರವಾಗಿದ್ದು, ಸಾರ್ವತ್ರಿಕವಾದ, ವ್ಯಾಪಕ ಚಲನಶೀಲತೆಯನ್ನು ಹೇಳುತ್ತದೆ. ಹೀಗೆ ಒಂದು ವಸ್ತುವನ್ನು ಕುರಿತು ವಿನೂತನ ವೈವಿಧ್ಯವಾಗಿ ಹೇಳುವ ಒಗಟುಗಳ ಸ್ವರೂಪ ಆಶ್ಚರ್ಯ ರೀತಿಯಲ್ಲಿದೆ.

ಕಪ್ಪುಂಟು ಕಸ್ತೂರಿಯಲ್ಲ, ಬಿಳುಪುಂಟು ಬೆಣ್ಣೆಯಲ್ಲ, ನೀರುಂಟು ಬಾವಿಯಲ್ಲ ರೆಕ್ಕೆಯುಂಟು ಪಕ್ಷಿಯಲ್ಲ. - ಇಲ್ಲಿ ಕಣ್ಣಿನ ವಿವಿಧ ಸಾದೃಶ್ಯವನ್ನು ಹೇಳುತ್ತಾ ಅಲ್ಲವೆಂದು ನಿಷೇಧಿಸುತ್ತಾ ಮುಂದಿನ ಯೋಚನೆಗೆ ದಾರಿಮಾಡುತ್ತ ಸಾಗುತ್ತದೆ. ರಚನೆಯಲ್ಲಿ ಅಚ್ಚುಕಟ್ಟುತನ ಕಾವ್ಯಾಂತ್ಮಕ ಶೈಲಿ ಎದ್ದುಕಾಣುತ್ತದೆ.

ತಲೆಯಲ್ಲಾಡಿಸಿ ತನುವನ್ನೇ ತೂಗಿಸಿ, ಕುಣಿಸುದೇನದು? - ಮೈಕೈಯೆಲ್ಲ ಕುಣಿಸುವ ಇಂದಿನ ಜನಕ್ಕೆ ತಲೆದೂಗಿಸುವ ಸಂಗೀತ ಸುಶ್ರಾವ್ಯಗಾನ ಅಲುಗುವ ತನುವನ್ನು ನಿಯಂತ್ರಿಸಬಲ್ಲದು. ಹಾಗೆಯೇ ಸಂಗೀತದ ಪರಿಣಾಮದ ಹೃದಯಂಗಮ ಚಿತ್ರ ಇಲ್ಲಿದೆ.

ಕರಿ ಕಲ್ಲಿನ ಮ್ಯಾಲೆ ಬಿಳಿ ರಂಗೋಲಿ ಹಾಕಿ ಅದರ ಮೇಲೆ ಪದ್ಮಾವತಿ ಕುಳಿತಾಳೆ ವರ್ಣದ ಹೋಲಿಕೆಯಿಂದ (ಮಡಕೆ) ಕರಿಕಲ್ಲು, ಅಸ್ತವ್ಯಸ್ತಗೊಂಡ ಮೊಸರನ್ನು ಬಿಳಿರಂಗೋಲಿ ಮೇಲ್ಲೊಂದು (ಮಂತು) ಲಕ್ಷ್ಮೀ ಸಂಕೇತ ಇಲ್ಲಿ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ರಂಗೋಲಿಯನ್ನೆ ಸಮೃದ್ಧಿಗೆ ಮೂಲದೈವದ ಕಾವ್ಯಾತ್ಮಕ ರಮ್ಯಮನೋಹರ ಕಲ್ಪನಾಚಿತ್ರವನ್ನು ಪದ್ಮಾವತಿಯೆನ್ನಲಾಗಿದೆ.

ಅಕ್ಕ ಅಕ್ಕ, ಗಿಡ ನೋಡು, ಗಿಡದ ತುಂಬಾ ಕಾಯಿ ನೋಡು, ತಿಂದಾರ ಬಾಯಿ ನೋಡು. - ಈ ಮಣ್ಣಿನ ವಾಸನೆಯ ಗಂಧದ ಪರಿಮಳದ ಚಿತ್ರ ಇಲ್ಲಿದೆ ಕುತೂಹಲ ಕೆರಳಿಸುವ ಆತ್ಮೀಯ ಶೈಲಿಯಿದೆ. ಒಗಟು ಕೇಳುಗರನ್ನು ತನ್ನತ್ತಾ ಕರೆ ಸಮೃದ್ಧವಾಗಿ ಬಂದಿರುವ **ಏಲಕ್ಕಿ** ಬೆಳೆಯ ಚಿತ್ರ, ಅದನ್ನು ತಿಂದವರ ಬಾಯಿಯ ಗಂಧದ ಪರಿಮಳದ ಚಿತ್ರ ಇಲ್ಲಿದೆ.

ಹಳ್ಳ ಹರಿತೈತೆ, ಹಗ್ಗ ಹಾಸೈತೆ, ನವಿಲು ಕುಣಿತೈತೆ ಅದೇನು - ಕಂದಿಲು - ಇ ಹಳ್ಳ, ಹಗ್ಗ, ನವಿಲುಗಳ ಚಿತ್ರವಿದೆ. ಎಣ್ಣೆಯನ್ನು ಸಾಗಿಸುತ್ತಿರುವ ಬತ್ತಿ, ಬೆಳಕನ್ನು ಹರಡಿ ರೆಕ್ಕೆ ಬಿಚ್ಚಿರುವ ನವಿಲಿನಂತೆ ಕಿರಣ ಚಾಚಿವೆ. ಕೊನೆಗೆ ಹೇಳುವರಿಗೆ ಸವಾಲು ಎಸೆಯುತ್ತ

ಅಂಗಣ್ಣ, ಮಂಗಣ್ಣ ಅಂಗಿಬಿಚ್ಚಿ ನುಂಗಣ್ಣ - ಬಾಳೆಹಣ್ಣು - ಇಲ್ಲಿ ಸಾದೃಶ್ಯದಿಂ ಅಂಗಿಯನ್ನು ಬಾಳೆಸಿಪ್ಪೆಯೆಂದು ಹೇಳಿರುವುದಲ್ಲದೆ ಅನುಪ್ರಾಸ ಬದ್ಧತೆಯಿಂದ ಉಚ್ಚಾರಕ ಹಿತವೆನಿಸಿ ಅರ್ಥಪುಷ್ಟಿಗೆ ಸೊಗಸನ್ನು ಕೊಡುತ್ತದೆ.

ಇಂತಹ ಅಸಂಖ್ಯಾತ ಒಗಟುಗಳನ್ನು ಹೇಳುವುದು ಮಕ್ಕಳನ್ನು ಚಿಂತನೆಗೆ ತೊಡಗಿ ಅಲ್ಲಿನ ಹೊಂದಿಕೆಯ ಜ್ಞಾನವನ್ನು ಬೆಳೆಸುತ್ತದೆ. ಇಂತಹ ನೂರಾರು ದಿನನಿತ್ಯದ ಸಾಂಸ್ಕೃ ಹಿನ್ನೆಲೆಯ ಒಗಟುಗಳು ಮಕ್ಕಳ ಚಿಂತನೆ, ಕಲ್ಪನಾಶಕ್ತಿಗೆ ಲೋಕಾನುಭವ, ಭಾಷಾ ಚಮತ್ಕಾ ಪರಿಚಿತವಾಗಿ ಅರಿವಿಗೆ ಪೂರಕವಾಗಿವೆ.

ಗಾದೆಯ ಸ್ವರೂಪ : "ಆಡು ಮುಟ್ಟದ ಸೊಪ್ಪಿಲ್ಲ....." ಎಂಬಂತೆ ಈ ಗಾ ಹೇಳದ ವಿಚಾರವಿಲ್ಲ. ಗಾದೆ ಹಳ್ಳಿಯ ಕಲಿಯದವರ ಅನುಭವಸಾರವೇ ಆಗಿದೆ. ಇ ಕಲಿತವರನ್ನೂ ಬೆರಗುಗೊಳಿಸಬಲ್ಲವು. ಗಾದೆಯೆಂದ ಕೂಡಲೇ ಅದರ ಒಂದೊಂ ಗುಣಗಳೂ ಅರಿವಿಗೆ ಬರುತ್ತದೆ. **'ಮೂರ್ತಿಚಿಕ್ಕದಾದರೂ ಕೀರ್ತಿದೊಡ್ಡದು'** ಎ

ಗಾದೆಯಂತೆ ರೂಪ ಚಿಕ್ಕದು. ಅದು ಮೂರು ನಾಲ್ಕು ಮಾತುಗಳಿಂದ **ಸೂತ್ರಪ್ರಾಯು**ವಾಗಿರುತ್ತದೆ. ಅವುಗಳನ್ನು ವಿವರಿಸುತ್ತ ಹೋದರೆ ಗೂಢವಾದ ಅರ್ಥಸುರುಳಿಯಂತೆ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಇದು ಗಾದೆಯ **ಸಂಕ್ಷಿಪ್ತತೆಗುಣವನ್ನು** ಯನ್ನು ತಿಳಿಸುತ್ತದೆ.

ಮತ್ತೊಂದು ಗಾದೆ ನೋಡಿ: **'ಉಪ್ಪು ತಿಂದವನು ನೀರು ಕುಡಿಯಲೇ ಬೇಕು'** ಇದು ತಪ್ಪು ಮಾಡಿದವನನ್ನು ಪರಿಣಾಮವು ಬೆನ್ನುಹತ್ತುತ್ತದೆ. ಆತ ಅನುಭವಿಸಲೇಬೇಕೆಂಬ ಖಚಿತ ಅಭಿಪ್ರಾಯದ **'ನಿತ್ಯಸತ್ಯ'** ವನ್ನೂ **'ತೀಕ್ಷ್ಣಪ್ರಭಾವ'** ಬೀರಿ ಉಪದೇಶ ಮಾಡುತ್ತದೆ. . **'ಹೊಟ್ಟೆಗಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ'** - ಈ ಗಾದೆ ಒಬ್ಬ ನಿರ್ಗತಿಕನ ಬಾಡಿಗೆ ಷೋಕಿತನವನ್ನು ಬಯಲಿಗೆಳೆಯುತ್ತದೆ. ಯಾವುದಕ್ಕೆ ಎಷ್ಟುಗಮನ ಕೊಡಬೇಕೆಂಬ 'ಪ್ರಜ್ಞೆಯತತ್ತ್ವ'ವನ್ನು ಹೇಳುತ್ತದೆ. **'ನಾಳೆಯೆಂದವನ ಮನೆಹಾಳು'** ಎಂಬ ಗಾದೆ ಚಾಟಿಏಟಿನಂತೆ ಸೋಮಾರಿಗೆ **ತೀವ್ರಪರಿಣಾಮ**ವನ್ನುಂಟು ಮಾಡುತ್ತದೆ. ಈ ಗಾದೆಗಳು **ಕಟುಸತ್ಯ**ವನ್ನು ನೇರವಾಗಿ ಹೇಳುತ್ತವೆ. ಅವುಗಳಲ್ಲಿರುವ **'ಪ್ರಾಸಬದ್ಧತೆ'**ಯಿಂದ ಕೇಳಲು ಸೊಗಸಾಗಿರುತ್ತವೆ. ನೆನಪಿನಲ್ಲಿರಿಸಿಕೊಳ್ಳಲು ಅನುಕೂಲವಾಗಿರುತ್ತವೆ. ಗಾದೆಗಳು ಹೋಲಿಕೆ, **ರೂಪಕಗುಣ**ಗಳಿಂದ **ಅರ್ಥಚಮತ್ಕಾರ**ವನ್ನುಂಟುಮಾಡುತ್ತವೆ. ಹೀಗೆ ಗಾದೆಗಳು **ಸಂಕ್ಷಿಪ್ತತೆ, ತೀಕ್ಷ್ಣಪ್ರಭಾವ, ಪ್ರಾಸ,ಲಯ, ಸಾರ್ವತ್ರಿಕತೆ, ಸಾದೃಶ್ಯಗುಣ, ಭಾಷೆಯಧ್ವನಿ, ಕಸುವುಗಳಿಂದ ತೀರಹತ್ತಿರವಾಗಿ ಆಲಂಕಾರಿಕ** ಅಂಶಗಳಿಂದ ಕೂಡಿದ ಅನುಭವಸಾರ.

ಗಾದೆಯಮಹತ್ವ : ಗಾದೆಯ ಮಹತ್ವವನ್ನೆತ್ತಿ ಹಿಡಿಯುವ ಗಾದೆಯೊಂದಿದೆ. **'ವೇದ ಸುಳ್ಳಾದರೂ ಗಾದೆ ಸುಳ್ಳಾಗದು'** - ಇದು ಅನುಭವದವಾಣಿ. ವೇದಗಳನ್ನು ಋಷಿಗಳು ಕಂಡುಕೊಂಡರು. ಅಂತಹ ಪವಿತ್ರವಾದುದರಲ್ಲಿಯೂ ಅಸಹಜತೆಯಿದ್ದು, ಸುಳ್ಳೆನಿಸಬಹುದು. ಆದರೆ ಈ ಗಾದೆಗಳಲ್ಲಿ ಸಹಜತೆಯಿರುತ್ತದೆ. ಹೀಗಾಗಿ ಅದರಲ್ಲಿ ಸುಳ್ಳಾಗದ, ಈ ನಿತ್ಯಸತ್ಯತೆಯ ಗುಣ ಮತ್ತು ಪಾವಿತ್ರ್ಯತೆಗಳಿವೆ. ಗಾದೆಗಳನ್ನು ಅವುಗಳ ಅರ್ಥತಿಳಿದು ಬಳಸಬೇಕು. ಬಳಸುವವರ ಮಾತಿಗೆ ಸತ್ಯದ ಮೆರುಗು ಬಂದು, ಮಾತಿನ ಬೆಲೆ ಹೆಚ್ಚುತ್ತದೆ. ಪ್ರತಿಯೊಂದು ಭಾಷೆಯಲ್ಲೂ ತಮ್ಮವೇ ಆದ ಗಾದೆಗಳುಂಟು.

ಈ ಗಾದೆಗಳನ್ನು ಬಳಸುವುದರಲ್ಲಿ ಕೀಳರಿಮೆ ಬರಬಾರದು. ಅವುಗಳನ್ನು ಬಳಸುವವರಲ್ಲಿ ತನ್ನದೇ ಆದ ಮಾತಿನಸೊಗಡು, ಮಣ್ಣಿನವಾಸನೆ, ಜಾಯಮಾನಗಳು ಕಾಣುತ್ತದೆ. ಇಂಗ್ಲೀಷ್ ಬೆರೆಸುವ ನಾವು ಹಾಲಿನ ಕೆನೆಯಂತಹ ಸವಿಯಾದ, ಬಳಕೆಯಿಂದ ಬುದ್ಧಿ, ವಿಚಾರಗಳು, ಹರಿತಗೊಳ್ಳುವಂತೆ ಮಾಡುವ ಗಾದೆಗಳನ್ನು ಉಪಯೋಗಿಸಿ ಬೆಳೆಸಬೇಡವೇ?.

ಗಾದೆಗಳ ಹುಟ್ಟು : ಒಂದು ಕೃತಿಯ ಪಂಕ್ತಿಯು ಯಾರಿಂದ ಬರೆಯಲಾಗಿದೆ, ಎಲ್ಲಿಂದ ತೆಗೆದುಕೊಳ್ಳಲಾಗಿದೆ ಎಂಬುದನ್ನು ಹೇಳಬಹುದು. ಆದರೆ ಒಂದುಗಾದೆ **ಹೇಳಿದ್ದವರಾರು?** **ಮೂಲಎಲ್ಲಿ?** ಎಂಬುದನ್ನು ಹೇಳಲು ಬರುವುದಿಲ್ಲ. ಯಾರೋ ತಮ್ಮಹಿರಿದಾದ ಅನುಭವಸಾರವನ್ನು ಆಕಸ್ಮಿಕವಾಗಿ ಸನ್ನಿವೇಶಕ್ಕೆ ಹೊಂದಿಕೊಳ್ಳುವಲ್ಲಿ, ಪ್ರತಿಭೆಯ ಕಿಡಿಯಾಗಿ

ಹೊರಹಾಕಿದರು. ಇತರರೂ ಅಂತಹ ಸನ್ನಿವೇಶಗಳಲ್ಲಿ ಅಗತ್ಯವರಿತು, ಅದನ್ನೇ ಬಳಸುತ್ತ ಬಂದು, ತಮ್ಮ ಮೆಚ್ಚುಗೆಯ ಮುದ್ರೆಯನ್ನೂ ಹಾಕುತ್ತ ಬಂದರು. ಆದರೆ ರಚನೆಕಾರರು ತಮ್ಮ ಹೆಸರನ್ನು ಬರೆದಿಡಲಿಲ್ಲ. ಅದಕ್ಕೆ ಕಟ್ಟಕಟ್ಟಲಿಲ್ಲ. ಅವು ಮುಕ್ತವಾಗಿ ಬೆಳೆದವು. ಹೀಗಾಗಿ ಗಾದೆಗಳು ಸಮಸ್ತಜನರ ಬದುಕಿನ ಜೀವನಾಡಿಯಾಗಿ ಬಳಕೆಗೊಳ್ಳುತ್ತ ಬಂದಿವೆ. ಕವಿಗಳೂ ತಮ್ಮ ಕಾವ್ಯಗಳಲ್ಲಿ ಬಳಸಿಕೊಂಡು ತಮ್ಮ ಕಾವ್ಯದ ಸೊಗಸನ್ನು ಹೆಚ್ಚಿಸಿ ಅವುಗಳ ಜನಪ್ರಿಯತೆಯನ್ನೆತ್ತಿ ಹಿಡಿದಿದ್ದಾರೆ.

ಗಾದೆಗಳ ಅರ್ಥವಿಸ್ತರಣೆಯಲ್ಲಿ ಗಮನಿಸಬೇಕಾದ ಅಂಶಗಳು :

೧) ಗಾದೆಯನ್ನು ಓದಿಕೊಂಡು ಅಲ್ಲಿನ ನುಡಿಗಟ್ಟುಗಳ ಅದರ ಒಳಅರ್ಥ ಹಿನ್ನೆಲೆಯನ್ನೂ ಮನನ ಮಾಡಬೇಕು.

೨) ಅದರ ಮೇಲ್ನೋಟದಅರ್ಥ ಹಾಗೂ ಅದರಿಂದ ಸೂಚಿತವಾಗುವ ಸಂದರ್ಭ, ಅರ್ಥಗಳನ್ನು ಗ್ರಹಿಸಬೇಕು. ತಿಳಿದ ವಿಚಾರಗಳನ್ನು ಸರಳ ವಾಕ್ಯಗಳಲ್ಲಿ ಬರೆಯಬೇಕು.

೩) ಅಗತ್ಯಕ್ಕೆ ತಕ್ಕಂತೆ ಅದರ ಅಲಂಕಾರ, ಅನುಭವಗಳನ್ನು ಗ್ರಹಿಸಿ ವಿಸ್ತರಿಸುತ್ತ ಹೋಗಬೇಕು.

೪) ನಡುವೆ ಅದಕ್ಕೆ ಪೂರಕವಾದ ಮಾತುಗಳಿಂದ, ಹೇಳಬೇಕೆಂದಿರುವ, ಅಡಗಿರುವ ಗಾದೆಯ ಅರ್ಥವನ್ನು ಸ್ಪಷ್ಟಪಡಿಸಬೇಕು.

ಮಾರ್ಗದರ್ಶನಕ್ಕಾಗಿ ಕೆಲವು ಗಾದೆಗಳ ಅರ್ಥವಿಸ್ತರಣೆ :

೧) 'ಹಾಸಿಗೆಇದ್ದಷ್ಟು ಕಾಲುಚಾಚು'. *ಸೂತ್ರಪ್ರಾಯದ ಈ ಗಾದೆಎರಡು ನುಡಿಗಟ್ಟುಗಳ ರಚನೆ ತೂಕವಜೀವನ ಧರ್ಮವನ್ನು ಸೂಚಿಸುತ್ತದೆ:*

ನಮ್ಮಲ್ಲಿ ಐದುಅಡಿ ಹಾಸಿಗೆಯಿದೆ, ಎಂದು ಭಾವಿಸೋಣ. ನಾವು ಆರಡಿ ಉದ್ದರಿದ್ದೇವೆಂದುಕೊಳ್ಳಿ. ಕಾಲನ್ನು ಮನಬಂದಂತೆ ನೀಡಿದರೆ ಕಾಲುನೆಲಮುಟ್ಟಿ ಶೀತಬಾಧೆಯಾದೀತು. ಯೋಚಿಸಿ ಕಾಲನ್ನು ಮಡಿಸಿಮಲಗಿದರೆ, ಆಗುವ ತೊಂದರೆ ತಪ್ಪುತ್ತದೆಯಲ್ಲವೆ?

ಈ ಮಾತು ಕೇವಲ **'ಹಾಸಿಗೆ - ಕಾಲಿಗೆ'** ಮೀಸಲಾಗಿಲ್ಲ. ಜೀವನದ ಸಮಸ್ಯೆಗಳಲ್ಲಿ ಕಾಲ, ಹಣ, ಶಕ್ತಿ ಕಡಿಮೆಯಿರುವಾಗ ಹೇಗೆ ನಡೆದುಕೊಂಡರೆ ಅನುಕೂಲವೆಂಬುದನ್ನು ಇಲ್ಲಿ ಸೂಚಿಸಲಾಗಿದೆ. ಆದಾಯಕಡಿಮೆ, ಖರ್ಚು ಅತಿಯಾದರೆ ಕಷ್ಟಗಳುಂಟಾಗುತ್ತವೆ. ದುಃಖ, ಗೊಂದಲ, ಇನ್ನೊಬ್ಬರಿಗೂ ಹಿಂಸೆಗಳಾಗುತ್ತವೆ. ಜೀವನಕ್ಕೆ ಸಂಬಂಧಿಸಿದ ಈ ನೀತಿ ಸಮಾಜ, ದೇಶಕ್ಕೂ ಅನ್ವಯವಾಗುತ್ತವೆ. ದೇಶದಲ್ಲಿ ಸಮಸ್ಯೆಗಳಿಗನುಸಾರ ಯತ್ನಮಾಡಿದರೆ, ಸಮಸ್ಯೆಗಳೂ ನಿವಾರಣೆಯಾದಾವು. ಇಲ್ಲದಿದ್ದರ ಪ್ರತಿಯೊಬ್ಬ ವ್ಯಕ್ತಿಯೂ ಈ ಗಾದೆಯ ಅರ್ಥದಂತೆ ಯಾತನೆ, ನಗೆಗೀಡಾಗಿ, ಕಷ್ಟನಷ್ಟಗಳನ್ನು ಅನುಭವಿಸಬೇಕಾಗುತ್ತವೆ ಎಂಬ ಹಿತವಾದ ಲೋಕನೀತಿಯನ್ನು ಈ ಗಾದೆ ಸೂಚಿಸುತ್ತದೆ.

೨) 'ಉಪ್ಪು ತಿಂದವನು ನೀರು ಕುಡಿಯಲೇ ಬೇಕು'. - ಪಾಪಪುಣ್ಯ

ಪರಿಣಾಮವನ್ನು ಹೇಳುತ್ತದ **'ಉಪ್ಪಿಗಿಂತ ರುಚಿಯಿಲ್ಲ' ಹೀಗೆಂಬ ಇನ್ನೊಂದು ಗಾದೆಯಿದೆ:**

- ಹಿತಮಿತವಾಗಿ ಆಹಾರ ಪದಾರ್ಥಗಳನ್ನು ಬಳಸುವುದು ಸರಿ. ಅದು ರುಚಿಯನ್ನು ಕೊಡುತ್ತದೆ. ಯೋಚನೆ ಮಾಡದೆ, ರುಚಿಯಾಗಿದೆ ಎಂದು ಅದನ್ನೇ ಹೆಚ್ಚುಬಳಸಿದರೆ ಅದರ ಪರಿಣಾಮ (ತೀವ್ರ ಬಾಯಾರಿಕೆ) ಅದು ಇನ್ನೊಬ್ಬರಿಗೆ ಆಗುತ್ತದೆಯೇ? ಇಲ್ಲ, ಇದು ಲೋಕಧರ್ಮವಲ್ಲ, ಯಾರು ತಿಂದನೋ ಆತನೇ ಅತಿಯಾಗಿ ನೀರು ಕುಡಿಯಲೇಬೇಕು.

ಈ ಮಾತು ಅಷ್ಟಕ್ಕೆ ಸೀಮಿತವಾಗುವುದಿಲ್ಲ. ನಾವು ಜೀವನದಲ್ಲಿ ತಪ್ಪು ತಿಳುವಳಿಕೆಗಳನ್ನು ಮಾಡುತ್ತೇವೆ. ಮೇಲ್ನೋಟಕ್ಕೆ ಚೆನ್ನಾಗಿ ಕಾಣಬಹುದು. ಅದರ ಪರಿಣಾಮವು ತನಗೇ ಕಾದಿದೆ. ಆತನೇ ತಲೆಕೊಡಬೇಕಲ್ಲ! ಆದ್ದರಿಂದ ಎಚ್ಚರವಿರಬೇಕು.

ವ್ಯಕ್ತಿಗಳಿಗೆ ಮೋಹಕವಾಗಿ ಲಂಚ, ಮದ್ಯಸೇವನೆ, ಸೇವಾ ಫಲ ಇತ್ಯಾದಿಗಳು ಕಾಣುತ್ತವೆ, ತೊಡಕುಂಟುಮಾಡುತ್ತವೆ. ಅವುಗಳಿಂದೊದಗುವ ಬಾಧೆ, ಶಿಕ್ಷೆ, ಬಾಳಿನ ಗೋಳು ಅನೇಕ ಖಾಯಿಲೆಗಳಿಗೆ ತಾನೇ ತುತ್ತಾಗಬೇಕಾಗುತ್ತದೆ. ಹೀಗೆ **'ಮಾಡಿದ್ದುಣ್ಣೋ ಮಹರಾಯ'** ಎಂಬಂತೆ ಪರಿಣಾಮವನ್ನು ವ್ಯಕ್ತಿ, ಸಮಾಜ, ದೇಶಗಳು ಅನುಭವಿಸಲೇಬೇಕೆಂಬ ಕಟುಸತ್ಯವನ್ನು ಈ ಗಾದೆಯು ತಿಳಿಸುತ್ತದೆ. ಹಾಗೆಯೇ ಸಂಯಮ, ಸಹನೆಗಳು ಜೀವನಕ್ಕೆ ಅಗತ್ಯವೆಂಬ ಶಾಶ್ವತನೀತಿಯನ್ನು ಸಾರುತ್ತದೆ.

೩) 'ಆಳಾಗಬಲ್ಲವನು ಅರಸಾಗಬಲ್ಲ' - *ಸೇವಾ ರಹಸ್ಯ, ಸ್ಥಾನ-ಮಾನ ನೀಡಬಲ್ಲದು.*

ಆಳು ಕೆಲಸಮಾಡುವವನು, ಅರಸ ಮಾಡಿಸಿಕೊಳ್ಳುವವನು. ನಿಜ, ಈತನಿಗೆ ಜವಾಬ್ದಾರಿ, ಅರ್ಹತೆಗಳು ಹೆಚ್ಚಿರಬೇಕು. ಉತ್ತಮ ಸಾಧನೆ, ಅರಸನ ಯೋಗ್ಯತೆಯನ್ನವಲಂಭಿಸಿರುತ್ತದೆ. ಹೌದು, ಯೋಗ್ಯತೆ ಹೇಗೆ ಬರುತ್ತದೆ? ಆತನೂ ಕಾರ್ಯ ಕೌಶಲ್ಯವನ್ನು ಬಲ್ಲವನಾಗಬೇಕು. ಆತ ಮೊದಲು ಆಳೇ ಆಗಿ ಕಾರ್ಯತಂತ್ರ, ಕಷ್ಟ-ನಷ್ಟ, ಸುಖ-ದುಃಖ ಸೂಕ್ಷ್ಮಗಳನ್ನು ಅರಿತವನಾಗಿರಲೇಬೇಕು. ಆಗ ಸರಿಯಾದ ಆಳನ್ನು ನೇಮಿಸಬಲ್ಲ. ಆತನಿಂದ ಸರಿಯಾದ ಕೆಲಸವನ್ನು ತೆಗೆದುಕೊಳ್ಳಬಲ್ಲ. ಇದರಿಂದ ಸರಿಯಾದ ಫಲಿತಾಂಶ ಬರುತ್ತದೆ.

ಅದಕ್ಕೆ **'ಆಳಾಗಿದುಡಿ ಅರಸಾಗಿ ಉಣ್ಣು'** ಈ ಗಾದೆಯೂ ಇದೆ. ಆಳು-ಅರಸನೆಂಬ ಭೇದ ತೊಡೆದುಹಾಕಬೇಕು. ಅಲ್ಲದೆ ದುಡಿಯುವವನ ಆಸೆಯಲ್ಲಿ ಇತಿಮಿತಿ ಇರಬೇಕು. ಅರಸನ ಮಾತಿಗೆ ಆಳು ಸ್ಪಂದಿಸಬೇಕು. ಒಡೆಯನಿಗೆ ಆಳಿನ ಸಮಯಸಾಧಕತನ, ಅವನ ನಿಜಸ್ಥಿತಿ ಅರ್ಥವಾಗಬೇಕು. ಅದಕ್ಕಾಗಿ ತಾನು ಆ ಸ್ಥಾನದಲ್ಲಿ ದುಡಿದು ಅನುಭವಿಸಿರಬೇಕಾದ್ದು ಅನಿವಾರ್ಯ. ಇಲ್ಲದೆ ಅವರಿಂದ ದುಡಿಸಿಕೊಳ್ಳುವ ದಕ್ಷತೆ ಬರದು. ಆದ್ದರಿಂದ ಭೇದ ತೊಲಗಿಸಿ, ಅನುಭವಗಳಿಸಿ, ಸ್ಥಾನಉಳಿಸಿಕೊಳ್ಳಬೇಕೆಂಬ ಕಾರ್ಯಸಾಧನೆಯ ಗುಟ್ಟನ್ನು ಈ ಗಾದೆ ಸೂಚಿಸುತ್ತದೆ.

೪) 'ಬೆಳ್ಳಗಿರುವುದೆಲ್ಲಾ ಹಾಲಲ್ಲ' - *ಸೂಕ್ಷ್ಮವಾಗಿ ಗಮನಿಸಿ ತೀರ್ಮಾನಿಸಬೇಕು*

ಬಿಳಿ ಬಣ್ಣಗಳಿಗೆಲ್ಲಾ ಆಧಾರ. ಬಿಳಿಬಣ್ಣ ಪವಿತ್ರ, ಸರಳತೆಯ ಸಂಕೇತವೆಂದು ಮಹತ್ವ ಕೊಟ್ಟಿದ್ದೇವೆ. ಹಾಗಾದರೆ ಬೆಳ್ಳಗಿರುವುದೆಲ್ಲವನ್ನೂ ಹಾಗೇ ತಿಳಿಯಲು ಬರುತ್ತದೆಯೇ? ಇಲ್ಲ. ಕಳ್ಳಿಯಹಾಲು ಬಿಳುಪು. ಇವುಗಳ ಗುಣಧರ್ಮಗಳೇ ಬೇರೆ ಕಳ್ಳಿಯಹಾಲಿಗೂ ನಿಜವಾದ ಹಾಲಿಗೂ ಅಂತರವಿದೆ. ಕೇವಲ ಬೆಳ್ಳಗೆ, ಹಿತವಾಗಿರುವುಗಳನ್ನು **'ಹಾಲೆಂಬ' ಸಂಕೇತ**ದಿಂದ ಹೇಳಲಾಗಿದೆ.

ಅದರಿಂದ ವ್ಯಕ್ತವಾಗುವ ಸೂಚ್ಯಾರ್ಥವೇ ಬೇರೆ. ಕೇವಲ ಮೇಲ್ನೋಟದ ಬಣ್ಣದಿಂದಲೇ ತಮ್ಮ ಮನೋಗುಣಕ್ಕನುಸಾರವಾಗಿ ತೀರ್ಮಾನಿಸಬಾರದು. ಬಣ್ಣದ ಥಳಕು ಬಳುಕಿಗೆ ಗುರಿಯಾಗದೇ ವಸ್ತು, ವ್ಯಕ್ತಿ, ಸ್ಥಳ, ಸ್ವಭಾವಗಳ, ಗುಣಧರ್ಮವನ್ನು ವಿವೇಕದಿಂದ ವಿಚಾರ ಮಾಡಬೇಕು. ಅದರ ಯೋಗ್ಯತೆಯೇನು? ಅದರ ಹಿನ್ನೆಲೆಯೇನು? ತಿಳಿಯಬೇಕು. ಏಕೆಂದರೆ ಈ ಮಾತು ಬದುಕಿನ ಆಗುಹೋಗುಗಳಿಗೆ ಅನ್ವಯಿಸುತ್ತದೆ. ವಿಚಾರ, ವಿಮರ್ಶೆಯಿಂದ ನಿರ್ಧರಿಸಿ ಸ್ವೀಕರಿಸಬೇಕು. **'ದೂರದ ಬೆಟ್ಟ ನುಣ್ಣಗೆ'** ಎಂದು ಜನ ನಂಬಿದರೆ ಮಣ್ಣು ತಿನ್ನುವ ಗತಿ ಬರುತ್ತದೆ. ಆ ರೀತಿ ನಂಬುವುದು ಮೌಢ್ಯತೆಯ ಗುರುತು ಎಂಬುದನ್ನು ಹೇಳುತ್ತದೆ. ಬಣ್ಣಕ್ಕಿಂತಲೂ ಗುಣ ಮುಖ್ಯ. ಅದನ್ನು ಗುರುತಿಸುವ ದೃಷ್ಟಿಯೂ ಅತಿ ಎಚ್ಚರಿಕೆ ಮುಖ್ಯ.

೫) 'ಬೆಳೆಯುವ ಪೈರು ಮೊಳಕೆಯಲ್ಲಿ'. - *ಕಿರಿದರ ಪರಿಣಾಮ ಹಿರಿದರಲ್ಲುಂಟು.*

ರೈತನಿಗೆ ಗೊತ್ತು, ಮೊಳಕೆ ಚೆನ್ನಾಗಿ ಬಂದರೆ, ಪೈರುಚೆನ್ನಾಗಿ ಬರುತ್ತದೆ. ಫಸಲನ್ನು ಪಡೆದವರು ಮೊಳಕೆಯ ಹುಟ್ಟುಗುಣವನ್ನು ನೋಡಿ ಇದರ ಫಲ, ಗುಣಮಟ್ಟ ಇಷ್ಟೇ ಎಂದು ನಿರ್ಧರಿಸುತ್ತಾರೆ. ಈ ಗಾದೆ ಬೆಳೆಯುವ ಪೈರಿಗಷ್ಟೇ ಅಲ್ಲ, ಬೆಳೆಯುವ ವ್ಯಕ್ತಿ, ವಸ್ತು, ಸಂಘ, ಸಂಸ್ಥೆ, ದೇಶಗಳಿಗೆ ಅನ್ವಯವಾಗುತ್ತದೆ.

ಲೋಕದಲ್ಲಿ ಒಳ್ಳೆಯಸಾಧನೆ ಸಿದ್ಧಿಯನ್ನು ಪಡೆದವರ ಹಿಂದಿನ ಅವಸ್ಥೆಯನ್ನು ನೋಡಬೇಕು. ಅವರು ಬಾಲ್ಯದಲ್ಲಿ ಒಳ್ಳೆಯ ಆತ್ಮವಿಶ್ವಾಸ ಬೆಳೆಸಿಕೊಂಡು ಶ್ರದ್ಧೆಯಿಂದ ಅಭ್ಯಾಸ, ಸಾಧನೆ ಮಾಡಿರುತ್ತಾರೆ. ಅಲ್ಲೇ ಅವರ ಆದರ್ಶಗುಣಗಳು ಬೀಜರೂಪದಲ್ಲಿ ಕಾಣಿಸಿಕೊಳ್ಳುತ್ತವೆ. ಗಾಂಧೀ, ಶಾಸ್ತ್ರೀಜಿ, ಶಿವಾಜಿ ಮುಂತಾದವರಲ್ಲಿ ಚಿಕ್ಕಂದಿನಲ್ಲೇ ಮಹಾಪುರುಷರ ಗುಣಗಳು ಕಂಡುಬಂದವು. ಕಂಡವರು ಮುಂದೆ ಇವರನ್ನು **'ಮಹಾಸಾಧಕ'**ರಾಗುವರೆಂದು ಗುರುತಿಸಿದ್ದರು.

'ಇಂದಿನ ಮಕ್ಕಳೇ ನಾಳಿನ ಪ್ರಜೆಗಳು' ಅದನ್ನು ಮನಗಂಡು ಮಕ್ಕಳಿಗೆ ಭದ್ರ ಬುನಾದಿ ಹಾಕಬೇಕು. ಆ ರೀತಿಯಲ್ಲಿ ಎಚ್ಚರ, ನಿಗಾ ವಹಿಸಬೇಕೆಂಬುದನ್ನು ಈ ಗಾದೆ ಸೂಚಿಸುತ್ತದೆ. ಆ ಸಮಯದಲ್ಲಿ ಯಾರೂ ಉದಾಸೀನ ಮಾಡಬಾರದೆಂಬ ಜಾಗೃತಿಯನ್ನು ಈ ಗಾದೆ ಸಾರುತ್ತದೆ.

೬. 'ಜಟ್ಟಿ ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ'.-ಪ್ರತಿಷ್ಠಾಪರರು ತಪ್ಪು ಒಪ್ಪರು. ಮುಖವಾಡ ಹಾಕಿಕೊಂಡು ಬದುಕಿದವನ ಹಾಸ್ಯಾಸ್ಪದ ಚಿತ್ರಣ ಇಲ್ಲಿದೆ. **'ಕುಸ್ತಿ'**

ಪಟು ತನ್ನಸ್ಪರ್ಧೆಯಲ್ಲಿ ನೆಲಕ್ಕೆ ಬಿದ್ದಿದ್ದಾನೆ. ಬೀಳುವುದು ಸಹಜವಲ್ಲವೆ? ಆ ಸೋಲನ್ನು ಒಪ್ಪದ ಬಡಪಾಯಿಯ ಮೊಂಡುತನ ಇಲ್ಲಿ ಬೆಳಕಿಗೆ ಬಂದಿದೆ. ಅವನ ಮುಖದ ಮೇಲಿನ **'ಮೀಸೆ'** ಇದು **'ಪ್ರತಿಷ್ಠೆ', 'ಪೌರುಷ'**ದ ಸಂಕೇತ. ಮಣ್ಣಾಗಲಿಲ್ಲವೆಂದರೇನು? ಮೀಸೆಯನ್ನು ಕೈಯಿಂದ ಮುಚ್ಚಿಕೊಂಡಿದ್ದಾನೆಯೇ? ಮುಚ್ಚಿಕೊಂಡಿರುವುದು ಅಪಜಯವನ್ನು. ನಿಜವಾಗಿಯೂ ಮಣ್ಣಾದರೂ ಮಣ್ಣಾಗಲಿಲ್ಲವೆನ್ನುವ ಒಣಪ್ರತಿಷ್ಠೆ ಆತನಲ್ಲಿದೆ. ಆತ ಮುಚ್ಚಿಕೊಂಡರೂ ಇನ್ನೊಬ್ಬನಿಗೆ ತಿಳಿದು ಅಪಹಾಸ್ಯದಿಂದ ನುಡಿದಾಗ, ಅವನು ಆಗಲಿಲ್ಲವೆಂದು ಹೇಳುವ ಅಲ್ಪತನದ ಸ್ವಭಾವಚಿತ್ರಣವನ್ನು ಮಾಡಿಕೊಡುತ್ತದೆ.

ಈ ಗಾದೆ ಹೀಗೆ ಜಟ್ಟಿಯನ್ನೇ ನೋಡುತ್ತ ಕೂತಿಲ್ಲ. ಇಂತಹ ಸ್ವಭಾವದ ದೇಶಗಳನ್ನೂ ಸೂಚಿಸುವುದಿಲ್ಲವೇ? ಭಾರತದಂತಹ ಶಕ್ತಿದೇಶ ಅಣುಸ್ಫೋಟಿಸಿತು. ತಾನೂ ಕಡಿಮೆಯಿಲ್ಲವೆಂದು ಯತ್ನಮಾಡಿದ ಪಾಕಿಸ್ತಾನ ಆರ್ಥಿಕ ದೀವಾಳಿತನ ಅನುಭವಿಸಲಿಲ್ಲವೇ? ಆ ದೇಶ ಸಮಸ್ಯೆಗಳ ಸುಳಿಗೆ ಬಿದ್ದಿತು. ಈ ಮನೋಭಾವದ ವ್ಯಕ್ತಿ, ದೇಶವಾಗಲಿ ಒಂದಲ್ಲ ಒಂದುದಿನ ಅನ್ಯರಅಪಹಾಸ್ಯಕ್ಕೆ ಗುರಿಯಾದಾರೆಂಬುದನ್ನು ಸೂಚಿಸುತ್ತದೆ. ಹಾಗೆಯೇ **'ತೋರಿಕೆ'** ಒಣಪ್ರತಿಷ್ಠೆ ಸಲ್ಲದೆಂಬ ಜೀವನ ಸಂದೇಶವನ್ನು ತಿಳಿಸುತ್ತದೆ.

೭. 'ತುಂಬಿದಕೊಡ ತುಳುಕುವುದಿಲ್ಲ' - ಹಿರಿಯರಲ್ಲಿ ಅಲ್ಪತನವಿರದು

ತುಂಬಿದಕೊಡಕ್ಕೆ ನೀರಿನ ಅಲುಗಾಟ, ಶಬ್ದಗಳಿರುವುದಿಲ್ಲ. ಅರ್ಧವಾದ ಕೊಡ ತುಳುಕಾಡಿ ಶಬ್ದ ಮಾಡುವುದಲ್ಲದೆ ನೀರು ಮೈಮೇಲೂ ಎರಚುತ್ತದೆ. ಇಲ್ಲಿ ಈ ಗಾದೆ ಕೇವಲ ಕೊಡಕ್ಕಷ್ಟೇ ಅನ್ವಯವಾಗುವುದಿಲ್ಲ. ಕೊಡದಂತಹ ಅಲ್ಪತನದ ವ್ಯಕ್ತಿಗಳಿಗೆಲ್ಲಾ ಅನ್ವಯಿಸುತ್ತದೆ. **'ತುಳುಕಾಟ'** ವ್ಯಕ್ತಿಯ ಹಿತಮಿತವಿರದ **'ಮಾತಿಗೆ, ನಡಗೆ'** ಅನ್ವಯವಾಗುತ್ತದೆ. **'ತುಂಬಿದ ಕೊಡ'** ಸಂಯಮಿನುಡಿಗಳ, ಗಾಂಭೀರ್ಯ ವ್ಯಕ್ತಿತ್ವದ ವರ್ತನೆಯನ್ನು ಸೂಚಿಸುತ್ತದೆ.

ದೊಡ್ಡವರೆನಿಸಿಕೊಂಡವರನ್ನು ಕುರಿತೇ ಈ ಗಾದೆ ಬಂದಿರುವಂತೆ ಅನ್ವಯವಾಗುತ್ತದೆ. ಅವರ ನಡೆ, ನುಡಿಗಳಲ್ಲಿ ತೋರಿಕೆ ಕಾಣದು. ಅವರದು ಆದರ್ಶಪ್ರಾಯದ ಬದುಕು. ಮನಸ್ಸಿನ ಪ್ರಸನ್ನತೆಗಳಿಗೆ ಕೂಡಪ್ರತೀಕವಾಗಿದೆ. ಅವರುಗಳ ಜೀವನ ಆತ್ಮಶ್ಲಾಘನೆ, ಪೀಡನೆ, ವಿವಾದಗಳಿಂದ ದೂರವಾಗಿರುತ್ತದೆ. ಅವರ **'ಮಾತು ಮುತ್ತು ಮೌನ ಬೆಳ್ಳಿ'** ಯಂತಿರುತ್ತದೆ. **'ಆನೆ ನಡೆದದ್ದೇ ಮಾರ್ಗ'** ವೆಂಬ ಮಾತು ಕೇಳಿಲ್ಲವೆ? ಅಲ್ಲೆಲ್ಲಾ ಪುಣ್ಯಾತ್ಮರ ಉದಾರತೆಯ ಚಿತ್ರಣವಿದೆ.

ಕೆಲವು ಗಾದೆಗಳನ್ನು ಅವುಗಳ ಸೂಚ್ಯಾರ್ಥದೊಂದಿಗೆ ಕೊಟ್ಟಿದೆ :

೧. **ಕೈ ಕೆಸರಾದರೆ ಬಾಯಿ ಮೊಸರು** - ಸುಖಬೇಕಾದರೆ ಸಹನೆಯಿಂದ ಕೆಲಸ ಮಾಡಬೇಕು.

೨.	ಹೆತ್ತವರಿಗೆ ಹೆಗ್ಗಣ ಮುದ್ದು -	ತನ್ನದೆನಿಸಿದಾಗ ದೃಷ್ಟಿ ಮಲಿನವಾಗುತ್ತದೆ.
೩.	ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೆ? -	ಚಿಕ್ಕಂದಿನ ಕಲಿಕೆ ಕೊನೆಯುವರೆಗೂ ನಿಲ್ಲುವುದು.
೪.	ನಾಳೆ ಎನ್ನುವವನ ಮನೆ ಹಾಳು -	ಕಾರ್ಯವನ್ನು ಮುಂದೆ ತಳ್ಳದೆ ಅಂದೇ ಮಾಡಬೇಕು
೫.	ಕೂತು ಉಣ್ಣುವವನಿಗೆ ಕುಡಿಕೆ ಹಣ ಸಾಲದು -	ಸೋಮಾರಿತನವಿದ್ದರೆ ಎಲ್ಲವೂ ವ್ಯರ್ಥ
೬.	ಮಾತು ಮನೆ ಕೆಡಿಸಿತು ತೂತು ಒಲೆ ಕೆಡಿಸಿತು-	ಹಾಳು ಮಾಡುವ ಮಾತು ಬೇಡ ಒತಮಿತವಾಗಿರಲಿ
೭.	ಬಡವನ ಕೋಪ ದವಡೆಗೆ ಮೂಲ -	ಬಡವನಾಗಿದ್ದವನು ಇರಿಸಿದಂತೆ ಇರಬೇಕು
೮.	ನೆಂಟರ ಮೇಲಿಷ್ಟ ಅಕ್ಕಿ ಮೇಲಾಸೆ -	ಪ್ರೀತಿ ಇದ್ದರೆ ತ್ಯಾಗ ಬೇಕೇ ಬೇಕು
೯.	ತಾಯಂತೆ ಮಗಳು ನೂಲಿನಂತೆ ಸೀರೆ -	ಹಿರಿಯ ಗುಣ ಮಕ್ಕಳಿಗೆ ಬರುತ್ತದೆ.
೧೦.	ಹನಿಗೂಡಿದರೆ ಹಳ್ಳ ತೆನೆ ಗೂಡಿದರೆ ಬಳ್ಳ -	ಸಣ್ಣದೆಂದು ತಿರಸ್ಕಾರ ಮಾಡಬಾರದು.
೧೧.	ಎಳೆಯಲಾರದ ಎತ್ತು ಮೆಳೆಯ ಮೇಲೆ ಬಿತ್ತು -	ಬಲಹೀನ ಮೈ ಪರಚುಕೊಳ್ಳುತ್ತಾನೆ.
೧೨.	ಕದ ತಿನ್ನುವವನ ಮನೆಗೆ ಹಪ್ಪಳಕ್ಕೆ ಹೋದಂತೆ-	ತನಗಿಲ್ಲದವ ಅನ್ಯರಿಗೆ ಕೊಡಲಾರ.
೧೩.	ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು -	ಮಾತು ಮುತ್ತಿನಂತೆ - ಎಚ್ಚರವಿರಬೇಕು.
೧೪.	ಹೊತ್ತು ಬಂದಂತೆ ಕೊಡೆ ಹಿಡಿ -	ಸಮಯಾನುಸಾರ ಹೊಂದಿಕೊಳ್ಳಬೇಕು.
೧೫.	ಉಗುರಿನಲ್ಲಿ ಹೋಗುವುದಕ್ಕೆ ಕೊಡಲಿ ತೆಗೆದುಕೋ -	ಅಲ್ಪ ಹಾನಿಗೆ ಅಪಾರ ಯತ್ನ ಬೇಡ
೧೬.	ಮೂಗಿಗಿಂತ ಮೂಗುತಿ ದೊಡ್ಡದು -	ಆಕಾರಕ್ಕೆ ಅನುಸಾರ ಇರದಿದ್ದರೆ ನಗೆಗೀಡು
೧೭.	ನೆರೆ ಮನೆಯ ಮಕ್ಕಳನ್ನು ಬಾವಿಗೆ ತಳ್ಳಿ ಆಳ ನೋಡಿದ -	ಅನ್ಯರಿಂದ ತಾನು ಬೆಳೆಯುವ ಹೀನವೃತ್ತಿ
೧೮.	ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದ -	ಕಾರಣ ನೋಡಿ ಕಾರ್ಯ ಮಾಡಬೇಕು ಇಲ್ಲವೆ ಆ
೧೯.	ಅತ್ತೆಯ ಸಿಟ್ಟು ತೊತ್ತಿನ ಮೇಲೆ -	ಅಲ್ಪದು ಮೇಲೆ ಹಾನಿಕಾರಕ ಸಿಟ್ಟು ಬೇಡ
೨೦.	ಹೊಸನೀರು ಬಂದು ಹಳೆ ನೀರು ತಳ್ಳಿತು -	ಹೊಸದಕ್ಕೆ ಹಳೆಯದು ಆಸ್ಪದಕೊಡಲೇಬೆ
೨೧.	ಹುಟ್ಟು ಗುಣ ಸುಟ್ಟರ ಹೋಗದು -	ಸಂಸ್ಕಾರದ ವಾಸನ ಗುಣ- ಕಳೆದುಕೊಳ್ಳದು
೨೨.	ರವಿ ಕಾಣದನ್ನು ಕವಿ ಕಂಡ -	ಕವಿಯ ಭಾವನಾ ಜಗತ್ತಿಗೆ ಎಲ್ಲವೂ ಸಾಧ್ಯ.
೨೩.	ಇದ್ದರೋ ಮೂವರಲ್ಲಿ ಕದ್ದವರು ಯಾರು -	ಕಳ್ಳರು ಸುಲಭವಾಗಿ ಸಿಗಬಲ್ಲರು.
೨೪.	ಅತ್ತೆಗೊಂದು ಕಾಲ ಸೊಸೆಗೊಂದು ಕಾಲ -	ಎಲ್ಲರಿಗೂ ಸಮಯ ಬರುತ್ತದೆ - ಕಾಯಬೆ
೨೫.	ಊರಿದ್ದಲ್ಲಿ ಹೊಲಗೇರಿ -	ಕೆಟ್ಟದು ಇರದ ಊರಿಲ್ಲ
೨೬.	ಕೆಟ್ಟು ಪಟ್ಟಣ ಸೇರು -	ಇದಿನಸತ್ತ ಪಟ್ಟಣದಲ್ಲಿ ಹೇಗೋ ಸ್ರೈಯಿಸಬಹು

ಪತ್ರವ್ಯವಹಾರ

ಪತ್ರಲೇಖನ : ಪತ್ರವ್ಯವಹಾರವು ಪ್ರಾಚೀನ ಕಾಲದಿಂದಲೂ ಬಳಕೆಯಿರುವ ಜನಪ್ರಿಯ ಸಂಪರ್ಕಸಾಧನವಾಗಿದೆ. ಜನರು ತಮ್ಮ ಹಿತೈಷಿಗಳಿಗೆ, ಪ್ರಿಯರಿಗೆ, ಪಕ್ಷಿ, ಪ್ರಾಣಿಗಳ ಮೂಲಕ ಪತ್ರಗಳನ್ನು ಕಳುಹಿಸಿ ತರಿಸಿಕೊಳ್ಳುತ್ತಿದ್ದರು. ಆಧುನಿಕ ಕಾಲದಲ್ಲಿ ಬೇರೆಬೇರೆ ಸಂಪರ್ಕ ಸಾಧನಗಳಿದ್ದರೂ ಪತ್ರವ್ಯವಹಾರ ತನ್ನವಿಶಿಷ್ಟ ಸ್ಥಾನವನ್ನುಳಿಸಿಕೊಂಡಿದೆ. ಇಂದು ಸರ್ಕಾರ ಹಾಗೂ ಖಾಸಗಿಸಂಸ್ಥೆಗಳಿಂದ ಈ ಸೇವೆದೊರಕುತ್ತಿದೆ.

ಪತ್ರಬರಹದಶೈಲಿ : ಎಲ್ಲದರಂತೆ ಪತ್ರಬರವಣಿಗೆಗೂ ತನ್ನತನವಿದೆ. ಪತ್ರಗಳ ವಿಧಾನ, ಪದಗಳಬಳಕೆ, ಸ್ಥಾನ, ಪದಗಳ ಔಚಿತ್ಯಗಳನ್ನು **ಶೈಲಿ**ಯೆನ್ನಬಹುದು. ಸರಳಪತ್ರಗಳ ಆಯ್ಕೆ, ಖಚಿತವಾಗಿ ಹೇಳುವ ವಾಕ್ಯಗಳಿರಬೇಕು. ಹಾಗೆ ಸಮಗ್ರವಾಗಿ ನಿರ್ದಿಷ್ಟವಾಗಿ ಹೇಳುವ ಬರಹವಿರಬೇಕಾಗುತ್ತದೆ. ಲೇಖನಚಿಹ್ನೆ, ವ್ಯಾಕಾರಣಾಂಶಗಳ ಪರಿಚಯ ಅಗತ್ಯ. ಪತ್ರಭಾಷಿಕ (ಪರಿಭಾಷೆ) ಶಬ್ದಗಳನ್ನು ಬಳಸುವಾಗ ನಿಖರವಾದ ಅರ್ಥತಿಳಿದು ಉಚಿತಪದ ಪ್ರಯೋಗಗಳೊಂದಿಗೆ ಅಸ್ಪಷ್ಟತೆಗೆ ಆಸ್ಪದವಾಗದಂತೆ ಮನಮುಟ್ಟುವಂತೆ ಬರೆಯಲು ಭಾಷಾ ಪರಿಚಯವಿರಬೇಕು. ಈ ಹಿನ್ನೆಲೆಯಿದ್ದರೆ ಪರಿಣಾಮ ಉತ್ತಮವಾಗಿರುತ್ತದೆ.

ಪ್ರಯೋಜನ : ಇಂದು ಮಾನವನ ವ್ಯವಹಾರಗಳ ವ್ಯಾಪ್ತಿ ಹಿರಿದಾಗಿದೆ. ಆತ ಖುದ್ದಾಗಿ ಹೋಗಿ ವ್ಯವಹರಿಸಲಾಗುವುದಿಲ್ಲ. ಪತ್ರವ್ಯವಹಾರದ ಮೂಲಕ ಕೂತ ಸ್ಥಳದಿಂದ ಮಾಹಿತಿ, ಸಂಗತಿಗಳನ್ನು ತಲುಪಿಸಿ, ಪಡೆದುಕೊಳ್ಳಬಹುದು. ಇದರಿಂದ ಕಾಲ, ಶ್ರಮ, ಹಣ ಉಳಿತಾಯವಾಗುತ್ತವೆ. ವ್ಯವಹಾರಗಳು ಸುಲಭವಾಗಿ ಶೀಘ್ರವಾಗಿ ಕುದುರುತ್ತದೆ. ಆಧುನಿಕ ಸಾಧನಗಳಾದ ಮೊಬೈಲ್, ಇಮೇಲ್, ಫ್ಯಾಕ್ಸ್, ಇತ್ಯಾದಿಗಳು ಬಂದಿದ್ದರೂ ಅಧಿಕೃತ ದಾಖಲೆಯಾಗಿ ಪತ್ರ ಇಂದು ಜೀವಂತ ಹಾಗೂ ಆತ್ಮೀಯವಾಗಿ ಕೆಲಸ ಮಾಡುತ್ತದೆ. ವಿಶ್ವಾಸವು ವೃದ್ಧಿಸುತ್ತದೆ. ಹೀಗಾಗಿ ಪತ್ರ ವ್ಯವಹಾರವು ಅತ್ಯಂತ ಪ್ರಿಯವಾದ, ಮಹತ್ವವಾದ ಸಂಪರ್ಕ ಸಾಧನವೆನಿಸಿದೆ. ಅದಕ್ಕೆ ಪತ್ರಗಳು ಆಧುನಿಕ ಕಾಲದ **'ರಾಯಭಾರಿ'**ಯೆನ್ನಲಾಗುತ್ತದೆ.

ಆದ್ದರಿಂದ ಪತ್ರರಚನೆ ಗುಣಮಟ್ಟದಿಂದ ಕೂಡಿ ಕ್ರಮಬದ್ಧವಾಗಿರಬೇಕು.ಈ ಪತ್ರದಲ್ಲಿ **ಆತ್ಮಿಯತೇ, ಸ್ಪಷ್ಟತೆ, ಸರಳತೆ, ಭಾಷಾಶುದ್ಧತೆ, ಸೌಜನ್ಯ** ಇತ್ಯಾದಿ ಅಂಶಗಳು ಇರಬೇಕಾಗುತ್ತದೆ. ಅಂತಹ ಪತ್ರಗಳು ಸಾಂಸ್ಕೃತಿಕ ಮಹತ್ವವನ್ನು ಹೊಂದಿ ಶೈಲಿ, ಸ್ವಭಾವವನ್ನು ತಿಳಿಸುವ ಸಾಧನವಾಗಿವೆ. ಆಗಿದ್ದಾಗ ಅದಕ್ಕನುಸಾರವಾಗಿ ಸ್ನೇಹ, ಫಲಗಳು ಹಿತವಾಗಿರುತ್ತವೆ. ಇವುಗಳನ್ನು ಪ್ರಧಾನವಾಗಿ **ಮೂರು ವರ್ಗ**ವಾಗಿ ವಿಂಗಡಿಸಬಹುದು.

೧) ಕ್ಷೇಮಸಮಾಚಾರದ (ವೈಯಕ್ತಿಕ) ಪತ್ರಗಳು.

೨) ಅಧಿಕಾರಿಗಳ (ಸರ್ಕಾರಿ) ಪತ್ರಗಳು.

೩) ವ್ಯಾಪಾರಿ (ವಾಣಿಜ್ಯ) ಪತ್ರಗಳು.

ಈ ಪತ್ರರಚನೆಯಲ್ಲಿ ಮುಖ್ಯವಾಗಿ **ಐದು ಅಂಶ**ಗಳನ್ನು ಗಮನದಲ್ಲಿರಿಸಿಕೊಳ್ಳಬೇಕು:
೧) ಪತ್ರದ ಆದಿಭಾಗ ೨) ಗೌರವಯುತ ಸಂಬೋಧನೆ (ಒಕ್ಕಣೆ) ೩) ವಿಷಯ ೪)ಮಧ್ಯಭಾಗ (ಒಡಲು) ೫) ಅಂತ್ಯಭಾಗ

೧) **ಪತ್ರದಆದಿಭಾಗ** : ಆರಂಭ ಚೆನ್ನಾಗಿದ್ದರೆ ಅಂತ್ಯದ ಫಲಿತಾಂಶ ಉತ್ತಮವಾಗಿರುತ್ತದೆ.

ಅ) ಬರೆಯುವವರ **ಪೂರ್ಣವಿಳಾಸ**ವನ್ನು ಪತ್ರದಮೇಲೆ ಬಲಭಾಗದಲ್ಲಿ ಬರೆಯಬೇಕು. ಇದರಿಂದ **ಪತ್ರಬರೆದವರು ಯಾರು? ಎಲ್ಲಿಂದ?** ಇತ್ಯಾದಿ ಅಂಶಗಳು ಬೇಗತಿಳಿಯುತ್ತವೆ. ಅದರಿಂದ ಮರುಪತ್ರ ಬರೆಯಲು ಅನುಕೂಲವಾಗುತ್ತದೆ. ಅದು ಒಂದರ ಕೆಳಗೆ ಒಂದರಂತೆ ಅಂಶಗಳನ್ನು ಕ್ರಮವಾಗಿ ಬರೆವುದು ಸೂಕ್ತ. ತುರ್ತು ಸಂಪರ್ಕಕ್ಕೆ ಅಗತ್ಯವಾದ ಫೋನ್ ನಂ. ಮೇಲ್ಭಾಗದಲ್ಲಿ ಬರೆಯಬೇಕು.

ಆ) **ದಿನಾಂಕ** : ದಿನಾಂಕವನ್ನು ಪತ್ರದಎಡಭಾಗದಲ್ಲಿ ತಾರೀಖು, ತಿಂಗಳು, ಇಸವಿಗಳನ್ನು ಕ್ರಮವಾಗ್ರಿ: ೬-೧೨-೨೦೦೩ ಅಥವಾ ೬/೧೨/೨೦೦೩ ಈ ಕ್ರಮಗಳಲ್ಲಿ ಬರೆಯಬಹುದು.

ಇ) **ತಲುಪಬೇಕಾದ ವಿಳಾಸ** : (ಇಂದ ವಿಳಾಸಕ್ಕೆ ಸ್ವಲ್ಪಅಂತರಬಿಟ್ಟು ಗೆರೆ ಎಳೆದು /ಈ-**ಇವರಿಗೆ** ವಿಳಾಸ ಬರೆಯಬೇಕು). **ಪತ್ರಯಾರಿಗೆ, ಯಾವವಿಭಾಗ,** ಉಪವಿಭಾಗ, ತಾಲ್ಲೂಕು, ಬಡಾವಣೆ, ಮುಖ್ಯರಸ್ತೆಗಳನ್ನು ಕ್ರಮವಾಗಿ ಬರೆಯಬೇಕು. ವಿಳಾಸ, ದಿನಾಂಕಗಳ ನಡುವೆ ಓಂ, ಶ್ರೀ, ಶುಭಂ ಹಾಗೂ ಇಷ್ಟದೈವದ ಹೆಸರನ್ನು ಬರೆಯುವ ವಾಡಿಕೆಯುಂಟು.

೨) **ಗೌರವಯುತ ಸಂಬೋಧನೆ (ಒಕ್ಕಣೆ) : ಇವರಿಗೆ** ವಿಳಾಸದ ಕೆಳಗೆ ಪತ್ರ ಬರೆಯುತ್ತಿರುವವರ, ಬರೆಸಿಕೊಳ್ಳುವವರ **ಸಂಬಂಧವನ್ನು ಅನುಸರಿಸಿ** ಇರುವ **ಮರ್ಯಾದಾಸೂಚಕಮಾತು (ಒಕ್ಕಣೆ)** ಯೆನ್ನಲಾಗುತ್ತದೆ. ಇದು ಪತ್ರಗಳಲ್ಲಿ ಒಳ್ಳೆಯ ಪರಿಣಾಮಕ್ಕೆ ಆಸ್ಪದ. **ಒಕ್ಕಣೆ ವ್ಯಕ್ತಿಗಳ ಅನುಸಾರವಾಗಿ ಬೇರೆ ಬೇರೆಯಾಗಿ ಕೆಳಕಂಡಂತಿವೆ:**

ಅ) **ಹಿರಿಯರಿಗೆ : ಗೌರವಸೂಚಕ ಶಬ್ದಗಳು ಯಾವುವು, ಅವುಗಳ ಬಳಕೆ:**

ತಂದೆಗೆ : ತೀರ್ಥರೂಪುರವರಿಗೆ ಅಥವಾ ಪೂಜ್ಯ ಎಂದು ಸಂಬೋಧಿಸಿ ತಂದೆಯವರಿಗೆ ಸಾಷ್ಟಾಂಗ ನಮಸ್ಕಾರಗಳು.

ಅಣ್ಣ, ಭಾವ : ತೀರ್ಥರೂಪ ಸಮಾನರಾದ .... ನ/ರವರಿಗೆ ಸಾಷ್ಟಾಂಗ ನಮಸ್ಕಾರಗಳು.

ತಾಯಿಯವರಿಗೆ : ಮಾತೃಶ್ರೀಯವರಿಗೆ / ಪೂಜ್ಯ ತಾಯಿಯವರಿಗೆ ಸಾಷ್ಟಾಂಗ ನಮಸ್ಕಾರಗಳು.

ಅಕ್ಕ, ಅತ್ತೆಯರಿಗೆ	:	ಮಾತೃಶ್ರೀ ಸಮಾನರಾದ .... ನವರಿಗೆ ಸಾಷ್ಟಾಂಗ **ನಮಸ್ಕಾರಗಳು.**
ಆ) **ಕಿರಿಯರಿಗೆ**	:	ಭಾವಮೈದುನ(ರಾದ), ತಮ್ಮಂದಿ(ರಾದ), ಚಿರಂಜೀವಿ (ಚಿ॥, ಕು॥.. ಗೆ) **ಆಶೀರ್ವಾದಗಳು** **ಪ್ರೀತಿಯ**ಶಬ್ದಸೇರಿಸಿ ತಂಗಿ, ಮಗಳು, ಸೊಸೆಯರಿಗೆ ಅಥವಾ ಕುಮಾರಿ/ (ಕು॥)... ಗೆ, ಸುಮಂಗಲಿಯರಾದ **ಆಶೀರ್ವಾದಗಳು.**
ಇ) **ಗೆಳೆಯರಿಗೆ**	:	**ಪ್ರಿಯ**ಗೆಳೆಯ/ ನಲ್ಮೆಯ ಸ್ನೇಹಿತ/ ... ರಿಗೆ/ವಂದನೆ/ **ವಿಜ್ಞಾಪನೆ**
ಈ) **ಅಧ್ಯಾಪಕರು/ಗುರುಗಳ**	:	**ಪೂಜ್ಯ** ಅಧ್ಯಾಪಕರು/ ಪೂಜ್ಯ ಗುರುಗಳಿಗೆ **ನಮಸ್ಕಾರಗಳು/ ಪ್ರಣಾಮಗಳು.**
ಉ) **ಇತರ ಹಿರಿಯರಿಗೆ**	:	ಮಾನ್ಯರೇ/ ಶ್ರೀ/ ಸನ್ಮಾನ್ಯರೇ/ ಪ್ರಿಯಬಂಧುಗಳಾದ ...ನ/ ರವರಿಗೆ(೧) (ವಿಶೇಷ ಪ್ರಶಸ್ತಿ), ಫಾಲ್ಕೆಪ್ರಶಸ್ತಿ ವಿಜೇತ/ ಪಂಡಿತ, ಡಾ॥ /ಪದ್ಮಶ್ರೀ/- ಶ್ರೀಮಾನ್..ರವರಿಗೆ, ಶ್ರೀಮತಿ... /ರ ಸಮಕ್ಷಮಕ್ಕೆ /ರ ಸನ್ನಿಧಾನಕ್ಕೆ..ಅಭಿವಂದನೆ.
ಊ)**ಸಾಮಾನ್ಯರಿಗೆ**	:	ಶ್ರೀ, ಶ್ರೀಯುತ, ...ನವರಿಗೆ, **ನಮಸ್ಕಾರ/ವಿಜ್ಞಾಪನೆ.**
ಊ) **ಅಧಿಕಾರಿಗಳಿಗೆ**(೨)	:	ಅವರ ವಿಶೇಷಅರ್ಹತೆ, ಸ್ಥಾನದ(ಪದನಾಮ) ಹೆಸರುಗಳಿರಬೇಕು. ಉದಾ: ನಿರ್ದೇಶಕರು/ ಅಧ್ಯಕ್ಷರಿಗೆ - **ನಮಸ್ಕಾರಗಳು.**
ಋ) **ವ್ಯಾಪಾರಸ್ಥರಿಗೆ**	:	ಅವರ ವಿಶೇಷ ಅರ್ಹತೆ, ಸ್ಥಾನದ ಹೆಸರು: ಪ್ರೊಪ್ರೈಟರ್, ಮಾಲೀಕರಾದ, ಉದ್ಯಮಿಗಳಾದ/ವಿತರಕರಾದ ಇತ್ಯಾದಿ ತಿಳಿಸಿ **ವಿಜ್ಞಾಪನೆ/ ವಂದನೆ** (ವ್ಯಕ್ತಿಗಳನ್ನು ಅನುಸರಿಸಿ ಸೂಕ್ತವಾದ ಒಂದನ್ನು ಆರಿಸಿ ಬರೆಯಬಹುದು).

---

೧) 'ಅ'ಕಾರಾಂತ ನಾಮಗಳಾಗಿದ್ದರೆ ಅವರಿಗೆ / ನವರಿಗೆ ಉದಾ : ಜಿ. ವೆಂಕಟಸುಬ್ಬಯ್ಯನವರಿಗೆ ಇಲ್ಲಿ ರವರಿಗೆ ಎಂಬುದು ಸಾಧು ಪ್ರಯೋಗವಲ್ಲ. ಅ ವ್ಯಂಜನಾಂತವಾದ ನಾಮಗಳಲ್ಲಿ ರ ಸಹಜವಾಗಿ ಬರಬಹುದು. ಉದಾ : ಕಣ್ಣನ್‌ರವರು / ಕಣ್ಣನ್ ಅವರು, ಕಣ್ಣನ್ ಗಿಂತಲು ಗೌರವ ಸೂಚಕ ರ ಸೇರಿಸುವುದು ಸೂಕ್ತ. ಕೆಲವೊಮ್ಮೆ ವಿದ್ವಾಂಸರ ಬರಹಗಳಲ್ಲಿ ಈ ದೋಷಪೂರ್ಣವಾದ ಪ್ರಯೋಗಗಳಿಗೆ ಆಕ್ಷೇಪಗಳು ಬಂದಿವೆ. ಈ ಸೂಕ್ತವಾದ ಬರಹಗಳಿಂದ ಭಾಷಾ ಸೌಮ್ಯತೆ ಬರುತ್ತದೆ, ಕರ್ಕಶತೆ ದೂರವಾಗುತ್ತದೆ.

೨) ಒಕ್ಕಣೆಯಲ್ಲಿ 'ಸ್ವಾಮಿ' ಇಂಗ್ಲೀಷ್ ಅನುವಾದ ಶಬ್ದ ಸೂಕ್ತವಲ್ಲ. ಮಾನ್ಯರೇ, ಸನ್ಮಾನ್ಯರೇ ಶಬ್ದ ಸೂಕ್ತ.

೩) <u>ವಿಷಯ</u> : ಪತ್ರಯಾವ ಉದ್ದೇಶಕ್ಕೆ ಬರೆಯಲಾಗಿದೆ, ಎಂಬುದನ್ನು ಸ್ಪಷ್ಟವಾಗಿ ತಿಳಿಸುವುದು. ಉದಾ: ಅಂಕಪಟ್ಟಿ ಕೋರಿ, ಪುಸ್ತಕ ಕಳುಹಿಸುವ ಬಗ್ಗೆ ಹೆಚ್ಚಿನ ವಿವರ.

ಬಂಧುಗಳಿಗೆ : ಯೋಗಕ್ಷೇಮ/ ಕ್ಷೇಮ ಸಮಾಚಾರಕ್ಕೆ/ ಶುಭಾಶಯ ಕೋರಿ.

ಅಧಿಕಾರಿಗಳಿಗೆ: ನಿರ್ದಿಷ್ಟ ವಿಚಾರವನ್ನು ಸಂಕ್ಷೇಪವಾಗಿ ಬರೆಯಬಹುದು. ಈ ಬಗ್ಗೆ ಹಿಂದೆ ಅವರು ಪತ್ರ ಬರೆದಿದ್ದರೆ ವಿಷಯದ ಕೆಳಸಾಲಿನಲ್ಲಿ (ಅಧಿಕಾರಿ/ ವ್ಯಾಪಾರಿಗೆ) ಆಧಾರ-**ಉಲ್ಲೇಖ**ವೆಂದು ಬರೆದು ಆ **ಪತ್ರದ ಸಂಖ್ಯೆ, ದಿನಾಂಕ** ಬರೆಯಬಹುದು).

೪) <u>**ಮಧ್ಯಭಾಗ (ಒಡಲು)**</u> : ಈ ಭಾಗದಲ್ಲಿ ನಾವು ಹೇಳಬಯಸುವ ವಿವರವನ್ನು ಬರೆಯಬೇಕು. ಈ ಪತ್ರಬರೆಯಲು ಕಾರಣ, ಉದ್ದೇಶ, ಹಿಂದೆ ಏನಾಗಿತ್ತು, ಈಗ ನಿಮ್ಮ ಅಗತ್ಯವೇನು? ಈ ಇತರ ಅಂಶಗಳನ್ನು ಸ್ಪಷ್ಟವಾಗಿ **'ಪ್ಯಾರಾಗ್ರಾಫ್'** ಗಳೊಂದಿಗೆ ಬರೆಯಬೇಕು. ಪತ್ರದ ಉದ್ದೇಶವನ್ನು ಇಲ್ಲಿ ವಿವರವಾಗಿ ಬರೆದಿರಬೇಕು. ತಿಳಿಸಬೇಕಾದ ಅಂಶಗಳೆಲ್ಲವೂ ಸಮಗ್ರ ಸಂಕ್ಷಿಪ್ತವಾಗಿರಬೇಕಾಗುತ್ತದೆ.

೫) <u>**ಅಂತ್ಯಭಾಗ**</u> : ವಿವರವಾದ ಒಡಲಿನಭಾಗ ಮುಗಿದರೆ **ನಮಸ್ಕಾರ/ ವಂದನೆ/ ಗಳೊಂದಿಗೆ** ಎಂದು ಮುಗಿಸಬೇಕು. ಅದರ ಕೆಳಗೆ ತಳದ ಪತ್ರದ ಎಡಭಾಗದಲ್ಲಿ ಇತಿ ತಮ್ಮ ವಿಶ್ವಾಸಿ, ಒಕ್ಕಣೆಯಲ್ಲಿ ಬರೆದಿರುವುದಕ್ಕೆ ಅನುಗುಣವಾಗಿ ಇಂತಹವರೆಂದು ಬರೆವುದು ಸೂಕ್ತ.

ಉದಾ : **ಹಿರಿಯರಿಗೆ ಇತಿ** (ಸಂಸ್ಕೃತರೂಪ) **ಇಂತಿ** (ಕನ್ನಡ) ಇತ್ಯಾದಿಗಳಿಂದ (ಸೂಕ್ತವಾದುದನ್ನು ಬಳಸುವುದರೊಂದಿಗೆ) **/ತಮ್ಮ ಪುತ್ರ / ತಮ್ಮ ಪುತ್ರಿ,** ತಮ್ಮ ವಿಶ್ವಾಸಿ / ಇಂತಿ ತಮ್ಮ ವಿಧೇಯ / ನಂಬುಗೆಯ (ಅಧಿಕಾರಿಗೆ) / ತಮ್ಮ ಪ್ರೀತಿ ಪಾತ್ರರಾದ ಶಿಷ್ಯ - (ಗುರುಗಳಿಗೆ ಆಯ್ಕೆಮಾಡಿ ಸೇರಿಸಬಹುದು).

ಕಿರಿಯರಿಗೆ : ಇತಿ ನಿನ್ನ ಶ್ರೇಯೋಭಿಲಾಷಿ

<u>**ಸ್ನೇಹಿತರಿಗೆ**</u> : ಇತಿ ನಿನ್ನ ಗೆಳೆಯ/ತಿ, ಇಂತಿ ನಿನ್ನ ಭಾವ, ಇಂತಿ ನಿಮ್ಮ ಸೊಸೆ ಇತರ ಬಂಧುಗಳಿಗೆ-ಇತಿ ತಮ್ಮವ.

<u>**ವ್ಯಾಪಾರಿಗಳಿಗೆ**</u> : ಇತಿ ನಿಮ್ಮ ವಿಶ್ವಾಸಿ / ಗ್ರಾಹಕ - ಹೀಗೆ ಸೂಕ್ತವಾದುದನ್ನು ಆಯ್ದುಕೊಂಡು ಬರೆದು ಕೆಳಗೆ ಸಹಿ ಮಾಡುವುದನ್ನು ಮರೆಯಬಾರದು. ಗುರುತು ಸಿಗದಿದ್ದಾಗ ಗುರುತಿಸಲೆಂದು ಹೆಸರನ್ನು ಆವರಣದಲ್ಲಿ ಬರೆಯಬಹುದು.

ಹೊರವಿಳಾಸ : ಪತ್ರ ಯಾರಿಗೆ ತಲುಪಬೇಕು, ಅವರ ವಿಳಾಸವನ್ನು ಪೂರ್ಣವಾಗಿ ಇವರ **ಬಿನ್-** ಶಬ್ದವನ್ನು ಇವರಮಗ/ **ಮಗಳು** ಎಂಬರ್ಥದಲ್ಲಿ, **ಇವರ (ಕೋಂ) - ಸೊಸೆ/ಹೆಂಡತಿ** ಎಂಬರ್ಥದಲ್ಲಿ ಬರೆಯುವ ರೂಢಿಯಿದೆ. ರಸ್ತೆ, ನಗರ ಇವುಗಳನ್ನು **'ಪಿನ್‌ಕೋಡ್'** ಸಹಿತ ಕ್ರಮವಾಗಿ ಬರೆಯುವುದು ಒಳ್ಳೆಯದು. ಹೊರವಿಳಾಸ ಸರಿಯಾಗಿದ್ದರೆ ಪತ್ರಶೀಘ್ರವಾಗಿ ತಲುಪುತ್ತದೆ. ಪ್ರತ್ಯುತ್ತರವೂ ಶೀಘ್ರವಾಗಿ ಬರುತ್ತದೆ.

ಈವರೆಗೆ ಗಮನಿಸಬೇಕಾದ **ಕ್ರಮ, ಅಂಶ**ಗಳನ್ನು ವಿವರವಾಗಿ ತಿಳಿಸಲಾಗಿದೆ. ಈ ಅಂಶಗಳನ್ನು **ಅನುಸರಿಸಿ ಬರೆದ ಮೂರುವಿಧವಾದ** ಪತ್ರಗಳು :

I **ಕ್ಷೇಮ-ಸಮಾಚಾರದ** (ವೈಯಕ್ತಿಕ) **ಪತ್ರ**

೧) ಗೆಳೆಯರಿಗೆ ಹುಟ್ಟುಹಬ್ಬಕ್ಕೆ ಆಹ್ವಾನಿಸಿ :

ಆದಿಭಾಗ :

ಕ್ಷೇಮ **ಶ್ರೀ** **ತಾ|| ....**

ಬಿ. ಶೋಭಾವತಿ ಸ್ಥಳ : ತುಮಕೂರು.

ಒಕ್ಕಣೆ: ಪ್ರೀತಿಯ ಗೆಳೆಯರಾದ ರಮೇಶ್‌ಗೆ ನಿಮ್ಮಗೆಳತಿ ಶೋಭಾ ಮಾಡುವ ವಂದನೆಗಳು.

ಇಲ್ಲಿ ನಾವುಗಳೆಲ್ಲರೂ ಕ್ಷೇಮವಾಗಿದ್ದೇವೆ. ನಿಮ್ಮ ಯೋಗಕ್ಷೇಮಕ್ಕೆ ಪತ್ರ ಬರೆಯುವುದು.

ನನಗೆ, ನಮ್ಮ ಆ ವಿದ್ಯಾರ್ಥಿಜೀವನದಸಮಯ ಮರೆಯಲಾಗದು. ನಾವಿಬ್ಬರೂ ಅಭ್ಯಾಸ ಮಾಡುವಾಗ ಅನೇಕಚಟುವಟಿಕೆ, ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದವಲ್ಲವೆ? ನಮ್ಮಿಬ್ಬರನ್ನೂ ಮುಖ್ಯೋಪಾಧ್ಯಾಯರು, ನಮ್ಮ ಇತರಸ್ನೇಹಿತರು ಬೆನ್ನುತಟ್ಟಿ ಪ್ರೋತ್ಸಾಹಿಸುತ್ತಿದ್ದರು. ಪರೀಕ್ಷೆ ಹತ್ತಿರವಾಗುತ್ತಿದ್ದಂತೆ ನಿರಂತರ ಅಭ್ಯಾಸ ಮಾಡುತ್ತಿದ್ದಾಗ ತರಗತಿಯ ಅಧ್ಯಾಪಕರು ಪರೀಕ್ಷೆ ಸಮಯದಲ್ಲೇ **'ಹೀಗೆ ಓದುವುದು ಸರಿಯಲ್ಲ'**ವೆಂದಾಗ ಹಲ್ಲುಬಿಡುತ್ತಿದ್ದುದು ನೆನಪಿದೆಯೇ?.

ಈ ಪತ್ರಬರೆದ ಉದ್ದೇಶವೆಂದರೆ, ನಮ್ಮ ಊರಿನಲ್ಲಿ ನನ್ನ ಹುಟ್ಟು ಹಬ್ಬವನ್ನು ಈ ತಿಂಗಳ ೧೬ ರಂದು ಆಚರಿಸಲು ನಿರ್ಧರಿಸಿದ್ದಾರೆ. ಅಂದು ನಿನ್ನಂತಹ ಆತ್ಮೀಯರು ಬಂದರೆ ನನ್ನ ಸಂತೋಷ, ಆನಂದ ಹೆಚ್ಚಾಗುತ್ತದೆ.

ನೀವು ಖಂಡಿತ ೧೫ ರಂದೇ ಸಂಜೆ ಬಸ್‌ಗೆ ಬರಬೇಕು. ನಿಮ್ಮತಂದೆ ತಾಯಂದಿರಿಗೂ ಈ ವಿಚಾರ ತಿಳಿಸಿ, ತಪ್ಪದೆ ಬರುತ್ತೀರೆಂದು ನಂಬಿದ್ದೇನೆ.

(ಅಂತ್ಯಭಾಗ:) ವಂದನೆಗಳು ಇತಿ ನಿಮ್ಮ ಗೆಳತಿ

ಸಹಿ............

ಹೊರವಿಳಾಸ

(ಶೋಭಾ)

೨) ಶಾಲೆಯಲ್ಲಿ ಆಚರಿಸಿದ 'ರಾಜ್ಯೋತ್ಸವ' ಕುರಿತು ತಂದೆಗೆ ಮಗನಪತ್ರ:

ಓಂ

ತಾ॥:

ಕ್ಷೇಮ

ತುಮಕೂರು

ಟಿ. ಕೃಷ್ಣಪ್ಪ - ಶ್ರೀ ಸಿದ್ಧಗಂಗಾ ಕ್ಷೇತ್ರ.

ತೀರ್ಥರೂಪುರವರಿಗೆ(೧) ನಿಮ್ಮಮಗ ಮಾಡುವ ನಮಸ್ಕಾರಗಳು. ಇಲ್ಲಿ ನಾನು ಕ್ಷೇಮವಾಗಿದ್ದೇನೆ. ತಮ್ಮೆಲ್ಲರ ಕ್ಷೇಮ ಸಮಾಚಾರಕ್ಕೆ ಪತ್ರ ಬರೆಯುತ್ತೀರೆಂದು ನಂಬಿರುತ್ತೇನೆ.

ಇಲ್ಲಿ ಪೂಜ್ಯಶ್ರೀಗಳ ಆಶ್ರಯದಲ್ಲಿ ಶಿಸ್ತಿನಿಂದ ಅಭ್ಯಾಸ ಮಾಡುತ್ತಿದ್ದೇನೆ. ನಿತ್ಯ ಬೆಳಿಗ್ಗೆ ಸಂಜೆ ಸಾಮೂಹಿಕ ದೇವರ ಪ್ರಾರ್ಥನೆಯಲ್ಲಿ ಭಾಗವಹಿಸುತ್ತೇನೆ. ಶ್ರೀ ಕ್ಷೇತ್ರದಲ್ಲಿ ನೀಡುವ ಊಟ, ತಿಂಡಿ ಯಾವುದಕ್ಕೂ ಕೊರತೆಯಿಲ್ಲ. ಬಹಳ ಚೆನ್ನಾಗಿವೆ. ನಿಜವಾಗಿ ನಮ್ಮ ಮನೆಯಲ್ಲೂ ಅಂತಹ ಅಚ್ಚುಕಟ್ಟಾದ ವ್ಯವಸ್ಥೆಯಿರುವುದಿಲ್ಲ.

ಇಲ್ಲಿ ನವೆಂಬರ್ ೧ ರಂದು **'ಕನ್ನಡರಾಜ್ಯೋತ್ಸವ'** ಸಮಾರಂಭ ನಡೆಯಿತು. ಅಲಂಕರಿಸಿದ ಸಭಾಂಗಣ ಆಕರ್ಷಣೀಯವಾಗಿತ್ತು. ಪೂಜ್ಯಶ್ರೀಗಳ ಅಧ್ಯಕ್ಷತೆಯಲ್ಲಿ ಶ್ರೀ ಪಾಟೀಲ್‌ಪುಟ್ಟಪ್ಪನವರ ಭಾಷಣವಿತ್ತು. ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆದವು ನಾನು ಕೊರವಂಜಿ ಪಾತ್ರಮಾಡಿ ಸಭಿಕರಿಂದ ಮೆಚ್ಚುಗೆ ಪಡೆದೆನು.

ಭಾಷಣಕಾರರು ತಮ್ಮಭಾಷಣದಲ್ಲಿ ನಮ್ಮನಾಡಿನ ಹಿರಿಮೆ, ಸಂಸ್ಕೃತಿ, ಇತಿಹಾಸ ಕಲೆಗಳ ಪರಿಚಯದ ಸ್ವಾರಸ್ಯಭಾಷಣ ಮಾಡಿದರು. ಭಾಷಣ ಕೇಳಿ ಭಾಷೆಯ ಬಳಕೆಯಲ್ಲಿ ಕೀಳರಿಮೆ, ಹಿಂಜರಿತಗಳಿರಬಾರದೆಂಬ ಭಾವನೆ ನನ್ನಲ್ಲಿಮೂಡಿತು. ಇದು ಅಬ್ಬರದ ಆಡಂಬರದ ಆಚರಣೆಯಾಗಿರಲಿಲ್ಲ. ಅರ್ಥವತ್ತಾಗಿ ಆಚರಿಸಿ ಸಾಮೂಹಿಕವಾಗಿ ನಲಿದೆವು

ಇನ್ನೇನು ವಿಚಾರವಿಲ್ಲ. ಪರೀಕ್ಷೆ ಮುಗಿಸಿಕೊಂಡು ಊರಿಗೆ ಬರುತ್ತೇನೆ. ನನ ತಾಯಿಯವರಿಗೆ ನಮಸ್ಕಾರ ತಿಳಿಸಿರಿ.

ನಮಸ್ಕಾರಗಳು

ಇಂತಿ ನಿಮ್ಮ ಮಗ

ಸಹಿ.......

(ಕೃಷ್ಣ ಟಿ.)

ಹೊರ ವಿಳಾಸ :

೧) ತೀರ್ಥರೂಪ ತಂದೆ, ಮಾತೃಶ್ರೀ ತಾಯಿ - ಪುನರುಕ್ತಿ ಬರೆಯುವುದು ಸೂಕ್ತವಲ್ಲ.

II ಅಧಿಕಾರಿಗಳಿಗೆ ಪತ್ರ (ಸರ್ಕಾರಿ ಪತ್ರ)

೧) 'ಎಸ್.ಎಸ್.ಎಲ್.ಸಿ ಕ್ರೋಢೀಕೃತಅಂಕಪಟ್ಟಿ ಕೋರಿ' - ಪರೀಕ್ಷಾ ಮಂಡಲಿಗೆ

ತಾ||..............

ಇವರಿಗೆ, **(ಆದಿಭಾಗ)** ಇಂದ,

ನಿರ್ದೇಶಕರು --------------
ಕ.ಪ್ರೌ.ಶಿ. ಪರೀಕ್ಷಾ ಮಂಡಳಿ --------------
೬ ನೇ ಅಡ್ಡರಸ್ತೆ, ಮಲ್ಲೇಶ್ವರಂ
ಬೆಂಗಳೂರು - ೫೬೦ ೦೦೩,....[೧]

ಮಾನ್ಯರೇ, **(ಒಕ್ಕಣೆ)**

ವಿಷಯ : ಕ್ರೋಢೀಕೃತ ಅಂಕಪಟ್ಟಿ ಕಳಿಸುವ ಬಗ್ಗೆ.

ಮೇಲ್ಕಂಡ ನಾನು ಸರ್ಕಾರಿ ಪ್ರೌಢಶಾಲೆ ಶಿವಮೊಗ್ಗದಲ್ಲಿ ೧೯೯೪ ನೇ ಏಪ್ರಿಲ್ ಮಾಹೆಯಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ತೆಗೆದುಕೊಂಡಿದ್ದೆನು. ಖಾಯಿಲೆ ನಿಮಿತ್ತ ಪೂರ್ಣ ಪರೀಕ್ಷೆಗೆ ಕೂರಲಾಗಲಿಲ್ಲ. ಕೇವಲ ಕನ್ನಡ, ವಿಜ್ಞಾನ, ಗಣಿತದ ವಿಷಯ ಪರೀಕ್ಷೆಗೆ ಕುಳಿತು ತೇರ್ಗಡೆಯಾಗಿದ್ದೇನೆ. ಅದೇ ಸಾಲಿನಲ್ಲಿ ಸೆಪ್ಟೆಂಬರ್ **'ಸಪ್ಲಿಮೆಂಟರಿ'** ಪರೀಕ್ಷೆ ತೆಗೆದುಕೊಂಡು ಉಳಿದ ವಿಷಯಗಳಲ್ಲಿ ಬರೆದು ತೇರ್ಗಡೆಯಾಗಿರುತ್ತೇನೆ.

ಈಗ ನನಗೆ ಕ್ರೋಢೀಕೃತ ಅಂಕಪಟ್ಟಿಯ ಅಗತ್ಯವಿದೆ. ಮಂಡಳಿಯ ನಿಯಮಾನುಸಾರ ೧೦೦ ರೂ.ಗಳ ಕ್ರಾಸ್ ಮಾಡಿದ ಡಿ.ಡಿ ಯನ್ನು, **'ಕಾರ್ಯದರ್ಶಿಗಳು, ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ'**ಯ ಹೆಸರಿಗೆ ಪಡೆದು ಕಳುಹಿಸುತ್ತಿದ್ದೇನೆ. ನನ್ನ ಅರ್ಜಿಯನ್ನು ಪರಿಶೀಲಿಸಿ ಕ್ರೋಢೀಕೃತ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯನ್ನು ಸದರಿ ನನ್ನಶಾಲೆಗೆ ಕಳುಹಿಸಿಕೊಡಬೇಕೆಂದು ಕೋರುತ್ತೇನೆ.

ವಂದನೆಗಳೊಂದಿಗೆ ಇತಿ ತಮ್ಮ ನಂಬುಗೆಯ

ಅರ್ಜಿಯಲ್ಲಿ ಲಗತ್ತಿಸಿರುವ ಅಡಕಗಳು :

೧) ೧೦೦ ರೂ.ಗಳ ಡಿ.ಡಿ. ಸಹಿ.........
೨) ಏಪ್ರಿಲ್, ಸೆಪ್ಟೆಂಬರ್ ೨೦೦೩ ರ- (ಅನಘ)
ಎಸ್.ಎಸ್.ಎಲ್.ಸಿ ಅಂಕಪಟ್ಟಿಗಳ ನಕಲು.

ಹೊರವಿಳಾಸ ---------------

---

೧) ಇಲ್ಲಿ 'ಸಮಕ್ಷಮಕ್ಕೆ' ಎಂಬ ಸಾಂಪ್ರದಾಯಿಕ ನುಡಿಯನ್ನೂ 'ಗೆ' ಬದಲಾಗಿ ಬರೆಯಲೂಬಹುದು.

೨) 'ಪ್ರವೇಶಾವಕಾಶ ಕೋರಿ' ಶಿಕ್ಷಣಸಂಸ್ಥೆಯ ಮುಖ್ಯಸ್ಥರಿಗೆ ಪತ್ರ (೧)

ತಾ||.............

ಇಂದ,

ಇವರಿಗೆ,

ಪ್ರಿನ್ಸಿಪಾಲ್‌ರು,
ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು,
ವೃತ್ತಿಶಿಕ್ಷಣ ತರಬೇತಿ ವಿಭಾಗ,
ಬಿ.ಹೆಚ್. ರಸ್ತೆ, ತುಮಕೂರು.

ಮಾನ್ಯರೇ,

ವಿಷಯ : 'ವೃತ್ತಿ ತರಪೇತಿಯ ಎಲೆಕ್ಟ್ರಾನಿಕ್ ವಿಭಾಗದಲ್ಲಿ ಪ್ರವೇಶಾವಕಾಶ ಕೋರಿ'

ಮೇಲ್ಕಂಡ ನಾನು 'ವಿಜಯ ಕರ್ನಾಟಕ' ದಿನಪತ್ರಿಕೆಯಲ್ಲಿ ಬಂದ ಸರ್ಕಾರಿ ತರಪೇತಿ ಸಂಸ್ಥೆಯ ಪ್ರಕಟಣೆತಿಳಿದು ಅರ್ಜಿಸಲ್ಲಿಸುತ್ತಿದ್ದೇನೆ. ನಾನು ೨೦೦೩ ರಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಮೊದಲನೆಯ ಶ್ರೇಣಿಯಲ್ಲಿ ಉತ್ತೀರ್ಣಳಾಗಿರುತ್ತೇನೆ. ಶೇ. ೭೦ ಅಂಕಗಳು ಪಡೆದಿದ್ದೇನೆ. ಮುಂದಿನ ಅಭ್ಯಾಸ ಮಾಡಲು ಆಸಕ್ತಳಾಗಿದ್ದೇನೆ. ಆದರೆ ನನ್ನ ಆರ್ಥಿಕ ಪರಿಸ್ಥಿತಿ ಚೆನ್ನಾಗಿರುವುದಿಲ್ಲ. ಅದಕ್ಕಾಗಿ **'ವೃತ್ತಿ ತರಪೇತಿ'** ಪಡೆಯಲು ನಿರ್ಧರಿಸಿದ್ದೇನೆ.

ದಯಮಾಡಿ ತಮ್ಮ ಸರ್ಕಾರಿ ತರಪೇತಿ ಸಂಸ್ಥೆಯ ವಿಭಾಗದಲ್ಲಿ ಎರಡು ವರ್ಷಗಳ **'ಎಲೆಕ್ಟ್ರಾನಿಕ್'** ವಿಷಯದಲ್ಲಿ ತರಪೇತಿ ಪಡೆಯಲು ಪ್ರವೇಶಾವಕಾಶ ಮಾಡಿಕೊಡಬೇಕೆಂದು ಕೋರುತ್ತೇನೆ.

ಕೆಳಕಂಡ ಅಡಕಗಳನ್ನು ಲಗತ್ತಿಸಿರುತ್ತೇನೆ:

೧) ಎಸ್.ಎಸ್.ಎಲ್.ಸಿ ಅಂಕಪಟ್ಟಿ ನಕಲು.
೨) ಕನ್ನಡ ಮಾಧ್ಯಮದ ಪ್ರಮಾಣಪತ್ರದ ನಕಲು.
೩) ಗ್ರಾಮಾಂತರ ಪ್ರಮಾಣಪತ್ರದ ನಕಲು.
೪) ಅಗತ್ಯಸ್ಟಾಂಪ್‌ಯಿರುವ ಖಾಲಿಲಕೋಟೆ

ದಯಮಾಡಿ ನನ್ನಕೋರಿಕೆ ಈಡೇರಿಸಬೇಕೆಂದು ವಿನಂತಿಸುತ್ತೇನೆ.

ನಮಸ್ಕಾರಗಳೊಂದಿಗೆ

ಇಂತಿ ತಮ್ಮ ವಿಧೇಯನಾದ

ಸಹಿ..........

(ಜಾನ್‌ಪಾಲ್)

ಹೊರವಿಳಾಸ :-----------

---

೩) ದಿನಪತ್ರಿಕೆಯ ಸಂಪಾದಕರಿಗೆ - **'ವಿದ್ಯಾರ್ಥಿರಂಗ'**ದಲ್ಲಿ ಸುದ್ದಿಪ್ರಕಟಣೆ ಕೋರಿ (ಹೀಗೆಯೇ **ಕಾರ್ಯಕ್ರಮವರದಿ, ದೂರುಗಳನ್ನು** ಬರೆಯಬಹುದು).

ಇಂದ: ....

ತಾ:..............

.... ಕಾಲೇಜು, ಬೆಂಗಳೂರು.

ಸುದ್ದಿ ಸಂಪಾದಕರು,
ಕನ್ನಡಪ್ರಭಾ ದಿನಪತ್ರಿಕೆ,
ಪಾರ್ಕ್ ರಸ್ತೆ,
ಬೆಂಗಳೂರು - ೬೪೩೨೧೦೧, - ಇವರಸಮಕ್ಷಮಕ್ಕೆ.

ಮಾನ್ಯರೇ,

ವಿಷಯ : **'ವಿದ್ಯಾರ್ಥಿರಂಗ'** ಅಂಕಣದಲ್ಲಿ ಪ್ರಕಟಣೆಯನ್ನು ಕೋರಿ

ಶೀರ್ಷಿಕೆ : 'ಭಾಷಾ ವಿಷಯವನ್ನು ಕಡೆಗಣಿಸುತ್ತಿರುವ ಬಗ್ಗೆ'

ತಮ್ಮ ದಿನಪತ್ರಿಕೆಯಲ್ಲಿ ವಿದ್ಯಾರ್ಥಿಗಳ ಅನಿಸಿಕೆಗಾಗಿ **'ವಿದ್ಯಾರ್ಥಿರಂಗವೆಂದು'** ಸ್ಥಳ ಮೀಸಲಿರಿಸಿ ಪ್ರಕಟಿಸುತ್ತಿರುವುದಕ್ಕೆ ಧನ್ಯವಾದಗಳು. ಅದೇವಿಭಾಗದಲ್ಲಿ ಪ್ರಕಟಿಸಲು ಕೋರಿ ವಿಷಯ ಕಳುಹಿಸುತ್ತಿದ್ದೇನೆ.

ಇತ್ತೀಚಿನ ಕಾಲೇಜು ವಿದ್ಯಾರ್ಥಿಗಳ ಅಧ್ಯಯನ - ಆಸಕ್ತಿಗಳು ಅರ್ಥವಂತಿಕೆಯನ್ನು ಕಳೆದುಕೊಳ್ಳುತ್ತಿವೆ. ಅವರುಗಳಲ್ಲಿ ಕೇವಲ ಗಣಿತ, ವಿಜ್ಞಾನಕಡೆ ಹೆಚ್ಚಿನ ಆಸಕ್ತಿ, ಅಧ್ಯಯನ ಸಾಗುತ್ತಿದೆ. ಇರಲಿ, ಇನ್ನೊಂದು ವಿಷಯದಬಗ್ಗೆ ಅಸಡ್ಡೆ ತರವಲ್ಲ.

ಎಲ್ಲ ಅಧ್ಯಯನಕ್ಕೆ ಮಾಧ್ಯಮವಾದ ಭಾಷೆಯನ್ನು ಸರಿಯಾಗಿ ತಿಳಿದುಕೊಳ್ಳದಿದ್ದರೆ ಯಾವುದೇ ವಿಷಯವನ್ನೂ ಯಶಸ್ವಿಯಾಗಿ ಕಲಿಯಲಾದೀತೇ? ಹಾಗೇ ನಾವು ಓದಿ ಉತ್ತರಿಸಲಾದೀತೆ? ಭಾಷಾಪ್ರಾವೀಣ್ಯತೆಯಿರದೆ ವಿದ್ಯಾಭ್ಯಾಸ ಯಶಸ್ವಿಯಾಗಲಾರದು.

ವ್ಯವಹಾರದಲ್ಲಿ ಭಾಷಾಜ್ಞಾನವು ಒಂದುಶಕ್ತಿಯಾಗಿದೆ. ವಿಷಯಗಳನ್ನು ಅರಗಿಸಿಕೊಂಡು ಅದನ್ನು ಮಾತಿನಿಂದ ಹೇಳಲು ಬರಬೇಕು. **'ಮಾತುಬಲ್ಲವನಿಗೆ ಜಗಳವಿಲ್ಲ', 'ಮೃದುವಚನ ಮೂಲೋಕ ಗೆಲ್ಲುವುದು'** ಈ ಉಕ್ತಿಗಳು ಮಾತಿನಶಕ್ತಿಯ ಮಹತ್ವವನ್ನೂ ಪರಿಣಾಮವನ್ನೂ ಸೂಚಿಸುತ್ತವೆ.

ಇಂದಿನ ವಿದ್ಯಾರ್ಥಿಗಳಲ್ಲಿ ಭಾಷಾಕಲಿಕೆಯ ಗುಣಮಟ್ಟಕುಸಿದಿದೆ. ಅವರಲ್ಲಿ ಆಸಕ್ತಿ ಕಡಿಮೆ, ಬರವಣಿಗೆಯ ಶಕ್ತಿಯಿಲ್ಲ. ಇನ್ನು ಸಂಗ್ರಹಿಸಿ, ವಿಸ್ತರಿಸಿ ಹೇಳುವ ಭಾಷಾಕೌಶಲ್ಯಗಳು ಕೇಳುವಂತಿಲ್ಲ. ಇಂದಿನ ವಿದ್ಯಾರ್ಥಿಗಳಿಗೂ, ಹಿಂದಿನ ವಿದ್ಯಾರ್ಥಿಗಳಿಗೂ ಭಾಷಾಕಲಿಕೆಯಲ್ಲಿ ಬಹಳ ಅಂತರ ಕಾಣುತ್ತಿದೆ. ಯಾವುದೇ ಒಂದು ಭಾಷೆಯನ್ನು ಕಲಿತರೆ ಅನ್ಯಭಾಷೆಗಳನ್ನು ಸುಲಭವಾಗಿ ಕಲಿಯಲು ಸಾಧ್ಯವಿದೆ. ಆದ್ದರಿಂದ ವಿದ್ಯಾರ್ಥಿಗಳಲ್ಲಿ ಭಾಷಾವಿಷಯಗಳ ಬಗ್ಗೆ ಅಸಡ್ಡೆ ಬರಬಾರದು. ಇದೇ ಅಂಶವನ್ನು ಶಿಕ್ಷಣತಜ್ಞರು ವ್ಯಕ್ತಿ ಪಡಿಸಿದ್ದಾರೆ.

ದಯಮಾಡಿ ಪ್ರಕಟಿಸುತ್ತೀರೆಂದು ನಂಬಿದ್ದೇನೆ.

ವಂದನೆಗಳು.

ಹೊರವಿಳಾಸ :

ಇಂತಿ ತಮ್ಮ ವಿಶ್ವಾಸಿ
ಸಹಿ......
(XXXXXX)

---

೪. ಮುಖ್ಯೋಪಾಧ್ಯಾಯರಲ್ಲಿ 'ರಜಾಕೋರಿ' ಪತ್ರ

ದಿ:..........

ಇಂದ,

ಹೆಸರು -----------------.

ತರಗತಿ -----------, ವಿಭಾಗ -------.

ಮುಖ್ಯೋಪಾಧ್ಯಾಯರು
ಶ್ರೀ ಸಿದ್ಧಗಂಗಾ ಗ್ರಾಮಾಂತರ ಪ್ರೌಢಶಾಲೆ
ಬೂದಿಗೆರೆ - ಇವರಿಗೆ.

ಪೂಜ್ಯರೇ,

ವಿಷಯ : 'ರಜೆಕೋರಿಕೆ 'ಪತ್ರ

ನಾನು ತಮ್ಮ ಶಾಲೆಯ ೧೦ ನೇ ತರಗತಿ 'ಎ' ವಿಭಾಗದಲ್ಲಿ ಅಭ್ಯಾಸ ಮಾಡುತ್ತಿದ್ದೇನೆ. ನಾನು ನಿತ್ಯವೂ ತರಗತಿಗೆ ತಪ್ಪದೆ ಹಾಜರಾಗುತ್ತಿದ್ದೇನೆ. ಇತ್ತೀಚೆಗೆ ನನಗೆ ಟೈಫಾಯ್ಡ್ ಜ್ವರ ಬಂದಿರುತ್ತದೆ. ಆಸ್ಪತ್ರೆಗೆ ದಾಖಲಾಗಿದ್ದೇನೆ. ೮-೩-೨೦೦೩ ರಿಂದ ೧೫-೨೦೦೩ ರವರೆಗೆ ಒಂದುವಾರ ತರಗತಿಗೆಬರಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ೧ ವಾರರಜೆಯನ್ನು ಮುಂಜೂರು$_{(೧)}$ ಮಾಡಬೇಕೆಂದು ಕೋರುತ್ತೇನೆ.

'ನಮಸ್ಕಾರಗಳು'

ಇಂತಿ ತಮ್ಮ ವಿಧೇಯ

ತಂದೆ/ ಪೋಷಕರ ಸಹಿ$_{(೨)}$

ಸಹಿ/-..........
ಆರ್. ಸುಧಾ

೫. ವಿಚಾರಣಾ ಪತ್ರ

ಸಾಮಾನ್ಯವಾಗಿ ಜಾಹೀರಾತಿನಲ್ಲಿ ಇಲ್ಲದ ರಿಯಾಯಿತಿ, ವಸ್ತು ಕಳುಹಿಸುವ ವಿಧಾನ, ಹಣ ಸಂದಾಯದ ರೀತಿ, ಸಾಲದವ್ಯವಸ್ಥೆ, (ಸೋಡಿ) ಇತ್ಯಾದಿಗಳಿಗೆ ಅಗತ್ಯ ವಿಚಾರಗಳನ್ನು ತಿಳಿದು ವಿಚಾರಣಾ ಪತ್ರವನ್ನು ಬರೆಯಬೇಕಾಗುತ್ತದೆ:

ವಿಚಾರ ಪತ್ರ **ಕನ್ನಡ ಸಂಘ**

ತಂತಿ : ಕಾವ್ಯಶ್ರೀ ೨೩, ಕುವೆಂಪು ರಸ್ತೆ

ದೂರವಾಣಿ : ೪೪೪೪೧೧೧ ವಿದ್ಯಾನಗರ,

ಬೆಂಗಳೂರು

ದಿನಾಂಕ ೨೦-೧೦-೨೦೦೩

ಪತ್ರಾಂಕ : ಬಿ.ಆರ್.ಟಿ. ೧.೮೬/೦೩

ವ್ಯವಸ್ಥಾಪಕರು/ ನಿರ್ದೇಶಕರು
ಚೇತನ ಪುಸ್ತಕಾಲಯ
ಮೈಸೂರು -೦೩ ಇವರಿಗೆ,

ಮಾನ್ಯರೇ,

ಇತ್ತೀಚೆಗೆ ಸ್ಫೋಟ ದಿನಪತ್ರಿಕೆಯಲ್ಲಿ ನೀವು ಪ್ರಕಟಿಸಿದ ಜಾಹೀರಾತು ನೋಡಿದೆವು. ಆ ಪ್ರಕಟಣೆಯಲ್ಲಿ **ಹರಿಶ್ಚಂದ್ರ ಕಾವ್ಯ, 'ಪಂಪ'**- ಒಂದು ಅಧ್ಯಯನ ಈ ಪುಸ್ತಕಗಳ ಪ್ರತಿಗಳು ಬೇಕಾಗಿವೆ.

ನಿಮ್ಮ ಮಾರಾಟ ನಿಯಮಗಳನ್ನು, ದರದಪಟ್ಟಿಯನ್ನು ಮತ್ತು ಪೂರ್ಣಪುಸ್ತಕ ಸೂಚಿಯನ್ನು ಮಾಹಿತಿಗಾಗಿ ಕಳುಹಿಸಿ ಕೊಡಲು ಕೋರುತ್ತೇನೆ. ಕಳುಹಿಸಿ ಕೊಡಿ. ವಿಚಾರ ಮಾಡಿ ಅಗತ್ಯ ಪ್ರತಿಗಳಿಗೆ ಆದೇಶ ಕೊಡುತ್ತೇವೆ.

ವಂದನೆಗಳೊಂದಿಗೆ

ಇತಿ ತಮ್ಮ ವಿಶ್ವಾಸಿ
ಅಧ್ಯಕ್ಷರು
ಕನ್ನಡ ಸಂಘ

6. ಅಭ್ಯರ್ಥನ ಪತ್ರ (ಹುದ್ದೆಗಾಗಿ ಅರ್ಜಿ)

ಸ್ಪರ್ಧಾಯುಗದಲ್ಲಿ ಅರ್ಜಿಗಳನ್ನು ತಪ್ಪಿಲ್ಲದೆ ಆಕರ್ಷಕವಾದ ಶೈಲಿಯಲ್ಲಿ ಬರೆಯುವುದು ಸೂಕ್ತ. ಉದ್ಯೋಗಕ್ಕಾಗಿ ಜಾಹೀರಾತು ನೋಡಿ/ ತಾನಾಗಿಯೇ ಈ ರೀತಿ ಪತ್ರಗಳನ್ನು ಬರೆಯಬಹುದು.

ದಿನಾಂಕ : ೩-೩-೨೦೦೨

ಇಂದ,
ಸುಜನ
ನಂ. ೧೨, ಗಂಗಾ ರಸ್ತೆ,
ಬಸವೇಶ್ವರ ನಗರ, ತುಮಕೂರು.

ಅಧ್ಯಕ್ಷರು
ಪಂ॥ ನೆಹರು ಸ್ಮಾರಕ ವಿದ್ಯಾಸಂಸ್ಥೆ
೬/೨, ೩/೧, ೯ನೆಯ ಕ್ರಾಸ್,
೪ನೇ ಮುಖ್ಯರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦೦೦೧೮, - ಇವರಿಗೆ

ಮಾನ್ಯರೇ,

ದಿನಾಂಕ ೭-೭-೨೦೦೩ ರಂದು ಪ್ರಕಟವಾದ ಉದ್ಯೋಗ ಮಾರ್ಗದರ್ಶಿ ಪತ್ರಿಕೆಯ ಜಾಹೀರಾತಿನಲ್ಲಿ **ವಿಜ್ಞಾನ ಅಧ್ಯಾಪಕರು ಬೇಕಾಗಿದ್ದಾರೆ** ಎಂದು ಪ್ರಕಟಿಸಿದ್ದೀರಿ. ಖಾಸಗಿ ವಿದ್ಯಾಸಂಸ್ಥೆಯಾಗಿದ್ದು ಸರ್ಕಾರಿ ಸಂಬಳ ಇತ್ಯಾದಿಗಳು ಉಂಟೆಂದು ತಿಳಿಸಿರುವುದು ಸರಿಯಷ್ಟೆ. ಈ ಸಂಬಂಧ ನೇಮಕಗೊಳ್ಳಲು ಅರ್ಹನಾಗಿದ್ದು , ಹುದ್ದೆ ಅಪೇಕ್ಷಿಸಿ ಕೆಳಕಂಡ ವಿವರಗಳನ್ನು ನಿಮ್ಮ ಅವಗಾಹನೆಗೆ ಕಳುಹಿಸಿತ್ತಿದ್ದೇನೆ:

ಹೆಸರು : ಸುಜನ
ವಯಸ್ಸು : ೩೨
ವಿದ್ಯಾರ್ಹತೆ : ಬಿ.ಎಸ್ಸಿ., ಬಿ.ಇಡಿ(ಪ್ರಥಮ ದರ್ಜೆ)
ಬೋಧನಾನುಭವ : ೧. ನಾಲ್ಕು ವರ್ಷ ವಿದ್ಯಾಶಾಲೆಯಲ್ಲಿ ಮುಖ್ಯೋಪಾಧ್ಯಾಯನಿಯಾಗಿ ಕೆಲಸ ನಿರ್ವಹಿಸಿದ್ದೇನೆ. ೨. ಶಾರದಾ ಪ್ರೌಢಶಾಲೆಯಲ್ಲಿ ೧ ವರ್ಷ ಬೋಧನಾನುಭವ ವಿದೆ. ಈ ಸಂಬಂಧ ಪ್ರಮಾಣಪತ್ರ ಲಗತ್ತಿಸಿದೆ.

ಮೇಲ್ಕಂಡ ಉದ್ಯೋಗಗಳು ಪ್ರತಿವರ್ಷ ರಿಲೀವ್ ಮಾಡುತ್ತಾರೆ. ಖಾಯಂ ಇರುವುದಿಲ್ಲ. ತಮ್ಮ ಸಂಸ್ಥೆಯ ಖಾಯಂ ಹುದ್ದೆಯಲ್ಲಿ ವಿದ್ಯಾನೈಪುಣ್ಯತೆಯಿಂದ ಒಳ್ಳೆಯ ಅಧ್ಯಾಪಕನೆನಿಸಲು ಅವಕಾಶವಾದೀತೆಂದು ಅರ್ಜಿಯನ್ನು ಸಲ್ಲಿಸಿರುತ್ತೇನೆ. ತಮ್ಮಗಳ ಉತ್ತರಕ್ಕಾಗಿ ನಿರೀಕ್ಷಿಸುತ್ತಿದ್ದೇನೆ.

ವಂದನೆಗಳೊಂದಿಗೆ

ಇತಿ ತಮ್ಮ ವಿಶ್ವಾಸಿ

ಸುಜನ

ಲಗತ್ತುಗಳು : ೧) ಬಿ.ಎಸ್ಸಿ. ಅಂಕ ಮತ್ತು ಪ್ರಮಾಣ ಪತ್ರ, ೨) ಅನುಭವ ಪ್ರಮಾಣ ಪತ್ರ.

೭. ವ್ಯಾಪಾರಿ(ವಾಣಿಜ್ಯ)ಪತ್ರ : ಪುಸ್ತಕಗಳ ಖರೀದಿಕೋರಿ ಪತ್ರ

ಇಂದ, ದಿ.........

----------------- ಧಾರವಾಡ

ಗೆ,

ಪ್ರಕಾಶಕರು,

ಗೀತಾಪ್ರಕಾಶನ,

ಚಿಕ್ಕಪೇಟೆ,

ಬೆಂಗಳೂರು - ೬೩೨ ೧೦೪.

ಮಾನ್ಯರೇ,

ವಿಷಯ : ಕೆಳಕಂಡ ಪುಸ್ತಕಗಳನ್ನು ಕಳುಹಿಸಿಕೊಡುವ ಬಗ್ಗೆ

ಇತ್ತೀಚಿಗೆ ವಿಶೇಷ ರಿಯಾಯಿತಿ ಬೆಲೆಗೆ ಮಾರಾಟ ಪ್ರಕಟಣೆ ವಿಚಾರ ನೋಡಿದ್ದೇವೆ. ಅಂಚೆ ವೆಚ್ಚ ತಾವೇ ತುಂಬುತ್ತೇವೆಂದಿದ್ದೀರಿ. ಈ ಕೆಳಕಂಡ ಪುಸ್ತಕಗಳನ್ನು ಕೊಳ್ಳಲು ನಿರ್ಧರಿಸಿದ್ದೇವೆ. ಅದರಪೂರ್ಣಮೊತ್ತ ರೂ. ೨೬೦೦.೦೦ ಕಳುಹಿಸುತ್ತಿದ್ದೇನೆ.

ಕ್ರ.ಸಂ.	ಹೆಸರು	ಪ್ರತಿ ಸಂಖ್ಯೆ	ದರ	ಮೊತ್ತ
೧.	ಇಗೋ ಕನ್ನಡ	೫	೧೦೦	೫೦೦.೦೦
೨.	ಕನ್ನಡ ನುಡಿ	೧೦	೫೦	೫೦೦.೦೦
೩.	ಕನ್ನಡ ವ್ಯಾಕರಣ ಕೈಪಿಡಿ	೨೦	೮೦	೧೬೦೦.೦೦
	(ಎರಡು ಸಾವಿರದ ಆರು ನೂರು ಮಾತ್ರ)		ಒಟ್ಟು	**೨೬೦೦.೦೦**

ಈ ಮೇಲ್ಕಂಡ ೩೫ ಪ್ರತಿಗಳನ್ನು ತಾವು ವಿ.ಆರ್.ಎಲ್. ಮೂಲಕ ಕಳುಹಿಸಿಕೊಟ್ಟು ಸಹಕರಿಸಬೇಕೆಂದು ಕೋರುತ್ತೇನೆ.

ವಂದನೆಗಳೊಂದಿಗೆ

ಇತಿ ತಮ್ಮ ವಿಶ್ವಾಸಿ

ಹೊರ ವಿಳಾಸ : ಸಹಿ.........

----------------- (ಹೆಸರು.........)

೧) 'ಮಂಜೂರು'- ಮಂಜೂರು ಎಂಬುದು ರೂಢಿಯಲ್ಲಿ ಪ್ರಚಲಿತವಾಗಿರುವ ಪ್ರಯೋಗ.

೨) ದೃಢೀಕರಿಸಲು ಬಯಸುವುದುಂಟು.

ಪ್ರಬಂಧರಚನೆ

ಪ್ರಬಂಧ ರಚನೆ:

ಪ್ರ- ಚೆನ್ನಾಗಿ, **ಬಂಧ**-ಕಟ್ಟುವುದು ಎಂದರ್ಥ. ಯಾವುದಾದರೊಂದು ವಿಷಯವನ್ನು ಕುರಿತು ಯೋಚಿಸಿ, ಮನಸ್ಸಿನಲ್ಲಿ ಮೂಡಿದ ಅಂಶಗಳನ್ನು ವಿವರವಾಗಿ, ಕ್ರಮವಾಗಿ, ಸುಸಲಲಿತವಾಗಿ ಬರೆಯುವುದು. ಹೇಗೋ ಬರೆದದ್ದೆಲ್ಲಾ ಪ್ರಬಂಧವೆನ್ನಲಾಗದು. ಬರೆದವರ **ಆಲೋಚನಾಶಕ್ತಿ ಹೇಗಿದೆ? ಶಬ್ದಸಂಪತ್ತು ಹೇಗೆ ಬೆಳೆದಿದೆ? ವಾಕ್ಯರಚನಾ ಕೌಶಲ್ಯ ಎಷ್ಟಿದೆ? ಶೈಲಿಹೇಗಿದೆ** ಇತ್ಯಾದಿ ಅಂಶಗಳು ಪ್ರಬಂಧ ಓದಿದವರಿಗೆ ಮನವರಿಕೆ ಯಾಗುವಂತಿರಬೇಕು. ಅದು ಓದುಗನನ್ನು ಆತ್ಮೀಯತೆಯಿಂದ **ತನ್ನಡೆಗೆ ಸೆಳೆದುಕೊಳ್ಳುವ** ಕಲಾತ್ಮಕ ಬರಹ. ಅದೊಂದು **ಅಂತರಂಗದಬೆಳಕು. ವಸ್ತುನಿಷ್ಟ, ವ್ಯಕ್ತಿನಿಷ್ಟ,** ಸಂಶೋಧನಾ ಬರಹಕ್ಕೂ **'ಮಹಾಪ್ರಬಂಧ'** ಎನ್ನಲಾಗುತ್ತದೆ.

ಅದು ನಿಯಮಕ್ಕನುಸಾರವಾಗಿ ರೂಪುಗೊಂಡ ರಚನೆ. ಪ್ರಬಂಧವನ್ನು **ನಿಬಂಧ**ವೆನ್ನಲಾಗುತ್ತದೆ. ಆ ನಿಯಮಗಳು, ಪ್ರಬಂಧಕ್ಕೆ ಒಳ್ಳೆಯ ಪರಿಣಾಮ, ಮೆಚ್ಚುಗೆಯನ್ನು ಗಳಿಸಲು ಅನುಕೂಲವಾಗಬೇಕು. ಪ್ರಬಂಧವು ಅಚ್ಚುಕಟ್ಟಾಗಿರಬೇಕೆನ್ನುವವರು ಮುಖ್ಯವಾಗಿ ಮೂರು ಅಂಶಗಳಕಡೆ ಗಮನಹರಿಸಬೇಕು. **(೧) ವಿಷಯಜ್ಞಾನ. (೨) ಬರವಣಿಗೆ. (೩) ನಿರೂಪಣಾ ಕ್ರಮ.**

೧) ವಿಷಯಜ್ಞಾನ :

ಬೇಂದ್ರೆ ಈ **"ತುಂಬಿ ಬಾಳು ತುಂಬಿರುವ ತನಕ ತುಂತುಂಬಿ ಕುಡಿಯಬೇಕು"** ಎಂದಿದ್ದಾರೆ. ಯಾರೂ ಹುಟ್ಟಿದಾಗಲೇ ತಿಳಿದು ಬರುವುದಿಲ್ಲ. ವಿದ್ಯಾರ್ಥಿಗಳು ಏನನ್ನೇ ಬರೆಯಬೇಕಾಗಲಿ, ಆ ವಿಷಯದ ಬಗ್ಗೆ ತಿಳುವಳಿಕೆಯನ್ನು ಪಡೆದುಕೊಳ್ಳಬೇಕು, ಅದಕ್ಕೆ ತಕ್ಕ ಲೋಕಾನುಭವವೂ ಇರಬೇಕು. ಹಿಂದೆ **'ಕೋಶಓದಬೇಕು ದೇಶತಿರುಗಬೇಕು'** ಎನ್ನುತ್ತಿದ್ದರು. ಇಂದಾದರೋ ಕೂತಲ್ಲಿ ನೋಡಿ, ಕೇಳಿ ವಿಷಯಜ್ಞಾನಗಳನ್ನು ಪಡೆಯಬಹುದಾದ ಸೌಲಭ್ಯ ಲಭಿಸಿದೆ.

ಇಂದು ಪ್ರಸಾರಮಾಧ್ಯಮಗಳೆನಿಸುವ ದೂರದರ್ಶನ, ಆಕಾಶವಾಣಿ, ವೃತ್ತಪತ್ರಿಕೆ, ಗ್ರಂಥಾಲಯ ಇವುಗಳನ್ನು ಬಳಸಿ ವಿಚಾರಾತ್ಮಕ ಭಾವನೆಗಳನ್ನು ಹೆಚ್ಚಿಸಿಕೊಳ್ಳಬಹುದು. ವಿಶ್ವಕೋಶ, ನೂತನ ಸಂಶೋಧನಾತ್ಮಕ ಪುಸ್ತಕಗಳನ್ನು ಓದಿ ತಿಳಿಯಬಹುದು. ಇವುಗಳನ್ನು ಓದುವುದರಿಂದ ಲೋಕದ ಆಗುಹೋಗುಗಳು, ಸ್ಥಿತಿಗತಿಗಳು ನಮಗೆ ಮನವರಿಕೆಯಾಗುತ್ತವೆ. ಹೀಗೇ ಶ್ರದ್ಧೆ, ಉತ್ಸಾಹಗಳಿಂದ ವಿಷಯಗಳನ್ನು ಸಂಗ್ರಹಿಸಬಹುದು. (ಈ ಅಂಶಕ್ಕೆ ೨/೫ ಭಾಗ ಅಂಕಗಳಿಂದು ವಿಭಾಗಿಸಿಕೊಂಡು ಪರೀಕ್ಷೆಗಳಲ್ಲಿ ಮೌಲ ಮಾಪನ ಮಾಡುವುದುಂಟು).

೨) ಬರವಣಿಗೆ :

ನಾವು ಕಂಡಅನುಭವಗಳನ್ನೂ ತಿಳಿದವಿಷಯಗಳನ್ನೂ ಬರವಣಿಗೆಯಿಂದ ವ್ಯಕ್ತಪಡಿಸುತ್ತೇವೆ. ಈ ಬರವಣಿಗೆಯು ಬಳಸುವಭಾಷಾಶುದ್ಧತೆ, ಶೈಲಿ-ಇತ್ಯಾದಿ ಅಂಶಗಳನ್ನೊಳಗೊಂಡಿದೆ. ನಮ್ಮಲ್ಲಿ ಒಂದೇ ವಿಷಯವನ್ನು ಕುರಿತು ಹಲವರು ಬರೆದರೆ ಅವುಗಳ ಬರವಣಿಗೆ ಹಲವು ಪ್ರಕಾರವಾಗಿರುತ್ತವೆ. ಒಬ್ಬೊಬ್ಬನ ಶೈಲಿ (ಬರೆಯುವ ವಿಧಾನ) ಒಂದೊಂದು ತೆರನಾಗಿರುತ್ತದೆ. ಆ ಬರವಣಿಗೆ ಶೈಲಿಯಲ್ಲಿ ಅವರವರ ವ್ಯಕ್ತಿತ್ವಮೂಡಿ ಬಂದಿರುತ್ತದೆ. ಹೀಗಾಗಲು ಸ್ವಾತಂತ್ರ ವಾಕ್ಯ ರಚನೆಯಿರಬೇಕು. ಈ ಶೈಲಿ ಮನೋಹರವಾಗಿ ವೈವಿಧ್ಯತೆಯಿಂದ ಕೂಡಿರಬೇಕು. ಹಾಗೇ ಅಂದವಾದ ತಪ್ಪಿಲ್ಲದ ಬರವಣಿಗೆ ಇರುವುದು ಒಳ್ಳೆಯದು.

ಬರವಣಿಗೆಯ ವಾಕ್ಯಗಳು ಸಂದಿಗ್ಧತೆಗೆ ಅವಕಾಶವಾಗದಂತೆ ಅತಿಚಿಕ್ಕವಾಗಿಯೂ, ಸರಳವಾಗಿಯೂ ಇರಬೇಕಾಗುತ್ತದೆ. ಅತಿಯಾದ ಅಲಂಕಾರದ ಆಡಂಬರದ ಭಾಷೆಯಾಗಿರಬಾರದು. ಅದು **'ನಿರಾಭರಣ ಸುಂದರಿ'**ಯಂತೆ ಸಹಜವಾಗಿರಬೇಕು. ಕಾಗುಣಿತ ದೋಷಗಳಿರಬಾರದು. ಬರೆಯಬೇಕಾದ ವಿಷಯವು ಸ್ಪಷ್ಟವಾಗಿ, ನೇರವಾಗಿರಬೇಕು. ಗಹನವಾದ ಸಂಗತಿಗಳನ್ನು ಎಷ್ಟು ಸುಲಭವಾಗಿ ಹೇಳಲು ಸಾಧ್ಯವೋ, ಅಷ್ಟರಮಟ್ಟಿಗೆ ಬರೆಯಲು ಯತ್ನಿಸಬೇಕು. ನಡುವೆ ಸರಳ ನಿದರ್ಶನಗಳಿಂದ, ಮನಮುಟ್ಟುವಂತೆ ಆಕರ್ಷಕವಾಗಿ ಬರೆಯಬೇಕು. ತರ್ಕಬದ್ಧ ಉದ್ದವಾಕ್ಯವಿದ್ದರೂ ಸುಸಂಬದ್ಧವಾದ ಧೋರಣೆಯಿದ್ದರೆ ಸುಲಭವಾಗಿ ಅರ್ಥವಾದೀತು. ಇದಕ್ಕೆ ಅಭ್ಯಾಸಬೇಕು.

ಹೀಗೆ ಹೇಳಬೇಕೆಂದಿರುವ ವಿಷಯವನ್ನು ನೇರವಾಗಿ, ಸುಲಭವಾದ ಬರವಣಿಗೆ ಶೈಲಿಗಳಿಂದ ಕೂಡಿರಬೇಕು. ಆಗ ಅದು ಪ್ರಭಾವಿ ಬರಹವೆನಿಸುತ್ತದೆ. (ಸಾಮಾನ್ಯವಾಗಿ **೧/೫** ಭಾಗದ ಅಂಕಗಳನ್ನು ಬರವಣಿಗೆಗೆ ಮೀಸಲಾಗಿರುತ್ತದೆ).

೩) ನಿರೂಪಣಾ ಕ್ರಮ :

ವಿಷಯವನ್ನು ತಿಳಿದು, ಬರವಣಿಗೆಯನ್ನು ಮಾಡುವಾಗ ಯಾವಕ್ರಮದಲ್ಲಿ ಬರೆಯಬೇಕೆಂಬುದನ್ನೂ ತಿಳಿದಿರಬೇಕು. ಆ ಅಚ್ಚುಕಟ್ಟುತನ, ಶಿಸ್ತುಗಳನ್ನೇ **'ನಿರೂಪಣಾ ಕ್ರಮ'** (ವಿಧಾನ) ಎನ್ನಲಾಗುತ್ತದೆ.

ವಿಷಯವನ್ನು ಕುರಿತು ಒಮ್ಮೆಲೆ ಬರೆಯಲುತೊಡಗಬಾರದು. ಯೋಚಿಸಿ, ಪರಿಚ್ಛೇದ (ಪ್ಯಾರಾ) ಗಳನ್ನು ವಿಂಗಡಿಸಿಕೊಂಡು, ಲೇಖನ ಚಿಹ್ನೆಗಳಿಂದ ಕ್ರಮವಾಗಿ ವಿವರಿಸುತ್ತ ಹೋಗಬೇಕು. ಬರೆಯುವ ವಿಷಯದ ವಿವಿಧ ಮುಖಗಳನ್ನು ಪ್ಯಾರಗಳಲ್ಲಿ ಪರಿಚಯಿಸುತ್ತ ಸಾಗಬಹುದು. ಪ್ರಬಂಧದಲ್ಲಿ ಅತಿಹೆಚ್ಚು ವಾಕ್ಯಗಳ ವಿಚಾರ ವರ್ತಮಾನಕಾಲದಲ್ಲಿ ಇರುತ್ತವೆ. ಯಾವುದೊ ಒಂದು ಆಶಯವನ್ನು ವ್ಯಕ್ತಪಡಿಸುವಾಗ ಹಲವು ವಾಕ್ಯಗಳ ಒಂದು ಪ್ಯಾರಾದಲ್ಲಿ ವರ್ತಮಾನ, ಭೂತ, ಭವಿಷ್ಯತ್‌ನಲ್ಲಿರಬಹುದು. ಒಟ್ಟು ಪ್ರಬಂಧ ವಾಕ್ಯದಿಂದ ವಾಕ್ಯಕ್ಕೆ

ಕಾಲಬದಲಾದಂತೆ ನೋಡಿಕೊಳ್ಳುವುದು ಸೂಕ್ತ. ಇದನ್ನು **ಕಾಲಸಾಂಗತ್ಯ** ವಿಸ್ತಾರ
ಅದಿಲ್ಲದಿದ್ದರೆ ಯೋಚನೆಗಳು ಬಿಡಿ ಬಿಡಿಯಾಗಿ ಉಳಿಯುತ್ತವೆ. ಈ ರೀತಿ ರೂಪುಗೊಂಡ
ಪರಿಚ್ಛೇದಗಳೇ ಪ್ರಬಂಧದಜೀವಾಳ. ಅಂತು ವಿಚಾರತೀವ್ರತೆ, ಸರಳ
ಸಂಕ್ಷಿಪ್ತತೆಗಳಿಂದಿರಬೇಕು. ಹೀಗೆ ಬರೆಯುವಾಗ ವಸ್ತುವಿನ ವಿಸ್ತರಣೆಯ ದೃಷ್ಟಿಯಿಂದ
ಸಾಂಪ್ರದಾಯಿಕವಾಗಿ ಮೂರುಹಂತಗಳನ್ನು ಅನುಸರಿಸುವುದು ಸೂಕ್ತ: i) **ಪೀಠಿ**
(ಉಪೋದ್ಘಾತ). ii) **ವಿಷಯಬೆಳವಣಿಗೆ.** iii) **ಮುಕ್ತಾಯ (ಉಪಸಂಹಾರ)**

i) **ಪೀಠಿಕೆ :** ವಿಷಯಕ್ಕೆ ಹಿನ್ನೆಲೆಇರಬೇಕು. ಪ್ರಬಂಧ ಶರೀರಕ್ಕೆ ಇದು
ಶಿರೋಭಾಗವೆನ್ನಬಹುದು. ಈ ಪ್ರಬಂಧದ ಆರಂಭ ಉತ್ತಮವಾಗಿದ್ದರೆ ಮನ ಸೆಳೆಯುತ್ತದೆ
ಪೀಠಿಕಾಭಾಗವು ವಿಷಯ ಪ್ರವೇಶಕ್ಕೆ ದಾರಿ ಮಾಡಿಕೊಡುವ ದ್ವಾರದಂತಿರುತ್ತದೆ. ಏಕೆಂದರ
ವಿಷಯ ತೊಡಕಾಗಿದ್ದರೆ ಅಲ್ಲಿ ವಿಷಯದ ಅರ್ಥವಿವರಣೆ ಮಾಡಿಕೊಡಲೇಬೇಕಾಗುತ್ತದೆ
ಅದಕ್ಕನುಗುಣವಾಗಿ ಗಾದೆಮಾತು, ಸೂಕ್ತಿ ಇವುಗಳನ್ನು ಬಳಸಬಹುದು. ಅವುಗಳನ್
ಪೀಠಿಕಾ ಭಾಗಕ್ಕೆ **ಹೊಂದಿಸಿಕೊಂಡು** ಬರೆವುದು ಒಳ್ಳೆಯದು. ಪೀಠಿಕಾಭಾಗದಲ್ಲಿ
ವಿಷಯವನ್ನು ಬೀಜರೂಪವಾಗಿ ಪ್ರಸ್ತಾಪಿಸಬೇಕು. ಪೀಠಿಕೆಯು ಪ್ರಬಂಧದ ವಿಸ್ತಾರಕ
ನುಗುಣವಾಗಿ ಚಿಕ್ಕದಾಗಿ, ಚೊಕ್ಕವಾಗಿದ್ದರೆ ಒಳ್ಳೆಯದು. ಒಟ್ಟಿನಲ್ಲಿ ಪೀಠಿಕಾ ಭಾಗವ
ಸರಾಗವಾಗಿ ವಿಷಯ ಪ್ರವೇಶಕ್ಕೆ ದಾರಿ ಮಾಡಿಕೊಡುವಂತಿರಬೇಕು (ಇದಕ್ಕೆ ೧/೫ ಭಾಗದ
ಅಂಕಗಳನ್ನು ಇಟ್ಟಿರುತ್ತಾರೆ). ಕೆಲವೊಮ್ಮೆ ಒಂದು ಘಟನೆಯಿಂದ ನೇರ ವಿಷಯಕ್ಕೆ ಪ್ರವೇಶಿಸ
ಆಂತರ್ಯ ತೋರುತ್ತಾ ಹೋಗಬಹುದು. ಇದು ನವೀನ ನಿರೂಪಣಾತಂತ್ರ. ಅಂತಹವುಗಳನ್
ಪ್ರಬಂಧವಲ್ಲವೆಂದು ಹೇಳಲಾಗದು.

ii) **ವಿಷಯಬೆಳವಣಿಗೆ (ವಿವರಣೆ) :** ಇದು ಪ್ರಬಂಧದ ಶರೀರದಭಾಗವೆನಿಸಿದೆ
ಈ ಭಾಗದಲ್ಲಿ ವಿಷಯದ ಪೂರ್ಣ ಪರಿಚಯವನ್ನು ಮಾಡಿಕೊಡಬಹುದು. ಇಲ್ಲಿ ವಿಷಯದ
ಸ್ಥಿತಿಗತಿ, ಆಗುಹೋಗು, ಗುಣದೋಷಗಳು ಇತ್ಯಾದಿವಿಭಿನ್ನ ಅಂಶಗಳನ್ನು ವಿವರಿಸು
ಹೋಗಬೇಕು. ಸಂಬಂಧಿಸಿದ ಒಂದೊಂದು ಸಂಗತಿಗಳನ್ನು ಉಪವಿಷಯಗಳನ್ನಾ
ಮಾಡಿಕೊಂಡು, ಪರಿಚ್ಛೇದಗಳಾಗಿ ವಿಂಗಡಿಸಿ ಬರೆವುದರಲ್ಲಿ ಅಖಂಡತೆಯಿರುತ್ತದೆ.

ಹೀಗೆ ಬರೆಯುವಾಗ ಪ್ಯಾರಗಳ ಮೊದಲ ವಾಕ್ಯಗಳು ಬರೆಯುವ ವಿಚಾರದ
ಗಮನಸೆಳೆದರೆ, ಮುಂದಿನ ವಾಕ್ಯಗಳು ಅದರ ಪ್ರತಿಪಾದನೆಗೆ ತೊಡಗಬೇಕು
ವಿವರಣೆಯೊಂದಿಗೆ ಎಳೆಎಳೆಯಾಗಿ ಬಿಡಿಸಿ ಅಗತ್ಯ ಅಂಶಗಳನ್ನು ಪರಿಚಯಿಸಬಹುದು
ಪರಿಚ್ಛೇದದ ಕೊನೆಯವಾಕ್ಯಗಳು ಮೇಲಿನ ಪ್ರತಿಪಾದಿಸಿದ ಅಂಶಗಳನ್ನು ಪರಿಗಣಿ
ತೀರ್ಮಾನದ ಮಾತುಗಳಿಂದ ಕೊನೆಗೊಳಿಸುತ್ತ ಸಾಗಬೇಕು.

iii) **ಮುಕ್ತಾಯ (ಉಪಸಂಹಾರ)** : ಮೇಲಿನ ಪ್ರಬಂಧವು ಪೀಠಿಕಾಭಾಗ, ವಿಷಯ
ವಿವರಣೆಯ ಭಾಗದಲ್ಲೇ ನಿಂತರೆ, **'ಅಪೂರ್ಣ'**ವೆನಿಸುತ್ತದೆ. ಆ ಹಿಂದೆ ಬರೆದ ಎ

ವಿಷಯ ಬೆಳವಣಿಗೆಯ ಅಂಶಗಳನ್ನು ಕ್ರೋಢೀಕರಿಸಿದ ಮುಕ್ತಾಯದ ಮಾತುಗಳಿರಬೇಕು. ಅವುಗಳು ಸಾರಾಂಶರೂಪವಾಗಿರಬಹುದು, ತೀರ್ಮಾನದ ಮಾತುಗಳಿಂದ ಕೂಡಿರಬಹುದು. ಅವು ಚಿಂತನೆಗೆ ಪ್ರೇರೇಪಿಸಿ, ಎಚ್ಚರವನ್ನು ಮೂಡಿಸುವಂತಿರಬಹುದು. ಹಾಗೆಯೇ ಪರಿಹಾರದ ಮಾರ್ಗೋಪಾಯಗಳನ್ನೂ ಅಲ್ಲಿ ಸೂಚಿಸಬಹುದು. ಪೂರ್ಣ ವಿಷಯವನ್ನು ಕೊನೆಗೊಳಿಸುವಾಗ ವಿಷಯದ ಸಮಗ್ರಕಲ್ಪನೆ ಇಲ್ಲಿ ಬರಬೇಕಾಗುತ್ತದೆ. ಮುಕ್ತಾಯವು ಪೀಠಿಕೆಯಂತೆ ಹಿತಮಿತವಾಗಿರಬೇಕು (ಮೌಲ್ಯಮಾಪಕರು ೧/೫ ಅಂಕಗಳನ್ನು ಮೀಸಲಿರಿಸುತ್ತಾರೆ).

ಪ್ರಬಂಧಗಳನ್ನು ಸ್ಥೂಲವಾಗಿ **ಐದು ವಿಧಗಳಾಗಿ** ವಿಂಗಡಿಸಬಹುದು.

೧) ವಿಚಾರಾತ್ಮಕ ಪ್ರಬಂಧ : ಇದರಲ್ಲಿ **'ವಿಚಾರಪ್ರಧಾನತೆ'**ಯಿರುತ್ತದೆ. ವಿಜ್ಞಾನ, ಇತಿಹಾಸ, ಸಮಸ್ಯೆ, ಇತ್ಯಾದಿ ವಿಷಯದ ಬಗ್ಗೆ ತನ್ನದೇಆದ ಆಲೋಚನೆಗಳ ಸರಮಾಲೆಯಾಗಿರುತ್ತವೆ. ಹಾಗೆಯೇ ವಿಚಾರಾರ್ಹವಾದ ವಿರೋಧ ಅಭಿಪ್ರಾಯಗಳ ಪ್ರತಿಪಾದನೆಯಿರುತ್ತದೆ. ಉದಾ. ೧) **ಸ್ತ್ರೀಶೋಷಣೆ. ೨) ವೃತ್ತ ಪತ್ರಿಕೆ. ೩) ಚಲನಚಿತ್ರ.**

೨) ವರ್ಣನಾತ್ಮಕ ಪ್ರಬಂಧ : ಇಲ್ಲಿ **'ವರ್ಣನೆ'** ಪ್ರಧಾನವಾಗಿರುತ್ತದೆ. ವಸ್ತು, ಸ್ಥಳ, ಪ್ರಾಣಿ, ಪ್ರಸಂಗಗಳ ವರ್ಣನೆ ಸಹಜಸುಂದರವಾಗಿರುತ್ತದೆ. ಉದಾ: ಪ್ರಾಣಿಸಂಗ್ರಹಾಲಯ, ಹಬ್ಬಗಳು, ಜಾತ್ರೆಗಳು, ವಸ್ತುಪ್ರದರ್ಶನ, ಹಳೇಬೀಡು, ಇತ್ಯಾದಿ.

೩) ವಿಮರ್ಶಾತ್ಮಕ ಪ್ರಬಂಧ : 'ವಿಮರ್ಶೆ' ಪ್ರಧಾನವಾಗಿರುತ್ತದೆ. ಎರಡು ಅಂಶಗಳನ್ನೂ ತುಲನೆಮಾಡಿ, ಹೋಲಿಸಿ ಅವುಗಳ ರೂಪು-ರೇಷೆ, ಸಾಧಕ-ಬಾಧಕಗಳನ್ನು ತಿಳಿಸುತ್ತವೆ. ಉದಾ: ಶಿಕ್ಷಣದಲ್ಲಿ ನೀತಿ, ಪರಿಸರಸಮಸ್ಯೆ, ಕ್ರೀಡೆಗಳು ಇತ್ಯಾದಿ.

೪) ವೃತ್ತಾಂತಾತ್ಮಕಪ್ರಬಂಧ : ಒಂದುಕಾಲದಲ್ಲಿ ನಡೆದಸಂಗತಿಗಳನ್ನು ಕಾಲಾನುಕ್ರಮದಲ್ಲಿ ತಿಳಿಸುವುದು. ಅವುಗಳ ಹಿನ್ನೆಲೆಯ ಸ್ಥಿತಿಗಳ ಪರಿಚಯವಿರುತ್ತದೆ. ಉದಾ: ೧) ಜೀವನಚರಿತ್ರೆ ೨) ಇತಿಹಾಸ ಕಥೆಗಳು, ೩) ಆತ್ಮಕಥೆಗಳು ಇತ್ಯಾದಿ.

೫) ಕಲ್ಪನಾತ್ಮಕಪ್ರಬಂಧಗಳು : ಇಲ್ಲಿ **'ಕಲ್ಪನೆ'**ಯ ನೆರವಿನಿಂದ ವಿಷಯ ಪ್ರತಿಪಾದನೆಯಿರುತ್ತದೆ. ಉದಾ: ಕನಸುಗಳು, ಪ್ರವಾಸಕಥನ, ರಸ್ತೆಅಪಘಾತ. ಮನರಂಜನಾತ್ಮಕ ದೃಷ್ಟಿಯ ಹರಟೆಯ ವಸ್ತುವುಳ್ಳವನ್ನು **ಲಲಿತಪ್ರಬಂಧ**ವೆನ್ನಲಾಗುತ್ತದೆ.

ಕೆಲವು ಪ್ರಚಲಿತ ವಿಷಯುಗಳ ಪ್ರಬಂಧಗಳು :-

೧) ಜನಸಂಖ್ಯಾ ಸ್ಫೋಟ : (ವಿಮರ್ಶಾತ್ಮಕ) **ವಿಷಯಾನುಕ್ರಮ :**

೧) ಪೀಠಿಕೆ - ಜನಸಂಖ್ಯಾ ಸ್ಫೋಟವೆಂದರೇನು?
೨) ಜನಸಂಖ್ಯಾ ಸ್ಫೋಟಕ್ಕೆ ಕಾರಣಗಳು.
೩) ಅದರಿಂದುಂಟಾಗುವ ಸಮಸ್ಯೆಗಳು - ಪರಿಣಾಮಗಳು.

೪) ನಿವಾರಣೋಪಾಯ.

೫) ಮುಕ್ತಾಯ (ಉಪಸಂಹಾರ).

ಮನುಷ್ಯ ಸುಖವಾಗಿ ಬದುಕಬೇಕಾದರೆ ಗಾಳಿ, ನೀರು, ಆಹಾರ ಇವುಗಳು ಸಮೃದ್ಧವಾಗಿರಬೇಕು. ಇಲ್ಲದಿದ್ದರೆ ಜೀವನದಲ್ಲಿ ಏರುಪೇರಾಗುತ್ತದೆ. ಆದ್ದರಿಂದಲೇ ಅರಿಸ್ಟಾಟಲ್ ಎಂಬತತ್ವಜ್ಞಾನಿ, **'ಒಂದುನಿರ್ದಿಷ್ಟ ಜಾಗದಲ್ಲಿ ಇಂತಿಷ್ಟೇ ಜನಸಂಖ್ಯೆಯಿರಬೇಕೆಂದಿದ್ದಾನೆ'**. ಇಲ್ಲದಿದ್ದರೆ ದೇಶದಲ್ಲಿ ಅನೇಕಸಮಸ್ಯೆಗಳು ಉದ್ಭವಿಸುತ್ತವೆ. ನಮ್ಮಲ್ಲಿ ಆಹಾರಧಾನ್ಯಗಳನ್ನು ಸಮೃದ್ಧವಾಗಿ ಬೆಳೆಯುತ್ತೇವೆ. ಸಾಕಷ್ಟು ಜಲ, ಪರಿಸರಸಂಪತ್ತುಗಳಿವೆ. ಆದರೇನು? **'ಸಂಪತ್ತಿನಿಂದ ಕೂಡಿರುವ ಬಡದೇಶ'**ವೆಂಬ ಹೆಸರಿದೆ. ವಿಚಾರ ಮಾಡಿದರೆ ಈ ಮಾತು ಸತ್ಯವೆನಿಸುತ್ತದೆ. ಇದಕ್ಕೆಲ್ಲಾ ಕಾರಣವೇನು? ೧೯೪೭ ರಲ್ಲಿ ೩೦ ಕೋಟಿ ಜನಸಂಖ್ಯೆಯಿತ್ತು. ಮುಂದಿನ ೫೬ ವರ್ಷಗಳಲ್ಲಿ ೭೫ ಕೋಟಿ ಬೆಳೆದಿದೆ. ಜನಸಂಖ್ಯೆ ವಿಷವೇರಿದಂತೆ ಏರುತ್ತಿದೆ. ಹೀಗಾಗಿ ಎಲ್ಲೆಲ್ಲೂ ಕ್ಯೂ, ಜನ! ಜನ!!. ಈ ಅಸ್ವಾಭಾವಿಕ ಜನಸಂಖ್ಯೆಯ ಹೆಚ್ಚಳ, ಅದರ ತೀವ್ರ ಪರಿಣಾಮಗಳನ್ನು ಗಮನಿಸಿ **'ಜನಸಂಖ್ಯಾಸ್ಫೋಟ'**ವೆಂದು ಕರೆಯಲಾಗಿದೆ.

ಕಾರಣಗಳು :

ಏಷ್ಯಾಖಂಡ ಜನಸಂಖ್ಯೆಯಲ್ಲಿ ಮೊದಲಸ್ಥಾನದಲ್ಲಿದೆ. ನಮ್ಮದೇಶವೂ ಚೀನಾ ದೇಶವನ್ನು ಮೀರಿಸುವ ಮಟ್ಟಿಗೆಯಿದೆ. ಇದಕ್ಕೆ ಕಾರಣಗಳನ್ನು ವಿಚಾರ ಮಾಡಿದರೆ, ನಮ್ಮಲ್ಲಿ ಅವಿದ್ಯಾವಂತರ ಸಂಖ್ಯೆ ಹೆಚ್ಚು. ಹೀಗಾಗಿ ಅವರಲ್ಲಿ ವಿಚಾರವಂತಿಕೆ ಕಡಿಮೆ. ಸುಲಭವಾಗಿ ಮೂಢನಂಬಿಕೆಗಳಿಗೆ ತುತ್ತಾಗಿದ್ದಾರೆ. ಅವರು- ಮಕ್ಕಳನ್ನು ದೇವರು ಕೊಡುತ್ತಾನೆಂದು ಭಾವಿಸುತ್ತಾರೆ. ಎಷ್ಟೇ ಮಕ್ಕಳಾದರೂ ಅವು ದೇವರುಕೊಟ್ಟವು ಎಂದು ನಂಬುತ್ತಾರೆ. ತಮ್ಮಲ್ಲಿ ಸಾಕಿ, ಸಲುಹುವ ಶಕ್ತಿಯಿದೆಯೇ, ಅದಕ್ಕನುಗುಣವಾದ ಅನುಕೂಲಗಳಿವೆಯೇ ಯೋಚಿಸುವುದಿಲ್ಲ. **'ಹಾಸಿಗೆಇದ್ದಷ್ಟು ಕಾಲುಚಾಚ'**ಬೇಕೆಂಬ ವಿವೇಕ ಅವರಲ್ಲಿ ಮೂಡಲಿಲ್ಲ. ಅವರಲ್ಲಿ ಧರ್ಮಾಂಧತೆಗಳು ಹೆಚ್ಚು. **'ಪುತ್ರಹೀನರಿಗೆ ಸದ್ಗತಿಯಿಲ್ಲ'**ವೆಂದು ನಂಬುತ್ತಾರೆ. ಅದರಲ್ಲೂ **ಗಂಡುಸಂತಾನಕ್ಕಾಗಿ** ಬಯಸಿ ಎಂಟು ಹತ್ತುಮಕ್ಕಳನ್ನು ಪಡೆದವರಿದ್ದಾರೆ. ಮತ್ತೊಂದು **'ಸಂತಾನಹರಣ ಪಾಪ'** ವೆಂಬ ಭಾವನೆ ಬೆಳೆಯುತ್ತಿದೆ. ಅದು ಧರ್ಮವಿರುದ್ಧವೆಂಬ ಭ್ರಮೆ ಅವರಲ್ಲಿದೆ. ಏನೇ ಕಷ್ಟನಷ್ಟಗಳಾದರೂ ಮಿತಸಂತಾನಕ್ಕೆ ಗಮನ ಕೊಡುವುದಿಲ್ಲ. ಕೆಲವರು ದಿನವಿಡೀ ನರಳಿದರೂ ಉದಾಸೀನರಾಗಿರುತ್ತಾರೆ. ಕೆಲವರಲ್ಲಿ **'ಮಕ್ಕಳನ್ನು ಹೆರುವುದು ಹೆಣ್ಣಿನಧರ್ಮ'** ವೆಂಬ ಮೂಢನಂಬಿಕೆಯಿದೆ.

ನಮ್ಮದು ಉಷ್ಣವಲಯ, ಜೀವೋತ್ಪತ್ತಿಗೆ ಅನುಕೂಲ ವಾತಾವರಣವಿದೆ. ಇದೂ ಜನಸಂಖ್ಯೆ ಮಿತಿಮೀರಲು ಕಾರಣವಾಗಿದೆ. ಕೆಲವರು ಬಯಸಿ ಇಲ್ಲಿಗೆ ವಲಸೆ ಬರುತ್ತಿದ್ದಾರೆ. ಮತ್ತೊಂದು ಅಂಶವೆಂದರೆ ಹಿಂದೆಯಿದ್ದ ಕೆಲವು ಸಾಂಕ್ರಾಮಿಕ ರೋಗಗಳಾದ ಪ್ಲೇಗ್, ಕಾಲರಾ, ಮಲೇರಿಯಾಗಳು ಹತೋಟಿಗೆ ಬಂದಿವೆ. ಹಿಂದೆ ಹುಟ್ಟಿದ ಹತ್ತು ಮಕ್ಕಳಲ್ಲಿ

ಕೆಲವೇ ಮಕ್ಕಳು ಉಳಿಯುತ್ತಿದ್ದವು. ಇಂದು ವೈಜ್ಞಾನಿಕವಾಗಿ ಮುಂದುವರಿದು ಹುಟ್ಟಿದ ಹಲವು ಮಕ್ಕಳೆಲ್ಲವೂ ಉಳಿಯುತ್ತವೆ. ಈ ಎಲ್ಲ ಕಾರಣಗಳಿಂದಾಗಿ ನಮ್ಮ ದೇಶದ ಜನಸಂಖ್ಯೆ ನೂರಾರು ಕೋಟಿ ಮುಟ್ಟುವಹಂತ ತಲುಪಿದೆ.

ದುಷ್ಪರಿಣಾಮಗಳು : ಜನಸಂಖ್ಯಾಸ್ಫೋಟದಿಂದ ಅನೇಕ ದುಷ್ಪರಿಣಾಮಗಳು ಮೊಟ್ಟೆಯಿಡುತ್ತ ಹೋಗುತ್ತಿವೆ.

೧) ಜನಸಂಖ್ಯೆ ಹೆಚ್ಚಳದಿಂದ ದೇಶಕ್ಕೆ ಪೂರ್ಣಶಿಕ್ಷಣ ಕೊಡಲಾಗಿಲ್ಲ. ಅದಕ್ಕಾಗಿ ಅನೇಕ ಯೋಜನೆಗಳನ್ನು ಮಾಡಿದರೂ ಪೂರ್ಣಫಲಿಸಲಿಲ್ಲ. ಅವಿದ್ಯಾವಂತರು ತೆರೆದಅನೇಕ ಶಾಲಾ ಕಾಲೇಜುಗಳನ್ನು ಬಳಸಿಕೊಳ್ಳಲಿಲ್ಲ. ಇಷ್ಟಾದರೂ ಶೇ. ೪೦ ಅನಕ್ಷರಸ್ಥರಿರುವ ಈ ನಾಡಿನಲ್ಲಿ ರಾಷ್ಟ್ರೀಯಸಮಸ್ಯೆಗಳು ಅರಿವಾಗದೇ ಹೋದವು.

೨) ಮಿತಿಮೀರಿದ ಜನಸಂಖ್ಯೆಯಿಂದ ಶುದ್ಧ ನೀರು, ಆಹಾರ ಪೂರೈಸುವುದು ಕಷ್ಟವಾಗಿದೆ. ಪಡಿತರ ಪದ್ಧತಿ, ನೈರ್ಮಲ್ಯ ಯೋಜನೆಗಳು ಪೂರ್ಣ ಯಶಸ್ವಿಯಾಗಲಿಲ್ಲ. ಪೌಷ್ಟಿಕ ಆಹಾರದ ಕೊರತೆಯಿಂದ ಅನೇಕ ಮಕ್ಕಳೂ ವೃದ್ಧರೂ ನರಳುತ್ತಿದ್ದಾರೆ. ಕೆಲವರಲ್ಲಿ ಕಲುಷಿತ ಪರಿಸರದಿಂದ ರೋಗ ನಿರೋಧಕಶಕ್ತಿ ಕಳೆದುಕೊಂಡು, ಹೆಸರಿಸಲಾಗದ ರೋಗಗಳಿಗೆ ತುತ್ತಾಗುತ್ತಿದ್ದಾರೆ.

೩) ಅನೇಕರು ವಲಸೆ ಬರುವುದರಿಂದ ಕೊಳಚಿ ಕೇಂದ್ರಗಳು ಉದಯವಾಗುತ್ತಿವೆ. ಹೀಗಾಗಿ ಅನೇಕರು ವಸತಿಹೀನರಾಗಿ ಬೀದಿಗಳಲ್ಲಿ ಮಲಗುತ್ತಿದ್ದಾರೆ. ನಿರುದ್ಯೋಗ ಸಮಸ್ಯೆಗಳಿಂದ ದಾರಿ ತೋಚದೆ ಕಳ್ಳತನ, ದರೋಡೆ, ಕೊಲೆ ಇತ್ಯಾದಿ ಅಡ್ಡದಾರಿಗಳನ್ನು ಹಿಡಿಯುತ್ತಿದ್ದಾರೆ. ದಾರಿತೋರದೆ ಅಸಂಖ್ಯಾತರು, ದುರ್ವ್ಯಸನಿಗಳು ಪಾನಾಸಕ್ತರಾಗುತ್ತಿದ್ದಾರೆ. ಹೀಗಾಗಿ ಅನೇಕ ಕುಟುಂಬಗಳು ಬೀದಿಪಾಲಾಗುತ್ತಿದ್ದಾವೆ.

೪) ಸಮಾಜದಲ್ಲಿ ವಸತಿ, ಆರೋಗ್ಯ, ಕಾನೂನುಪಾಲನೆ, ನಿರುದ್ಯೋಗ ಇತ್ಯಾದಿ ಸಮಸ್ಯೆಗಳು ಹುಟ್ಟಿ ಬೆಳೆದು ನಿಲ್ಲುತ್ತಿವೆ. ಸರ್ಕಾರದ ಪ್ರಯತ್ನಗಳು, ಯೋಜನೆಗಳು ವ್ಯರ್ಥವಾಗುತ್ತಿವೆ. ಅವಿದ್ಯಾವಂತ ಸಂತಾನಗಳಿಗೆ ರಾಷ್ಟ್ರದ ಸಾಧನೆಗಳಲ್ಲಿ ಪಾಲ್ಗೊಳ್ಳುವ ಎಚ್ಚರವಿಲ್ಲ, ರಾಷ್ಟ್ರಭಕ್ತಿಗಳಿಲ್ಲ, ರಾಷ್ಟ್ರೀಯ ಸಮಸ್ಯೆಗಳ ಅರಿವಿಲ್ಲ. ಹೀಗಾಗಿ ಬಸ್ಸು, ರೈಲು, ಸಿನಿಮಾಗಳಿಗೆ ಕ್ಯೂ, ಪಡಿತರ ಅಂಗಡಿಗಳ ಮುಂದೆ ಕ್ಯೂ, ನಗರಗಳಲ್ಲಂತೂ ನಡೆಯಲು ದಾರಿಯಿಲ್ಲ, ವಾಸಿಸಲು ನೆಲವಿಲ್ಲ. ಜನ ಕಂಗಾಲಾಗಿದ್ದಾರೆ. ಒಂದೊಂದು ಸಮಸ್ಯೆಗಳಿಂದ ಬೇರೆ ಬೇರೆ ಸಮಸ್ಯೆಗಳು ತಲೆಯೆತ್ತುತ್ತಿವೆ.

ಜನಸಂಖ್ಯಾ ನಿಯಂತ್ರಣೋಪಾಯ : ನಮ್ಮ ಜನಸಂಖ್ಯೆ ಹೀಗೇ ಬೆಳೆದರೆ ದೇಶದ ಸ್ಥಿತಿಗತಿ ಶೋಚನೀಯವಾಗಲಿದೆ. ಚೀನಾ, ಇಂಗ್ಲೆಂಡ್, ಫ್ರಾನ್ಸ್ ದೇಶಗಳೂ ಜನಸಂಖ್ಯಾ ನಿಯಂತ್ರಣ ಮಾಡಿಕೊಂಡಿವೆ. ನಾವೂ ಎಲ್ಲಕ್ಕೂ ಮೂಲವಾದ ಜನಸಂಖ್ಯೆಯನ್ನು ಮಿತಿಯಲ್ಲಿರಿಸಿಕೊಳ್ಳುವುದು ಸೂಕ್ತವಾಗಿದೆ.

೧) ಅದಕ್ಕಾಗಿ ನಮ್ಮ ಅಶಿಕ್ಷಿತರು ಧರ್ಮಾಂಧತೆ, ಮೂಢನಂಬಿಕೆಗಳಿಂದ ಹೊರಬರಬೇಕು.

ಸ್ತ್ರೀ ಶಿಕ್ಷಣ ಹೆಚ್ಚಿಸಬೇಕು. ಅವರಿಗೆ ಮಕ್ಕಳಾಗುವುದು ದೇವರಿಂದಲ್ಲವೆಂಬ ಅರಿವು ಬರಬೇಕು. ಯಾರೇ ಆಗಲಿ **'ಮನೆಗೊಂದು ಮಗು'** ವೆಂಬ ನೀತಿಯನ್ನು ಪಾಲಿಸಬೇಕಾಗಿದೆ.

೨) ಅವಿದ್ಯಾವಂತರಿಗೆ ಈ ತಿಳುವಿನಶಿಕ್ಷಣ ನೀಡಲು ವಿವಿಧಾಕರ್ಷಕ ಸಂಪರ್ಕ ಮಾಧ್ಯಮಗಳಿಂದ ಜನರನ್ನು ಎಚ್ಚರಿಸಿ, ತ್ವರಿತವಾಗಿ ಜಾಗ್ರತಗೊಳಿಸಬೇಕಾಗಿದೆ. ಯಾವ ಧರ್ಮವೂ ಮಕ್ಕಳನ್ನು ಪಡೆಯುವುದು ಧರ್ಮದ ಅಂಗವೆಂದು ಹೇಳಿಲ್ಲ. ತಮ್ಮ ಮಕ್ಕಳ ಸಂಖ್ಯೆ ಹೆಚ್ಚಿದರೆ ತಮಗೆ ಶೂಲವಾದೀತೆಂಬ ಭಾವನೆಯನ್ನು ಚಲನಚಿತ್ರಗಳಿಂದ ಮುಗ್ಧರಗಮನ ಸೆಳೆಯಬೇಕು.

೩) ಸ್ತ್ರೀಯರಂತೆ ಪುರುಷರೂ ಸಂತಾನಹರಣ ಸಾಧನಗಳನ್ನು ನಿಸ್ಸಂಕೋಚವಾಗಿ ಬಳಸಲು ಪ್ರಚಾರ ಮಾಡಬೇಕು. ಹಳ್ಳಿಹಳ್ಳಿಗಳಲ್ಲಿ **ಸಂತಾನನಿರೋಧಕ** ಸಾಮಗ್ರಿಗಳು ದೊರಕುವಂತಾಗಬೇಕು. ಅವುಗಳ ಪ್ರಚಾರವೂ ಹೆಚ್ಚಾಗಬೇಕಾಗಿದೆ.

೪) ಬಾಲ್ಯವಿವಾಹ, ಬಹುಪತ್ನಿತ್ವಗಳ ದುಷ್ಪರಿಣಾಮಗಳನ್ನು ಮನವರಿಕೆ ಮಾಡಿ, ಅವುಗಳನ್ನು ತಡೆಯಬೇಕು.

೫) ಅಶಿಕ್ಷಿತರಿಂದಲೇ ಜನಸಂಖ್ಯೆ ಏರುತ್ತಿದೆ. ಅವರಿಂದ ಅವಿದ್ಯಾವಂತರ, ಅನಾಗರಿಕರ ಸಂಖ್ಯೆ ಏರದಂತೆ ಮಾರ್ಗೋಪಾಯಗಳನ್ನು ಹಾಕಿಕೊಳ್ಳಬೇಕಿದೆ. ಜನರಲ್ಲಿ ಹೆಚ್ಚು ಮಕ್ಕಳನ್ನು ಪಡೆಯುವುದು ಗೌರವವಲ್ಲವೆಂಬ ಭಾವನೆ ಮೂಡಬೇಕಾಗಿದೆ.

೬) ಇಂದಿನ ಮಕ್ಕಳಿಗೆ ನಾಳಿನದುಃಸ್ಥಿತಿಯ ಅರಿವು ಮೂಡಿಸಬೇಕಾಗಿದೆ. ಅವರೇ ತಂದೆತಾಯಿಗಳಿಗೆ ಎಚ್ಚರಿಸುವಂತಾಗಬೇಕಾಗಿದೆ.

೭) ಮಿತಿಮೀರಿದ ಮಕ್ಕಳನ್ನು ಪಡೆದವರಿಗೆ ವಿನಾಯ್ತಿ, ಸೌಲಭ್ಯಗಳನ್ನು ಕೊಡಲಾಗದು, ಎಂದು ಖಾಯಿದೆ ತಂದು ಪ್ರಚಾರಮಾಡಬೇಕು. ಅದೇ ರೀತಿ ಮಿತಸಂತಾನದಲ್ಲಿ ಭಾಗಿಯಾದವರನ್ನು ಪ್ರೋತ್ಸಾಹಿಸಬೇಕಾದುದು ಅನಿವಾರ್ಯವಾಗಿದೆ.

ಒಟ್ಟಿನಲ್ಲಿ ರಾಷ್ಟ್ರದ ಮಿತಿಮೀರಿ ಜನಸಂಖ್ಯೆಯಿಂದ ಆಗುತ್ತಿರುವ ಅನಾಹುತಗಳನ್ನು ವಿವಿಧಸಂಘ-ಸಂಸ್ಥೆಗಳು, ಶಿಕ್ಷಕರು, ಶ್ರಮಿಕಸಂಘಟನೆಗಳು ಎಚ್ಚರಿಸಿ ಜಾಗ್ರತರನ್ನಾಗಿ ಮಾಡಬೇಕು. ಕೇವಲ **'ಜನನಿ ಜನ್ಮಭೂಮಿ ಸ್ವರ್ಗಕ್ಕಿಂತಲೂ ಮಿಗಿಲು'** ಎಂದು ಹೇಳಿದರೆ ಸಾಲದು, ಸರ್ಕಾರದ ಪ್ರಯತ್ನಕ್ಕೆ ಪ್ರತಿಯೊಬ್ಬರೂ ಸ್ಪಂದಿಸಿ ಸಹಕರಿಸಬೇಕಾಗಿದೆ. ನಮ್ಮ ಜನ್ಮಭೂಮಿಯಲ್ಲಿ ಜಗತ್ತಿನ ವಿಸ್ತೀರ್ಣದಲ್ಲಿ ೪ ರಷ್ಟಿದ್ದು, ಜನಸಂಖ್ಯೆಯಲ್ಲಿ ೧೫ ರಷ್ಟಾಗಿದೆ. ಈ ಮಿತ ಸಂತಾನದ ಅರಿವು, ಅಗತ್ಯತೆಗಳನ್ನು ಮನಗಂಡು ರಾಷ್ಟ್ರ ಜಾಗ್ರತಗೊಳ್ಳಬೇಕು. ಇಲ್ಲದಿದ್ದರೆ ನಾಡು ಅನೇಕ ಸಾಮಾಜಿಕ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿ ಅಪಹಾಸ್ಯ, **ಆರ್ಥಿಕ ದಿವಾಳಿತನಕ್ಕೆ** ತುತ್ತಾಗಬೇಕಾಗುತ್ತದೆ.

೨) ವರದಕ್ಷಿಣೆ : ವಿಷಯಾನುಕ್ರಮ : ೧) (ಪೀಠಿಕೆ) ವರದಕ್ಷಿಣೆ ಎಂದರೇನು?

(ವಿಚಾರಾತ್ಮಕ)

೨) ವರದಕ್ಷಿಣೆಯ ಕಾರಣಗಳು.

೩) ಅದರ ದುಷ್ಪರಿಣಾಮಗಳು.

ಳ) ಪರಿಹಾರೋಪಾಯ.

ೞ) ಮುಕ್ತಾಯ (ಉಪಸಂಹಾರ).

ಈ ಸೃಷ್ಟಿಯಲ್ಲಿ ಗಂಡು, ಹೆಣ್ಣು ಸಮಾನವಾಗಿವೆ. ಆದರೂ ಸಮಾಜದಲ್ಲಿ ನಾವು ಒಂದು ಕಾಲದಲ್ಲಿ ಹೆಣ್ಣಿಗೆ ಹೆಚ್ಚುಮನ್ನಣೆ, ಮಹತ್ವ ನೀಡಿ ಪರಿಗಣಿಸಲಾಗಿತ್ತು. ಹಾಗೆಯೇ ಈಗ ಗಂಡಿಗೆಮನ್ನಣೆ, ಮಹತ್ವಗಳು ಹೆಚ್ಚೆಂದು ಛಾಪಿಸಲಾಗುತ್ತಿದೆ. ಹೀಗಾಗಿ ವಿವಾಹದ ವೇಳೆಯಲ್ಲಿ 'ವರ' ನಿಗೆ ದಾಕ್ಷಿಣ್ಯದಿಂದ ಕೇಳದೆ, ವರಪೂಜೆಯ ಸಮಯದಲ್ಲಿ 'ನಾಲ್ಕು ವರಹ' (ನಾಣ್ಯ) ಗಳನ್ನು ಕೊಡುತ್ತಿದ್ದರು. ಏಕೆಂದರೆ ವಸ್ತುವೊಂದನ್ನು ದಾನ ಮಾಡುವಾಗ ಕಾಣಿಕೆ (ದುಡ್ಡು) ಯಿಟ್ಟು ಕೊಡಬೇಕೆಂಬ ಶಾಸ್ತ್ರಪದ್ಧತಿಯಿತ್ತು. ಹಾಗೆಯೇ ಕನ್ಯಾದಾನ ಮಾಡುವಾಗ ಗಂಡಿಗೆ ದಕ್ಷಿಣೆಯಿಡುವುದು ಶಾಸ್ತ್ರದಲ್ಲಿಲ್ಲದಿದ್ದರೂ ವ್ಯಾವಹಾರಿಕವಾಗಿ ರೂಢಿಯಲ್ಲಿ ಬಂದಿದೆ. ಇದನ್ನೇ **'ವರೋಪಚಾರ'** ಅಥವಾ **'ವರದಕ್ಷಿಣೆ'** ಯೆಂದು ಕರೆದು ಆಚರಿಸಿಕೊಂಡು ಬರಲಾಗುತ್ತಿದೆ.

ಈ ವರದಕ್ಷಿಣೆಯು ಸಮಾಜದಲ್ಲಿ ಒಂದು ಕೆಟ್ಟಸಮಸ್ಯೆಯಾಗಿ ಬೆಳೆಯಲು ಬೇರೆ ಕಾರಣಗಳಿವೆ: ಹೆಣ್ಣಿನತಂದೆತಾಯಿಗಳು ತಮ್ಮಮಗಳು ಗಂಡನ ಮನೆಯಲ್ಲಿ ಸುಖವಾಗಿರಲೆಂಬುದು. ಕೆಲವರು **'ಅವರು ಮಾಡುತ್ತಾರೆ. ನಾನೂ ಹಾಗೆ ಮಾಡಬೇಕೆಂಬ'** ಅಂಧಾನುಕರಣೆಯಿಂದ ಕೊಡುತ್ತಾರೆ. ಅದು ಹಣದರೂಪದಲ್ಲಿರದೆ ಅನೇಕ ವಸ್ತು, ವಾಹನ, ಭೂಮಿ, ಬಂಗಲೆ ಇತ್ಯಾದಿಗಳರೂಪಕ್ಕೆ ತಿರುಗಿದೆ. ಇಂದೂ ಹಳ್ಳಿಗಳಲ್ಲಿ ಹಸುವೊಂದನ್ನಾದರೂ ಹೆಣ್ಣಿನಜೊತೆ ಬಳುವಳಿಯಾಗಿ ಕೊಡುವ ರೂಢಿಯಿದೆ. ದಿನಗಳು ಕಳೆದಂತೆ ವರದಕ್ಷಿಣೆ ಕೆಟ್ಟ ಸಂಪ್ರದಾಯವಾಗಿ ಏರ್ಪಟ್ಟಿತು. ಕೊಟ್ಟಹಣ ಕೊನೆಯವರೆವಿಗೂ ಬರುವುದಿಲ್ಲವೆಂಬುದು ತಿಳಿದಿದ್ದರೂ ಮಗಳ ಮೇಲಿನ ಮೋಹದಿಂದ ಕಣ್ಣುಮುಚ್ಚಿಕೊಂಡು ಕೊಡುತ್ತಾರೆ.

ಇತ್ತೀಚೆಗೆ ಗಂಡಿನ ವಿದ್ಯೆ, ಸ್ಥಾನ, ಪ್ರತಿಷ್ಠೆಗಳಿಗೆ ಮಾರು ಹೋಗುವ ತಂದೆತಾಯಿಗಳನ್ನು ನೋಡಿ, ಬೇಡ ಬೇಡ!ವೆನ್ನುತ್ತಲೇ ತೆಗೆದುಕೊಳ್ಳುವ ಗಂಡುಗಳೂ, ಕೇಳಿಪಡೆಯುವ ವಂಚಕರೂ ಇದ್ದಾರೆ. ಹಣ, ಕಾರು, ಸ್ಕೂಟರು ಅಲ್ಲದೆ ಮನೆಗಾಗುವ ಪಾತ್ರೆಗಳನ್ನೂ ಕೊಡಬೇಕೆಂಬ ನಿಯಮ ಕೆಲವು ಜನಾಂಗಗಳಲ್ಲಿ ಈಗಲೂ ಬೇರೂರಿದೆ. ಪಡೆವವರ ಅಪೇಕ್ಷೆ ದಿನೇ ದಿನೇ ಹೆಚ್ಚಾಗುತ್ತಿದೆ. ಇರುವವರು ಕೊಡಬಹುದು. ಇಲ್ಲದವರ ಗತಿಯೇನು? ಅವರು ವರದಕ್ಷಿಣೆಯೆಂಬ ಬಿರುಗಾಳಿಗೆ ಸಿಕ್ಕಿ ನರಳುತ್ತಿದ್ದಾರೆ. ಹೆತ್ತ ಹೆಣ್ಣುಗಳನ್ನು ಕಳುಹಿಸಲು ಆಸ್ತಿ ಮಾರಿಯೋ, ಅಡವಿರಿಸಿಯೋ ಸಾಲಮಾಡಿಯೋ ಕೊಡುತ್ತಾರೆ. ಮುಂದಿನ ಅವರ ಜೀವನದ ಕಷ್ಟಕಾರ್ಪಣ್ಯ, ಯಾತನೆ ಕೇಳುವವರಾರು?.

ದುಷ್ಪರಿಣಾಮಗಳು : ಗಂಡುಗಳ ಆಸೆಗೆ ಮಿತಿಯಿಲ್ಲ. ಅವರ ಯೋಗ್ಯತೆ, ಗುಣಗಳನ್ನು ನೋಡಿ ವಿಚಾರಮಾಡಿ ಕೊಡುವುದಿಲ್ಲ. ತಮ್ಮ ಕರುಳ ಬಳ್ಳಿಯನ್ನು ಕೇವಲ ವ್ಯವಹಾರದ ವಸ್ತುವಿನಂತೆ ಕೊಟ್ಟು ಶ್ರೀಮಂತರಾದಿಯಾಗಿ ಕಣ್ಣಿನಲ್ಲಿ ರಕ್ತಸುರಿಸುವವರಿದ್ದಾರೆ. ಕೆಲವು ಹೀನ, ಷಂಡಗಂಡುಗಳು ಆತ್ಮಾಭಿಮಾನ ತೊರೆದು ವಿವಾಹದ ನಂತರವೂ ಹಣ, ವಸ್ತು

ಇವುಗಳನ್ನು ದೋಚಲು, ಪೀಡಿಸುತ್ತಾರೆ. ದುಡಿದುಸಾಕುವ ಹೊಣೆಗಾರಿಕೆ ತೋರದೆ, ಹೀನವಾಗಿ ವರ್ತಿಸುತ್ತಾರೆ. ತರಲಾಗದೇ ಹೋದರೆ, ದಿನವಿಡೀ ಹಿಂಸೆ, ಹೀಯಾಳಿಸುವುದು, ಸಾಮಾನ್ಯವಾಗಿದೆ. ಮಾನವೀಯತೆಯಿಲ್ಲದ ಕೈ ಹಿಡಿದ ಹೆಣ್ಣುಗಳನ್ನು ಸುಟ್ಟು ಸಾಯಿಸಲು ಯತ್ನಿಸುತ್ತಾರೆ. ಕೆಲವು ಸಾಧ್ವಿಹೆಣ್ಣುಮಕ್ಕಳು ತಾಳದೆತಮ್ಮ ಮಕ್ಕಳೊಂದಿಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಇಂದೂ ಸಹ ಇಂತಹ ವಿಫುಲಯತ್ನಗಳು ನಡೆಯುತ್ತಿವೆ. ಈ ದುಷ್ಕೃತ್ಯಗಳಿಗೆ ಗಂಡಿನ ತಂದೆತಾಯಿಗಳೂ ಸೇರಿಕೊಂಡ ನಿದರ್ಶನಗಳು ಸಾಕಷ್ಟಿವೆ. ವಿದ್ಯಾವಂತರಲ್ಲೇ ಈ ಕೃತ್ಯಗಳು ಹೆಚ್ಚಾಗುತ್ತಿರುವುದು ನಾಡಿನ ದೌರ್ಭಾಗ್ಯ. ವರದಕ್ಷಿಣೆ ಹೀಗೆ ಸಮಾಜದ ಒಂದು ಪಿಡುಗಾಗಿ ಪರಿಣಮಿಸಿ, ಸಂಬಂಧಿಸಿದವರೆಲ್ಲರನ್ನು ಹಿಂಸಿಸುತ್ತಿದೆ. ಹೀಗಾಗಿ **'ಹೆಣ್ಣಿನ ಭ್ರೂಣಹತ್ಯೆ', 'ಹೆಣ್ಣು ಸಂತಾನದ ಶೋಷಣೆ'** ಇತ್ಯಾದಿ ಅನೇಕ ಹೊಸ ಸಮಸ್ಯೆಗಳ ಉದಯಕ್ಕೆ ಕಾರಣವಾಗುತ್ತಿದೆ.

ನಿವಾರಣೋಪಾಯ : ಈ ಸಮಾಜದ ಹೇಯವಾದ, ಅವಮಾನಕರವಾದ ಈ ರೋಗವನ್ನು ಕಿತ್ತುಹಾಕಲು ನಾವೆಲ್ಲರೂ ಪಣತೊಟ್ಟು ಎಚ್ಚರಗೊಳ್ಳಬೇಕಾಗಿದೆ. ಸರ್ಕಾರವು ೧೯೬೧ ರಲ್ಲಿ **'ವರದಕ್ಷಿಣೆ ನಿಷೇಧ'** ಕಾಯಿದೆಯನ್ನು ಜಾರಿಗೆ ತಂದಿತು. ನಂತರ ೧೯೮೪ ರಲ್ಲಿ ಕೆಲವು ತಿದ್ದುಪಡಿಯನ್ನೂ ಮಾಡಲಾಯ್ತು. ಅದರಂತೆ ವರದಕ್ಷಿಣೆ ಕೊಡುವುದು, ತೆಗೆದುಕೊಳ್ಳುವುದು ಕಾನೂನುಬಾಹಿರವಾಗುತ್ತದೆ. ಹೀಗಿದ್ದರೂ ನ್ಯಾಯವಾದಿಗಳೆನಿಸಿ ದವರೂ ಸಹ ಹೇಳಿದಂತೆ ಮೌನವಾಗಿ ಕಣ್ಮುಚ್ಚಿ ಕೊಡುವ ತೆಗೆದುಕೊಳ್ಳುವುದರಲ್ಲಿ ತೊಡಗಿದ್ದಾರೆ. ಹೀಗಿರುವ ಪ್ರಸಂಗಗಳಲ್ಲಿ ನ್ಯಾಯಾಲಯದಲ್ಲಿ ಸರಿಯಾದ ಸಾಕ್ಷಿ ಹೇಳುವವರಿಲ್ಲದೆ ವರದಕ್ಷಿಣೆ ಅಪರಾಧಿಗಳು ತಪ್ಪಿಸಿಕೊಳ್ಳುತ್ತಿದ್ದಾರೆ. ಅಮಾಯಕ ಮುಗ್ಧ ಹೆಣ್ಣುಮಕ್ಕಳು ಹೇಗೋ ತಮ್ಮ ಗೋಳಿನ ಬಾಳನ್ನು ನೂಕುತ್ತಿದ್ದಾರೆ.

ಇಂದಿನ ಸಮಾಜದಲ್ಲಿ ಎಲ್ಲರೂ ಜಾಗ್ರತರಾಗಬೇಕಾಗಿದೆ. ಹೆಣ್ಣುಮಕ್ಕಳಿಗೆ ವಿಶೇಷವಾದ ಶಿಕ್ಷಣ ವ್ಯವಸ್ಥೆಯಾಗಬೇಕು. ಅವರಿಗೆ ಸ್ವಾವಲಂಭಿಗಳಾಗಿ ಬದುಕುವಶಿಕ್ಷಣ ಸಿಗಬೇಕು. ವರದಕ್ಷಿಣೆ ಕೇಳುವವರನ್ನು ವಿವಾಹವಾಗುವುದಿಲ್ಲವೆಂಬ ದಿಟ್ಟತನ ಬರಬೇಕಾಗಿದೆ. ತಂದೆತಾಯಿಗಳು ಅಂತಹ ಹೆಣ್ಣುಗಳ ನಿರ್ಧಾರಮೀರಿ ತಮ್ಮತಲೆಯ ಮೇಲಿನ ಹೊಣೆಯಿಂದ ತಪ್ಪಿಸಿಕೊಳ್ಳೋಣವೆಂಬ ಬೇಜವಾಬ್ದಾರಿತನದಿಂದ ದೂರವಾಗಬೇಕಾಗಿದೆ. ಹೆಣ್ಣಿಗೆ ತಂದೆಯ ಆಸ್ತಿಯ ಹಕ್ಕುಲಭಿಸಿದೆ. ಹೆಣ್ಣು ಎಲ್ಲರಂಗಗಳಲ್ಲೂ ತನ್ನಶಕ್ತಿ ಸಾಮರ್ಥ್ಯಗಳನ್ನು ತೋರಿಸುತ್ತಿದ್ದಾಳೆ. ಅವರು ಆತ್ಮಗೌರವದಿಂದ ಬದುಕಲು ಸಮಾಜದ ಇತರರು ಸಹಾನುಭೂತಿಯನ್ನು ತೋರಬೇಕಾಗಿದೆ. ಗಂಡುಗಳಲ್ಲಿ ವರದಕ್ಷಿಣೆ, **'ಸಮಾಜದ್ರೋಹದ ನಡವಳಿಕೆ'** ಎಂಬ ಭಾವನೆ ಮೂಡಬೇಕಾಗಿದೆ. ಸಮಾಜ ವರದಕ್ಷಿಣೆದಾಹಕ್ಕೆ ಸಿಕ್ಕಿದ, ಹಿಂಸಿಸುವ ಗಂಡುಗಳನ್ನು ಗುರುತಿಸಿ ಛೀಮಾರಿ ಹಾಕಬೇಕಿದೆ.

ಸಾರ್ವಜನಿಕರು ನ್ಯಾಯಾಲಯಗಳಲ್ಲಿ ಈ ಅಪರಾಧಿಗಳು ಜಾರಿಕೊಳ್ಳದಂತೆ ಸಾಕ್ಷಿ ಹೇಳಿ, ಅವರಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು. ಹೆಣ್ಣುಗಳ ತಂದೆತಾಯಿಗಳು ಹೆಣ್ಣನ್ನು ಮಾನವೀಯ ದೃಷ್ಟಿಯಿಂದ ನೋಡಿ ಗುಣವಂತನಿಗೇ ಮದುವೆ ಮಾಡಬೇಕು.

ಗಂಡುಗಳಿಗೆ ಆಸೆತೋರಿಸಬಾರದು. ಮದುವೆ ಮಾಡಿಕೊಟ್ಟ ಮಗಳಲ್ಲಿ ಅತಿ ಸಂಬಂಧವಿರಿಸಿಕೊಳ್ಳುವುದು ಸಲ್ಲದು. ಅನ್ಯರಂತೆ ನಾವೂ ಮಾಡಬೇಕೆಂಬ ಚಾಪಲ್ಯವನ್ನು ಬಿಡಬೇಕು. ಪುರುಷರಾದವರು ತಮ್ಮ ಸ್ವಾಭಿಮಾನವನ್ನು ಮಾರಿಕೊಂಡು ಜೀವವಿರುವ ಶವಗಳಾಗಬಾರದು. ಅವರು ವಿಚಾರವಂತರಾಗಬೇಕಾಗಿದೆ. ಮಹಿಳಾ ಸಂಘಟನೆಗಳು ಹೆಚ್ಚು ಹೆಚ್ಚಾಗಿ ಈ ಸಮಸ್ಯೆಗೆ ಚಿಕಿತ್ಸಕ ಬುದ್ಧಿಯಿಂದ ನಿವಾರಣೋಪಾಯಗಳನ್ನು ಕಂಡುಕೊಳ್ಳಬೇಕಾಗಿದೆ.

ವರದಕ್ಷಿಣೆಯೆಂಬುದು ಬಡವ-ಬಲ್ಲಿದರೆನ್ನದೆ ಎಲ್ಲರನ್ನೂ ಸುಡುವ ಅಗ್ನಿ ಸಮಾನವಾಗಿದೆ. ಮುಗ್ಧಹೆಣ್ಣುಮಕ್ಕಳು ಬಾಯ್ಮುಚ್ಚಿ ಸಂಕಟ ಸಹಿಸಿಕೊಂಡು, ಸಮಾಜದ ಅಭಿವೃದ್ಧಿಗೆ ಅಡ್ಡಿಯಾಗಿದ್ದಾರೆ. ಇದರಿಂದ ಬಾಲಾಪರಾಧಿಗಳು, ಕೊಲೆಗಡುಕರು, ಕಳ್ಳರು, ವೇಶ್ಯೆಯರು ಇತ್ಯಾದಿಗಳಿಂದ ಸಮಾಜದ ಏಳ್ಗೆಗೆ ತೊಡಕಾಗಿವೆ. ಜನಜಾಗ್ರತರಾಗದೆ ಸರ್ಕಾರದಿಂದಲೇ ಎಲ್ಲವೂ ಆಗಲಿ! ಎಂಬ ನಿರೀಕ್ಷೆ ತೊಲಗಬೇಕು. ಅನೇಕ ಸಂಘಸಂಸ್ಥೆಗಳು, ಮಹಿಳಾ ವೇದಿಕೆಗಳು ಸಂಘಟಿತರಾಗಿ ಅತ್ಯಂತ ಜಾಗರೂಕತೆಯಿಂದ ಈ ಸಮಸ್ಯೆಗಳನ್ನು ನಿವಾರಿಸಲು ಎಲ್ಲರೂ ಶ್ರಮಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕಾಗಿದೆ.

೩. ಪರಿಸರ ಮಾಲಿನ್ಯ (ವಿಚಾರಾತ್ಮಕ)

ನಾವು ಜಗತ್ತಿನ ನಡುವೆ ಬಾಳುವವರು. ಜಗತ್ತಿನಲ್ಲಿನ ಭೂಮಿ, ಜಲ, ವಾಯು, ಆಕಾಶ ಇವುಗಳನ್ನು 'ಪರಿಸರ' ವೆನ್ನುತ್ತೇವೆ. ಪರಿಸರ ಚೆನ್ನಾಗಿದ್ದರೆ ನಾವು ಚೆನ್ನಾಗಿರಲು ಸಾಧ್ಯ. ಇಲ್ಲದೇ ಹೋದರೆ ನಮಗೆ ಉಳಿಗಾಲವಿಲ್ಲ. **'ಪರಿಸರವು ಪರಮಾತ್ಮನ ರೂಪ'**. ಅದು ದೇವರು ನೀಡಿದ ಪ್ರಸಾದ. ಅದನ್ನು ನಾವು ಕೆಡಿಸಿದರೆ, ದೈವದ ಮುನಿಸು. ಎಲ್ಲ ಜೀವಿಗಳು ಪ್ರಾಣಕ್ಕೆ ಸಂಕಟ ಏಕಕಾಲದಲ್ಲಿ ಉಂಟಾಗುತ್ತದೆ. ಆದ್ದರಿಂದ ಅದರ ಮಹತ್ವ ಹಿರಿದಾಗಿದೆ. ಅಭಿವೃದ್ಧಿ-ಪರಿಸರ ತೀರಾಸಂಬಂಧವಾದವು. ಪ್ರತಿಯೊಂದು ಜೀವಕ್ಕೂ ಬೆಲೆಯಿದೆ. ಅವುಗಳಉಳಿವು, ಅಳಿವು **ಪರಿಸರ**ವನ್ನವಲಂಭಿಸಿದೆ.

ಈ ಪರಿಸರ **ಮಾಲಿನ್ಯಹೇಗೆ? ಯಾರಿಂದ?** ವಿಚಾರಮಾಡಿದರೆ ನಾವುತಲೆ ತಗ್ಗಿಸಬೇಕಾಗುತ್ತದೆ. ಇದರ ಪರಿಹಾರೋಪಾಯಗಳನ್ನು ಕುರಿತು ವಿಚಾರ ಮಾಡಬೇಕಾಗಿದೆ. ಪರಿಸರವು **ನಾಲ್ಕು ರೀತಿ**ಯಲ್ಲಿ ಮಲಿನಗೊಳ್ಳುತ್ತದೆ. ಅ) **ಜಲಮಾಲಿನ್ಯ.** ಆ) **ವಾಯು ಮಾಲಿನ್ಯ.** ಇ) **ಶಬ್ದಮಾಲಿನ್ಯ.** ಈ) **ಭೂಮಾಲಿನ್ಯ**(೧).

೧) ಜಲಮಾಲಿನ್ಯ : ನೀರು ಪ್ರತಿಯೊಂದು ಜೀವಿಗೂ ಮೂಲಾಧಾರವಾದುದು. ಅದರ ಮಹತ್ವವನ್ನು ನಾವು ಅರಿತು ಉದಾಸೀನರಾಗಿದ್ದೇವೆ. ಭೂಮಿಯಲ್ಲಿ ಅಂತರ್ಜಲ ಮಟ್ಟ ಕಡಿಮೆಯಾಗಿದೆ. ಇರುವನೀರಿನ ಶೇ. ೭೧ ರಷ್ಟರಲ್ಲಿ ಕುಡಿಯಲರ್ಹವಾದುದು ಕೇವಲ **ಶೇ. ೫** ರಷ್ಟು ಮಾತ್ರ. ವಿದೇಶೀಯರ ಅಭಿಪ್ರಾಯದಲ್ಲಿ ಭಾರತದಲ್ಲಿ ಕುಡಿಯಲು ಯೋಗ್ಯ ನೀರೇಯಿಲ್ಲವಂತೆ. ಆ ಅಲ್ಪ ಪ್ರಮಾಣದ ನೀರನ್ನು ಮಲಮೂತ್ರಗಳಿಂದ, ಕಾರ್ಖಾನೆಗಳ

ತ್ಯಾಜ್ಯ ವಸ್ತುಗಳಿಂದ ಮಲಿನಗೊಳಿಸುತ್ತಿದ್ದೇವೆ. ಕೊಳವೆ ಬಾವಿಯಲ್ಲಿನ ನೀರೂ ವಿಷಕಾರಕ ರಾಸಾಯನಿಕ ವಸ್ತುಗಳಿಂದ ಕಲುಷಿತಗೊಳ್ಳುತ್ತಿದೆ. ಕೆರೆ, ನದಿ, ಹೊಳೆಗಳ ನೀರು ಹೊಲಸಾಗುತ್ತಿದೆ.

ಹಿಂದೆ ನೀರಿನಿಂದಾದ ಅನಾಹುತಗಳೇ ಮಾಸಿಲ್ಲ. ಸಮುದ್ರದ ಮೀನುಗಳನ್ನು ತಿಂದು **'ಮಿನಿಮಟಾ'** ರೋಗಕ್ಕೆ ತುತ್ತಾದರು. **'ಕಾಲುಬೇನೆ'** ರೋಗಗಳಿಂದ ನರಳಿದರು. ಸೂರತ್ ನಗರ **'ಸಾಂಕ್ರಾಮಿಕ ಪ್ಲೇಗ್'**ರೋಗ ಅನುಭವಿಸಿತು. ಇಂದೂ ನದಿಗಳನೀರು ವಿಷಮಯವಾಗುತ್ತಿದೆ. ಸಮುದ್ರದಲ್ಲಿ ತೈಲಸೋರಿ ಅನೇಕ ಜಲಚರಗಳೂ, ಪಕ್ಷಿಗಳು ತತ್ತರಿಸಿ ಸತ್ತದ್ದನ್ನು ಕಂಡೆವು. ಇಂದೂ ಮೀನುಗಾರರು ಕೈ ಚಾಚುತ್ತಿದ್ದಾರೆ. ಹೀಗಾದರೆ ನಮ್ಮ ನಾಡು ಮರುಭೂಮಿಯೆನಿಸಿ, ನಮ್ಮ ನಾಶವನ್ನು ನಾವೇ ಮಾಡಿಕೊಂಡಂತಾಗುವುದಿಲ್ಲವೇ?.

ಜಲಮಾಲಿನ್ಯದ **'ನಿವಾರಣೆ'**ಗಾಗಿ ಕೆಲವು ಉಪಾಯಗಳನ್ನು ಅನುಸರಿಸಬೇಕಾಗಿದೆ: ೧) ಕೈಗಾರಿಕೆಯ ಕಲುಷಿತ ನೀರನ್ನು ಪೋಲು ಮಾಡದೆ, ಶುದ್ಧಗೊಳಿಸಿ, ಪುನಃ ಬಳಸುವುದು. ೨) ಇಂಗುದಾಣಗಳನ್ನು ನಿರ್ಮಿಸಿ ಅಂತರ್ಜಲ ಹೆಚ್ಚಿಸಬೇಕು. ೩) ಇರುವ ಶುದ್ಧನೀರಿನ ಮಹತ್ವತಿಳಿದು ಹಿತಮಿತವಾಗಿ ಬಳಸುವುದು. ೪) ವಿಷಕಾರಕ ರಾಸಾಯನಿಕ ಪದಾರ್ಥಗಳನ್ನು ದೂರಮಾಡಿ, ಮಲಿನಗೊಳಿಸದಂತೆ ಎಚ್ಚರ ವಹಿಸಬೇಕು.

೨) ವಾಯುಮಾಲಿನ್ಯ : ವಾಯುವು ಜೀವಿಗಳಿಗೆ ಅತ್ಯಗತ್ಯವಾದುದಾಗಿದೆ. ಈ ವಾಯುವಿನಲ್ಲಿ ವಾಹನಗಳು ಹೊರಬಿಡುವ ಹೊಗೆಸೇರುತ್ತಿದೆ. ಜೀವಿ ಒಂದು ನಿಮಿಷವೂ ವಾಯುವಿಲ್ಲದೆ ಜೀವಿಸಲಾರದು. ಕಾರ್ಖಾನೆಯ ಹೊಗೆ, ಕೊಳೆತ ಕಸಗಳಿಂದ ಪ್ರಾಣಾಧಾರ ವಾದಗಾಳಿ ಮಲಿನಗೊಳ್ಳುತ್ತಿದೆ. ಅದರಲ್ಲಿ ಸಿ.ಎಫ್.ಸಿಯಂತಹ ವಿಷಾಅನಿಲಗಳು **'ಓಜೋನ್'** ಪದರವನ್ನು ತೂತುಮಾಡುತ್ತವೆ. ಸೂರ್ಯನ ವಿಷಕಾರಕ ಕಿರಣಗಳು ಭೂಮಿಯನ್ನು ಸೇರಿ ಜೀವಿಜಗತ್ತು ನಾಶವಾಗುವ ಸಾಧ್ಯತೆಯಿದೆ. ಇಂಗಾಲಾಮ್ಲವು ಅಧಿಕವಾಗಿ, ತಾಪಮಾನ ಕಡಿಮೆಯಾಗುವ ಸಾಧ್ಯತೆಯಿದೆ. ಹಾಗಾದಾಗ ಹಿಮಗಡ್ಡೆಗಳು ಕರಗಿ, ಮಳೆಬರದೆ ಭೂಮಿಯೆಲ್ಲಾ ಮರುಭೂಮಿಯಾಗುವ, ಭಯವಿದೆಯೆಂದು ವಿಜ್ಞಾನಿಗಳು ಎಚ್ಚರಿಸುತ್ತಿದ್ದಾರೆ. ತಾವು ಸೇವಿಸುವ ಗಾಳಿ ವಿಷಮಯವಾಗಿರುವುದರಿಂದ ವರ್ಷಕ್ಕೆ ೫ ಲಕ್ಷಮಂದಿ ಸಾಯುತ್ತಿದ್ದರು. ಈಗ ೨೦ ಲಕ್ಷಮಂದಿ ಸಾಯುತ್ತಿದ್ದಾರೆಂದು ಒಂದು ಸಮೀಕ್ಷೆ ತಿಳಿಸುತ್ತಿದೆ. ಇತ್ತೀಚೆಗೆ **'ಡೆಂಗೆಜ್ವರ'**, **'ಶ್ವಾಸಕೋಶ'**ದ ಹಾಗೂ **'ಮೆದುಳು'** ಖಾಯಿಲೆಗಳು **'ಏಡ್ಸ್'** ರೋಗಗಳು ಹೆಚ್ಚಾಗುತ್ತಿವೆ. ಹಾರ್ಮೋನುಗಳ ವಿಕಾರ, ವೀರ್ಯನಾಶ ಇತ್ಯಾದಿ ಅನಾಹುತಗಳಾಗುತ್ತಿವೆ. ಗುರುತಿಸಲಾಗದ ಚಿತ್ರವಿಚಿತ್ರ ರೋಗಗಳು ಮನುಷ್ಯನಿಗೆ ಮಾತ್ರವಲ್ಲ ಜೀವಿಜಗತ್ತಿಗೂ ಆಕ್ರಮಿಸಿಕೊಳ್ಳುತ್ತಿದೆ. ಈ ಚಿತ್ರವಿಚಿತ್ರ ರೋಗಗಳಿಂದ ದೇಶದಲ್ಲಿ ಸುಮಾರು ೫೨,೦೦೦ ಜನ ಗೊತ್ತಿಲ್ಲದರೋಗದಿಂದ ಸಾಯುತ್ತಿದ್ದಾರೆಂದು ಅಧಿಕೃತ ಸಮೀಕ್ಷೆ ತಿಳಿಸುತ್ತದೆ.

---

(೧) 'ಪರಿಸರ ಮಾಲಿನ್ಯ' ವನ್ನು ವಿಂಗಡಿಸಿ ವಿಸ್ತರಿಸಲಾಗಿದೆ. ಇವುಗಳಿಗೆ ಪ್ರತ್ಯೇಕವಾಗಿ ಇದೇ ಪೀಠಿಕೆ ಮುಕ್ತಾಯಗಳಿಂದ ಬೇರೆ ಬೇರೆ ನಾಲ್ಕು ಪುಟ್ಟಪ್ರಬಂಧಗಳನ್ನಾಗಿ ವಿಂಗಡಿಸಿ ಬರೆಯಬಹುದು.

ಅಂತೂ ವಾಯುಮಾಲಿನ್ಯದಿಂದ ಮಳೆ, ತಾಪಮಾನಗಳ ಮೇಲೆ ತೀವ್ರಪರಿಣಾಮವಾಗುತ್ತಿವೆ. ಸಾಮಾಜಿಕ ಸ್ವಾಸ್ಥ್ಯವು ಹಾಳಾಗುತ್ತಿದೆ. ಜೀವಿ ಜಗತ್ತಿಗೆ ಅಪಾಯವಾಗುವ ಸಂಭವಪಿದೆ. ಅಂತೂ ಇದರಿಂದ ಸರ್ವನಾಶವೆಂದೇ ಹೇಳಬೇಕಾಗುತ್ತದೆ.

ಈ ಅಪಾಯಗಳಿಂದ ತಪ್ಪಿಸಿಕೊಳ್ಳಲು ಕೆಲವು **ನಿವಾರಣೋಪಾಯುಗಳನ್ನು ಸೂಚಿಸಬಹುದು:** ೧) ರಾಸಾಯನಿಕ ಹೊಗೆಯನ್ನು ವಾಯು ಮಂಡಲಕ್ಕೆ ಬಿಡಬಾರದು. ಈ ನಿಯಂತ್ರಣ ಕಡ್ಡಾಯವಾಗಿ ಮಾಡಬೇಕಿದೆ. ೨) ಮನೆಗಳ ಹಿಂದೆಮುಂದೆ, ವ್ಯರ್ಥ ಭೂಮಿಗಳಲ್ಲಿ (ಶೇ.೩೩) ಕಾಡು ಬೆಳೆಸಲು ಪ್ರಯತ್ನಿಸಬೇಕು. ೩) ವಾಹನಗಳಲ್ಲಿ **'ಕಾರ್ಬನ್ ಮಾನಾಕ್ಸೈಡ್'** ನಿಗದಿತ ಪ್ರಮಾಣಕ್ಕಿಂತ ಹೆಚ್ಚಾಗದಂತೆ ಎಚ್ಚರವಹಿಸುವುದು. ೪) ವಾಯುಮಂಡಲವನ್ನು ಕಲುಷಿತಗೊಳಿಸುವ **'ಓಜೋನ್'** ಪದರ ನಾಶಕಾರಕ ಅನಿಲ ತಯಾರಿಕೆಯನ್ನು ತಡೆಯಬೇಕಾಗಿದೆ. ೫) ವಿಕಿರಣ ಮಾಲಿನ್ಯವನ್ನು ನಿಯಂತ್ರಿಸಲೇಬೇಕಾಗಿದೆ. ೬) ಕಾರ್ಖಾನೆಗಳಹೊಗೆ, ದೂಳನ್ನು ನಿಯಂತ್ರಿಸುವ ಆಧುನಿಕಯಂತ್ರಗಳನ್ನು ಅಳವಡಿಸಬೇಕಾಗಿದೆ.

೩) **ಶಬ್ದಮಾಲಿನ್ಯ :** ಪರಿಸರದಲ್ಲಿನ ಶಬ್ದಮಾಲಿನ್ಯ ಹೆಚ್ಚಾಗುತ್ತಿದೆ. ಇದನ್ನು ಸಾಮಾನ್ಯವೆಂದು ಉದಾಸೀನ ಮಾಡುವಂತಿಲ್ಲ. ವಾಹನಗಳ ಕರ್ಕಶವಾದ ಹಾರ್ನ್‌ಗಳಶಬ್ದ. ಸಿಡಿಮದ್ದು ಸ್ಫೋಟ-ಧ್ವನಿ, ಪೂಜೆ-ಸಭೆ, ಸಮಾರಂಭಗಳ ಧ್ವನಿವರ್ಧಕಗಳಿಂದ, ಹಿಟ್ಟಿನಗಿರಣಿ, ಪಾತ್ರೆತಯಾರಿಕೆ ಕೇಂದ್ರಗಳು, ಉಕ್ಕು, ಕಬ್ಬಿಣಗಳಲ್ಲಿ ಯರಕಹುಯ್ಯುವ, ಲೋಹ ಕತ್ತರಿಸುವ ಕಾರ್ಖಾನೆಗಳು ಮತ್ತು ಡಾಂಬರ್ ಬೇಯಿಸುವುದು ಇವುಗಳಿಂದ ಶಬ್ದಮಾಲಿನ್ಯ ಉಂಟಾಗುತ್ತದೆ.

ಇದರಿಂದ ನಮ್ಮ ಏಕಾತಾನತೆಗೆ ಭಂಗವಾಗುತ್ತಿದೆ. **ಕಾರ್ಟಿಅಂಗ, ಶೃತಿ ಪೊರೆ** ಇತ್ಯಾದಿ ಸೂಕ್ಷ್ಮಾಂಗಗಳು ಹಾಳಾಗುತ್ತಿವೆ. ನಮ್ಮ ಕಿವಿಯ ತಮಟೆಗೆ ೮೦ ಡೆಸಿಬಲ್ಸ್‌ವರೆಗಿನ ಶಬ್ದವನ್ನು ತಡೆದುಕೊಳ್ಳುವ ಶಕ್ತಿಯಿದೆ. ಅದು ಹೆಚ್ಚಾದರೆ ತಮಟೆ ಒಡೆಯುವ ಸಾಧ್ಯತೆಯಿದೆ. ಮನೆಗಳಲ್ಲಿ ಟೇಪ್‌ರೆಕಾರ್ಡರ್, ಟಿ.ವಿ ಶಬ್ದಗಳು ವೃದ್ಧರ ಮನಸ್ಸಿನ ನೆಮ್ಮದಿಹಾಳು ಮಾಡುತ್ತವೆ. ಕರ್ಕಶವಾದ ಶಬ್ದಗಳನ್ನು ತಡೆದುಕೊಳ್ಳಲಾರದೆ, ಅನೇಕವೃದ್ಧರು ರಕ್ತದೊತ್ತಡ ಮತ್ತು ಹೃದ್ರೋಗಗಳಿಗೆ ಬಲಿಯಾಗುತ್ತಿದ್ದಾರೆ. ಅನೇಕರ ಕೌಟುಂಬಿಕ ಸ್ವಾಸ್ಥ್ಯಕ್ಕೆ ಮೇಲೆ ಪರಿಣಾಮ ಬೀರಿ, ಮನೋವಿಕಲರಾಗುತ್ತಿದ್ದಾರೆ. ಜಿ.ಜೆ. ಬೇರಿಂಗ್, ಜೆ.ಜೆ. ಮಾರ್ಗನ್ ಮೊದಲಾದ ಮನೋವಿಜ್ಞಾನಿಗಳು ವಿಶೇಷ ಅಧ್ಯಾಯನನಡೆಸಿ, ಶಬ್ದಮಾಲಿನ್ಯದಿಂದ ಬೆರಳಚ್ಚು, ಕಂಪ್ಯೂಟರ್ ಮುಂದೆ ಕುಳಿತು ಕೆಲಸ ಮಾಡುವವರಿಗೆ ೨೫ರಷ್ಟು ಹೆಚ್ಚುವರಿಯಾಗಿ ಆಮ್ಲಜನಕ ಬಳಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಸೈರನ್ನಿನ ಚೀತ್ಕಾರದಿಂದ ಇಲಿಗಳನ್ನು ಸಾಯಿಸಬಹುದೆಂದು ತೋರಿಸಿಕೊಟ್ಟಿದ್ದಾರೆ. ಇದರ ಪರಿಣಾಮವಾಗಿ ಸಂವೇದನಗಳಲ್ಲಿ ಏರುಪೇರು, ಶಾರೀರಿಕಕ್ರಿಯೆಗಳ ಮೇಲೆ ಪರಿಣಾಮ, ಹೃದಯಬಡಿತದ ತೀವ್ರತೆ, ರಕ್ತನಾಳಗಳ ಸಂಕೋಚನ, ಚರ್ಮ ಬಿಳಿಚಿಕೊಳ್ಳುವಿಕೆ, ಎಡ್ರಿನಲ್ ಹಾರ್ಮೋನ್‌ಗಳ ಉತ್ಪತ್ತಿ ಅಧಿಕವಾಗುತ್ತದೆ. ಕಾರ್ಮಿಕರಲ್ಲಿ ಕಾರ್ಯಕ್ಷಮತೆ ಕ್ಷೀಣಿಸಿ **೫೦ ರಿಂದ ೬೦ ರಷ್ಟು** ಉತ್ಪಾದನೆ

ಕುಗ್ಗುತ್ತದೆ. ಜ್ಞಾನಶಕ್ತಿ ಕುಂಠಿತವಾಗುತ್ತದೆಂದು **ಥಿಯೋಡರ್‌ವಾಕ್ಸ್** ೧೯೮೨ರ ವರದಿಯಲ್ಲಿ ತಿಳಿಸಿದ್ದಾರೆ. ನಮ್ಮಿಂದ ಅನ್ಯರಿಗೆ ಕೇಡಾಗಬಾರದೆಂದು ತಿಳಿಯುವ ಎಚ್ಚರ, ಉದಾರತೆ ಯುವಕರಿಗೆ ಬರಬೇಕಾಗಿದೆ.

ನಿವಾರಣೆಗೆ: ೧) ವಾಹನಗಳಿಗೆ ಸರಿಯಾದ **'ಸೈಲೆನ್ಸರ್'**ಗಳನ್ನು ಅಳವಡಿಸುವುದನ್ನು ಮೀರಿದವರಿಗೆ ಶಿಕ್ಷೆಕಡ್ಡಾಯ ಮಾಡಬೇಕು. **೨)** ಸಭೆಗಳಲ್ಲಿನ ಕರ್ಕಶವಾದ ಧ್ವನಿವರ್ಧಕಗಳನ್ನು ನಿಯಂತ್ರಿಸಬೇಕಾಗಿದೆ. **೩)** ಕರ್ಕಶಹಾರ್ನ್ ಶಬ್ದಗಳನ್ನು ನಿಷೇಧಿಸುವುದು. **೪)** ಅಕ್ಕಪಕ್ಕದ ಮನೆಗಳ ರೇಡಿಯೋ ಇತ್ಯಾದಿ ಶಬ್ದಗಳನ್ನು ಹೆಚ್ಚಾಗದಂತೆ ನಿಗಾವಹಿಸುವುದು. **೫)** ಇತರ ದೇಶಗಳಲ್ಲಿ ಶಬ್ದಮಾಲಿನ್ಯದ ತಡೆಗೆ ಮಂಡಲಿ ಸ್ಥಾಪನೆಮಾಡಿ ನಿಯಂತ್ರಿಸುವ ರೀತಿಯಲ್ಲಿ ಜಾಗೃತರಾಗಬೇಕಿದೆ.

ಸಮಸ್ಯೆ ಕೈಮೀರುವಮುನ್ನ ಜೈವಿಕ, ಭೌತಿಕ, ಪರಿಸರ ವಿಜ್ಞಾನಿಗಳು, ಮನಶಾಸ್ತ್ರಜ್ಞರು, ಧೋರಣೆಯ ನಿರೂಪಕರು ಕಲೆತು ಸೂಕ್ತಪರಿಹಾರ ಕಂಡುಕೊಳ್ಳಬೇಕಿದೆ.

೪) ಭೂಮಾಲಿನ್ಯ : ಭೂಮಿತಾಯೆಂದು ಏನೆಲ್ಲಾ ಮಾಡಿದರೂ ಸಹಿಸಿಕೊಳ್ಳುವಳೆಂಬ ಭಾವನೆ ನಮಗೆ ಸಹಜವಾದುದಲ್ಲ. ಭೂಮಿ ದಿನೇದಿನೇ ಕಿರಿದಾಗುತ್ತಿದೆ. ಇರುವ ಭೂಮಿ ಮಲಮೂತ್ರಗಳ ತಾಣವಾಗಿಸಬಾರದು. ಕೃಷಿಭೂಮಿ, ನೀರು, ರಾಸಾಯನಿಕ ಗೊಬ್ಬರ, ವಸ್ತುಗಳನ್ನು, ಹಾಕುವುದರಿಂದ ಉಗುಳು, ಮಲ,ಮೂತ್ರ ಹರಡುವುದರಿಂದ ಸತ್ವಹೀನವಾಗಿದೆ. ಅರಿತವರು ಪುನಃ ಸಾವಯವಗೊಬ್ಬರಕ್ಕೆ ಶರಣುಹೋಗಲು ಕರೆಕೊಡುತ್ತಿದ್ದಾರೆ. ಭೂಮಿಯನ್ನು ಕಸದತೊಟ್ಟಿ ಮಾಡುವುದರಿಂದ ಹೊಲಸು, ಸೊಳ್ಳೆಗಳು ಹೆಚ್ಚಾಗುತ್ತವೆ. ಅಷ್ಟೇಅಲ್ಲದೆ ಅನೇಕ ವಿಷಜಂತುಗಳಿಗೆ ಆಸ್ಪದವಾಗುತ್ತದೆ.

ಯಾವ ಪುಣ್ಯಕ್ಷೇತ್ರದಲ್ಲೂ ಪ್ಲಾಸ್ಟಿಕ್‌ಮಯ, ತ್ಯಾಜ್ಯವಸ್ತುಗಳನ್ನು ಎಸೆದು ಭೂಮಿ, ವಾಯು, ನೀರುಗಳನ್ನೂ ಕಲುಷಿತಗೊಳಿಸಲಾಗುತ್ತಿದೆ. ಇದು ೧೪೪೪/೪೯ (೨) ನಿಯಂತ್ರಣ ಕಾಯ್ದೆಯಂತೆ ಶಿಕ್ಷಾರ್ಹವಾಗುತ್ತದೆ. ಅಂತಹ ಕಾಯ್ದೆಗಳಿದ್ದರು ನಿಶ್ಪ್ರಯೋಜಕವಾಗಿದೆ. ಪರ್ವತಾರೋಹಿಗಳು, ಚಾರಣರು ಎಸೆದನಿರುಪಯುಕ್ತ ಪದಾರ್ಥಗಳಿಂದ ಸ್ಥಳದ ಜನ ಅಸಹ್ಯಗೊಂಡಿದ್ದಾರೆ. ಇದರ ಪರಿಣಾಮ ಅಸಹ್ಯವಾದುದು. ಅದರ **ನಿವಾರಣೆ :** ೧) ನಿರುಪಯುಕ್ತ ವಸ್ತು, ಕಸ, ಇತ್ಯಾದಿ ತ್ಯಾಜ್ಯವಸ್ತು ಚೆಲ್ಲಾಡದಂತೆ ಜಾಗ್ರತರಾಗಬೇಕಾಗಿದೆ. **೨)** ಎಲ್ಲ ಕಸವನ್ನೂ ಸಂಸ್ಕರಿಸಿ ವಿದ್ಯುತ್ ಉತ್ಪಾದನೆಗೆ ಬಳಸಬಹುದಾಗಿದೆ. **೩)** ಮಲಮೂತ್ರಾಲಯಗಳನ್ನು ಕಟ್ಟಿಸಿ ಕಡ್ಡಾಯವಾಗಿ ಅದನ್ನು ಬಳಸಬೇಕಾಗಿದೆ. **೪)** ಭೂಮಿಯಲ್ಲಿ ಹಸಿರು ಗಿಡಗಳನ್ನು ಬೆಳೆಸಿ **'ಹಸಿರು ಕ್ರಾಂತಿ'** ಮಾಡಬೇಕಾಗಿದೆ. ಈ ಎಲ್ಲ ವಿಷಯಗಳ ಅರಿವನ್ನು ಮಾಡಿ ಜನರನ್ನು ಎಚ್ಚರಗೊಳಿಸುವುದು ತೀರಾ ಅಗತ್ಯ. ಜನರಲ್ಲಿ **'ಪರಿಸರಪ್ರೇಮ'** ಮಾಯವಾಗುತ್ತಿದೆ. ಆಮ್ಲಜನಕ ಉತ್ಪಾದಕ ಸಸ್ಯ-ಸಂಪತ್ತುನ್ನು ಬೆಳೆಸಬೇಕಾಗಿದೆ. ಹಿಂದಿನ ಪುರಾಣದ ದಂಡಕಾರಣ್ಯಗಳು ಕೇವಲ ಹೆಸರಿನಲ್ಲಿವೆ. ಕಾಡನ್ನು ಕಡಿದು ನಾಡುಕಟ್ಟುವ ಭ್ರಮೆ, ಯತ್ನಸಲ್ಲದು. ಹಿಂದಿನ ಸಮೃದ್ಧ, ಫಲಪುಷ್ಪ ಸಂಪತ್ತು, ಚಿತ್ರಗಳಲ್ಲಿ ಕಾಣುತ್ತಿವೆ. ಪರಿಸರ ಪ್ರೇಮಿಗಳಿಂದ **'ಅಪ್ಪಿಕೋ ಚಳುವಳಿ'** ಯಂತಹ ಅನೇಕ ಚಳುವಳಿಗಳಿಂದ

ಸರ್ಕಾರವನ್ನೂ ಜನರನ್ನೂ ಜಾಗ್ರತಗೊಳಿಸುವ ಕಾಲವೊದಗಿದೆ.

ಜನಸಾಮಾನ್ಯರಲ್ಲಿ ಪರಿಸರಪ್ರೀತಿ ಹೆಚ್ಚುವುದು ಅಗತ್ಯವಾಗಿದೆ. ಕಾಡನ್ನು ಬೆಳೆಸುವ ಕಾರ್ಯದಲ್ಲಿ ಜನಮನ್ನಣೆ, ಸಹಕಾರ ನೀಡಬೇಕಾಗಿದೆ. ಈಗಾಗಲೇ ಈ ಮಾಲಿನ್ಯಗಳ ದುಷ್ಪರಿಣಾಮದಿಂದ ಮಳೆ, ತಾಪಮಾನಗಳಲ್ಲಿ ವ್ಯತ್ಯಾಸ ಪಶ್ಚಿಮಘಟ್ಟಗಳಲ್ಲಿ ಕಂಗೆಟ್ಟು ಪ್ರಾಣಿಗಳು ಜನ ಪ್ರದೇಶದ ಮೇಲೆ ದಾಳಿಯಿಡುತ್ತಿವೆ. ನೀರು ಇತ್ಯಾದಿಗಳಿಲ್ಲದೆ ಸಾಯುತ್ತಿವೆ. ಪಕ್ಷಿಸಂಕುಲ ವಿರಳವಾಗುತ್ತಿದೆ. ಪ್ರಕೃತಿ ತನ್ನರಮ್ಯತೆಯ ಕವಚ ಕಳಚಿಕೊಳ್ಳುತ್ತಿರುವುದು ಕಾಣುತ್ತಿದೆ. ಅಲ್ಲದೆ ಸಾಲುಮರದ ತಿಮ್ಮಕ್ಕನಂತಹ ಅನೇಕ ಹೃದಯವಂತರು ಕಣ್ತೆರೆಯಬೇಕಾಗಿದೆ. ನಾವು ನಮ್ಮ ಮುಂದಿನ ಪೀಳಿಗೆಗೆ ಯಾವ ಕೊಡಿಗೆಯನ್ನು ನೀಡಬೇಕು. ಈ ಭೂಮಿಯನ್ನು ನರಕವಾಗಿಸುವುದು ಸಲ್ಲದು. ಈ ನಿಟ್ಟಿನಲ್ಲಿ ಸರ್ಕಾರ ಪರಿಸರ ದಿನವೆಂದು ಘೋಷಿಸಿದರೆ ಸಾಲದು, ಸಂಘ, ಸಂಸ್ಥೆಗಳು, ಸಾಮಾಜಿಕ ಸಂಘಟನೆಗಳು, ವಿಜ್ಞಾನಿಗಳ ಎಚ್ಚರಿಕೆಗೆ ಕಿವಿಗೊಡಬೇಕಾಗಿದೆ. ಮರ, ಗಿಡ ಬೆಳೆದು **'ಸಸ್ಯಶಾಮಲೆ'** ಎಂಬ ಹೆಸರು ನಮ್ಮ ನಾಡಿನಲ್ಲೇ ಉಳಿಸಬೇಕಾಗಿದೆ. ಕಾಡುಕಡಿವ ಕದೀಮರಿಗೆ ಕಠಿಣಶಿಕ್ಷೆ ಅಗತ್ಯ. **'ಮನೆಗೆರಡು ಮರ'** ನೆಡಬೇಕೆಂಬ ಕಡ್ಡಾಯಗೊಳಿಸುವ ನೀತಿ ನಮ್ಮದಾಗಬೇಕು. ಹಾಗೇ ಕಾಡು ಬೆಳೆಸುವವರಿಗೆ ಪ್ರೋತ್ಸಾಹ ನೀಡಿ ಉತ್ತೇಜಿಸಬೇಕಾಗಿದೆ. ಕೇವಲ ಕಾನೂನು ಅಥವಾ ವೇದಿಕೆಗಳ ಭಾಷಣಗಳಿಂದ **'ಪರಿಸರರಕ್ಷಣೆ'** ಅಸಾಧ್ಯ. ಅದು ನಾಗರಿಕ ಧರ್ಮವೆಂದು ತಿಳಿವ ಮನೋಭಾವ ಎಲ್ಲರಿಗೂ ಬರಬೇಕಾಗಿದೆ.

----

೪. ದೂರದರ್ಶನ (ವಿಮರ್ಶಾತ್ಮಕ)

ಮಾನವನು ಅಪಾರ ಅರಿವನ್ನು ಪಡೆಯಬೇಕೆಂಬ ಹಂಬಲವುಳ್ಳವನಾಗಿದ್ದಾನೆ. ಪ್ರಾಚೀನ ಕಾಲದಲ್ಲಿ ಪರಿಪೂರ್ಣಜ್ಞಾನವನ್ನು ಪಡೆವ ತವಕವುಳ್ಳವನಾಗಿ **'ಕೋಶಓದಬೇಕು, ದೇಶತಿರುಗಬೇಕು'** ಎಂಬ ನಂಬಿಕೆಯುಳ್ಳವನಾಗಿದ್ದನು. ಆಧುನಿಕ ಜಗತ್ತಿನಲ್ಲೂ ಹೊಸ ಹೊಸದನ್ನು ಕಾಣಬೇಕು. ಕಂಡುಹಿಡಿಯಬೇಕೆಂಬ ಬಯಕೆಯಿಂದ ಪ್ರಯತ್ನ ಮಾಡುತ್ತಿದ್ದಾನೆ. ಈ ಹಿನ್ನೆಲೆಯಲ್ಲಿ ರೇಡಿಯೋ, ದೂರದರ್ಶನ ಇವುಗಳನ್ನು ಕಂಡು ಹಿಡಿದನು. ದೂರದರ್ಶನ ಹೆಸರೇ ಸೂಚಿಸುವಂತೆ ದೂರದ ತಾಜಾ ಸಮಾಚಾರ, ವಿದ್ಯಮಾನಗಳನ್ನು ನೋಡಲೂ ಕೇಳಲುಬಹುದಾಗಿದೆ. ಕೇಳಿದ್ದು ಉಳಿಯದೆ ಹೋಗಬಹುದು. ನೋಡಿದ್ದು ಮರೆಯಲಾದೀತೆ? ಸಮಸ್ತಜ್ಞಾನ ವಿಜ್ಞಾನಗಳ ಪ್ರಗತಿಯನ್ನು ನೋಡಿ ಪ್ರಭಾವಿತರಾಗುತ್ತೇವೆ. ಅದು ಇರುವ ನೆಲೆಯನ್ನು ಮರೆಸಿ ಕೃತಕಲೋಕಕ್ಕೆ ನಮ್ಮನ್ನು ಕರೆದೊಯ್ಯಬಲ್ಲದು. ದೂರದರ್ಶನ ಸಂಪರ್ಕಸಾಧನೆಗಳಲ್ಲಿ ಅತಿಮುಖ್ಯಸ್ಥಾನ ಪಡೆದಿದೆ.

ಹುಟ್ಟುಪ್ರಸಾರ :

ಪಾಲ್‌ನಿಪಕರು ಕನಸು ಕಂಡರು. 'ಜೆ.ಎಲ್.ಬೇಯರ್ಡ್', 'ಝುವರ್‌ಕಿನ್' ಇವರು

ದೂರದರ್ಶನ ಸಾಧನಕ್ಕೆ ಸ್ಪಷ್ಟರೂಪಪಿತ್ತರು. ಅದರಲ್ಲಿ ವಿಶೇಷ ಕ್ಯಾಮರ ಬಳಸುತ್ತಾರೆ. ಪ್ರತಿಯೊಂದು ಚಿತ್ರದ ೪೦೫ ಬಿಡಿ ಭಾಗಗಳನ್ನು **'ಸ್ಕ್ಯಾನಿಂಗ್'** ಮಾಡಿ, **'ಟ್ಯೂಬ್'**ಗೆ ಕಳುಹಿಸುತ್ತದೆ. ಅದರಿಂದ ಚಿತ್ರತರಂಗಗಳು **'ವಿದ್ಯುತ್ ತರಂಗ'**ಗಳಾಗಿ ಪ್ರಸಾರಗೊಳ್ಳುತ್ತವೆ. ಆ ತರಂಗಗಳು ನೇರವಾಗಿ ಚಲಿಸುತ್ತವೆ. ಅದನ್ನು ಆಂಟೆನಾವು ಸಂಕೇತಗಳಿಂದ ಗ್ರಹಿಸಿ, ಟಿವಿ ಯಂತ್ರಕ್ಕೆ ಕಳುಹಿಸುತ್ತದೆ. ಅದರಲ್ಲಿ ನಾವು ಚಿತ್ರದೊಂದಿಗೆ ಶಬ್ದಗಳನ್ನೂ ಕೇಳುತ್ತೇವೆ.

ಭಾರತದಲ್ಲಿ ೧೯೫೯ ರ ಸೆಪ್ಟೆಂಬರ್ ೧೫ ರಂದು ದೂರದರ್ಶನ ಪ್ರಸಾರವಾಯ್ತು. ೧೯೮೧ ರಲ್ಲಿ ಬೆಂಗಳೂರಿನ **'ಪ್ರಸಾರಕೇಂದ್ರ'** ಅಸ್ತಿತ್ವಕ್ಕೆಬಂತು. ಇತ್ತೀಚೆಗೆ ಅನೇಕ **'ಉಪಕೇಂದ್ರ'**ಗಳು ಸ್ಥಾಪನೆಗೊಂಡು, ಕಾರ್ಯಕ್ಷೇತ್ರ ಪೈಪೋಟಿಯಿಂದ ವಿಶಾಲವಾಗಿ ಬೆಳೆದಿದೆ.

ಪ್ರಯೋಜನ : ದೂರದರ್ಶನದಿಂದ **ಪ್ರಯೋಜನ, ಅಪ್ರಯೋಜನ**ಗಳೆರಡೂ ಉಂಟು. ಜಗತ್ತಿನ ಯಾವುದೇ ಸ್ಥಳಗಳಲ್ಲಿ ನಡೆಯುತ್ತಿರುವುದನ್ನು, ಅವುಗಳ ಸೂಕ್ಷ್ಮಸಂಗತಿಗಳೊಂದಿಗೆ ಇದ್ದಂತೆಯೇ ವೀಕ್ಷಿಸಬಹುದು. ಕ್ರೀಡೆಗಳು, ನೃತ್ಯ, ಗೀತ ಇವುಗಳನ್ನು ನೋಡುವ ಅವಕಾಶ ಕೆಲವೇ ದೊಡ್ಡ ನಗರಗಳಿಗೆ ಮಾತ್ರಮೀಸಲಾಗಿತ್ತು. ಇಂದು ಸರ್ಕಾರಗಳ ಪ್ರಯತ್ನದಿಂದ ಜಗತ್ತಿನ ಮೂಲೆ ಮೂಲೆಯಲ್ಲಿನ ಸಾಮಾನ್ಯರ ಮನೆಮನೆಗೂ ಬಂದಿದೆ. ಸರ್ಕಾರಿ ಹಾಗೂ ಅನೇಕ ಖಾಸಗಿ ಚಾನೆಲ್‌ಗಳು ಉಪಗ್ರಹಗಳ ಸಹಾಯ ಬಳಸಿಕೊಂಡು ಅತ್ಯಂತ ಸುಲಭವಾಗಿ ಅಭಿರುಚಿಗನುಸಾರವಾದ ಕಾರ್ಯಕ್ರಮಗಳನ್ನು ಬಿತ್ತರಿಸುತ್ತವೆ.

ಶೈಕ್ಷಣಿಕ ರಂಗದಲ್ಲಿ ಕ್ರಾಂತಿಕಾರಕ ವಿಚಾರಗಳನ್ನು ಮನವರಿಕೆ ಮಾಡಿಕೊಳ್ಳಬಹುದು. ಕಂಪ್ಯೂಟರ್‌ಶಿಕ್ಷಣ ಪದ್ಧತಿಯ ಸಮಸ್ಯೆ, ಪರಿಹಾರೋಪಾಯ, ಇವುಗಳ ಪ್ರಚಾರ. ಅಮೇರಿಕಾದಂತಹ ಮುಂದುವರಿದ ರಾಷ್ಟ್ರಗಳಲ್ಲೂ ದೂರದರ್ಶನ ಮಾಧ್ಯಮದಿಂದ ಶಿಕ್ಷಣ ನೀಡುತ್ತಿದ್ದಾರೆ. ವೈದ್ಯಕೀಯರಂಗದ ತೆರೆದಹೃದಯಚಿಕಿತ್ಸೆ ಇವುಗಳನ್ನು ಕಣ್ಣಿಗೆ ಕಟ್ಟಿದಂತೆ ಬಿತ್ತರಿಸಲಾಗುತ್ತದೆ. ಪ್ರವಾಹ, ಯುದ್ಧಗಳು, ಹಿಮಪಾತ, ಹವಾಮಾನ ವ್ಯತ್ಯಾಸಗಳನ್ನು ಇದ್ದಂತೆ ತೋರಿಸಲಾಗುತ್ತದೆ. ಯು.ಜಿ.ಸಿ ಕಾರ್ಯಕ್ರಮದಲ್ಲಿ ನೂತನ ಸಂಶೋಧನಾತ್ಮಕ ವಿಚಾರಗಳನ್ನು ಸಚಿತ್ರವಿವರಣೆಗಳಿಂದ ಮನವರಿಕೆ ಮಾಡಿಕೊಳ್ಳಬಹುದು. ಪ್ರಕೃತಿ ವಿಕೋಪಗಳಾದ ಮಳೆ, ಜ್ವಾಲಾಮುಖಿ ಅಲ್ಲದೆ ಪರ್ವತ, ನದಿ, ಕೋಟೆ, ಕೊತ್ತಲು ಇವುಗಳನ್ನು ಕೂತಲ್ಲೇ ನೋಡಿ ಅರಿವು ಪಡೆಯಬಹುದು. ತಾಂತ್ರಿಕವಿಜ್ಞಾನದ ಪ್ರಗತಿ, ಉಪಗ್ರಹಉಡಾವಣೆ, ಪ್ರಚಲಿತಪಾರ್ಲಿಮೆಂಟ್‌ನ ವಿದ್ಯಮಾನಗಳು ಇವುಗಳ ತಾಜಾ ಸುದ್ದಿದೃಶ್ಯಗಳನ್ನು ತಿಳಿಯಬಹುದು. ಸಾಹಸಮಯ, ಪೌರಾಣಿಕಕಥೆಗಳ ಧಾರವಾಹಿಗಳು ಎಲ್ಲ ರಂಗದ ಉಳಿವುಅಳಿವು, ಸಾಮಾಜಿಕ ವಿಕಾಸಗಳನ್ನು ಚಿತ್ರಿಸುವ ಸುದ್ದಿಸಮಾಚಾರ ಕಾರ್ಯಕ್ರಮಗಳನ್ನು ನೋಡುತ್ತೇವೆ.

ಮನರಂಜನಾರೂಪದ ಕಾರ್ಯಕ್ರಮಗಳಂತೂ ಅತ್ಯಂತ ತೀವ್ರಗತಿಯ ಪರಿಣಾಮವನ್ನು ಉಂಟುಮಾಡುತ್ತಿವೆ. ಚಿತ್ರಮಂದಿರಗಳಿಗೆ ಹೋಗದ ವಿವಿಧ ಭಾಷೆಯ ಚಲನಚಿತ್ರಗಳ

ನೋಡಬಹುದು. ಚಿತ್ರಗೀತೆಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಂತೆ ಕಾಣುವುದುಂಟು. ಸನ್ಮಾನಸಮಾರಂಭಗಳು, ಲಲಿತಕಲೆಗಳ ಪರಿಚಯ, ನೃತ್ಯಪ್ರಕಾರಗಳ ಪರಿಚಯ ಮಾಡಿಕೊಳ್ಳಬಹುದು. ಜಾನಪದರಂಗದ ಕ್ರೀಡೆ, ಕಲೆ, ಗೀತ, ನಾಟಕ ಇವುಗಳ ಪರಿಚಯವಾಗುತ್ತದೆ. ನಶಿಸುತ್ತಿರುವ ಸಾಹಿತ್ಯ, ಸಂಗೀತ, ಕಲೆ, ಕ್ರೀಡೆಗಳ ಪುನರುಜ್ಜೀವನ ಕಾರ್ಯಕ್ರಮಗಳು, ಮಕ್ಕಳ ಸಾಹಸ, ಕಥೆಗಳು ಅತ್ಯಂತ ಪ್ರಭಾವಶಾಲಿಯಾಗಿ ಮೂಡಿಬರುತ್ತಿವೆ.

ಕೃಷಿಪ್ರಧಾನವಾದ ನಮ್ಮದೇಶದಲ್ಲಿ ಕೃಷಿಕರಿಗೆ ಅನೇಕ ಹೊಸಸಂಶೋಧನೆಗಳ ಪ್ರಾತ್ಯಕ್ಷಿಕೆಗಳು, ರೋಗನಿವಾರಣಾಕ್ರಮ, ಹಸಿನೀರಾವರಿ ವಿಧಾನ, ಪಶುಸಂಗೋಪನೆ, ಹೈನುಗಾರಿಕೆಯ ಪ್ರಗತಿಪರ ಅಂಶಗಳು ಪ್ರಸಾರವಾಗುತ್ತವೆ. ಪ್ರಾಕೃತಿಕ ವಿಕೋಪಗಳಲ್ಲಿ ಪರಿಹಾರೋಪಾಯ ಇತ್ಯಾದಿ ಅಗತ್ಯವಾದ ಪೂರಕಾಂಶಗಳನ್ನು ಕಾಲಕ್ಕನುಸಾರವಾಗಿ ಪ್ರಸಾರ ಮಾಡಿ ತಿಳಿಸಿಕೊಡಲಾಗುತ್ತದೆ. ಜ್ಞಾನವೆಂಬುದು ನಾಲ್ಕುಗೋಡೆಯ ಪರಿಧಿಯನ್ನು ಮೀರಿದ್ದಾಗಿದೆ. ಚೌಕಟ್ಟಿನ ಆಚೆ ಬೆಳೆಯುವ ವಾಣಿಜ್ಯ, ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಆರ್ಥಿಕ ಚರ್ಚೆ, ಜಾಗತಿಕ ಮಟ್ಟದ ವೈದ್ಯಕೀಯ, ಉದಾರೀಕರಣ, ಜಾಗತಿಕ ಮಟ್ಟದ ಚಿಂತನೆಗಳಾಗುತ್ತಿರುವ ಸನ್ನಿವೇಶದಲ್ಲಿ ಅದು ಜ್ಞಾನದೀಪಿಕೆಯಾಗಿದೆ ಎನ್ನಬಹುದು.

ದುಷ್ಪರಿಣಾಮಗಳು : ದೂರದರ್ಶನದ ಮತ್ತೊಂದು ಮುಖವನ್ನು ಪರಿಚಯಿಸಬೇಕಾಗುತ್ತದೆ: ಇತರ ಅನುಭವಗಳಿಂದ ದೂರತಳ್ಳುವ ಸಾಧನ. ಒಡಹುಟ್ಟಿದವರ ಸಂಮೋಹನೆ ಸಂಪರ್ಕ ಕಡಿಮೆಯಾಗಿದೆ. ಆಟಪಾಠ, ಚಟುವಟಿಕೆಗಳು, ವಿರಳವಾಗಿವೆ. ಗಂಭೀರ ಓದಿಗೆ ತಿಲಾಂಜಲಿಯಾಗಿದೆ, ಮಾನವಿಕ ಪರಿಸರವಿಲ್ಲದೆ ಮೌಲ್ಯಗಳಿಂದ ದೂರವಾಗುವ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದೆ. ಈ ಅಂಶಗಳು ಬಹುಸಂಖ್ಯಾತ ಪೋಷಕರಿಗೆ ತಲೆನೋವನ್ನುಂಟು ಮಾಡಿವೆ. ಹಿಂದೀ ಚಿತ್ರಗೀತೆಗಳು, ಇಂಗ್ಲೀಷ್‌ಚಿತ್ರಗಳಲ್ಲಿ ಮೈತೆರೆದು ತೋರಿಸುವುದು. ಅವುಗಳ ಉದ್ರೇಕಕರವಾದ ಮಾತು, ಅಪ್ಪುಗೆ, ಮೈಕುಣಿತ ಇವುಗಳಿಂದ ಹೆಣ್ಣುಗಂಡುಗಳು ದಾರಿ ತಪ್ಪುತ್ತಿದ್ದಾರೆ. ಯುವಕರು ಅಲ್ಲಿನದ್ದನ್ನೇ ಅನುಕರಿಸಲು ಹೋಗಿ ಕೊಲೆ, ದರೋಡೆಗಳು, ಅತ್ಯಾಚಾರಗಳಿಗೆ ಕೈ ಹಾಕುತ್ತಿದ್ದಾರೆ. ಹೆಣ್ಣುಗಂಡೆಂಬ ಭೇದವಿರದೆ ವೇಷಭೂಷಣಗಳಿಗೆ ಮಾರುಹೋಗುತ್ತಿದ್ದಾರೆ. ವ್ಯಾಪಾರಿ ಮನೋಭಾವದ ಆಡಂಬರದ, ದಿಕ್ಕುತಪ್ಪಿಸುವ ಜಾಹೀರಾತುಗಳು, ಗುಣಮಟ್ಟ ಹೆಚ್ಚಿಸುವ ಬದಲು ಗ್ರಾಹಕ ಜೇಬನ್ನು ಖಾಲಿ ಮಾಡುತ್ತಿದೆ. ಗ್ರಾಹಕನನ್ನು ನಿಜವಾಗಿ ದಿಕ್ಕುತಪ್ಪಿಸುತ್ತಿವೆ. ಇವುಗಳು ಎಳೆಯ ಮನಸ್ಸಿನಮೇಲೆ ಕೆಟ್ಟ ಪರಿಣಾಮವನ್ನುಂಟುಮಾಡುತ್ತಿವೆ. ಅವರು ಕೊಲೆ, ಲೈಂಗಿಕ ಸ್ವೇಚ್ಛಾಚಾರ, ಹಿಂಸೆಗಳಿಗೆ ದಿನನಿತ್ಯ ಅಂಟಿಕೊಳ್ಳುತ್ತಿದ್ದಾರೆ. ಮಕ್ಕಳು ಪೂರ್ಣಅವಧಾನ ದೂರದರ್ಶನದಲ್ಲಿ ಕೇಂದ್ರೀಕೃತವಾಗಿದೆ. ಅವರಲ್ಲಿ ದೃಷ್ಟಿಮಾಂಧ್ಯತೆಗಳಾಗುತ್ತಿವೆ. ತಂದೆತಾಯಿಗಳು ಮಕ್ಕಳ ವರ್ತನೆ, ಬದಲಾವಣೆಯನ್ನು ನೋಡಿ ಮರುಗುತ್ತಿದ್ದಾರೆ. ತಿಳಿಯದವರಲ್ಲೂ ನಡೆ-ನುಡಿ, ಆಚಾರಗಳಲ್ಲಿ ಏರುಪೇರಾಗುತ್ತಿದೆ. ಈ ವಿಚಾರದಿಂದಲೇ ಅಮೇರಿಕಾ ಜಾಗ್ರತಗೊಂಡು ದೂರದರ್ಶನ ನಿಷೇಧಪಕ್ಷಾಚರಣೆ ಆಚರಿಸುತ್ತಿದೆ. ಈ ಹಿನ್ನೆಲೆಯಲ್ಲಿ ದೂರದರ್ಶನ ವಿವಾದಾಸ್ಪದ ಸ್ಥಿತಿಯನ್ನು ತಲುಪಿದೆ.

ಒಟ್ಟಿನಲ್ಲಿ ದೂರದರ್ಶನ ಅತ್ಯಂತ ಪ್ರಭಾವಿಸಂಪರ್ಕಮಾಧ್ಯಮವಾಗಿದೆ. ತಂದೆತಾಯಿಗಳು, ಪೋಷಕರು ಎಚ್ಚರವಹಿಸಿ ಮಕ್ಕಳಿಗೆ ಸರಿಯಾಗಿ ಮಾರ್ಗದರ್ಶನ ಮಾಡಬೇಕಾಗಿದೆ. ನಿಜವಾದಭಕ್ತಿ, ಪ್ರೀತಿಗಳನ್ನು ಪರಿಚಯಿಸಿ ಮಾರ್ಗದರ್ಶನವನ್ನೊಟು ಮಾಡಬೇಕಿದೆ. ಸರ್ಕಾರ ವ್ಯಾಪಾರಿ ಮನೋಭಾವದ ಖಾಸಗಿ ಚಾನೆಲ್‌ಗಳನ್ನು ಎಚ್ಚರಿಕೆಯಿಂದ ಹಿಡಿತದಲ್ಲಿರಿಸಿಕೊಳ್ಳಬೇಕಾಗಿದೆ. ಅದನ್ನು ಮರೆತು ಮಾಧ್ಯಮಗಳು ಜವಾಬ್ದಾರಿಯಿಂದ ಸಂಯಮಗಳಿಂದ ಕೋಮುಗಲಭೆ ಇಂತಹ ಸೂಕ್ಷ್ಮಸಂದರ್ಭಗಳಲ್ಲಿ ಭಾವೋದ್ರೇಕ ಸನ್ನಿವೇಶನಗಳನ್ನು ಭಿತ್ತರಿಸಿದ ಸ್ಟಾರ್‌ನ್ಯೂಸ್ ಛಾನೆಲ್, ನೀತಿಸಂಹಿತೆ ಮರೆತು ಕಳಂಕ ತಂದಿದೆ. ಇನ್ನು ಎಂ.ಟಿ.ವಿ. ಎಫ್. ಛಾನೆಲ್, ಸೋನಿ ಛಾನೆಲ್‌ಗಳಲ್ಲಿ ಅಂಗಾಗ ಕುಣಿಸುವ ನೋಟ ನೋಡಿದರೆ ಹೆಲೆನ್‌ಕೂಡ ನಾಚಬೇಕು. ದೇಶದ ಆಸ್ತಿಯಾದ ಯುವಕರು **'<u>ಬೆಳ್ಳಗಿರುವುದೆಲ್ಲಾ ಹಾಲಲ್ಲ</u>'**ವೆಂಬಂತೆ ವಿದೇಶೀಸಂಸ್ಕೃತಿಗಳಿಗೆ ಜಾರಿಬೀಳದೆ, ವಿವೇಕಶೀಲರಾಗಿ ಉತ್ತಮ ಅಂಶಗಳನ್ನು ಆಯ್ದುಕೊಳ್ಳಬೇಕಿದೆ. ಜನಸ್ವದೇಶೀಪ್ರೇಮವಿರಿಸಿ, ಭಾಷೆ, ಸಂಸ್ಕೃತಿ, ಬದುಕುಗಳನ್ನು ಪ್ರೀತಿಸಬೇಕು. ಕೀಳುಅಭಿರುಚಿ ಚಾಳಿಯನ್ನು ಕೆರಳಿಸುವ ಅಂಶಗಳಿಗೆ ಮಾರುಹೋಗಬಾರದು. ಅತೃಪ್ತಿ ಜೀವನದಿಂದ ತಮ್ಮತನವನ್ನು ಮರೆತು ಸಮಯ, ಜೀವನವನ್ನು ವ್ಯರ್ಥವಾಗಿಸದೆ ಕ್ರಿಯಾಶೀಲರಾಗಿ, ನವಸಮಾಜದ ನಿರ್ಮಾಣದ ಕಡೆಗಮನ ಹರಿಸಬೇಕಾಗಿದೆ. ಪ್ರಸಾರಭಾರತಿಯು ಈ ಹಿನ್ನೆಲೆಯಲ್ಲಿ ಅತ್ಯಂತ ಸೂಕ್ತ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡು ಸತ್ಯ, ಶಾಂತಿ, ಸಹಬಾಳ್ವೆಗಳನ್ನು ಜನಸಾಮಾನ್ಯರಲ್ಲಿ ಬೆಳೆಯಬೇಕಾಗಿದೆ. ಈ ನಿಜವಾದ ಗುರಿಯನ್ನಿಟ್ಟು ಹಿತಮಿತವಾದ ಅಗತ್ಯ ಮನರಂಜನೆ, ವೈಚಾರಿಕ ಪ್ರಜ್ಞೆಗಳ ಜೊತೆಗೆ ಸ್ಪರ್ಧಾತ್ಮಕ ಮನೋಭಾವಗಳನ್ನು ಬೆಳೆಸಿ, ವಿಶ್ವಭ್ರಾತೃತ್ವದಿಂದ ನವಸಮಾಜದ ನಿರ್ಮಾಣದ ಹೊಣೆ ಹೊತ್ತಾಗ ನಿಜವಾದ ದೂರದರ್ಶನದ ಸಾರ್ಥಕತೆಯನ್ನು ಪಡೆದಂತಾಗುತ್ತದೆ.

೫. ಕನ್ನಡ ರಾಜ್ಯೋತ್ಸವ (ವರ್ಣನಾತ್ಮಕ)

ನಾಡು, ನುಡಿಯನ್ನು ಪ್ರೀತಿಸುವುದು ದೈವದತ್ತ ವರ. ಆದ್ದರಿಂದಲೇ **'<u>ತಾಯಿ ತಾಯ್ನಾಡು ಸ್ವರ್ಗಕ್ಕಿಂತಲೂ ಮಿಗಿಲು</u>'** ಎಂಬ ಉಕ್ತಿ ಪ್ರಸಿದ್ಧವಾಗಿದೆ. ನಮ್ಮನಾಡು ಸಾಹಿತ್ಯ, ಸಂಗೀತ, ಕಲೆ, ಇತಿಹಾಸ, ಧರ್ಮಕ್ಷೇತ್ರಗಳಲ್ಲಿ ಪ್ರಾಚೀನ ಪರಂಪರೆಯನ್ನು ಪಡೆದಿದೆ. ರಾಷ್ಟ್ರಕ್ಕೆ ಗಮನಾರ್ಹವಾದ ಕೊಡಿಗೆಯನ್ನೂ ನೀಡಿದೆ. ನಾವು ಕೇವಲ ಹಿಂದಿನದನ್ನು ಹೇಳಿಕೊಂಡು ಹೆಮ್ಮೆಪಟ್ಟುಕೊಂಡರೆ ಸಾಲದು. ಈ ನಾಡುನುಡಿಗೆ ನಮ್ಮದೇ ಆದ ಕೊಡಿಗೆಯೇನೆಂದು ವಿಚಾರ ಮಾಡಿ, ಆಯ್ದುಕೊಳ್ಳುವ ಸುಸಂದರ್ಭ-ನಾಡಹಬ್ಬದ ಆಚರಣೆ. ನಮ್ಮರಾಜ್ಯದ ಕೆಲವು ಭಾಗಗಳು ನೆರೆಯ ರಾಜ್ಯಗಳಲ್ಲಿ ಹರಿದು ಹಂಚಿ ಹೋಗಿದ್ದವು. ಆ ಕೆಲವು ಭಾಗಗಳನ್ನು **೧೯೫೬** ರಲ್ಲಿ ಒಟ್ಟುಗೂಡಿಸ **(ಏಕೀಕರಣಗೊಳಿಸ)**ಲಾಯ್ತು. ಆ ಒಟ್ಟುಗೂಡಿಸಿದ ವಿಶಾಲ ಮೈಸೂರುರಾಜ್ಯಕ್ಕೆ **'ಕರ್ನಾಟಕರಾಜ್ಯ'**ವೆಂದು **೧೯೭೩ ನೆಯ ನವೆಂಬರ್ ೧ ರಂದು ನಾಮಕರಣ ಮಾಡಲಾಯ್ತು.** ಈ ಹಿನ್ನೆಲೆಯ ಸವಿನೆನಪಿಗಾಗಿ ಪ್ರತಿವರ್ಷ ನವೆಂಬರ್ ೧ ರಿಂದ ೩೦ ರವರೆಗೆ ಸಂಭ್ರಮದಿಂದ **'<u>ಕನ್ನಡ ರಾಜ್ಯೋತ್ಸವ</u>'**ವನ್ನು ಆಚರಿಸಿಕೊಂಡು

ಬರಲಾಗುತ್ತಿದೆ.

ನಾಡಿನ ಇತಿಹಾಸ : ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ದೀರ್ಘ ಇತಿಹಾಸವಿದೆ. ಈ ಭಾಷೆಯ ಸಾಂಸ್ಕೃತಿಕ ಸಂವಹನಕ್ಕೆ ಮಾಧ್ಯಮವಾಗಿ ನಮ್ಮನ್ನು ನಮ್ಮನಾಡನ್ನು ಬೆಳೆಸಿದ ಕನ್ನಡಿಗರ ಜೀವನರೀತಿ, ಆದರ್ಶ ಹೆಮ್ಮೆಪಡುವಂತದ್ದು, ಈ ನೆನಪನ್ನು ಎಂದೂ ಮರೆಯಲಾಗದು. ಈ ನಾಡನ್ನು ಹೊಯ್ಸಳರು, ಕದಂಬರು, ಬಲ್ಲಾಳರು, ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಯಾದವರು ಬೆಳೆಸಿ, ವಿಸ್ತರಿಸಿ, ವಿಜೃಂಭಣೆಯಿಂದ ಆಳಿದರು. ಅದನ್ನು ಅವರಕೋಟೆಕೊತ್ತಲು ಇಂದೂ ಸಾರಿಹೇಳುತ್ತಿವೆ. ಜೈನರು, ಶರಣರು, ದಾಸರು, ವೈಷ್ಣವರು ಕನ್ನಡ ಸಾಹಿತ್ಯವನ್ನು ವಿಪುಲವಾಗಿ ಬೆಳೆಸಿದ್ದಾರೆ. ಕರ್ನಾಟಕ ಸಾಹಿತ್ಯ, ಸಂಗೀತ, ಸಂಸ್ಕೃತಿ, ವಾಸ್ತುಶಿಲ್ಪ, ಕಲೆಗಳಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದಿದೆ. ಇಲ್ಲಿನ ವಿಶೇಷವಾದ ಕರಾವಳಿಸಂಪತ್ತು, ಖನಿಜಸಂಪತ್ತು, ನಿಸರ್ಗಸಂಪತ್ತು, ಅರಣ್ಯಸಂಪತ್ತು, ಪ್ರಾಣಿ-ಪಕ್ಷಿ ಸಂಪತ್ತು ಕೈಬೀಸಿ ಕರೆಯುತ್ತಿವೆ. ಈ ನಾಡಿನ ಅಪೂರ್ವವೈಶಿಷ್ಟದ ಪರಿಚಯವಿರದೆ ಮಾಡುವ ನಮ್ಮ ಉತ್ಸವವ್ಯರ್ಥ. ನಮ್ಮ ಭಾಷೆ ೧೮ ಭಾಷೆಗಳ ಶಬ್ದ-ಭಾವ ಸಂಪತ್ತನ್ನು ಯಥೋಚಿತವಾಗಿ ತುಂಬಿಕೊಂಡು ತನ್ನದೇ ಆದ ವೈಶಿಷ್ಟವನ್ನು ಮೈಗೂಡಿಸಿಕೊಂಡು ಸುಪುಷ್ಟವಾಗಿದೆ. ಕರ್ನಾಟಕದ ಪ್ರಾಂತೀಯತೆ ಭಾಷೆ, ಕಾಲ, ಕೃತಿಗಳಲ್ಲಿ ಬೇರೆ ಬೇರೆಯಾಗದೆ ಮೈಗೂಡಿಸಿಕೊಳ್ಳಬೇಕಾಗಿದೆ. ಇಲ್ಲಿನ ಸಾಹಿತ್ಯ, ಕಲೆಗಳ ಸಮಗ್ರ ಪರಿಚಯವಾಗಬೇಕು.

ನಾಡಿನವಿಶೇಷತೆ : ಈ ನಮ್ಮನಾಡು **'ಧಾರ್ಮಿಕನೆಲೆ'** ಎನಿಸಿದೆ. ಶಂಕರರು, ರಾಮಾನುಜರ, ಶರಣರು ತಮ್ಮಧರ್ಮದ ಬೀಜವನ್ನು ಬಿತ್ತಿಹೋಗಿದ್ದಾರೆ. ಹೀಗಾಗಿ ಎಲ್ಲಿಲ್ಲದ ಐಕಮತ್ಯ, ಸಹನೆ, ಉದಾರತೆಗಳಿಗೆ ಈ ನಾಡು ಹೆಸರಾಗಿದೆ. ಗುಬ್ಬಿ ವೀರಣ್ಣನವರು ಪ್ರಸಿದ್ಧನಾಟಕಕಾರರು ರಂಗಭೂಮಿ ಕಲಾವಿದರ ನೆಲೆ. ಪ್ರಸಿದ್ಧ ವೀಣಾವಾದಕರಾದ ಶೇಷಣ್ಣ, ಚೌಡಯ್ಯನವರ ಜನ್ಮಭೂಮಿ. ಮಲ್ಲಿಕಾರ್ಜುನ ಮನ್ಸೂರ್, ಬಾಳಪ್ಪ ಹುಕ್ಕೇರಿ, ಗಂಗೂಬಾಯಿ ಹಾನಗಲ್ ಮುಂತಾದ ಸಂಗೀತಗಾರರ ಪುಣ್ಯಭೂಮಿ. ನೃತ್ಯಶಾರದೆಯರ ನೆಲೆಯೆನಿಸಿದೆ. ಹೀಗಾಗಿ ಇವರುಗಳು ತಮ್ಮಅಮೂಲ್ಯ ಕೊಡಿಗೆಯನ್ನು ನಾಡಿಗೆ ನೀಡಿ ಕೀರ್ತಿಶೇಷರಾಗಿದ್ದಾರೆ. ರಾಜ್ಯೋತ್ಸವದ ಮುನ್ನ ಇವರುಗಳ ಪರಿಚಯ ಸಾಧನೆಗಳ ಅರಿವನ್ನು ಮಾಡಿಕೊಂಡು ಸ್ಫೂರ್ತಿ ಹೊಂದಬೇಕಾದುದು ಆದ್ಯಕರ್ತವ್ಯ.

ಸಾಧನೆಯ ಹಿರಿಮೆ : ನಮ್ಮನಾಡು ರಾಷ್ಟ್ರಸೇವೆಗೆ ಪುಣ್ಯಪುರುಷರನ್ನು, ಸಾಧಕರನ್ನು ನೀಡಿದ ಹೆಮ್ಮೆಯಬೀಡು. ಸಿ.ವಿ. ರಾಮನ್‌ರಂತಹ ಖ್ಯಾತವಿಜ್ಞಾನಿಗಳು, ವಿಶ್ವೇಶ್ವರಯ್ಯನವರಂಥಹ ಇಂಜಿನಿಯರ್‌ಗಳು, ವೀರನಿಷ್ಠಾವಂತ ಸೇನಾನಿಯೆನಿಸಿದ ಜನರಲ್‌ಕಾರಿಯಪ್ಪ ಇತ್ಯಾದಿ ಅನೇಕ ಸ್ವಾತಂತ್ರ್ಯ ಹೋರಾಟಗಾರರುಗಳ ತಾಯ್ನಾಡು. ವಿಶೇಷವಾಗಿ ಏಳುಮಂದಿ ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಶ್ರೇಷ್ಠ ಸಾಹಿತಿಗಳ ಹೆಮ್ಮೆಯ ತಾಯ್ನೆಲೆ. ಅವರ ಅನೇಕಕೃತಿಗಳು ಹಿಂದೀ ಹಾಗೂ ಇಂಗ್ಲೀಷ್‌ಭಾಷೆಗೆ ಅನುವಾದಗೊಂಡಿವೆ. ನಾಡುನುಡಿಗಾಗಿ ಕಂಕಣಬದ್ಧರಾಗಿ ದುಡಿದ ಆಲೂರರು, ಹಟ್ಟಿಯಂಗಡಿ ನಾರಾಯಣರಾಯರು, ಹರ್ಡೀಕರ್ ಮಂಜಪ್ಪನವರು, ಸದಾಶಿವರಾಯರು ಮುಂತಾದವರ

ಸೇವೆ ಅವಿಸ್ಮರಣೀಯ. ಜೀವನವನ್ನೇ ಸವೆಸಿ, ಗೆಜ್ಜೆಕಟ್ಟಿ ಕುಣಿವ ಜಾನಪದ ಕಲಾವಿದರು ನಾಡಿನ ಸಂಪತ್ತಲ್ಲವೇ? ನಮ್ಮ ವಿಭಿನ್ನ ಸಾಹಿತ್ಯವನ್ನು ಬೆಳೆಸಿದ **ಪಂಪ, ರನ್ನ, ಕುಮಾರವ್ಯಾಸ, ಲಕ್ಷ್ಮೀಶ, ಹರಿಹರ, ರಾಘವಾಂಕ** ಮುಂತಾದವರು. ಹೊಸತನ ಮೂಡಿಸಿದ **ಬಿ.ಎಂ.ಶ್ರೀ, ಟಿ.ಪಿ. ಕೈಲಾಸಂ, ಶ್ರೀರಂಗರು, ತ್ರಿವೇಣಿ, ತಾತಯ್ಯನವರು, ಡಿವಿಜಿ. ತೀನಂಶ್ರೀ, ಕಾರಂತರು, ಕುವೆಂಪು, ಭೈರಪ್ಪ, ಬೇಂದ್ರೆ, ಮಾಸ್ತಿ, ಗೋಕಾಕರು** ಮುಂತಾದ ದೊಡ್ಡ ಪಟ್ಟಿ ಬೆಳೆಯುತ್ತದೆ. ಅವರುಗಳ ಸಾಹಿತ್ಯಾರಾಧನೆ, ಕೃತಿಪರಿಚಯಗಳು ನಮ್ಮಪೀಳಿಗೆಗೆ ಅಗತ್ಯವಾಗಿ ಇರಬೇಕಾಗಿದೆ. ಅದು ಮುಂದಿನ ಪೀಳಿಗೆಗೆ ಸಾಹಿತ್ಯ ಬೆಳವಣಿಗೆಗೆ ಪೂರಕವಲ್ಲವೆ? ಅವರನ್ನು ತಿಳಿಯುವ, ಅವರ ಪುಸ್ತಕಗಳನ್ನು ಕೊಂಡು ಓದುವ ಹವ್ಯಾಸ ನಮ್ಮದಾಗಬೇಕು.

ಬದಲಾಗಬೇಕಾದ ಆಚರಣೆ : ಕರ್ನಾಟಕದ ಭಾಷೆ, ನೆಲ, ಜಲಗಳಲ್ಲಿ ಬದುಕುವ ನಮಗೆ ಅವುಗಳ ರಕ್ಷಣೆಗೆ ದುಡಿದವರ ಪರಿಚಯವಿರಬೇಕಲ್ಲವೇ? ಪ್ರಾಮಾಣಿಕ ರಾಜಕಾರಣಿಗಳಾದ ನಿಜಲಿಂಗಪ್ಪ, ಕೆಂಗಲ್‌ರು, ಕೆ.ಸಿ. ರೆಡ್ಡಿ ಮುಂತಾದವರು ತಮ್ಮ ಸಾಧನೆಗಳಿಂದ ಇತಿಹಾಸದಲ್ಲಿ ಉಳಿದಿದ್ದಾರೆ. ರಾಜ್ಯೋತ್ಸವಗಳಲ್ಲಿ ಎಲ್ಲವನ್ನೂ ಹಿಂದಿನವರೇ ಮಾಡಿದ್ದಾರೆ, ನಮ್ಮದೇನೆಂಬ ಅಸಡ್ಡೆಸಲ್ಲದು. ಭಾಷೆಯನ್ನು ಸಮಗ್ರವಾಗಿ ಬಳಸುವ ಪರಿಣತಿ ಬರುವುದೆಂದು? ಭಾಷೆಯ ಬಗ್ಗೆ ಹೃತ್ಪೂರ್ವಕ ಅಭಿಮಾನ ಅಗತ್ಯ. ಬರೀಬಾಯಿ ಮಾತಿನ ಕನ್ನಡಪ್ರೇಮ ಬೇಡವೇಬೇಡ. ಕೇವಲ ನವೆಂಬರ್ ತಿಂಗಳಲ್ಲಿ ಕನ್ನಡಬಾವುಟ ಹಾರಿಸಿ, ಹಿಂದೀ ಚಿತ್ರಗೀತೆಹಾಕಿ, ಇಂಗ್ಲೀಷ್ ವೇಷಭೂಷಣಗಳೊಂದಿಗೆ ಕುಣಿದು ಸವಿಸಂಜೆ ಕಳೆದರೆ ಪ್ರಯೋಜನವಿಲ್ಲ. ನಾಡಿನ ಹಿನ್ನೆಲೆಗೆ ಇದು ಅಪಚಾರವೂ ಹೌದು. ರಾಜ್ಯೋತ್ಸವ ನಿರಂತರವಾಗಿ ರಕ್ತದಧಮನಿಗಳಲ್ಲಿ ಕನ್ನಡತನವಿದ್ದು ನಿತ್ಯೋತ್ಸವವಾಗಬೇಕು. ಅದು ತೋರಿಕೆಯ, ಆಡಂಬರದ್ದಾಗಬಾರದು.

ಕನ್ನಡಿಗರಾದ ನಾವು ಸ್ವಾಭಿಮಾನದಿಂದ ಕನ್ನಡ ಸಂಸ್ಕೃತಿ ನೆಲೆಯಲ್ಲಿ ಬೆಳೆಯುವುದು ದುಸ್ತರವೆನಿಸಿರುವ ವಾತಾವರಣ ನಗರಗಳಲ್ಲಿದೆ. ಸರ್ಕಾರಕ್ಕೆ ನೆರೆಹೊರೆ ರಾಜ್ಯಗಳ ಭಾಷಾ ಧೋರಣೆಯಿಂದ ತಮ್ಮತನವನ್ನು ಮಾರಿಕೊಳ್ಳುವ ಸ್ಥಿತಿಇದೆ. 'ಅಪ್ಪ' 'ಅಮ್ಮ' ಸಂಸ್ಕೃತಿಯು ಹಾಳಾಗುತ್ತಿದೆ. ಜಾಗತೀಕರಣ ಹೆಸರಿನಲ್ಲಿ ಅನ್ಯದೇಶೀಯ, ಅನ್ಯರಾಜ್ಯದವರು ವಲಸೆ ಬಂದು ಲೀಲಾಜಾಲವಾಗಿ ತಮ್ಮಭಾಷೆ ಸಂಸ್ಕೃತಿಗಳಿಂದ ಈ ನೆಲ-ಜಲ ಬಳಸಿಕೊಂಡು ನಮ್ಮ ಭಾಷೆಯನ್ನು ಮೂಲೆ ಗುಂಪು ಮಾಡುತ್ತಿದ್ದಾರೆ.

ಈ ನಾಡಿನ ರಾಜ್ಯೋತ್ಸವದ ಗುರಿಯೇನು? ಅಂದು ಕನ್ನಡಭಾಷೆಯ ಅಭಿವೃದ್ಧಿಗೆ ಪಣತೊಡಬೇಕು. ನಮಗೆ ಕಾವಲುಸಮಿತಿಗಳು ಬೇಕೇ? ಅಗತ್ಯವೆನಿಸಿದ ಆವೇಶದ ವೇದಿಕೆಯ ಭಾಷಣಗಳು ವ್ಯರ್ಥವೆನಿಸುತ್ತವೆ. ಈ ನಾಡಿನಅನ್ನ, ನೀರು ಕುಡಿಯುವ ಅಧಿಕಾರಿಗಳಲ್ಲಿ ಕನ್ನಡನಾಡಿನಲ್ಲಿ ಕನ್ನಡಭಾಷೆಯಿಂದ ವ್ಯವಹರಿಸಿದರೆ ಪರಿಣಾಮ ಒಳ್ಳೆಯದೆಂಬ ಭಾವನೆ ಬರಬೇಕು. ಕನ್ನಡಿಗರಾದ ಇಲ್ಲಿನ ನಿವಾಸಿಗಳಲ್ಲಿ ಅರೆಬರೆ ಕನ್ನಡ ಮಾತನಾಡುವ ಖಯ್ಯಾಲಿ ಹೋಗಬೇಕು.

ಕನ್ನಡಿಗರಾದ ನಮಗೆ ಅನ್ಯಭಾಷೆ ವ್ಯಾಮೋಹವಭ್ರಮ ನಮ್ಮ ಪೋಷಕರಲ್ಲಿ ತೊಲಗಬೇಕು. ತಮ್ಮ ಭಾಷೆಯ ಬಗ್ಗೆ ಕೀಳರಿಮೆ ಅನ್ಯಭಾಷೆಯನ್ನು ಪ್ರೀತಿಸದೆ ಕಲಿತು ಆ ಸಾಹಿತ್ಯದ ಸಾರವನ್ನು ಹೀರಬೇಕಲ್ಲವೆ. **ಕನ್ನಡದಲ್ಲೇ 'ನುಡಿವೆ', 'ಬರೆವೆ'**ನೆಂಬ ಛಲ ನಮ್ಮದಾಗಬೇಕು. ಹೀಗೆನ್ನುವ ಜನರಲ್ಲಿ ಐಕ್ಯತೆಯೂ ಬರಬೇಕಿದೆ. ಸಾಹಿತ್ಯ, ಸಂಗೀತ, ಕಲೆ ಇತ್ಯಾದಿ ಕ್ಷೇತ್ರಗಳಲ್ಲಿ ಜೀವನ ಸವೆಸಿದವರುಗಳನ್ನು ಸರ್ಕಾರ ಗುರುತಿಸಿದರೆ ಸಾಲದು. ಕೊಡಿಗೆಗೆ ಜನರಅಭಿರುಚಿ, ಜನಮನ್ನಣೆ, ಪ್ರೋತ್ಸಾಹಗಳು ಹೆಚ್ಚಾಗಬೇಕು. **'ಮೊದಲು ಮಾತೃಭಾಷೆ ನಂತರ ಅನ್ಯಭಾಷೆ'** ಈ ನೀತಿ ನಮ್ಮದಾಗಬೇಕು., ನಮ್ಮಜನ, ಭಾಷೆ, ನೆಲದ ಬಗೆಗೆ ನಿಜವಾದ ಹೃದಯವಂತಿಕೆ, ಅಭಿಮಾನವನ್ನು ಬಿಂಬಿಸುವ ಉತ್ಸವ ಅದಾಗಬೇಕು. ಕನ್ನಡಸೇವೆ ಮಾಡಿದವರಿಗೆ ಕೈ ಚಾಚುವಗತಿ ಬಂದರೆ, ಉತ್ಸವದಿಂದ ಪ್ರಯೋಜನವೇನು? ನಿಜವಾದ ಕನ್ನಡವಾತಾವರಣವನ್ನು ತಂದು, ರಾಜ್ಯೋತ್ಸವ ಆಚರಿಸಿದರೆ ಸಾರ್ಥಕವಾದೀತು. **'ಚೆಲುವ ಕನ್ನಡನಾಡು, ಸದಭಿಮಾನದ ಗೂಡು'** ಎಂಬ ಕವಿವಾಣಿ ನಿಜವಾಗಬೇಕಿದೆ. ಈ ಹಿನ್ನೆಲೆಯಲ್ಲಿ ಸಂಘ ಸಂಸ್ಥೆಗಳು ಅಭಿಮಾನ, ಆದರಗಳನ್ನಿರಿಸಿಕೊಂಡು ಅನ್ಯಭಾಷೀಯ ದಬ್ಬಾಳಿಕೆ, ಅಸಡ್ಡೆಗಳಿಗೆ ಸಂಘಟಿತ ಯತ್ನ ಮಾಡುವುದು ಅಗತ್ಯವಾಗಿದೆ. ಕೇವಲ ಆಡಂಬರದ, ಅಸಹಜ ಘೋಷಣೆಗಳಿಂದ ಭಾಷಾಭಿವೃದ್ಧಿ ಆಗದೆಂದು ಪ್ರತಿಯೊಬ್ಬ ಕನ್ನಡಿಗನಿಗೂ ಅರಿವಾಗಬೇಕಿದೆ.

ಕಂಪ್ಯೂಟರ್

'ನಹಿ ಜ್ಞಾನೇನ ಸದೃಶಂ' ಜ್ಞಾನಕ್ಕೆ ಸಮಾನವಾದುದು ಇನ್ನೊಂದಿಲ್ಲ.ಮಾನವ ಈ ಜ್ಞಾನವಿಜ್ಞಾನ ಬೆಳೆದಂತೆ ತನಗೆ ಅನುಕೂಲವಾಗಬಹುದೆಂದು ಹೊಸ ಹೊಸ ಸಂಗತಿಗಳನ್ನೂ ಯಂತ್ರಗಳನ್ನೂ ಹುಡುಕುವುದರಲ್ಲಿದ್ದಾನೆ. ಕೇವಲ ತನ್ನಶ್ರಮ ಕಡಿಮೆಯಾಗಬೇಕೆಂಬ ತವಕ, ಪ್ರಯತ್ನದ ಫಲವಾಗಿ **'ಕಂಪ್ಯೂಟರ್'** ಕಂಡುಹಿಡಿದನು. ೧೯ ನೆಯ ಶತಮಾನದ ಅಂತ್ಯದಲ್ಲಿ ಇಂಗ್ಲೆಂಡಿನ ಚಾರ್ಲ್ಸ್‌ಬ್ಯಾಬೇಜ್ ಎಂಬುವರು ಕಂಪ್ಯೂಟರ್‌ನ್ನು ಕಂಡುಹಿಡಿದರು. ಇದು ವಿಜ್ಞಾನದ ಅದ್ಭುತಸೃಷ್ಟಿ. ಅಂತೂ ಮಾನವ ತನ್ನನ್ನೇ ಮುಳುಗಿಸುವ ಈ ಯಂತ್ರವನ್ನು ಕಂಡುಹಿಡಿದನು. ಇದು ಇಂದು ವಿರಾಟ್‌ರೂಪ ತಾಳಿದೆಯೆನ್ನಬಹುದು. ಇದನ್ನು ಮೊದಲು ಕೇವಲ **'ಗಣಕಯಂತ್ರ'** ವೆನ್ನಲಾಗುತ್ತಿತ್ತು.

ಪ್ರಯೋಜನ: ಇದರ ಸಹಾಯದಿಂದ ಒಂದು ಸೆಕೆಂಡಿನಲ್ಲಿ ೫೦೦೦ ಸಂಕಲನ, ೩೫೦ ಗುಣಾಕಾರಗಳನ್ನು ಮಾಡಬಹುದೆಂದರೆ ವಿಸ್ಮಯವಲ್ಲವೆ? ೧೦೦ ಜನ ಇಂಜನಿಯರುಗಳು ಒಂದು ವರ್ಷದಲ್ಲಿ ಮಾಡುವ ಕೆಲಸವನ್ನು ಕೇವಲ ೩ ಘಂಟೆಗಳಲ್ಲಿ ನಿಭಾಯಿಸುತ್ತದೆಂದರೆ ಆಶ್ಚರ್ಯ ಸಂಗತಿ ಸಾಮಾನ್ಯ ವಿಚಾರವಾಗಿದೆ.

ಮಾನವನ ಮೆದುಳು ಯೋಚಿಸುವ ಮತ್ತು ಸ್ಮರಿಸುವಕಾರ್ಯವನ್ನು ಮಾತ್ರ ಮಾಡುತ್ತದೆ. ಹೆಚ್ಚು ಸಂಗತಿಗಳನ್ನು ನೆನಪಿನಲ್ಲಿರಿಸಿಕೊಳ್ಳುವುದು ಕಷ್ಟ. ಕಂಪ್ಯೂಟರ್ ಅದರ ಒಮ್ಮೆ ಒಂದು ವಿಷಯಕ್ಕೆ ಸಂಬಂಧಿಸಿದ **'ಡೇಟಾ'** (ಸಂಗತಿ)ಗಳನ್ನು ಒದಗಿಸಿದರೆ, ಅದು ಎಂದಿಗೂ

ಮರೆಯುವುದಿಲ್ಲ. ನಮ್ಮ ಪ್ರಶ್ನೆಗಳಿಗೆ, ಸಂದೇಹಗಳಿಗ ಡೇಟಾಗಳನ್ನು ತಾಳೆ ನೋಡಿ ಸರಿಯಾದ ಉತ್ತರವನ್ನು ನೀಡಬಲ್ಲದು. ಅವುಗಳು ಆರಂಭದಲ್ಲಿ ಮಕ್ಕಳ ಮಣಿಕಟ್ಟಿನಿಂದ ಪ್ರಾರಂಭವಾದವು. ಇಂದು ದೊಡ್ಡದೊಡ್ಡ ಕಾರ್ಖಾನೆಗಳಲ್ಲಿ ಕೆಲಸದ ನಿರ್ವಹಣೆ ನಿರ್ದೇಶನ ಮಾಡಬಲ್ಲದು. ಹೀಗೆಯೇ ಕಂಪ್ಯೂಟರ್‌ಗಳು ಗಾತ್ರದಲ್ಲಿ ಅತ್ಯಂತ ಕಿರಿದಾಗಿಯೂ ಕಾರ್ಯಸಾಧನೆಯಲ್ಲಿ ದೊಡ್ಡದಾಗಿಯೂ ಇವೆ.

ಅದರ ಸಾರ್ವತ್ರಿಕ ಬಳಕೆ : ೬ ವರ್ಷಗಳ ಜನಗಣತಿಯನ್ನು ಅಮೇರಿಕಾದಲ್ಲಿ ೬ ವಾರಗಳಲ್ಲಿ ಮಾಡಿತೋರಿಸಿದ ಮೊದಲ ಸಾಧನೆ ನಡೆಯಿತು. ಇಂದು ಕಂಪ್ಯೂಟರ್ ಆಡಳಿತಾತ್ಮಕ, ವೈಜ್ಞಾನಿಕ, ತಾಂತ್ರಿಕ, ವಾಣಿಜ್ಯ, ಶೈಕ್ಷಣಿಕ, ಔದ್ಯಮಿಕ, ಕ್ರೀಡೆ ಇತ್ಯಾದಿ ರಂಗಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳಿಗೆ ಕಾರಣವಾಗಿದೆ. ಸಾವಿರಾರು ಮೌಲ್ಯಮಾಪಕರು ಮಾಡುವ ಕೆಲಸವನ್ನು ಸಂಕೇತಗಳಿಗೆ ಅಳವಡಿಸಿ ೪ ಘಂಟೆಗಳಲ್ಲಿ ಅತ್ಯಂತ ನಿಖರವಾಗಿ ಮೌಲ್ಯ ನಿರ್ಧಾರ ಮಾಡಿದ ಉದಾಹರಣೆಗಳಿವೆ. ಕಾರ್ಖಾನೆಗಳಲ್ಲಿ ಕೆಲಸ ಮಾಡುವುದರ ನಿರ್ದೇಶನ ಮಾಡಲಾಗುತ್ತಿದೆ. ಸೂರ್ಯ, ಚಂದ್ರ, ನಕ್ಷತ್ರಗಳ ನಿಗೂಢವಿಚಾರ, ಗತಿ, ದೂರಗಳನ್ನು ನಿರ್ದಿಷ್ಟವಾಗಿ ಅದರಿಂದ ತಿಳಿಯಬಹುದು. ಈ ಪ್ರಯತ್ನಗಳನ್ನು ವಿಜ್ಞಾನಿಗಳು ಉಪಗ್ರಹ ಉಡಾವಣೆಯಲ್ಲಿ ಮಾಡಿಕಂಡುಕೊಳ್ಳಲಿದ್ದಾರೆ. ಅಮೇರಿಕಾ ದೇಶದವರು ಚಂದ್ರಗ್ರಹಕ್ಕೆ ಮಾನವನನ್ನೂ ಕಳಿಸುವಾಗ ಇದರ ಸಹಾಯ ಪಡೆದರು. ಯುದ್ಧಗಳಲ್ಲಿ ಕ್ಷಿಪಣಿಗಳನ್ನು ಹಾರಿಸುವಾಗ, ಶತ್ರು ವಿಮಾನಗಳನ್ನು ಹೊಡೆದುರುಳಿಸಲು ಇದರ ಸಹಾಯ ಪಡೆಯುತ್ತಿದ್ದಾರೆ. ಇಂದು ಸಾರಿಗೆಯಕ್ಷೇತ್ರದಲ್ಲಿ ಟಿಕೆಟ್‌ಗಳನ್ನು ಕಾದಿರಿಸಲು ಬಳಸಲಾಗುತ್ತಿದೆ. ಬ್ಯಾಂಕಿಂಗ್, ಅಂಚೆ, ದೂರದರ್ಶನ, ಟೆಕ್ಸ್‌ಟೈಲ್ಸ್, ಮೆಕ್ಯಾನಿಸಂಗಳಲ್ಲಿ, ಇಂಟರ್‌ನೆಟ್ ಸಂಪರ್ಕ, ಕಂಪ್ಯೂಟರ್ ಸಹಾಯವಿಲ್ಲದೆ ನಡೆಯದು. ವಾಹನತಯಾರಿಕೆ ಇತ್ಯಾದಿಗಳಲ್ಲಿ ಕಂಪ್ಯೂಟರ್ ಸಹಾಯವಿಲ್ಲದೆ ನಡೆಯದು ಎನ್ನುವಮಟ್ಟಿಗೆ ನಾವು ಆಶ್ರಯದಲ್ಲಿದ್ದೇವೆ.

ಶಿಕ್ಷಣರಂಗದಲ್ಲಿ ಭಾಷೆಯ ಸಂಕೇತಗಳಿಂದ ಅಮೂಲ್ಯವಾದ ಗ್ರಂಥಗಳನ್ನೂ ತಾಳೆಗರಿ, ಇತ್ಯಾದಿ ಕಳೆದುಹೋಗುತ್ತಿರುವ ಅಗತ್ಯ ಅಮೂಲ್ಯಜ್ಞಾನ ಸಂಪತ್ತನ್ನು ರಕ್ಷಿಸಲು ಬಳಸಲಾಗುತ್ತಿದೆ. ಇತ್ತೀಚಿಗೆ ಕಂಪ್ಯೂಟರ್ ಸಂಕೇತಗಳಿಗೆ ತುಂಬಾ ಚೆನ್ನಾಗಿ ಹೊಂದಿಕೊಳ್ಳುವ ಸಂಸ್ಕೃತಲಿಪಿಯನ್ನು ಅಳವಡಿಸಿ ಪ್ರಾಚೀನಸಂಸ್ಕೃತ, ವೈದಿಕ, ಆಯುರ್ವೇದ ಜ್ಞಾನ ಸಂಪತ್ತನ್ನು ಸಂಶೋಧನೆಗಳಿಗೆ ಬಳಸುವ ಪ್ರಯತ್ನ ಸಾಗಿದೆ. ಇತ್ತೀಚಿಗೆ ನಮ್ಮದೇ ಆದ ಭಾಷೆಯಲ್ಲಿ, ಕನ್ನಡ ಕೀಲಿಮಣೆ ಬಳಸಿಕೊಂಡು ಶಿಕ್ಷಣದ ಅನೇಕ ಸಮಸ್ಯೆಗಳ ನಿವಾರಣೆಗೆ ಪ್ರಯತ್ನಿಸಲಾಗಿದೆ. ಗ್ರಾಮಾಂತರ ಭೂದಾಖಲೆ ಇತ್ಯಾದಿಗಳಿಗೂ ಇದನ್ನು ಬಳಸಿಕೊಳ್ಳಲಾಗಿದೆ. ಇದು ಲೆಕ್ಕ ಸಂಶೋಧನೆಗಂತೂ ಸಂಜೀವಿನಿಯಾಗಿದೆ. ಹೀಗೆ ಕ್ರಾಂತಿಯನ್ನು ಮಾಡಿ ಅಭಿವೃದ್ಧಿಗೆ ಸಹಾಯವಾಗಿದೆ.

ಎಲೆಕ್ಟ್ರಾನುಗಳ ಉಗಮವಾದ ಪರಿಣಾಮವಾಗಿ ಅತಿ ಚಿಕ್ಕಗಾತ್ರದ ಕಂಪ್ಯೂಟರ್ ನಿರ್ಮಾಣವಾಗುತ್ತಿವೆ. ಅಷ್ಟೇ ಅಲ್ಲದೆ **'ಸಿಲಿಕಾನ್'** ಬಳಕೆಯಿಂದ ಐ.ಸಿ ಚಿಪ್ಸ್‌ಗಳು ಸಣ್ಣ

ಪ್ಯಾಕೆಟ್‌ಗಳಲ್ಲಿರಿಸಬಹುದಾದ ಆಕಾರ, ವಿಸ್ತಾರವಾದ ಸಂಗತಿಯನ್ನು ಸಿ.ಡಿ.ಗಳಲ್ಲಿ ಇರಿಸಿಕೊಳ್ಳಬಹುದು.

ಇತ್ತೀಚಿಗೆ ಕಂಪ್ಯೂಟರ್ ಜಾಲದ ನಮ್ಮದೊಂದು ಕೇಂದ್ರವನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದೆ. ಇದರ ಪ್ರಯೋಜನ ನಮ್ಮಯುವ ಉದ್ಯಮಿ ಹಾಗೂ ಇಂಜಿನಿಯರುಗಳಿಗೆ ಹೆಚ್ಚು. ಇನ್ನು ಮುಂದೆಯೂ ಈ ಸಾಧನ ಮಾನವನ ಮೆದುಳಿಗಿಂತಲೂ ಅತ್ಯಂತ ಕಠಿಣ ಸಮಸ್ಯೆಗಳನ್ನು ಪರಿಹರಿಸುವುದನ್ನು ಅಲ್ಲಗಳೆಯಲಾಗದು. ಇದರ ಪರಿಣಾಮವಾಗಿ ಮಾನವ ಶಕ್ತಿಯ ಬಳಕೆ ಕುಂಠಿತವಾಗಿದೆ. ಇಂಥಹ ಚಿಂತಾಜನಕ ಸ್ಥಿತಿಯೂ ಅಲ್ಲಲ್ಲಿ ಕಾಣುತ್ತಿದೆ. ಉದ್ಯಮಗಳಲ್ಲಿ ಮಾನವಶಕ್ತಿ ನಿಷ್ಪ್ರಯೋಜಕವಾಗಿ ಅನೇಕ ನೌಕರರು ಮನೆಗೆ ಹೋಗುವಸ್ಥಿತಿ ಬಂದಿದೆ.

ಅಂತೂ ವಿಜ್ಞಾನ ಯುಗದಲ್ಲಿ ವೈಜ್ಞಾನಿಕ ಧೋರಣೆಗಳಿಗನುಸಾರ ಪೈಪೋಟಿ ಎದುರಿಸಲು ಪ್ರಗತಿಪರ ಸಂಕೇತಗಳು ಬೆಳೆದ ಹಾಗೆ ನಾವೂ ಬೆಳೆಯಬೇಕಾಗಿದೆ. ಇತ್ತೀಚಿನ 'ಲವ್‌ಬಗ್' ನಂಥ ವೈರಸ್‌ನ ಹಾವಳಿಯು ಕಾಣಿಸಿಕೊಂಡಿದೆ. ದೋಷಪೂರಿತ ಚಿಪ್ಸ್‌ಗಳು ಸೇರ್ಪಡೆಯಾಗುತ್ತಿವೆ. ಸಂಪನ್ಮೂಲಗಳಿಂದ ಮಾಹಿತಿಯನ್ನು ನಾಶಪಡಿಸುವ ಜನರಿದ್ದಾರೆ. ಅಶ್ಲೀಲ ಸಾಹಿತ್ಯವನ್ನು ಪ್ರಚಾರ ಮಾಡುವವರಿಗೆ ಮತ್ತು ಅಡ್ಡದಾರಿಯನ್ನು ಹಿಡಿಯುವವರಿಗೆ ಶಿಕ್ಷಿಸುವ ಮಸೂದೆ ಇದೆ. ಈ ಹಿನ್ನೆಲೆಯಲ್ಲಿ ಕಳೆದ ನಾಲ್ಕಾರು ವರ್ಷಗಳಲ್ಲಿ 'ಕಂಪ್ಯೂಟರ್ ಕ್ರಾಂತಿ'ಯನ್ನೇ ಮಾಡಿ ಜೀವನದ ಹಾದಿಯನ್ನೇ ಬದಲಿಸಿವೆಯೆನ್ನಬಹುದು. ಅಂತೂ ಮಾನವ ನಿಷ್ಪ್ರಯೋಜಕನೆನಿಸಿ ಯಂತ್ರಮಾನವನ ಅಟ್ಟಹಾಸ ಬರುವುದಿದೆ. ಅದರ ವೇಗಕ್ಕೆ ಕನ್ನಡ ರಂಗದಲ್ಲಿ ಕನ್ನಡ ಗಣಕಪರಿಷತ್ತು ಸಾಕಷ್ಟು ಕೆಲಸ ಮಾಡಿದೆ. ಕಂಪ್ಯೂಟರ್ ಕ್ಷೇತ್ರದ ತಾಂತ್ರಿಕ ಪದಗಳ ಕೋಶ ಬಂದಿದೆ. ಸಾಫ್ಟ್‌ವೇರ್(ತಂತ್ರಾಂಶ) ಬಂದಿದೆ. ಕೀಲಿಮಣೆ (ಕೀಬೋರ್ಡ್), ಹಾರ್ಡ್‌ವೇರ್(ಯಂತ್ರಾಂಶ) ಇತ್ಯಾದಿ ಆವಿಷ್ಕರಣಗಳಾಗಿವೆ. ಕನ್ನಡ ವರ್ಣಮಾಲೆಯ ಅಂಕಿಗಳನ್ನು ಅಳವಡಿಸಿಕೊಳ್ಳಲಾಗಿದೆ. ಈ ಹಿನ್ನಲೆಯಲ್ಲಿ ಗಣಕ **'ಪದವಿವರಣ ಕೋಶ'** (ಪ್ರತ್ಯೇಕ ನಿಘಂಟು). ಸಾಮಾನ್ಯದ ದೃಷ್ಟಿಯಿಂದ ಗೊಂದಲ ನಿವಾರಣೆಗೆ ಅಗತ್ಯವಿದೆ. ಅದರ ತಯಾರಿಕೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕೆಲಸ ಉಲ್ಲೇಖಾರ್ಹವಾಗಿದೆ. ಕನ್ನಡದಲ್ಲಿ ಏಕರೂಪ ಲಿಪಿತಂತ್ರಾಂಶ ಅಭಿವೃದ್ಧಿ ಪಡಿಸಿದ್ದು ಅನನ್ಯ ಸಾಧನೆ ಈ ಹಿನ್ನಲೆಯಲ್ಲಿ ಶಿವಮೊಗ್ಗ ಕೇಶವ ಗಣಕಕೇಂದ್ರ, ಕುವೆಂಪು ವಿ.ವಿ. ಕಂಪ್ಯೂಟರ್ ವಿಜ್ಞಾನ ವಿಭಾಗದ ಉತ್ಸಾಹದ ಯತ್ನ, ಮೈಸೂರು ವಿ.ವಿ. ಕ.ಅಧ್ಯಯನ ಸಂಸ್ಥೆಯ ಡಾ॥ಪಂಡಿತಾರಾಧ್ಯರ ಸೇವೆ ಅವಿಸ್ಮರಣೀಯ. ಕಂಪ್ಯೂಟರ್ ತನುವಿಗೆ ಕನ್ನಡದ ಮನ ತುಂಬುವಲ್ಲಿ ಶ್ರಮಿಸುವುದರಲ್ಲಿ ಅನೇಕರ ತೊಡಗಿದ್ದಾರೆ. ಅದರ ವೇಗಕ್ಕೆ ನಾವು ಹೊಂದಿಕೊಳ್ಳಲೇಬೇಕಾಗಿದೆ.

◆ ◆ ◆ ◆ ◆

ಗ್ರಂಥಋಣ

ಶಬ್ದಮಣಿ ದರ್ಪಣ	ಕೇಶಿರಾಜ
ಕನ್ನಡ ಕೈಪಿಡಿ	ಕುವೆಂಪು
ಕನ್ನಡ ಛಂದಸ್ಸು	ಡಾ|| ಟಿ.ವಿ. ವೆಂಕಟಾಚಲಶಾಸ್ತ್ರಿ
ಹೊಸ ಕನ್ನಡ ವ್ಯಾಕರಣ	ಡಾ|| ಟಿ.ವಿ. ವೆಂಕಟಾಚಲಶಾಸ್ತ್ರಿ
ಭಾರತೀಯ ಕಾವ್ಯಮೀಮಾಂಸೆ	ತೀ.ನಂ.ಶ್ರೀ
ವ್ಯಾವಹಾರಿಕ ಕನ್ನಡ	ಎಚ್ಚೆಸ್ಕೆ
ಕನ್ನಡ ಮಧ್ಯಮವ್ಯಾಕರಣ	ತೀನಂಶ್ರೀ
ಕನ್ನಡ ವ್ಯಾಕರಣ	ನಂದಿಮಠ್ ಪಂ|| ಚನ್ನಪ್ಪ
ಜಾನಪದ ಸಾಹಿತ್ಯ	ಜೀ.ಶಂ. ಪರಮಶಿವಯ್ಯ
ಇಗೋ ಕನ್ನಡ	ಪ್ರೊ|| ಜಿ. ವೆಂಕಟಸುಬ್ಬಯ್ಯ
ಕನ್ನಡ ವ್ಯಾಕರಣ	ಎನ್.ರಂಗನಾಥಶರ್ಮ
ಸಮಾಲೋಕನ	ತೀ.ನಂ.ಶ್ರೀ
ಕನ್ನಡ ಶಬ್ದಾನುಶಾಸನಂ	ಭಟ್ಟಾಕಳಂಕ
ಕನ್ನಡ ವ್ಯಾಕರಣ ಭಾಗ-೧. ೨,೩	ಪಂ||ಡಿ. ಗಂಗರಾಜು
ಕನ್ನಡ ಭಾಷಾಶಾಸ್ತ್ರ	ಧಾರವಾಡಕರ್

ಸಂಸ್ಕೃತ ವ್ಯಾಕರಣಗಳು.



ಸಾದ್ಯಂತವಾಗಿ ಓದಿದೆ. ಶಾಸ್ತ್ರನಿಷ್ಠತೆ, ಔಚಿತ್ಯ ಉದಾಹರಣೆಗಳಿಂದ ವ್ಯಾಕರಣದ ಎಲ್ಲ ಅಂಶಗಳು ಸರಿಯಾಗಿ ಮೂಡಿಬಂದಿವೆ. ಪ್ರೌಢ, ಕಿರಿಯ, ಶಿಕ್ಷಕತರಬೇತಿ ಶಿಕ್ಷಣಾರ್ಥಿಗಳನ್ನು ಉದ್ದೇಶಿಸಿ ಓದುಗರ ಮೆಚ್ಚಿಗೆಗೆ ಪಾತ್ರವಾಗಿದೆ.

(ಪ್ರೊ. ಮಲ್ಲೆಪುರಂ.ಜಿ.ವೆಂಕಟೇಶ್)

ವ್ಯಾಕರಣದ ಮುಖ್ಯಸಂಗತಿಗಳನ್ನು ಒಪ್ಪಿತ ವಿಷಯಗಳ -ಕ್ರೋಡಿಕರಣ ನೆಲೆಯಲ್ಲಿ ಒಟ್ಟಾರೆ ಹೂರಣವನ್ನು ಒದಗಿಸುವ ಆಶಯ ಇಲ್ಲಿ ಈಡೇರಿದೆ. ಅನ್ವರ್ಥವಾಗಿ ಪಾಂಡಿತ್ಯ ಮೆರೆಸುವ ಬದಲು ಶಬ್ದಸಂಪತ್ತು ಇತ್ಯಾದಿಗಳ ಬಗ್ಗೆ ತಿಳಿತಿಳುವಳಿಕೆಯನ್ನು ನೀಡುವ ಕೈಪಿಡಿಯಾಗಿದೆ.

ಪ್ರೊ. ಬರಗೂರು ರಾಮಚಂದ್ರಪ್ಪ

ಶ್ರಮ, ಶ್ರದ್ಧೆಗಳಿಂದ ಪ್ರಸ್ತುತಪಡಿಸಿರುವ ವ್ಯಾಕರಣಕೈಪಿಡಿ ಶಿಕ್ಷಕರು-ವಿದ್ಯಾರ್ಥಿಗಳಿಗೆ ಸುಲಭವಾಗಿ ಗ್ರಹಿಸಲು ಉಪಯುಕ್ತ ಕೃತಿ.

ಪ್ರೊ. ಹೆಚ್.ವಿ. ವೀರಭದ್ರಯ್ಯ

ಪ್ರೌಢಶಾಲಾ ವಿದ್ಯಾರ್ಥಿಗಳನ್ನು ಮೊದಲುಗೊಂಡು ಎಲ್ಲ ವರ್ಗದ ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿಟ್ಟು ರಚಿಸಿದ ವ್ಯಾಕರಣ ಮಾತ್ರವಲ್ಲ, ಸರ್ವಾಧಾರಕ ಸಾಧನದಂತಿದೆ. ಕನ್ನಡ ಯಾತ್ರಾರ್ಥಿಗೆ ಏನೇನು ಬೇಕೋ ಎಲ್ಲ ಇಲ್ಲಿ ಸಿಕ್ಕುತ್ತದೆ.

ಪ್ರೊ. ದೇ.ಜ.ಗೌ

ಕನ್ನಡ ಭಾಷಾಬೋಧಕರಿಗೆ ಪರಾಮರ್ಶನ ಗ್ರಂಥವಾಗಿದೆ. ಅನೇಕ ಸಂಗತಿಗಳಲ್ಲಿನ ಸಂದೇಹಗಳನ್ನು ನಿವಾರಿಸಬಹುದಾಗಿದೆ. ಈ ಕೃತಿಯನ್ನು ವಿದ್ಯಾರ್ಥಿಗಳು ಹಂತಹಂತವಾಗಿ ಬಳಸಿಕೊಳ್ಳಬಹುದು.

ಪ್ರೊ. ಹ.ಬ. ಮಹದೇವಪ್ಪ

ಸಾಕಷ್ಟು ಸಮಗ್ರ (Comprehensive) ಹಾಗೂ ಅಧ್ಯಾಪಕರಿಗೆ ಉಪಯುಕ್ತ ಕೈಪಿಡಿಯಾಗಿದೆ.

ಡಾ॥ ಎಸ್.ಪಿ. ಪದ್ಮಪ್ರಸಾದ್

ಜಿ.ಕೆ. ಆಫ್‌ಸೆಟ್ ಪ್ರಿಂಟರ್ಸ್, ತುಮಕೂರು. ದೂ.: 22